ಕಲಾವಿದ ವಿ.ಟಿ.ಕಾಳೆ, ಬದುಕು ಮತ್ತು ಕಲಾಕೃತಿಗಳು

(ಪಿ.ಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಸಂಶೋಧನಾ ಮಹಾ ಪ್ರಬಂಧ)



ದೃಶ್ಯಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೧೧

548

ಕಲಾವಿದ ವಿ.ಟಿ. ಕಾಳೆ
ಬದುಕು ಮತ್ತು ಕಲಾಕೃತಿಗಳು

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ

ಮಹಾಪ್ರಬಂಧ

ಸಂಶೋಧಕರು:- ಸುಚಿತ್ರ ಲಿಂಗದಳ್ಳಿ
ಮಾರ್ಗದರ್ಶಕರು:- ಡಾ. ಎಸ್. ಸಿ. ಪಾಟೀಲ

ಲಲಿತಕಲಾ ನಿಕಾಯ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ
ವಿದ್ಯಾರಣ್ಯ ೫೮೩ ೨೭೬

೨೦೧೧

ಪರಿವಿಡಿ





ಕಲಾವಿದ ವಿ.ಟಿ.ಕಾಳೆಯವರು







ಕಲಾಕೃತಿ ರಚನೆಯಲ್ಲಿ ನಿರತರಾದ ಕಾಳೆಯವರ ವಿವಿಧ ಬಂಗಿಗಳು

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ವಿಧಾನ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ವಿಧಾನ

ಪ್ರವೇಶ

"ಮನುಷ್ಯನ ಮನಸ್ಸು ಊರ್ಧ್ವಮುಖಿ. ಇದಕ್ಕೆ ಮೊದಲನೆ ಸಾಕ್ಷಿ ಚರಿತ್ರೆ, ಎರಡನೆಯ ಸಾಕ್ಷಿ ಕಲೆ. ಒಂದು ಬಹಿರ್ಮುಖದ ಸಾಹಸವಾದರೆ ಮತ್ತೊಂದು ಅಂತರ್ಮುಖ ಸಾಹಸ" ಎಂದು ರಾಷ್ಟ್ರಕವಿ ಕುವೆಂಪು ಹೇಳಿರುವುದು ಕಲೆಯ ಮಹತ್ವವನ್ನು ಸಾರುತ್ತದೆ.

ಸಾಮ್ರಾಜ್ಯವನ್ನು ಕಟ್ಟಿ ಆಳಿದ ಮಹಾನಾಯಕರಂತೆ ರಣರಂಗದಲ್ಲಿ ಹೋರಾಡಿ ರಾಷ್ಟ್ರದ ಕೀರ್ತಿ ಪ್ರತಿಷ್ಠೆಗಳನ್ನು ಬೆಳೆಸಿದ ಯೋಧರಂತೆ ಜ್ಞಾನ ರಾಜ್ಯವನ್ನು ವಿಸ್ತರಿಸಿದವರೂ ಇತಿಹಾಸದ ಮಹಾಪುರುಷರೇ. ಹಾಗೆಯೇ ಧರ್ಮ, ಸಂಸ್ಕೃತಿ, ಸಾಹಿತ್ಯ, ಕಲೆ, ವಿಜ್ಞಾನ ಮುಂತಾದವನ್ನು ತಮ್ಮ ಪ್ರತಿಭೆಯಿಂದ ಪೋಷಿಸಿದ ಸೌಮ್ಯ ಜೀವಿಗಳಿಂದಲೂ ಮಾನವನ ಕಲ್ಯಾಣ ಸಿದ್ಧಿಸಿಯೇ ಇದೆ. ಮಾನವನ ಇತಿಹಾಸವೆಂದರೆ ಅವನು ನಾಗರಿಕತೆಯನ್ನು ನಿರ್ಮಿಸಲು ಹೂಡಿದ ಯಾತ್ರೆ. ಆ ಕಾರ್ಯದಲ್ಲಿ ಎಲ್ಲ ವ್ಯಕ್ತಿಗಳ ಅನುಭವದ ಕಾಣಿಕೆ ಅಮೂಲ್ಯವಾದುದು. ಹಾಗೇ ನಾಗರಿಕತೆಯ ಮುನ್ನಡೆಗೆ ಮಾರ್ಗಸೂಚಿಗಳಂತೆ ನೆರವಾದ ಎಲ್ಲಾ ವ್ಯಕ್ತಿಗಳೂ ಇತಿಹಾಸದ ಪುಟಗಳನ್ನು ಅಲಂಕರಿಸಬೇಕು.[೧] ಈ ಮಾತಿನಿಂದ ಕಲಾವಿದನು ಹೊರತಾಗಿಲ್ಲ. ನಾಡಿನ ಸಂಸ್ಕೃತಿಯ ಶ್ರೀಮಂತಿಕೆಯು ಬೆಳೆಯಲು ಕಲಾವಿದನ ಅಮೂಲ್ಯ ಕಾಣಿಕೆ ಇದ್ದೇ ಇರುತ್ತದೆ ಎಂಬ ಮಾತು ಪ್ರಸ್ತುತ.

೧. ಡಾ. ಎಸ್.ಎಸ್. ವೀರಪ್ಪ, ಚಾರ್ಲ್ಸ್ ಡಾರ್ವಿನ್, ಪು.೨೬

ನಾಡಿನ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹೆಚ್ಚಿಸುವಲ್ಲಿ ಕಲೆ, ಕಲಾವಿದರ ಕೊಡುಗೆ ಅಸಾಮಾನ್ಯವಾದದ್ದು. ಕಲೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಆದಿಯಿಂದಲೂ ಕಲೆ ಮಾನವನ ಕೈಹಿಡಿದುಕೊಂಡೆ ಬಂದಿದೆ. ಇತಿಹಾಸ ಹೇಳುವಂತೆ ಲಿಪಿಯ ಉಗಮಕ್ಕಿಂತ ಮೊದಲೆ ಚಿತ್ರಕಲೆ ಬಳಕೆಯಲ್ಲಿತ್ತು. ಮಾನವನು ಭಾಷೆಯನ್ನು ಸೃಷ್ಟಿಸಿ ಮಾತನಾಡುವುದಕ್ಕಿಂತ ಮುನ್ನ ತನ್ನ ಮನಸ್ಸಿನ ಭಾವನೆಗಳನ್ನು ತನ್ನ ಸಹಚರರೊಂದಿಗೆ ಹಂಚಿಕೊಳ್ಳಲು ಮೊದಲಿಗೆ ಸಂಜ್ಞೆಗಳನ್ನು ಬಳಸುತ್ತಿದ್ದ. ಈ ಸಂಜ್ಞೆಗಳು ಸಮರ್ಥವಾಗಿ ತನ್ನ ಭಾವನೆಗಳನ್ನು ಅಭಿವ್ಯಕ್ತಿಸಲು ವಿಫಲವಾದಾಗ ತನ್ನ ಭಾವನೆಗಳನ್ನು ಸೂಕ್ತ ರೀತಿಯಲ್ಲಿ ಅಭಿವ್ಯಕ್ತಿಸಲು ಆತ ತಾನು ವಾಸಿಸುವ ಗುಹೆಗಳ ಗೋಡೆಯ ಮೇಲೆ ಕಲ್ಲಿದ್ದಿಲು ಅಥವಾ ಪ್ರಾಣಿಗಳ ರಕ್ತದಿಂದ ಚಿತ್ರಿಸಿ ತನ್ನ ಭಾವನೆಗಳನ್ನು ಪ್ರಕಟಿಸತೊಡಗಿದ. ಮುಂದೆ ಇದು ಸೌಂದರ್ಯ ಮೂಲವಾಗಿಯೋ ಧಾರ್ಮಿಕ ಮೂಲವಾಗಿಯೋ ರೂಪಗೊಳ್ಳತೊಡಗಿತು ಎಂಬುದನ್ನು ಇತಿಹಾಸದಿಂದ ನಾವು ಕಾಣುತ್ತೇವೆ. ಹೀಗೆ ಚಿತ್ರಕಲೆಯು ಮಾನವನ ಬಾಳ ಪಥದಲ್ಲಿ ಮಹತ್ವದ ಹೆಜ್ಜೆಯಾಗಿತ್ತು.

ಕಲೆ ಎನ್ನುವುದು ಮೂಲತಃ ಪ್ರಕೃತಿಯ ಮಡಿಲಲ್ಲಿ ಬೆಳೆದ ಮಾನವ ಸ್ವಭಾವಕ್ಕೆ ಸಂಬಂಧಿಸಿದ್ದು. ಅವನ ತುಡಿತ, ಮಿಡಿತಗಳಿಗನುಗುಣವಾಗಿ ಅನುಭವಗಳಿಗೆ ಜೀವಕೊಡುವ ಕ್ರಿಯೆ ಸಹಜವಾಯಿತು. ಈ ಅನುಭವ ಭಾಷಾ ಮಾಧ್ಯಮದ ಮೂಲಕ ಅಭಿವ್ಯಕ್ತಗೊಂಡರೆ ಸಾಹಿತ್ಯವಾಗಿ, ಅಭಿನಯ ಮಾಧ್ಯಮದ ಮೂಲಕ ಹೊರಹೊಮ್ಮಿದರೆ, ನೃತ್ಯ, ನಾಟಕವಾಗಿ, ಬಣ್ಣದ ಮಾಧ್ಯಮದಲ್ಲಿ ಅರಳಿದರೆ ಚಿತ್ರಕಲೆಯಾಗಿ ರೂಪ ಪಡೆಯಿತು. ಹೀಗೆ ಕಲೆಗಳಿಗೆ ಬದುಕಿನ ಅನುಭವವೇ ಮೂಲದ್ರವ್ಯವೆಂದೇ ಹೇಳಬಹುದು. ಇಂಥ ಕಲೆಗಳು ಸಾಂಸ್ಕೃತಿಕ ಬದುಕಿನ ಜೀವಂತ ಸಾಕ್ಷಿಗಳೆನಿಸಿಕೊಂಡಿವೆ.[೨] ಕಲೆ ಎನ್ನುವುದು ಮಾನವನ ವೈಶಿಷ್ಟ್ಯ. ನಮ್ಮ ಸುತ್ತಲಿನ ನಿಸರ್ಗ, ದೈನಂದಿನ ಜನಜೀವನಗಳಿಗೆ ಕಲಾವಿದ ಹೆಚ್ಚು ತೀವ್ರವಾಗಿ ಸ್ಪಂದಿಸುತ್ತಾನೆ. ಈ ಸ್ಪಂದನ ಹಾಗೂ ತುಡಿತಗಳು ಅವನ ಮಾಧ್ಯಮದ ಮೂಲಕ ಪ್ರಕಟವಾಗಿ ಕಲಾಕೃತಿಯೆನಿಸುತ್ತದೆ[೩] ಎಂಬ ಮಾತು ಪ್ರಸ್ತುತವಾಗಿದೆ.

ಪ್ರಾಚೀನರು ಅಧಿಕ ಮನ್ನಣೆ ನೀಡುತ್ತ ಬಂದ ಅರವತ್ನಾಲ್ಕು ಕಲೆಗಳಲ್ಲಿ ಚಿತ್ರಕಲೆಯೂ ಒಂದು. ಕಾಮಸೂತ್ರವನ್ನು ಬರೆದ ವಾತ್ಸಾಯನನು ಕಲೆಗಳಿರುವುದು ಅರವತ್ನಾಲ್ಕು ಎಂದು ಹೇಳಿ 'ಚಿತ್ರಕಲೆಗೆ' ನಾಲ್ಕನೇ ಸ್ಥಾನವನ್ನು ನೀಡಿರುತ್ತಾನೆ. ಮೊದಲನೆ ಸ್ಥಾನ ಸಂಗೀತಕ್ಕೆ, ಎರಡನೆಯದಾಗಿ ಸಾಹಿತ್ಯಕ್ಕೆ,

---

೨. ಡಾ. ಎಸ್.ಸಿ. ಪಾಟೀಲ, ಕರ್ನಾಟಕದ ಜನಪದ ಚಿತ್ರಕಲೆ, ಪು.೧೭

೩. ಚಿ.ಸು. ಕೃಷ್ಣಸೆಟ್ಟಿ, ಚಿತ್ರಚಿತ್ತ, ಪು.೫೩

ಮೂರನೆಯ ಸ್ಥಾನ ನೃತ್ಯಕ್ಕೆ ಹೀಗೆ ಚಿತ್ರಕಲೆಯ ಕಲೆಗಳಲ್ಲಿ ನಾಲ್ಕನೇ ಸ್ಥಾನವನ್ನು ಪಡೆದಿದ್ದು ಶ್ರೇಷ್ಠ ಕಲೆ ಎನಿಸಿಕೊಂಡಿದೆ.

ಕಲೆ ಪದವನ್ನು ಆಂಗ್ಲ ಭಾಷೆಯ 'ಆರ್ಟ್' ಶಬ್ದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಬಳಸಲಾಗುತ್ತಿದೆ. ಆದರೆ ಕಲೆ ಶಬ್ದ ನಮ್ಮ ಸಂಸ್ಕೃತಿಯ ಇತಿಹಾಸದಿಂದ ಬಹಳ ಹಿಂದಿನಿಂದಲೇ ಬಳಕೆಯಾಗಿರುವುದು ತಿಳಿದುಬರುತ್ತದೆ. ಸಂಸ್ಕೃತದ 'ಕಲಾ' ಕನ್ನಡದಲ್ಲಿ 'ಕಲೆ' ಆಗಿದೆ. ಚಂದ್ರಕಲಾ ಅಥವಾ ಚಂದ್ರಕಲೆ ಎಂದು ಬಳಸುವಲ್ಲಿ 'ಕಲಾ' ಪದಕ್ಕೆ ಚಂದ್ರನ ಹದಿನಾರನೆಯ ಒಂದಂಶವೆಂಬ ಅರ್ಥವಿದೆ. ಶಬ್ದಕೋಶಗಳಲ್ಲಿ 'ಕಲಾ' ಶಬ್ದಕ್ಕೆ ಗತಿ, ನಡೆ, ಅರ್ಥ, ಜ್ಞಾನ, ತಿಳಿವಳಿಕೆ ಎಂಬ ಅರ್ಥಗಳಿವೆ. ಮನುಕುಲದ ವಿಕಾಸವನ್ನೆಲ್ಲ ಇಡಿಯಾದ ಅರ್ಥದಲ್ಲಿ 'ಕಲೆ' ಎಂಬ ಶಬ್ದಕ್ಕೆ ಅನ್ವಯಿಸುವಂತೆ ಕೆಲವು ವ್ಯಾಖ್ಯಾನಗಳು ಬಂದಿವೆ. ಋಗ್ವೇದದಲ್ಲಿ ಕಲೆಗೆ 'ಅಂಶ'ವೆಂಬ ಅರ್ಥವಿದ್ದುದಲ್ಲದೆ, ಅದು "ದಿವ್ಯಶಕ್ತಿಯ ಕಾಂತಿಯ ಒಂದು ಕಿರಣ. ಕಲೆ ಎಂದರೆ ಅಂಶ ಅಥವಾ ಕರ್ತೃತ್ವ. 'ಕ'ಕಾರವು ಬ್ರಹ್ಮ ವಾಚಕವಾದುದರಿಂದ ಸೃಷ್ಟಿಯನ್ನು, 'ಲ'ಕಾರವು ಲಯವನ್ನು ಸೂಚಿಸುವುದರಿಂದ ಕಲೆಯು ಸೃಷ್ಟಿ ಸ್ಥಿತಿ ಸಂಹಾರ ರೂಪವಾದುದು".[೪] ಎಂಬಿತ್ಯಾದಿ ಕಲೆಯ ಕುರಿತಾದ ಅರ್ಥಗಳನ್ನು ಕಾಣಬಹುದು.

'ಕಲೆ' ಎಂಬ ಪದಕ್ಕೆ ಅರ್ಥವುಂಟು. ಆದರೆ ಕಲೆಯೆಂದರೇನು ಎಂಬ ಪ್ರಶ್ನೆಗೆ ಇದೇ ಆತ್ಯಂತಿಕ ಎಂಬ ಉತ್ತರವಿಲ್ಲ. ಹಲವಾರು ವಿದ್ವಾಂಸರು ಹಲವಾರು ರೀತಿಯಲ್ಲಿ ಕಲೆಯ ಕುರಿತು ವ್ಯಾಖ್ಯಾನಿಸುತ್ತಾರೆ. ಅವರದೇ ಆದ ಅಭಿಪ್ರಾಯಗಳನ್ನು ಹೊಂದಿದ್ದಾರೆ. ತೀ.ನಂ.ಶ್ರೀ ಅವರು ಹೇಳುವಂತೆ "ಕಲೆಯಂದರೇನು ಎಂಬ ಪ್ರಶ್ನೆ ಬಹುಶಃ ಜೀವನ ಎಂದರೇನು ಎಂಬ ಪ್ರಶ್ನೆಯಷ್ಟೇ ಜಟಿಲವಾದದ್ದು". ಪಾಶ್ಚಾತ್ಯ ಮತ್ತು ಭಾರತೀಯ ವಿದ್ವಾಂಸರು ಕಲೆಯ ಕುರಿತು ವಿಭಿನ್ನವಾದ ನಿಲುವುಗಳನ್ನು ಹೊಂದಿದ್ದಾರೆ.

ಭಾರತದಲ್ಲಿ ವೇದಗಳ ಕಾಲದಿಂದಲೇ ಕಲೆಯ ಬಗೆಗಿನ ಚಿಂತನೆಗಳು ನಡೆದು ಬಂದಿವೆ. ಬ್ರಹ್ಮಸೂತ್ರದಲ್ಲಿ "ಯಾವುದು ಅಂತರಂಗದ ಭಾವನೆಗಳನ್ನು ಕಲಾತ್ಮಕವಾಗಿ ಅಭಿವ್ಯಕ್ತಗೊಳಿಸು ತ್ತದೆಯೋ ಅದು ಕಲೆ" ಎಂದು ವ್ಯಾಖ್ಯಾನಿಸಿದೆ. ಅಭಿನವಗುಪ್ತನು "ಅಭಿವ್ಯಕ್ತಿ ಹಾಗೂ ಧ್ವನಿ ರಸಾನುಭೂತಿಯ ಸ್ವರೂಪ ಕಾವ್ಯ(ಕಲೆ)ದ ಗುರಿಯಾಗಿದೆ" ಎಂದಿದ್ದಾನೆ. "ಕಲೆ ಮಾನವನ ಜೀವನ ಸಂಪತ್ತನ್ನು ತೆರೆದು ತೋರುತ್ತದೆ" ಎಂದು ರವೀಂದ್ರನಾಥ ಟ್ಯಾಗೋರ್ ಅಭಿಪ್ರಾಯಪಟ್ಟಿದ್ದಾರೆ.[೫]

---

೪. ಡಾ. ಎಸ್.ಸಿ. ಪಾಟೀಲ, ಕರ್ನಾಟಕದ ಜನಪದ ಚಿತ್ರಕಲೆ, ಪು.೧೩

೫. ಡಾ. ಶಿವಾನಂದ ಎಚ್. ಬಂಟನೂರು, ದೃಷ್ಟಿಸೃಷ್ಟಿ, ಪು.೭

ತೀ.ನಂ.ಶ್ರೀಯವರು ಹೇಳಿರುವಂತೆ "ಕಾವ್ಯ ಎಂದರೆ ಏನು ಎಂದು ಅನುಭವಕ್ಕೆ ಗೊತ್ತು ಅದನ್ನು ಮಾತಿನಲ್ಲಿ ವಿವರಿಸುವುದು ಕಷ್ಟ. ಅದರೆ ಎಲ್ಲ ಲಕ್ಷಣಗಳನ್ನು ಒಂದು ಸೂತ್ರ ರೂಪದಲ್ಲಿ ಹೇಳಲು ಆಗುವುದಿಲ್ಲ".[೬] ಡಾ. ಶಿವರಾಮ ಕಾರಂತರು ಹೇಳುವಂತೆ "ಜೀವನದ ಬಹು ದಿನಗಳಲ್ಲಿ ನಡೆಯುವ ಅನೇಕಾನೇಕ ಘಟನೆಗಳು, ನೋಟಗಳು, ಸಂಭಾಷಣೆಗಳು, ಪರಿಚಯಗಳು ಮನದಲ್ಲಿ ಅಳಿಸಲಾರದ ಮುದ್ರಿಕೆಯೊತ್ತವುದುಂಟು. ಸುಪ್ತವಾದ ಇಂಥ ಸ್ಮರಣೆಗಳು, ಭಾವನೆಗಳು ಪ್ರಕಟವಾಗಲು ಬಯಸುವುದುಂಟು. ಮನಸ್ಸಿನ ಈ ಹೊರೆಯನ್ನು ತೃಪ್ತಿಕರವಾದ ದಾರಿಯಲ್ಲಿ ಮನುಷ್ಯ ಇಳುಹುವುದಕ್ಕೆ ಮಾಡುವಂಥ ವಿಚಿತ್ರ ಸೃಷ್ಟಿಯಾಗಿ ಕಲೆ ಹೊರಹೊಮ್ಮುತ್ತದೆ.[೭] ಈ ವಿವರಣೆ ಅರ್ಥಪೂರ್ಣವಾಗಿದೆ.

ಪಾಶ್ಚಾತ್ಯ ವಿದ್ವಾಂಸರು ಕಲೆಯ ಕುರಿತು ಈ ರೀತಿಯಾಗಿ ವ್ಯಾಖ್ಯಾನ ಮಾಡಿದ್ದಾರೆ. ಪ್ಲೇಟೋ ಹೇಳುವಂತೆ "ಕಲೆಯು ಸತ್ಯದ ಪ್ರತಿಕೃತಿಯಾಗಿದೆ. ಕಲೆಯಲ್ಲಿ ನಾವು ಈಶ್ವರ ನಿರ್ಮಿತ ಪ್ರಕೃತಿಯನ್ನು ಪುನಃ ಸ್ಥಾಪಿಸುತ್ತೇವೆ" ಎಂದು ಹೇಳಿದರೆ, ಅರಿಸ್ಟಾಟಲ್‌ನು "ಕಲೆಯು ಅನುಕರಣೀಯವಾಗಿರುತ್ತದೆ. ಕಲೆಯಲ್ಲಿ ಸಾಮಾನ್ಯ ಪ್ರತ್ಯಯಕ್ಕೆ ಆಕಾರ ಕೊಡಲಾಗುತ್ತದೆ. ಏಕೆಂದರೆ ವಿಶೇಷವಾದುದರ ಪ್ರತಿಕೃತಿ ಸಾಧ್ಯವೂ ಇಲ್ಲ ಹಾಗೂ ಯೋಗ್ಯವೂ ಅಲ್ಲ" ಎಂದು ಹೇಳಿದ್ದಾನೆ. ಹಾಗೇ ಕ್ರೋಚೆ "ಕಲೆಯು ಬಾಹ್ಯ ಪ್ರಭಾವಗಳ ಅಭಿವ್ಯಕ್ತಿಯಾಗಿದೆ". ರಸ್ಕಿನ್ "ಕಲೆಯು ಈಶ್ವರನ ಸೃಷ್ಟಿ ಕುರಿತು ಮನುಷ್ಯನ ಪರಮಾನಂದದ ಅಭಿವ್ಯಕ್ತಿಯೂ ಹೌದು" ಎಂದು ಹೇಳಿದರೆ, ಟಾಲ್‌ಸ್ಟಾಯ್‌ನು "ನೋಡುವವನಲ್ಲಿಯೂ ಅಂಥಹುದೇ ಭಾವನೆ ಸ್ಫುರಿಸುವಂತೆ ತನ್ನ ಭಾವನೆಗಳನ್ನು ಅಭಿವ್ಯಕ್ತಿಗೊಳಿಸುವುದೇ ಕಲೆ" ಎಂದು, ಹರ್ಬರ್ಟ್ ರೀಡ್ "ಕಲೆಯು ಒಂದು ಕ್ರೀಡೆಯೇ ಆಗಿದೆ"[೮] ಎಂದು ವ್ಯಾಖ್ಯಾನಿಸುತ್ತಾನೆ. ಪಾಶ್ಚಾತ್ಯ ವಿದ್ವಾಂಸರು ಹೀಗೆ ಕಲೆಯ ವ್ಯಾಖ್ಯಾನಗಳನ್ನು ವಿಭಿನ್ನ ರೀತಿಯಲ್ಲಿ ವ್ಯಕ್ತಪಡಿಸಿದ್ದಾರೆ. ವಿವರಣೆಯಲ್ಲಿ ಎಷ್ಟೇ ವ್ಯತ್ಯಾಸವಿರಲಿ, ವೈವಿಧ್ಯತೆಯಿರಲಿ, ಕಲೆಯ ಪ್ರಧಾನ ಗುರಿ 'ಆನಂದ' ಆತ್ಮಾನಂದದಿಂದಲೇ ಕಲೆಯ ಜನ್ಮ ಎನ್ನಲು ಅಡ್ಡಿ ಇಲ್ಲ.

ಕಲೆಗಳಲ್ಲಿ ವಿಂಗಡಣೆಯನ್ನು ಕಾಣುತ್ತೇವೆ. ದೃಶ್ಯಕಲೆ, ದೃಕ್‌ಶ್ರಾವ್ಯಕಲೆ, ಶ್ರಾವ್ಯಕಲೆ ಮತ್ತು ಶಾಬ್ದಿಕ ಕಲೆ ಇವುಗಳನ್ನು ಒಟ್ಟು ಲಲಿತಕಲೆಗಳೆಂದು ಕರೆಯಲಾಗುತ್ತದೆ. ಮುಖ್ಯವಾಗಿ ಚಿತ್ರಕಲೆ ಮತ್ತು ಶಿಲ್ಪಕಲೆಯನ್ನು ದೃಶ್ಯಕಲೆಯೆಂದು ಕರೆಯಲಾಗುತ್ತದೆ.

---

೬. ಡಾ. ಶಿವಾನಂದ ಎಚ್. ಬಂಟನೂರು, ದೃಷ್ಟಿಸೃಷ್ಟಿ ಪು. ೪

೭. ಅದೇ ಪು.೫

೮. ಡಾ. ಮಮತಾ ಚತುರ್ವೇದಿ, ಸೌಂದರ್ಯಶಾಸ್ತ್ರ, ಪು.೮

ರಾಷ್ಟ್ರೀಯ ಕಲಾವಾಹಿನಿಯಲ್ಲಿ ಕರ್ನಾಟಕದ ಚಿತ್ರಕಲೆಯದು ಗಣನೀಯವಾದ ಪಾಲು ಇದೆ. ಸುಮಾರು ಎರಡೂವರೆಯಿಂದ ಮೂರು ಸಾವಿರ ವರ್ಷಗಳಲ್ಲಿ ಸಮಕಾಲೀನವಾಗಿ ಕಾಣಬರುವ ಎಲ್ಲ ಕಾಲಘಟ್ಟಗಳಿಗೂ ಸ್ಪಂದಿಸಿದೆ. ವಿಶ್ವಕೋಶದಂತಹ ಹಲವಾರು ಕೃತಿಗಳು ರಚಿತವಾಗಿದ್ದು, ಅವುಗಳಲ್ಲಿ ಚಿತ್ರ, ಶಿಲ್ಪ ಕುರಿತ ವಿಭಾಗಗಳೂ ಇರುವುದುಂಟು. ಅಭಿಲಾಷಿತಾಥ ಚಿಂತಾಮಣಿ ಅಥವಾ ಮಾನಸೋಲ್ಲಾಸ, ಶಿವತತ್ವ ರತ್ನಕರಗಳು, ಕರ್ನಾಟಕದ ಕೊಡುಗೆಗಳು, ಇವಲ್ಲದೇ ವಿಷ್ಣುಧರ್ಮೋತ್ತರ ಪುರಾಣ, ಮನಸಾರ ಇತ್ಯಾದಿಗಳೂ ಕರ್ನಾಟಕದಲ್ಲಿ ಬಳಕೆಯಲ್ಲಿದ್ದು, ಇವುಗಲಲ್ಲಿರುವ ಚಿತ್ರ, ಶಿಲ್ಪ, ಪ್ರಕರಣಗಳ ವಿವರಗಳು ಕಾಲಕಾಲದ ಕಲಾಕೃತಿಗಳಲ್ಲಿ ಮೂಡಿಬಂದಿರುವುದಾಗಿ ವಿದ್ವಾಂಸರ ಅಭಿಪ್ರಾಯ ಇಪ್ಪತ್ತನೇ ಶತಮಾನದ ಆದಿಯಿಂದಲೂ ಕರ್ನಾಟಕದ ಕಲೆ ಕಲಾವಿದರು ಮುಂದೆ ಮುಂಬಯಿ, ಕಲ್ಕತ್ತಾ ಶಾಂತಿನಿಕೇತನಗಳಲ್ಲಿ ಕಲಿತು ಬಂದ ಕಲಾವಿದರು ಕ್ರಿಯಾಶೀಲರಾಗಿ ಕೃತಿರಚನೆಗೆ ತೊಡಗಿದರು.[೯]

ದೃಶ್ಯಕಲೆಗಳಲ್ಲಿ ಒಂದಾದ ಚಿತ್ರಕಲೆ ಮತ್ತು ಕಲಾವಿದರ ಕುರಿತು ಕರ್ನಾಟಕದ ಸಂದರ್ಭದ ಚಿತ್ರಕಲಾ ಕ್ಷೇತ್ರದಲ್ಲಿ ಸಂಶೋಧನಾ ರೂಪದಲ್ಲಿ ಅಧ್ಯಯನಗಳಾಗಿರುವುದು ಇತ್ತೀಚೆಗೆ. ೯೦ರ ದಶಕದಲ್ಲಿ; ಅದರಲ್ಲೂ ಕಲಾವಿದರ ಕುರಿತಾಗಿ, ಅವರ ಸಮಗ್ರ ಜೀವನ ಮತ್ತು ಕಲಾಕೃತಿಗಳ ಕುರಿತು ಆಳವಾದ ಅಧ್ಯಯನಗಳು ನಡೆದಿರುವುದು ತೀರಾ ಇತ್ತೀಚಿಗೆ. ನಾಡಿಗೆ ಈ ಕ್ಷೇತ್ರದ ಕೊಡುಗೆ ಅಪಾರವಾಗಿದೆ. ನಾಡಿನ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಅವಿರತವಾಗಿ ಪರಿಶ್ರಮ ಪಟ್ಟು, ತಮ್ಮ ಅಮೂಲ್ಯ ಕಲಾಕೃತಿಗಳನ್ನು ನಾಡಿಗೆ ನೀಡಿ ಅದರ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹೆಚ್ಚಿಸುವಲ್ಲಿ ಕಲಾವಿದನು ಪ್ರಮುಖ ಪಾತ್ರವಹಿಸಿದ್ದಾನೆ. ಇಂತಹ ಕಲಾವಿದರ ಕುರಿತು ಅವರ ಸಮಗ್ರ ಜೀವನವನ್ನು ಜೊತೆಗೆ ಅವರ ಬದುಕಿನ ಬಹುಮುಖ್ಯ ಅಂಗವಾಗಿರುವ ಅವರ ಕಲೆಯನ್ನು ಒಂದೆಡೆ ಹಿಡಿದಿಡುವ ಹಾಗೂ ಮುಂದಿನ ಪೀಳಿಗೆಗೆ ಇದರ ಕುರಿತು ಪರಿಚಯಿಸುವ ನಿಟ್ಟಿನಲ್ಲಿ ಸಂಶೋಧನಾ ಕಾರ್ಯಗಳು ನಡೆಯುವುದು ಹಿಂದೆಂದಿಗಿಂತಲೂ ಇಂದು ಮಹತ್ವದ ಕಾರ್ಯವಾಗಿದೆ. ಪಿಎಚ್.ಡಿ. ಮಟ್ಟದಲ್ಲಿ ಕಲಾವಿದರ ಕುರಿತು ಸಂಶೋಧನ ಅಧ್ಯಯನಗಳು ಆಗಿರುವುದು ಬೆರಳೆಣಿಕೆಯಷ್ಟು ಎಂದು ಹೇಳಬಹುದು.

ಬೇರೆ ಬೇರೆ ಜ್ಞಾನಶಿಸ್ತುಗಳಿಗೆ ಹೋಲಿಸಿದಾಗ ಚಿತ್ರಕಲಾ ಕ್ಷೇತ್ರದಲ್ಲಿ ವ್ಯಕ್ತಿ ಅಧ್ಯಯನಗಳು ಆಗಿರುವುದು ತೀರಾ ಅತ್ಯಲ್ಪ ಸಂಖ್ಯೆಯಲ್ಲಿ ಎಂಬುವುದು ಕಂಡುಬರುತ್ತದೆ. ಈ ಕೊರತೆಯನ್ನು

---

೯. ಡಾ. ಅ.ಲ.ನರಸಿಂಹನ್, ಕರ್ನಾಟಕ ಸಂಗಾತಿ, ಪು.೪೬

ಗಮನಿಸಿ ಚಿತ್ರಕಲಾ ಕ್ಷೇತ್ರದಲ್ಲಿ ಸಾಧನೆಯನ್ನು ಮಾಡಿದ ರಾಷ್ಟ್ರ, ಅಂತರಾಷ್ಟ್ರೀಯ ಖ್ಯಾತಿ ಪಡೆದು ಸಾವಿರಾರು ವೈವಿಧ್ಯಮಯ ಕಲಾಕೃತಿಗಳನ್ನು ನಿರ್ಮಿಸಿ ಕರ್ನಾಟಕ ಕಲಾ ಕ್ಷೇತ್ರಕ್ಕೆ ಬಹು ಅಮೂಲ್ಯವಾದ ಕೊಡುಗೆ ನೀಡಿದ ನಾಡಿನ ಹಿರಿಯ ಕಲಾವಿದರಾದ ವಿ.ಟಿ. ಕಾಳೆಯವರ ಜೀವನ ಮತ್ತು ಅವರ ಕಲಾ ಸಾಧನೆಯನ್ನು ಕುರಿತು ಇಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ.

ಅಧ್ಯಯನದ ಉದ್ದೇಶ

ಪ್ರಸ್ತುತ ಕರ್ನಾಟಕದ ಹಿರಿಯ ತಲೆಮಾರಿನ ಗಮನಾರ್ಹ ಕಲಾವಿದರಲ್ಲಿ ಒಬ್ಬರಾದ ವಿ.ಟಿ.ಕಾಳೆಯವರು ಕೇವಲ ಒಬ್ಬ ಚಿತ್ರಕಲಾವಿದ ಮಾತ್ರವಾಗಿ ಗುರುತಿಸಿಕೊಳ್ಳದೆ ಅವರು ಒಬ್ಬ ಉತ್ತಮ ನಾಟಕಕಾರ, ನಟ, ಅನೇಕ ನಾಟಕಗಳಿಗೆ ನಿರ್ದೇಶನ ಮಾಡಿ ನಾಟಕ ರಂಗದಲ್ಲೂ ಗುರುತಿಸಿಕೊಂಡ ಪ್ರತಿಭಾವಂತರಾಗಿದ್ದಾರೆ. ಅನೇಕ ನಾಟಕಗಳನ್ನು ತಾವೇ ಸ್ವತಃ ರಚಿಸಿದ್ದಾರೆ. ಅವರು ಒಬ್ಬ ಉತ್ತಮ ಕಲಾ ಬರಹಗಾರ ಕೂಡಾ ಹೌದು. ಅಲ್ಲದೇ ಶಿಲ್ಪಕಲಾವಿದರೂ, ಅವರು ಒಬ್ಬ ಉತ್ತಮ ಕಲಾಶಿಕ್ಷಕರೂ ಆಗಿದ್ದರು. ಅನೇಕ ವಿದ್ಯಾರ್ಥಿಗಳು ಅವರು ಕೈಯಲ್ಲಿ ಕಲಿತು, ಇಂದು ಬೆಳೆದು ದೊಡ್ಡ ದೊಡ್ಡ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಅವರೆಲ್ಲ ಉತ್ತಮ ನಾಗರಿಕರಾಗಿ ಬದುಕಲು ಇವರ ಮಾರ್ಗದರ್ಶನ ಪಾತ್ರ ಹಿರಿದು. ಹೀಗೆ ಬಹುಮುಖ ವ್ಯಕ್ತಿತ್ವವನ್ನು ಹೊಂದಿರುವ ಕಾಳೆಯವರ ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದ್ದು, ಮುಖ್ಯವಾಗಿ ಚಿತ್ರಕಲೆಯಲ್ಲಿನ ಅವರ ಸಾಧನೆಯನ್ನು ಕುರಿತು ಅಧ್ಯಯನವನ್ನು ಕೇಂದ್ರೀಕರಿಸಲಾಗಿದೆ. ಅಲ್ಲದೇ ಅವರ ಇನ್ನಿತರ ಬಹುಮುಖ ಪ್ರತಿಭೆಯನ್ನು ಕುರಿತು ಸ್ಥೂಲವಾಗಿ ಹೇಳಲಾಗಿದೆ.

ನಾಡಿನ ಕಲಾಕ್ಷೇತ್ರಕ್ಕೆ ತಮ್ಮದೇ ಆದ ವಿಶಿಷ್ಟ ಕೊಡುಗೆ ನೀಡಿದ ಕಾಳೆಯವರ ಅಮೂಲ್ಯ ಕಲಾಕೃತಿಗಳು ಇಂದು ನಾಡಿನ ಅಮೂಲ್ಯ ಆಸ್ತಿಗಳಾಗಿವೆ. ಕಾಳೆಯವರ ಸಾವಿರಾರು ಕಲಾಕೃತಿಗಳು ವೈವಿಧ್ಯಮಯವಾದವುಗಳಾಗಿದ್ದು, ಅವುಗಳ ವಸ್ತುವಿಷಯ ಮಾಧ್ಯಮದ ಕುರಿತು, ವರ್ಣವಿನ್ಯಾಸ ರೇಖಾವಿನ್ಯಾಸಗಳ ಸ್ವರೂಪದ ಕುರಿತು ವಿಶೇಷವಾದ ಅಧ್ಯಯನ ಮಾಡುವ ಉದ್ದೇಶವು ಇಲ್ಲಿದೆ.

ಕಲಾಕ್ಷೇತ್ರಕ್ಕೆ ಕಾಳೆಯವರ ಸಾಧನೆಯ ವಿವಿಧ ರೀತಿಯ ಕೊಡುಗೆಗಳನ್ನು, ಕಲಾವಿದರಾಗಿ ಅವರ ಸ್ಥಾನಮಾನಗಳನ್ನು, ಅವರ ಬೆಳವಣಿಗೆಯ ವಿವಿಧ ಹಂತಗಳನ್ನು ಒಂದಡೆಗೆ ದಾಖಲಿಸುವ ಮಹತ್ವದ ಕಾರ್ಯವನ್ನು ಈ ಅಧ್ಯಯನವು ಕೈಗೊಂಡಿದ್ದು ಕಾಳೆಯವರ ಕಲಾಕೃತಿಗಳ ಪ್ರಮುಖ ಧೋರಣೆಗಳನ್ನು ಗುರುತಿಸುವದಲ್ಲದೇ ಈ ಹಿನ್ನೆಲೆಯಲ್ಲಿ ಸಮಕಾಲೀನ ಕಲಾ ಸಂದರ್ಭದಲ್ಲಿ ಕಾಳೆಯವರ ಜೀವನ ಸಾಧನೆ ಕೊಡುಗೆಗಳನ್ನು ಅವರ ಕಲಾಕೃತಿಗಳ ಅಧ್ಯಯನದಿಂದ ಮುಂದಿನ ಪೀಳಿಗೆಗೆ ಪರಿಚಯಿಸಿ ಕೊಡುವುದು ಸಹ ಪ್ರಸ್ತುತ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

ಎಪ್ಪತ್ತಾರು ವರ್ಷದ ವಿ.ಟಿ. ಕಾಳೆಯವರು ಪ್ರಸ್ತುತ ಸಂದರ್ಭದಲ್ಲೂ ಕಲಾಕೃತಿಗಳನ್ನು ರಚಿಸುವಲ್ಲಿ ಆನಂದಿಸುತ್ತಾರೆ. ಅನೇಕ ಕಲಾಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಾರೆ. ಅವರು ವೃತ್ತಿಯಿಂದ ನಿವೃತ್ತರಾದರೂ ಕಲಾ ರಚನೆಯಲ್ಲಿ ಅವರಿಗೆ ನಿವೃತ್ತಿಯೆಂಬುದೇ ಇಲ್ಲ. ಈಗಲೂ ಉತ್ಸಾಹದಿಂದ ಕಲಾಕೃತಿಗಳ್ನು ರಚಿಸುವುದರಲ್ಲಿ ಸದಾ ಕಾರ್ಯನಿರತರಾಗಿರುತ್ತಾರೆ. ಇಂಥ ಉತ್ಸಾಹಿ ಪರಿಶ್ರಮದ ವ್ಯಕ್ತಿಗೆ ಹಲವಾರು ಸನ್ಮಾನಗಳು, ಗೌರವಗಳು, ಪ್ರಶಸ್ತಿಗಳು ಅರಸಿ ಬಂದಿವೆ. ಅವುಗಳಲ್ಲಿ ಕನ್ನಡ ವಿಶ್ವವಿದ್ಯಾಲಯ ಗೌರವಿಸಲ್ಪಡುವ ಗೌರವ ಡಿ.ಲಿಟ್ ಪದವಿಯಾದ ನಾಡೋಜ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಗೌರವಿಸಲ್ಪಡುವ ಲಲಿತಕಲಾ ಅಕಾಡೆಮಿ ಗೌರವ ಪ್ರಶಸ್ತಿಗಳು ಅವರ ಮುಡಿಗೇರಿವೆ. ಅಲ್ಲದೇ ಅವರು ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿ, ಪಠ್ಯಕ್ರಮ ರಚನೆಗಳ ಸದಸ್ಯರಾಗಿ ಹಲವಾರು ಉನ್ನತ ಸ್ಥಾನಗಳಲ್ಲಿ ಸೇವೆ ಸಲ್ಲಿಸಿರುತ್ತಾರೆ.

ಹೀಗೆ ಕನ್ನಡ ನಾಡಿನ ಕಲಾಕ್ಷೇತ್ರದಲ್ಲಿ ಸೇವೆ ಸಲ್ಲಿಸಿ ಎತ್ತರದ ಸಾಧನೆ ಮಾಡಿದ ಇಂತಹ ಒಬ್ಬ ಹಿರಿಯ ಕಲಾವಿದರನ್ನು ಕುರಿತು ನಾಡಿನ ಕಲಾಕ್ಷೇತ್ರದಲ್ಲಿ ಸಮಗ್ರವಾಗಿ, ಆಳವಾದ ಅಧ್ಯಯನ ನಡೆದಿಲ್ಲ. ಈ ಹಿನ್ನೆಲೆಯಲ್ಲಿ ಕಾಳೆಯವರ ಕುರಿತು ಇದುವರೆಗೆ ಬಂದ ಅಧ್ಯಯನಗಳು ಸಂಕ್ಷಿಪ್ತರೂಪದಲ್ಲಿವೆ. ಮತ್ತು ಅಲ್ಪ ಪರಿಚಯಕ್ಕೆ ಸೀಮಿತಗೊಂಡಿದ್ದು, ತಮ್ಮ ಮಿತಿಗಳಿಗೆ ಒಳಪಟ್ಟಿವೆ. ಇದನ್ನು ಗಮನಿಸಿ ಈ ಕಲಾವಿದರ ಬದುಕು ಮತ್ತು ಕಲಾ ಸಾಧನೆಯನ್ನು ಕುರಿತು, ಅವರ ಕಲಾಕೃತಿಗಳ ಕುರಿತು ಸಮಗ್ರವಾದ ಅಧ್ಯಯನವೊಂದನ್ನು ಕಟ್ಟಿಕೊಡುವ ಮತ್ತು ಈ ಮುಖಾಂತರ ಅವರನ್ನೂ ಅವರ ಕಲಾಕೃತಿಗಳನ್ನೂ ವಿಭಿನ್ನವಾದ ನೆಲೆಗಳಿಂದ ಅಧ್ಯಯನ ಮಾಡುವ ಪ್ರಮುಖ ಉದ್ದೇಶವನ್ನು ಹೊಂದಲಾಗಿದೆ.

ಕಾಳೆಯರ ಕುರಿತು ನಡೆದ ಅಧ್ಯಯನಗಳು

ಕಾಳೆಯವರ ಕುರಿತು ನಾಡಿನ ಕಲಾ ಬರಹಗಾರರಾಗಲಿ, ಸಂಶೋಧಕರಾಗಲಿ, ನಾಡಿನ ಪತ್ರಿಕೆ ಗಳಾಗಲಿ ಇವರ ಮತ್ತು ಇವರ ಅಮೂಲ್ಯ ಕಲಾಕೃತಿಗಳ ಕುರಿತು ಗುರುತಿಸಿರುವುದು ಕಡಿಮೆ. ಇವರ ಬಗ್ಗೆ ಬಂದ ಮಾಹಿತಿಗಳು ಬೆರಳೆಣಿಕೆಯಷ್ಟಿವೆ ಎನ್ನಬಹುದು. ಅಷ್ಟಕ್ಕೂ ನಾಡಿನ ಕಲಾಕ್ಷೇತ್ರಕ್ಕೆ ಕಾಳೆಯವರ ಸೇವೆ ಮಹತ್ವದಾಗಿದೆ. ಹೆಚ್ಚಾಗಿ ನಮ್ಮ ಪ್ರಸ್ತುತ ಕಲಾಕ್ಷೇತ್ರವು ನವ್ಯ ಶೈಲಿಯಲ್ಲಿ ಕಲಾಕೃತಿಗಳನ್ನು ರಚಿಸುವವರ ಕುರಿತು ತನ್ನ ಗಮನವನ್ನು ಕೇಂದ್ರೀಕರಿಸುತ್ತಾ ಬಂದಿದೆ. ಸಾಂಪ್ರದಾಯಿಕ ಕಲಾವಿದರೆಂದು ಗುರುತಿಸಲ್ಪಡುವ ಕಾಳೆಯವರ ಕುರಿತು ನಾಡಿನ ಪತ್ರಿಕೆಗಳಲ್ಲಿ ಸಿಗುವ ಮಾಹಿತಿ ಅತ್ಯಲ್ಪ. ಇನ್ನು ಲಲಿತಕಲಾ ಅಕಾಡೆಮಿಯಿಂದ ಪ್ರಕಟಣೆಗೊಂಡ 'ವಿ.ಟಿ. ಕಾಳೆ' ಎಂಬ ವ್ಯಕ್ತಿ ಪರಿಚಯ

ಪುಸ್ತಕವನ್ನು ಡಾ. ಎಸ್.ಸಿ. ಪಾಟೀಲರು ಬರೆದಿದ್ದು ಅದು ತನ್ನ ಮಿತಿಗೆ ಒಳಪಟ್ಟಿದೆ. ಈ ಪುಸ್ತಕ ಸಂಪೂರ್ಣ ಕಾಳೆಯವರ ಕುರಿತಾಗಿ ಮೂಡಿ ಬಂದ ಕಿರುರೂಪದ ಪುಸ್ತಕವಾಗಿದೆ. ಇನ್ನುಳಿದ ಪುಸ್ತಕಗಳಲ್ಲಿ ಕಾಳೆಯವರ ಕುರಿತು ಪ್ರಾಸ್ತಾವಿಕವಾಗಿ ಮಾತ್ರ ಹೇಳಲಾಗಿದೆ. ಅವುಗಳ ಕುರಿತು ಇಲ್ಲಿ ಮಾಹಿತಿಯನ್ನು ನೀಡಲಾಗಿದೆ.

ಡಾ. ಎಸ್.ಸಿ. ಪಾಟೀಲ ಅವರು ಬರೆದ **ವಿ.ಟಿ. ಕಾಳೆ** ಎಂಬ ಪುಸ್ತಕವು ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಪ್ರಕಟಗೊಂಡಿದ್ದು, ಈ ಪುಸ್ತಕ ವಿ.ಟಿ.ಕಾಳೆಯವರ ಕುರಿತು ಕಿರು ಪರಿಚಯಾತ್ಮಕ ಮಾಹಿತಿಯನ್ನು ಒದಗಿಸುತ್ತದೆ. ಇದು ಕಿರು ಮಾಹಿತಿಯನ್ನು ಒದಗಿಸುವ ಪುಸ್ತಕವಾದರೂ ವಿ.ಟಿ. ಕಾಳೆಯವರು ಕಲಾವಿದರಾಗಿ ಇಲ್ಲಿಯವರೆಗೆ ನಡೆದು ಬಂದ ದಾರಿಯನ್ನು ಪರಿಚಯಿಸುತ್ತದೆ. ಇಲ್ಲಿ ವಿ.ಟಿ. ಕಾಳೆಯವರ ಬಾಲ್ಯ, ಸಾಂಸ್ಕೃತಿಕ ಪರಿಸರ ಅವರು ಮುಂದೆ ಕಲಾವಿದರಾಗಿ ಬೆಳೆಯಲು ಹೇಗೆ ಪ್ರೇರಣೆ ನೀಡಿತು ಎಂಬ ಮಾಹಿತಿಯೊಂದಿಗೆ ಅವರ ಕಲಾಶಿಕ್ಷಣದ ಪಯಣ, ಶಿಕ್ಷಕ ವೃತ್ತಿ, ನಂತರದ ನಿವೃತ್ತಿಯ ದಿನಗಳು ಅವರ ಕಲಾಕೃತಿಗಳು ಮತ್ತು ಕಲಾಚಟುವಟಿಕೆಗಳ ಕುರಿತು ಮಾಹಿತಿಯನ್ನು ಡಾ. ಎಸ್.ಸಿ. ಪಾಟೀಲರು ಒದಗಿಸಿದ್ದಾರೆ. ಒಟ್ಟಿನಲ್ಲಿ ಈ ಪುಸ್ತಕವು ಕಾಳೆಯವರನ್ನು ಕುರಿತು ತಿಳಿದುಕೊಳ್ಳಲು ಒಂದು ಮಾರ್ಗಸೂಚಿ ಪುಸ್ತಕವಾಗಿದೆ.

ಪ್ರಶಸ್ತಿ ಪಡೆದ ಕಲಾವಿದರು ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಪ್ರಕಟಗೊಂಡ ಈ ಪುಸ್ತಕವು ಒಟ್ಟು ೯೭ ಜನ ಕಲಾವಿದರಿಗೆ ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಕೊಡಲ್ಪಟ್ಟಿರುವ ಕುರಿತು ಮಾಹಿತಿಯಿದ್ದು ಅದರಲ್ಲಿ ವಿ.ಟಿ. ಕಾಳೆಯವರು ಕೂಡ ಒಬ್ಬರು. ಇವರಿಗೆ ೧೯೬೨ ಮತ್ತು ೧೯೬೮ರಲ್ಲಿ ಈ ಪ್ರಶಸ್ತಿ ಲಭಿಸಿದ್ದು ಇಲ್ಲಿ ಕೊಟ್ಟಿರುವ ಮಾಹಿತಿ ಪ್ರಕಾರ ಕರ್ನಾಟಕ ಲಲಿತಕಲಾ ಅಕಾಡೆಮಿ ವತಿಯಿಂದ ರಾಜ್ಯದ ದೇವಾಲಯಗಳ ಭಿತ್ತಿಚಿತ್ರಗಳ ನಕಲು ಮಾಡುವ ಯೋಜನೆಯಲ್ಲಿ ಕಾಳೆಯವರ ಪಾತ್ರ ದೊಡ್ಡದು. ಶ್ರವಣಬೆಳಗೊಳದ ಜೈನ ಹಾಗೂ ಶಿರಾದಲ್ಲಿರುವ ರೇವಣಸಿದ್ಧೇಶ್ವರ ದೇವಾಲಯಗಳ ಭಿತ್ತಿಚಿತ್ರಗಳ ನಕಲು ಕಾರ್ಯದಲ್ಲಿ ಕಾಳೆಯವರು ತೋರಿರುವ ಕಲಾ ನೈಪುಣ್ಯ ಶ್ಲಾಘನೀಯ ಎಂದು ಹೇಳಲಾಗಿದೆ.

ಡಾ. ಬಸವರಾಜಪ್ಪನವರು "ಬಳ್ಳಾರಿ ಜಿಲ್ಲೆಯ ಚಿತ್ರಕಲೆ" ಕುರಿತು ಪುಸ್ತಕ ಬರೆದಿದ್ದು ಕಿರು ರೂಪದಲ್ಲಿದೆ. ಇಲ್ಲಿ ವಿ.ಟಿ. ಕಾಳೆಯವರು ಕೂಡಾ ಪ್ರಸ್ತುತ ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ನೆಲೆಸಿದ್ದರಿಂದ ಈ ಕಲಾವಿದರೂ ಕೂಡಾ ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಕಲಾವಿದ ರಾಗಿದ್ದಾರೆ. ಇಲ್ಲಿ ಅವರ ಕಿರು ಪರಿಚಯವನ್ನು ಅವರ ಕಲಾಕೃತಿಗಳನ್ನು ಹೆಸರಿಸಲಾಗಿದೆ.

ಸಂಶೋಧಕಿ ಗಿರಿಜಾ ಅವರು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ "ಸಂಡೂರಿನ ಸಾಂಸ್ಕೃತಿಕ ಅಧ್ಯಯನ" ಎಂಬ ಮಹಾಪ್ರಬಂಧದಲ್ಲಿ ಸಂಡೂರಿನ ಸಾಂಸ್ಕೃತಿಕ ಬದುಕಿನ ಸಂಶೋಧನೆಯ ಜೊತೆಗೆ ಸಂಡೂರಿನಲ್ಲೇ ನೆಲೆಸಿರುವ ಕಾಳೆಯವರ ಕುರಿತು ಪ್ರಾಸ್ತಾವಿಕವಾಗಿ ವ್ಯಕ್ತಿ ಪರಿಚಯವನ್ನು ಮಾಡಿದ್ದು, ಕೆಲವು ಪ್ರಮುಖ ಅಂಶಗಳು ನನ್ನ ಅಧ್ಯಯನಕ್ಕೆ ಉಪಯುಕ್ತ ಮಾಹಿತಿಗಳನ್ನು ನೀಡಿದೆ. ಕಾಳೆಯವರ ಹುಟ್ಟೂರಿನ ಮೂಲದೊಂದಿಗೆ ಅವರು ಇಲ್ಲಿಯವರೆಗೆ ನಡೆದು ಬಂದ ದಾರಿಯ ಕುರಿತು ವ್ಯಕ್ತಿ ವಿವರದ ಮಾಹಿತಿಯನ್ನು ಇಲ್ಲಿ ಸಂಕ್ಷಿಪ್ತವಾಗಿ ಹೇಳಲಾಗಿದೆ. ಒಟ್ಟಿನಲ್ಲಿ ಈ ಕೃತಿಗಳು ನನ್ನ ಅಧ್ಯಯನಕ್ಕೆ ನೆರವಾಗಿದ್ದು, ನನ್ನ ಸಂಶೋಧನೆಗೆ ದಾರಿದೀಪಗಳಾಗಿವೆ.

ಇನ್ನು ಕಾಳೆಯವರ ಕುರಿತು ಅನೇಕ ಕಿರು ಪರಿಚಯಾತ್ಮಕ ಲೇಖನಗಳು ನಾಡಿನ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಆದರೂ ಇವು ಹೆಚ್ಚಾಗಿ ವ್ಯಕ್ತಿ ವಿವರಗಳನ್ನು ನೀಡಿವೆಯೇ ಹೊರತು ಅವರ ಕಲಾಕೃತಿಗಳ ಕುರಿತು ವಿಶ್ಲೇಷಣೆಯಾಗಲಿ, ವಿಮರ್ಶೆಯಾಗಲಿ ಈ ನಿಟ್ಟಿನಲ್ಲಿ ಮಾಹಿತಿ ಬಂದಿರುವುದು ತೀರಾ ಕಡಿಮೆ.

ಚಿತ್ರಕಲಾ ಕ್ಷೇತ್ರದಲ್ಲಿ ಇಲ್ಲಿಯವರೆಗೆ ನಡೆದ ಅಧ್ಯಯನಗಳು

ಕರ್ನಾಟಕದ ಸಂದರ್ಭದಲ್ಲಿ ಚಿತ್ರಕಲಾ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನಾ ಅಧ್ಯಯನಗಳು ನಡೆದಿಲ್ಲವೆಂದೇ ಹೇಳಬಹುದಾಗಿದೆ. ಏಕೆಂದರೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಚಿತ್ರಕಲೆಗಳ ಕುರಿತಾದ ಅಧ್ಯಯನಕ್ಕೆ ಅವಕಾಶ ದೊರಕಿದ್ದು ತೀರ ಇತ್ತೀಚೆಗಷ್ಟೆ. ೧೯೯೦ರ ದಶಕದಲ್ಲಿ ಈ ಅಧ್ಯಯನಗಳು ತೀವ್ರಗೊಂಡು ಈಗಷ್ಟೇ ತನ್ನ ಶೈಶವಾವಸ್ಥೆಯನ್ನು ಕಳೆದು ಯೌವ್ವನಕ್ಕೆ ಕಾಲಿಡುತ್ತಿವೆ. ೧೯೮೦ರ ದಶಕದಿಂದ ಕರ್ನಾಟಕದಲ್ಲಿ ನಡೆದ ದೃಶ್ಯಕಲಾ ಅಧ್ಯಯನಗಳ ಸ್ಥೂಲವಾದ ವಿವರ ವನ್ನು ಈ ಕೆಳಗೆ ಸಮೀಕ್ಷಿಸಿ ಕೊಡಲಾಗಿದೆ.

ಪಿಎಚ್.ಡಿ. ಮಹಾಪ್ರಬಂಧಗಳು

೧೯೮೦ರ ದಶಕದಿಂದ ಕರ್ನಾಟಕದ ದೃಶ್ಯಕಲಾ ಕ್ಷೇತ್ರದಲ್ಲಿ ಮೊದಲಬಾರಿಗೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಚಿತ್ರಕಲೆ ಕುರಿತು ಸಂಶೋಧನಾತ್ಮಕ ಅಧ್ಯಯನ ಪ್ರಾರಂಭಗೊಂಡಿರುವುದು ಕಂಡುಬರುತ್ತದೆ. ಡಾ. ಎಸ್.ಸಿ.ಪಾಟೀಲರು ೧೯೮೩ರಲ್ಲಿ ಕರ್ನಾಟಕ ವಿ.ವಿ.ಯ ಸ್ನಾತಕೋತ್ತರ ಶಿಕ್ಷಣ ವಿಭಾಗಕ್ಕೆ ಮಂಡಿಸಿದ **ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ: ಒಂದು ಅಧ್ಯಯನ** ಎಂಬ ಸಂಶೋಧನ ಕಿರುಪ್ರಬಂಧವು ಈ ಕ್ಷೇತ್ರದ ಪ್ರಥಮ ಅಧ್ಯಯನದ ಕಾರ್ಯವೆಂದು ದಾಖಲಾಗಿದೆ. ೧೯೮೭ರಲ್ಲಿ **ಡಾ. ಬಿ.ಕೆ.ಹಿರೇಮಠರು ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ** ಎಂಬ ಪಿಹೆಚ್.ಡಿ. ಮಹಾಪ್ರಬಂಧದಲ್ಲಿ ಹಸ್ತಪ್ರತಿ ಚಿತ್ರಕಲೆ ಕುರಿತಾಗಿ ಎರಡು ಅಧ್ಯಾಯಗಳನ್ನು ಮೀಸಲಾಗಿಟ್ಟು ಅಧ್ಯಯನ ಮಾಡಿದ್ದಾರೆ. ಇದರ ನಂತರ ೧೯೯೧ರಲ್ಲಿ ಕರ್ನಾಟಕದಲ್ಲಿ ಜನಪದ ಚಿತ್ರಕಲೆಯನ್ನೇ

ಸಂಶೋಧನೆಯ ಮುಖ್ಯ ವಿಷಯವನ್ನಾಗಿಟ್ಟುಕೊಂಡು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಪಿಹೆಚ್.ಡಿ. ಮಹಾಪ್ರಬಂಧ **ಕರ್ನಾಟಕ ಜನಪದ ಚಿತ್ರಕಲೆ** ಈ ಮಹಾಪ್ರಬಂಧವನ್ನು ಡಾ. ಎಸ್.ಸಿ. ಪಾಟೀಲರು ಸಿದ್ಧಪಡಿಸಿದ್ದು ದೃಶ್ಯಕಲಾ ಕ್ಷೇತ್ರದ ಮೊದಲ ಅಧ್ಯಯನ ಎಂಬ ಅಗ್ಗಳಿಕೆಗೆ ಪಾತ್ರವಾಗಿದೆ. ನಂತರದ ದಿನಗಳಲ್ಲಿ ೧೯೯೫ರಲ್ಲಿ ಡಾ. ಅ.ಲ. ನರಸಿಂಹನ್ ಅವರು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಪಿಎಚ್.ಡಿ. ಮಹಾಪ್ರಬಂಧ **ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು,** ೧೯೯೭ರಲ್ಲಿ ಡಾ. ಸಂಪದಾ ಭಟ್ ಅವರ **ಹಿಂದೂಸ್ತಾನಿ ಸಂಗೀತ ಹಾಗೂ ರಾಗಮಾಲ ಚಿತ್ರಗಳು,** ಕನ್ನಡ ವಿಶ್ವವಿದ್ಯಾಲಯಕ್ಕೆ, ೧೯೯೭ರಲ್ಲಿ ಡಾ. ಪುಷ್ಪಾ ದ್ರಾವಿಡ ಇವರು ಮಂಡಿಸಿದ **ಅನಿವಾಸಿ ಭಾರತೀಯ ಕಲಾವಿದ ದಿ.ನಿಕೋಲಸ್ ರೋರಿಕ್ ಜೀವನ ಮತ್ತು ಕಲಾಕೃತಿಗಳು,** ೨೦೦೧ರಲ್ಲಿ ಡಾ. ಯಾದಪ್ಪ ಪರದೇಶಿಯವರ **ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ: ಒಂದು ಅಧ್ಯಯನ,** ೨೦೦೨ರಲ್ಲಿ ಡಾ. ಶಿವಾನಂದ ಬಂಟನೂರು ಇವರ **ಕರ್ನಾಟಕ ಜನಪದ ಶಿಲ್ಪಕಲೆ: ಒಂದು ಅಧ್ಯಯನ,** ೨೦೦೨ರಲ್ಲಿ ಡಾ. ಗಿರೀಶ ಅವರ **ಬುಡಕಟ್ಟು ಚಿತ್ರಕಲೆ,** ೨೦೦೨ರಲ್ಲಿ ಡಾ. ಲಕ್ಷ್ಮೀದೇವಿ ಗವಾಯಿಯವರ **ಕಲಾವಿದ ಎಂ.ಎ.ಚೆಟ್ಟಿಯವರ ಜೀವನ-ಕಲಾಕೃತಿಗಳು: ಒಂದು ಅಧ್ಯಯನ,** ೨೦೦೨ರಲ್ಲಿ ಶರಣಪ್ಪ ಕೋಲ್ಕಾರ ಅವರ **ಕೊಪ್ಪಳ-ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ,** ೨೦೦೨ರಲ್ಲಿ ಡಾ. ಸೌಮ್ಯ ಅವರ **ಯಂತ್ರಾ ದಿ ವಿಜುವಲ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫರೆನ್ಸ್ ಟು ಕಾಂಟೆಂಪರರಿ ತಾಂತ್ರಿಕ ಆರ್ಟಿಸ್ಟ್,** ೨೦೦೨ರಲ್ಲಿ ಡಾ. ಪ್ರಮಿಳಾ ಲೋಚನ ಅವರ **ಮೈಂಡ್ ಮ್ಯೂಜಿಕ್ ಅಂಡ್ ಕಲರ್ ಎಕ್ಸಪ್ಲೋಜಿಸ್ ಅಂಡ್ ಡೆವೆಲಪ್‌ಮೆಂಟ್ ಆಫ್ ರಾಗಮಾಲಾ ಆಂಡ್ ಕಾಂಟೆಂಪರರಿ ಪೇಂಟಿಂಗ್,** ೨೦೦೩ರಲ್ಲಿ ಡಾ. ವೀಣಾ ಶೇಖರ ಮಂಡಿಸಿದ **ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ(೧೭೮೦-೧೮೨೦),** ೨೦೦೩ರಲ್ಲಿ ಡಾ. ಸಿದ್ಧಲಿಂಗ ಸ್ವಾಮಿ ಹಿರೇಮಠ ಅವರ **ಕಲಾವಿದ ಆರ್.ಎಮ್. ಹಡಪದ : ಒಂದು ಅಧ್ಯಯನ,** ೨೦೦೩ರಲ್ಲಿ ಡಾ. ಎಸ್.ಸಿ. ಪಾಟೀಲರು ಕರ್ನಾಟಕ ವಿ.ವಿ.ಗೆ ಮಂಡಿಸಿದ **ಎ ಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ್ ಎಜ್ಯುಕೇಶನ್ ಎಟ್ ಸ್ಕೂಲ್ ಲೇವಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೇಷಲ್ ರೆಫರನ್ಸ್ ಟು ಡ್ರಾಯಿಂಗ್ ಆಂಡ್ ಪೇಂಟಿಂಗ್,** ೨೦೦೪ರಲ್ಲಿ ಡಾ. ವಿ.ಎಮ್. ಬಾಗಾಯತ್ ಅವರ **ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ: ಒಂದು ಅಧ್ಯಯನ (೧೪೦೦-೧೮೦೦),** ೨೦೦೪ರಲ್ಲಿ ಡಾ. ಶಿವಕುಮಾರ ಜಿ.ಓ. ಅವರ **ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು,** ೨೦೦೪ರಲ್ಲಿ ಡಾ. ಪಿ. ಗೌರೀಶ ಅವರ **ಮೈಸೂರು ಜಿಲ್ಲೆಯ ಜನಪದ ಚಿತ್ರಕಲೆ,** ೨೦೦೫ರಲ್ಲಿ ಡಾ. ಶಶಿಕಲಾ ಹೂಗಾರ ಅವರ **ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ,** ೨೦೦೫ರಲ್ಲಿ ಡಾ. ಶಿವಪ್ರಕಾಶ ತುಕ್ಕಣ್ಣವರ ಅವರ **ಕರ್ನಾಟಕ ರಥ ಶಿಲ್ಪಕಲೆ,** ೨೦೦೫ರಲ್ಲಿ ಡಾ. ಎಚ್.ಎನ್.ಚಿತ್ರಗಾರ ಅವರ **ಕರ್ನಾಟಕ ಹಸ್ತಪ್ರತಿ ಚಿತ್ರಕಲೆ,** ೨೦೦೫ರಲ್ಲಿ ಡಾ. ಎಸ್.ವಿ. ವೆಂಕಟೇಶಯ್ಯ ಅವರ **ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು ಒಂದು ಅಧ್ಯಯನ,** ೨೦೦೬ರಲ್ಲಿ ಡಾ. ವಿಶ್ವೇಶ್ವರಿ

ತಿವಾರಿ ಅವರ **ರಂಗೋಲಿ ಕಲೆ,** ೨೦೦೭ರಲ್ಲಿ ಡಾ. ಮಲ್ಲಿಕಾರ್ಜುನ ಬಾಗೋಡಿ ಅವರ **ಸುರಪುರ ಶೈಲಿಯ ಚಿತ್ರಕಲೆ ಒಂದು ಅಧ್ಯಯನ,** ಡಾ. ಗೀತಾಂಜಲಿ ಬಿ.ಆರ್. ಅವರ **ಐತಿಹಾಸಿಕ ದೀಪಸ್ತಂಭಗಳು,** ೨೦೦೭ರಲ್ಲಿ ಡಾ. ರಾಠೋಡ್ ಅವರ **ಅನ್ವಯಿಕ ಕಲೆ-ಹಿಂದಿನಿಂದ ಇಂದಿನವರೆಗೆ,** ೨೦೦೮ರಲ್ಲಿ ಡಾ. ಮೋಹನ್‌ರಾವ್ ಬಿ. ಪಂಚಾಳ ಅವರ **ಚಿತ್ರ ಕಲಾವಿದ ಡಾ. ಎಸ್.ಎಮ್.ಪಂಡಿತ್,** ೨೦೦೮ರಲ್ಲಿ ಡಾ. ವಿಶ್ವನಾಥ ಎ.ಎಸ್. ಅವರ **ಕರಾವಳಿ ಕರ್ನಾಟಕದ ಯಕ್ಷಗಾನ ಮುಖವರ್ಣಿಕೆ ಹಾಗೂ ವೇಷಭೂಷಣಗಳು,** ಡಾ. ರವೀಂದ್ರ ಎಸ್. ಕಮ್ಮಾರ ಅವರ **ಕಲಾವಿದ ವ್ಹಿ.ಬಿ. ಹಿರೇಗೌಡರ್- ಬದುಕು ಮತ್ತು ಕಲಾಕೃತಿಗಳು,** ಡಾ. ಪ್ರೇಮಾನಂದ ಟಿ. ಲಕ್ಕನ್ನನವರ್ ಅವರ **ಕರ್ನಾಟಕದ ದೃಶ್ಯಕಲಾ ಸಾಹಿತ್ಯ-ಒಂದು ವೈಚಾರಿಕ ಅಧ್ಯಯನ,** ಡಾ. ಜಿ. ಲಕ್ಷ್ಮೀಪತಿ ಅವರ **ದಕ್ಷಿಣ ಕರ್ನಾಟಕದ ಜನಪದ ಶಿಲ್ಪಕಲೆ,** ಡಾ. ಮಂಠಗಿ ಅವರ **ಧನಂಜಯ ಶಿಲ್ಪಿಯವರ ಜೀವನ ಮತ್ತು ಕಲೆ – ಒಂದು ಅಧ್ಯಯನ,** ಡಾ. ರೆಹಮಾನ್ ಪಟೇಲ್ ಅವರ **ಕರ್ನಾಟಕದ ಬಿದರಿ ಕಲೆ – ಒಂದು ಅಧ್ಯಯನ ವಿಶೇಷವಾಗಿ ಬೀದರ್ ಜಿಲ್ಲೆಯನ್ನು ಅನುಲಕ್ಷಿಸಿ,** ೨೦೧೦ರಲ್ಲಿ ಶ್ರೀಮತಿ ಸುನಿತಾ ಪಾಟೀಲ್ ಅವರ **ವಿಜಯ ಸಿಂಧೂರ ಅವರ ಕಲಾಕೃತಿಗಳ ಒಳನೋಟಗಳು,** ನಿಂಗಪ್ಪ ಎಂ. ಅಂಗಡಿಯವರ **ಗಾಜಿನ ಮೇಲಿನ ಚಿತ್ರಗಳು ಒಂದು ಅಧ್ಯಯನ,** ೨೦೧೦ರಲ್ಲಿ ಕಿಶೋರ್ ಎನ್. ದಾಟನಾಳ್ ಅವರ **ಕಲಾವಿದ ಶಂಕರ ಪಾಟೀಲರ ಜೀವನ ಮತ್ತು ಕಲಾಕೃತಿಗಳು ಒಂದು ಅಧ್ಯಯನ,** ೨೦೧೦ರಲ್ಲಿ ಕಾಮಾಕ್ಷಿ ಸಿ. ಸೊಪ್ಪಣ್ಣ ಅವರ **ಕರ್ನಾಟಕದ ಬಟ್ಟೆ ಮಾಧ್ಯಮದ ಚಿತ್ರಕಲೆ,** ೨೦೧೧ರಲ್ಲಿ ಶಂಕ್ರಪ್ಪ ಎಂ. ಕುಂದಗೋಳ ಅವರ **ಕರ್ನಾಟಕದ ಗಂಜೀಫಾ ಚಿತ್ರಕಲೆ** ಇವು ದೃಶ್ಯಕಲೆಗಳ ಕುರಿತು ಬಂದ ಪಿಹೆಚ್.ಡಿ. ಮಹಾಪ್ರಬಂಧಗಳು

ಡಿ.ಲಿಟ್ ಮಹಾಪ್ರಬಂಧಗಳು

೨೦೦೧ರಲ್ಲಿ ಡಾ. ದೇವದಾಸ್ ಕಳಸದ ಅವರ **ಕನ್ನಡ ವೃತ್ತಿ ರಂಗಭೂಮಿ ಹಾಗೂ ರಂಗವಿನ್ಯಾಸ,** ೨೦೦೫ರಲ್ಲಿ ಡಾ. ಆನಂದ ಪೂಜಾರ ಅವರ **ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ,** ೨೦೦೫ರಲ್ಲಿ ಡಾ. ಡಿ.ಎ. ಉಪಾಧ್ಯ ಅವರ **ದೃಶ್ಯಕಲೆಗಳ ತೌಲನಿಕ ಅಧ್ಯಯನ,** ೨೦೦೯ರಲ್ಲಿ ಡಾ. ಎಂ.ಎಸ್. ಮೂರ್ತಿ ಅವರ **ಮಕ್ಕಳ ಮನಸ್ಸಿನ ಚಿತ್ರಗಳು** ಮುಂತಾದ ಡಿ.ಲಿಟ್ ಮಹಾಪ್ರಬಂಧಗಳಿವೆ.

ಎಂ.ಫಿಲ್. ಪ್ರಬಂಧಗಳು

೨೦೦೨ರಲ್ಲಿ ಮಲ್ಲಿಕಾರ್ಜುನ ಬಾಗೋಡಿಯವರು ಎಂ.ಫಿಲ್. ಪದವಿಗಾಗಿ ಮಂಡಿಸಿದ ಚಿತ್ರಕಲಾವಿದ ಜೆ.ಎಸ್.ಖಂಡೇರಾವ – ಒಂದು ಅಧ್ಯಯನ, ಮತ್ತು ೨೦೦೩ರಲ್ಲಿ ಎ.ಎಸ್. ವಿಶ್ವನಾಥ ಅವರ ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣಗಳು, ೨೦೦೫ರಲ್ಲಿ ಶಂಕರಪ್ಪ ಎಂ. ಕುಂದಗೋಳ ಅವರ ಕಲಾವಿದ ಡಿ.ವಿ.ಹಾಲಭಾವಿಯವರ ಬದುಕು ಮತ್ತು ಕಲಾಕೃತಿಗಳು, ಸಿ.ಡಿ. ಜಟ್ಟೆಣ್ಣವರ ಅವರ ಕಲಾವಿದ ಡಾ. ಎಂ.ವಿ. ಮಿಣಜಗಿಯವರ ಜೀವನ ಮತ್ತು ಕಲಾಕೃತಿಗಳು, ೨೦೦೬ರಲ್ಲಿ ಸುಚಿತ್ರಾ ಜಿ. ಲಿಂಗದಳ್ಳಿ ಇವರ ವಿಜಯನಗರದ

ಭಿತ್ತಿಚಿತ್ರಕಲೆ ಒಂದು ಅಧ್ಯಯನ, ರವಿ ವಸರಾಮ ನಾಯಕ ಇವರ ಕಿನ್ನಾಳ ಕಲೆ ಒಂದು ಅಧ್ಯಯನ, ೨೦೦೭ರಲ್ಲಿ ಬಿ.ಎಮ್.ಪಾಟೀಲ ಅವರ ನಿಪ್ಪಾಣಿ ವಾಡೆಯ ಭಿತ್ತಿಚಿತ್ರಗಳು, ಶೈಲಾ ಬರಡೋಲ ಅವರ ಸಂತ ಕಲಾವಿದ ಶುಭರಾಯರ ಜೀವನ ಮತ್ತು ಕಲಾಕೃತಿಗಳು, ಉಮೇಶ ಎಸ್. ಅವರ ಕರ್ನಾಟಕ ಜೈನ ಚಿತ್ರಕಲೆ, ಶಶಿಕಾಂತ ಬಸರಿಕಟ್ಟಿ ಅವರ ಕಲಘಟಗಿ ಕಲೆ, ೨೦೦೮ರಲ್ಲಿ ಕೃಷ್ಣವೇಣಿಯವರ ಬಳ್ಳಾರಿ ಜಿಲ್ಲೆಯ ಪ್ರಾಗ್ಯೆತಿಹಾಸಿಕ ಚಿತ್ರಕಲೆ, ಯೋಗಿಶ್ ಹೆಚ್. ಅವರ ಚಿತ್ರದುರ್ಗ ಜಿಲ್ಲೆಯ ಚಿತ್ರಗಳು, ಮಹಾಕೋಟೇಶ್ವರಗೌಡ ಪಾಟೀಲ್ ಅವರ ಬೆಳಗಾವಿ ಜಿಲ್ಲೆಯ ಚಿತ್ರಕಲೆ, ಸುರೇಶ ಬಡಿಗೇರ್ ಅವರ ಕನ್ನಡ ವಿಶ್ವವಿದ್ಯಾಲಗಳ ಹಸ್ತಪ್ರತಿಗಳ ಚಿತ್ರಕಲೆ, ಸಂತೋಷ್‌ಕುಮಾರ್ ಕುಲಕರ್ಣಿ ಅವರ ದಾವಣಗೆರೆ ಜಿಲ್ಲೆಯ ಚಿತ್ರಕಲೆ, ಜಯರಾಜ ಚಿಕ್ಕ ಪಾಟೀಲ್ ಅವರ ಕರ್ನಾಟಕದ ಜಾಹಿರಾತುಗಳಲ್ಲಿ ಸಾಂಸ್ಕೃತಿಕ ನೆಲೆಗಳು, ಮಹೇಶ ಉಮತಾರ್ ಬಿ.ಪಿ. ಬಾಯಿರಿ ಕಲೆ ಮತ್ತು ಕಲಾಸಾಹಿತ್ಯ, ಗಿರಿಜಾ ಬಿರಾದಾರ್ ಅವರ ಬಿಜಾಪೂರ್ ಜಿಲ್ಲೆಯ ಚಿತ್ರಕಲೆ, ಬಸಯ್ಯ ಗವಿಮಠ ಅವರ ಬಾಗಲಕೋಟೆ ಜಿಲ್ಲೆಯ ಚಿತ್ರಕಲೆ, ಕೃಷ್ಣೇಗೌಡ ಹೆಚ್.ಎನ್. ಅವರ ಕರ್ನಾಟಕದಲ್ಲಿ ಟಿಬೇಟಿಯನ್ನರ ಚಿತ್ರಕಲೆ, ಮಹಾಂತೇಶ್ ಎಂ. ಫಲದಿನ್ನಿ ಅವರ ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು, ಕಾಂತರಾಜು ಅವರ ತುಮಕೂರು ಜಿಲ್ಲೆಯ ಚಿತ್ರಕಲೆ, ರಂಗಸ್ವಾಮಿ ಅವರ ಕಲಾವಿದ ರುಮಾಲೆ ಚೆನ್ನಬಸವಯ್ಯನವರ ಜೀವನ ಮತ್ತು ಕಲಾಕೃತಿಗಳು, ಶ್ಯಾಮ್ ಜಮಂದರ ಅವರ ಕಲಾವಿದ ಸಿ.ಎನ್. ಪಾಟೀಲರ ಜೀವನ ಮತ್ತು ಕಲಾಕೃತಿಗಳು, ದಿನೇಶ ಬಿ. ಅವರ ಚನ್ನಪಟ್ಟಣದ ಚಿತ್ತಾರ ಗೊಂಬೆ ಚಿತ್ರಕಲೆ, ಭಾನುಮತಿ ಕೆ.ಎಲ್. ಅವರ ಕಲಾವಿದ ವಾಚೇದ್ ಮಠ ಅವರ ಜೀವನ ಮತ್ತು ಕಲಾಕೃತಿಗಳು, ವಾದಿರಾಜ್ ಅವರ ಕಲಾವಿದ ಎಲ್. ಶಿವಲಿಂಗಪ್ಪನವರ ಜೀವನ ಮತ್ತು ಕಲಾಕೃತಿಗಳು, ಚಿಂತಾಮಣಿ ಅವರ ಬಹುರೂಪಿಗಳ ಮುಖವರ್ಣಿಕೆ ಮತ್ತು ವೇಷಭೂಷಣಗಳು. ಈ ಪ್ರಬಂಧಗಳು ಕರ್ನಾಟಕ ದೃಶ್ಯಕಲೆಯ ಕುರಿತಾಗಿ ಬಂದ ಸಂಶೋಧನಾ ಅಧ್ಯಯನಗಳಾಗಿವೆ. ಹೀಗೆ ಗುಲ್ಬರ್ಗಾ, ಬೆಂಗಳೂರು, ಕರ್ನಾಟಕ ವಿ.ವಿ. ಮತ್ತು ಕನ್ನಡ ವಿ.ವಿ.ಗಳಲ್ಲಿ ಪಿಹೆಚ್.ಡಿ. ಪದವಿಗಾಗಿ ೨೯ ಸಂಶೋಧನಾ ಪ್ರಬಂಧಗಳು ರಚನೆಯಾಗಿದ್ದು, ಈ ನಿಟ್ಟಿನಲ್ಲಿ ೧೫ಕ್ಕೂ ಹೆಚ್ಚು ಸಂಶೋಧಕರು ಅಧ್ಯಯನ ನಿರತರಾಗಿದ್ದಾರೆ.

ಇದಲ್ಲದೇ ವಿಶ್ವವಿದ್ಯಾಲಯಗಳ ಬಿ.ಎಫ್.ಎ. ಪದವಿ ಹಾಗೂ ಸ್ನಾತಕೋತ್ತರ ಹಂತದಲ್ಲಿ ಸುಮಾರು ೪೦೦ಕ್ಕೂ ಹೆಚ್ಚಿನ ಲಘುಶೋಧ ಪ್ರಬಂಧಗಳು ರಚನೆಗೊಂಡಿವೆ. ಪದವಿ ತರಗತಿಗಳಿಗೆ ಅಧ್ಯಯನದ ಭಾಗವಾಗಿ ಕಿರು ಸಂಶೋಧನಾ ಪ್ರಬಂಧಗಳು ರಚನೆಯಾಗಿದ್ದು, ಈ ಸಂಶೋಧನಾ ಪ್ರಕಾರವು ದೃಶ್ಯಕಲಾ ಕ್ಷೇತ್ರದಲ್ಲಿ ಅನಿವಾರ್ಯ ಅಧ್ಯಯನವಾಗಿ ಬೆಳೆಯುತ್ತಿದೆ. ಹೀಗೆ ಈ ಕ್ಷೇತ್ರದಲ್ಲಿ ಸಂಶೋಧನೆಗಳು ತೀವ್ರವಾಗಿ ಮುನ್ನಡೆಯುತ್ತಲಿದ್ದು, ಭವಿಷ್ಯತ್ತಿನಲ್ಲಿ ಕಲಾಕ್ಷೇತ್ರವು ಸಂಶೋಧನಾತ್ಮಕ ವಾಗಿಯೂ ಬಲಗೊಳ್ಳುವ ಆಶಯವನ್ನು ನಿರೀಕ್ಷಿಸಬಹುದು.

ಅಧ್ಯಯನದ ವ್ಯಾಪ್ತಿ

ಕಾಳೆಯವರು ಒಬ್ಬ ಬಹುಮುಖ ಪ್ರತಿಭೆಯನ್ನು ಹೊಂದಿರುವ ಕಲಾವಿದರು. ಕಾಳೆಯವರು ಒಬ್ಬ ಚಿತ್ರಕಲಾವಿದ, ನಾಟಕಕಾರ, ಶಿಲ್ಪ ಕಲಾವಿದ, ಕಲಾ ಸಾಹಿತಿ ಹೀಗೆ ಅಯಾ ಕ್ಷೇತ್ರದಲ್ಲಿ ಗಣನೀಯ ಸಾಧನೆಯನ್ನು ಮಾಡಿದ ಸಾಧಕರಿವರು. ಇಲ್ಲಿ ಪ್ರಸ್ತುತ ಅಧ್ಯಯನವು ಕಾಳೆಯವರ ಚಿತ್ರಕಲೆ ಸಾಧನೆ ಕುರಿತಾಗಿ ಕೇಂದ್ರೀಕೃತವಾಗಿದ್ದು ವಿಶೇಷವಾಗಿ ಅಧ್ಯಯನ ಮಾಡಲಾಗಿದೆ. ಅವರ ಇತರ ಕಲಾಪ್ರಕಾರಗಳನ್ನು ಸ್ಥೂಲವಾಗಿ ಹೇಳಲಾಗಿದೆ.

ಕಾಳೆಯವರು ತಮ್ಮ ಬದುಕಿನದ್ದಕ್ಕೂ ರಚಿಸಿದ ಕಲಾಕೃತಿಗಳು ಸಾವಿರಾರು. ಅವುಗಳು ವೈವಿಧ್ಯಮಯವಾಗಿದ್ದು ಈ ಕಲಾಕೃತಿಗಳು ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಸಂಗ್ರಹಗೊಂಡಿವೆ. ಕಾಳೆಯವರ ಅನೇಕ ಕಲಾಕೃತಿಗಳು ಮಾರಾಟವಾಗಿಯೋ, ಕಳೆದು ಹೋಗಿಯೋ ಅಥವಾ ಇನ್ನಿತರ ಕಾರಣಗಳಿಂದಾಗಿಯೊ ಅವರ ಎಲ್ಲಾ ಕಲಾಕೃತಿಗಳು ಲಭ್ಯವಾಗಿಲ್ಲ.

ಪ್ರಸ್ತುತ ಅಧ್ಯಯನದ ಅವಧಿಯಲ್ಲಿ ಲಭ್ಯವಾದ ಕಲಾಕೃತಿಗಳ ಆಳವಾದ ಅಧ್ಯಯನ ಮಾಡುವ ಪ್ರಯತ್ನವಾಗಿದೆ. ಎಪ್ಪತ್ತಾರು ವಯೋಮಾನದ ಕಾಳೆಯವರು ತಮ್ಮ ಬದುಕಿನುದ್ದಕ್ಕೂ ಅವಿರತವಾಗಿ ಬಿಡುವಿಲ್ಲದೆ ಕಲಾಕೃತಿಗಳನ್ನು ರಚಿಸುತ್ತಾ ಬಂದಿದ್ದಾರೆ. ಈಗಲೂ ಕೂಡಾ ಅವರು ಕಲಾಕೃತಿಗಳನ್ನು ರಚಿಸುವುದರಲ್ಲಿ ನಿರತವಾಗಿರುವುದು ಕಂಡುಬರುತ್ತದೆ. ಆದರೆ ನನ್ನ ಅಧ್ಯಯನಕ್ಕೆ ಅವಧಿಯ ಮಿತಿಯಿರುವುದರಿಂದ ೨೦೧೦ರವರೆಗಿನ ಕಾಳೆಯವರ ಕಲಾಕೃತಿಗಳನ್ನು ಅಧ್ಯಯನಕ್ಕೆ ಒಳಪಡಿಸಿ ಸೀಮಿತ ಅವಧಿಯಲ್ಲಿ ಸಿಕ್ಕ ಕಲಾಕೃತಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇದು ನನ್ನ ಅಧ್ಯಯನದ ವ್ಯಾಪ್ತಿಯಾಗಿದೆ.

ಅಧ್ಯಯನದ ಸ್ವರೂಪ

ಈ ಅಧ್ಯಯನವು ಒಟ್ಟು ಏಳು ಅಧ್ಯಾಯಗಳಾಗಿ ವಿಂಗಡಿಸಿಕೊಂಡು, ಅಧ್ಯಯನ ಮಾಡಲಾಗಿದೆ. ಅಯಾ ಅಧ್ಯಾಯನಕ್ಕೆ ಸಂಬಂಧಿಸಿದಂತೆ ವಿಷಯವನ್ನು ಕುರಿತಾದ ಸಂಕ್ಷಿಪ್ತ ಸ್ವರೂಪದ ಅಂಶಗಳನ್ನು ಇಲ್ಲಿ ಕೊಡಲಾಗಿದೆ. ಒಟ್ಟು ಅಧ್ಯಯನದ ಸ್ವರೂಪವನ್ನು ಕಟ್ಟಿಕೊಡುವ ಪ್ರಯತ್ನವಾಗಿದ್ದು, ಅಧ್ಯಾಯಗಳು ಈ ಕೆಳಗಿನಂತಿವೆ.

ಅಧ್ಯಾಯ ಒಂದು: ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ವಿಧಾನಗಳನ್ನು ಕುರಿತಾದ ವಿವರಣೆಯನ್ನು ಒಳಗೊಂಡಿದೆ.

ಅಧ್ಯಾಯ ಎರಡು: ವಿ.ಟಿ. ಕಾಳೆಯವರ ಸಾಂಸ್ಕೃತಿಕ ಪರಿಸರ, ಕಲಾ ಬದುಕು ಈ ಅಧ್ಯಾಯದಲ್ಲಿ ಕಾಳೆಯವರ ಬಾಲ್ಯದ ಬದುಕು, ಬೆಳೆದ ಪರಿಸರ, ಕಲಾವಿದನಾಗಿ ಬೆಳೆಯಲು ಪ್ರೇರಣೆ ನೀಡಿದ

ಪ್ರಸಂಗ, ಶಾಲಾವ್ಯಾಸಾಂಗ, ಕಲಾಶಿಕ್ಷಣ, ಕಲಾವಿದನಾಗಲು ಆಸಕ್ತಿ ಮೂಡಿದ ಪ್ರಸಂಗ, ಇದಕ್ಕೆ ಕಾರಣರಾದ ವ್ಯಕ್ತಿಗಳು, ಪ್ರೇರಣೆ ನೀಡಿದ ಕಲಾ ಗುರುಗಳು, ಮುಂದೆ ಗದುಗಿನಲ್ಲಿ ಕಲಾಶಿಕ್ಷಣ, ಕಲಾಗುರು ಟಿ.ಪಿ. ಅಕ್ಕಿಯವರೊಂದಿಗಿನ ಗುರುಶಿಷ್ಯರ ಸಂಬಂಧ ಮುಂದೆ ಪರೀಕ್ಷೆಗೆಂದು ಮುಂಬಯಿ ಜೆ.ಜೆ. ಸ್ಕೂಲ್ ಆಫ್ ಆರ್ಟ್‌ಗೆ ಹೋಗಿದ್ದು ಅಲ್ಲಿಯ ಕಲಾಗುರುಗಳು, ಕಲಿಸುವ, ಕಲಿಯುವ ಪದ್ಧತಿ, ಅಲ್ಲಿನ ಕಲಾ ಪರಿಸರ, ಸಹಪಾಠಿಗಳು, ಕಲಾವಿದನಾಗಿ ಬೆಳೆಯಲು ಈ ಶಾಲೆಯ ಪ್ರಭಾವ, ಪ್ರೇರಣೆ ಮುಂತಾದ ಕುರಿತು ಹೇಳಲಾಗಿದೆ. ಅಲ್ಲದೇ, ಕಾಳೆಯವರ ವೃತ್ತಿ ಜೀವನ ಮತ್ತು ನಂತರದ ನಿವೃತ್ತಿ ಜೀವನ, ನಿವೃತ್ತಿಯ ನಂತರದ ಕಲಾಬದುಕನ್ನು ಕುರಿತು ಅಧ್ಯಯನ ಮಾಡಲಾಗಿದೆ. ಮೊದಲಿಗೆ ಅವರ ವೃತ್ತಿಜೀವನವನ್ನು ಎರಡು ಹಂತಗಳಲ್ಲಿ ವಿಂಗಡಿಸಿ ಅಧ್ಯಯನ ಮಾಡಲಾಗಿದೆ. ಮೊದಲ ಹಂತ ಟಿ.ಪಿ. ಅಕ್ಕಿಯವರ ಕಲಾಶಾಲೆ ಗದುಗಿನ ವಿಜಯ ಕಲಾಮಂದಿರದಲ್ಲಿ ಅವರ ವೃತ್ತಿ ಜೀವನ ಪ್ರಾರಂಭಿಸಿದ್ದು, ನಂತರ ಬದುಕಿನಲ್ಲಿ ಬಂದ ಅನಿವಾರ್ಯತೆಯಿಂದಾಗಿ ಸಂಡೂರಿನಲ್ಲಿ ಕಲಾಶಿಕ್ಷಕ ವೃತ್ತಿ ಜೀವನ ಪ್ರಾರಂಭಿಸಿದ್ದು ಇನ್ನೊಂದು ಹಂತ. ಹೀಗೆ ಎರಡು ಹಂತಗಳಲ್ಲಿ ಅವರ ವೃತ್ತಿಜೀವನ ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ. ಅಲ್ಲದೆ ನಿವೃತ್ತಿಯ ನಂತರದ ದಿನಗಳಲ್ಲಿ ನಿಜವಾದ ಕಲಾ ಬದುಕನ್ನು ಕಂಡ ಕಲಾವಿದ ಕಾಳೆಯವರು ನಿವೃತ್ತಿ ನಂತರ ಕಲಾಕೃತಿ ರಚನೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡರು. ೭೬ ವರ್ಷದ ಕಾಳೆಯವರು ಪ್ರಸ್ತುತ ಈಗಲೂ ಕೂಡಾ ಸತತವಾಗಿ ಕಲಾಕೃತಿ ರಚಿಸುವಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅಲ್ಲದೆ ಕಲೆಗೆ ಮುಡುಪಾಗಿಟ್ಟ ಬದುಕು ಅವರದು. ಈ ಕುರಿತಾಗಿ ಇಲ್ಲಿ ವಿಶೇಷವಾಗಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಮೂರು: ವಿ.ಟಿ. ಕಾಳೆಯವರ ರೇಖಾಚಿತ್ರಗಳು ಈ ಅಧ್ಯಾಯದಲ್ಲಿ ಕಾಳೆಯವರು ರಚಿಸಿದ ರೇಖಾಚಿತ್ರಗಳ ಕುರಿತ ಅಧ್ಯಯನ ಇದಾಗಿದ್ದು, ಕಾಳೆಯವರು ತಮ್ಮ ಬದುಕಿನುದ್ದಕ್ಕೂ ಸಾವಿರಾರು ರೇಖಾಚಿತ್ರಗಳನ್ನು ರಚಿಸಿರುತ್ತಾರೆ. ಅಧ್ಯಯನ ಅವಧಿಯಲ್ಲಿ ಲಭ್ಯವಾದ ರೇಖಾಚಿತ್ರಗಳ ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ. ದಿನನಿತ್ಯದ ಅಭ್ಯಾಸಕ್ಕಾಗಿ ರಚಿಸಿದ ರೇಖಾಚಿತ್ರಗಳು ಮತ್ತು ವರ್ಣಕಲಾಕೃತಿಗಳು ನಿರ್ಮಾಣದ ಸಲುವಾಗಿ ಪೂರ್ವಭಾವಿಯಾಗಿ ಮಾಡಿಕೊಳ್ಳುವ ಆಲೇಖ್ಯಾಗಳನ್ನು ಅಲ್ಲದೇ ಪಠ್ಯಪುಸ್ತಕಗಳಿಗಾಗಿ ಅನೇಕ ರೇಖಾಚಿತ್ರಗಳನ್ನು ರಚಿಸಿದ್ದಾರಲ್ಲದೆ ಇವರು ವಿಶೇಷವಾಗಿ ತೊಗಲುಗೊಂಬೆಯಾಟದ ಕಲಾವಿದರಿಗೆ ಸಾಂಪ್ರದಾಯಿಕ ಶೈಲಿಯಲ್ಲಿ ನೂರಾರು ರೇಖಾಚಿತ್ರಗಳನ್ನು ರಚಿಸಿದ್ದಾರೆ. ಹೀಗೆ ಅವರ ರೇಖಾಚಿತ್ರಗಳನ್ನು ಕುರಿತು ವಿಶೇಷವಾದ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ನಾಲ್ಕು: ವಿ.ಟಿ. ಕಾಳೆಯವರ ವರ್ಣಚಿತ್ರಗಳು ಈ ಅಧ್ಯಾಯವು ವಿ.ಟಿ. ಕಾಳೆಯವರ ವರ್ಣಚಿತ್ರಗಳ ಕುರಿತಾಗಿದ್ದು, ಈ ಅಧ್ಯಯನವು ಮಹಾಪ್ರಬಂಧದ ಹೃದಯಭಾಗದಂತಿದ್ದು

ಮಹತ್ವದಾಗಿದೆ. ಕಾಳೆಯವರ ಕಲಾಕೃತಿಗಳು ವೈವಿಧ್ಯಮಯವಾಗಿದ್ದು, ವಿವಿಧ ವಿಷಯಗಳನ್ನು ಹೊಂದಿದೆ. ಅವುಗಳನ್ನು ಇಲ್ಲಿ ವ್ಯವಸ್ಥಿತವಾಗಿ ವಿಂಗಡಿಸಿ ಮಾಡಲಾದ ಅಧ್ಯಯನವು ಮಹತ್ವಪೂರ್ಣವಾಗಿದ್ದು, ಕಾಳೆಯವರ ಒಟ್ಟು ಕಲಾಕೃತಿಗಳ ರಚನಾ ಹಿನ್ನೆಲೆ, ಉದ್ದೇಶ, ಸಮಯ, ಸಂದರ್ಭ, ಬಳಸಿದಂತಹ ಮಾಧ್ಯಮ, ಕಲಾಕೃತಿಗಳ ನಿರೂಪಣೆ, ಮುಂತಾದವುಗಳನ್ನು ಕುರಿತು ಇಲ್ಲಿ ವಿಶ್ಲೇಷಣೆ ಮಾಡಲಾಗಿದ್ದು, ಈ ಅಧ್ಯಯನವು ಈ ಮಹಾಪ್ರಬಂಧದ ಪ್ರಮುಖ ಅಂಗವಾಗಿದೆ.

ಅಧ್ಯಾಯ ಐದು: ವಿ.ಟಿ. ಕಾಳೆಯವರ ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿ ಸಾಮಾನ್ಯವಾಗಿ ಎಲ್ಲ ಕಲಾವಿದರು ಇತರ ಕಲಾವಿದರಿಂದ ತಾವು ಬದುಕಿದ ಪರಿಸರದಿಂದ, ಬರುವ ಘಟನೆಗಳಿಂದ ಸುತ್ತಮುತ್ತಲಿನ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿರುತ್ತಾರೆ. ಅವರುಗಳು ಕಲಾಕೃತಿಗಳನ್ನು ರಚಿಸುವುದರಲ್ಲಿ ತಮ್ಮದೇ ಆದ ತಂತ್ರ ಶೈಲಿಯನ್ನು ಸಹ ಹೊಂದಿರುತ್ತಾರೆ. ಈ ಮಾತಿಗೆ ಕಾಳೆಯವರು ಕೂಡಾ ಹೊರತಾಗಿಲ್ಲ. ಇಲ್ಲಿ ಪ್ರಮುಖವಾಗಿ ಕಾಳೆಯವರ ಕಲಾಕೃತಿಗಳ ಮೇಲೆ ಪಾಶ್ಚಾತ್ಯ ಮತ್ತು ಭಾರತೀಯ ಕಲಾ ಪದ್ಧತಿಯ ಪ್ರಭಾವ, ಅವರ ಅಚ್ಚುಮೆಚ್ಚಿನ ವಾಷ್‌ತಂತ್ರದ ನಿರೂಪಣೆ, ಅವರ ಕಲಾಕೃತಿಗಳ ಮೇಲೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಪ್ರಭಾವ ಬೀರಿದ ವ್ಯಕ್ತಿಗಳ ಕುರಿತು ಇಲ್ಲಿ ಆಳವಾದ ಅಧ್ಯಯನವನ್ನು ಈ ಅಧ್ಯಾಯ ಒಳಗೊಂಡಿದೆ.

ಅಧ್ಯಾಯ ಆರು: ವಿ.ಟಿ. ಕಾಳೆಯವರ ಸಾಹಿತ್ಯ ಕೃತಿಗಳು ಮತ್ತು ಇತರ ಕಲಾ ಪ್ರಕಾರಗಳು ಕಾಳೆಯವರದು ಬಹುಮುಖ ವ್ಯಕ್ತಿತ್ವ. ನಾಡಿಗೆ ಅವರೊಬ್ಬ ಚಿತ್ರಕಲಾವಿದರೆಂದು ಮಾತ್ರ ಗುರುತಿಸಿಕೊಂಡಿರದೆ, ಅವರೊಬ್ಬ ಕಲಾ ಬರಹಗಾರರು, ನಾಟಕಕಾರರು, ಶಿಲ್ಪ ಕಲಾವಿದರು, ಪ್ರಸಾಧನ ಕಲಾವಿದರು ಎಂದು ಗುರುತಿಸಿಕೊಂಡಿದ್ದು, ಆಯಾ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆಯನ್ನು ಮಾಡಿರುತ್ತಾರೆ. ಅಲ್ಲದೇ ಕಲಾಕ್ಷೇತ್ರದಲ್ಲಿಯೇ ಉನ್ನತ ಅಧಿಕಾರವೆನ್ನುವಂತಹ ಅಕಾಡೆಮಿಯ ಅಧ್ಯಕ್ಷರಾಗಿ, ಸದಸ್ಯರಾಗಿ ಮತ್ತು ಇತರ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಮುಂಚೂಣಿಯಲ್ಲಿದ್ದು ಅನೇಕ ಸಾಮಾಜಿಕ ಕೆಲಸಕಾರ್ಯಗಳನ್ನು ಮಾಡಿರುತ್ತಾರೆ. ಅವರ ಇಡೀ ಚಿತ್ರಕಲಾ ಬದುಕು ಒಂದು ಭಾಗವಾದರೇ ಉಳಿದಂತೆ ಅವರ ಇತರ ಸಾಂಸ್ಕೃತಿಕ ಚಟುವಟಿಕೆಗಳದೇ ಇನ್ನೊಂದು ಭಾಗ. ಹೀಗೆ ಅವರ ಈ ಬಹುಮುಖ ಪ್ರತಿಭೆಯನ್ನು ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಏಳು: ಸಮಾರೋಪ ಇದು ಕೊನೆಯ ಅಧ್ಯಾಯವಾಗಿದ್ದು, ಪ್ರಸ್ತುತ ಆರು ಅಧ್ಯಾಯಗಳಿಂದ ಹೊರಬರುವ ಫಲಿತಗಳ ಕುರಿತಾದ ಸಮೀಕ್ಷೆಯನ್ನು ಈ ಅಧ್ಯಾಯ ಒಳಗೊಂಡಿರುತ್ತದೆ.

ಅಧ್ಯಯನ ವಿಧಾನ

ಯಾವುದೇ ಪ್ರಕಾರದ ಅಧ್ಯಯನದ ಹಿನ್ನೆಲೆಯಲ್ಲಿ ಸಂಶೋಧನೆಯ ಮಹಾಪ್ರಬಂಧ ಕಟ್ಟಿಕೊಡುವ ಪೂರ್ವದಲ್ಲಿ ಅಧ್ಯಯನವೊಂದಕ್ಕೆ ಅದರದ್ದೇ ಆದ ವಿಧಾನಗಳಿರುವುದುಂಟು ಮತ್ತು ಈ ವಿಧಾನ ಸಮರ್ಥವಾಗಿ ಪ್ರಬಂಧ ರಚಿಸುವಲ್ಲಿ ನೆರವಾಗುತ್ತದೆ. ಹೀಗಾಗಿ ಅಧ್ಯಯನ ವಿಧಾನ ಬಹು ಮುಖ್ಯವಾದ ಅಂಶವಾಗಿದೆ.

ಕಲಾವಿದ ವಿ.ಟಿ. ಕಾಳೆಯವರ ಅಧ್ಯಾಯನವನ್ನು ವ್ಯಕ್ತಿಗತ ಅಧ್ಯಯನದ ನೆಲೆಯಲ್ಲಿ ಮಾಡಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಎರಡು ರೀತಿಯ ಅಧ್ಯಯನ ವಿಧಾನವನ್ನು ಬಳಸಿಕೊಳ್ಳಲಾಗಿದೆ. ಅವು ೧. ಮೂಲ ಆಕರ ಸಾಮಗ್ರಿ ೨. ಆನುಷಂಗಿಕ ಆಕರ ಸಾಮಗ್ರಿ

೧. ಮೂಲ ಆಕರ ಸಾಮಗ್ರಿ : ಮೂಲ ಆಕರ ಸಾಮಗ್ರಿಗಳಲ್ಲಿ ಮುಖ್ಯವಾದದ್ದು ಕ್ಷೇತ್ರಕಾರ್ಯ, ಸ್ವತಃ ಕಲಾವಿದರ ಸಂದರ್ಶನ, ಅವರೊಂದಿಗಿನ ಚರ್ಚೆ, ಕಲಾಕೃತಿಗಳ ಛಾಯಾಚಿತ್ರಣ ಮಾಡುವುದು, ಅವರ ಸಮಕಾಲೀನ ವ್ಯಕ್ತಿಗಳ ಸಂದರ್ಶನಗಳು ಹೀಗೆ ವಿವಿಧ ರೂಪದಲ್ಲಿ ಅಧ್ಯಯನ ಮಾಡಲಾಗಿದೆ.

ಸಂದರ್ಶನ : ಕಾಳೆಯವರ ಬಾಲ್ಯ ಜೀವನ, ಪ್ರಾಥಮಿಕ ಶಿಕ್ಷಣ, ಕಲೆಯ ಕಡೆಗೆ ಕಾಳೆಯವರ ಮನಸ್ಸು ಒಲಿದ ಸನ್ನಿವೇಶ, ಶಾಲಾ ಪರಿಸರ, ಕಲೆಗೆ ಪ್ರೇರಣೆ ನೀಡಿದ ಗುರುಗಳು, ವ್ಯಕ್ತಿಗಳು, ಹುಟ್ಟೂರಾದ ಹುನಗುಂದ ಊರಿನ ಪರಿಸರ ಹಾಗೂ ಕಾಳೆಯವರ ಕೌಟುಂಬಿಕ ಹಿನ್ನೆಲೆ, ನಂತರ ಪ್ರೌಢಶಾಲಾ ವ್ಯಾಸಂಗ, ಕಲಾಶಿಕ್ಷಣ ಮತ್ತು ಆ ಸಂದರ್ಭದಲ್ಲಿ ಕಲಾ ರಚನೆಗಳ ಹಿನ್ನೆಲೆಯ ಅನುಭವಗಳನ್ನು ಇಲ್ಲಿ ದಾಖಲಿಸಲಾಗಿದೆ. ಕಾಳೆಯವರ ಆಪ್ತರು, ಗೆಳೆಯರು, ಸಹಪಾಠಿಗಳು, ಶಿಷ್ಯ ಬಳಗ, ಅವರ ಹತ್ತಿರ ಸಂಬಂಧಿಕರಿಂದ ಪ್ರಶ್ನಾವಳಿಗಳ ಮೂಲಕ ಕಾಳೆಯವರ ಕುರಿತು ಅಭಿಪ್ರಾಯ ಸಂಗ್ರಹಿಸಲಾಗಿದೆ. ಇದಕ್ಕೂ ಮುಖ್ಯವಾಗಿ ಕಾಳೆಯವರ ಕಲಾಕೃತಿಗಳ ಅಭಿವ್ಯಕ್ತಿಯ ಕುರಿತು ಅವರ ಅನಿಸಿಕೆಗಳನ್ನು ರಚನೆಯ ಹಿನ್ನೆಲೆ, ಪ್ರೇರಣೆ, ಪ್ರಭಾವಗಳನ್ನು ಸ್ವತಃ ಕಲಾವಿದ ವಿ.ಟಿ. ಕಾಳೆಯವರನ್ನು ಸಂದರ್ಶನ ಮಾಡಿ ಈ ಮೂಲಕ ಮಾಹಿತಿ ಸಂಗ್ರಹಿಸಿ ಇಲ್ಲಿ ಬಳಸಿಕೊಳ್ಳಲಾಗಿದೆ.

ಛಾಯಾಚಿತ್ರಣ : ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮತ್ತು ಇತರೆ ಮೂಲಗಳಿಂದ ಸಂಗ್ರಹಿಸಲಾದ ಕಲಾಕೃತಿಗಳ ಛಾಯಾಚಿತ್ರಣ ಮಾಡಿಕೊಂಡು ಸಂಗ್ರಹಿಸಿ ಅಧ್ಯಯನ ಮಾಡುವುದು ಇಲ್ಲಿ ಮುಖ್ಯವಾಗುತ್ತದೆ. ಕಾಳೆಯವರ ನೂರಾರು ಕಲಾಕೃತಿಗಳು ನಾಡಿನ ವಿವಿಧ ಕಡೆಗಳಲ್ಲಿ ಸಂಗ್ರಹಿತಗೊಂಡಿವೆ. ಅವು ಅನೇಕ ಮಠ, ಮನೆಗಳಲ್ಲಿ, ಸಂಗ್ರಹಾಲಯಗಳಲ್ಲಿ, ದೇವಸ್ಥಾನಗಳಲ್ಲಿ, ಅನೇಕ ಶಾಲಾ ಕಾಲೇಜು ಸಂಸ್ಥೆಗಳಲ್ಲಿ ಮತ್ತು ಕರ್ನಾಟಕ ಲಲಿತಕಲಾ ಅಕಾಡೆಮಿಯಲ್ಲಿ ಕಂಡುಬಂದಿವೆ.

ಅಲ್ಲದೇ ಸ್ವತಃ ಕಾಳೆಯವರ ಸ್ವಗೃಹದಲ್ಲಿ ಅನೇಕ ಕಲಾಕೃತಿಗಳು ಸಂಗ್ರಹಿತಗೊಂಡಿವೆ. ಹೀಗೆ ಕಾಳೆಯವರ ಕಲಾಕೃತಿಗಳನ್ನು ಅವುಗಳು ಇರುವಲ್ಲಿಗೆ ಹೋಗಿ ಛಾಯಾಚಿತ್ರಗಳನ್ನು ಸಂಗ್ರಹ ಮಾಡಿಕೊಂಡು ಮಾಧ್ಯಮವಾರು, ವಿಷಯವಾರುಗಳನ್ನಾಗಿ ವಿಂಗಡಿಸಿ ಇಲ್ಲಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

೨. ಆನುಷಂಗಿಕ ಆಕರ ಸಾಮಗ್ರಿಗಳು : ಪ್ರಕಟಿತ ಸಾಹಿತ್ಯ ಕೃತಿಗಳು, ಸಂಶೋಧನಾ ಮಹಾಪ್ರಬಂಧಗಳು, ನಿಘಂಟುಗಳು, ವಿಶ್ವಕೋಶಗಳು, ಪತ್ರಿಕೆಗಳು, ಕಲಾವಿದನ ಕಲಾಕೃತಿಗಳ ಕುರಿತು ಬಂದ ಪತ್ರಿಕಾ ವರದಿಗಳು, ಪ್ರಕಟಿತ ಪುಸ್ತಕಗಳು, ಅಭಿನಂದನಾ ಗ್ರಂಥಗಳು, ಸಂಶೋಧನಾ ಲೇಖನಗಳು ಇತ್ಯಾದಿ ರೀತಿಯ ಅನುಷಂಗಿಕ ಆಕರ ಸಾಮಗ್ರಿಗಳನ್ನು ಬಳಸಿಕೊಂಡು ಪ್ರಸ್ತುತ ಈ ಮಹಾಪ್ರಬಂಧವನ್ನು ಕಟ್ಟಿಕೊಡಲಾಗಿದೆ.

ಅಧ್ಯಾಯ ೨

ವಿ.ಟಿ. ಕಾಳೆಯವರ ಸಾಂಸ್ಕೃತಿಕ ಪರಿಸರ, ಕಲಾಬದುಕು

ಅಧ್ಯಾಯ ಎರಡು

ವಿ.ಟಿ. ಕಾಳೆಯವರ ಸಾಂಸ್ಕೃತಿಕ ಪರಿಸರ, ಕಲಾಬದುಕು

ಪ್ರತಿಯೊಬ್ಬ ವ್ಯಕ್ತಿಯ ಮೇಲೆ ಬಾಲ್ಯ, ಬಾಲ್ಯದ ಜೀವನ ಆಟ, ಪಾಠ, ಭೌಗೋಳಿಕ, ಸಾಂಸ್ಕೃತಿಕ ಪರಿಸರ ಗಾಢವಾದ ಪರಿಣಾಮವನ್ನು ಬೀರುತ್ತದೆ. ಒಬ್ಬ ವ್ಯಕ್ತಿ ಬಾಲ್ಯದಲ್ಲಿ ಯಾವುದಾದರೂ ಒಂದು ವಿಷಯದ ಕುರಿತು ಪ್ರೇರಿತಗೊಂಡಿದ್ದರೆ, ಮುಂದೆ ಬೆಳೆದು ದೊಡ್ಡವ ರಾದ ಮೇಲೆ ಆ ವಿಷಯದ ಕ್ಷೇತ್ರದಲ್ಲಿಯೇ ಮುಂದುವರೆಯಲು ಇಚ್ಛಿಸುವುದು ಸಹಜ. ಹೀಗೆ ಬಾಲ್ಯವೇ ವ್ಯಕ್ತಿಯೊಬ್ಬನಿಗೆ ಸ್ಫೂರ್ತಿದಾಯಕವಾಗಿರುತ್ತದೆ. ಹಾಗಾಗಿಯೇ ಬೆಳೆಯುವ ಸಿರಿ ಮೊಳಕೆಯಲ್ಲಿ ನೋಡು ಎಂಬ ಮಾತುಂಟು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಅನೇಕರು ತಮ್ಮ ಬಾಲ್ಯದಲ್ಲಿಯೇ ಆ ಸಾಧನೆಯ ಲಕ್ಷಣಗಳನ್ನು ತೋರಿದವರಾಗಿದ್ದಾರೆ. ಪ್ರಸ್ತುತ ಕಲಾವಿದರೊಬ್ಬರ ಜೀವನ ಮತ್ತು ಕಲಾಬದುಕಿನ ಕುರಿತಾದ ಅಧ್ಯಯನ ಇದಾಗಿರುವುದ ರಿಂದ ಕಾಳೆಯವರ ಬಾಲ್ಯ, ಅಲ್ಲಿನ ಪರಿಸರ, ಸಾಂಸ್ಕೃತಿಕ ಪರಿಸರ ಅವರ ಮನಸ್ಸು ಕಲೆಯ ಕಡೆಗೆ ಹೊರಳಿದ ಸಂದರ್ಭ, ಕಲಾ ಪರಿಸರ ಮುಂತಾದ ಅಂಶಗಳು ಕುರಿತಾದ ಅಧ್ಯಯನ ಮಹತ್ವದಾಗಿದೆ. ಹೀಗೆ ಕಾಳೆಯವರು ಹುನಗುಂದ ತಾಲೂಕಿನ ಕೊಣ್ಣೂರು ಎಂಬ ಗ್ರಾಮದಲ್ಲಿ ಹುಟ್ಟಿದರು. ನಂತರ ಹುನಗುಂದ ಮತ್ತು ಗದಗಿನಲ್ಲಿ ತಮ್ಮ ಬಾಲ್ಯವನ್ನು ಕಳೆದು, ಗದಗಿನಲ್ಲಿ ತಮ್ಮ ಕಲಾಶಿಕ್ಷಣವನ್ನು ಮತ್ತು ವೃತ್ತಿ ಜೀವನವನ್ನು ಕಳೆದು, ಮುಂದೆ ಸಂಡೂರಿಗೆ ಬಂದು ಸುಮಾರು ಮೂವತ್ತೈದು ವರ್ಷಗಳ ಕಾಲ ಇಲ್ಲಿಯೇ ಕಲಾಶಿಕ್ಷಕರಾಗಿ ಸೇವೆ ಸಲ್ಲಿಸಿ ಇಲ್ಲಿಯೇ ನಿವೃತ್ತಿ ಜೀವನವನ್ನು ಅನುಭವಿಸುತ್ತಿರುವರು.

ಕರ್ನಾಟಕದ ಕಾಶ್ಮೀರ ಎಂದು ಕರೆಯಲ್ಪಡುವ ಸಂಡೂರು ಪ್ರದೇಶ ಕಾಳೆಯವರಿಗೆ ನೆಮ್ಮದಿಯ ತಾಣವಾಗಿ ಬದುಕಿನ ನಾನಾ ವಿಧದಲ್ಲಿ ನೆರವಾಗಿದೆ. ಸುಮಾರು ನಲವತ್ತು ವರ್ಷಗಳ ಸುದೀರ್ಘವಾಗಿ ಇಲ್ಲಿ ನೆಲೆಸಿರುವ ಕಾಳೆಯವರು ಇಲ್ಲಿ ಬದುಕಿನ ವಿವಿಧ ಕಷ್ಟ-ಸುಖಗಳನ್ನು ಉಂಡವರು ಮತ್ತು ಇಲ್ಲಿ ಪೂರ್ಣಪ್ರಮಾಣದ ಕಲಾವಿದರಾಗಿ ಹೊರ ಹೊಮ್ಮಿದವರು. ಸಂಡೂರಿ ನಲ್ಲಿಯೆ ಇದ್ದುಕೊಂಡು ರಾಜ್ಯ, ರಾಷ್ಟ್ರದಲ್ಲಿ ನಡೆಯುವ ಕಲಾ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಪಾಲ್ಗೊಂಡಿದ್ದಾರೆ. ಅಲ್ಲದೇ ರಾಜ್ಯದ ಕಲಾ ಬೆಳವಣಿಗೆಯಲ್ಲಿ ತಮ್ಮದೇ ಆದ ಕಾಣಿಕೆಯನ್ನು ನೀಡುತ್ತಾ ಬಂದಿದ್ದಾರೆ. ಸಂಡೂರಿನಲ್ಲಿ ನಡೆಯುವ ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಇವರ ಭಾಗವಹಿಸುವಿಕೆ ಇದ್ದೇ ಇರುತ್ತದೆ.

ಒಂದು ದೇಶದ ಸಂಸ್ಕೃತಿಯನ್ನು ಆ ದೇಶದ ಕಲೆ, ಸಾಹಿತ್ಯಗಳ ಪ್ರೌಢಿಮೆಯಿಂದ ಅಳೆಯ ಲಾಗುತ್ತದೆ. ವಿಶ್ವದ ಕೆಲವೇ ನಾಗರಿಕತೆಯ ತೊಟ್ಟಿಲುಗಳಲ್ಲಿ ಭಾರತ ದೇಶವೂ ಒಂದು ಭಾರತ ಅಂತರ್ಗತ ಕರ್ನಾಟಕ ಪ್ರದೇಶವೂ ಅಂಥ ಪ್ರಾಚೀನ ಸಂಸ್ಕೃತಿಯನ್ನು ಮೈಗೂಡಿಸಿಕೊಂಡ ಒಂದು ಪ್ರದೇಶ. ಕರ್ನಾಟಕಾಂತರ್ಗತ ಬಳ್ಳಾರಿ ಜಿಲ್ಲೆಯ ಸಂಸ್ಕೃತಿಗೂ ಮತ್ತು ಬಳ್ಳಾರಿ ಜಿಲ್ಲೆಯ ಒಂದು ತಾಲೂಕಿನ ಸ್ಥಳವಾದ ಸಂಡೂರು ಸಹ ಇದಕ್ಕೆ ಹೊರತಾಗಿಲ್ಲ ಎಂದು ಹೇಳಲು ಸಾಕಷ್ಟು ಐತಿಹಾಸಿಕ, ಸಾಂಸ್ಕೃತಿಕ, ಸಾಹಿತ್ಯಿಕ ನಿದರ್ಶನಗಳು ನಮ್ಮ ಮುಂದಿರುತ್ತವೆ. ಸದಾ ಹಸಿರಿನಿಂದ ಕಂಗೊಳಿಸುವ ಈಗ ಕಬ್ಬಿಣ, ಮ್ಯಾಂಗನೀಸ್ ಗಣಿಗಾರಿಕೆಯಿಂದಾಗಿ ಬೆಟ್ಟಗಳು ಬೋಳಾಗ ತೊಡಗಿವೆ. ಬೆಟ್ಟ, ಗುಡ್ಡಗಳಿಂದ ಸುತ್ತುವರಿದ ನಿಸರ್ಗ ಸೌಂದರ್ಯಭರಿತ ಸಂಡೂರು ಸುಂದರ ತಾಣವೆಂದು ಪ್ರಖ್ಯಾತವಾಗಿದೆ. ಸುಂದರಪುರದ ಮತ್ತೊಂದು ಹೆಸರೇ ಸಂಡೂರು.[೧]

ಗಗನಚುಂಬಿ ಬೆಟ್ಟಗಳಿಂದಾಗಿ ಸಂಡೂರು ಸಂದುಗೊಂದಿನಲ್ಲಿ ನೆಲೆಸಿರುವ ಕಾರಣವಾಗಿ ಸಂದೂರನ್ನು ಸಂಡೂರು ಎಂದು ಕರೆಯಲಾಗುತ್ತದೆ. ಸಂಡೂರು ಒಂದು ಕಣಿವೆ ಪ್ರದೇಶ. ೧೯೩೪ರಲ್ಲಿ ರಾಷ್ಟ್ರಪಿತ ಮಹಾತ್ಮಗಾಂಧೀಜಿ ಸಂಡೂರಿಗೆ ಭೇಟ್ಟಿ ಕೊಟ್ಟಾಗ ಸಂಡೂರಿನ ನಿಸರ್ಗ ಸೌಂದರ್ಯವನ್ನು ಕಂಡು ಸಂಡೂರು ಬಳ್ಳಾರಿ ಜಿಲ್ಲೆಯ 'ಓಯಾಸಿಸ್' ಎಂದು ಉದ್ಗಾರ ತೆಗೆದಿದ್ದರು. ಅಲ್ಲದೇ "ಸೀ ಸಂಡೂರ ಇನ್ ಸೆಪ್ಟೆಂಬರ್" ಎಂಬ ಉದ್ಗಾರವೂ ಹೊರಬಿತ್ತು.[೨]

ವಿಶ್ವವಿಖ್ಯಾತ ಖನಿಜ ಸಂಪತ್ತನ್ನು ತನ್ನ ಬೆಟ್ಟಗಳ ಗರ್ಭದಲ್ಲಿ ಹುದುಗಿಸಿಟ್ಟುಕೊಂಡ ಸಂಡೂರಿನ ಲೋಹಗಿರಿ ಪರಿಸರದಲ್ಲಿ ಶ್ರೀ ಕಾರ್ತಿಕೇಯ ದೇವಾಲಯ ಸಮುಚ್ಚಯವಲ್ಲದೇ ಇನ್ನೂ ಅನೇಕ ತೀರ್ಥಕ್ಷೇತ್ರಗಳಿದ್ದು ಇದೆಲ್ಲವನ್ನು ಗಮನಿಸಿದಾಗ ಸಂಡೂರಿನ ಧಾರ್ಮಿಕ

---

೧. ವಿ.ಟಿ. ಕಾಳೆ, ಸಂಡೂರಿನ ಸಾಂಸ್ಕೃತಿಕ ವಿಶ್ವರೂಪ (ಅಪ್ರಕಟಿತ ಲೇಖನ), ಪು.೧

೨. ಅದೇ ಪು.೨

ಹಾಗೂ ಸಾಂಸ್ಕೃತಿಕ ಪರಂಪರೆಯ ಹಿರಿಮೆ-ಗರಿಮೆಗಳು ಕಣ್ಣೆದುರು ನಿಲ್ಲುತ್ತವೆ.[೩] ಬಹುಕಾಲದಿಂದಲೂ ಕೃಷಿ ಪ್ರಧಾನವಾದ ಸಂಡೂರಿನ ನಾಗರಿಕರು ಕಲಾಭಿಮಾನಿಗಳು, ಸಂಡೂರಿನ ಜನಪದರು ವೀರಗಾಸೆ, ಡೊಳ್ಳು ಕುಣಿತ, ನಂದಿ ಕೋಲುಕುಣಿತ, ಮೊದಲಾದ ಪಾರಂಪರಿಕ ಕಲಾಪ್ರಕಾರಗಳನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದಾರೆ. ಸಂಡೂರಿನಲ್ಲಿ ಭಜನಾ ಮೇಳಗಳಿವೆ. ಜನಪದ ಹಾಡುಗಾರರಿದ್ದಾರೆ, ಸಂಗೀತ ಕಲಾವಿದರಿದ್ದಾರೆ, ನಾಟಕ ಕಲಾವಿದರಿದ್ದಾರೆ, ಸಾಹಿತಿಗಳಿದ್ದಾರೆ, ಕವಿಗಳಿದ್ದಾರೆ, ಈ ಎಲ್ಲಾ ಸಂಪ್ರದಾಯಗಳಿಂದ ಸಂಡೂರು ಶ್ರೀಮಂತವಾಗಿದೆ.[೪]

ಸಂಡೂರಿನ ಜನನಾಯಕ, ಮುತ್ಸದಿಗಳೂ ವಿಶ್ವವಿಖ್ಯಾತ ಛಾಯಾಚಿತ್ರಕಲಾವಿದರೂ ಆದ ಶ್ರೀ ಎಂ.ವೈ. ಘೋರ್ಪಡೆಯವರು ಸಂಡೂರಿಗೆ ಮಹೋನ್ನತ ಕಾಣಿಕೆಗಳನ್ನು ನೀಡಿದ್ದಾರೆ. ವಸತಿ ಶಾಲೆ, ಮೇಧಾವಿಗಳ, ಕುಶಲ ಕರ್ಮಿಗಳ, ಕಲಾವಿದರ, ಸಾಹಿತಿಗಳ, ಸಾಮಾಜಿಕ ಸೇವಾ ಕರ್ತರ, ಧರ್ಮಭೀರುಗಳ, ರಾಜಕೀಯ ಮುತ್ಸದಿಗಳಿಂದ ಇಲ್ಲಿ ಸಾಂಸ್ಕೃತಿಕ ಪರಿಸರ ಶ್ರೀಮಂತವಾಗಿದೆ. ಇಂತಹ ನೆಲೆಯಲ್ಲಿ ಕಲಾವಿದನ ಮನಸ್ಸು ಅರಳುವುದು ಸಹಜ. ಹೀಗೆ ಕಾಳೆಯವರು ಹೀಗೆ ಸಂಡೂರಿನ ಪರಿಸರದಿಂದ ಪ್ರಭಾವಿತಗೊಂಡಿದ್ದಾರೆ. ಅಲ್ಲದೆ, ಇಲ್ಲಿನ ಅನೇಕ ದೇವಾಲಯಗಳನ್ನು ಹಾಗೂ ನಿಸರ್ಗ ರಮ್ಯತಾಣಗಳನ್ನು ತಮ್ಮ ಕಲಾಕೃತಿಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಮತ್ತು ಇವತ್ತಿಗೂ ಅವರು ಸಂಡೂರಿನ ಒಡನಾಟದಲ್ಲಿದ್ದು ಕಲಾಕೃತಿಗಳನ್ನು ರಚಿಸುವಲ್ಲಿ ನಿರತರಾಗಿದ್ದಾರೆ.

ಕಾಳೆಯವರ ಜನನ ಹಾಗೂ ಬಾಲ್ಯ

ಪ್ರಸ್ತುತ ಕಾಳೆಯವರಿಗೆ ೭೬ ವರ್ಷ. ನಾಡಿನ ಹಿರಿಯ ಕಲಾವಿದರ ಸಾಲಿನಲ್ಲಿ ಮುಂಚೂಣಿಯಲ್ಲಿರುವರು. ಇವರು ಹುಟ್ಟಿದ್ದು ದಿನಾಂಕ ೧೩.೨.೧೯೩೪ ಹುನಗುಂದ ತಾಲೂಕಿನ ಕೊಣ್ಣೂರು ಎಂಬ ಗ್ರಾಮದಲ್ಲಿ; ಅವರ ತಾಯಿಯ ತವರು ಮನೆಯಲ್ಲಿ. ಕಾಳೆಯವರ ತಂದೆಯ ಹೆಸರು ತುಳಜಪ್ಪಾ, ತಾಯಿ ಹೆಸರು ಭರಮವ್ವ. ಈ ದಂಪತಿಗಳಿಗೆ ಒಟ್ಟು ಹನ್ನೆರಡು ಜನ ಮಕ್ಕಳು, ಅದರಲ್ಲಿ ಹತ್ತು ಜನ ಗಂಡುಮಕ್ಕಳು, ಇಬ್ಬರು ಹೆಣ್ಣುಮಕ್ಕಳು. ಈ ದಂಪತಿಗಳಿಗೆ ವಿ.ಟಿ.ಕಾಳೆಯವರು ಎಂಟನೆಯ ಮಗ. ವೆಂಕಟೇಶ ತುಳಜಪ್ಪ ಕಾಳೆ ಇವರ ಪೂರ್ಣ ಹೆಸರು. ಕಲಾಕ್ಷೇತ್ರದಲ್ಲಿ ವಿ.ಟಿ.ಕಾಳೆ ಎಂದೇ ಪ್ರಸಿದ್ಧರು. ಇವರ ಸ್ವಂತ ಊರು ಈಗಿನ ಬಾಗಲಕೋಟೆ ಜಿಲ್ಲೆಯ ಹುನಗುಂದ. ಹುನಗುಂದ ತಾಲೂಕು ಸ್ಥಳವೂ ಹೌದು. ಆಗಿನ ಬಿಜಾಪುರ ಜಿಲ್ಲೆಯು ೧೯೯೭ರಲ್ಲಿ ವಿಭಜನೆಯಾಯಿತು. ವಿಜಾಪುರ ಹಾಗೂ ಬಾಗಲಕೋಟೆ ಪ್ರತ್ಯೇಕ ಜಿಲ್ಲೆಗಳಾದವು. ಕರ್ನಾಟಕ

---

೩. ವಿ.ಟಿ. ಕಾಳೆ, ಸಂಡೂರಿನ ಸಾಂಸ್ಕೃತಿಕ ವಿಶ್ವರೂಪ (ಅಪ್ರಕಟಿತ ಲೇಖನ), ಪು.೩೨

೪. ಅದೇ ಪು.೩೨





ವಿ.ಟಿ. ಕಾಳೆಯವರು ಜನಿಸಿದ ಕೊಣ್ಣೂರಿನ ಮನೆ



ಕಾಳೆಯವರು ಓದಿದ ಹುನಗುಂದದ ಸರ್ಕಾರಿ ಪ್ರಾಥಮಿಕ ಶಾಲೆ

ರಾಜ್ಯದ ಉತ್ತರ ಭಾಗದ ಮಧ್ಯದಲ್ಲಿರುವ ವಿಜಾಪುರ ಜಿಲ್ಲೆಯು ಒಟ್ಟು ೧೭,೦೬೯ ಚದರ ಕೀ.ಮೀಟರಗಳ ವಿಸ್ತೀರ್ಣವನ್ನು ಹೊಂದಿದೆ. ಇದು ಭಾರತದ ದಕ್ಷಿಣ ಪ್ರಸ್ಥಭೂಮಿಯಲ್ಲಿರುವ ಒಣ ಪ್ರದೇಶವಾಗಿದ್ದು, ದಕ್ಷಿಣ ಕರಾವಳಿಯಿಂದ ಸುಮಾರು ೨೦೦ ಕೀ.ಮೀಟರುಗಳ ದೂರ ದಲ್ಲಿದೆ. ವಿಜಾಪುರ ಜಿಲ್ಲೆಯ ಉತ್ತರ ಮತ್ತು ವಾಯುವ್ಯ ದಿಕ್ಕುಗಳಲ್ಲಿ ಮಹಾರಾಷ್ಟ್ರ ರಾಜ್ಯದ ಸೊಲ್ಲಾಪುರ ಮತ್ತು ಸಾಂಗ್ಲಿ ಜಿಲ್ಲೆಯ ಗಡಿ ಪ್ರದೇಶವಿದೆ. ಪೂರ್ವದಲ್ಲಿ ಗುಲಬರ್ಗಾ ಜಿಲ್ಲೆ, ಆಗ್ನೇಯದಲ್ಲಿ ಮತ್ತು ದಕ್ಷಿಣದಲ್ಲಿ ರಾಯಚೂರು ಜಿಲ್ಲೆ ಮತ್ತು ಪಶ್ಚಿಮದಲ್ಲಿ ಬೆಳಗಾವಿ ಜಿಲ್ಲೆಯ ಗಡಿ ಪ್ರದೇಶವನ್ನು ಹೊಂದಿದೆ. ಭೌಗೋಳಿಕವಾಗಿ ಒಣಹವೆಯನ್ನು ಹೊಂದಿರುವ ಈ ಜಿಲ್ಲೆಯು ಬಯಲು ಸೀಮೆಯ ನಾಡಾಗಿದೆ. ಭೀಮಾ, ಕೃಷ್ಣ, ಡೋಣಿ, ಮಲಪ್ರಭಾ, ಘಟಪ್ರಭಾ ನದಿಗಳು ಈ ಜಿಲ್ಲೆಯಲ್ಲಿ ಹರಿಯುತ್ತಿದ್ದು, ಇದು ಪಂಚನದಿಗಳ ನಾಡೆಂದು ಜನಪ್ರಿಯವಾಗಿದೆ. ಈ ಕಾರಣದಿಂದ ವಿಜಾಪುರ ಜಿಲ್ಲೆಯನ್ನು 'ಕರ್ನಾಟಕದ ಪಂಜಾಬ್' ಎಂದು ಕರೆಯುತ್ತಾರೆ. ಒಣಹವೆ ಮತ್ತು ಹಿತಕರ ಹವಾಗುಣದಿಂದಾಗಿ ಶ್ರೇಷ್ಠ ಮಟ್ಟದ ಬಿಳಜೋಳ ಹಾಗೂ ಗೋದಿಯನ್ನು ಬೆಳೆಯಲಾಗುತ್ತಿದೆ. 'ಡೋಣಿ ಬೆಳೆದರೆ; ಓಣಿಯಲ್ಲಾ ಕಾಳು' ಎಂಬ ನಾಣ್ನುಡಿ ಇಲ್ಲಿಯ ಪ್ರಾದೇಶಿಕ ವೈಶಿಷ್ಟ್ಯತೆಗೆ ಸಾಕ್ಷಿಯಾಗಿದೆ. ಜಿಲ್ಲೆಯಲ್ಲಿ ಸರಾಸರಿ ೫೦೦ ಮಿಲಿಮೀಟರ್ ಮಳೆಯಾಗುತ್ತಿದ್ದರೂ ಮಳೆಯ ಅನಿಶ್ಚಿತತೆಯಿಂದಾಗಿ ಸತತ ಬರಗಾಲದ ಬವಣೆ ಗೊಳಗಾಗಿ ಬರಗಾಲದ ಜಿಲ್ಲೆಯೆಂದು ಕರೆಸಿಕೊಳ್ಳುತ್ತಿರುವುದು ನಿಸರ್ಗದ ವೈಪರೀತ್ಯ ಗಳಲ್ಲೊಂದಾಗಿದೆ".[೫]

ಕಾಳೆಯವರ ಹುಟ್ಟೂರು ಆದ ಹುನಗುಂದವು ಭೌಗೋಳಿಕವಾಗಿ ಬಯಲು ಪ್ರದೇಶವನ್ನು ಹೊಂದಿದೆ. ಹುನಗುಂದದಲ್ಲಿ ಕೃಷ್ಣಾನದಿಯು ಹರಿಯುತ್ತದೆ. ಇದು ರಾಜ್ಯದ ಪ್ರಮುಖ ನದಿಗಳಲ್ಲಿ ಒಂದಾಗಿದೆ. ಸ್ಥಳಿಯವಾಗಿ ಇದಕ್ಕೆ ಹಿರೇಹೊಳೆ ಎಂಬ ಹೆಸರಿದೆ. ಜಿಲ್ಲೆಯ ಒಟ್ಟು ಅರಣ್ಯ ಪ್ರದೇಶದಲ್ಲಿ ಶೇ. ೯೦ಕ್ಕೂ ಹೆಚ್ಚಿನ ಅರಣ್ಯ ಪ್ರದೇಶ ಹುನಗುಂದ ತಾಲೂಕಿನಲ್ಲಿದೆ.

ಪ್ರಾಕೃತಿಕವಾಗಿ ಭಾರತದ ದಕ್ಷಿಣ ಭಾಗದಲ್ಲಿ ಫಲವತ್ತಾದ ದಖನ್ ಪ್ರಸ್ಥಭೂಮಿಯ ಊರಿರುವ ಕರ್ನಾಟಕವು ಶ್ರೀಮಂತ ಸಾಂಸ್ಕೃತಿಕ ಪರಂಪರೆಗೆ ಹೆಸರಾಗಿದೆ. ಕರ್ನಾಟಕದ ಉತ್ತರ ಭಾಗದಲ್ಲಿರುವ ಅವಿಭಜಿತ ವಿಜಾಪುರ ಜಿಲ್ಲಾ ಭೂಪ್ರದೇಶವು ಕ್ರಿಟೇಸಿಯನ್ ಇಂಷಸಿನ್ (ಸುಮಾರು ೬೦-೭೦ ಲಕ್ಷ ವರ್ಷಗಳಷ್ಟು ಪ್ರಾಚೀನ) ಯುಗದಲ್ಲಿ ರೂಪಿತಗೊಂಡಿದ್ದು ಪಂಚ ನದಿಗಳಿಂದ ಅನೇಕ ಹಳ್ಳಕೊಳ್ಳಗಳಿಂದ ಸಮೃದ್ಧವಾಗಿದ್ದರೂ, ಅನಾವೃಷ್ಟಿಯಿಂದಾಗಿ ಬರಗಾಲ ಪೀಡಿತ ಪ್ರದೇಶವೆಂದೇ ಇಂದು ಗುರುತಿಸಲ್ಪಟ್ಟಿದೆ. ಆದರೂ ಮಾನವ ವಿಕಾಸದ ವಿವಿಧ

೫. ಬಿಜಾಪುರ ಜಿಲ್ಲೆ ಬಾಗಲಕೋಟೆ ಜಿಲ್ಲೆಯೂ ಸೇರಿದಂತೆ ಭಾರತದ ಗ್ಯಾಜೆಟಿಯರ್ ಕರ್ನಾಟಕ ರಾಜ್ಯ, ಪು.೪೩

ಹಂತಗಳನ್ನು ಗುರುತಿಸುವಲ್ಲಿ ಸಾಂಸ್ಕೃತಿಕ ಬೆಳವಣಿಗೆಗಳನ್ನು ಅರಿಯುವಲ್ಲಿ ವಿಜಾಪುರ ಜಿಲ್ಲೆಯ ವೈವಿಧ್ಯಮಯ ಇತಿಹಾಸ ನೆರವಾಗುತ್ತವೆ".[೬]

ಕಾಳೆಯವರು ಕ್ಷತ್ರಿಯ (ಶಿವಾಜಿ) ಮರಾಠರು. ಮರಾಠರು ಮೂಲತಃ ಮಹಾರಾಷ್ಟ್ರದಿಂದ ಬಂದಿರುವರೆಂದು ತಿಳಿದುಬರುತ್ತದೆ. ಇವರು ಮರಾಠಿ ಮಾತನಾಡುವವರಾದರೂ ಕನ್ನಡವನ್ನು ಬಲ್ಲರು. ಇವರು ಮಾಂಸಹಾರವನ್ನು ಸೇವಿಸುತ್ತಾರೆ. ಹಾಗೂ ಎಲ್ಲ ಹಿಂದೂ ಹಬ್ಬಗಳನ್ನು ಮತ್ತು ಶಿವಾಜಿ ಜಯಂತಿಯನ್ನು ಆಚರಿಸುತ್ತಾರೆ. ಇವರು ಸೈನಿಕರಾಗಿಯೋ ಅಥವಾ ಮರಾಠಿ ದಾಳಿಕೋರ ದಂಡಿನ ಹಿಂಬಾಲಕರಾಗಿಯೋ ದಕ್ಷಿಣಕ್ಕೆ ಬಂದರು. ಇವರು ಆರ್ಯಕ್ಷತ್ರಿಯ ಮರಾಠರೆಂದು ತಮ್ಮ ಸಮುದಾಯದ ಸಂಘವನ್ನು ಹೊಂದಿದ್ದಾರೆ. ಇದು ಇವರ ಸಮುದಾಯದ ಅಭಿವೃದ್ಧಿಗಾಗಿ ಕೆಲಸ ಮಾಡುತ್ತದೆ.[೭] ಕಾಳೆಯವರ ಮೂಲ ವಂಶಸ್ಥರು ಮಹಾರಾಷ್ಟ್ರ ರಾಜ್ಯದ 'ಕಳೆ'ಯೆಂಬ ಗ್ರಾಮದವರು. ಈ ಹೆಸರೇ ಮುಂದೆ ಇವರ ಅಡ್ಡ ಹೆಸರಾಯಿತು. ಮೂಲ ಮನೆತನದ ಹೆಸರು ದೇಸಾಯಿ, ಹುನಗುಂದದಲ್ಲಿ ಇವರನ್ನು ಆರ್ಯರು ಅಂತಾನೇ ಕರೆಯುತ್ತಾರೆ. ತುಳಜಾಭವಾನಿ ಇವರ ಮನೆ ದೇವರು. ಇವರ ಜಾತಿ ಕ್ಷತ್ರಿಯ (ಶಿವಾಜಿ) ಮರಾಠ, ಇವರ ಮನೆತನದ ಪೂರ್ವಜರು ಘೋಷಾ ಪದ್ಧತಿಯವರು.[೮]

ಕಾಳೆಯವರ ವಂಶದ ಮೂಲವೃತ್ತಿ ಒಕ್ಕಲುತನ. ಇಪ್ಪತ್ತೊಂದು ಎಕರೆ ವಾಲಿಕಾರಿಕೆಯ ಒಣ ಬೇಸಾಯದ ಭೂಮಿಯಿಂದ ಬರುವ ಉತ್ಪನ್ನ ಕುಟುಂಬ ನಿರ್ವಹಣೆಗೆ ಕಡಿಮೆ ಎನಿಸಿತ್ತು. ಕಾರಣ ಒಣಬೇಸಾಯ, ಅನಿಶ್ಚಿತ ಮಳೆಯಿಂದಾಗಿ ಬರಗಾಲ ಮೇಲಿಂದ ಮೇಲೆ ಉಂಟಾಗುತ್ತಿತ್ತು. ಇದರಿಂದ ಮನೆಯಲ್ಲಿ ಬಡತನ ನೆಲೆಸಿತ್ತು. ಹೀಗೆ ಬಡತನದಲ್ಲಿಯೇ ಕಾಳೆಯವರು ತಮ್ಮ ಬಾಲ್ಯವನ್ನು ಕಳೆದರು.

ಕಾಳೆಯವರು ಹುಟ್ಟುವುದಕ್ಕಿಂತ ಮುಂಚೆಯೇ ಇವರ ಇಬ್ಬರು ಸಹೋದರು ಮತ್ತು ಒಬ್ಬ ಹಿರಿಯ ಸಹೋದರಿ ತೀರಿಕೊಂಡಿದ್ದರು. ನಂತರ ಇವರ ಕಿರಿಯ ಸಹೋದರಿಯೂ ಕೂಡ ತನ್ನ ನಾಲ್ಕನೇ ವಯಸ್ಸಿನಲ್ಲಿಯೇ ತೀರಿಕೊಂಡಳು. ನಂತರ ಇವರ ತಾಯಿ ಕೂಡಾ ನಾಲ್ಕೇ ದಿನದ ಅಂತರದಲ್ಲಿಯೇ ತೀರಿಕೊಂಡರು. ಆಗ ಕಾಳೆಯವರ ವಯಸ್ಸು ಕೇವಲ ಹತ್ತು. ಇವರ ತಾಯಿ ತೀರಿಕೊಂಡ ನಂತರ ಇವರ ತಂದೆ ಕೂಡ ಆರು ತಿಂಗಳುಗಳ ತರುವಾಯ

---

೬. ಬಿಜಾಪುರ ಜಿಲ್ಲೆ ಬಾಗಲಕೋಟೆ ಜಿಲ್ಲೆಯೂ ಸೇರಿದಂತೆ ಭಾರತದ ಗ್ಯಾಜೆಟಿಯರ್ ಕರ್ನಾಟಕ ರಾಜ್ಯ, ಪು.೪೩

೭. ಕರ್ನಾಟಕ ರಾಜ್ಯ ಕೋಶ ೪, ಜನ ಸಮುದಾಯ ಸಂಪುಟ, ಪು. ೮೮

೮. ಕಲಾವಿದ ವಿ.ಟಿ.ಕಾಳೆಯವರೊಂದಿಗೆ ಸಂದರ್ಶನ, ದಿ. ೩.೪.೨೦೦೮

ಕೆರೆಯಲ್ಲಿ ಓಣಿ ಹುಡುಗರು ಜೊತೆ ಸರಮನಿ ಆಟ (ಕಬ್ಬಡ್ಡಿಯ ರೂಪ). ಲಗೋರಿ ಆಟ ಹೀಗೆ ಬಾಲ್ಯದಲ್ಲಿ ಆಡುತ್ತಾ ಕಾಲಕಳೆಯುತ್ತಿದ್ದರು. ಕಾಳೆಯವರು ತಮ್ಮ ಬಾಲ್ಯದ ದಿನಗಳನ್ನು ಈ ರೀತಿಯಾಗಿ ನೆನಪಿಸಿಕೊಳ್ಳುತ್ತಾರೆ. "ನಮ್ಮ ಬಾಲ್ಯದಲ್ಲಿ ತಿಂಡಿ-ಗಿಂಡಿಯಂತ ಏನೂ ಇರಲಿಲ್ಲ ದಿನಾ ಊಟಕ್ಕೆ ಜೋಳದ ರೊಟ್ಟಿಯಿರುತ್ತಿತ್ತು. ಅನ್ನ ಅಂತೂ ಮಾಡುತ್ತಾನೇ ಇರಲಿಲ್ಲ. ಅನ್ನ ಮಾಡಿದ್ದರ ಅವತ್ತು ಮನೆಯಲ್ಲಿ 'ಹಬ್ಬ' ಅಂತನೇ ಅರ್ಥ. ಇವತ್ತು ನಾವು ಅಕ್ಕಿ ಅನ್ನ ಮಾಡಿದ್ದೀವಿ" ಎಂದು ಹಳ್ಳಿಯ ಜನ ಅನ್ನ ಮಾಡಿರುವ ದಿನ ವಿಶೇಷವಾಗಿ ಹೇಳಿಕೊಳ್ಳುತ್ತಿದ್ದರು.[೧೧]

"ಬಾಲ್ಯದಲ್ಲಿ ನನಗೆ ನೆನಪುಯಿರುವ ಪ್ರಕಾರ ನಮ್ಮ ಹಳ್ಳಿಯಲ್ಲಿ ಚಿತ್ರಕಲೆಯ ಬಗ್ಗೆ ಅಷ್ಟು ತಿಳುವಳಿಕೆಯಿರಲಿಲ್ಲ" ಎನ್ನುವ ಕಾಳೆಯವರು ಅವರ ಅಣ್ಣನೊಬ್ಬ ಪೇಂಟರನಾಗಿ ಬೋರ್ಡ್ ಬರೀತ್ತಿದ್ದ. ಅದನೆಲ್ಲಾ ಆಶ್ಚರ್ಯ ಕಣ್ಣುಗಳಿಂದ ಕಾಳೆಯವರು ನೋಡುತ್ತಿದ್ದರು. ಆದರೆ ಪ್ರಾರಂಭದಲ್ಲಿ ಚಿತ್ರ ಬಿಡಿಸಲು ಹೋಗಲಿಲ್ಲ. ನಾಟಕದಲ್ಲಿ ಹೆಚ್ಚಿನ ಆಸಕ್ತಿ ತೋರಿಸುತ್ತಿದ್ದರು. ಬಾಲ್ಯದಲ್ಲಿ ಓಣಿ ಹುಡುಗರೊಂದಿಗೆ ಕೂಡಿ ಯಾವುದಾದರೂ ಹಾಳು ಬಿದ್ದ ಮನೆಯಲ್ಲಿ ನಾಟಕ ಎಂಬ ಆಟ ಆಡುತ್ತಿದ್ದರು. "ನಾಟಕವನ್ನೇ ಕಲಿತು ಮಾಡುತ್ತಿರಲಿಲ್ಲ. ಸುಮ್ಮನೆ ಆಟದ ತರಹ ಆಡುತ್ತಿದ್ದವಿ"[೧೨] ಎನ್ನುವ ಕಾಳೆಯವರು ನಾಟಕ ಕ್ಷೇತ್ರದಲ್ಲಿ ಆಸಕ್ತಿ ತೋರಿಸಲು ಇದು ಒಂದು ಮುಖ್ಯ ಕಾರಣ.

ನಟಶ್ರೇಷ್ಠ "ಹಂದಿಗನೂರು ಸಿದ್ಧರಾಮಪ್ಪ ಅವರು ಕಾಳೆಯವರು ಬಾಲಕನಾಗಿದ್ದಾಗ ಹುನಗುಂದದಲ್ಲಿ ತಮ್ಮ ಕಂಪನಿಯ ನಾಟಕಗಳನ್ನು ಪ್ರದರ್ಶಿಸುತ್ತಿದ್ದರು. ಅವರ ನಟನೆ ಕಾಳೆಯವರ ಮೇಲೆ ಪ್ರಭಾವ ಬೀರಿತ್ತು. ಮತ್ತು ಕಾಳೆಯವರ ಅಣ್ಣನ ಗೆಳೆಯನೊಬ್ಬ ಅದೇ ಕಂಪನಿಯ ನಾಟಕದಲ್ಲಿ ಪಾತ್ರ ಮಾಡುತ್ತಿದ್ದರು. ಇದು ಕಾಳೆಯವರಿಗೆ ಇನ್ನೂ ನಾಟಕದ ಬಗ್ಗೆ ತಿಳಿದುಕೊಳ್ಳಲು ಸಾಧ್ಯವಾಯಿತು. ಮತ್ತು ಕಾಳೆಯವರು ಕಲಿಯುತ್ತಿದ್ದ ಶಾಲೆಯಲ್ಲಿ ಸಣ್ಣಪುಟ್ಟ ನಾಟಕಗಳಲ್ಲಿ ಭಾಗವಹಿಸುತ್ತಿದ್ದರು. ಹೈಸ್ಕೂಲಿನಲ್ಲಿ ನಾಟಕವಾಡುವ ಸಂದರ್ಭ ಬಂತೆಂದರೆ ಕಾಳೆಯವರಿಗೆ ಒಂದು ಪಾತ್ರ ಖಾಯಂ ಆಗಿರುತ್ತಿತ್ತು."[೧೩] ಹೀಗೆ ಕಾಳೆಯವರು ಬಾಲ್ಯದಲ್ಲಿಯೇ ನಾಟಕದಲ್ಲಿ ಭಾಗವಹಿಸಲು ಶುರುಮಾಡಿದ್ದರು.


---

೧೧. ವಿ.ಟಿ. ಕಾಳೆಯವರೊಂದಿಗೆ ಸಂದರ್ಶನ ದಿನಾಂಕ ೨೯.೨.೨೦೦೮

೧೨. ಅದೇ. ದಿನಾಂಕ ೩೦.೧೧.೨೦೦೮

೧೩. ಅದೇ. ದಿನಾಂಕ ೩೦.೧೧.೨೦೦೮

ವಿ.ಟಿ. ಕಾಳೆಯವರ ವಂಶಾವಳಿ



ವಿ.ಟಿ. ಕಾಳೆಯವರು ಬಾಲ್ಯದಲ್ಲಿ ತಮ್ಮ ಹಳ್ಳಿಯಲ್ಲಿರುವ ಜನರ ಪದ್ಧತಿಯನ್ನು ಈ ರೀತಿಯಾಗಿ ನೆನಪಿಕೊಳ್ಳುತ್ತಾರೆ. "ನಮ್ಮ ಹಳ್ಳಿಯಲ್ಲಿ ಆಗ ಒಂದು ಪದ್ಧತಿ. ಅದೇನೆಂದರೆ ಬೇರೆಯವರು ನಮ್ಮ ಹೊಲಕ್ಕೆ ಬಂದು ಕೆಲಸಮಾಡುತ್ತಿದ್ದರು. ನಮ್ಮ ತಂದೆ ತಾಯಿ ಅವರ ಹೊಲಗಳಿಗೆ ಹೋಗಿ ಕೆಲಸಮಾಡುತ್ತಿದ್ದರು. ಯಾರು ಯಾರಿಗೂ ದುಡ್ಡು ಕೊಡುವುದು ತೆಗೆದು ಕೊಳ್ಳುವುದು ಮಾಡುತ್ತಿರಲಿಲ್ಲ ಅಂತಹ ಒಂದು ಸಹಬಾಳ್ವೆಯ ಬದುಕು ಆ ಸಮಯದಲ್ಲಿ ಕಂಡುಬರುತ್ತಿತ್ತು".[೧೪] ಎಂದು ಕಾಳೆಯವರು ನೆನಪಿಸಿಕೊಳ್ಳುತ್ತಾರೆ.

ಕಾಳೆಯವರು ಬಾಲ್ಯದ ಇನ್ನೊಂದು ಸಂದರ್ಭ ಅದು "೧೯೪೨ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭ. ಕಾಳೆಯವರ ಊರಿನಲ್ಲೇ (ಹುನಗುಂದ) ನಾಗರಾಳದೊಡ್ಡಪ್ಪನವರು ಮತ್ತು ಬಾಲಪ್ಪ ಎಂಬ ಅಣ್ಣತಮ್ಮಂದಿರು ಇದ್ದರು. ಅವರು ದೇಶಭಕ್ತರಾಗಿದ್ದರು. ಅವರು ಗಾಂಧೀಜಿಯ ಪ್ರಭಾವಕ್ಕೆ ಒಳಗಾಗಿದ್ದ ಶ್ರೀಮಂತರು. ಊರಿನಲ್ಲಿ ಅವರದೊಂದು ಜಿನ್ನಿಂಗ ಫ್ಯಾಕ್ಟರಿಯಿತ್ತು. (ಹತ್ತಿಗಿರಣಿ) ಗಾಂಧೀಜಿಯ ಪ್ರಭಾವಕ್ಕೆ ಒಳಗಾಗಿ ಗ್ರಾಮೀಣ ಉದ್ಯೋಗ ಅಭಿವೃದ್ಧಿಪಡಿಸುವ ಉದ್ದೇಶದಿಂದ ಕೈಯಂತ್ರದಿಂದಲೇ ಅರಳಿಯನ್ನು ಬೀಜದಿಂದ ಬೇರ್ಪಡಿಸುವಂತಹ ಕೆಲಸವನ್ನು ಊರಿನ ಜನಕ್ಕೆ ಕೊಟ್ಟು ಅವರ ಆರ್ಥಿಕ ಜೀವನಕ್ಕೆ ಸಹಾಯಕರಾದರು. ಅಲ್ಲಿ ಕಾಳೆಯವರ ತಾಯಿ ಕೂಡಾ ಕೆಲಸಕ್ಕೆ ಹೋಗುತ್ತಿದ್ದರು. ಕಾಳೆಯವರಿಗೆ ಆಗ ೮-೯ ವರ್ಷ.[೧೫] ಅವರಿಗೆ ತಾಯಿಯ ನೆನಪಾದಾಗ ಈ ಸಂದರ್ಭ ನೆನಪಿಗೆ ಬರುತ್ತದೆ.

ಕಾಳೆಯವರು ಚಿತ್ರಕಲಾವಿದನಾಗಲು ಪ್ರಮುಖವಾದ ೨ ಕಾರಣಗಳು ಪ್ರಭಾವಿಸಿದ ವ್ಯಕ್ತಿಗಳು ಮತ್ತು ಸಂದರ್ಭ ಹೀಗಿವೆ.

ಕಾಳೆಯವರ ಹಿರಿಯ ಅಣ್ಣನ ಡ್ರಾಯಿಂಗ ತುಂಬಾ ಚೆನ್ನಾಗಿತ್ತು. ಆಗ ಜೆ.ಜೆ. ಸ್ಕೂಲ್ ಆಫ್ ಆರ್ಟ್‌ನಿಂದ ಡಿ.ಟಿ.ಸಿ. (ಡಿ.ಎಂ.ಸಿ)ಎಂಬ ಕೋರ್ಸ್ ಮಾಡುವವರಿಗೆ ಮೊದಲು ಜೆ.ಜೆ. ಸ್ಕೂಲಿನ ನಿಯಮವೇನೆಂದರೆ ಈ ಕೋರ್ಸಿಗೆ ಆಯ್ಕೆಯಾಗಬೇಕಾದರೆ, ಮೊದಲು ಅಲ್ಲಿ ಡ್ರಾಯಿಂಗ್‌ಗಳನ್ನು ಕಳಿಸಬೇಕಾಗುತ್ತಿತ್ತು. ತದನಂತರ ಆಯ್ಕೆ ಪ್ರಕ್ರಿಯೆ ನಡೆಯುತ್ತಿತ್ತು. ಇದು ಅಷ್ಟು ಸುಲಭದ ಮಾತಾಗಿರಲಿಲ್ಲ. ಆಯ್ಕೆಯಾಗುವುದು ಕಠಿಣವಾದ ಕೆಲಸವಾಗಿತ್ತು. ಆಗಿನ ಸಂದರ್ಭದಲ್ಲಿ ಕೆಲವರು ಕಾಳೆಯವರ ಅಣ್ಣನ ಕೈಯಿಂದ ನೇಚರ್ ಡ್ರಾಯಿಂಗ್, ಮೆಮೊರಿ ಡ್ರಾಯಿಂಗ್ ಮಾಡಿಸಿಕೊಂಡು ಜೆ.ಜೆ. ಸ್ಕೂಲಿಗೆ ಕಳುಹಿಸುತ್ತಿದ್ದರು. "ಅಷ್ಟು ಚಲೋಯಿತ್ತು ನಮ್ಮ ಅಣ್ಣನ ಡ್ರಾಯಿಂಗ್" ಎಂದು ಹೆಮ್ಮೆಯಿಂದ ಹೇಳುತ್ತಾರೆ ಕಾಳೆಯವರು. ಇವರ

---

೧೪. ವಿ.ಟಿ. ಕಾಳೆಯವರೊಂದಿಗೆ ಸಂದರ್ಶನ ದಿನಾಂಕ ೩೦.೧೧.೨೦೦೮

೧೫. ಅದೇ. ದಿನಾಂಕ ೩೦.೧೧.೨೦೦೮

ಮನೆಯಲ್ಲಿ ಹಿರಿಯರಾರೂ ಕಲಿತವರಿರಲಿಲ್ಲ ಇವರ ಅಣ್ಣ ಮಾತ್ರ ಅಂದಿನ ಏಳನೇಯ ತರಗತಿವರೆಗೆ ಓದಿದ್ದರು. ಕಾಳೆಯವರ ಅಣ್ಣನಿಗೆ ಚಿತ್ರಕಲೆ ಅದು ಹೇಗೋ ಒಲಿದಿತ್ತು. ಅವರು ಬೋರ್ಡ್‌ಗಳನ್ನು ಚಿತ್ರ ಬರೆಯುವುದನ್ನು ಕಲಿತಿದ್ದರು.[೧೬] ಕಾಳೆಯವರು ಮುಂದೆ ಒಳ್ಳೆಯ ಚಿತ್ರಕಲಾವಿದನಾಗಲು ಇದು ಒಂದು ಕಾರಣವಾಗಿತ್ತು.

"ಕಾಳೆಯವರು ಪ್ರಾಥಮಿಕ ಶಿಕ್ಷಣ ಮುಗಿಸಿ ೧೯೪೮ರಲ್ಲಿ ಹೈಸ್ಕೂಲ ಮೆಟ್ಟಿಲು ಏರಿದರು. ಆ ಸಂದರ್ಭದಲ್ಲಿಯೇ ಮುನವಳ್ಳಿ ಎಂಬ ಕಲಾವಿದ ಮಿತ್ರನ ಸಂಪರ್ಕ ಬಂತು. ಅವರು ಕಾಳೆಯವರು ಮನೆಯ ಪಕ್ಕದಲ್ಲಿಯೇ ವಾಸಿಸುತ್ತಿದ್ದರು. ಅವರು ಯಾವುದೇ ಕಲಾಶಿಕ್ಷಣ ಪಡೆದವರಲ್ಲ. ಆದರೂ ತುಂಬಾ ಒಳ್ಳೆಯ ಭಾವಚಿತ್ರಗಳನ್ನು ರಚಿಸುತ್ತಿದ್ದರು. ಪೌಡರ ಫಿನಿಷಿಂಗ್ (ಪ್ಯೂಮಿಸ್ ಪೌಡರ್) ತುಂಬಾ ಚೆನ್ನಾಗಿ ಮಾಡುತ್ತಿದ್ದರು. ಸಿನಿಮಾ ನಟ-ನಟಿಯರ ಚಿತ್ರ ಬಿಡಿಸುತ್ತಿದ್ದರು. ಇದನ್ನು ನೋಡಿ ಬಾಲಕ ಕಾಳೆಯವರಿಗೆ ಆಶ್ಚರ್ಯವಾಗುತ್ತಿತ್ತು. ಕಾಳೆಯವರಿಗೂ ಈ ತರಹ ಚಿತ್ರಗಳನ್ನು ಮಾಡಬೇಕೆಂದು ಮನಸ್ಸಾಗುತ್ತಿತ್ತು. ಕಾಳೆಯವರು ಕೂಡಾ ಚಿತ್ರ ಬರೆದು ಬರೆದು ಮುನವಳ್ಳಿ ಅವರಿಗೆ ತೋರಿಸುತ್ತಿದ್ದರು. ಅವರು ಅದನ್ನು ನೋಡಿ ಖುಷಿಪಟ್ಟಿದ್ದು ಅಲ್ಲದೇ "ನಿನ್ನ ಡ್ರಾಯಿಂಗ್ ಚಲೋ ಅದ. ಡ್ರಾಯಿಂಗ ಕಲಿ. ನನಗೆ ಅಕ್ಕಿ ಮಾಸ್ತರರ ಪರಿಚಯವಿದೆ. ನಾನು ಅವರಿಗೆ ನಿನ್ನ ಬಗ್ಗೆ ಹೇಳುತ್ತೇನೆ. ಅಲ್ಲಿ ಹೋಗಿ ಕಲಾಭ್ಯಾಸ ಮಾಡು ಎಂದು ಪ್ರೋತ್ಸಾಹಿಸಿದರು".[೧೭] ಈ ಘಟನೆ ಕಾಳೆಯವರು ಕಲಾವಿದನಾಗಿ ರೂಪಗೊಳ್ಳಲು ಪ್ರಮುಖ ಕಾರಣವಾಯಿತು.

ಶಿಕ್ಷಣ

ಕಾಳೆಯವರ ಪ್ರಾಥಮಿಕ ಶಾಲಾ ಶಿಕ್ಷಣ ಪ್ರಾರಂಭವಾದದ್ದು ಹುನಗುಂದದಲ್ಲಿ. ಅಲ್ಲಿ ಒಂದೇ ಸರ್ಕಾರಿ ಶಾಲೆ ಮತ್ತು ಒಂದು ಖಾಸಗಿ ಶಾಲೆಗಳು ಮಾತ್ರವಿದ್ದವು. "ನಮ್ಮ ಅಣ್ಣನ ಸ್ನೇಹಿತನೊಬ್ಬ ಖಾಸಗಿಶಾಲೆಯೊಂದನ್ನು ತಾನೇ ಪ್ರಾರಂಭಿಸಿದ್ದನು. ಅಲ್ಲಿ ನಾನು ಕಲಿಯ ಬೇಕೆಂಬುದು ನಮ್ಮಣ್ಣನ ಆಸೆ. ಆಗಿನ ಕಾಲದಲ್ಲಿ ಏಳನೇ ಕ್ಲಾಸ್ ಪಾಸ್ ಮಾಡಿದ್ದರೂ ಶಿಕ್ಷಕ ಹುದ್ದೆಯನ್ನು ಪಡೆಯ ಬಹುದಿತ್ತು. ನನಗೆ ಸರ್ಕಾರಿ ಶಾಲೆಯಲ್ಲಿ ಕಲಿಯಬೇಕೆಂಬ ಆಸೆ. ಆದರೆ ನಮ್ಮ ಅಣ್ಣ ನನ್ನನ್ನು ಸರ್ಕಾರಿ ಶಾಲೆಯಿಂದ ದರದರನೆ ಎಳೆದು ತಂದು ಖಾಸಗಿ ಶಾಲೆಯಲ್ಲಿಯೇ ಕೂಡಿಸುತ್ತಿದ್ದ"[೧೮] ಎಂದು ಕಾಳೆಯವರು ತಮ್ಮ ಬಾಲ್ಯದ ಆಟ-ಪಾಠ-ಊಟವನ್ನು ಈ ರೀತಿಯಾಗಿ ನೆನಪಿಸಿಕೊಳ್ಳುತ್ತಾರೆ.

---

೧೬. ವಿ.ಟಿ. ಕಾಳೆಯವರೊಂದಿಗೆ ಸಂದರ್ಶನ ದಿನಾಂಕ ೩೦.೧೧.೨೦೦೮

೧೭. ಅದೇ. ದಿನಾಂಕ ೩೦.೧೧.೨೦೦೮

೧೮. ಅದೇ. ದಿನಾಂಕ ೩೦.೧೧.೨೦೦೮

ಕಾಳೆಯವರು ೧೦ ವರ್ಷದ ಬಾಲಕನಾಗಿದ್ದಾಲೇ ಇವರ ತಾಯಿ ತೀರಿಕೊಂಡದ್ದರಿಂದ ಇವರ ಕುಟುಂಬ ಗದಗನಲ್ಲಿ ಬಂದು ನೆಲೆಸುವಂತಾಯಿತು. ಅಲ್ಲಿ ಇವರ ಇನ್ನೊಬ್ಬ ಹಿರಿಯ ಸಹೋದರನ ಆಶ್ರಯದಲ್ಲಿ ಕಾಳೆಯವರ ಮುಂದಿನ ಬದುಕು ಸಾಗಿತ್ತು. ಐದನೇ ಕ್ಲಾಸಿನವರೆಗೂ ಹುನಗುಂದದಲ್ಲಿ ಶಿಕ್ಷಣ ಮುಗಿಸಿದ ಕಾಳೆಯವರು ತಾಯಿಯ ಮರಣದ ನಂತರ ಅವರ ಮುಂದಿನ ಶಿಕ್ಷಣ ಗದುಗಿನಲ್ಲಿ ಮುಂದುವರಿಯಿತು. ಕಾಳೆಯವರ ಮನದಲ್ಲಿ ನಿಜವಾದ ಚಿತ್ರಕಲಾವಿದ ಚಿಗುರೊಡೆದಿದ್ದು ಇಲ್ಲಿಯೇ.[೧೯]

೧೯೪೭ರಲ್ಲಿ ಭಾರತಕ್ಕೆ ಸರ್ವತಂತ್ರ ಸ್ವಾತಂತ್ರ್ಯವನ್ನು ನೀಡಿ ಬ್ರಿಟಿಷ್ ಸರ್ಕಾರ ಮರಳಿ ತಮ್ಮ ದೇಶಕ್ಕೆ ಹೋದ ಕಾಲ ಭಾರತದೆಲ್ಲಡೆ ಸಂಭ್ರಮ. ಅದೇ ವರ್ಷವೇ ವಿಜಯ ಕಲಾಮಂದಿರ ಗದಗಿನಲ್ಲಿ ತಲೆ ಎತ್ತಿತು. ಸ್ವಾತಂತ್ರ್ಯ ಪೂರ್ವದ ಗದಗಿನಲ್ಲಿ ಎಲ್ಲವೂ ಇತ್ತು. ಆದರೆ ಚಿತ್ರಕಲೆ ಮಾತ್ರ ಉಪೇಕ್ಷಿತವಾಗಿತ್ತು. ಈ ಕೊರತೆ ಅಕ್ಕಿ ಅವರನ್ನು ಕಾಡತೊಡಗಿತು. ಆಗ ಗದಗ ಮುಂಬಯಿ ಪ್ರಾಂತದ ಒಂದು ಪ್ರಮುಖ ವ್ಯಾಪಾರಿ ಕೇಂದ್ರವಾಗಿತ್ತು. ಮುಂಬಯಿ ಸರ್ಕಾರವೇ ಚಿತ್ರಕಲೆಗೆ ಸಂಬಂಧಿಸಿದ ಎಲೆಮಂಟರಿ ಡ್ರಾಯಿಂಗ್ ಹಾಗೂ ಇಂಟರ್‌ಮಿಡಿಯೇಟ್ ಡ್ರಾಯಿಂಗ್ ಗ್ರೇಡ್ ತರಗತಿಗಳನ್ನು ನಡೆಸಲು ಪರವಾನಿಗೆಯನ್ನು ನೀಡಿತ್ತಲ್ಲದೇ ಗದುಗಿನ ಮುನಿಸಿಪಲ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿದ್ದ ಸಿ. ಅಯ್ಯನಗೌಡರ ಅವರು "ಅಕ್ಕಿಯವರೇ ನಿಮ್ಮ ಕಲಾ ಸಾಲೀನ ಇಲ್ಲೇ ಡ್ರಾಯಿಂಗ್ ಕ್ಲಾಸಿನಾಗ ಪ್ರಾರಂಭ ಮಾಡಿ" ಎಂದು ಹಸಿರು ನಿಶಾನೆಯನ್ನು ತೋರಿಸಿದರು. ಅಕ್ಕಿಯವರು ಕೃತಜ್ಞತೆಗಳನ್ನರ್ಪಿಸಿ ತಮ್ಮ ದಿವಂಗತ ದ್ವಿತೀಯ ಸುಪುತ್ರ ವಿಜಯನ ಹೆಸರಿನಲ್ಲಿ 'ವಿಜಯ ಕಲಾಮಂದಿರ' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಮುಂಬಯಿಯ ಜೆ.ಜೆ. ಕಲಾಶಾಲೆಯಿಂದ ಪಠ್ಯಕ್ರಮಗಳನ್ನು ತರಿಸಿ ತಮ್ಮ ವಿದ್ಯಾರ್ಥಿಗಳಿಗೆ ಉನ್ನತ ಕಲಾ ಶಿಕ್ಷಣವನ್ನು ನೀಡತೊಡಗಿದರು.

ಕಾಳೆಯವರಿಗೆ ಶಾಲೆ ಮತ್ತು ಮನೆ ಎರಡು ಒಂದೇ ಆಗಿತ್ತು. ಅಲ್ಲಿರುವ ವಿದ್ಯಾರ್ಥಿಗಳಲ್ಲಿ ಕಾಳೆಯವರು ತಮ್ಮ ಸ್ನೇಹಿತರೊಂದಿಗೆ ಒಂದು ಕೋಣೆಯಲ್ಲಿ ರಾತ್ರಿಯ ಹೊತ್ತು ಗಾಢ ನಿದ್ರೆಯಲ್ಲಿದ್ದರು. ರಾತ್ರಿ ಹನ್ನೆರಡು ಗಂಟೆಯ ಹೊತ್ತಿಗೆ ಶಾಲೆಯ ಹೆಡ್‌ಮಾಸ್ತರ್ ಅವರು ಬಂದು ಉತ್ಸಾಹ ಮತ್ತು ಸಂಭ್ರಮದಿಂದ "ಎದ್ದೇಳರಲೇ ನಮ್ಮ ದೇಶಕ್ಕೆ ಸ್ವತಂತ್ರ ಸಿಕ್ಕೈತ್ತಿ ನೀವು ಇನ್ನು ಮಲಕ್ಕೊಂಡಿದ್ದೀರಲ್ಲ" ಎಂದು ಎಬ್ಬಿಸಿದರಂತೆ. ಕಾಳೆಯವರು ಹೇಳುವಂತೆ ಆಗ ನಮಗೆ ಖುಷಿಯೋ ಖುಷಿ. ಎಲ್ಲಿ ನೋಡಿದರೂ ದೇಶದ ಬಗ್ಗನೇ ಮಾತು. ಆಗ ನಾವೆಲ್ಲಾ ಒಂದು ರೀತಿ ಸ್ವತಂತ್ರ ಹೋರಾಟಗಾರರೇ. ನಮಗೂ ದೇಶಕ್ಕೆ ಏನಾದರೂ ನಮ್ಮದೆ ಕಾಣಿಕೆ ಕೊಡಬೇಕೆಂಬ ಹುರುಪು. ಅಂತಹ ದೇಶಭಕ್ತಿ ಎಲ್ಲರಲ್ಲಿಯೂ ಮನೆ ಮಾಡಿತು. ದೇಶದ ಬಗ್ಗೆ

---

೧೯. ವಿ.ಟಿ. ಕಾಳೆಯವರೊಂದಿಗೆ ಸಂದರ್ಶನ ದಿನಾಂಕ ೩೦.೧೧.೨೦೦೮

ಮಾತನಾಡಬೇಕು. ಹೀಗೆ ಎಲ್ಲಿ ನೋಡಿದರಲ್ಲಿ ದೇಶದ ಬಗ್ಗೆ ಚಿಂತನೆಗಳು, ಚರ್ಚೆಗಳು, ಹೀಗೆ ಒಂದು ರೀತಿ ಹೊಸ ವಾತಾವರಣವೇ ನಿರ್ಮಾಣಗೊಂಡಿತು.[೨೦] ಎಂದು ಕಾಳೆಯವರು ನೆನಪಿಸಿಕೊಳ್ಳುತ್ತಾರೆ. ಆಗ ಕಾಳೆಯವರಿಗೆ ಹದಿಮೂರು ವರ್ಷ ವಯಸ್ಸು.

ಕಾಳೆಯವರು ೧೯೪೮ರಲ್ಲಿ ಹೈಸ್ಕೂಲ್ ಪ್ರವೇಶ ಮಾಡಿದರು. ಅಲ್ಲಿ ಇಂಟರಮೀಡಿಯಟ ಡ್ರಾಯಿಂಗ ಕಲಿಯಬೇಕಾದ ಸಂದರ್ಭದಲ್ಲಿ 'ಬಡಿಗೇರ' ಎಂಬ ಮುಂಬಯಿ ರಾಜ್ಯದ ಡ್ರಾಯಿಂಗ ಇನ್ಸಪೆಕ್ಟರ ಆಗಿದ್ದ ಡಿ.ಜಿ. ಬಡಿಗೇರ ಅವರು ಶಾಲೆಗೆ ಭೇಟಿಕೊಟ್ಟಾಗ ಕಾಳೆಯವರ ಡ್ರಾಯಿಂಗ ನೋಡಿದರು. ಅವರಿಗೆ ಕಾಳೆಯವರ ಡ್ರಾಯಿಂಗ್ ತುಂಬಾ ಇಷ್ಟವಾಯಿತು. ಅವರು "ಈ ಹುಡುಗನ ಡ್ರಾಯಿಂಗ್ ಚಲೋ ಐತಿ" ಅಕ್ಕಿಯವರೇ ಈ ಹುಡುಗನನ್ನು ಪ್ರೋತ್ಸಾಹಿಸಿ ಚಿತ್ರಕಲೆಯ ಅಭ್ಯಾಸವನ್ನು ಮುಂದುವರಿಸಲು ಹೇಳಿ ಎಂದು ಅಕ್ಕಿ ಮಾಸ್ತರರಲ್ಲಿಯೂ ಕಾಳೆಯವರ ಬಗ್ಗೆ ಹೇಳಿದ್ದರು. ಮುನ್ಸಿಪಲ್ ಹೈಸ್ಕೂಲ್‌ನಲ್ಲಿಯೇ ಒಂದು ಡ್ರಾಯಿಂಗ್ ಕೋಣೆಯಿತ್ತು. ಅಲ್ಲೇ ಕಲಾಶಿಕ್ಷಣ ತರಗತಿಗಳು ನಡೆಯುತ್ತಿದ್ದವು.[೨೧]

ಶಾಲೆಯಲ್ಲಿಯೇ ಅಕ್ಕಿ ಅವರು ನಡೆಸುತ್ತಿದ್ದ ಎಲಿಮೆಂಟರಿ ಹಾಗೂ ಇಂಟರ್ ಮಿಡಿಯಟರ್ ಡ್ರಾಯಿಂಗ್ ಗ್ರೇಡ್ ಪರೀಕ್ಷೆಗಳು ನಡೆಯುತ್ತಿದ್ದವು. (ಈಗಿನ ಲೋಯರ್ ಗ್ರೇಡ್ ಮತ್ತು ಹೈಯರ್‌ಗ್ರೇಡ್ ಮಾದರಿಯಲ್ಲಿ) ಈ ಪರೀಕ್ಷೆಗೆ ಕಾಳೆಯವರನ್ನು ತಯಾರು ಮಾಡಲಾಯಿತು. ಅದರಲ್ಲಿ ಕಾಳೆಯವರಿಗೆ ಸರ್ಕಾರದಿಂದ ತಲಾ ಮೂರು ಮತ್ತು ಇನ್ನೆರಡು ಪ್ರಶಸ್ತಿಗಳು ಬಂದವು. ಇದರಿಂದ ಮುನವಳ್ಳಿಯವರು ತುಂಬಾ ಸಂತೋಷಪಟ್ಟರು. ಈ ರೀತಿಯಾಗಿ ಕಾಳೆಯವರ ಕಲಾಪಯಣ ಪ್ರಾರಂಭವಾಯಿತು. ಮುಂದೆ ವಿಜಯ ಕಲಾಮಂದಿರಕ್ಕೆ ಸೇರ್ಪಡೆಯಾಗಲು ಇದು ಪ್ರಮುಖ ಕಾರಣವಾಯಿತು.[೨೨]

ದಿನಾಂಕ ೧೯೪೭ರಲ್ಲಿ ಅಕ್ಕಿ ಅವರ ವಿಜಯಕಲಾಮಂದಿರವು ಗದಗಿನ ಮುನ್ಸಿಪಲ್ ಹೈಸ್ಕೂಲಿನಲ್ಲಿಯೇ ಪ್ರಾರಂಭವಾಯಿತು. ಹೈಸ್ಕೂಲ ವಿದ್ಯಾಭ್ಯಾಸ ನಡೆದಿರುವಾಗಲೇ ೧೯೪೮ರಲ್ಲಿ ಕಾಳೆಯವರು ಈ ಕಲಾಶಾಲೆಗೆ ಸೇರಿದರು. ಇಲ್ಲಿಯೇ ಕಾಳೆಯವರ ಅಕಾಡೆಮಿಕ ಕಲಾ ಶಿಕ್ಷಣ ಆರಂಭವಾಯಿತು. ಉಚ್ಚ ಕಲಾ ಶಿಕ್ಷಣವನ್ನು ಪೂರೈಸಲು ಐದು ವರ್ಷಗಳ ವಿವಿಧ ತರಗತಿಗಳಿದ್ದು, ಪ್ರತಿ ತರಗತಿಯ ಪರೀಕ್ಷೆಗೂ ಮುಂಬಯಿಗೇ ಹೋಗಬೇಕಾಗಿತ್ತು. ಆಗ

---

೨೦. ವಿ.ಟಿ. ಕಾಳೆಯವರೊಂದಿಗೆ ಸಂದರ್ಶನ ದಿನಾಂಕ ೩೦.೧೧.೨೦೦೮

೨೧. ವಿ.ಟಿ. ಕಾಳೆಯವರೊಂದಿಗೆ ಸಂದರ್ಶನ ದಿನಾಂಕ ೨೯.೨.೨೦೦೮

೨೨. ವಿ.ಟಿ. ಕಾಳೆಯವರೊಂದಿಗೆ ಸಂದರ್ಶನ ದಿನಾಂಕ ೩೦.೧೧.೨೦೦೮

ಮುಂಬಯಿಯ ಜೆ.ಜೆ. ಕಲಾಶಾಲೆಯೊಂದೇ ಪರೀಕ್ಷಾ ಕೇಂದ್ರವಾಗಿತ್ತು. ಆಗ ಪರೀಕ್ಷೆಗಳು ತಿಂಗಳಾನುಗಟ್ಟಲೆ ನಡೀತಿತ್ತು. ಕರ್ನಾಟಕದಲ್ಲಿರುವ ಎಲ್ಲಾ ಕಲಾಶಾಲೆಯ ವಿದ್ಯಾರ್ಥಿಗಳು ಪರೀಕ್ಷೆಗೆ ಜೆ.ಜೆ. ಸ್ಕೂಲಿಗೆ ಹೋಗಬೇಕಾಗಿತ್ತು. ಕರ್ನಾಟಕದಲ್ಲಿ ಮೊಟ್ಟಮೊದಲಬಾರಿಗೆ ಕಲಾಶಾಲೆ ಪ್ರಾರಂಭವಾಗಿದ್ದು ೧೯೩೫ರಲ್ಲಿ ಹಾಲಭಾವಿಯವರ ಧಾರವಾಡದಲ್ಲಿನ ಕಲಾಶಾಲೆ. ನಂತರ ವಿಜಯಕಲಾಮಂದಿರ ಗದಗನಲ್ಲಿ ೧೯೪೭ರಲ್ಲಿ ನಂತರ ೮-೧೦ ವರ್ಷಗಳ ಬಳಿಕ ಮಿಣಜಗಿಯವರು ಹುಬ್ಬಳ್ಳಿಯಲ್ಲಿ ಕಲಾಶಾಲೆ ಪ್ರಾರಂಭ ಮಾಡಿದರು. ಹೀಗೆ ಈ ಎಲ್ಲಾ ಕಲಾಶಾಲೆಗಳ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಜೆ.ಜೆ. ಸ್ಕೂಲಿಗೆ ಹೋಗಬೇಕಾಗಿತ್ತು.[೨೩] ಕಲಾವಿದ್ಯಾರ್ಥಿಗಳು ಆಯಾವರ್ಷ ಏನು, ಎಷ್ಟು ವರ್ಕಮಾಡಿದ್ದಾರೆ ಎಂಬುದನ್ನೂ ನೋಡಿ ಪರೀಶಿಲಿಸಿದ ನಂತರ ಜೆ.ಜೆ. ಸ್ಕೂಲಿನವರಿಗೆ ಒಪ್ಪಿಗೆಯಾದರೆ ಮಾತ್ರ ಪರೀಕ್ಷೆ ಫಾರ್ಮ ತುಂಬಲು ಅವಕಾಶವಿತ್ತು. ಅಷ್ಟು ಕಟ್ಟುನಿಟ್ಟಿನ ಶಿಕ್ಷಣ ಪದ್ಧತಿ ಜೆ.ಜೆ. ಸ್ಕೂಲಿನಲ್ಲಿತ್ತು.[೨೪]

ಅಕ್ಕಿಯವರಿಗೆ ಇನ್ನು ಈ ಶಾಲೆ ಗದಗಿನ ಮುನ್ಸಿಪಲ್ ಹೈಸ್ಕೂಲಿನಲ್ಲಿ ನಡೆಯುವುದು ಸೂಕ್ತವಲ್ಲ ಎಂದೆನಿಸಿತು. ಅಂದಿನ ಮೇವಿನ ಬಜಾರದ ಕೊನೆಯಲ್ಲಿ ಮಹಾಲಕ್ಷ್ಮಿ ಸಿನಿಮಾ ಥಿಯೇಟರಿಗೆ ಹೊಂದಿಕೊಂಡಂತಿರುವ ಒಂದು ವ್ಯಯಾಮ ಶಾಲೆ ಖಾಲಿಯಾಗಿದೆ ಎಂದು ತಿಳಿಯಿತು. ಅದು ಅತಿ ಚಿಕ್ಕ ಕಟ್ಟಡ, ಎದುರಿಗೆ ತಿಪ್ಪೆಗುಂಡಿಗಳು, ಬಲಗಡೆಗೆ ಒಂದಾನೊಂದು ಕಾಲಕ್ಕೆ ಸ್ಮಶಾನವಾಗಿದ್ದ ಖಾಲಿಜಾಗ, ಅದರಲ್ಲಿಯೇ ಗದುಗಿನ ತೋಂಟದಾರ್ಯ ಮಠದವರು ಬಡ ವಿದ್ಯಾರ್ಥಿಗಳಿಗಾಗಿ ನಡೆಸುತ್ತಿದ್ದ ಬೋರ್ಡಿಂಗ್ ಹೌಸ್. ಅಲ್ಲಿರುವ ಈ ವ್ಯಾಯಾಮ ಶಾಲೆಯನ್ನೇ ವಿಜಯ ಕಲಾಮಂದಿರವನ್ನಾಗಿ ಪರಿವರ್ತಿಸಲಾಯಿತು. ವಿದ್ಯಾರ್ಥಿಗಳ ಸಂಖ್ಯೆ ನಾಲ್ಕರಿಂದ ಆರಕ್ಕೆ, ಆರರಿಂದ ಎಂಟಕ್ಕೆ ಏರತೊಡಗಿತು. ಉನ್ನತ ಕಲಾಶಿಕ್ಷಣದ ಪ್ರಾರಂಭಿಕ ಹಂತದಿಂದಲೆ ಅಂದರೆ, ಎಲೆಮೆಂಟರಿ ಡ್ರಾಯಿಂಗ್ ಮತ್ತು ಪೇಂಟಿಂಗ್ ತರಗತಿಯಿಂದಲೇ ಡಿಜೈನ್, ಸ್ಟಿಲ್‌ಲೈಫ್, ಪರ್ಸ್ಪೆಕ್ಟಿವ್, ಲೈಫ್, ಪ್ರತಿಮೆಗಳ ಅಭ್ಯಾಸ ಮೊದಲಾದ ವಿಷಯಗಳ ಅಭ್ಯಾಸ ಕಡ್ಡಾಯವಾಗಿತ್ತು. ಅಲ್ಲದೇ ಆ ಎಲ್ಲ ವಿಷಯಗಳೂ ಪರೀಕ್ಷಾ ವಿಷಯಗಳಾಗಿರುತ್ತಿದ್ದವು. ಪರ್ಸ್ಪೆಕ್ಟಿವ್ ವಿಷಯವನ್ನು ಶ್ರೀ ಕಮಾನಗಾರ ಅವರೂ, ಇನ್ನುಳಿದ ವಿಷಯಗಳನ್ನು ಶ್ರೀ ಸಿ.ಎಸ್. ಪಾಟೀಲ ಅವರು ಹೇಳಿಕೊಡುತ್ತಿದ್ದರು.[೨೫]

---

೨೩. ವಿ.ಟಿ. ಕಾಳೆಯವರೊಂದಿಗೆ ಸಂದರ್ಶನ ದಿನಾಂಕ ೨೯.೨.೨೦೦೮

೨೪. ಅದೇ. ದಿನಾಂಕ ೨೯.೨.೨೦೦೮

೨೫. ಅಶೋಕ ಟಿ.ಪಿ., ಸಂ. ವಜ್ರವಿಜಯ, ಪು. ೨೦

ಕಾಳೆಯವರು ಗದಗಿನ ವಿಜಯ ಕಲಾಮಂದಿರದಲ್ಲಿ ಕಲಾಶಿಕ್ಷಕ ಟಿ.ಪಿ. ಅಕ್ಕಿ ಅವರ ಮಾರ್ಗದರ್ಶನದಲ್ಲಿ ಚಿತ್ರಕಲೆಯ ಎಲಿಮೆಂಟರಿ, ಇಂಟರ್ ಮೀಡಿಯೇಡ್, ಡಿಪ್ಲೊಮಾ ವ್ಯಾಸಂಗವನ್ನು ೧೯೫೩ರಲ್ಲಿ ಪೂರ್ಣಗೊಳಿಸಿದರು.

"ಕಾಳೆಯವರ ಮೆಚ್ಚಿನ ಗುರುಗಳು ಟಿ.ಪಿ. ಅಕ್ಕಿ. ಅಲ್ಲದೆ ಮಿಣಜಿಗಿ ಮತ್ತು ಹಾಲಭಾವಿ ಅವರಿಂದಲೂ ಕಲೆಯ ಕುರಿತು ಮಾರ್ಗದರ್ಶನ ಪಡೆಯುತ್ತಿದ್ದರು. "ನಾವು ಅಕ್ಕಿ ಮಾಸ್ತರರ ಶಿಷ್ಯಂದಿರಾದರೂ ನಾವು ಹಾಲಭಾವಿಯವರ ಹತ್ತಿರ ಹೋದರೆ ಯಾವುದೇ ತರಹದ ಭೇದಭಾವ ತೋರದೆ ಕಲೆಯನ್ನು ಕುರಿತು ಮಾರ್ಗದರ್ಶನ ಮಾಡುತ್ತಿದ್ದರು. ತುಂಬಾ ಒಳ್ಳೆಯ ಕಲಾವಿದ ಅವರು. ಲ್ಯಾಂಡಸ್ಕೇಪ್ ಹೆಂಗ ಮಾಡಬೇಕು ಲೈಫ್ ವರ್ಕ ಹೆಂಗ ಮಾಡಬೇಕು ಎಂದು ತುಂಬಾ ಚೆನ್ನಾಗಿ ಹೇಳಿ ಕೊಡುತ್ತಿದ್ದರು. ಹುಬ್ಬಳ್ಳಿಯಲ್ಲಿ ಒಬ್ಬ ಕಲಾವಿದಯಿದ್ದರು ಅದ್ಭುತ ಲ್ಯಾಂಡಸ್ಕೇಪ ಆರ್ಟಿಸ್ಟ್ ಅವರು. ಅಮೀನಸಾಬ್ ಕಮಡೋಳಿ ಅಂತ ಅವರ ಲ್ಯಾಂಡಸ್ಕೇಪ್ ವರ್ಕಗಳನ್ನು ನೋಡಿ ನಾನು ಪ್ರಭಾವಿತನಾಗಿದ್ದೇನೆ" ಎನ್ನುತ್ತಾರೆ. ಕಾಳೆಯವರು ಆಗಿನ ಸಂದರ್ಭದಲ್ಲಿ ೧೦-೧೨ ಸೈಜಿನ ಫೋಟೋ ರಚಿಸಿಕೊಡಲು ಪಡೆಯುವ ಸಂಭಾವನೆ ಕೇವಲ ೧೦.೦೦ ರೂಪಾಯಿ. ಕಾಳೆಯವರಿಗೆ ಬಂದ ಆರ್ಡರ ವರ್ಕಗಳನ್ನು ತೆಗೆದುಕೊಂಡು ಕಮಡೋಳಿ ಯವರ ಹತ್ತಿರ ಹೋಗುತ್ತಿದ್ದರು. ಅವರು ಅದಕ್ಕೆ ಮಾರ್ಗದರ್ಶನ ಮಾಡುತ್ತಿದ್ದರು. "ವರ್ಣ ಮಾತ್ರಂ ಕಲಿಸಿದಾತಂ ಗುರು" ಒಂದು ಅಕ್ಷರ ಕಲಿಸಿದರೂ ಕೂಡಾ ಅವರೂ ಗುರುಗಳೇ. ಹೀಗಾಗಿ ಕಮಡೋಳಿಯವರನ್ನು ನಾನು ಗುರು ಎಂದೇ ಸಂಭೋಧಿಸುತ್ತೇನೆ"[೨೬] ಎನ್ನುತ್ತಾರೆ. ಕಾಳೆಯವರು ಹಾಲಭಾವಿ, ಮಿಣಜಗಿ, ಕಮಡೋಳಿಯವರನ್ನು ಈ ಸಂದರ್ಭದಲ್ಲಿ ನೆನಸಬೇಕು ಎಂದು ಹೇಳುವಾಗ ಕಾಳೆಯವರ ಗುರುಭಕ್ತಿ ಎಂತಹದು ಎಂಬ ಮನವರಿಕೆಯಾಗುತ್ತದೆ.

ಸರ್ ಜೆ.ಜೆ. ಕಲಾಶಾಲೆ ಮುಂಬಯಿನ ನೆನಪು

ಕಾಳೆಯವರ ಕಲಾ ಶಿಕ್ಷಣ ಜರುಗಿದ್ದು ಗದಗಿನ ವಿಜಯ ಕಲಾಮಂದಿರದಲ್ಲಿಯಾದರೂ ಅವರ ಪರೀಕ್ಷಾ ಕೇಂದ್ರ ಇದ್ದದ್ದು ಮುಂಬಯಿಯ ಜೆ.ಜೆ. ಕಲಾಶಾಲೆಯಲ್ಲಿ. ಕಾಳೆಯವರು ೧೯೫೩ರಲ್ಲಿ ಸರ್ ಜೆ.ಜೆ. ಕಲಾಶಾಲೆಯಿಂದ ಡಿಪ್ಲೊಮಾ ಪದವಿಗಳಿಸಿರುತ್ತಾರೆ. ಆಗಿನ ಪರೀಕ್ಷೆಗಳು ತಿಂಗಳುಗಟ್ಟಲೇ ನಡೆಯುತ್ತಿದ್ದುರಿಂದ ಕಾಳೆಯವರು ಮತ್ತು ಅವರ ಸಹಪಾಠಿಗಳು ಪರೀಕ್ಷೆಗಾಗಿ ಮುಂಬಯಿಗೆ ಹೋಗಬೇಕಾಗಿ ಬಂದಿದ್ದು, ಜೆ.ಜೆ. ಕಲಾಶಾಲೆಯ ವಾತಾವರಣ, ಅಲ್ಲಿನ ಕಲಿಕಾ ಕ್ರಮ, ಶಿಸ್ತು, ಮುಂತಾದ ಅಂಶಗಳು ಕಾಳೆಯವರಲ್ಲಿ ಪರಿಣಾಮವನ್ನುಂಟು ಮಾಡಿತ್ತು. ಅಲ್ಲಿ

---

೨೬. ವಿ.ಟಿ. ಕಾಳೆಯವರೊಂದಿಗೆ ಸಂದರ್ಶನ ದಿನಾಂಕ ೨೯.೨.೨೦೦೮







ಜೆ.ಜೆ.ಕಲಾಶಾಲೆಮುಂದೆ ಎ.ಟಿ.ಕಾಳೆಯವರು ಮತ್ತು ಸ್ನೇಹಿತರು











ಕಲಾವಿದ ಎಸ್.ಎಂ.ಸಾಲಿ ಮತ್ತು ಇತರ ಸ್ನೇಹಿತರ ಬಳಗದೊಂದಿಗೆ ವಿ.ಟಿ.ಕಾಳೆಯವರು







ಮುಂಬಯಿ ಪರಿಸರದಲ್ಲಿ ಸ್ನೇಹಿತರೊಂದಿಗೆ ವಿ.ಟಿ. ಕಾಳೆಯವರು

ಇದ್ದಷ್ಟು ದಿನ ಅಲ್ಲಿಯ ವಿದ್ಯಾರ್ಥಿಗಳೊಂದಿಗೆ ಅಧ್ಯಾಪಕರೊಂದಿಗೆ ಆತ್ಮೀಯ ಒಡನಾಟ ಇಟ್ಟುಕೊಳ್ಳುತ್ತಿದ್ದ ಕಾಳೆಯವರು ಅಲ್ಲಿಯೂ ಪೂರ್ಣ ಲಾಭವನ್ನು ಪಡೆಯುತ್ತಿದ್ದರು. ಹೀಗೆ ಜೆ.ಜೆ. ಕಲಾಶಾಲೆಯೊಂದಿಗಿನ ಒಡನಾಟ ಅವರ ಬದುಕಿನ ಮಹತ್ವದ ಘಟ್ಟಗಳಲ್ಲಿ ಒಂದಾಗಿದೆ.

೧೮೫೭ರ ಮಾರ್ಚ್ ೨ರಂದು ಈ ಕಲಾಶಾಲೆ ಅಸ್ತಿತ್ವಕ್ಕೆ ಬಂದಿತು. ಇದಕ್ಕೆ ಮೂಲ ಕಾರಣ ಪುರುಷ ಪಾರ್ಸಿ ಮನೆತನದಲ್ಲಿ ಹುಟ್ಟಿದ ಜೀಜಾಭಾಯಿ ಜೆಮಶೇಡಜಿ. ಲಂಡನ್‌ನಲ್ಲಿ ಕ್ರಿ.ಶ. ೧೮೫೧ರಲ್ಲಿ ಅಂತರ್ ರಾಷ್ಟ್ರೀಯ ಚಿತ್ರಕಲಾ ಪ್ರದರ್ಶನ ನಡೆದಿತ್ತು. ಅದನ್ನು ನೋಡಲು ಹೋದಾಗ ಅವರ ಮನಸ್ಸಿನಲ್ಲಿಯೂ ಸಹ ಇಂತಹ ಕಲಾಶಾಲೆಯನ್ನು ನಮ್ಮ ಭಾರತದಲ್ಲೂ ಪ್ರಾರಂಭಿಸಬೇಕೆಂಬ ಇಚ್ಛೆಯುಂಟಾಯಿತು. ಇದರ ಪರಿಣಾಮವೇ ಸರ್ ಜೆ.ಜೆ. ಕಲಾಶಾಲೆಯ ಸ್ಥಾಪನೆ.[೨೭] ಲಂಡನ್ನಿನ ರಾಯಲ್ ಅಕಾಡೆಮಿ ಆಫ್ ಆರ್ಟ್ ಸಂಸ್ಥೆಯ ಮಾದರಿಯಲ್ಲಿ ಬ್ರಿಟಿಷ್‌ರು ಸ್ಥಾಪನೆ ಮಾಡಿದ ಭಾರತದ ಏಕೈಕ ಕಲಾಶಾಲೆ ಎಂದರೆ ಮುಂಬಯಿಯ ಸರ್ ಜೆ.ಜೆ. ಕಲಾಶಾಲೆ. ಈ ಶಾಲೆಯ ಸ್ಥಾಪನೆಗೆ ಮೊದಲು ಭಾರತೀಯ ಕಲಾ ಸಂಪ್ರದಾಯ ಅಧೋಗತಿಯ ಹಂತ ತಲುಪಿತ್ತು ಎಂದೇ ಹೇಳಬೇಕು. ಕಲಾವಿದನಾಗುವ ಅಪೇಕ್ಷೆಯುಳ್ಳವರಿಗೆ ಜೆ.ಜೆ. ಸ್ಕೂಲ್ ಮಹತ್ತರವಾದ ಆಕರ್ಷಣೆಯಾಗಿತ್ತು.[೨೮] ಎಂಬ ಅಂಶಗಳು ತಿಳಿದುಬರುತ್ತವೆ.

ವಿ.ಟಿ. ಕಾಳೆಯವರು ಜೆ.ಜೆ. ಕಲಾಶಾಲೆಯಲ್ಲಿನ ಸುಮಧುರ ನೆನಪುಗಳನ್ನು ಈ ರೀತಿಯಾಗಿ ನೆನಪಿಸಿಕೊಳ್ಳುತ್ತಾರೆ. "ಮುಂಬಯಿನಲ್ಲಿ ಪ್ರಾಯೋಗಿಕ ಪರೀಕ್ಷೆ ಬರೆಯುವಾಗಿನ ಸಂದರ್ಭ. ನಾವು ಡಿಪ್ಲೋಮಾ ಮಾಡುವಾಗ ನಮಗೆ ಪರೀಕ್ಷಾ ಪರಿಶೀಲನ ಅಧಿಕಾರಿಯಾಗಿ ಮಿಣಜಗಿ ಯವರು ಬರುತ್ತಿದ್ದರು. ಪರೀಕ್ಷೆ ಬರೆಯುವ ಸಂದರ್ಭದಲ್ಲಿ ನಾನು ಒಂದು ತಪ್ಪು ಮಾಡಿದ್ದೆ ಅದನ್ನು ಅವರು ಹೇಳಬೇಕಾಗಿದೆ. ಕನ್ನಡದಲ್ಲಿ ಹೇಳಿದರೆ, ಉಳಿದವರಿಗೆ ಅರ್ಥವಾಗುದಿಲ್ಲವೆಂದು ಕನ್ನಡದಲ್ಲಿ "ಆ ಫಿಗರ ತೆಗೆದುಬಿಡು" ಎಂದಿದ್ದರು. ನಮ್ಮ ಕನ್ನಡ ಹುಡುಗ ಎಂಬ ಕಾಳಜಿ ಅವರಲ್ಲಿತ್ತು ಅಂತ ಕಾಣಿಸುತ್ತೆ[೨೯] ಎಂದು ಈ ಘಟನೆಯನ್ನು ನೆನಪಿಸಿಕೊಳ್ಳುತ್ತಾರೆ.

ಮತ್ತೊಂದು ಸ್ವಾರಸ್ಯಕರ ಸಂದರ್ಭ ಮುಂಬಿಯಿಯಲ್ಲಿದ್ದಾಗ ಕಾಳೆಯವರಿಗೆ ಒದಗಿ ಬಂದಿತ್ತು. ಕಾಳೆಯವರು ಮೂರನೇ ವರ್ಷದ ಪರೀಕ್ಷೆ ಬರೆಯಲು ಮುಂಬಯಿಗೆ ಹೋದಾಗ ಅಲ್ಲಿ ಜಾಂಬಳೇಕರ ಅಂತ ಒಬ್ಬ ಆರ್ಟಿಷ್ಟ ಮಹಾರಾಷ್ಟ್ರದವರು. ಮತ್ತು ಕರ್ನಾಟಕದವರಾದ

---

೨೭. ಕಲಾವಿದ ಎಂ.ಎ. ಚೆಟ್ಟಿಯವರ ಜೀವನ, ಕಲಾಕೃತಿಗಳು, ಡಾ. ಲಕ್ಷ್ಮೀದೇವಿ ಗವಾಯಿ, ಪ್ರಕಟಿತ ಮಹಾಪ್ರಬಂಧ, ಪು.೪೫

೨೮. ಕಟ್ಟಿಂಗೇರಿ ಕೃಷ್ಣಹೆಬ್ಬಾರ, ಕಲೆ ಮತ್ತು ಬದುಕು, ಕು.ಶಿ. ಹರಿದಾಸಭಟ್ಟ, ಪು.೩೨

೨೯. ವಿ.ಟಿ. ಕಾಳೆಯವರೊಂದಿಗೆ ಸಂದರ್ಶನ ದಿನಾಂಕ ೨೯.೨.೨೦೦೮

ದಂಡಾವತಿಮಠ ಇವರಿಬ್ಬರು ಪರೀಕ್ಷಾ ಪರಿಶೀಲನಾ ಅಧಿಕಾರಿಗಳಾಗಿ ಬಂದಿದ್ದರು. ಇವರಿಬ್ಬರು ಯಾವಾಗಲೂ ಜೊತೆಜೊತೆನೆ ಅಡ್ಡಾಡುತ್ತಿದ್ದರು. ದಂಡಾವತಿಮಠರು ಬಹಳ ಕುಳ್ಳವ್ಯಕ್ತಿ ಜಾಂಬಳೇಖರ ಅವರಿಗಿಂತ ಸ್ವಲ್ಪ ಎತ್ತರದ ವ್ಯಕ್ತಿತ್ವ. ದಂಡಾವತಿಮಠರು ಎಂದರೆ ಇವರೇ ಎಂಬುದು ಕಾಳೆಯರಿಗೆ ಗೊತ್ತಿರಲಿಲ್ಲ. ಜಾಂಬಳೇಕರ ಮತ್ತು ದಂಡಾವತಿಮಠರು ಯಾವಾಗಲೂ ಮರಾಠಿಯಲ್ಲಿ ಮಾತನಾಡಿಕೊಳ್ಳುತ್ತಿದ್ದರು. ಹೀಗಾಗಿ ಇವರಿಗೆ ಕನ್ನಡ ಗೊತ್ತಿಲ್ಲವೆಂದು ತಿಳಿದು ಕೊಂಡಿದ್ದರು. ಇವರಿಬ್ಬರು ಜೊತೆಗೆ ಬರುವುದನ್ನು ನೋಡಿ ಕಾಳೆಯವರು ಮತ್ತು ಅವರ ಗೆಳೆಯರು ಸೇರಿ "ಬಂದರು ನೋಡು ಇಬ್ಬರು ಗಿಡ್ಡರು" ಎಂದು ತಮಾಷೆ ಮಾಡುತ್ತಿದ್ದರು. ಅವರು ಏನೂ ಅನ್ನುತ್ತಿರಲಿಲ್ಲ. ಹೀಗೆ ಎರಡು ಮೂರು ಸಲ ನೋಡಿ ಒಂದು ದಿನ ದಂಡಾವತಿಮಠರು ಇವರ ಕಡೆಗೆ ಬಂದು "ಏನೋ ತಮ್ಮ, ಯಾವ ಊರುನಿಂದು?" ಅಂತ ಕೇಳಿಯೇಬಿಟ್ಟರು. ಕಾಳೆಯವರಿಗೆ ಗಾಬರಿ, ಭಯ "ಗದಗ ಅಂತಾ ತೊದಲಿದರು" "ಹಂಗಾದರ ನೀವೂ ನಮ್ಮ ಹುಡುಗರು" ಎಂದು ದಂಡಾವತಿಮಠರು ಖುಷಿಪಟ್ಟರು. ಅಂತಹ ಒಳ್ಳೆಯ ಸರಳ ವ್ಯಕ್ತಿತ್ವ ದಂಡಾವತಿಮಠರದು ಎಂದು ಕಾಳೆಯವರು ಆ ದಿನಗಳನ್ನು ನೆನಪಿಸಿಕೊಳ್ಳುತ್ತಾರೆ. ಮುಂದೆ ಕಾಳೆಯವರು ಈ ವರ್ಷದ ಪರೀಕ್ಷೆಯಲ್ಲಿ ಮೂರನೇ ರ್‍ಯಾಂಕ್‌ನಲ್ಲಿ ಪಾಸಾದರು. ರ್‍ಯಾಂಕ ಬಂದಿರುವ ವಿಷಯವನ್ನು ಕೂಡ ಜಾಂಬಳೇಕರ ಮತ್ತು ದಂಡಾವತಿಮಠರು ಕಾಳೆಯವರಲ್ಲಿ ಮುಂಚಿತವಾಗಿಯೇ ತಿಳಿಸಿದ್ದನ್ನು ನೆನಪಿಸಿಕೊಳ್ಳುತ್ತಾ ಅವರಿಬ್ಬರು ಕಾಳೆಯವರ ಫಲಿತಾಂಶ ನೋಡಿ ತುಂಬಾ ಖುಷಿಪಟ್ಟು "ಚಲೋ ಪಾಸ ಮಾಡಿದಿ"[೩೦] ಎಂದು ಹರಿಸಿದ್ದನ್ನು ಕಾಳೆಯವರು ನೆನಪಿಸಿ ಕೊಳ್ಳುತ್ತಾರೆ.

ಕಾಳೆಯವರು ಮತ್ತೆ ತಮ್ಮ ನೆನಪಿನ ಬುತ್ತಿಯನ್ನು ಬಿಚ್ಚುತ್ತಾ ಈ ರೀತಿಯಾಗಿ ಹೇಳಿದ್ದಾರೆ. "ನಾವು ಕಲಿಯುವ ಸಂದರ್ಭದಲ್ಲಿ "ಪ್ರದ್ಯುಮ್ನತನ" ಎಂಬ ವಿದ್ಯಾರ್ಥಿ ನಮ್ಮೊಂದಿಗೆ ಕಲಿಯುತ್ತಿದ್ದ. ಆತ ಯಾವಾಗಲೂ ಫಸ್ಟ ರ್‍ಯಾಂಕನಲ್ಲಿ ಪಾಸಾಗುತ್ತಿದ್ದ. ಆತನ ಶಿಕ್ಷಣ ಜೆ.ಜೆ. ಸ್ಕೂಲಿನಲ್ಲಿಯೇ ನಡೆಯುತ್ತಿತ್ತು. ಆತನ ಜೊತೆ ಸ್ಪರ್ಧೆಮಾಡಲು ಆಗಲೇಯಿಲ್ಲಾ. ಆದರೆ ಜಿ.ಎನ್. ಜಾಧವ ಎಂಬ ಇನ್ನೋರ್ವ ವಿದ್ಯಾರ್ಥಿ ಮತ್ತು ನನ್ನ ನಡುವೆ ಯಾವಾಗಲೂ ಸ್ಪರ್ಧೆ ನಡೆಯುತ್ತಿತ್ತು. ಆ ಸಂದರ್ಭದಲ್ಲಿ ನಮ್ಮ ಜೊತೆ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ ೪೦೦ ರಿಂದ ೫೦೦ ಸಂಖ್ಯೆಯ ವರೆಗೆ ಇತ್ತು. ಆದರೆ ನಾವು ಮೂರು ಜನ ಮಾತ್ರ ಮೂರು ಸ್ಥಾನಗಳನ್ನು ಯಾವತ್ತು ಬಿಟ್ಟುಕೊಟ್ಟಿರಲಿಲ್ಲ. ಅಂತಹ ಸ್ಪರ್ಧೆ ನಮ್ಮಲ್ಲಿತ್ತು. ಆದರೆ ಪ್ರದ್ಯುಮ್ನ

೩೦. ವಿ.ಟಿ. ಕಾಳೆಯವರೊಂದಿಗೆ ಸಂದರ್ಶನ ದಿನಾಂಕ ೨೯.೨.೨೦೦೮

ಮಾತ್ರ ಯಾವತ್ತು ತನ್ನ ಮೊದಲ ಸ್ಥಾನವನ್ನು ಬಿಟ್ಟುಕೊಡುತ್ತಿರಲಿಲ್ಲ. ಅಷ್ಟು ಚೆಂದ ವರ್ಕಮಾಡುತ್ತಿದ್ದ ಅತ. ನಾನು ಒಂದು ಸಲ ಸೆಕೆಂಡ ರ್‍ಯಾಂಕನಲ್ಲಿ ಪಾಸಾಗಿದ್ದರೆ ಮತ್ತೊಂದು ಸಲ ಜಿ.ಎನ್. ಜಾಧವ ಸೆಕೆಂಡ ರ್‍ಯಾಂಕನಲ್ಲಿ ಪಾಸಾಗುತ್ತಿದ್ದೆವು. ನಮ್ಮಿಬ್ಬರಿಗೂ ಪ್ರದ್ಯುಮ್ನನನ್ನು ಹಿಂದೆ ಹಾಕಲು ಸಾಧ್ಯವಾಗಲೇ ಇಲ್ಲ"[೩೧] ಎಂದು ತಮ್ಮ ವಿದ್ಯಾರ್ಥಿಜೀವನವನ್ನು ನೆನಪಿಸಿ ಕೊಳ್ಳುತ್ತಾರೆ.

ಜೆ.ಜೆ. ಕಲಾಶಾಲೆಯ ಕಲಾವಾತಾವರಣ

ಜೆ.ಜೆ. ಸ್ಕೂಲಿನ ಕಲಾವಾತಾವರಣ ಬಹಳ ಚೆಂದ ಆ ಕಟ್ಟಡದಲ್ಲಿ ಆಗಿನ ಕಾಲದಲ್ಲಿಯೇ ೮-೧೦ ಸಾವಿರ ವಿದ್ಯಾರ್ಥಿಗಳಿದ್ದರು. ಎಷ್ಟೊಂದು ಕೋರ್ಸುಗಳು ಅಲ್ಲಿ ನಡೆಯುತ್ತಿದ್ದವು. ಆದರೂ ಸೂಜಿ ಬಿದ್ದರೆ ಸಪ್ಪಳವಾಗುವಷ್ಟು ನಿಶಬ್ದತೆ. ಅಲ್ಲಿ ಜನಾನೇ ಇಲ್ಲ ಎನ್ನುವ ಹಾಗೇ ಕಂಡುಬರುತ್ತಿತ್ತು. ಕ್ಲಾಸ್ ಬೋರ ಆದರೆ ಅಲ್ಲಿಯ ವಿದ್ಯಾರ್ಥಿಗಳು ಹೂತೋಟದಲ್ಲಿ ಕುಳಿತು ವಾಯಲೀನ ಬಾರಿಸುತ್ತಾ ಹಾಡು ಹೇಳುವರು. ಅಲ್ಲಿ ಏನು ಮಾಡಿದರೂ ಅದರಲ್ಲಿ ಒಂದು ಆರ್ಟ್ ಕಂಡುಬರುತ್ತಿತ್ತು. ಮಾತನಾಡಿದರೂ ಆರ್ಟ್, ಹಾಡಿದರು ಆರ್ಟ್, ಏನು ಮಾಡಿದರು ಆರ್ಟ್, ಹೀಗೆ ಕಲಾ ವಾತಾವರಣ ಜೆ.ಜೆ. ಸ್ಕೂಲಿನಲ್ಲಿ ಕಂಡುಬರುತ್ತಿತ್ತು. ಈಗಿನ ಯುವಜನಾಂಗ ಬರೆ ತಲೆಹರಟೆ ಮಾಡುತ್ತಾ ಕಾಲಹರಣ ಮಾಡುತ್ತಾರೆ"[೩೨] ಎಂದು ಕಾಳೆಯವರು ಬೇಸರಿಸಿ ಕೊಳ್ಳುತ್ತಾರೆ.

ಕಾಳೆಯವರು ಜೆ.ಜೆ. ಸ್ಕೂಲಿನ ಕಲಾಶಿಕ್ಷಕರ ವ್ಯಕ್ತಿತ್ವವನ್ನು ಹೇಳುತ್ತಾ ಅಲ್ಲಿ ಧೋಪೇಶ್ವರ ಕರ, ಜಾಂಬ್ಬೆಕರ, ಶಂಕರ ಪಲ್ಸಿಕರ್, ಆಡೂರಕರ್, ಅಮೀನಸಾಬ ಕಮಡೋಳಿ, ಟಿ.ಪಿ. ಅಕ್ಕಿ, ದಂಡಾವತಿಮಠ, ಶಿವಾನಂದ ಅಕ್ಕಿ, ವಾಯ್. ನಾಗರಾಜ, ವೈ. ಸುಬ್ರಹ್ಮಣ್ಯಂ ರಾಜು ಇವರೆಲ್ಲಾ ಜೆ.ಜೆ.ಸ್ಕೂಲಿನಲ್ಲಿಯೇ ಇದ್ದು ಕಲಿತವರು. ಆದರೆ ನಾವು ಪರೀಕ್ಷೆಯ ಸಲುವಾಗಿ ಒಂದು ತಿಂಗಳು ಮಾತ್ರ ಅಲ್ಲಿರುತ್ತಿದ್ದೆವು. ನಾವು ಅಲ್ಲಿನ ವಿದ್ಯಾರ್ಥಿಗಳಲ್ಲ; ಆದರೂ ಅಲ್ಲಿನ ಶಿಕ್ಷಕರು ನಮ್ಮಲ್ಲಿ ಭೇದಭಾವವಿಲ್ಲದಂತೆ ಕಲೆಯನ್ನು ಕಲಿಸುತ್ತಿದ್ದರು. ಎಲ್ಲಾ ವಿದ್ಯಾರ್ಥಿಗಳನ್ನು ಜೆ.ಜೆ. ಸ್ಕೂಲ ವಿದ್ಯಾರ್ಥಿಗಳಂತೆ ನೋಡುತ್ತಿದ್ದರು. ಹೀಗಾಗಿ ಅಲ್ಲಿನ ಎಲ್ಲ ಪ್ರಯೋಜನವೂ ನಮಗೆ ದೊರೆಯಿತು"[೩೩] ಎಂದು ಕಾಳೆಯವರು ಅಭಿಮಾನದಿಂದ ಹೇಳುತ್ತಾರೆ.

---

೩೧. ವಿ.ಟಿ. ಕಾಳೆಯವರೊಂದಿಗೆ ಸಂದರ್ಶನ ದಿನಾಂಕ ೨೯.೨.೨೦೦೮

೩೨. ಅದೇ ಸಂದರ್ಶನ ದಿನಾಂಕ ೨೯.೨.೨೦೦೮

೩೩ ಅದೇ ಸಂದರ್ಶನ ದಿನಾಂಕ ೨೯.೨.೨೦೦೮

ಜೆ.ಜೆ. ಸ್ಕೂಲಿನ ಪಠ್ಯಕ್ರಮ ಮತ್ತು ಪರೀಕ್ಷಾ ಪದ್ಧತಿ

ಕಾಳೆಯವರು ಕಲಿಯುವ ಸಂದರ್ಭದಲ್ಲಿ ಜೆ.ಜೆ. ಸ್ಕೂಲಿನ ಪಠ್ಯಕ್ರಮ ಮತ್ತು ಪರೀಕ್ಷಾ ಪದ್ಧತಿ ಈ ರೀತಿಯಾಗಿತ್ತು. ಕಾಳೆಯವರು ಡಿಪ್ಲೋಮಾ ಮೊದಲನೆ ವರ್ಷದಲ್ಲಿ ಸ್ಟಿಲ್‌ಲೈಫ್, ಡಿಸೈನ್, ಮೆಮೋರಿ ಡ್ರಾಯಿಂಗ್, ಪರಸ್ಪೆಕ್ಟಿವ್ ವಿಷಯಗಳು. ಎರಡನೇ ವರ್ಷದಲ್ಲಿ ಫುಲ್ ಫಿಗರ್ ಸ್ಟಡಿ, ಪೋರ್ಟ್ರೇಟ್. ಮೂರನೇ ವರ್ಷದಲ್ಲಿ ಅನಾಟಮಿಸ್ಟಡಿ, ಕಾಂಪೋಜಿಸನ್ ವಿಷಯ, ಅಡ್ವಾನ್ಸ್ ಪೇಂಟಿಂಗನಲ್ಲಿ ನ್ಯೂಡ ಸ್ಟಡಿ, ಟೈಮ್ ಸ್ಕೆಚ್ ಅದರಲ್ಲಿ ನಿರ್ದಿಷ್ಟ ಸಮಯದಲ್ಲಿ ಮಾಡಿ ಮುಗಿಸಬೇಕೆಂಬುದು ಪರೀಕ್ಷೆಯಲ್ಲಿ ಇರುತ್ತಿತ್ತು. ಕಾಳೆಯವರ ಅಂತಿಮ ವರ್ಷದಲ್ಲಿ ವಿಷಯ ಒಂದೇ ಇರುತ್ತಿತ್ತು. ಕಾಂಪೋಜಿಸನ್ ಈ ವಿಷಯದ ಪರೀಕ್ಷೆ ೩೦"x೪೦" ಅಳತೆಯ ಸಂಯೋಜನೆ ೪೦ ದಿನಗಳವರೆಗೆ ನಡೆಯುತ್ತಿತ್ತು. ಈ ೪೦ ದಿನಗಳು ಪೇಂಟಿಂಗ ಮುಗಿಸಲು ಕಡಿಮೆ ಅನಿಸುತ್ತಿತ್ತು. ಎನ್ನುವ ಕಾಳೆಯವರು ಪರೀಕ್ಷೆ ಮೊದಲ ದಿನವೇ ನಾವು ಏನು ಕಾಂಪೋಸ್ ಮಾಡಲು ಹೊರಟಿದ್ದೇವೆಯೋ ಅದರ ಪೂರ್ಣ ಪ್ರಮಾಣದ ಸ್ಕೆಚ್ ರೆಡಿಮಾಡಿ ಕೊಡಬೇಕು ಅದೇ ಅಂತ್ಯ. ಮತ್ತೆ ಮೂರುದಿನದಲ್ಲಿ ಕಲರ್ ಸ್ಕೀಮ್ ವರ್ಕ್ ಮಾಡಿಕೊಡ ಬೇಕು. ಕಲರ್‌ಸ್ಕೀಮ್‌ನಲ್ಲಿ ಹೆಚ್ಚು ಕಡಿಮೆ ಬದಲಾವಣೆ ಮಾಡಬಹುದು. ಆದರೆ ಮೊದಲ ಕೀ ಸ್ಕೆಚ್‌ನ್ನು ಬದಲಾಯಿಸುವಂತಿರಲಿಲ್ಲ. ಹೀಗೆ ಪರೀಕ್ಷೆಯ ಮೊದಲ ದಿನಮಾತ್ರ ನಿಜವಾದ ಪರೀಕ್ಷೆಯಾಗಿತ್ತು. ಇಂತಹ ಒಂದು ಕಟ್ಟುನಿಟ್ಟಿನ ಪರೀಕ್ಷಾ ಪದ್ಧತಿ ಜೆ.ಜೆ. ಸ್ಕೂಲಿನಲ್ಲಿ ಕಂಡುಬರುತ್ತಿತ್ತು"[೩೪] ಎಂದು ಹೇಳುತ್ತಾರೆ.

ಜೆ.ಜೆ. ಸ್ಕೂಲಿನ ಪಠ್ಯಕ್ರಮದಲ್ಲಿ ಪಾಶ್ಚಾತ್ಯ ಪಠ್ಯಕ್ರಮದ ಪದ್ಧತಿಯನ್ನು ಅಳವಡಿಸ ಲಾಗಿತ್ತಾದರೂ, ಭಾರತೀಯ ಶೈಲಿ ಪದ್ಧತಿಗೂ ಅಲ್ಲಿ ಮಹತ್ವವಿತ್ತು. ಪೋರ್ಟೇಟ್ ಸ್ಟಿಲ್‌ಲೈಫ್, ಲ್ಯಾಂಡಸ್ಕೇಪ, ಅನಾಟಮಿ ಇವೆಲ್ಲಾ ಪಾಶ್ಚಾತ್ಯ ಪದ್ಧತಿಯಲ್ಲೇ ಮಾಡಬೇಕಾಗಿತ್ತು. ಲಂಡನ್ ರಾಯಲ್ ಸ್ಕೂಲ್ ಆಫ್ ಆರ್ಟ್‌ನಲ್ಲಿರುವ ಪದ್ಧತಿಯನ್ನೇ ಇಲ್ಲಿ ಅಳವಡಿಸಲಾಗಿತ್ತು. ಆದರೆ ಕಾಂಪೋಜಿಶನ್ ವಿಷಯದಲ್ಲಿ ಮಾತ್ರ ಭಾರತೀಯ ಶೈಲಿಯನ್ನು ಅಳವಡಿಸಲಾಗಿತ್ತು. ಆದರೂ ಕಾಂಪೋಜಿಶನ್ ಅನ್ನು ಪಾಶ್ಚಾತ್ಯ ಪದ್ಧತಿಯಲ್ಲಿ ಮಾಡಬಾರದು ಎಂಬ ನಿರ್ಬಂಧವೇನೂ ಇರಲಿಲ್ಲ. ಈ ವಿಷಯದಲ್ಲಿ ಮಾತ್ರ ಸಂಪೂರ್ಣ ಸ್ವಾತಂತ್ರ್ಯವಿತ್ತು"[೩೫] ಎಂದು ಕಾಳೆಯವರು ಜೆ.ಜೆ. ಕಲಾಶಾಲೆಯ ಶಿಕ್ಷಣ ಪದ್ಧತಿಯನ್ನು ಮನಮುಟ್ಟುವಂತೆ ಹೇಳುತ್ತಾರೆ.

---

೩೪. ವಿ.ಟಿ. ಕಾಳೆಯವರೊಂದಿಗೆ ಸಂದರ್ಶನ ದಿನಾಂಕ ೨೫.೧೧.೨೦೦೯

೩೫. ವಿ.ಟಿ. ಕಾಳೆಯವರೊಂದಿಗೆ ಸಂದರ್ಶನ ದಿನಾಂಕ ೨೫.೧೧.೨೦೦೯

ವಿಜಯ ಕಲಾಮಂದಿರ ಗದಗ

ಭಾರತವು ಬ್ರಿಟಿಷರ ಚಕ್ರಾಧಿಪತ್ಯದಿಂದ ೧೯೪೭ರಲ್ಲಿ ಸ್ವಾತಂತ್ರ್ಯಗೊಂಡಿತು. ಬ್ರಿಟಿಷರ ದಾಸ್ಯದಿಂದ ಮುಕ್ತವಾದ ನಂತರ ಭಾರತದ ತುಂಬೆಲ್ಲ ಸಂತಸ ಸಂಭ್ರಮ ತುಂಬಿತುಳುಕುತ್ತಿದ್ದ ಕಾಲವದು. ಅಂತಹ ಹರ್ಷದಾಯಕವಾದ ವರ್ಷವೇ ಶ್ರೀ ಟಿ.ಪಿ. ಅಕ್ಕಿಯವರು ವಿಜಯ ಕಲಾಮಂದಿರದ ಸ್ಥಾಪನೆ ಮಾಡಿದರು.[೩೬] ಅಕ್ಕಿಯವರು ವೃತ್ತಿಯ ದಾಸ್ಯಕ್ಕೆ ಶರಮು ಹೊಡೆದು ಬೌದ್ಧಿಕ ಸ್ವಾತಂತ್ರ್ಯ ಪಡೆದು ಕಲಾಮಂದಿರ ಕಟ್ಟಲು ಪಣತೊಟ್ಟ ವರ್ಷ. ಮೊದ ಮೊದಲು ವಿದ್ಯಾರ್ಥಿಗಳಿಗೆ ವಸತಿಯ ಒಂದು ಹಂದರವಾಗಿದ್ದ ಸ್ವಲ್ಪ ಜಾಗ ನಾಲ್ವರ ಗೆಳೆಯರ ಬಲ ದೊಂದಿಗೆ ಅದು ಕಲಾಮಂದಿರವಾಗಿ ನಿಲ್ಲಲು ಕಾರಣವಾಯಿತು. ನಗರಸಭೆ ಕಾಲೇಜಿನ ಶಿಕ್ಷಣ ವೃತ್ತಿಯನ್ನು ಬಿಟ್ಟು ಬಂದ ಮೇಲೆ ಟಿ.ಪಿ.ಅಕ್ಕಿಯವರು ಕಲೆಯ ಸರ್ವತೋಮುಖ ಅಭಿವೃದ್ಧಿಗಾಗಿ ಕಲಾ ಮಂದಿರದ ಅಭಿವೃದ್ಧಿಗಾಗಿ ತಮ್ಮನ್ನು ತಾವೇ ಸಂಪೂರ್ಣವಾಗಿ ಅರ್ಪಿಸಿ ಕೊಂಡಂಥವರು. ನಾಡಿನ ಚಿತ್ರಕಲೆಯನ್ನು ಬೆಳೆಸುವುದರೊಂದಿಗೆ ನಮ್ಮ ನಾಡಿನ ಭವ್ಯ ಸಂಸ್ಕೃತಿಯ ಪ್ರತೀಕವಾದ ನೃತ್ಯ, ನಾಟಕ ಸಂಗೀತದಂತಹ ಅಮೂಲ್ಯ ಕಲೆಗಳ ಬಗೆಗೂ ಪಾಠಗಳನ್ನು ಪ್ರಾರಂಭಿಸಿ ಅದನ್ನು ತಿಳಿಸಿಕೊಂಡು ಬಂದರು.

ಸಂಗೀತ, ನೃತ್ಯ, ಚಿತ್ರಕಲೆ, ಶಿಲ್ಪ ಹಾಗೂ ನಾಟಕಗಳಂತಹ ಎಲ್ಲ ಲಲಿತಕಲೆಗಳನ್ನು ಒಂದೇ ಕಡೆ ಕಲಿಸುವಂತಹ ವ್ಯವಸ್ಥೆಯುಳ್ಳ ಒಂದೇ ಸಂಸ್ಥೆಯೆಂದರೆ ವಿಜಯ ಲಲಿತಕಲಾ ಸಂಸ್ಥೆ. ವಿಜಯಕಲಾಮಂದಿರವೆಂದರೆ ಅದೊಂದು ಲಲಿತಕಲೆ ಮಿನಿ ವಿಶ್ವವಿದ್ಯಾಲಯವೇ ಆಗಿದೆ.[೩೭]

ಗದಗ, ಹುಬ್ಬಳ್ಳಿ ಮತ್ತು ಧಾರವಾಡ ಈ ಭಾಗವು ಲಲಿತಕಲೆಗಳ ತವರೂರೆಂದು ಖ್ಯಾತಿ ಪಡಿದಿದೆ. ಹಾಗೆಯೇ ಈ ಭಾಗದಲ್ಲಿಯ ಕಲಾರಸಿಕರು, ಕಲಾಭಿಮಾನಿಗಳು, ಕಲಾಪೋಷಕರು, ಲಲಿತಕಲೆಗಳನ್ನು ವಿಶೇಷವಾಗಿ ಪ್ರೋತ್ಸಾಹಿಸುತ್ತಾ ಬಂದಿದ್ದಾರೆ. ಗದಗಿನ ಈ ಪರಿಸರದಲ್ಲಿ ಗಾನಯೋಗಿ ಪಂಚಾಕ್ಷರಿ ಗವಾಯಿಗಳು ಒಂದು ಕಡೆ ಸಂಗೀತದ ದಾಸೋಹ ನೀಡುತ್ತಿದ್ದರೆ ಮತ್ತೊಂದು ಕಡೆ ಕಲಾಗುರು ಟಿ.ಪಿ. ಅಕ್ಕಿಯವರು ವಿಜಯ ಕಲಾಮಂದಿರವನ್ನು ಸ್ಥಾಪಿಸಿ ಚಿತ್ರಕಲೆಯ ದಾಸೋಹವನ್ನು ಆರಂಭಿಸಿದ್ದರು.[೩೮]

ಕಾಳೆಯವರು ಐದನೇ ಕ್ಲಾಸಿನಲ್ಲಿರುವಾಗ ಇವರ ತಾಯಿ ತೀರಿಕೊಂಡರು. ಆಗ ಇವರ ವಯಸ್ಸು ಕೇವಲ ಹತ್ತು. ಆಗ ಇವರು ಕುಟುಂಬ ಸಮೇತ ಗದಗಿನಲ್ಲಿರುವ ಅಣ್ಣನ ಮನೆಗೆ ಹೋದರು. ಮುಂದಿನ ಶಿಕ್ಷಣ ಇವರ ಅಣ್ಣನ ಆಶ್ರಯದಲ್ಲಿ ನಡೆಯಿತು. ೧೯೪೮ರಲ್ಲಿ ಹೈಸ್ಕೂಲ

---

೩೬. ಡಾ. ಮೋಹನರಾವ್ ಬಿ. ಪಂಚಾಳ, ದೃಶ್ಯನುಭವ, ಪು.೬೩

೩೭. ಅನ್ನದಾನಿ ಹಿರೇಮಠ, ಸಂ. ಸುವರ್ಣ ವಿಜಯ ನೆನಪಿನ ಸಂಚಿಕೆ, ಪು.೩

೩೮. ಡಾ. ಮೋಹನರಾವ್ ಬಿ. ಪಂಚಾಳ, ದೃಶ್ಯನುಭವ, ಪು.೬೩



ಗದುಗಿನ ಮುನ್ಸಿಪಲ್ ಹೈಸ್ಕೂಲ್‌ನಲ್ಲಿ ವಿದ್ಯಾರ್ಥಿ ಎ.ಟಿ.ಕಾಳೆಯವರು
(ನಿಂತಿರುವ 2ನೇ ಸಾಲಿನಲ್ಲಿ ಎಡಗಡೆಯಿಂದ 3ನೇಯವರು, ಕುಳಿತವರಲ್ಲಿ ಕಾಳೆಯವರ
ಗುರುಗಳಾದ ಟಿ.ಪಿ ಅಕ್ಕಿ, ಎಂ.ಎ. ಚೆಟ್ಟಿ, ಮತ್ತು ಸಿ ಎನ್. ಪಾಟೀಲ ಬಲಗಡೆಯಿಂದ 7,8,9ನೇ ಯವರು)



ಗದುಗಿನ ಪಠ್ಯಪುಸ್ತಕ ಪ್ರಕಾಶಕರೊಂದಿಗೆ ಎ.ಟಿ. ಕಾಳೆಯವರು
(ನಿಂತವರಲ್ಲಿ ಬಲಗಡೆಯಿಂದ 2ನೇಯವರು)

ಮೆಟ್ಟಿಲನ್ನು ಕಾಳೆಯವರು ಏರಿದರು. ಅಲ್ಲಿ ಮನೆ ಪಕ್ಕದಲ್ಲಿಯೇ "ಮುನವಳ್ಳಿ" ಎಂಬ ಕಲಾವಿದರ ಸಂಪರ್ಕದಿಂದಾಗಿ ಇವರಲ್ಲಿ ಇರುವ ಕಲಾವಿದನು ಚಿಗುರೊಡೆಯಲು ಕಾರಣವಾಯಿತು. ಮುನವಳ್ಳಿ ಯವರೇ ಕಾಳೆಯವರನ್ನು ಅಕ್ಕಿ ಮಾಸ್ತರರಿಗೆ ಪರಿಚಯಿಸಿದರು. ಇಲ್ಲಿಂದ ಕಾಳೆಯವರ ಕಲಾ ಬದುಕಿನ ಪಯಣ ಪ್ರಾರಂಭವಾಯಿತು ಎನ್ನಬಹುದು. ಅಕ್ಕಿ ಮಾಸ್ತರರು ೧೯೪೭ರಲ್ಲಿ ವಿಜಯ ಕಲಾಮಂದಿರ ಎಂಬ ಹೆಸರಿನ ಕಲಾಶಾಲೆ ಪ್ರಾರಂಭಿಸಿದ್ದರು. ಪ್ರಾರಂಭದಲ್ಲಿ ಈ ಶಾಲೆಯಲ್ಲಿ ಕೇವಲ ನಾಲ್ಕು ಜನ ವಿದ್ಯಾರ್ಥಿಗಳಿದ್ದರು. ಅದರಲ್ಲಿ ಕಾಳೆಯವರು ಒಬ್ಬರು. ಮೊದಲಿಗೆ ಟಿ.ಪಿ. ಅಕ್ಕಿಯವರು ಗದಗಿನ ಮುನ್ಸಿಪಲ್ ಹೈಸ್ಕೂಲಿನಲ್ಲಿ ಡ್ರಾಯಿಂಗ್ ಟೀಚರ ಆಗಿದ್ದರು. ಆರ್ಟಸ್ಕೂಲ್ ಮಾಡಬೇಕೆಂದು ಅಂದುಕೊಂಡು ೧೯೪೭ರಲ್ಲಿ ಆರ್ಟ್‌ಸ್ಕೂಲ್ ಪ್ರಾರಂಭಿಸಿದರು. ಆಗಿನ ಕಾಲದಲ್ಲಿ ಗದಗ ಒಂದು ವ್ಯಾಪಾರ ಸ್ಥಳವಾಗಿತ್ತು. ಅಲ್ಲಿ ಕಲೆಯನ್ನು ಪ್ರೋತ್ಸಾಹಿಸುವವರು ಕಡಿಮೆ. ಇಂತಹದರಲ್ಲಿ ಕಲಾಶಾಲೆ ತೆರೆಯುವುದೇ ಒಂದು ದೊಡ್ಡ ಸಹಾಸವಾಗಿತ್ತು. ಅದರಲ್ಲಿಯೂ ನಾಲ್ಕಾರು ವಿದ್ಯಾರ್ಥಿಗಳಿಂದ ಪ್ರಾರಂಭವಾದ ಈ ಶಾಲೆಯಲ್ಲಿರುವ ವಿದ್ಯಾರ್ಥಿ ಗಳೆಲ್ಲಾರೂ ಆರ್ಥಿಕ ಸಂಕಷ್ಟದಲ್ಲಿದ್ದ ಬಡವರು. ಇವರ ಹತ್ತಿರ ಡ್ರಾಯಿಂಗ್ ಸೀಟ, ಪೆನ್ಸಿಲ್, ಕಲರ್ ಮುಂತಾದ ಕಲಾ ಸಾಮಾಗ್ರಿಗಳನ್ನು ತೆಗೆದುಕೊಳ್ಳಲೂ ಹಣವಿರಲಿಲ್ಲ. ಇವರೆಲ್ಲರದೂ ಒಂದೇ ತರಹ ಪರಿಸ್ಥಿತಿ. ಎಲ್ಲಾರು ಬಡ ಹುಡುಗರೆ, ಅಕ್ಕಿ ಮಾಸ್ತರರೇ ಎಷ್ಟೊ ಸಲ ಈ ಎಲ್ಲಾ ಸಾಮಾಗ್ರಿಗಳನ್ನೂ ತೆಗೆದುಕೊಳ್ಳಲು ದುಡ್ಡುಕೊಡುತ್ತಿದ್ದರು. ವರ್ಕಮಾಡಲಿಲ್ಲವೆಂದರೆ ಬಯ್ಯುತ್ತಿದ್ದರು. "ಪೇಪರ ಐತಿ, ಕಲರ ಐತಿ, ತೋಗೋಬೇಕು ವರ್ಕಮಾಡಬೇಕು" ಎಂದು ಬಯ್ಯುತ್ತಿದ್ದರು ಎಂದು ನೆನಪಿಸಿಕೊಳ್ಳುವ ವಿ.ಟಿ. ಕಾಳೆಯವರು ಈ ಸಂದರ್ಭದಲ್ಲಿ ದಂಡಾವತಿ ಮಠರನ್ನು ನೆನಪಿಸಿ ಕೊಳ್ಳಲು ಮರೆಯಲ್ಲಾ, ದಂಡಾವತಿ ಮಠರ ಬಗ್ಗೆ ಹೇಳುತ್ತಾ "ದಂಡಾವತಿ ಮಠರು ಕೂಡ ಹಾಗೇನೆ, ಮುಂಬಯಿನಲ್ಲಿ ಇರುವಾಗ ಅವರೇ ಪೇಪರ, ಬ್ರಶ್, ಕಲರಕೊಟ್ಟು "ವರ್ಕ್‌ಮಾಡು ಖಾಲಿಮಾತ್ರ ಕುಳಿತು ಕೊಳ್ಳಬೇಡ" ಎನ್ನುತ್ತಿದ್ದರು.[೩೯] ಅಂತಹ ಮಹಾನ್ ವ್ಯಕ್ತಿಗಳು ಆಗಿನ ಕಾಲದಲ್ಲಿದ್ದರು ಎಂದು ಕಾಳೆಯವರು ಹೃದಯತುಂಬಿ ಸ್ಮರಿಸುತ್ತಾರೆ.

"ಕಾಳೆಯವರಿಗೆ ಜೆ.ಜೆ. ಸ್ಕೂಲಿಗೆ ಹೋಗಿ ಬರುವ ಖರ್ಚನ್ನೆಲ್ಲಾ ಇವರ ಶಾಲೆಯ ಶಿಕ್ಷಕರು ಹಣ ಸಂಗ್ರಹಮಾಡಿ ಕಳುಹಿಸುತ್ತಿದ್ದರು. ನಂತರ ಅಕ್ಕಿಯವರು "ಯಾರು ಕೊಡುವುದೇನು ಬೇಡ, ನಾನೇ ದುಡ್ಡು ಕೊಡುತ್ತೇನೆಂದರು". ಅದರಂತೆ ಪ್ರತಿವರ್ಷವೂ ಅವರೇ ಕಾಳೆಯವರಿಗೆ ಆರ್ಥಿಕ ಸಹಾಯ ಮಾಡುತ್ತಿದ್ದರು. ಇನ್ನೊಬ್ಬರು ಜಯಭಾರತ ಕ್ಯಾಪ್‌ಮಾರ್ಟ್ ಮಾಲೀಕರಾದ ಶ್ರೀ ವೀರಪ್ಪನವರ ಹತ್ತಿರ ಕಾಳೆಯವರ ಅಣ್ಣ ಕೆಲಸಮಾಡುತ್ತಿದ್ದರು. ಅವರು ಕಾಳೆಯವರನ್ನು

೩೯. ವಿ.ಟಿ. ಕಾಳೆಯವರೊಂದಿಗೆ ಸಂದರ್ಶನ ದಿನಾಂಕ ೨೯.೨.೨೦೦೮

ಕುರಿತು ಇನ್ನು ಮುಂದೆ ನಮ್ಮ ಮನೆಯಲ್ಲಿಯೇ ಇದ್ದು ಕಲಿ; ಎಂದು ಹೇಳಿದರು. ಕಾಳೆಯವರ ಮೂರನೇ ವರ್ಷದ ಕೋರ್ಸ್ ವೀರಪ್ಪನವರ ಆರ್ಥಿಕ ಸಹಾಯದಿಂದಲೇ ಪೂರ್ಣಗೊಂಡಿತ್ತು. "ಅಂತಹ ಒಳ್ಳೆಯ ನಿಸ್ವಾರ್ಥ ಜನ ಆಗಿನ ಕಾಲದಲ್ಲಿದ್ದರು"[೪೦] ಎನ್ನುವ ಕಾಳೆಯವರು ತಮ್ಮ ಕಷ್ಟದ ದಿನಗಳಲ್ಲಿಯೂ ಕಲಾಶಿಕ್ಷಣವನ್ನು ಪೂರೈಸಿ ಯಶಸ್ವಿಯಾಗಿದ್ದನ್ನು ಕಾಣಬಹುದು.

ಕಾಳೆಯವರು ಗದಗಿನ ವಿಜಯಕಲಾ ಮಂದಿರದಲ್ಲಿ ಕಲಿಯುವ ಸಂದರ್ಭದಲ್ಲಿ ಒಂದು ಹಾಸ್ಯ ಸನ್ನಿವೇಶವನ್ನು ಈ ರೀತಿಯಾಗಿ ನೆನಪಿಸಿಕೊಳ್ಳುತ್ತಾರೆ. "ನಮಗೆ ಲೈಫ್‌ಸ್ಟಡಿ ಮಾಡ ಬೇಕೆಂದರೆ ದೊಡ್ಡ ಸಮಸ್ಯೆ ಎದುರಾಗುತ್ತಿತ್ತು. ಅಕ್ಕಿ ಮಾಸ್ತರರು "ಹೋಗಿ ಯಾರಾದರು ಹೆಣ್ಣುಮಕ್ಕಳನ್ನು ಕರೆದುಕೊಂಡು ಕೂಡಿಸಿ ಸ್ಟಡಿ ಮಾಡಿ" ಅನ್ನುತ್ತಿದ್ದರು. ಆಗ ಗದಗಿನಂತಹ ಊರಲ್ಲಿ ಯಾವ ಹೆಣ್ಣುಮಕ್ಕಳು ಬರುತ್ತಿರಲಿಲ್ಲ. ಅಲ್ಲದೇ ಕರೆಯಲಿಕ್ಕೆ ಹೋದ ನಮಗೆ "ನಮ್ಮ ಫೋಟೋ ಯಾಕೇ ಬೇಕು ನಿಮಗೆ" ಅಂದು ಬೈದು ಕಳುಹಿಸುತ್ತಿದ್ದರು. ಅಲ್ಲದೆ "ಅದೆಂತಹ ಶಾಲಿ ನಡಸ್ತನಾ ಅಕ್ಕಿ ಮಾಸ್ತರ? ಹೆಣ್ಣು ಮಕ್ಕಳನ ಕೂಡಿಸಿ ಫೋಟೋ ತೆಗಿತ್ತಾನ?" ಎಂದು ಮೂದಲಿಸುತ್ತಿದ್ದಂತಹ ಮನಸ್ಥಿತಿ ಉಳ್ಳವರು ಇದ್ದರು. ಇಂತಹ ಸನ್ನಿವೇಶದಲ್ಲಿ ನ್ಯೂಡ್ ಸ್ಟಡಿ ಮಾಡುವುದು ದೂರಿನ ಮಾತು"[೪೧] ಎನ್ನುವ ಕಾಳೆಯವರು ತಾವು ಮುಂಬಯಿ ಜೆ.ಜೆ. ಸ್ಕೂಲಿನಲ್ಲಿ ನ್ಯೂಡ ಸ್ಟಡಿ ಮಾಡಿರುವುದನ್ನು ಈ ರೀತಿಯಾಗಿ ನೆನಪಿಸಿಕೊಳ್ಳುತ್ತಾರೆ.

ಮುಂಬಯಿ ಜೆ.ಜೆ.ಸ್ಕೂಲಿನಲ್ಲಿ ಪರೀಕ್ಷಾ ಸಂದರ್ಭದಲ್ಲಿ ಲೈಫ್‌ಸ್ಟಡಿ ವಿಷಯದ ಪರೀಕ್ಷೆ ನಾಲ್ಕು ದಿನ ನಡೀತಿತ್ತು. ಅಲ್ಲಿ ಹುಡುಗರು-ಹುಡುಗಿಯರು ಮುದುಕರು, ಮಕ್ಕಳು, ಬೇರೆ ಬೇರೆ ದೇಶದವರು, ನೀಗ್ರೋಗಳು ಕೂಡ ಅಲ್ಲಿ ರೂಪದರ್ಶಿಗಳಾಗಿ ಕುಳಿತಿರುತ್ತಿದ್ದರು. ಈ ಕೆಲಸಕ್ಕಾಗಿಯೇ ಅವರನ್ನು ನೇಮಿಸಲಾಗಿತ್ತು. ಅವರಿಗೆ ಇಂತಿಷ್ಟು ಸಂಬಳ ಅಂತಾ ಕೊಡಲಾಗುತ್ತಿತ್ತು. ಸಾಮಾನ್ಯವಾಗಿ ಎಲ್ಲಾರ ದೇಹದ ರಚನೆಯ ವೈವಿಧ್ಯತೆಯನ್ನು ಅಭ್ಯಾಸಮಾಡಲು ಈ ನ್ಯೂಡಸ್ಟಡಿಯಿಂದ ಸಾಧ್ಯವಾಗುತ್ತದೆ. ಇದು ಪಾಶ್ಚಾತ್ಯ ಕಲಿಕಾ ಪದ್ಧತಿ. ಈಗಲೂ ಕೂಡ ಜೆ.ಜೆ.ಸ್ಕೂಲಿನಲ್ಲಿ ಈ ಪದ್ಧತಿಯಿದೆ. ಈ ರೀತಿಯಾಗಿ ನ್ಯೂಡ್ ಸ್ಕೆಚ್‌ನ ಆಧಾರದಿಂದ ಕಂಪೋಜಿಶನ್ ಮಾಡಲಾಗುತಿತ್ತು. ಆದರೆ ನಮ್ಮ ಕರ್ನಾಟಕದಲ್ಲಿ ಇವತ್ತಿಗೂ ಈ ಪದ್ಧತಿ ತರಲೂ ಸಾಧ್ಯವಾಗಿಲ್ಲ"[೪೨] ಎನ್ನುವ ಕಾಳೆಯವರು ಎರಡು ಪದ್ಧತಿಗಳ ನಡುವೆಯಿರುವ ವೈರುಧ್ಯವನ್ನು ಎತ್ತಿ ತೋರಿಸುತ್ತಾರೆ.

---

೪೦. ಅದೇ. ಸಂದರ್ಶನ ದಿನಾಂಕ ೨೯.೨.೨೦೦೮

೪೧. ವಿ.ಟಿ. ಕಾಳೆಯವರೊಂದಿಗೆ ಸಂದರ್ಶನ ದಿನಾಂಕ ೨೯.೨.೨೦೦೮

೪೨. ಅದೇ ಸಂದರ್ಶನ ದಿನಾಂಕ ೨೯.೨.೨೦೦೮

ಕಾಳೆಯವರು ಗದಗಿನಲ್ಲಿ ತಮ್ಮ ಬಾಲ್ಯಸ್ನೇಹಿತರನ್ನು ಕುರಿತು ಈಗಲೂ ನೆನಪಿಸಿ ಕೊಳ್ಳುತ್ತಾರೆ. ಎಚ್.ಎನ್. ಹರಿಬಲ್(ಇವರು ಕಾಳೆಯವರ ಬಾಲ್ಯ ಸ್ನೇಹಿತ) ಕೋಟಿ, ಹಂದಿಗೋಳ (ಇವರು ಕಾಳೆಯವರ ಬಾಲ್ಯ ಸ್ನೇಹಿತ ಉಪನ್ಯಾಸಕರು) ಎಚ್.ಎನ್. ಹೂಗಾರ, ಸದಾಶಿವ ಹಿರೇಮಠ, ಸಾವಿತ್ರಮ್ಮ, ರಾಚಪ್ಪ ಟೆಂಗಿನಕಾಯಿ, ವಾಚೀದಮಠ,(ಚಿತ್ರಕಲಾವಿದ) ಎಸ್.ಎಚ್. ಹಿರೇಮಠ, ಎಸ್.ಎನ್. ಪಾಟೀಲ, ಕೊಟ್ಟೂರು, ಮಹಾದೇವಿ, ಸಾವಿತ್ರಮ್ಮ ಬಾಲ್ಯದ ಸ್ನೇಹಿತರು ಇವರೆಲ್ಲಾ ಕಾಳೆಯವರ ಸ್ನೇಹ ಬಳಗ" ನಾವೆಲ್ಲಾ ಸೇರಿ ನಾಟಕ ಮಾಡುತ್ತಿದ್ದಿವಿ". ನನಗೆ ತುಂಬಾ ಒಳ್ಳೆ ಸ್ನೇಹಿತರಿದ್ದರು"[೪೩] ಎನ್ನುತ್ತಾರೆ ಕಾಳೆಯವರು. ಕಾಳೆ ಯವರನ್ನು ಅವರ ಸ್ನೇಹಿತರೆಲ್ಲ ವೆಂಕಣ್ಣಯೆಂದೇ ಸಂಭೋದಿಸುತ್ತಿದ್ದರು. ಮತ್ತು ಗದಗಿನ ಅ.ನ.ಕೃ. ಎಂದೇ ಕರೆಯುತ್ತಿದ್ದರು. ನೋಡಲು ಅ.ನ.ಕೃ. ತರಹದ ಹೋಲಿಕೆ ಇರುವುದರಿಂದ ಹಾಗೇ ಕರೆಯುತ್ತಿದ್ದರು"[೪೪] ಎಂದು ಬಾಲ್ಯ ಸ್ನೇಹಿತೆ ಸಾವಿತ್ರಿಯವರು ಹೇಳುತ್ತಾರೆ.

ನಾಟಕ ಆಡುವಾಗಿನ ಒಂದು ಹಾಸ್ಯದ ಸಂದರ್ಭ ಕಾಳೆಯವರು ಮತ್ತು ಅವರ ಗೆಳೆಯರ ಟೀಮು ಎಲ್ಲಾ ಸೇರಿ ವರಪ್ರದಾನ ಎಂಬ ನಾಟಕ ತಯಾರು ಮಾಡಿದ್ದರು. ಈ ನಾಟಕದ ಟೀಮು ಧಾರವಾಡದಲ್ಲಿ ನಡೆಯುವ ಸ್ಪರ್ಧೆಗೆ ಹೋಯಿತು. ಅಲ್ಲಿ ಪ್ರಖ್ಯಾತಗರೂಡ ಸದಾಶಿವರಾಯರ ನಾಟಕದೊಂದಿಗೆ ಸ್ಪರ್ಧೆ. ನಾಟಕ ರಂಗಕ್ಕೆ ಆಗ ತಾನೇ ಹೆಜ್ಜೆ ಇಟ್ಟಿದ್ದರು. ನಾಟಕವನ್ನು ನೋಡಲು ಡಾ. ದ.ರಾ. ಬೇಂದ್ರೆ, ವಿ.ಕೃ. ಗೋಕಾಕ ಬಂದಿದ್ದರು. ಅವರೇ ಈ ಸ್ಪರ್ಧೆಯ ತೀರ್ಪುಗಾರರು. ನಾಟಕ ಆರಂಭವಾಯಿತು. ನಾಟಕದ ಸನ್ನಿವೇಶವೊಂದರಲ್ಲಿ ಹಕ್ಕಬುಕ್ಕ ಇಬ್ಬರು ಕುರಬರ ವೇಷ ತೊಟ್ಟು ಕುರುಬರೊಂದಿಗೆ ಕುಣಿಯುತ್ತಿರುವ ಸನ್ನಿವೇಶ. ಗದಗಿನವರಾದ ಕೆ.ಪಿ. ರಂಘುಪ್ಪ ಎಂಬ ಕಾಳೆಯವರ ಸ್ನೇಹಿತನೊಬ್ಬರು ಯಾರಿಗೂ ಹೇಳದೆ, ವೇದಿಕೆಯ ಮೇಲೆ ಕುಣಿಯುವವರನ್ನು ನೋಡಿ ಹುರುಪು ಬಂದು ತಾವು ಹೋಗಿ ಕುಣಿಯಲು ಪ್ರಾರಂಭಿಸಿದರು. ಅವರು ಪ್ಯಾಂಟ ಮೇಲೆ ಕಂಬಳಿ ಹೊದ್ದು ಕೊಂಡಿದ್ದರು. ಅವರು ಯಾರು ಎಂಬುದು ಕಾಳೆಯರಿಗೆ ನಾಟಕ ಮುಗಿದ ಮೇಲೆನೇ ಗೊತ್ತಾಗಿದ್ದು. ಮರುದಿನ ವಾರ್ತಾ ಪತ್ರಿಕೆಯಲ್ಲಿ ವಿ.ಕೃ. ಗೋಕಾಕ್ ಅವರು "ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಕುರುಬರು ಪ್ಯಾಂಟ ಹಾಕಿಕೊಳ್ಳುತ್ತಿದ್ದರು ಎಂಬ ಉಲ್ಲೇಖ ಎಲ್ಲಿ ಇಲ್ಲ ಎಂದು ಬರೆದರಂತೆ"[೪೫]. ಈ ಹಾಸ್ಯದ ಘಟನೆಯನ್ನು ನೆನಪಿಸಿಕೊಂಡು ಕಾಳೆಯವರು ಹಸನ್ಮುಖಿಯಾಗುತ್ತಾರೆ.

---

೪೩. ಅದೇ ಸಂದರ್ಶನ ದಿನಾಂಕ ೨೯.೨.೨೦೦೮

೪೪. ಕಾಳೆಯವರ ಬಾಲ್ಯ ಸ್ನೇಹಿತೆ ಸಾವಿತ್ರಮ್ಮ ಅವರೊಂದಿಗೆ ಸಂದರ್ಶನ ದಿನಾಂಕ ೧೭.೧೧.೨೦೦೯

೪೫. ವಿ.ಟಿ. ಕಾಳೆಯವರೊಂದಿಗೆ ಸಂದರ್ಶನ ದಿನಾಂಕ ೨೭.೬.೨೦೦೯

ಕಾಳೆಯವರ ವೃತ್ತಿ ಜೀವನ

ಕಾಳೆಯವರ ವೃತ್ತಿ ಜೀವನವನ್ನು ಎರಡು ಹಂತಗಳಲ್ಲಿ ಕಾಣುತ್ತೇವೆ. ಒಂದು ತಮ್ಮ ಮಾತೃ ಸಂಸ್ಥೆಯಾದ ಗದಗಿನ ವಿಜಯ ಕಲಾಮಂದಿರ. ಎರಡು ಸಂಡೂರಿನ ರೆಸಿಡೆನ್ಸಿಯಲ್ ಸ್ಕೂಲ್‌ನಲ್ಲಿ ಕಳೆದ ವೃತ್ತಿ ದಿನಗಳು ಎಂದು ಹಂತಗಳನ್ನಾಗಿ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ.

ಕಾಳೆಯವರು ತಮ್ಮ ಕಲಾ ಶಿಕ್ಷಣ ಪಡೆದ ಮಾತೃಸಂಸ್ಥೆಯಾದ ವಿಜಯ ಕಲಾಮಂದಿರದಲ್ಲಿ ೧೯೫೨ರಿಂದ ೧೯೬೪ರ ವರೆಗೆ ಸೇವೆಸಲ್ಲಿಸಿದರು. ಕಾರಣಾಂತರಗಳಿಂದ ಸಂಡೂರಿಗೆ ಬಂದು ನೆಲಿಸಿದ ಕಾಳೆಯವರು ಸಂಡೂರಿನ ವಸತಿ ಶಾಲೆಯಲ್ಲಿ ೧೯೬೪ರಿಂದ ೧೯೯೨ರ ವರೆಗೆ ಕಲಾ ಶಿಕ್ಷಕರಾಗಿ ಸುಧೀರ್ಘ ಸೇವೆ ಸಲ್ಲಿಸಿ ನಿವೃತ್ತಿರಾದರು. ಕಲಾಶಿಕ್ಷಕರಾಗಿ ಕಾಳೆಯವರು ಅಸಂಖ್ಯಾತ ವಿದ್ಯಾರ್ಥಿಗಳನ್ನು ಪಡೆದುಕೊಂಡಿದ್ದು ದೇಶ-ವಿದೇಶಗಳಲ್ಲಿ ನೆಲೆಸಿದ್ದಾರೆ ಅಲ್ಲದೆ ವಿದ್ಯಾರ್ಥಿಗಳು ಹೆಸರಾಂತ ಕಲಾವಿದರಾಗಿ ಪ್ರಸಿದ್ಧಿಯನ್ನು ಪಡೆದಿದ್ದಾರೆ.

ವಿಜಯ ಕಲಾಮಂದಿರ ಗದಗ

ಕಾಳೆಯವರು ಮುಂಬಯಿಯಲ್ಲಿ ನಡೆಯುತ್ತಿದ್ದ ಪೆಯಿಂಟಿಂಗ್‌ನಲ್ಲಿಯ ವಿವಿಧ ಪರೀಕ್ಷೆಗಳನ್ನು ರ‍್ಯಾಂಕ್ ಸಹಿತ ಪಾಸಾದಾಗ ವಿಜಯ ಕಲಾಮಂದಿರದ ಪ್ರಾಚಾರ್ಯರಾಗಿದ್ದ ಅಕ್ಕಿಯವರಿಗೆ ಈ ವಿದ್ಯಾರ್ಥಿಯ ಪ್ರತಿಭೆಯನ್ನು ಕಂಡು ಅಚ್ಚರಿಯಾಯಿತು. ಕೂಡಲೇ ಕಾಳೆಯವರನ್ನು ಕರೆದು ತಮ್ಮ ಕಲಾಮಂದಿರದಲ್ಲಿ ಅವರಿಗೆ ಶಿಕ್ಷಕರ ಹುದ್ದೆ ನೀಡಿದರು. ೧೯೫೨ರಲ್ಲಿ ವಿ.ಟಿ.ಕಾಳೆ ಅವರು ತಮ್ಮ ನಾಲ್ಕನೆ ವರ್ಷದ ಅಂದರೆ ಅಡ್ವಾನ್ಸ್ ಪೇಂಟಿಂಗ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಪ್ರಯುಕ್ತ ಕಲಾಶಾಲೆಯ ಶಿಕ್ಷಕ ಸಿಬ್ಬಂದಿಗೆ ಸೇರಿಕೊಂಡರು. ಅಕ್ಕಿಯವರು ತಮ್ಮ ಸಿಬ್ಬಂದಿಯ ಗಾತ್ರವನ್ನು ಹೆಚ್ಚಿಸಿದರು. ಶ್ರೀ ಸಿ.ಎಸ್. ಪಾಟೀಲ ಪ್ರಿನ್ಸಿಪಾಲರಾಗಿಯೂ ಶ್ರೀ ಎಂ.ಎ. ಚೆಟ್ಟಿಯವರು ಉಪ ಪ್ರಿನ್ಸಿಪಾಲರಾಗಿಯೂ ನೇಮಕ ಗೊಂಡರಲ್ಲದೇ ಶ್ರೀ ವಿ.ಟಿ. ಕಾಳೆ, ಶ್ರೀ ಎ.ಆಯ್. ಕಮಾನಗಾರ, ಶ್ರೀ ಸಿ.ಟಿ. ರಾಯ್ಕರ ಅವರು ಸಹ ಶಿಕ್ಷಕರಾಗಿ ನೇಮಕಗೊಂಡರು. ಕಾಳೆಯವರು ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದ್ದು, ಮಾತೃಸಂಸ್ಥೆ ವಿಜಯಕಲಾಮಂದಿರ ದಲ್ಲಿಯೇ. ಆಗ ಅವರಿಗೆ ಕೇವಲ ಹದಿನೆಂಟು ವರ್ಷ ಅವರು ತಮ್ಮ ಕಲಾಶಿಕ್ಷಣ ಪೂರೈಸುತ್ತಿದ್ದಂತೆ ವೃತ್ತಿ ಜೀವನಕ್ಕೆ ಪಾದಾರ್ಪಣೆ ಮಾಡಿದ್ದರು. ಹೀಗಾಗಿ ಪ್ರಾರಂಭದಲ್ಲಿ ಇವರಿಗೂ ವಿದ್ಯಾರ್ಥಿಗಳಿಗೂ ವಯಸ್ಸಿನ ಅಂತರ ಕಡಿಮೆ. ವಿದ್ಯಾರ್ಥಿಗಳೊಂದಿಗೆ ಸ್ನೇಹದಿಂದ ಇರುತ್ತಿದ್ದ ಕಾಳೆಯವರು ಕಲಿಕೆಯ ವಿಷಯದಲ್ಲಿ ಶಿಸ್ತಿನ ಸಿಪಾಯಿಯಾಗಿದ್ದರು. ನಿಸರ್ಗಚಿತ್ರಣ, ವ್ಯಕ್ತಿಚಿತ್ರಣ, ಕರಡು ಚಿತ್ರಣ ಲೇಖನ (ಸ್ಕೆಚಿಂಗ್),

ಯೋಜನಾ ಚಿತ್ರಣ ಹೀಗೆ ಎಲ್ಲಾ ತರಹದ ಪ್ರಾಯೋಗಿಕ ಪಾಠಗಳ ಜೊತೆಗೆ ಅವರು ಕಲಾ ಇತಿಹಾಸದ ಬೋಧನೆಯನ್ನು ರಸವತ್ತಾಗಿ ಹೇಳುತ್ತಿದ್ದರು ಎಂಬುದು ಅವರ ವಿದ್ಯಾರ್ಥಿಗಳು ಹೇಳುತ್ತಾರೆ. ಕಲಾವಿದ್ಯಾರ್ಥಿಗಳಿಗೆ ಅವರು ತಿಳಿಸಿಕೊಡುತ್ತಿದ್ದ ವಿಧಾನ ಆಕರ್ಷಕವಾಗಿತ್ತು. ಬಣ್ಣಗಳ ಮಿಶ್ರಣ, ಕುಂಚಗಳ ಬಳಸುವಿಕೆ, ಪ್ಯಾಲೆಟ್ ಉಪಯೋಗಿಸುವಿಕೆ, ಪೆನ್ಸಿಲ್ ಹಿಡಿದು ಸ್ಕೆಚ್ ಮಾಡುವ ವಿಧಿವಿಧಾನಗಳು ವಿದ್ಯಾರ್ಥಿ ಗಳಿಗೆ ಸ್ಫೂರ್ತಿದಾಯಕವಾಗಿದ್ದವು.

ಕಲಾವಿದ ಎಂ.ಜಿ. ವಾಚೇದಮಠರವರು ಕಾಳೆಯರಿಗೆ ಆತ್ಮೀಯ ಸ್ನೇಹಿತರು, ಹಾಗೇ ವಿದ್ಯಾರ್ಥಿ ಕೂಡ. ಕಾಳೆಯವರು ನನಗೆ ಸಂಯೋಜನಾ ಚಿತ್ರ ರಚಿಸಲು ಒಳ್ಳೆ ಮಾರ್ಗದರ್ಶಕ ರಾಗಿದ್ದರು."[೪೬] ಎಂದು ನೆನಪಿಸಿಕೊಳ್ಳುತ್ತಾರೆ.

ಡಾ. ಬಿ.ಕೆ ಹಿರೇಮಠ, ಶ್ರೀ ಬಿ.ಜಿ. ವಾರಿ, ಶ್ರೀ ಮಹದೇವ ಕವಿಶೆಟ್ಟಿ, ಶ್ರೀ ಎಂ.ಆರ್. ಬಾಳೀಕಾಯಿ, ವಸಂತ ಅಕ್ಕಿ, ಶ್ರೀ ಎಂ.ಬಿ. ಪಾಟೀಲ ಈ ಪ್ರಸಿದ್ಧ ಕಲಾವಿದರೆಲ್ಲಾ ಕಾಳೆಯವರ ಶಿಷ್ಯಂದರು. ಇವರೆಲ್ಲಾ ರಾಜ್ಯ, ರಾಷ್ಟ್ರ ಮಟ್ಟದ ಕಲಾವಿದರು "ನನ್ನ ಶಿಷ್ಯರೆಂದು ಹೇಳಿಕೊಳ್ಳಲು ನನಗೆ ಅಭಿಮಾನವೆನಿಸುತ್ತಿದೆ"[೪೭] ಎಂದು ಕಾಳೆಯವರು ಅಭಿಮಾನದಿಂದ ಹೇಳುತ್ತಾರೆ.

ಕಲಾವಿದ ವಸಂತ ಅಕ್ಕಿ, ಇವರು ಟಿ.ಪಿ. ಅಕ್ಕಿಯವರ ಪುತ್ರರು ಮತ್ತು ಕಾಳೆಯವರ ಶಿಷ್ಯ. ಅವರು ಹೇಳುವಂತೆ ನಾನು ವಿಜಯ ಕಲಾಮಂದಿರದಲ್ಲಿ ಕಾಳೆಯವರ ಕೈಯಲ್ಲಿ ಐದು ವರ್ಷ ಕಲಿತ್ತಿದ್ದೇನೆ. ಅವರು ಕಲಿಸುವ ಪದ್ಧತಿ ಪರಿಣಾಮಕಾರಿಯಾಗಿತ್ತು. ನಮಗೆ ಸಲೀಸಾಗಿ ತಿಳಿಯುವ ಹಾಗೇ ಪ್ರಾತ್ಯಕ್ಷಿಕೆ ಮಾಡಿ ತೋರಿಸುತ್ತಿದ್ದರು. ಅವರು ಭಾವಚಿತ್ರಣ ರಚಿಸುವ ಕ್ರಮ ಅದ್ಭುತ ಪರಿಣಾಮಕಾರಿಯಾಗಿರುತ್ತಿತ್ತು. ಭಾವಚಿತ್ರ ರಚಿಸಲು ಅವರು ಅತ್ಯಂತ ಕಡಿಮೆ ಸಮಯವನ್ನು ತೆಗೆದುಕೊಳ್ಳುತ್ತಿದ್ದರು"[೪೮] ಎಂದು ಹೇಳುತ್ತಾರೆ.

ಹೆಸರಾಂತ ಸಂಶೋಧಕರು ಮತ್ತು ಚಿತ್ರಕಲಾವಿದರು ಆದ ಡಾ. ಬಿ.ಕೆ. ಹಿರೇಮಠ ಅವರು ಕಾಳೆಯವರ ಮೆಚ್ಚಿನ ಶಿಷ್ಯರಲ್ಲಿ ಒಬ್ಬರು. ಡಾ. ಬಿ.ಕೆ.ಹಿರೇಮಠ ಅವರು ಹೇಳುವಂತೆ ಕಾಳೆ ಗುರುಗಳು ತುಂಬಾ ಪರಿಶ್ರಮ ಜೀವಿ. ಸುಮಾರು ೫ ೬ವರ್ಷ ಅವರಲ್ಲಿ ಕಲೆಯನ್ನು ಕಲಿತ್ತಿದ್ದೇನೆಂದು ಹೇಳುವ ಅವರು ವಿದ್ಯಾರ್ಥಿಯಾಗಿದ್ದಾಗ ಒಂದು ಪ್ರಸಂಗವನ್ನು ಈ ರೀತಿ ನೆನಪಿಸಿಕೊಳ್ಳುತ್ತಾರೆ. ನಾವು ವಿದ್ಯಾರ್ಥಿಗಳು ದಿನನಿತ್ಯ ೨೫ರಿಂದ ೫೦ ರ್ಯಾಪಿಡ ಸ್ಕೇಚ್ ಮಾಡಿ

೪೬. ವಿ.ಟಿ. ಕಾಳೆಯವರೊಂದಿಗೆ ಸಂದರ್ಶನ ದಿನಾಂಕ ೨೭.೬.೨೦೦೭

೪೭. ಅದೇ ಸಂದರ್ಶನ ದಿನಾಂಕ ೨೭.೬.೨೦೦೭

೪೮. ವಿ.ಟಿ. ಕಾಳೆಯವರೊಂದಿಗೆ ಸಂದರ್ಶನ ದಿನಾಂಕ ೨೭.೬.೨೦೦೭

ತೋರಿಸಬೇಕಾಗಿತ್ತು. ದಿನಾಲು ನಮ್ಮ ಸ್ಕೇಚ್‌ಗಳನ್ನು ಪರಿಶೀಲಿಸುತ್ತಿದ್ದರು. ಕೆಲವರು ತುಂಟ ವಿದ್ಯಾರ್ಥಿಗಳು ಹಿಂದೆ ಯಾವತ್ತೂ ಮಾಡಿದ ಸ್ಕೇಚ್‌ಗಳನ್ನು ತೋರಿಸುತ್ತಿದ್ದರು. ಇದನ್ನು ಕಾಳೆಯವರು ಕಂಡುಹಿಡಿದು ಇವು ಇವತ್ತಿನ ಸ್ಕೇಚ್ ಅಲ್ಲ ಎಂದು ಕಂಡುಹಿಡಿಯುತ್ತಿದ್ದರು. ಅಷ್ಟು ಕಟ್ಟುನಿಟ್ಟು ಅವರಲ್ಲಿ ಕಂಡುಬರುತ್ತದೆ. ಪರಿಶ್ರಮಪಟ್ಟು ಕೆಲಸ ಮಾಡುವ ವಿದ್ಯಾರ್ಥಿಗಳು ಕಾಳೆಯವರಿಗೆ ಪ್ರಿಯವಾಗಿರುತ್ತಿದ್ದರು. ಮುಂದುವರೆದು ಅವರು ಕಾಳೆಯವರ ಕುರಿತು ಹೇಳುವುದೆನೆಂದರೆ "ಅವರು ಸಾಮಾನ್ಯವಾಗಿ ಈಸೇಲ್ ಮೇಲೆ ಕ್ಯಾನ್ವಸ್ ಇರಿಸಿ ವರ್ಕ್ ಮಾಡುತ್ತಿರಲಿಲ್ಲ. ಎಷ್ಟೇ ದೊಡ್ಡ ಕ್ಯಾನ್ವಸವಾದರೂ ಕುಳಿತೇ ವರ್ಕ್ ಮಾಡುವ ಪದ್ಧತಿ ಇವರದು".[೪೯] ಈ ರೀತಿ ಬಿ.ಕೆ. ಹಿರೇಮಠ ಅವರು ತಮ್ಮ ಗುರುಗಳಾದ ಕಾಳೆಯವರ ಕುರಿತು ಹೇಳುತ್ತಾರೆ.

ವೃತ್ತಿ ಜೀವನ ಮನುಷ್ಯನ ಪ್ರಮುಖ ಘಟ್ಟಗಳಲ್ಲಿ ಒಂದು. ಹಾಗೆ ವೃತ್ತಿಯಲ್ಲಿ ಶಿಕ್ಷಕನಾಗಿ ಕೆಲಸ ನಿರ್ವಹಿಸುವುದು ಎಂದರೆ ಅದು ಅತ್ಯಂತ ಜವಾಬ್ದಾರಿಯುತವಾದ ಕೆಲಸ. ಈ ವೃತ್ತಿ ವಿದ್ಯಾರ್ಥಿಗಳ ಬಾಳಿಗೆ ದಾರಿ ದೀಪವಾಗುತ್ತದೆ. ಜಗತ್ತಿಗೆ, ದೇಶಕ್ಕೆ ಸಭ್ಯ ನಾಗರಿಕರಾಗಿ ಬಾಳಲು ಶಿಕ್ಷಕರ ಪಾತ್ರ ಬಹಳ ಮಹತ್ವದ್ದು. ಗುರು ಮನುಷ್ಯನ ಬಾಳಿಗೆ ಎರಡನೇ ತಾಯಿ ಇದ್ದಂತೆ ಎನ್ನುವ ಮಾತುಯಿದೆ. ಗುರುವನ್ನು ದೇವರ ಸಮಾನವೆಂದು ಕರೆಯುತ್ತಾರೆ. ಅದಕ್ಕೆಂದೆ ಗುರುಬ್ರಹ್ಮ ಅಂತೆಲ್ಲಾ ಕರೆಯುತ್ತಾರೆ. ಹೀಗೆ ಗುರುವಿಗೆ ಇನ್ನಿಲ್ಲದ ಮಹತ್ವದ ಸ್ಥಾನವಿದೆ. ಹೀಗೆ ಈ ಸ್ಥಾನಕ್ಕೆ ಸಮರ್ಪಕವಾಗಿ ಕಾಳೆಯವರು ನ್ಯಾಯ ಒದಗಿಸಿಕೊಟ್ಟಿದ್ದಾರೆ ಎಂಬುದು ಅಧ್ಯಯನದಿಂದ ತಿಳಿದುಬರುತ್ತದೆ. ಈ ಸಂದರ್ಭದಲ್ಲಿ ಕಾಳೆಯವರ ಅನೇಕ ವಿದ್ಯಾರ್ಥಿಗಳನ್ನು ಭೇಟಿ ಮಾಡಿ ಸಂದರ್ಶಿಸಲಾಯಿತು.

ಕಾಳೆಯವರ ಮಾರ್ಗದರ್ಶನದಲ್ಲಿ ಹಲವಾರು ವಿದ್ಯಾರ್ಥಿಗಳು ರಾಜ್ಯಮಟ್ಟದಲ್ಲಿ ರ್‍ಯಾಂಕ್‌ಗಳನ್ನು ಹತ್ತು ಹಲವು ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಯಲ್ಲಿ ಕಾಳೆಯವರ ಮಾರ್ಗದರ್ಶನದ ಪಾಲನ್ನು ಮರೆಯುವಂತಿಲ್ಲ. ಒಬ್ಬ ಒಳ್ಳೆಯ ಶಿಕ್ಷಕ, ಉತ್ತಮ ಸ್ನೇಹಿತ, ಉತ್ತಮ ಮಾರ್ಗದರ್ಶಕ. ಅನುಭವಗಳನ್ನು ದಾರೆ ಎರೆಯುವಲ್ಲಿ ತತ್ವಜ್ಞಾನಿಯಂತೆ ಇರಬೇಕು ಎಂಬ ಇಂಗ್ಲೀಷ್ ಗಾದೆ ಮಾತಿಗೆ ವಿ.ಟಿ. ಕಾಳೆಯವರು ನಿದರ್ಶನದಂತಿದ್ದಾರೆ.[೫೦] ಕಾಳೆಯವರು ಕೈಯಲ್ಲಿ ಕಲಿತ ಶಿಷ್ಯಂದಿರು ಇಂದು ನಾಡು ಗುರುತಿಸುವಂತಹ ಸಾಧನೆಯನ್ನು ಮಾಡಿ ಹೆಸರು ಮತ್ತು ಕೀರ್ತಿ ಗಳಿಸಿದ್ದಾರೆ. ಅವರು ಡಾ. ಬಿ.ಕೆ. ಹಿರೇಮಠ, ಎಂ.ಆರ್.

---

೪೯. ಡಾ. ಬಿ.ಕೆ. ಹಿರೇಮಠರೊಂದಿಗೆ (೬೮), ಬಾಗಲಕೋಟೆ, ಸಂದರ್ಶನ ದಿ. ೨೯.೮.೨೦೧೦

೫೦. ವಿ.ಟಿ.ಕಾಳೆ ಲೇ. ಪಾ. ಎಸ್.ಸಿ. ಪಾಟೀಲ, ಪು.೪.

ಬಾಳಿಕಾಯಿ, ಎಂ.ಬಿ. ಪಾಟೀಲ, ವಸಂತ ಅಕ್ಕಿ ಮುಂತಾದವರು. ಗದಗ ವಿಜಯ ಕಲಾಮಂದಿರ ದಲ್ಲಿ ಕಾಳೆಯವರ ಸಹ ಸಿಬ್ಬಂದಿ ವರ್ಗದಲ್ಲಿ ಟಿ.ಪಿ. ಅಕ್ಕಿ ಸಿ.ಎನ್. ಪಾಟೀಲ, ಶಿಲ್ಪಿ, ಕಮಾನಗಾರ ಇದ್ದರು.

ಎಂ.ಆರ್. ಬಾಳಿಕಾಯಿಯವರು ಹೇಳುವಂತೆ ವಿಜಯ ಕಲಾಮಂದಿರದಲ್ಲಿ ಒಳ್ಳೆಯ ಕಲಾ ಶಿಕ್ಷಕ ವೃಂದವಿತ್ತು. ಅವರಲ್ಲಿ ವಿ.ಟಿ. ಕಾಳೆ ಗುರುಗಳು ಒಬ್ಬರು. ಅವರ ಕೃಪೆಯಿಂದಲೇ ನಾನು ಕಲಾವಿದನಾಗಿ ರೂಪುಗೊಳ್ಳಲು ಸಾಧ್ಯವಾಯಿತು. ಗುರುವಿನ ಬಲವೊಂದಿದ್ದರೆ ಏನೆಲ್ಲಾ ಸಾಧಿಸಬಹುದು ಎಂಬುದಕ್ಕೆ ಇದೇ ಸಾಕ್ಷಿ. ಕಾಳೆ ಗುರುಗಳಲ್ಲಿ ಕಲಾಕೃತಿ ರಚಿಸುವಾಗ ಶಿಸ್ತುಬದ್ಧತೆ ಕಂಡುಬರುತಿತ್ತು. ಭಾವಚಿತ್ರ ತುಂಬಾ ಚೆನ್ನಾಗಿ ಮಾಡುತ್ತಿದ್ದರು. ಫಾರ್ಮ ಎಂದರೇನು ಕಲರ್ಸ ಅಂದರೆ ಏನು ಎಂದು ತುಂಬಾ ಚೆನ್ನಾಗಿ ಹೇಳಿಕೊಡುತ್ತಿದ್ದರು''[೫೧] ಎಂದು ಹೇಳುತ್ತಾರೆ.

ಸುಮಾರು ಹನ್ನೆರಡು ವರ್ಷ ವಿಜಯಕಲಾಮಂದಿರದಲ್ಲಿ ಸೇವೆಸಲ್ಲಿಸಿದ ಬಳಿಕ ಅನಿವಾರ್ಯ ಕಾರಣಗಳಿಂದ ಕಾಳೆಯವರು ವಿಜಯ ಕಲಾಮಂದಿರವನ್ನು ತೊರೆದು ಸಂಡೂರಿಗೆ ವಲಸೆ ಬರ ಬೇಕಾಯಿತು. ಇದರಿಂದ ಒಂದು ತೆರನಾದ ಅನಾಥಸ್ಥಿತಿ ಅನುಭವಿಸಿದ ಕಲಾಮಂದಿರದ ವಾತಾವರಣ ಕಾಳೆಯವರ ಸಾಮಿಪ್ಯವನ್ನು ಕಳೆದುಕೊಂಡಿತು. ನಾಡಿನ ಹೆಸರಾಂತ ಕಲಾವಿದರಾದ ಎಂ.ಬಿ. ಪಾಟೀಲರೂ ಕೂಡಾ ಕಾಳೆಯವರ ಶಿಷ್ಯರು. ಎಂ.ಬಿ. ಪಾಟೀಲ, ಉಪ್ಪಿನ ಇತರ ವಿದ್ಯಾರ್ಥಿಗಳು ಹದಿನೈದು ದಿವಸ ಕಾಲೇಜು ಮುಷ್ಕರ ಹೂಡಿದರು. ಶಾಲೆಯನ್ನು ಮುಚ್ಚಿಸಿ ಈ ಕಲಾಸಂಸ್ಥೆಗೆ ಕಾಳೆಯವರು ಪುನಃ ಬರಬೇಕೆಂಬುದು ಅವರ ಮುಷ್ಕರಕ್ಕೆ ಕಾರಣವಾಗಿತ್ತು.

ಸಂಡೂರಿನ ರೆಸಿಡೆನ್ಸಿಯಲ್ ಶಾಲೆಯಲ್ಲಿ ಕಳೆದ ವೃತ್ತಿದಿನಗಳು

೧೯೬೪ರಲ್ಲಿ ವಿಜಯ ಕಲಾಮಂದಿರ ಬಿಟ್ಟು ಸಂಡೂರಿಗೆ ಬಂದ ಕಾಳೆಯವರು ಸುಮಾರು ೨೮ ವರ್ಷಗಳ ಕಾಲ ಸುದೀರ್ಘವಾಗಿ ಸಂಡೂರಿನ ರೆಸಿಡೆನ್ಸಿಯಲ್ ಶಾಲೆಯಲ್ಲಿ ಸೇವೆಸಲ್ಲಿಸಿ ಅಲ್ಲಿಯೇ ನಿವೃತ್ತಿ ಹೊಂದಿದರು. ೧೯೬೪ರಲ್ಲಿ ಕಾಳೆಯವರು ಸಂಡೂರಿಗೆ ಬಂದಾಗ ಇನ್ನು ಮೂವತ್ತು ವರ್ಷದ ತರುಣರಾಗಿದ್ದರು. ಚಿತ್ರಕಲೆಯಲ್ಲಿ ಆಗಲೇ ಸಾಕಷ್ಟು ಪ್ರೌಢರಾಗಿದ್ದರು. ಸ್ವತಃ ಕಲಾವಿದರಾದ ಎಂ.ವೈ. ಘೋರ್ಪಡೆಯವರು ಇವರ ಕಲಾಕೃತಿಗಳನ್ನು ಕಂಡು ಅಚ್ಚರಿ ಗೊಂಡರಲ್ಲದೆ, ಅವರಲ್ಲಿರುವ ಕಲೆಯ ಸತ್ವ ಅರಿತು ಆ ಕೂಡಲೇ ಕಾಳೆಯವರಿಗೆ ಚಿತ್ರಕಲಾ ಶಿಕ್ಷಕ ಹುದ್ದೆ ನೀಡಿದರು.[೫೨]

---

೫೧. ಕಲಾವಿದ ಎಂ.ಆರ್. ಬಾಳಿಕಾಯಿ (೭೧) ಧಾರವಾಡ, ಅವರೊಂದಿಗಿನ ಸಂದರ್ಶನ, ದಿನಾಂಕ ೧೬.೯.೨೦೦೯


೫೨. ಗುರುನಾಥ ಇನಾಮದಾರ, ತರಂಗ, ಮಾಸಪತ್ರಿಕೆ, ೧೯೯೮, ಪು.೬೭



ಸಂಡೂರಿನ ವಸತಿ ಶಾಲೆಯ ಸಹ ಶಿಕ್ಷಕವೃಂದದವರೊಂದಿಗೆ ಕಾಳೆಯವರು
(ನಿಂತವರಲ್ಲಿ ಎರಡನೇ ಸಾಲಿನಲ್ಲಿ ಮೊದಲಿಗರು ಎಡಕ್ಕೆ)



ಸಂಡೂರಿನ ವಸತಿ ಶಾಲೆಯ ಮುಖ್ಯಸ್ಥರಾದ ಎಂ.ವೈ. ಘೋರ್ಪಡೆ ಮತ್ತು ಸಹ ಶಿಕ್ಷಕವೃಂದದವರೊಂದಿಗೆ ಕಾಳೆಯವರು
(ನಿಂತವರಲ್ಲಿ ಮೊದಲನೇ ಸಾಲಿನ ಬಲಗಡೆಯಿಂದ ಆರನೆಯವರು)





ರಾಷ್ಟ್ರಪತಿ ಖೈಷದ್ ಅಲಿಂಖಾನ್ ಅವರಿಗೆ ಎ.ಟಿ.ಕಾಳೆಯವರನ್ನು ಪರಿಚಯಿಸುತ್ತಿರುವ
ಎಂ.ವೈ ಘೋರ್ಪಡೆಯವರು



ಮಹಾಲಕ್ಷ್ಮೀ ಅಕ್ಕ ಮತ್ತು ಸಿಬ್ಬಂದಿಗಳೊಂದಿಗೆ ಎ.ಟಿ. ಕಾಳೆಯವರು

೧೯೬೪ರಲ್ಲಿ ಕಾಳೆಯವರು ಸಂಡೂರಿನ ರೆಸಿಡೆನ್ಸಿಯಲ್ ಶಾಲೆಯಲ್ಲಿ ಸೇವೆಗೆ ತೊಡಗಿದ ಹೊಸತರಲ್ಲಿ ಸಂಡೂರಿನ ಶಿಕ್ಷಣ ಸಮಿತಿಯ ಶ್ರೀ ಛತ್ರಪತಿ ಶಿವಾಸಿ ವಿದ್ಯಾಮಂದಿರದಲ್ಲಿಯೂ ಕೆಲಸ ಮಾಡಬೇಕಾಗಿತ್ತು. ಈ ಸಂಡೂರು ರೆಸಿಡೆನ್ಸಿಯಲ್ ಶಾಲೆಯು ೧೯೫೫ರಲ್ಲಿ ಘೋರ್ಪಡೆ ಯವರಿಂದ ಪ್ರಾರಂಭವಾಗಿ ಇನ್ನೂ ಕಿಶೋರುವಸ್ಥೆಯಲ್ಲಿತ್ತು. ಶ್ರೀಮತಿ ಮಹಾಲಕ್ಷ್ಮಿಯವರು ಮುಖ್ಯೋಪಾಧ್ಯಾನಿಯಾಗಿದ್ದರು. ಕೇವಲ ನಾಲ್ಕು ಜನ ಶಿಕ್ಷಕರು ಒಬ್ಬರು ಕರಕುಶಲ ಶಿಕ್ಷಕರು ಬೆರಳೆಣಿಕೆಯಷ್ಟು ವಿದ್ಯಾರ್ಥಿ ವೃಂದ. "ಪ್ರಾಯಶಃ ಶಿಕ್ಷಕನಾಗಿ ಈ ಶಾಲೆಗೆ ಪರಸ್ಥಳದಿಂದ ಬಂದ ಪ್ರಥಮ ವ್ಯಕ್ತಿ ನಾನೇ ಆಗಿದ್ದೆ" ಎನ್ನುತ್ತಾರೆ ಕಾಳೆಯವರು.

ಕಾಳೆಯವರು ಹೇಳುವಂತೆ "ಸಂಡೂರು ರೆಸಿಡೆನ್ಸಿಯಲ್ ಶಾಲೆಯ ಪ್ರಿನ್ಸಿಪಾಲರಾಗಿದ್ದ ದಿವಂಗತ ಶ್ರೀಮತಿ, ಮಹಾಲಕ್ಷ್ಮಿಯವರು ಕಲಾಪ್ರೇಮಿಗಳಾದ್ದರಿಂದ ನನ್ನ ಕಲಾಕೃತಿಗಳ ರಚನೆ ಕಲಾ ಚಟುವಟಿಕೆಗಳಿಗೆ ಇತರೆಡೆ ಹೋಗುವಾಗಲೆಲ್ಲಾ ಯಾವುದೇ ರೀತಿಯಿಂದ ಅಕ್ಷೇಪಣೆ ಮಾಡದೇ ನನ್ನನ್ನು ಪ್ರೋತ್ಸಾಹಿಸುತ್ತಿದ್ದರು. ನಾನು ನಾಟಕ ಬರೆದು ರಂಗಭೂಮಿಯ ಮೇಲೆ ಪ್ರಯೋಗಿಸುವಾಗಲೂ ಅವರ ಪ್ರೋತ್ಸಾಹ ಇದ್ದೇ ಇರುತ್ತಿತ್ತು. ಸ್ವತಃ ಘೋರ್ಪಡೆಯವರೇ ಸಾಕಷ್ಟು ಸಹಕಾರ ನೀಡಿ ನನ್ನನ್ನು ಪ್ರೋತ್ಸಾಹಿಸುತ್ತಿದ್ದರು. ಹೀಗಾಗಿ ನನ್ನ ಅಭಿವ್ಯಕ್ತಿ ಸ್ವಾತಂತ್ರಕ್ಕೆ ಯಾವುದೇ ರೀತಿಯಾದ ಅಡ್ಡಿ-ಆತಂಕಗಳು ಇಲ್ಲಿ ಬರಲಿಲ್ಲ"[೫೩] ಎಂದು ಹೇಳುತ್ತಾರೆ ಕಾಳೆಯವರು.

ಸಂಡೂರಿನ ರೆಸಿಡೆನ್ಸಿಯಲ್ ಶಾಲೆ ಕಲಾಶಾಲೆಯಲ್ಲ; ಔಪಚಾರಿಕ ಶಿಕ್ಷಣವನ್ನು ನೀಡುವ ಶಾಲೆ. ಔಪಚಾರಿಕ ಶಿಕ್ಷಣದಲ್ಲಿ ಚಿತ್ರಕಲೆಯೂ ಒಂದು ಅಭ್ಯಾಸದ ವಿಷಯ. ಚಿತ್ರಕಲೆಯ ಒಂದು ವಿಷಯದ ಮೇಲೆ ವಿ.ಟಿ. ಕಾಳೆಯವರು ಅರ್ಜಿ ಹಾಕಿ ನೇಮಿಸಲ್ಪಟ್ಟರು. ಅಲ್ಲಿ ಕಾಳೆ ಯವರು ಪೂರ್ಣ ಪ್ರಮಾಣದ ಚಿತ್ರಕಲಾ ಶಿಕ್ಷಕರಾಗಿ ಕೆಲಸ ನಿರ್ವಹಿಸಿದ್ದರೂ ಕೂಡಾ ಶಾಲೆಯ ಇತರೆ ಸಾಂಸ್ಕೃತಿಕ ಚಟುವಟಿಕೆಯಲ್ಲಿ ಇವರು ಮುಖ್ಯವಾಗಿ ಮುಂದೆ ನಿಂತು ನಡೆಸಿಕೊಂಡು ಹೋಗುತ್ತಿದ್ದರು. ಕಾಳೆಯವರು ಶಾಲೆಯ ವಾರ್ಷಿಕೋತ್ಸವದ ಸಂದರ್ಭಗಳಲ್ಲಿ ತಾವೇ ಬರೆದ ಅನೇಕ ನಾಟಕಗಳನ್ನು (ಸಾಮಾಜಿಕ, ರಾಜಕೀಯ, ಗೀತ ರೂಪಕಗಳು ಪೌರಾಣಿಕ ವಿಷಯಗಳ) ಶಾಲೆಯ ಮಕ್ಕಳಿಂದ, ಅಧ್ಯಾಪಕ ವರ್ಗದವರಿಂದ ಆಡಿಸಿ, ಆ ನಾಟಕಗಳಿಗೆ ಬೇಕಾದ ಎಲ್ಲಾ ಸಿದ್ಧತೆಗಳನ್ನು ಇವರೇ ಮುಂದೆ ನಿಂತು ಮಾಡುವಲ್ಲಿ ಸಕ್ರೀಯವಾಗಿ ಪಾತ್ರವಹಿಸುತ್ತಿದ್ದರು. ನಾಟಕದ ನಿರ್ದೇಶನ, ಉಡುಪು ವಿನ್ಯಾಸ, ಮೇಕಪ್, ಸ್ಟೇಜ್ ಡೆಕೋರೇಶನ, ಕೆಲವೊಮ್ಮೆ ಅದರಲ್ಲಿ ತಾವು ನಟರಾಗಿ ಹೀಗೆ ಪ್ರತಿಯೊಂದುರಲ್ಲೂ ಅವರ ಪಾತ್ರ ಅಲ್ಲಿ ಪ್ರಮುಖವಾಗಿ

೫೩. ವಿ.ಟಿ. ಕಾಳೆ, S.R.S. Golden Jubiles Souvenir, ಪು.೮೦

ಕಂಡುಬರುತ್ತಿತ್ತು. ಮಕ್ಕಳ ಎಳೆಯ ಮನಸ್ಸಿನಲ್ಲಿ ಲಲಿತಕಲೆಗಳ ಬಗ್ಗೆ ಗೌರವ, ಪ್ರೀತಿಯನ್ನು ಬಿತ್ತುವ ಮಹತ್ಕಾರ್ಯ ಇವರಿಂದ ಸಾಧ್ಯವಾಯಿತು. ಮನುಷ್ಯನು ಸುಸಂಸ್ಕೃತ ನಾಗರಿಕನಾಗಲು ಲಲಿತಕಲೆಗಳ ಪಾತ್ರ ಬಹಳ ಮುಖ್ಯವಾಗಿ ಕಂಡುಬರುತ್ತದೆ.

ವಿ.ಟಿ. ಕಾಳೆಯವರ ದಾಂಪತ್ಯ ಜೀವನ

ಸುಖಿ ದಾಂಪತ್ಯ ಕಾಳೆಯವರದು, ಇವರ ಮದುವೆಯಾದಾಗ ಕಾಳೆಯವರಿಗೆ ೨೪ ಇವರ ಪತ್ನಿಗೆ ೧೬ ವರ್ಷ ವಯಸ್ಸು ಇವರ ಪತ್ನಿ ಹೇಳುವಂತೆ ಮದುವೆಯಾಗಿ ಐವತ್ತು ವರ್ಷ ಕಳೆದರೂ ಇದುವರೆಗೂ ಯಾವತ್ತು ಮನಸ್ತಾಪ ಬಂದಿಲ್ಲ. ಹದಿನಾರನೇ ವಯಸ್ಸಿಗೆ ನನ್ನ ಮದುವೆಯಾಗಿರುವದರಿಂದ ತವರು ಮನೆಯೂ ಇದೇ. ಗಂಡನ ಮನೆಯೂ ಇದೇ. ಮದುವೆ ಯಾದ ಹೊಸದರಲ್ಲಿ ಕಾಳೆಯವರಿಗೆ ೨೦೦ ರೂ. ಸಂಬಳವಿತ್ತು. ಮುಂದೆ ೪೦೦, ೬೦೦, ೧೦೦೦ ರೂ. ಆಯಿತು. ಬಹಳ ಕಷ್ಟದಲ್ಲಿಯೇ ಜೀವನ ಸಾಗಿತ್ತು. ಈಗ ಪರಿಸ್ಥಿತಿ ಸುಧಾರಿಸಿದೆ. ಇಂತಹ ಕಷ್ಟದಲ್ಲಿಯೂ ನಮ್ಮದು ಹೊಂದಾಣಿಕೆ ಜೀವನ ಎಂದು ಅವರು ಭಾವಪರವಶ ವಾಗುತ್ತಾರೆ.

ಕಾಳೆಯವರು ೧೯೬೦ರಲ್ಲಿ ತಮ್ಮ ತಂದೆಯ ಸಹೋದರಿಯ ಮಗಳ ಜೊತೆ ಮದುವೆ ಯಾದರು. ದಂಪತಿಗಳಿಗೆ ಒಟ್ಟು ಒಂಬತ್ತು ಮಕ್ಕಳು. ವಿದ್ಯಾ, ವೀಣಾ, ಕವಿತಾ, ಅರುಣಾ, ಪೂರ್ಣಿಮಾ ಮತ್ತು ಸ್ನೇಹ ಇವರು ಹೆಣ್ಣುಮಕ್ಕಳು, ಕಾರ್ತಿಕ, ಕಾಶೀನಾಥ, ಶ್ರೀನಾಥ, ಇವರು ಗಂಡುಮಕ್ಕಳು. ಹೀಗೆ ತುಂಬು ಕುಟುಂಬ ಕಾಳೆಯವರದು. ಸಂಡೂರಿನಲ್ಲೆ "ಸ್ನೇಹ ಕುಂಜ" ಎಂಬ ಹೆಸರಿನ ಸ್ವಂತ ಮನೆಯನ್ನು ಹೊಂದಿದ್ದು, ಕಾಳೆಯವರದು ಸರಳ ಜೀವನ ಶೈಲಿ. ಮಕ್ಕಳೆಲ್ಲರೂ, ಉನ್ನತ ಶಿಕ್ಷಣ ಪಡೆದವರು. ಅಲ್ಲದೆ, ಕಾಶಿನಾಥ ಮತ್ತು ಶ್ರೀನಾಥ ಚಿತ್ರಕಲಾ ಕ್ಷೇತ್ರದಲ್ಲಿ ತಮ್ಮನ್ನು ಉತ್ತಮ ಕಲಾವಿದರೆಂದು ಗುರುತಿಸಿಕೊಂಡಿದ್ದಾರಲ್ಲದೆ, ಕಲಾವಿದ ತಂದೆಯ ಪ್ರಭಾವ ಹಾಗೂ ಪ್ರೇರಣೆಯಲ್ಲಿ ಬೆಳೆದವರು. ರಾಜ್ಯದಲ್ಲಿ ಅನೇಕ ಏಕವ್ಯಕ್ತಿ, ಬಹುವ್ಯಕ್ತಿ, ಕಲಾಪ್ರದರ್ಶನ, ಅನೇಕ ಶಿಬಿರಗಳಲ್ಲಿ ಕಲಾಕೃತಿಗಳನ್ನು ರಚಿಸಿ ಕರ್ನಾಟಕದ ಕಲಾಶ್ರೀಮಂತಿಕೆಗೆ ತಮ್ಮ ಪಾಲು ಕೊಡುವುದರಲ್ಲಿ ನಿರತರಾಗಿದ್ದಾರೆ. ಕಾಶಿನಾಥ ಅವರು ಅನೇಕ ಪ್ರಶಸ್ತಿಗಳನ್ನು ಪಡೆದು ಕೊಂಡ ಯುವ ಪ್ರತಿಭೆ. ಮನೆಯ ಗೋಡೆಯ ಮೇಲೆ ಅಲ್ಲಲ್ಲಿ ಒಪ್ಪ ಓರಣವಾಗಿ ಕಾಳೆಯವರ ಕಲಾಕೃತಿಗಳು ಗೋಡೆಯನ್ನು ಅಲಂಕರಿಸಿವೆ. ಅಲ್ಲದೇ ನೋಡುಗರಿಗೆ ಕಲಾಗ್ಯಾಲರಿ ಯೆಂಬಂತೆ ಭಾಸವಾಗುತ್ತದೆ. ಮತ್ತು ಮನೆಯ ಮಹಡಿಯ ಮೇಲೆ ಅವರ ಸ್ಟುಡಿಯೋಯಿದ್ದು,





ಕಾಳೆಯವರ ಸಂಡೂರಿನ ಸ್ನೇಹಕುಂಜ ಮನೆ



ಎ.ಟಿ.ಕಾಳೆಯವರ ಕುಟುಂಬ

ಕಾಳೆಯವರು ಏಕಾಂತವಾಗಿ ಅಲ್ಲಿ ಈಗಲೂ ಕಲಾಕೃತಿಗಳನ್ನು ರಚಿಸುತ್ತಾ ತಮ್ಮದೇ ಲೋಕವನ್ನು ನಿರ್ಮಿಸುತ್ತಿದ್ದಾರೆ.

ಕಾಳೆಯವರ ನಿವೃತ್ತಿ ದಿನಗಳು

ವಿ.ಟಿ. ಕಾಳೆಯವರು ಸಂಡೂರಿನಲ್ಲಿ ೧೯೯೨ರಲ್ಲಿ ತಮ್ಮ ಕಲಾಶಿಕ್ಷಕ ವೃತ್ತಿಯಿಂದ ನಿವೃತ್ತಿ ಹೊಂದಿದರೂ ಮತ್ತೆ ಐದು ವರ್ಷ ಇವರನ್ನು ಘೋರ್ಪಡೆಯವರು ತಮ್ಮ ಸಂಸ್ಥೆಯಲ್ಲಿ ಉಳಿಸಿಕೊಂಡರು. ಈ ಸಂದರ್ಭದಲ್ಲಿ ಘೋರ್ಪಡೆಯವರು ಕಾಳೆಯವರಿಂದ ಅನೇಕ ಕಲಾಕೃತಿಗಳನ್ನು ಮಾಡಿಸಿ ತಮ್ಮ ಅರಮನೆಯಲ್ಲಿ ಸಂಗ್ರಹಿಸಿದ್ದಾರೆ. ಆ ಕಲಾಕೃತಿಗಳು ಅತ್ಯಂತ ಮಹತ್ವದಾಗಿದೆ. ಈಗ ನಿವೃತ್ತಿಯ ನಂತರ ಕಲಾಕೃತಿಗಳನ್ನು ರಚಿಸಲು ನನಗೆ ಹೆಚ್ಚಿನ ಸಮಯ ದೊರಕುತ್ತಿದೆ. ಸೇವೆಯಲ್ಲಿದ್ದಾಗ ದೊರಕುತ್ತಿದ್ದ ಸ್ವಲ್ಪವೇಳೆ ನನ್ನ ಕಲಾಕೃತಿಗಳ ರಚನೆಗೆ ಸಾಕಾಗುತ್ತಿರಲಿಲ್ಲ. ಆದರೆ "ಈಗ ನಾನು ಕಲಾಕೃತಿ ರಚನೆಯಲ್ಲಿ ಸಂಪೂರ್ಣ ತೊಡಗಿಸಿಕೊಂಡಿರವುದರಿಂದ ಸಮಯ ಕಳೆದದ್ದೇ ಗೊತ್ತಾಗುತ್ತಿಲ್ಲ"[೫೪] ಎಂದು ಕಾಳೆಯವರು ಹೇಳುತ್ತಾರೆ.

ಒಬ್ಬ ಸೃಜನಶೀಲ ಕಲಾವಿದನಿಗೆ ವೃತ್ತಿ ಎಂಬುವುದು ತನ್ನ ಸ್ವಂತ ಅಭಿವ್ಯಕ್ತಿಗೆ ತನ್ನ ಭಾವನೆಗಳನ್ನು ಸರಿಯಾದ ಸಮಯಕ್ಕೆ ಸಂದರ್ಭಕ್ಕೆ ಹೊರಗೆ ಹಾಕುವ ನಿಟ್ಟಿನಲ್ಲಿ ದೊಡ್ಡ ತೊಡಕಾಗಿ ಪರಿಣಮಿಸುತ್ತದೆ. ಇದಕ್ಕೆ ಕಾರಣಗಳು ಹಲವು ಇರಬಹುದು. ಒಬ್ಬ ಕಲಾವಿದನಿಗೆ ತನ್ನ ನಿಜವಾದ ಬದುಕು ಆರಂಭವಾಗುವುದೇ ನಿವೃತ್ತಿ ಹೊಂದಿದ ಮೇಲೆ. ಎಷ್ಟೋ ಸಲ ಕಲಾವಿದನಿಗೆ ವೃತ್ತಿ ಎಂಬುವುದು ಅನಿವಾರ್ಯವಾಗಿ ಪರಿಣಮಿಸುತ್ತದೆ. ವೃತ್ತಿಯಲ್ಲಿದ್ದಾಗ ಮಾಡದೇ ಉಳಿದ ಎಷ್ಟೋ ಕೆಲಸ ಕಾರ್ಯಗಳನ್ನು ಒಬ್ಬವ್ಯಕ್ತಿ ನಿವೃತ್ತಿ ಹೊಂದಿದಾಗ ಮಾಡುತ್ತಾನೆ. ಈ ನಿಟ್ಟಿನಲ್ಲಿ ಹೇಳುವುದಾದರೆ ಕಾಳೆಯವರದು ಯಶಸ್ವಿ ನಿವೃತ್ತಿ ಜೀವನ. ಕಾಳೆಯವರು ತಮ್ಮ ನಿವೃತ್ತಿ ಜೀವನವನ್ನು ಸಂತೋಷದಿಂದ ಬರಮಾಡಿಕೊಂಡಿದ್ದಾರೆ ಎಂತಲೇ ಹೇಳಬಹುದು. ನಿವೃತ್ತಿ ನಂತರ ಕಾಳೆಯವರು ಸಂಪೂರ್ಣ ಸ್ವತಂತ್ರ ಕಲಾವಿದನ ಬದುಕು ಸಾಗಿಸುತ್ತಿದ್ದಾರೆ ಮತ್ತು ಹೆಚ್ಚು ಕ್ರಿಯಾಶೀಲರಾಗಲು ನಿವೃತ್ತಿ ಬದುಕು ಅವರಿಗೆ ಅವಕಾಶ ಮಾಡಿಕೊಟ್ಟಿದೆ. ನಿವೃತ್ತಿ ನಂತರವೂ ಕಾಳೆಯವರು ದಿನದ ಪೂರ್ಣ ಅವಧಿ ಕಲಾಕೃತಿಗಳನ್ನು ರಚಿಸುವುದರಲ್ಲಿ, ಇತರೆ ಕಲಾಚಟುವಟಿಕೆಗಳಲ್ಲಿ, ತೊಡಗಿರುತ್ತಾರೆ. ಒಟ್ಟಿನಲ್ಲಿ ಕಾಳೆಯವರು ನಿವೃತ್ತಿ ನಂತರವೆ ನಿಜವಾದ ಬದಕನ್ನು ಕಂಡುಕೊಂಡಿದ್ದಾರೆ.

---

೫೪. ಡಾ. ಎಸ್.ಸಿ. ಪಾಟೀಲ, ವಿ.ಟಿ. ಕಾಳೆ, ಪು.೫

ಕಾಳೆಯವರದು ಸಮಾಜಮುಖಿ ಬದುಕು. ಕಾಳೆಯವರು ಕೇವಲ ತಮ್ಮ ಆತ್ಮ ಸಂತೋಷಕ್ಕಾಗಿ ಕಲಾಕೃತಿಗಳನ್ನು ರಚಿಸಿದ್ದೇ ಇತರರ ಸಂತೋಷವನ್ನು ಗಮನದಲ್ಲಿಟ್ಟು ಅನೇಕ ಕಲಾಕೃತಿಗಳನ್ನು ರಚಿಸಿದ್ದಾರೆ. ಅನೇಕ ಸಂಘ-ಸಂಸ್ಥೆಗಳವರು ಮಠ ಮಾನ್ಯಗಳವರು ಇವರಿಂದ ಅನೇಕ ಕಲಾ ಕೃತಿಗಳನ್ನು ಮಾಡಿಸಿದ್ದಾರೆ; ಮಾಡಿಸುತ್ತಿದ್ದಾರೆ ಕೂಡಾ. ನಿವೃತ್ತಿಯ ನಂತರವೂ ಕಾಳೆಯವರದು ಬಿಡುವಿಲ್ಲದ ಕೆಲಸ.

ಸಂಡೂರಿನ ಯಾವುದೇ ಸಾಂಸ್ಕೃತಿಕ ಚಟುವಟಿಕೆ ಇದ್ದರೂ ಅಲ್ಲಿ ಕಾಳೆಯವರು ಇರುತ್ತಾರೆ. ಅವರ ಮಾರ್ಗದರ್ಶನವಿರುತ್ತದೆ. ಅವರ ಕಲಾತ್ಮಕ ಮನಸ್ಸು ವಿನೂತನವಾಗಿ ಅಲ್ಲಿ ಕೆಲಸ ಮಾಡಿಕೊಂಡಿರುತ್ತದೆ. ಸಮಾಜದ ಜನರೊಂದಿಗೆ ಇರುವ ಇವರ ಒಡನಾಟದಿಂದಾಗಿ ಕಾಳೆಯವರು ತಮ್ಮ ಬದುಕನ್ನು ಹೆಚ್ಚು ಸುಂದರಗೊಳಿಸಿಕೊಂಡಿದ್ದಾರೆ. ಅಲ್ಲದೆ ಹತ್ತು ಹಲವು ಕ್ಷೇತ್ರದ ವಿದ್ವಾಂಸರೊಂದಿಗೆ ಇರುವ ಸ್ನೇಹದಿಂದಾಗಿ ವೈವಿಧ್ಯಮಯವಾದ ಜ್ಞಾನವನ್ನು ಪಡೆದುಕೊಂಡಿದ್ದಾರೆ. ಈ ಜ್ಞಾನದ ಹರವು ಹಲವಾರು ಕ್ಷೇತ್ರಗಳಲ್ಲಿ ಹರಿದು ಬಂದಿದೆ[೫೫] ಎಂಬುದನ್ನು ಕಾಣಬಹುದು.

ಕಾಳೆಯವರ ದಿನಚರಿ ಮತ್ತು ವ್ಯಕ್ತಿತ್ವ

ಕಾಳೆಯವರ ದಿನಚರಿ ಹೀಗೆ ಪ್ರಾರಂಭವಾಗುತ್ತದೆ. ದಿನಾಲು ಐದು ಘಂಟೆಗೆ ಎದ್ದೇಳುವುದು ವಾಕಿಂಗ್ ಹೋಗಿ ಮನೆಹತ್ತಿರವೇ ಇರುವ ಒಂದು ಪುಟ್ಟ ಹೋಟೆಲನಲ್ಲಿ ಟೀ ಕುಡಿಯುವವುದು. ನಂತರ ಬಂದು ಪೇಪರ ಓದುವುದು. ನಂತರ ಪುನಃ ಕಲಾಕೃತಿಗಳನ್ನು ರಚಿಸಲು ಕುಳಿತು ಕೊಳ್ಳುತ್ತಾರೆ. ನಂತರ ಸಾಯಂಕಾಲ ಐದು ಘಂಟೆಗೆ ಸ್ನೇಹಿತರೊಂದಿಗೆ ವಾಯುವಿಹಾರ, ನಂತರ ಮಕ್ಕಳೊಂದಿಗೆ ಮೊಮ್ಮಕಳೊಂದಿಗೆ ಮಾತು, ಕೆರಂಬೋರ್ಡ ಆಡುವುದು. ಹೀಗೆ ೭.೩೦ಕ್ಕೆ ಪ್ರಸಾರವಾಗುವ ಉದಯ ಟಿ.ವಿ.ಯಲ್ಲಿ ಬರುವ ರಂಗೋಲಿ ಧಾರವಾಹಿಯನ್ನು ಮತ್ತು ವಾರ್ತೆಯನ್ನು ತಪ್ಪದೇ ವೀಕ್ಷಿಸಿದ ನಂತರ ಊಟ. ಊಟದಲ್ಲಿ ರೊಟ್ಟಿ, ಮೊಸರು, ಎಂದರೆ ತುಂಬಾ ಇಷ್ಟ. ಬಿಟ್ಟರೆ ಅವಲಕ್ಕಿ ಉಪ್ಪಿಟ್ಟು ಇಷ್ಟ. ಮಂಡಕ್ಕಿ ಖಾರಾ ಮಿರ್ಚಿ ಎಂದರೆ ತುಂಬಾನೆ ಇಷ್ಟ. ಆಗಾಗ ಟೀ ಬೇಕು. ಊಟವಾದ ನಂತರ ಪುನಃ ಕೆಲಸ. ಹೀಗೆ ಕೆಲಸದಲ್ಲಿಯೇ ತುಂಬಾ ಸಮಯವನ್ನು ಕಾಳೆಯವರು ಮೀಸಲಾಗಿಟ್ಟಿರುವುದನ್ನು ಕಾಣುತ್ತೇವೆ. ದಿನಕ್ಕೆ ೮-೧೦ ತಾಸು ಕೆಲಸ ಮಾಡುತ್ತಾರೆ[೫೬] ಎಂದು ಕಾಳೆಯವರ ಧರ್ಮಪತ್ನಿ ಅವರು ವಿವರಿಸುತ್ತಾರೆ.

ನ್ಯೂಸ್ ಪೇಪರಿನಲ್ಲಿ ಪ್ರಕಟಗೊಳ್ಳುವ ಪದಬಂಧ ತುಂಬುವುದು ಅವರ ಮೆಚ್ಚಿನ ಹವ್ಯಾಸ. ಕಾಳೆಯವರಿಗೂ ಅವರ ಮಗಳಿಗೂ ಈ ಪದಬಂಧ ತುಂಬುವುದರಲ್ಲಿ ಸ್ಪರ್ಧೆ ಬೀಳುತ್ತದೆ

೫೫. ಡಾ. ಎಸ್.ಸಿ. ಪಾಟೀಲ, ವಿ.ಟಿ. ಕಾಳೆ, ಪು.೬

೫೬. ಕಾಳೆಯವರ ಪತ್ನಿ ಕಾಶಿಬಾಯಿ (೬೬), ಸಂಡೂರು, ಅವರೊಂದಿಗೆ ಸಂದರ್ಶನ, ದಿನಾಂಕ ೧೯.೨.೨೦೦೯

ಅಂತೆ. ಮಗಳು ಅರುಣಾ ಹೇಳುವ ಪ್ರಕಾರ "ನಾನು ಪದಬಂಧ ತುಂಬಬೇಕು ಎಂದು ಹೊರಡುವಷ್ಟರಲ್ಲಿಯೇ ನಮ್ಮ ತಂದೆ ಅದನೆಲ್ಲಾ ಮುಗಿಸಿಯಿಟ್ಟಿರುತ್ತಾರೆ. ಅಷ್ಟು ಇಷ್ಟ ಅವರಿಗೆ ಪದಬಂಧ ತುಂಬಲು"[೫೭] ಎಂದು ಸಂತೋಷದಿಂದ ಹೇಳುತ್ತಾರೆ. ಸಣ್ಣಪುಟ್ಟ ವಿಷಯದಲ್ಲಿಯೂ ಕೂಡಾ ಅವರ ಆಸಕ್ತಿ ಶ್ರದ್ಧೆ ಎಂತಹದು ಎಂಬುದನ್ನು ಕಾಣಬಹುದು.

ಪೈಜಾಮು ಮೇಲೆ ಜಾಕೇಟ ಜೇಬಿನಲ್ಲಿ ಸದಾ ಸಂಗಾತಿಯಂತೆಯಿರುವ ನಶ್ಯದ ಡಬ್ಬಿ. ಕೂದಲಿಗೆ ಸದಾ ಕಪ್ಪುಬಣ್ಣವನ್ನು ಹಚ್ಚಿರುತ್ತಾರೆ. ಅಚ್ಚುಕಟ್ಟಾಗಿ ಕಾಣಬೇಕು ಎಂಬ ಹಂಬಲ ಅವರಲ್ಲಿ ಕಂಡುಬರುತ್ತದೆ. ಶಿಸ್ತು, ಸಮಯ ಪಾಲನೆ, ಪರಿಶ್ರಮ, ಅಚ್ಚುಕಟ್ಟುತನ, ಕಾಳೆಯವರ ಜೀವನಾಡಿ ಎನ್ನಬಹುದು. ಗಂಭೀರ ಮುಖಭಾವ ಜೊತೆಯಿರುವವರನ್ನು ಸದಾ ಹಾಸ್ಯ ಚಟಾಕಿಯಿಂದ ನಗಿಸುತ್ತಾಯಿರುತ್ತಾರೆ. ಅವರ ಜೊತೆಯಿದ್ದರೆ ಸಮಯ ಹೋಗಿದ್ದೇ ಗೊತ್ತಾಗುವುದಿಲ್ಲ ಎಂಬುದು ಹಲವರ ಅನಿಸಿಕೆ. ಹೀಗೆ ಅತ್ಯಂತ ಸರಳ, ಅವರ ಈ ಸರಳತೆ, ಉಡುಪಿನಲ್ಲಿ ಊಟದಲ್ಲಿ ನಡೆನುಡಿಯಲ್ಲಿ ಪ್ರತಿಯೊಂದರಲ್ಲಿಯೂ ಕೂಡಾ ಕಂಡುಬರುತ್ತದೆ. ಮೃದು ಸ್ವಭಾವ ಅವರದು ಮಕ್ಕಳು-ಮೊಮ್ಮಕ್ಕಳು ಎಂದರೆ ಪ್ರಾಣ ಎಂಬುವುದು ಅಧ್ಯಯನದ ಅವಧಿಯಲ್ಲಿ ಕಂಡುಕೊಳ್ಳಲಾಗಿದೆ.

ಕಾಳೆಯವರ ಮಗ ಕಾಶಿನಾಥ ಅವರು ಹೇಳುವಂತೆ ನಾನು ಬಾಲ್ಯದಿಂದಲೂ ಕಂಡದ್ದು ಅವರಲ್ಲಿದ್ದ ಶಿಸ್ತುಬದ್ಧತೆ ಈ ಸಮಯಕ್ಕೆ ಈ ಕೆಲಸವಾಗಬೇಕು ಎಂಬ ಸಮಯ ಪರಿಪಾಲನೆ. ಕಡ್ಡಾಯವಾಗಿ ಇಂತಹ ಸಮಯದಲ್ಲಿ ಈ ವರ್ಕ್ ಮುಗಿಯಲೇಬೇಕು ಎಂದು ಪ್ಲಾನ್ ಹಾಕಿರುತ್ತಾರೆ.[೫೮] ಅಷ್ಟು ಕಟ್ಟುನಿಟ್ಟುತನ ಅವರ ಕೆಲಸದಲ್ಲಿ ಕಂಡುಬರುತ್ತದೆ.

ಕಲಾವಿದ ಕಾಳೆಯವರ ಸ್ನೇಹಿತರು ಎಂ.ವಿ. ವಾಚೇದಮಠ ಅವರು ಹೇಳುವಂತೆ "ಕಾಳೆಯವರು ನಾನು ವಿಜಯ ಕಲಾಮಂದಿರದಲ್ಲಿ ಕಲಿಯುವಾಗ ನನ್ನನ್ನು ಬಿಟ್ಟು ಎಂದೂ ಊಟ ಮಾಡುತ್ತಿರಲಿಲ್ಲ. ಅಂಥ ಸ್ನೇಹ ಜೀವಿ ಅವರು. ನಾವಿಬ್ಬರಲ್ಲಿ ತುಂಬ ಆತ್ಮೀಯತೆಯಿತ್ತು. ಅಣ್ಣ-ತಮ್ಮಂದಿರಂತೆ ನಾವು ಇದ್ದೆವು"[೫೯] ಎಂದು ಹೇಳುತ್ತಾರೆ.

ನಾಡಿನ ಹೆಸರಾಂತ ಕಲಾವಿದ ಮತ್ತು ಕಾಳೆಯವರ ವಿಜಯಕಲಾಮಂದಿರದ ಶಿಷ್ಯಂದಿರು ಆದ ಎಂ.ಆರ್. ಬಾಳಿಕಾಯಿವರು ಕಾಳೆಯವರು ಕುರಿತು ಹೇಳುವಂತೆ "ಕಾಳೆ ಗುರುಗಳು

---

೫೭. ಕಾಳೆಯವರ ಮಗಳು ಅರುಣಾ (೩೨), ಸಂಡೂರು, ಅವರೊಂದಿಗೆ ಸಂದರ್ಶನ, ದಿನಾಂಕ ೨೦.೨.೨೦೦೯

೫೮. ವಿ.ಟಿ. ಕಾಳೆಯವರ ಮಗ ಕಾಶಿನಾಥ (೩೮), ಸಂಡೂರು, ಅವರೊಂದಿಗೆ ಸಂದರ್ಶನ, ದಿನಾಂಕ ೨೦.೨.೨೦೦೯

೫೯. ಕಲಾವಿದ ಎಂ.ವಿ. ವಾಚೇದಮಠ (೭೬), ಧಾರವಾಡ, ಅವರೊಂದಿಗೆ ಸಂದರ್ಶನ, ದಿನಾಂಕ ೨೮.೧೧.೨೦೦೯

ಸಾದಾ ಉಡುಪು ಧರಿಸುತ್ತಿದ್ದರು. ಆಗಿನಿಂದ ಇವತ್ತಿನವರೆಗೆ ಅವರ ಉಡುಪುಗಾರಿಕೆ ಬದಲಾಗಿಲ್ಲ. ಅದೇ ವಯಸ್ಸು ಇವತ್ತು ಕಾಣಿಸುತ್ತದೆ. ಅವರ ವಯಸ್ಸಿನಲ್ಲಿ ವ್ಯಾತ್ಯಾಸನೇ ಕಂಡುಬರುವುದಿಲ್ಲ. ಅಷ್ಟು ಸದಾ ಚಟುವಟಿಕೆಯಿಂದ ಕೂಡಿರುವ ಸ್ವಭಾವ ಅವರದು. ಸಾದಾ ಸೀದಾ ಸಾಮಾನ್ಯ ವ್ಯಕ್ತಿತ್ವ ಅವರಿಗೆ. ಒಂದೇ ಒಂದು ಅಭ್ಯಾಸ ಎಂದರೆ ನಶ್ಯ ಏರಿಸುವುದು, ಕೆಲವೊಮ್ಮೆ ಅನಿಸುತ್ತೆ. ನಶ್ಯ ಏರಿಸುವುದರಿಂದಲೇ ಅವರು ತಮ್ಮ ದೇಹದಾರ್ಡ್ಯಾತೆ ಕಾಯ್ದುಕೊಂಡು ಬಂದಿದ್ದಾರೇನೋ ಎಂಬ ಸಂದೇಹ ಬರುತ್ತೆ. ಗುರುಗಳಾಗಿ ವಿದ್ಯಾರ್ಥಿಗಳನ್ನು ಅವರು ಕೆಲಸ ನೋಡಿ ಎಂದು ಹೂಗಳುತ್ತಿರಲಿಲ್ಲ. ಇದರ ಹಿಂದಿರುವ ಉದ್ದೇಶ ವಿದ್ಯಾರ್ಥಿಗಳು ಇನ್ನೂ ಚೆನ್ನಾಗಿ ಕಲಿಯಲಿ ಎಂಬ ಉದ್ದೇಶ ಅವರದಾಗಿತ್ತು. ಕಾಳೆಯವರಿಗೆ ದಂಡಾವತಿ ಮಠ ಮಿಣಜಿಗಿ ಮತ್ತು ಹಿರಿಯ ಕಲಾವಿದರೆಂದರೆ ಅವರನ್ನೂ ತುಂಬಾ ಗೌರವದಿಂದ ಕಾಣುತ್ತಿದ್ದಂತಹ ವ್ಯಕ್ತಿತ್ವ ಇವರದು. ಮತ್ತೊಬ್ಬರನ್ನು ಅವಹೇಳನ ಮಾಡುವುದು ಟೀಕೆ ಮಾಡುವುದು ಮತ್ಸರ ಭಾವನೆ ಯಾಗಲಿ ಅವರಲ್ಲಿ ನಾನು ಕಂಡುಕೊಂಡಿಲ್ಲ"[೬೦] ಎಂದು ಹೇಳುತ್ತಾರೆ. ಕಾಳೆಯವರ ಮಗ ಕಾಶಿನಾಥ ಕಾಳೆಯವರು ಹೇಳುವಂತೆ ಸತತವಾಗಿ ವರ್ಕ ಮಾಡುತ್ತಾರೆ. ಅಂತಹ ಪರಿಶ್ರಮ ಜೀವಿ ನಮ್ಮ ತಂದೆ ಅವರು ನಿಧಾನಗತಿ ಪದ್ಧತಿಯಾದರೂ ಅದು ಮಾಸ್ಟರ ಪಿಸ್‌ಆಗಿ ಹೊರಗೆ ಬೀಳುತ್ತದೆ. ನನ್ನ ತಂದೆ ನನಗೆ ಒಳ್ಳೆ ಮಾರ್ಗದರ್ಶಕ, ಒಳ್ಳೆ ಫಿಲಾಸಫರ, ಗುರು, ಯಾವುದೇ ನನ್ನ ಕಲಾಚಟುವಟಿಕೆಗಳಿಗೂ ಅವರ ಪ್ರೋತ್ಸಾಹವಿದ್ದೇ ಇರುತ್ತದೆ. ಒಬ್ಬ ಕಲಾವಿದರಾಗಿ ಇನ್ನೊಬ್ಬ ಕಲಾವಿದರಿಗೆ ಹೇಗೆ ಪ್ರೋತ್ಸಾಹ ಕೊಡಬೇಕೆಂಬುದು ನಾನು ಅವರಿಂದ ಕಲಿತಿದ್ದೇನೆ"[೬೧] ಎನ್ನುತ್ತಾರೆ.

ಕಾಳೆಯವರ ಮಗಳು ಅರುಣಾ ಹೇಳುವಂತೆ ನನ್ನ ತಂದೆಯವರಲ್ಲಿ ಯಾವುದೇ ವಿಷಯ ಕುರಿತು ಚರ್ಚಿಸಿದ್ದರು ಕೂಡಾ ಆ ವಿಷಯ ಕುರಿತು ಅದರ ಹುಟ್ಟು, ಬೆಳವಣಿಗೆ ಇತಿಹಾಸ ಹೀಗೆ ಹಂತ ಹಂತವಾಗಿ ಚರ್ಚಿಸುತ್ತಾರೆ. ಅದು ಇತಿಹಾಸವಾಗಿರಲಿ, ಸಾಹಿತ್ಯ, ರಾಜಕೀಯ ವಿಷಯವಾಗಿರಲಿ, ಅವರಲ್ಲಿ ಆಳವಾದ ಜ್ಞಾನ ಕಂಡುಬರುತ್ತದೆ ಒಳ್ಳೆಯ ಮಾರ್ಗದರ್ಶಕ ಅವರು. ನಮ್ಮ ತಂದೆ ನಮಗೆ ದೇವರು ಕೊಟ್ಟ ಉಡುಗೊರೆ ಎಂದು ಹೇಳುಲು ಇಷ್ಟಪಡುತ್ತೇನೆ"[೬೨] ಎಂದು ಹೇಳುತ್ತಾರೆ.

---

೬೦. ಕಲಾವಿದ ಎಂ.ಆರ್. ಬಾಳಿಕಾಯಿ (೬೧), ಧಾರವಾಡ, ಅವರೊಂದಿಗಿನ ಸಂದರ್ಶನ, ದಿನಾಂಕ ೧೪.೩.೨೦೧೦

೬೧. ವಿ.ಟಿ. ಕಾಳೆಯವರ ಮಗ ಕಾಶಿನಾಥನೊಂದಿಗೆ ಸಂದರ್ಶನ, ದಿನಾಂಕ ೨೦.೨.೨೦೦೯

೬೨. ವಿ.ಟಿ. ಕಾಳೆಯವರ ಮಗಳು ಅರುಣಾಳೊಂದಿಗೆ ಸಂದರ್ಶನ, ದಿನಾಂಕ ೨೦.೨.೨೦೦೯

ಕಲಾವಿದ ಅಶೋಕ ಅಕ್ಕಿ ಅವರು ಹೇಳುವಂತೆ "ಕಾಳೆಯವರು ನಿವೃತ್ತಿ ಹೊಂದಿದ್ದಾರೆ ಅಂತ ಅನಿಸುವುದೇ ಇಲ್ಲ. ಇನ್ನೂ ತರುಣರಂತೆ ಕಾಣಿಸುತ್ತಾರೆ. ಅವರದು ನೇರ ಮತ್ತು ನಿಷ್ಠುರ ನಡೆ ನುಡಿಯ ವ್ಯಕ್ತಿತ್ವ, ಪರಿಶ್ರಮ ಜೀವಿ. ಹಾಸ್ಯ ಪ್ರವೃತ್ತಿಯುಳ್ಳ ವ್ಯಕ್ತಿತ್ವ ಅವರದು"[೬೩] ಎಂದು ಹೇಳುತ್ತಾರೆ. ಇಂತಹ ಆದರ್ಶ ವ್ಯಕ್ತಿ ಅವರು. ನನ್ನ ಜೊತೆ ಆತ್ಮೀಯ ಸಂಬಂಧ ಅವರದು. ಹಾಸ್ಯ ಪ್ರವೃತ್ತಿಯಿರುವ ಕಾಳೆಯವರು ನಾನು ವಿದ್ಯಾರ್ಥಿಯಾಗಿದ್ದಾಗ "ಬಾಳಿಕಾಯಿ ನೀನು ಇನ್ನೂ ಹಣ್ಣಾಗಬೇಕು" ಅನ್ನುತ್ತಿದ್ದರು. ಅಂದರೆ ಇನ್ನೂ ಕೆಲಸದಲ್ಲಿ ಪಳಗಬೇಕು ಎಂಬರ್ಥ ದಲ್ಲಿ. ಈಗ ಸಿಕ್ಕಾಗಲೆಲ್ಲಾ ಬಾಳಿಕಾಯಿ ಈಗ ಹಣ್ಣಾಗಿದ್ದಾನೆ ಎಂದು ತಮಾಷೆ ಮಾಡುತ್ತಾರೆ. ಸೌಜನ್ಯ ತಾಳ್ಮೆಯಿಂದ ಕೆಲಸ ಮಾಡುವ ಗುಣ ಕಾಳೆಯವರದು. ತಮ್ಮ ಕಲಾಕೃತಿಗಳನ್ನು ಮುಗಿಸಿದ ನಂತರ "ಹೆಂಗ ಆಗಿದೆ ಬಾಳಿಕಾಯಿ" ಎಂದು ಕೇಳಿ ಅಭಿಪ್ರಾಯ ನೀರಿಕ್ಷಿಸುತಿದ್ದರು. ಅಭಿಪ್ರಾಯ ಏನೇ ಬಂದರೂ ಸ್ವೀಕರಿಸುವ ದೊಡ್ಡ ಗುಣ ಅವರಲ್ಲಿತ್ತು. ನೀ ಹೇಳಿದ್ದು ಖರೇ ಐತಿ ಅನ್ನುತ್ತಿದ್ದರು. ಅಂತಹ ಸರಳ ವ್ಯಕ್ತಿತ್ವ ಅವರದು[೬೪] ಎನ್ನುತ್ತಾರೆ ಎಂ.ಆರ್. ಬಾಳಿಕಾಯಿ ಅವರು.

ಪ್ರಸ್ತುತ ನಾಡಿನ ಹಿರಿಯ ಕಲಾವಿದರಲ್ಲಿ ಒಬ್ಬರಾದ ಕಾಳೆಯವರು ತಮ್ಮ ಬದುಕಿನುದ್ದಕ್ಕೂ ಅನೇಕ ಮಹತ್ವದ ಘಟ್ಟಗಳನ್ನು ಯಶಸ್ವಿಯಾಗಿ ದಾಟಿ ಶ್ರೇಷ್ಠ ಕಲಾವಿದರಾಗಿ ರೂಪುಗೊಂಡಿ ದ್ದಾರೆ. ಅವರ ಸಾವಿರಾರು ಕಲಾಕೃತಿಗಳನ್ನು ನಾಡಿನ ಕಲಾ ಶ್ರೀಮಂತಿಕೆಯನ್ನು ಹೆಚ್ಚಿಸಲು ನೆರವಾಗಿವೆ. ನಾಡಿನ ಅನೇಕ ಸಾಮಾಜಿಕ, ಕಲಾಕ್ಷೇತ್ರಗಳಲ್ಲಿ ಸಕ್ರೀಯವಾಗಿ ಭಾಗವಹಿಸುತ್ತಾ ಬಂದಿರುವ ಕಾಳೆಯವರು ಸಮಾಜದಲ್ಲಿ ತಮ್ಮ ಅಸ್ತಿತ್ವವನ್ನು ತೋರ್ಪಡಿಸುತ್ತಾ ಬಂದಿದ್ದಾರೆ. ಇಲ್ಲಿಯವರೆಗೂ ಅವರು ರಚಿಸಿರುವ ಕಲಾಕೃತಿಗಳನ್ನು, ಅದರ ಮಹತ್ವವನ್ನು ಅರಿತು ರಾಜ್ಯ ಸರ್ಕಾರ, ಸಂಘ ಸಂಸ್ಥೆಗಳು ಅವರನ್ನು ಗೌರವಿಸಿ ಸನ್ಮಾನಿಸಿವೆ. ಅಲ್ಲದೇ ಅನೇಕ ಪ್ರಶಸ್ತಿ ಪುರಸ್ಕಾರಗಳು ಅವರನ್ನು ಅರಸಿ ಬಂದಿವೆ.


---

೬೩. ಕಲಾವಿದ ಅಶೋಕ ಅಕ್ಕಿ (೫೫), ಗದಗ, ಅವರೊಂದಿಗಿನ ಸಂದರ್ಶನ, ದಿನಾಂಕ ೩೦.೧೨.೨೦೦೯

೬೪. ಕಲಾವಿದ ಎಂ.ಆರ್. ಬಾಳಿಕಾಯಿ ಅವರೊಂದಿಗಿನ ಸಂದರ್ಶನ, ದಿನಾಂಕ ೧೪.೩.೨೦೧೦

ಅಧ್ಯಾಯ ೩

ವಿ.ಟಿ. ಕಾಳೆಯವರ ರೇಖಾಚಿತ್ರಗಳು



ರೇಖಾಚಿತ್ರ ರಚನೆಯಲ್ಲಿ ತೊಡಗಿರುವ ಎ.ಟಿ.ಕಾಳೆಯವರು

ಅಧ್ಯಾಯ ಮೂರು

ವಿ.ಟಿ. ಕಾಳೆಯವರ ರೇಖಾಚಿತ್ರಗಳು

ವಿ.ಟಿ.ಕಾಳೆಯವರು ಒಬ್ಬ ಉತ್ತಮ ವರ್ಣಚಿತ್ರ ಕಲಾವಿದರಂತೆ ಒಬ್ಬ ಉತ್ತಮ ರೇಖಾಚಿತ್ರ ಕಲಾವಿದರು ಕೂಡ ಹೌದು. ನಾಡಿನ ಪ್ರಮುಖ ರೇಖಾಚಿತ್ರ ಕಲಾವಿದರಲ್ಲಿ ಇವರು ಕೂಡಾ ಒಬ್ಬರು. ಅಂತಯೇ ರೇಖೆಯು ಅವರ ಕಲೆಯ ಜೀವಾಳ ಕೂಡಾ ಆಗಿದೆ. ಭಾರತೀಯ ಕಲೆಯ ಅಂತಃಸತ್ವವನ್ನು ಅಭ್ಯಸಿಸಿ ತಿಳಿದುಕೊಂಡು ಕಲಾಕೃತಿ ರಚಿಸುವ ಕಾಳೆಯವರು ಭಾರತೀಯ ಕಲೆಯ ಗುಣಲಕ್ಷಣಗಳನ್ನು ಸಹಜವಾಗಿಯೇ ತಮ್ಮ ಕಲಾಕೃತಿಯಲ್ಲಿ ತರುತ್ತಾರೆ. ಭಾರತೀಯ ಕಲೆಯಲ್ಲಿ ಪ್ರಮುಖವಾಗಿ ಕಂಡುಬರುವುದು ರೇಖೆಗಳೆ. ಹಾಗೆಯೇ ಕಾಳೆಯವರ ಕಲಾಕೃತಿಗಳನ್ನು ಆಳುವುದು ಕೂಡಾ ರೇಖೆಗಳೆ.

ರೇಖಾಚಿತ್ರಗಳ ಕುರಿತು ವಿ.ಟಿ.ಕಾಳೆಯವರ ಅಭಿಪ್ರಾಯ

ಕಾಳೆಯವರು ರೇಖಾಚಿತ್ರದ ಕುರಿತು ಈ ರೀತಿಯಾದ ಅಭಿಪ್ರಾಯವನ್ನು ಹೊಂದಿದ್ದಾರೆ. "ನಾವು ರೇಖಾಚಿತ್ರವನ್ನು ಎಷ್ಟು ತ್ವರಿತಗತಿಯಲ್ಲಿ ಮಾಡುತ್ತೇವೋ ಅಷ್ಟು ಪರಿಪೂರ್ಣತೆ ನಮ್ಮ ಕೈಗೆ ಬರುತ್ತದೆ. ನಾವು ಹೇಳಿದ ಹಾಗೆ ನಮ್ಮ ಕೈಗಳು ಕೇಳುತ್ತವೆ. ಯಾವುದೇ ಪ್ರಕಾರದ ಕಲೆಗೂ ರೇಖಾಚಿತ್ರವೇ ಮೂಲಾಧಾರ. ನಾನಾ ವಿಧದ ವಸ್ತುಗಳು ಹಲವು ಭಂಗಿಗಳಲ್ಲಿರುವ ಜನರನ್ನು ನೋಡಿ ರೇಖಾಚಿತ್ರಗಳನ್ನೂ ಬಿಡಿಸುವುದರಲ್ಲಿಯೂ ಕೂಡ ಆಳವಾದ ಅಧ್ಯಯನ ವಿರುತ್ತದೆ. ರೇಖೆಗಳು ಚಿತ್ರಕಲೆಯ ಮೂಲಭೂತ ಬುನಾದಿ. ಈ ರೇಖೆಗಳ ಬುನಾದಿಯ ಮೇಲೆಯೇ ಕಲಾವಿದನು ತನ್ನ ಕಲಾಕೃತಿಯ ಕಟ್ಟಡವನ್ನು ನಿರ್ಮಿಸುತ್ತಾನೆ. ತೀವ್ರಗತಿಯಲ್ಲಿ

ರಚಿಸಿರುವ ರೇಖಾ ಕರಡು ಚಿತ್ರಗಳು ಕಲಾವಿದನೊಬ್ಬನ ಸಾಮಾರ್ಥ್ಯದ ದ್ಯೋತಕವೂ ಆಗಿರುತ್ತದೆ. ಒಂದು ರೇಖಾಚಿತ್ರದಿಂದ ಒಬ್ಬ ಕಲಾವಿದನ ನಿಜವಾದ ಯೋಗ್ಯತೆ ಗೊತ್ತಾಗುತ್ತದೆ. ಅವರ ಕಂಪೋಜಿಶನ್ ನೋಡುವ ಅಗತ್ಯವಿಲ್ಲ. ಅವರ ಒಂದು ರೇಖಾಚಿತ್ರ ನೋಡಿದರೆ ಸಾಕು. ಇವರು ಇದೇ ಸ್ಟಾಂಡರ್ಡ್ ಕಲಾವಿದರು ಅಂತ ಹೇಳಬಹುದು. ಭಾರತೀಯ ಚಿತ್ರಕಲಾ ಸಂದರ್ಭದಲ್ಲಿ ವರ್ಣಚಿತ್ರ ಬೇರೆ, ರೇಖಾಚಿತ್ರ ಬೇರೆ ಎಂದು ವಿಂಗಡಿಸಲು ಸಾಧ್ಯವಿಲ್ಲದಂಥ ಅವಿನಾಭಾವ ಸಂಬಂಧವಿರುತ್ತದೆ. ಕೆಲವು ಕಲಾವಿದರು ತಮ್ಮ ಪ್ರತಿಭಾಪೂರ್ಣ ಕಲಾಕೃತಿಗಳನ್ನು ರೇಖಾಚಿತ್ರಗಳಿಂದಲೇ ರಚಿಸಿ ಚಿತ್ರಕಲಾ ಕ್ಷೇತ್ರದಲ್ಲಿ ಗಣ್ಯರೆನಿಸಿರುವುದನ್ನು ಕಾಣುತ್ತೇವೆ.[೧] ಎಂದು ರೇಖಾಚಿತ್ರಗಳ ಕುರಿತು ಅಭಿಪ್ರಾಯಪಡುವ ವಿ.ಟಿ.ಕಾಳೆ.ಯವರು ನಾಡಿನ ಕಲಾಕ್ಷೇತ್ರಕ್ಕೆ ಸಾವಿರಾರು ರೇಖಾಚಿತ್ರಗಳನ್ನು ರಚಿಸಿಕೊಟ್ಟು ರೇಖಾಚಿತ್ರಗಳಲ್ಲಿ ಸಾಧನೆ ಮಾಡಿದ ನಾಡಿನ ಕಲಾವಿದರುಗಳಲ್ಲಿ ಪ್ರಮುಖರಾಗಿ ಕಂಡುಬರುತ್ತಾರೆ.

"ಕಾಳೆಯವರ ರೇಖಾ ಚಿತ್ರಗಳದೇ ಒಂದು ವಿಶೇಷವಾದ ಅಧ್ಯಯನವಾಗುವಂತಹ ವಿಷಯ ವಸ್ತುವನ್ನು ಹೊಂದಿದ ಕಲಾಪ್ರಕಾರ" ಎನ್ನುವ ಅಭಿಪ್ರಾಯ ಡಾ.ಎಸ್.ಸಿ.ಪಾಟೀಲರದು. ಈ ಅಭಿಪ್ರಾಯವನ್ನು ಪುಷ್ಠೀಕರಿಸುವಂತೆ ವಿ.ಟಿ.ಕಾಳೆಯವರು ಸಾವಿರಾರು ವೈವಿಧ್ಯಮಯ ರೇಖಾ ಚಿತ್ರಗಳನ್ನು ವಿವಿಧ ಮಾಧ್ಯಮಗಳಲ್ಲಿ ವಿವಿಧ ವಿಷಯಗಳನ್ನು ಕುರಿತು ಚಿತ್ರಿಸಿದ್ದಾರೆ. ಕಾಳೆಯವರು ದಿನನಿತ್ಯದ ಅಭ್ಯಾಸಕ್ಕಾಗಿ ರಚಿಸಿರುವ ರೇಖಾಚಿತ್ರಗಳು, ವರ್ಣಕಲಾಕೃತಿ ನಿರ್ಮಾಣದ ಸಲುವಾಗಿ ಪೂರ್ವಾಭಾವಿಯಾಗಿ ಮಾಡಿಕೊಳ್ಳುವ ರೇಖಾಚಿತ್ರಗಳು, ಅಲ್ಲದೇ ಅಸಂಖ್ಯಾತ ಗ್ರಂಥಗಳಿಗೆ ಸಂದರ್ಭ ರೇಖಾಚಿತ್ರಗಳನ್ನು ಚಿತ್ರಿಸಿಕೊಟ್ಟಿದ್ದಾರೆ. ಕರ್ನಾಟಕ ಸರ್ಕಾರದ ಪಠ್ಯಪುಸ್ತಕ ಸಮಿತಿಯವರು ಪ್ರಕಟಿಸಿದ ಪಠ್ಯಪುಸ್ತಕಗಳಿಗಾಗಿ ೧೦,೦೦೦ಕ್ಕೂ ಮೇಲ್ಪಟ್ಟು ರೇಖಾ ಚಿತ್ರಗಳನ್ನು ರಚಿಸಿ ಕೊಟ್ಟಿದ್ದಾರೆ. ಇವುಗಳಲ್ಲದೆ ವಿಶೇಷವಾಗಿ ತೊಗಲು ಗೊಂಬೆಯಾಟದ ಕಲಾವಿದರಿಗೆ ಸಾಂಪ್ರದಾಯಿಕ ಶೈಲಿಯಲ್ಲಿ ನೂರಾರು ರೇಖಾಚಿತ್ರಗಳನ್ನು ರಚಿಸಿಕೊಟ್ಟಿದ್ದಾರೆ. ಜೊತೆಗೆ ಐತಿಹಾಸಿಕ ಅವಶೇಷಗಳ, ಮೂರ್ತಿ ಶಿಲ್ಪಗಳ ಸಾವಿರಾರು ರೇಖಾಚಿತ್ರಗಳನ್ನು ರಚಿಸಿದ್ದಾರೆ. ಅವರ ಸಾಂಪ್ರದಾಯಿಕ ವರ್ಣಚಿತ್ರಗಳ ಶೈಲಿಯಲ್ಲಿ ಕೂಡ ಪ್ರಮುಖವಾಗಿ ಕಂಡುಬರುವುದು ರೇಖೆಗಳೆ. ಈಗಲೂ ಕೂಡಾ ರೇಖಾಚಿತ್ರ ಗಳನ್ನೂ ರಚಿಸುವುದರಲ್ಲಿ ನಿರತರಾಗಿರುತ್ತಾರೆ. ಆದರೆ ಕಾಳೆಯವರ ಅನೇಕ ರೇಖಾಚಿತ್ರಗಳು ಕಣ್ಮರೆಯಾಗಿರುವುದು ವಿಷಾದನೀಯ. ನನ್ನ ಅಧ್ಯಯನದ ಅವಧಿಯಲ್ಲಿ ಸಿಕ್ಕಿರುವ ರೇಖಾಚಿತ್ರಗಳು ಉತ್ಕೃಷ್ಟ ಮಟ್ಟದವು ಎನ್ನಬಹುದು. ಈ ರೇಖಾಚಿತ್ರಗಳ ಸ್ಥೂಲ ಅಧ್ಯಯನವನ್ನು ಮಾಡಲಾಗಿದೆ.

---

೧. ವಿ.ಟಿ. ಕಾಳೆಯವರೊಂದಿಗೆ ಸಂದರ್ಶನ ದಿನಾಂಕ ೧೦.೩.೨೦೦೯

ಇಲ್ಲಿ ಕಾಳೆಯವರ ರೇಖಾಚಿತ್ರಗಳ ಕುರಿತಾದ ಅಧ್ಯಯನದೊಂದಿಗೆ ಒಟ್ಟು ರೇಖಾಚಿತ್ರದ ಹುಟ್ಟು, ಅರ್ಥ, ಮಹತ್ವ ಮತ್ತು ಪರಿಕರಗಳ ಅಧ್ಯಯನವನ್ನು ಇಲ್ಲಿ ಮಾಡುವ ಪ್ರಯತ್ನವಿದ್ದು ಈ ನಿಟ್ಟಿನಲ್ಲಿ ಕಾಳೆಯವರ ರೇಖಾಚಿತ್ರಗಳನ್ನು ಪೂರಕವಾಗಿ ಇಲ್ಲಿ ಕಟ್ಟಿಕೊಡಲಾಗಿದೆ.

ರೇಖಾ ಚಿತ್ರಕಲೆಯ ಅರ್ಥ, ಹುಟ್ಟು, ಪರಿಕರಗಳು ಮತ್ತು ಮಹತ್ವ

ಅರ್ಥ: ರೇಖೆ ಮಾನವನ ಇತಿಹಾಸದಷ್ಟೇ ಪ್ರಾಚೀನವಾದುದು. ಗೆರೆ ರೇಖೆಯಕ್ಕು, ಎಂದಿದ್ದಾನೆ ಮಂಗರಾಜ ತನ್ನ ನಿಘಂಟಿನಲ್ಲಿ. ಸಂಸ್ಕೃತ ರೇಖೆ ಕನ್ನಡದಲ್ಲಿ ಗೆರೆ ಅಥವಾ ಗೀಟು. ಇಂಗ್ಲೀಷಿನಲ್ಲಿ ಡ್ರಾಯಿಂಗ್[೨]. ಆಕ್ಸ್‌ಫರ್ಡ್ ಯೂನಿವರ್ಸಲ್ ಡಿಕ್ಷನರಿಯ ಪ್ರಕಾರ ರೇಖಾಚಿತ್ರಗಳೆಂದರೆ "ಲೇಖನಿ, ಪೆನ್ಸಿಲ್ ಅಥವಾ ಕ್ರೆಯಾನ್‌ನಿಂದ ರೂಪಿಸುವುದು" ಎಂದು ಹೇಳುತ್ತಾ ಮುಂದೆ "ವರ್ಣ ಚಿತ್ರಣದಿಂದ ಭಿನ್ನವಾದ ರೀತಿಯಲ್ಲಿ ರೂಪಣೆ" ಎನ್ನುತ್ತದೆ[೩].

ಸಂಪ್ರದಾಯ ಕಲಾವಿದರಿಗೆ ರೇಖಾಚಿತ್ರ ಕರಗತವಾಗಬೇಕಾದದು ಅತ್ಯವಶ್ಯಕ. ಆ ನಂತರವಷ್ಟೆ ಬಣ್ಣ ತುಂಬುವ ಕೆಲಸ.[೪] "ಯಾವುದೇ ಆಕಾರಗಳನ್ನು ಮೊದಲಿಗೆ ರಚಿಸುವುದು ರೇಖಾ ಚಿತ್ರದಲ್ಲಿಯೇ, ಆ ಕಾರಣ ರೇಖಾ ಚಿತ್ರವೇ ದೃಶ್ಯಾನುಭವಕ್ಕೆ ಅದರಲ್ಲೂ ಚಿತ್ರಕಲೆಗೆ ತಳಹದಿ" ಎಂದು ವಿಶ್ವಕೋಶ ಹೇಳುತ್ತದೆ. (Drawing is the basis of avery pictroial exprience, particularly that of painting"-vinigil. Grpttanalli Encyclopedia of world art portvi) ಅದಕ್ಕಿಂತ ೧೭೭೨ರಲ್ಲಿ ಪಿಸ್ಸೆರೊ ಎಂಬ ಕಲಾವಿದ 'ರೇಖಾಚಿತ್ರವೇ ವರ್ಣಚಿತ್ರದ ಜನಕ' (Drawing the father of painting) ಎಂದು ಉದ್ಘೋಷಿಸಿದ. ಭಾರತದಲ್ಲಿಯೂ ಚಿತ್ರಕಲೆಯಲ್ಲಿ ರೇಖೆಗೆ ಪ್ರಥಮ ಸ್ಥಾನವಿದೆ. ಶಿಲ್ಪಶಾಸ್ತ್ರಗ್ರಂಥಗಳಲ್ಲಿ "ರೇಖಾಂ ಪ್ರಶಂಸಂತಿ ಆಚಾರ್ಯಃ" ಚಿತ್ರಕರ್ಮದಲ್ಲಿ ರೇಖಾಪಾತ್ರವೇ ಮೊದಲಹೆಜ್ಜೆ ಎಂದು ಪ್ರೊ. ಎಸ್.ಕೆ. ರಾಮಚಂದ್ರ ರಾಯರು ಹೇಳುತ್ತಾರೆ. ಅಭಿಲಾಷಿತಾರ್ಥ ಚಿಂತಾಮಣಿಯಲ್ಲಿ ಭಿತ್ತಿಯ ಸಿದ್ಧತೆಯ ನಂತರ ಮೊದಲಿಗೆ ಹಾಕುವ ಕರಡು ನಕ್ಷೆಯನ್ನು 'ಆಕಾರ ಮಾತೃಕಾ ಲೇಖಾ' ಎಂದೂ ಬಣ್ಣವನ್ನು ತುಂಬಿದ ಮೇಲೆ ಅಂತಿಮವಾಗಿ ಹಾಕುವ ರೇಖೆಗಳನ್ನು 'ಆಕಾರ ಜಾನಿಕಾಲೇಖಾ', ಎಂದು ಕರೆದಿದೆ. ಅಂತಿಮ ರೇಖೆಯನ್ನು ಅರಗಿನ ಬಣ್ಣದಲ್ಲಿ ಹಾಕುತ್ತಿದ್ದು ಅದಕ್ಕೆ ಕಾವ್ಯಗಳಲ್ಲಿ "ಲಾಕ್ಷರಸ ರೇಖಾ ಶುದ್ದಿ" ಎಂದು ಕರೆದಿದೆ.[೫] ವಿಷ್ಣುಧರ್ಮೋತ್ತರ ಪುರಾಣದಲ್ಲಿ "ರೇಖಮ್ ಪ್ರಶಂಸತಾ ಚಾರ್ಯ" ಎಂದು ರೇಖೆಗಳು ನಿಪುಣ ಕಲಾವಿದನೊಬ್ಬನ ಅತ್ಯುನ್ನತ ಸಾಧನೆ ಎನ್ನುವ

---

೨. ಬಿ.ವಿ.ಕೆ. ಶಾಸ್ತ್ರಿ (ಸಂ), ರೇಖಾಚಿತ್ರ ಪು.೪

೩. ಟಿ.ಸು. ಕೃಷ್ಣಶೆಟ್ಟಿ, ಚಿತ್ರಚಿತ್ತ, ಪು.೯೯

೪. ಕೆ.ಜ್ಞಾನೇಶ್ವರ, ಶ್ರೀ ತಿಪ್ಪಾಜಪ್ಪನವರ ರೇಖಾಚಿತ್ರಗಳು, ಪು.೪

೫. ಅದೇ ಪು.೯೯

ಉಲ್ಲೇಖವಿದೆ. ಫ್ರೆಂಚ್ ಕಲಾವಿದ ಇಂಗ್ರೆಸ್ ಇದನ್ನು ಒಂದೇ ವಾಕ್ಯರಣಿಯಲ್ಲಿ ಹೀಗೆ ಹೇಳಿದ "ಕಲೆಯ ನಿಷ್ಕಾಪಟ್ಯತೆ"[೬].ಎಂಬ ಮಾಹಿತಿಗಳು ಉಪಲಬ್ಧವಿದೆ.

ರೇಖಾಚಿತ್ರ ಎಂದಾಗ ರೇಖೆಗಳಿಂದ ಮೂಡಿಸಿದ ಚಿತ್ರ. ಯಾವುದೇ ವಸ್ತುವಿನ ಅಥವಾ ಆಧಾರ ಭೂಮಿಕೆಯ ಮೈಮೇಲೆ ಅದು ಹಿನ್ನೆಲೆಯಾಗಿ ಮೂಡಿಸುವ ಗುರುತುಗಳು ಹಾಗೆ ಮೂಡಿದ ಗುರುತು ಸರಳವಾಗಿರಬಹುದು. ವಿವರಪೂರ್ಣವಾಗಿರಬಹುದು. ಆದರೆ ಎರಡು ಆಯಾಮ ಮಾತ್ರ ಉಳ್ಳದಾಗಿರಬೇಕು[೭] ಎಂಬ ಲಕ್ಷಣವನ್ನು ಹೊಂದಿದೆ.

'ರೇಖೆ' ಎಂಬ ಪದ ನಮ್ಮ ದೈನಂದಿನ ಬದುಕಿನಲ್ಲಿ ಬೇರೆ ಬೇರೆ ಸಂದರ್ಭದಲ್ಲಿಯೂ ಕಂಡುಬರುತ್ತದೆ. ಲಕ್ಷ್ಮಣ ರೇಖೆ, ಅದೃಷ್ಟ ರೇಖೆ, ಬಡತನದ ರೇಖೆ, ಹಸ್ತರೇಖೆ, ಗರುಡರೇಖೆ, ಇತ್ಯಾದಿಯಾಗಿ ಬಳಕೆಯಾಗಿರುವುದನ್ನು ಕಾಣುತ್ತೇವೆ.[೮] 'ರೇಖೆ' ಎಂದರೆ ಬಿಂದುಗಳ ಚಲನೆಯಿಂದ ಉಂಟಾಗುವ ಪಥ. ಬಿಂದುವೊಂದು ಚಲಿಸಿದಂತೆ ಅದರ ಪಾತ್ರವು ರೇಖೆಯಾಗುತ್ತದೆ. ರೇಖೆಗೆ ಉದ್ದವಿದೆ. ಆದರೆ ಅಗಲ ಇಲ್ಲ. ಎರಡು ಬಿಂದುಗಳು ರೇಖೆಯ ಪರಿಮಿತಿಯಾಗಿದ್ದು ಅದಕ್ಕೊಂದು ಸ್ಥಾನವಿದೆ ಮತ್ತು ದಿಶೆಯಿದೆ.[೯] ರೇಖೆಗಳ ಕುರಿತು ಈ ಅಂಶಗಳು ಮಹತ್ವದಾಗಿದೆ.

ರೇಖಾಚಿತ್ರವು ಕಲೆಯ ಒಂದು ಪ್ರಕಾರ. ಅಲ್ಲದೆ, ಅದು ಸಹಾಯಕ ಕಲೆ. ಕೆಲವರಿಗೆ ಅದು ಮೂಲಭೂತವಾದ ಕಲೆಯು ಆಗಿದೆ. ರೇಖಾಚಿತ್ರ ಪ್ರತ್ಯೇಕವಾದ ಸೃಜನಶೀಲ ಅಭಿವ್ಯಕ್ತಿಯ ಕ್ಷೇತ್ರವಾಗಿದೆ. ಚಿತ್ರಕ್ಕೆ ರೇಖೆಗಳು ಜೀವಂತಿಕೆಯನ್ನು ನೀಡುತ್ತವೆ.ಹಿಂದಿನ ನಮ್ಮ ಸಾಂಪ್ರದಾಯಿಕ ವರ್ಣಚಿತ್ರಗಳಲ್ಲಿ ರೇಖೆಗಳು ವರ್ಣಚಿತ್ರದ ಪಾರ್ಶ್ವಕಲೆಯೆನಿಸಿಕೊಂಡಿದೆ.[೧೦] ರೇಖೆ ದಕ್ಕದೆ ಕಲಾವಿದನಾಗುವುದು ಸಾಧ್ಯವಿಲ್ಲ ಎಂಬುದು ಜನಪ್ರಿಯ ನಂಬುಗೆ. ಬಿಂದುಗಳನ್ನು ಕೂಡಿಸುತ್ತಾ ಹೋದರೆ ರೇಖೆಯಾಗುತ್ತದೆ. ರೇಖೆಗಳು ಸೇರಿದಾಗ ರೂಪ ಆಕಾರದ ಉತ್ಪತ್ತಿಯಾಗುತ್ತದೆ. ರೇಖಾಚಿತ್ರವೊಂದನ್ನು ಬಿಡಿಸುವಾಗ ಕಲಾವಿದನ ಸಂಬಂಧ ಬರೀ ಹಾಳೆಯೊಂದಿಗಷ್ಟೇ ಇರುವುದಿಲ್ಲ. ಅದು ಸುತ್ತಲಿನ ಜಗತ್ತನ್ನು ಸೂಕ್ಷ್ಮವಾಗಿ ನೋಡುವ ತರಬೇತಿ ಇದ್ದಂತೆ.[೧೧] ಎಂಬಿತ್ಯಾದಿ ವಿವರಗಳು ರೇಖಾಚಿತ್ರಗಳ ಕುರಿತು ಕಂಡುಬರುತ್ತವೆ.

---

೬. ಬಿ.ವಿ.ಕೆ. ಶಾಸ್ತ್ರಿ, (ಸಂ) ರೇಖಾಚಿತ್ರ ಪು.೧೪

೭. ಅದೇ ಪು.೪

೮. ಡಾ. ಎಸ್.ಸಿ. ಪಾಟೀಲ, ವರ್ಣಸಂಚಯ, ಪು.೫೧

೯. ಅದೇ ಪು.೧೬

೧೦. ಅ.ಲ. ನರಸಿಂಹನ, ಬಿ.ವಿ.ಕೆ. ಶಾಸ್ತ್ರಿ, (ಸಂ) ರೇಖಾಚಿತ್ರ, ಪು.೨

೧೧. ರವಿಕುಮಾರ ಕಾಶಿ, ಮಯೂರ, ಸೆಪ್ಟೆಂಬರ್ ೨೦೧೧ರ ರೇಖೆಯೊಂದಿಗೆ ವಿಹಾರ, ಪು.೮೩

ಕಲಾವಿದನೊಬ್ಬ ತನ್ನ ಅಂತರಂಗದ ತುಮುಲಗಳ ಅಭಿವ್ಯಕ್ತಿಗೆ ರೇಖೆಗಳನ್ನು ದುಡಿಸಿಕೊಂಡಾಗ ಮೂರ್ತಗೊಳ್ಳುವ ರೂಪಗಳೇ ರೇಖಾಚಿತ್ರಗಳು. ಬಣ್ಣಗಳ ಆಡಂಬರವಿಲ್ಲದೆ ಯಾವ ಕಟ್ಟಳೆಗೂ ಒಳಪಡದೆ ಸಹಜ ಸ್ಫೂರ್ತಿಯಿಂದ ಸೃಷ್ಟಿಗೊಳ್ಳುವ ಈ ರೇಖಾಚಿತ್ರಗಳು ಕಲಾವಿದನ ಒಳಜಗತ್ತಿನ ನೈಜ ನಿರೂಪಣೆಗಳಾಗಿರುತ್ತವೆ.[೧೨] ಕಡಿಮೆ ವಿವರಗಳಲ್ಲಿ ಅಧಿಕ ಭಾವವನ್ನು ಹೊರಸೂಸುವುದು ರೇಖೆಗೆ ಮಾತ್ರ ಸಾಧ್ಯ. ಒಂದು ಆಕೃತಿಯನ್ನು ಪೂರ್ಣವಾಗಿ ರೇಖಿಸಬಹುದು. ಇಲ್ಲವೆ ಒಡೆದು ಅತ್ಯಲ್ಪ ಸಂಖ್ಯೆಯ ರೇಖೆಗಳಲ್ಲಿ ಚಿತ್ರಿಸಬಹುದು. ಯಾವ ಅರ್ಥವನ್ನು ಭಾವವನ್ನು ಬೇರೆ ಬೇರೆ ಭಂಗಿಗಳಲ್ಲಿ ಪ್ರಧಾನವಾಗಿ ಎಷ್ಟು ಬೇಕೋ ಅಷ್ಟನ್ನೂ ಮಾತ್ರ ಚಿತ್ರಿಸಬಹುದು. ಇಂತಹ ರೇಖಾಚಿತ್ರವನ್ನು ನೋಡಿದಾಗ ಆಕೃತಿಯೊಂದು ಸ್ಫುಟವಾಗಿ ಕಾಣಿಸುತ್ತದೆ. ಇದಕ್ಕೆ ಕಾರಣ ಅದರದೇ ಆದ ಒಂದು ಗುಣ. ಅಂತಹ ರೇಖೆಯಲ್ಲಿ ಮುಖ್ಯವಾಗಿ ಅಭಿವ್ಯಕ್ತಿಸುವುದು ಕಡಿಮೆ ಗೆರೆಗಳಲ್ಲಿ ವಸ್ತುವಿನ ಬಹುಮುಖ್ಯವಾದ ಗುಣಲಕ್ಷಣಗಳನ್ನು ಮಾತ್ರ.[೧೩] ಕೆಲವರದು ರೇಖೆಗಳಲ್ಲೇ ಸಂಪೂರ್ಣ ರಾಮಾಯಣವನ್ನು ಹೇಳುವ ತಾಳ್ಮೆಯಾದರೆ, ಮತ್ತೇ ಕೆಲವರದು ಕ್ಲುಪ್ತವಾಗಿ ಕೆಲವೇ ವಿವರಗಳಲ್ಲಿ ವಿಶ್ವವನ್ನು ಕಾಣಿಸುವ ಹುನ್ನಾರ. ಈ ಎರಡು ಲಕ್ಷಣಗಳು ಕಾಳೆಯವರ ರೇಖೆಗಳಲ್ಲಿ ಕಂಡು ಬರುವುದು ವಿಶೇಷ.

ರೇಖೆಯಲ್ಲಿ ಕಲಾವಿದ ತಾನು ನೋಡಿದ ವಸ್ತುವಿನ ಬಗೆಗಿನ ಅವನ ಪ್ರತಿಕ್ರಿಯೆ ಮತ್ತು ಕುಂಚ, ಪೆನ್ಸಿಲು ಅಥವಾ ಪೆನ್ನುಗಳೊಂದಿಗೆ ಬೆಸೆದುಕೊಂಡ ಅವನ ಕುಶಲತೆ ಅವುಗಳನ್ನು ದುಡಿಸಿ ಕೊಂಡ ರೀತಿ ಇವೆಲ್ಲಾ ಮುಖ್ಯವಾಗುತ್ತವೆ. ಸೂಕ್ಷ್ಮವಾಗಿ ಪರಿಶೀಲಿಸಿದರೆ ನಿಸರ್ಗದಲ್ಲಿ ರೇಖೆ ಎಂಬ ಪದಾರ್ಥವೇ ಇಲ್ಲ. ಅದು ಒಂದು ಕಲ್ಪನೆ. ವಸ್ತು ಒಂದು ಮುಗಿಯುತ್ತದೆ. ಇನ್ನೊಂದು ಪ್ರಾರಂಭವಾಗುತ್ತದೆ. ಒಂದೊಂದಕ್ಕೂ ಎಲ್ಲೆಯಾಗಿರುವ ರೇಖೆಯೂ ಇಲ್ಲ. ಆದರೆ ಚಿತ್ರಕಾರನು ಈ ವಿಷಯವನ್ನು ರೇಖೆಯ ಮೂಲಕ ತಿಳಿಯಪಡಿಸುತ್ತಾನೆ. ಒಂದೊಂದೆ ವಸ್ತುವಿಗೆ ಮೊದಲು ಕೊನೆ ಎಂಬ ಭ್ರಮೆಯುಂಟು ಮಾಡುತ್ತಾನೆ. ಅವುಗಳ ವಿವರಗಳನ್ನು ವಿವಿಧ ಅಂಶಗಳನ್ನು ಸಾಂಕೇತಿಕವಾಗಿಯಾದರೂ ಚಿತ್ರಿಸಿ ನಿಜ ಸ್ಥಿತಿಯ ಕಲ್ಪನೆಯುಂಟುಮಾಡಲು ಯತ್ನಿಸುತ್ತಾನೆ.[೧೪] ಎಂಬ ಅಂಶಗಳು ಕಂಡುಬರುತ್ತವೆ.

ರೇಖೆಯಲ್ಲಿ ಎರಡು ಮುಖ್ಯವಾದ ಪ್ರಕಾರಗಳಿವೆ. ಒಂದು ಸರಳರೇಖೆ, ಇನ್ನೊಂದು ವಕ್ರರೇಖೆ. ಸರಳರೇಖೆ ಎಂದರೆ ಬಿಂದು ಚಲಿಸುವಾಗ ತನ್ನ ದಿಕ್ಕನ್ನು ಬದಲಾಯಿಸದೆ ನೇರವಾಗಿ

---

೧೨. ಡಾ.ಶಿವಾನಂದ ಎಚ್. ಬಂಟನೂರ, ದೃಷ್ಟಿ-ಸೃಷ್ಟಿ; ಪು.೬೯

೧೩. ಡಾ.ಎಸ್.ಸಿ. ಪಾಟೀಲ, ವರ್ಣಸಂಚಯ; ಪು.೧೬

೧೪. ಅದೇ. ಪು.೧೬

ಚಲಿಸುವ ಪಥಕ್ಕೆ ಸರಳರೇಖೆ ಎನ್ನುವರು. ಇದು ದಿಗಂತದ ಗಾಂಭೀರ್ಯ ಬೆಳವಣಿಗೆಯನ್ನು ವಿಶಾಲತೆಯನ್ನು ಪ್ರತಿನಿಧಿಸುತ್ತದೆ.[೧೫] ಕಾಳೆಯವರ ವರ್ಣಚಿತ್ರಗಳಲ್ಲಿ ಈ ತೆರನಾದ ಸರಳ ರೇಖೆಯನ್ನು ಮುಖ್ಯವಾಗಿ ಕಾಣಬಹುದು.

ವಕ್ರರೇಖೆ ಎಂದರೆ ಚಲಿಸುವಾಗ ಬಿಂದು ತನ್ನ ದಿಕ್ಕನ್ನು ಬದಲಾಯಿಸುತ್ತ ಹೋಗುವಾಗ ಉಂಟಾಗುವ ಪಥಕ್ಕೆ ವಕ್ರರೇಖೆ ಎನ್ನುವರು. ಇದರಲ್ಲಿ ಚಲನೆ, ಆಕರ್ಷಣೆ, ಬೆಡಗು ಬಿನ್ನಾಣಗಳಿದ್ದು, ಸೌಂದರ್ಯದ ಪ್ರತೀಕವಾಗಿ ಈ ರೇಖೆಗಳು ಚಿತ್ರಕಲೆಯಲ್ಲಿ ಬಳಕೆಯಾಗುತ್ತದೆ.[೧೬] ಕಾಳೆಯವರ ಪೂರ್ಣಪ್ರಮಾಣದ ರೇಖಾಚಿತ್ರಗಳಲ್ಲಿ ಈ ಅಂಶವನ್ನು ಕಾಣಬಹುದು. ಈ ರೀತಿಯಾಗಿ ಒಟ್ಟು ರೇಖಾಚಿತ್ರದ ಅರ್ಥವನ್ನು ವಿವರವಾಗಿ ಕಟ್ಟಿಕೊಡಲಾಗಿದೆ.

ಹುಟ್ಟು ಮತ್ತು ಬೆಳವಣಿಗೆ

ಚಿತ್ರಕಲೆಯ ಇತಿಹಾಸ ಆರಂಭವಾಗುವುದೇ ರೇಖಾಚಿತ್ರಗಳಿಂದ ದಕ್ಷಿಣ ಫ್ರಾನ್ಸ್ ಹಾಗೂ ಸ್ಪೇನ್‌ಗಳಲ್ಲಿ ಹಬ್ಬಿರುವ ಕಾಂಟಬ್ರಿಯನ್ ಪರ್ವತಶ್ರೇಣಿಗಳಲ್ಲಿ ಪೂರ್ವ ಪ್ಯಾಲಿಯೋಲಿಥಿಕ್ ಕಾಲದ ಆದಿ ಬೇಟೆಗಾರರು ಗುಹೆಗಳ ಭಿತ್ತಿಯಲ್ಲಿ ರಚಿಸಿದ ಚಿತ್ರಗಳಲ್ಲಿ ರೇಖಾಚಿತ್ರದ ಅಂಶಗಳಿದ್ದು ಇವುಗಳೇ ಪ್ರಪಂಚದ ಆದಿ ರೇಖಾಚಿತ್ರಗಳೆಂದು ಗುರುತಿಸಿದ್ದಾರೆ.[೧೭] ಭಾರತದಾದ್ಯಂತ ಆದಿಮಾನವ ಇದ್ದ ಕುರುಹು ಕಂಡುಬರುತ್ತಿದ್ದು ಭೂಪಾಲ್ ಬಳಿಯಿರುವ ಬೆಂಬೆಡ್ಕ ಪ್ರದೇಶದಲ್ಲಿ ಗುಹೆ ಹಾಗೂ ಶಿಲಾಶ್ರಯಗಳಲ್ಲಿರುವ ರೇಖಾಚಿತ್ರಗಳು ಪ್ರಸಿದ್ಧವಾಗಿವೆ.[೧೮] ಕರ್ನಾಟಕದಲ್ಲಿಯೂ ಕೂಡಾ ಅನೇಕ ಕಡೆ ಗುಹಾ ಮಾನವನ ರೇಖಾಚಿತ್ರಗಳು ಕಂಡುಬರುತ್ತಿದ್ದು ಮಾನವನ ಚಿತ್ರಕಲಾ ಹುಟ್ಟು ರೇಖಾ ಚಿತ್ರಗಳಿಂದಲೇ ಎನ್ನಬಹುದು.

ಪ್ರಪಂಚದ ಎಲ್ಲ ಕಡೆಯ ಚಿತ್ರಕಲೆಯೂ ಮೂಲತಃ ರೇಖೆಯಿಂದ ಕಲ್ಪಿತವಾದುದು. ಮುಂದೆ ಪಾಶ್ಚಾತ್ಯ ದೇಶಗಳಲ್ಲಿ ಪೂರ್ಣ ಪ್ರಧಾನವಾಗಿ ವರ್ಣ ಚಿತ್ರರಚನೆ ಬೆಳೆದು ಹರಿಡಿದರೂ ಕೂಡ ರೇಖೆಗೂ ಒಂದು ಸ್ಥಾನವಿದ್ದೇ ಇದ್ದಿತು. ಆದರೆ ಪೌರ್ವಾತ್ಯ ಚಿತ್ರ ಸಂಪ್ರದಾಯದಲ್ಲಿ ರೇಖೆ ಅತ್ಯಾವಶ್ಯಕವಾದ ಮಾಧ್ಯಮ. ಚಿತ್ರವೂ ಮೂಲತಃ ರೂಪುಗೊಳ್ಳುವುದೇ ರೇಖೆಯಿಂದ. ಅದರ ಒಳ ವಿವರಗಳು ಎದ್ದುಕಾಣುವುದು ರೇಖೆಗಳ ಸಾಂಪ್ರದಾಯಿಕ ಕಲೆಯಲ್ಲಿ ರಚಿತವಾದುದು.

---

೧೫. ಡಾ.ಎಸ್.ಸಿ. ಪಾಟೀಲ, ವರ್ಣಸಂಚಯ; ಪು.೧೭

೧೬. ಅದೇ. ಪು.೧೬

೧೭. ವಿ.ಟಿ.ಕಾಳೆ, ನಿಜದ ನೆಲೆ, (ಅಭಿನಂದನಾ ಗ್ರಂಥ), ಪು.

೧೮. ಬಿ.ವಿ.ಕೆ. ಶಾಸ್ತ್ರಿ (ಸಂ). ರೇಖಾಚಿತ್ರ, ಪು.೫೨

ಕಿರು ಚಿತ್ರವಾಗಲೀ, ಬೃಹತ್ ಭಿತ್ತಿಚಿತ್ರವಾಗಲೀ, ಅದು ರೇಖೆಯ ಮೂಲಕವೇ.[೧೯] ಮುಖ್ಯವಾಗಿ ಭಾರತೀಯ ಸಾಂಪ್ರದಾಯಿಕ ಕಲೆಗಳು ರೇಖಾ ಪ್ರಧಾನವಾದವುಗಳು. ಇಲ್ಲಿ ರೇಖೆಗಳೇ ಸಂವಹನಕ್ಕೆ ಮುಖ್ಯ ತಳಹದಿ. ಇವರ ಕೃತಿಗಳ ಆತ್ಮವಿರುವುದು ರೇಖೆಗಳಲ್ಲಿಯೆ. ಕಾಳೆಯವರ ಸಂಪ್ರದಾಯಿಕ ಕಲಾಕೃತಿಗಳು ಸಹ ಈ ಮಾತನ್ನು ನಿರೂಪಿಸುತ್ತವೆ. ರೇಖೆಗಳೆ ಅವರ ಕಲಾಕೃತಿಗಳ ಜೀವಳವಾಗಿದೆ.

ಅದ್ಭುತ ಹಾಗೂ ಅನಾದೃಶ ವರ್ಣರಂಜಿತ ಭಿತ್ತಿಚಿತ್ರಗಳೆಂದು ವಿಶ್ವವಿಖ್ಯಾತವಾದ ಅಂಜತಾ, ಎಲ್ಲೋರಾ ಮೊದಲಾದ ಭಾರತದ ಗುಹಾಂತರ ದೇವಾಲಯಗಳ ಗೋಡೆಗಳನ್ನು ಅಲಂಕರಿಸಿದ ಚಿತ್ರಕಲಾ ಕೃತಿಗಳು, ರಜಪೂತ, ಮೊಗಲ್, ಪರ್ಷಿಯನ್ ಹಾಗೂ ದಖ್ಖಣಿ ಚಿತ್ರಕಲಾಕೃತಿಗಳು ಹಸ್ತ ಪ್ರತಿಗಳಲ್ಲಿ ಚಿತ್ರಿತವಾದ ಬಹುವರ್ಣ ಚಿತ್ರಗಳೇ ಮೊದಲಾದವುಗಳಲ್ಲಿ "ರೇಖಾ ಪ್ರಧಾನ" ಕಲಾಕೃತಿಗಳೇ ಆಗಿರುತ್ತವೆ. ಅದರಂತೆಯೇ ಕರ್ನಾಟಕದ ಶ್ರವಣಬೆಳಗೊಳ, ಶಿರಾ, ಹಿರಿಯೂರು, ಹಂಪೆ, ಶ್ರೀರಂಗಪಟ್ಟಣ, ನರಗುಂದ, ನಿಪ್ಪಾಣಿ, ರಾಯಚೂರಿನ ಗಾಜಿನಗೌಡರ ಮನೆಯಲ್ಲಿ, ಚಿತ್ರಾಲಂಕೃತ ಹಸ್ತಪ್ರತಿ ಹಾಗೂ ತಾಳೆಗರಿಗಳಲ್ಲಿ ಚಿತ್ರಿತವಾದ ವರ್ಣಚಿತ್ರಗಳೆಲ್ಲವೂ ರೇಖಾಪ್ರಧಾನ ವಾದ ಚಿತ್ರಕಲಾಕೃತಿಗಳೇ ಆಗಿರುತ್ತವೆ. ಅವುಗಳಲ್ಲಿ ರೇಖಾಲಾಲಿತ್ಯ, ಅಲಂಕಾರ ವೈಖರಿ, ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನು ರೇಖೆಗಳ ಮೂಲಕವೇ ಅಭಿವ್ಯಕ್ತಿಸಿದ ರೀತಿ ಅಸಾಮಾನ್ಯವಾದು ದಾಗಿದೆ. ಭಾರತೀಯ ಚಿತ್ರಕಲಾ ಸಂದರ್ಭದಲ್ಲಿ ವರ್ಣಚಿತ್ರ ಬೇರೆ, ರೇಖಾಚಿತ್ರ ಬೇರೆ ಎಂದು ವಿಂಗಡಿಸಲು ಸಾಧ್ಯವಿಲ್ಲದಂಥ ಅವಿನಾಭಾವ ಸಂಬಂಧವಿರುತ್ತದೆ. ಇದರಿಂದ ಭಾರತೀಯ ರೇಖಾಚಿತ್ರಗಳು ಪಾಶ್ಚಾತ್ಯ ರೇಖಾಚಿತ್ರಗಳಿಗಿಂತಲೂ ಹೇಗೆ ವ್ಯತ್ಯಾಸಗೊಂಡಿವೆ ಎಂಬುದನ್ನು ತೀರ್ಮಾನಿಸಬಹುದು.[೨೦] ಭಾರತೀಯ ರೇಖಾಚಿತ್ರಗಳ ವಿಪುಲ ಮಾಹಿತಿಗಳು ಇಲ್ಲಿ ಸಿಗುತ್ತವೆ.

ಭಾರತೀಯ ದೃಶ್ಯಕಲೆಯಲ್ಲಿ ಬಹಳ ಹಿಂದಿನಿಂದಲೂ ರೇಖೆಗೆ ಅತಿ ಹೆಚ್ಚಿನ ಪ್ರಾಮುಖ್ಯತೆ ಇದೆ. ಅಜಂತಾದ ಚಿತ್ರಗಳಿಂದ ಹಿಡಿದು ರಜಪೂತರ ಹಾಗೂ ಮೋಘಲ್ ಚಿಕಣಿ ಚಿತ್ರಗಳು ಲೇಪಾಕ್ಷಿಯಿಂದ ಹಿಡಿದು ಪಟಲ ಸುರಳಿ ಚಿತ್ರಗಳ ತನಕ ಇದೇ ಗುಣ, ಆಕಾರವನ್ನು ಸ್ವಲ್ಪಮಟ್ಟಿಗೆ ಚಪ್ಪಟೆಯಾಗಿಸಿ, ರೇಖೆಗಳು ಎದ್ದು ಕಾಣುವಂತೆ ಮಾಡುವುದು. ಹಾಗೆ ಮಾಡುವಾಗ ಶೈಲಿಕರಿಸುವುದು ಭಾರತೀಯ ಪದ್ಧತಿ ಎನ್ನುವ ಮಟ್ಟಿಗೆ ಇವು ಪ್ರಚಲಿತವಿದೆ. ಅನೇಕ ಜನಪದ ಪ್ರಕಾರಗಳಲ್ಲೂ ಇದನ್ನ ಕಾಣಬಹುದು. ಸ್ವಾತಂತ್ರ್ಯ ಚಳುವಳಿಯ ಅಸುಪಾಸಿನಲ್ಲಿ ಅನೇಕ ಕಲಾವಿದರು ಭಾರತೀಯತೆಯನ್ನು ಕಂಡುಕೊಳ್ಳುವ ಹುಡುಕಾಟದಲ್ಲಿದ್ದಾಗ ಇದನ್ನು ಗಮನಿಸಿ

---

೧೯. ಬಿ.ವಿ.ಕೆ. ಶಾಸ್ತ್ರಿ, (ಸಂ) ರೇಖಾಚಿತ್ರ, ಪು.೮೦

೨೦. ಅದೇ. ಪು.೫೯

ತಮ್ಮದಾಗಿಸಿಕೊಂಡರು. ರೇಖಾ ಪ್ರಧಾನತೆ ಭಾರತೀಯ ಅಸ್ಮಿತೆ ಎಂದು ಗುರುತಿಸಿಕೊಳ್ಳುವ ಮಟ್ಟಿಗೆ ಇದು ಹೋಯಿತು.[೨೧] ಇದೇ ತೆರನಾದ ಭಾರತೀಯತೆಯು ಕಾಳೆಯವರ ರೇಖಾಚಿತ್ರಗಳಲ್ಲಿ ಮತ್ತು ವರ್ಣಚಿತ್ರಗಲ್ಲಿ ಕಂಡುಬರುತ್ತದೆ.

ಭಾರತಕ್ಕೆ ಬ್ರಿಟಿಷರ ಆಗಮನದಿಂದ ಚಿತ್ರಕಲೆಯಲ್ಲಿ ಪಾಶ್ಚಾತ್ಯೀಕರಣ ಮೂಡಿತು. ಭಾರತೀಯ ಕಲಾವಿದ ಪಾಶ್ಚಾತ್ಯ ಕಲೆಗೆ ಪ್ರಭಾವಿತನಾದ. ನಂತರ ಕಲ್ಕತ್ತಾ ಕಲಾಶಾಲೆಯ ಪ್ರಿನ್ಸಿಪಾಲರಾದ ಇ.ಬಿ.ಹ್ಯಾವೆಲ್ ಮತ್ತು ಅಭಿನೀಂದ್ರನಾಥಠಾಗೋರ್ ಅವರು ನಮ್ಮ ದೇಶೀಯ ಕಲಾ ಸತ್ವವನ್ನು ಪುನರುಜ್ಜೀವನ ಗೊಳಿಸಿದರು. ನಂತರ ಭಾರತೀಯ ಕಲಾ ಅಂತಃಸತ್ವವನ್ನು ಎತ್ತಿ ಹಿಡಿಯುವ ಧ್ಯೇಯ ಉದ್ದೇಶ ಈ ಕಲಾಶಾಲೆಯದು. ಇಲ್ಲಿ ಅನೇಕ ಪ್ರಸಿದ್ಧ ಕಲಾವಿದರು ಭಾರತೀಯ ಕಲಾ ಶ್ರೀಮಂತಿಕೆಯನ್ನು ಎತ್ತಿ ಹಿಡಿಯಲು ಪಣ ತೊಟ್ಟಂತೆ ಅನೇಕ ಪ್ರಯೋಗಗಳನ್ನು ಮಾಡಿ ಕಲಾ ಶ್ರೀಮಂತಿಕೆಯನ್ನು ಹೆಚ್ಚಿಸಿದರು. ನಮ್ಮ ಭಾರತೀಯ ಕಲೆಯ ಮೂಲ ಲಕ್ಷಣವಾದ ಎರಡು ಆಯಾಮಗಳೊಳ್ಳ ರೇಖೆಯ ಪ್ರಧಾನತೆಯಿಂದ ಕೂಡಿದ ಕಲಾಕೃತಿಗಳನ್ನು ರಚಿಸ ತೊಡಗಿದರು.

ವಿ.ಟಿ.ಕಾಳೆಯವರು ಈ ಬಂಗಾಲ ಕಲಾಶಾಲೆಯ ಪದ್ಧತಿಗೆ ಅದರ ಪ್ರಭಾವಕ್ಕೆ ಒಳಗಾಗಿ ಅನೇಕ ಕಲಾಕೃತಿಗಳನ್ನು ರಚಿಸಿದ್ದು ಅವು ಕಲಾ ಕ್ಷೇತ್ರಕ್ಕೆ ಕೊಟ್ಟ ಅಮೋಘ ಕಾಣಿಕೆಯಾಗಿದೆ. ಅಲ್ಲದೆ ಕಾಳೆಯವರು ಪಾಶ್ಚಾತ್ಯ ಮತ್ತು ಪೌರ್ವಾತ್ಯ ಕಲೆಗಳಿಗೆ ಸೇತುವೆಯಾಗಿದ್ದಾರೆ ಎಂದು ಹೇಳಬಹುದು. ಏಕೆಂದರೆ ಅವರು ಜೆ.ಜೆ.ಸ್ಕೂಲಿನ ಕಲಾ ಪದ್ಧತಿಯಲ್ಲಿ ಕಲಿತುದ್ದರಿಂದ ಅಲ್ಲಿಯ ಪ್ರಭಾವ ಕೂಡಾ ಇವರ ಕಲಾಕೃತಿಗಳ ಮೇಲೆ ಸಹಜವಾಗಿ ಆಗಿದೆ. ಹೀಗಾಗಿ ಇವರು ಈ ಎರಡರ ನಡುವಿನ ಸೇತುವೆಯಾಗಿದ್ದಾರೆ ಎನ್ನಬಹುದು.

ಒಟ್ಟಿನಲ್ಲಿ ಭಾರತೀಯ ಮನಸ್ಸು ಈ ರೇಖೆಗಳಿಗೆ ತನ್ನನ್ನು ಒಗ್ಗಿಸಿಕೊಂಡಿವೆ. ಹಾಗಾಗಿ ಈ ಮಣ್ಣಿನ ವಾಸನೆಯನ್ನರಸಿ ಹೊರಟಿರುವ ಇಂದಿನ ಭಾರತೀಯ ಸಮಕಾಲೀನ ಕಲಾವಿದರೂ ರೇಖೆಗಳ ಮೂಲಕ ತಮ್ಮ ಅನಿಸಿಕೆಗಳ ಅಭಿವ್ಯಕ್ತಿಗೆ ಹೊರಟಿರುವುದು ಸ್ವಾಭಾವಿಕವೂ ಹೌದು. ನಮ್ಮ ಹಲವಾರು ವರ್ಣಚಿತ್ರಗಾರರ ಮೂಲ ಸೆಲೆ ಇರುವುದು ರೇಖೆಗಳಲ್ಲೇ. ಅವರದ್ದು ವರ್ಣಚಿತ್ರಗಳಾದರೂ ಅವುಗಳನ್ನು ಆಳುವುದು ರೇಖೆಗಳೇ. ಉದಾ.ತೈಯಬ್ ಮೆಹ್ತಾ, ಕೆ.ಸಿ.ಎಸ್. ಪಣಿಕ್ಕರ್, ಜ್ಯೋತಿಭಟ್ಟ, ಶಿವಾಕ್ಷ ಚಾವ್ಡಾ[೨೨] ವಿ.ಟಿ. ಕಾಳೆಯವರ ವರ್ಣಚಿತ್ರಗಳಲ್ಲಿಯೂ ಕೂಡಾ ರೇಖೆ ಪ್ರಧಾನವಾಗಿ ಕಂಡುಬರುವುದನ್ನು ನೋಡಬಹುದು.

---

೨೧. ರವಿಕುಮಾರ ಕಾಶಿ, ರೇಖೆಯೊಂದಿಗೆ ವಿಹಾರ, ಮಯೂರ, ಸೆಪ್ಟೆಂಬರ್, ಪು.೮೬

೨೨. ಬಿ.ವಿ.ಕೆ. ಶಾಸ್ತ್ರಿ, (ಸಂ) ರೇಖಾಚಿತ್ರ ಪು.೭

ಇ.ಬಿ.ಹ್ಯಾವೆಲ್ಲರಿಂದ ನಮ್ಮತನದ ಅರಿವನ್ನು ಅರಿತ ಬಂಗಾಳದ ಕಲಾವಿದರು ಅವನೀಂದ್ರ ನಾಥರ ನಾಯಕತ್ವದಲ್ಲಿ ಅಲ್ಲಿನ ಕಲೆಯ ಪುನರುಜ್ಜೀವನದಲ್ಲಿ ಭಾಗವಹಿಸಿ ಚಿತ್ರಿಸಿದ ಕೃತಿಗಳು ಧಾರ್ಮಿಕ, ಪೌರಾಣಿಕ ಅಂಶಗಳನ್ನು ರೋಮ್ಯಾಂಟಿಕ್ ಆದ ರೇಖೆಗಳನ್ನೂ ಒಳಗೊಂಡಿವೆ. ಸಾಂದರ್ಭಿಕ ಚಿತ್ರಗಳಿಗೂ ಹತ್ತಿರವಾದ ಸೃಷ್ಟಿಗಳಿವು. ಗಗನೇಂದ್ರನಾಥ ಠಾಕೂರ್ ಮತ್ತು ವಿನೋದ ಬಿಹಾರಿ ಮುಖರ್ಜಿ, ರವೀಂದ್ರನಾಥ ಠಾಗೂರ್, ಅವರ ರೇಖೆಗಳು ಅಂತರಾಷ್ಟ್ರೀಯ ಮೌಲ್ಯಗಳನ್ನು ಹೊಂದಿತ್ತು. ಎಕ್ಸ್‌ಪ್ರೆಷನಿಸಂಗೆ ಹತ್ತಿರವಾದ ಅಭಿವ್ಯಕ್ತಿಯಲ್ಲಿ ವಿಕೃತಗೊಂಡ ಆಕಾರಗಳ ರೇಖೆಗಳು ಗಮನಾರ್ಹ. ಜಾಮಿನಿರಾಯರರಂಥವರ ಕೃತಿಗಳಲ್ಲಿ ಜಾನಪದ ಸತ್ವ ಹೊಸತನದ ರೇಖೆಗಳಾಗಿ ಮೆರೆಯಿತು.[೨೩]

ಎನ್.ಎಸ್. ಬೇಂದ್ರೆಯವರ ಅಲಂಕೃತ ರೇಖೆಗಳು, ಕೆ.ಜಿ.ಸುಬ್ರಮಣಿಯನ್ ಅವರ ವಿಡಂಬನಾ ರೇಖೆಗಳು, ಕೆ.ಎಚ್. ರಾಜಾ ಅವರ ದಿಟ್ಟ ಕುಂಚನೋಟಗಳು-ರೇಖೆಗಳು, ಕೆ.ಸಿ.ಎಸ್. ಪಣಿಕರ್‌ರ ಪಶ್ಚಿಮದ ಪ್ರಭಾವದ ಕ್ಯಾಲಿಗ್ರಾಫಿಯ ಜ್ಯಾಮಿತಿಯ ಅಲಂಕೃತ ರೇಖಾ ಕಲ್ಪನೆಗಳನ್ನು ನಾವು ಗಮನಿಸಬಹುದು. ಶೈಲಜಾ ಮುಖರ್ಜಿಯ ಚಲನಶೀಲ ಬಣ್ಣ ಕರೆದು ಸೃಷ್ಟಿಸಿದ ರೇಖೆಗಳು ಸುಂದರ ಸೃಜನಶೀಲ.[೨೪] ವಿ.ಟಿ.ಕಾಳೆಯವರು ಬಂಗಾಳಿ ಕಲಾಶೈಲಿ, ಬಂಗಾಳ ಪುನರುಜ್ಜೀವನ ಕಾಲದ ಕಲಾವಿದರ ಪ್ರಭಾವಕ್ಕೆ ಒಳಗಾಗಿ ಚಿತ್ರಿಸಿದ್ದಾರೆ. ಅಲ್ಲಿಯೂ ವರ್ಣಚಿತ್ರಗಳಲ್ಲಿನ ರೇಖಾ ಲಾಲಿತ್ಯ, ಅಲಂಕೃತ ರೇಖೆಗಳು ರೇಖಾ ಪ್ರಧಾನತೆ, ಸಹಜವಾಗಿ ಇವರ ವರ್ಣಚಿತ್ರಗಳಲ್ಲಿ ಮೂಡಿ ಬಂದಿವೆ. ಬಂಗಾಳಿ ಕಲಾವಿದ ಕ್ಷಿತ್ರೀಂದ್ರನಾಥ ಮಜುಂದಾರ ಇವರ ಕಲಾಕೃತಿಗಳನ್ನು ಹೋಲಿಸಿ ನೋಡಿದಾಗ ಉಳಿದ ಕಲಾವಿದರಿಗಿಂತ ಈ ಕಲಾವಿದನ ಪ್ರಭಾವ ಕಾಣಬಹುದು. ಪ್ರಭಾವವಿದ್ದರೂ ಕೂಡಾ ಕಾಳೆಯವರು ಅದರಲ್ಲಿ ಸ್ವಂತಿಕೆಯನ್ನು ಸಾಧಿಸಿದ್ದಾರೆ. ಕಾಳೆಯವರ ರೇಖೆಗಳಲ್ಲಿ ಭಾರತೀಯ ಸಾಂಪ್ರದಾಯಿಕತೆ, ಭಾರತೀಯತೆ, ರೇಖೆಯ ನವೀನತನ ಕಂಡುಬರುತ್ತದೆ

ಕೆ.ಕೆ.ಹೆಬ್ಬಾರರು ತಮ್ಮ ರೇಖೆಗಳಲ್ಲಿ ಸ್ವಂತಿಕೆಯನ್ನು ಸಾಧಿಸಿ ತೀವ್ರ ಸಂವೇದನಾಶೀಲ ಸೃಷ್ಟಿಗಳಿಂದ ಖ್ಯಾತರಾಗಿದ್ದರು. ಆರ್.ಎಸ್.ನಾಯಿಡು ಅವರ ವಿಡಂಬನಾಶೀಲ ರೇಖಾಚಿತ್ರಗಳು ಉತ್ತಮ ಕೊಡುಗೆ ನೀಡಿದವು. ಅದೇ ಕಾಲಕ್ಕೆ ಪ್ರಗತಿಪರ ಕಲಾವಿದರ ಗುಂಪಿನ ಜಿ.ಎಸ್.ಶೆಣೈ, ಭಾಸ್ಕರ್‌ರಾವ್, ಯು.ರಮೇಶ್‌ರಾವ್, ಎಸ್.ಜಿ.ವಾಸುದೇವ ಅವರ ರೇಖೆಗಳು ವಿಕೃತಿಯ ಸುಂದರ ಸೃಜನಶೀಲ ಕಲ್ಪನೆಗಳು, ಶಾಂತಿನಿಕೇತನ ಮತ್ತು ಬರೋಡಾಗಳಿಂದ ಸಮಕಾಲೀನ ಕಲಾತಂತ್ರಗಳನ್ನು

೨೩. ಬಿ.ವಿ.ಕೆ. ಶಾಸ್ತ್ರಿ, (ಸಂ) ರೇಖಾಚಿತ್ರ ಪು.೭

೨೪. ಅದೇ ಪು.೮

ಕಲಿತು ಬಂದ ಚಂದ್ರನಾಥ, ಸಿ.ಚಂದ್ರಶೇಖರ್ ಎನ್.ಮರಿಶಾಮಾಚಾರ್, ಶ್ಯಾಮಸುಂದರ್, ರಾಮದಾಸ್ ಮೊದಲಾದವರ ಸೃಷ್ಟಿಶೀಲ ರೇಖೆಗಳಲ್ಲಿ ಹೊಸತನದ ತೀವ್ರತೆಯಿದ್ದಿತು. "ನಾವು ನಾಲ್ವರು" ನಾವು ಏಳು ಆದ ಗುಂಪಿನ ಪೀಟರ್ ಲೂಯಿಸ್, ಜಸುರಾಮ್ ಎಸ್.ಶ್ರೀಕಾಂತಶೆಟ್ಟಿ ಯವರ ರೇಖೆಗಳು ಎಕ್ಸ್‌ಪ್ರೆಷನಿಸ್ಟ ರೇಖೆಗಳಿಗೆ ಆಕರ್ಷಕವಾಗಿ ಅಂಟಿಕೊಂಡಿರುವಂಥವು.[೨೫] ಎಂಬ ವಿವರಗಳು ಕರ್ನಾಟಕ ಕಲಾವಿದರ ರೇಖಾಚಿತ್ರ ಬೆಳವಣಿಗೆ ಕುರಿತು ಮಾಹಿತಿ ನೀಡಿದ್ದು ಮಹತ್ವಪೂರ್ಣವಾಗಿದೆ.

ಪಾಶ್ಚಾತ್ಯ ಕಲೆ ವರ್ಣ ಪ್ರಧಾನವೆನಿಸಿಕೊಂಡರೂ, ಡ್ರಾಯಿಂಗ್ ಅಥವಾ ರೇಖಾಚಿತ್ರಕ್ಕೂ, ಗಣನೀಯ ಸ್ಥಾನವಿತ್ತು. "ರೇಖಾಚಿತ್ರವಿಲ್ಲದ ದಿನ ಸುದಿನವಲ್ಲ" ಎಂಬ ಗಾದೆ ರೋಮ್ ಚಕ್ರಾಧಿಪತ್ಯದ ಕಾಲದಲ್ಲಿ ರೂಢಿಯಲ್ಲಿತ್ತು. ಸುಮಾರು ನಾನೂರು ವರ್ಷಗಳ ಹಿಂದೆ ರೇಖೆಯ ಸ್ಥಾನದ ಬಗೆಗೆ ವಾದ ವಿವಾದಗಳಾಗಿ ಕಲಾವಿದರಲ್ಲಿ ರೇಖಾ ಸಹಿತ ಮತ್ತು ರೇಖಾರಹಿತ ಹೀಗೆ ಎರಡು ಗುಂಪುಗಳಾದವು ಎಂದು ತಿಳಿಯುತ್ತದೆ. ವರ್ಣಚಿತ್ರಗಳಷ್ಟೇ ರೇಖಾಚಿತ್ರಗಳಿಗೂ ಹೆಸರಾಗಿದ್ದ ಹಿಂದಿನ ಕಲಾವಿದರಲ್ಲಿ ಲಿಯಾನಾರ್ಡೋ ಡಾ.ವಿಂಚಿ, ರಾಫೆಲ್, ರೂಬೆನ್ಸ್, ಮೈಕೆಲ್ ಎಂಜಲೋ ಮುಂತಾದವರು ನೆನಪಿಗೆ ಬರುತ್ತಾರೆ.[೨೬] ವ್ಯಾನಗೋಗ್‌ನ ರೇಖೆಗಳಲ್ಲಿ ಎಕ್ಸ್‌ಪ್ರೆಸ್‌ನಿಸಂನ ಮುನ್ಸೂಚನೆ ಕಂಡಬರುತ್ತವೆ. 'ಫಾವಿಸಂ' ಪಂಥದವರು ಇಷ್ಟ ಬಂದ ಹಾಗೆ ರೇಖೆ ಆಕಾರಗಳನ್ನು ವಿಕೃತಗೊಳಿಸಿದರು. ಅಭಿವ್ಯಕ್ತಿಯನ್ನು ಅತ್ಯಂತ ಶಕ್ತಿಯುತವಾಗಿ ಹೊರತರಬಲ್ಲ ರೇಖೆಗಳು ಮಾತೀಸನವು. ಪಾಲ್‌ಕ್ಲೀ ಈತನ ಪಡಗಾಗಿಕಲ್ ಸ್ಕೆಚ್‌ಬುಕ್ ೧೯೨೫ರಲ್ಲಿ ಪ್ರಕಟವಾಗಿ ರೇಖೆಗಳ ಬಗ್ಗೆ ಹೊಸ ಹಾದಿಗಳನ್ನು ತೋರಿತು. ಡಾಡಾಯಿಸ್ಟ್‌ರ ರೇಖೆಗಳು ವಿದ್ಯುತ್ ಸ್ಪರ್ಶವನ್ನು ದುಡಿಸಿಕೊಂಡಿವೆ. ಡಾಡಾನಂತರ ಹುಟ್ಟಿದುದು ಸರ್ರಿಯಾಲಿಸಂ. ಫ್ರಾಯ್ಡ್‌ನ ಚಿಂತನೆಗಳಿಂದ ಸ್ಫೂರ್ತಿಗೊಂಡ ಈ ಚಳುವಳಿಯು ಬಹುತೇಕ ಕಲಾವಿದರದ್ದು ಸಾಂದರ್ಭಿಕ ಚಿತ್ರಗಳಂಥ ರೇಖಾಲಯ. ಫ್ರಾನ್ಸ್‌ಕ್ಲೈವ್‌ನ ಆವೇಶಭರಿತ ಬೀಸಿದ ಕುಂಚದ ರೇಖೆಗಳು, ಪೋಲಾಕ್‌ನ ಲಯಬದ್ಧ ಸ್ವಚ್ಛಂದ ರೇಖೆಗಳ ನಡಿಗೆ ಫ್ರಾನ್ಸಿಸ್‌ಬೇಕನ್ ಕೊಡುಗೆಯಾಗುವಂಥವೇ ಆಗಿವೆ.[೨೭] ಎಂಬಿತ್ಯಾದಿ ವಿವರಣೆಗಳು ಪ್ರಮುಖವಾಗಿವೆ.

"ಪಾಶ್ಚಾತ್ಯ ಮತ್ತು ಪೌರ್ವಾತ್ಯ ಮನೋಧರ್ಮದಲ್ಲಿ ಜೀವನದಲ್ಲಿ ಸ್ಪಷ್ಟವಾದ ವ್ಯತ್ಯಾಸ ಗಳಿವೆ" ಎನ್ನುತ್ತಾರೆ. ಪರ್ಸಿಬ್ರೌನ್. ಚಿತ್ರಕಲೆ ಇದರಿಂದ ಹೊರತಲ್ಲ. ಪಾಶ್ಚಾತ್ಯ ಕಲೆ ಘನ

---

೨೫. ಬಿ.ವಿ.ಕೆ. ಶಾಸ್ತ್ರಿ, (ಸಂ) ರೇಖಾಚಿತ್ರ ಪು.೮

೨೬. ಅದೇ ಪು.೪೮

೨೭. ಅದೇ ಪು.೪೮

ಅಥವಾ ನಿಬಿಡ ರೀತಿಯದಾದರೆ ಪೌರ್ವಾತ್ಯ ಕಲೆ ರೇಖೆಯದ್ದು. ಪಾಶ್ಚಾತ್ಯಕಲೆ ಅಲ್ಲಿನ ಸಂಬಂಧದಂತೆ ಸಾಮೂಹಿಕ ರೀತಿಯದು. ಪೌರ್ವಾತ್ಯ ಕಲೆ ವ್ಯಕ್ತಿಗತವಾದುದು[೨೮]. ಈ ರೀತಿಯಾಗಿ ರೇಖಾಚಿತ್ರದ ಹುಟ್ಟು ಮತ್ತು ಅದರ ಬೆಳವಣಿಗೆಯನ್ನು ಕಾಣುತ್ತೇವೆ.

ರೇಖಾಚಿತ್ರಗಳ ಸಾಧನ, ಪರಿಕರಗಳು ಮತ್ತು ವಿಧಗಳು

ಗೆರೆ ಮೂಡಿಸಲು ಒಂದು ಸಾಧನಬೇಕು. ಪ್ರಾಚೀನ ಕಾಲದಿಂದಲೂ ಇದ್ದಿಲು ರೂಢಿಯಲ್ಲಿತ್ತೆಂದು ತೋರುತ್ತದೆ. ಗುಹಾ ಮಾನವನಿಗೆ ಸುಲಭವಾಗಿ ಸಿಗುತ್ತಿದ್ದಿದು ಇದ್ದಿಲು. ಶಾಹಿಯ ಬಳಕೆ ಯೂರೋಪಿನಲ್ಲಿ ಕ್ರಿ.ಪೂ. ೫೦೦ ರಿಂದಲೂ ರೂಢಿಯಲ್ಲಿದೆ. ಪ್ರಾಚೀನ ಕಾಲದಲ್ಲಿ ಹಾಗೂ ಚೈನಾದಲ್ಲಿ ಎಣ್ಣೆ ದೀಪದ ಕಿಟ್ಟಕ್ಕೆ ಅಂಟು ಬೆರಸಿ ಕಪ್ಪು ಶಾಹಿ ತಯಾರಿಸುತ್ತಿದ್ದರು. ೧೮ನೇ ಶತಮಾನದಿಂದ ಈಚೆಗೆ ಒಂದು ಬಗೆಯ ಮೀನು ಹೊರಹೊಮ್ಮಿಸುವ ಸಿಪಿಯೂ ಎಂಬ ದ್ರವದಿಂದ ಕಂದು ಶಾಯಿ ಪಡೆಯುತ್ತಿದ್ದರು. ಮಧ್ಯಕಾಲೀನದಲ್ಲಿ ಹಂಸ, ಬಾತುಕೋಳಿಗಳ ಗರಿ ಲೇಖನಿಯಾಗಿ ಬಳಸುತ್ತಿದ್ದರು.[೨೯] ಇಂದಿನ ಕಲಾವಿದರು ಚಾರಕೋಲ್, ಲೋಹದ ಚೂಪುಮೊನೆ, ಚಾಕ್, ಪೆನ್, ಪೆನ್ಸಿಲ್, ಪೇಸ್ಟೆಲ್ ಇತ್ಯಾದಿಗಳನ್ನು ರೇಖಾ ಸೃಷ್ಟಿಗೆ ಬಳಸುತ್ತಿದ್ದಾರೆ. ಇನ್ನಷ್ಟು ವೈವಿಧ್ಯಮಯ ವಿಶಿಷ್ಟ ಮಾಧ್ಯಮಗಳತ್ತ ಕೈಚಾಚುತ್ತಿರುವುದು ಉಂಟು.[೩೦] ಕಪ್ಪುಬಣ್ಣ ನೀಡುವ ಒಳನೋಟಗಳ ವೈವಿಧ್ಯವನ್ನು ಬೇರೆ ಯಾವುದೇ ಬಣ್ಣ ನೀಡಲಾರದು. ಕಪ್ಪು ಬಣ್ಣದ ವಿವಿಧ ಛಾಯಾಂತರಗಳ ಕಲಾವಿದನ ಸಂವೇದನೆಯು ತೀವ್ರತೆಗೆ ಪೂರಕವಾಗಿ ನೆರವಾಗುತ್ತವೆ. ಬಿಳಿಯ ಅವಕಾಶದಲ್ಲಿ ಕಪ್ಪು ಬಿಂದುಗಳಿಂದಾರಂಭಿಸಿ, ರೇಖಿಸಿ ಕೆಲವೊಮ್ಮೆ ಲೇಪಿಸಿ ಅಭಿವ್ಯಕ್ತಿಸಿದಾಗ ಆ ಬಣ್ಣದ ಶಕ್ತಿಯ ಪರಿಚಯ ಮೂಲತಃ ರೇಖೆಗಳನ್ನು ತಮ್ಮ ಅಭಿವ್ಯಕ್ತಿ ರೂಪದ ಜೀವಧ್ವನಿಯಾಗಿಸಿಕೊಂಡ ನಮ್ಮ ಹಲವು ಕಲಾವಿದರಿಗೆ ಅಚ್ಚರಿ ಆನಂದಗಳನ್ನು ನೀಡಿರಬೇಕು.[೩೧] ವಿ.ಟಿ.ಕಾಳೆಯವರು ವಿವಿಧ ವಿಷಯ ವಸ್ತುಗಳ ಕುರಿತು ರೇಖಾಚಿತ್ರಗಳನ್ನು ರಚಿಸಿದ್ದು ವಿವಿಧ ಮಾಧ್ಯಮಗಳಿಂದ ಕೂಡಿವೆ. ಅವು. ಪೆನ್ಸಿಲ್, ಪೆನ್ನು, ಚಾರಕೋಲ, ಬ್ರೆಷ್. ಬೇರೆ ಬೇರೆ ವಿಧಾನಗಳಲ್ಲಿ ರೇಖಾಚಿತ್ರಗಳಿದ್ದು, ಹೆಚ್ಚು ಪ್ರಚಲಿತವಾಗಿವೆ.

ವಿಡಂಬನಾತ್ಮಕ ರೇಖಾಚಿತ್ರ (ಕ್ಯಾರಿಕೇಚರ್) ಸಾಂದರ್ಭಿಕ ಚಿತ್ರಗಳು, ಶಿರ್ಷಿಕೆ ಮತ್ತು ವ್ಯಂಗ್ಯಚಿತ್ರಗಳ ಮಾಲಿಕೆ (ಕಾರ್ಟೂನ್ಸ್).

---

೨೮. ಬಿ.ವಿ.ಕೆ. ಶಾಸ್ತ್ರಿ, (ಸಂ) ರೇಖಾಚಿತ್ರ ಪು.೪೮

೨೯. ಅದೇ ಪು. ೪೮

೩೦. ಅದೇ ಪು. ೪೮

೩೧. ಕೆ.ವಿ. ಸುಬ್ರಹ್ಮಣ್ಯಂ, ಕಲಾಸಂವೇದನೆಯ ಒಳನೋಟಗಳು, ಪು. ೬೯

ವಿಡಂಬನಾತ್ಮಕ ರೇಖಾಚಿತ್ರ (ಕ್ಯಾರಿಕೇಚರ್)

ಇಪ್ಪತ್ತನೆಯ ಶತಮಾನದಲ್ಲಿ ಈ ಬಗೆ ವಿಡಂಬನಾತ್ಮಕ ರೇಖಾಚಿತ್ರದ ಬಳಕೆ ಹೆಚ್ಚಾಗಿದೆ ಯಾದರೂ ಈ ಬಗೆಯ ಚಿತ್ರಗಳು ಇಟಲಿಯಲ್ಲಿ ಹದಿನಾರನೆಯ ಶತಮಾನದಲ್ಲಿಯೇ ಕಂಡು ಬರುತ್ತದೆ. ಪ್ಯಾರಿಸ್‌ನಲ್ಲಿ ೧೮ನೇ ಶತಮಾನದಲ್ಲಿದ್ದ ಚೌರಲ್ಸ್-ಲೆ-ಬೆಕಾನ್ ಎಂಬಾತ ಫಿರಿಸ್ಕೊ ಬಾಲ್ಡಿನೂಸಿ (೧೬೯೬) ಎಂಬಾತ "ಕ್ಯಾರಿಕೇಚರ್ ಎಂಬುದು ಮೂಲ ಆಕೃತಿಯನ್ನೆ ಬಹಳಷ್ಟು ಹೋಲುವಂತೆ ಆದರೆ ಅದರಲ್ಲಿ ವಿಶೇಷವಾಗಿ ಕಂಡುಬರುವ ಅಂಶವನ್ನು ಪ್ರಧಾನವಾಗಿಸಿ ವಿಡಂಬಿಸಿ ದಂತೆ ರಚಿಸಿಯೂ ರೂಪದರ್ಶಿಯನ್ನು ಗುರುತಿಸಬಹುದಾಗಿರಬೇಕು" ಎಂದು ವ್ಯಾಖ್ಯಾನಿಸಿದ. ಇಂದು ಕರ್ನಾಟಕವೂ ಸೇರಿದಂತೆ ಭಾರತದಲ್ಲಿ ಈ ಬಗೆಯ ವಿಡಂಬನಾತ್ಮಕ ಚಿತ್ರಗಳಿಲ್ಲದ ಪತ್ರಿಕೆಗಳೇ ಇಲ್ಲವೆಂದರೂ ಅಡ್ಡಿಯಿಲ್ಲ![೩೨] ಎಂಬ ವಿಚಾರ ಮಹತ್ವಪೂರ್ಣವಾಗಿದೆ.

ಸಾಂದರ್ಭಿಕ ಚಿತ್ರಗಳು

ಪಂಥಗಳ ಕಾಲಕ್ಕೆ ಮೊದಲು ಮಧ್ಯಯುಗದಲ್ಲಿ ವಿಶೇಷವಾಗಿ ಕಾಣಿಸಿಕೊಂಡ ಇನ್ನೊಂದು ಮುಖ್ಯ ಕಲಾ ಪ್ರಕಾರವೆಂದರೆ ಸಾಂದರ್ಭಿಕ ಚಿತ್ರಗಳು. ಇವು ಪದ್ಯ, ಕಥೆ ಅಥವಾ ನಾಟಕಗಳೊಂದಿಗೆ ಅವುಗಳಿಗೆ ಪೂರಕವಾಗಿ ರಚಿಸಿ ಜೊತೆ ಜೊತೆಯಲ್ಲಿಯೇ ಪುಸ್ತಕರೂಪದಲ್ಲಿ ಹೊಂದಿಸಿರುತ್ತದೆ. ಸಾಂದರ್ಭಿಕ ಚಿತ್ರಗಳನ್ನು ಜೊತೆಯಲ್ಲಿರುವ ಪಠ್ಯವಸ್ತುವಿನಂತೆಯೇ ಓದಬಹುದಲ್ಲದೆ ಒಂದೇ ಪಡಿಯಚ್ಚನ್ನು ವಿವಿಧ ಭಾಷೆಯ ಪಠ್ಯದೊಂದಿಗೆ ಬಳಸಲು ಸಾಧ್ಯವಾಗುವಂತಾಯಿತು.[೩೩] ಇಂತಹ ಹತ್ತು ಸಾವಿರಕ್ಕೂ ಹೆಚ್ಚು ಸಾಂದರ್ಭಿಕ ಚಿತ್ರಗಳನ್ನು ಕಾಳೆಯವರು ರಚಿಸಿರುವುದು ಕಂಡಬರುತ್ತದೆ. ಅವುಗಳಲ್ಲಿ ಸಂಯೋಜನಾ ನಿಯಮಗಳಿಗೆ ಬದ್ಧವಾಗಿ ಕಲಾತ್ಮಕತೆಯಿಂದ ಕೂಡಿವೆ.

ವ್ಯಂಗ್ಯಚಿತ್ರ ಮಾಲಿಕೆ (ಕಾರ್ಟೂನ್ಸ್)

ರೇಖಾಚಿತ್ರಗಳಲ್ಲಿ ಕಲಾವಿದನ ಸ್ವಂತಿಕೆ, ಜಾಣ್ಮೆಗಳನ್ನು ಪ್ರತಿಬಿಂಬಿಸುವ ಹಾಗೂ ಆತನ ಸೃಜನಶೀಲತೆಗೆ ಹೆಚ್ಚು ಅವಕಾಶವಿರುವ ಮಾಧ್ಯಮವೆಂದರೆ ವ್ಯಂಗ್ಯಚಿತ್ರ ಮಾಲಿಕೆ. ಇವು ಸಾಂದರ್ಭಿಕ ಚಿತ್ರಗಳೇ ಆದರೂ ಚಿತ್ರಗಳು ಹೆಚ್ಚಾಗಿದ್ದು ನಾಟಕದಂತೆ ಸಂಭಾಷಣೆಗಳೇ ಪ್ರಧಾನವಾಗಿ ಚಿತ್ರದ ಮಧ್ಯದಲ್ಲಿಯೆ ಬಲೂನಿನಂತೆ ತೆರವು ಮಾಡಿದ ಸ್ಥಳಗಳಲ್ಲಿ ಸಂಭಾಷಣೆಗಳಿರುತ್ತವೆ. ಇಲ್ಲವೆ ಚಿತ್ರಗಳ ಕೆಳಗೆ ಕಥಾಸಾರಾಂಶವಿರುತ್ತದೆ. ಆದರೂ ಇವುಗಳ ಮೂಲ ರೂಪ ಹದಿನಾರನೆಯ ಶತಮಾನದಲ್ಲಿ ಕಾಣಬಹುದು.[೩೪]

---

೩೨. ಬಿ.ವಿ.ಕೆ. ಶಾಸ್ತ್ರಿ, (ಸಂ) ರೇಖಾಚಿತ್ರ ಪು.೪೦

೩೩. ಅದೇ ಪು.೪೧

೩೪. ಅದೇ ಪು.೪೧

ರೇಖಾಚಿತ್ರಗಳ ಮಹತ್ವ

ಇಂಗ್ಲೆಂಡಿನಲ್ಲಿ ೧೭೧೫ರಲ್ಲಿ ಜೋನಾಥನ್ ರಿಚರ್ಡ್ಸನ್ ಎಂಬಾತ ರೇಖಾಚಿತ್ರದ ಮಹತ್ವವನ್ನು ಕುರಿತು ತನ್ನ ಥಿಯರಿಯನ್ನು ಮಂಡಿಸಿದ. "ಕಲಾವಿದ ತನ್ನ ಆಲೋಚನೆಗಳನ್ನು ಮನಸ್ಸಿನಲ್ಲಿ ಮೂಡಿದ ಬಿಂಬಗಳನ್ನು ಪೂರ್ಣ ಪ್ರಮಾಣದ ಮೂಲ ಕಲ್ಪನೆಗಳನ್ನು ಕೈಗಳ ಮೂಲಕ ಮಾದರಿಗೆ ರೂಪಿಸುವುದು ರೇಖಾಚಿತ್ರದ ಮೂಲಕವೇ ಆಗಿದ್ದು ಅದೇ ಚಿತ್ರಕಲೆಯ ಬಂಡವಾಳವೂ ಆಗಿರುತ್ತದೆ" ಎಂದು ಜೋನಾಥನ್ ಹೇಳಿದ. ಅಂತೆಯೇ ಕಲಾವಿದನ ಪ್ರಥಮ ಕಲ್ಪನೆಗಳು ಸೃಜನಾತ್ಮಕ ಆವಿಷ್ಕರ ಮೂಲಗಳ, ಶೈಲಿಯ ಬುನಾದಿಗಳ ಹಾಗೂ ಅತನ ಸತ್ಯವಾದ ಆಲೋಚನೆಯ ಸತ್ವಗಳು ರೇಖಾಚಿತ್ರಗಳಲ್ಲಿ ಕಂಡುಬರುತ್ತವೆ ಎಂದು ಕ್ಯಾಂಟೋನಿಯ ಜೋಸೇಫ್ ೧೭೪೫ರಲ್ಲಿ ತನ್ನ ಸಿದ್ಧಾಂತವನ್ನು ಮಂಡಿಸಿದ[34] ಈ ಎರಡು ಹೇಳಿಕೆಗಳು ರೇಖಾಚಿತ್ರಗಳ ಬಗ್ಗೆ ಇರುವ ಮಹತ್ವವನ್ನು ಸಾರುತ್ತವೆ.

ಸಾಧಾರಣವೆನಿಸುವ ಒಂದು ಗೀರು ಅಥವಾ ರೇಖೆ ಪಳಗಿದ ಕೈಯಲ್ಲಿ ಎಷ್ಟು ಪ್ರಬಲ ಮತ್ತು ಪರಿಣಾಮಕಾರಿ ಮಾಧ್ಯಮ ಆಗಬಹುದೆಂಬುದು, ಮನಸ್ಸಿನ ನೈಜ, ಭಾವುಕ ಕಲ್ಪನೆಗಳಿಗೆಲ್ಲಾ ರೂಪುಕೊಡುವ ಶಕ್ತಿ ಇದೆ ರೇಖೆಗೆ. ಆದುದರಿಂದಲೇ ಚಿತ್ರಕಲೆಯಲ್ಲಿ ರೇಖೆಗೆ ಒಂದು ಮುಖ್ಯಸ್ಥಾನ ವಿರುವುದು. ಪ್ರಪಂಚದ ಎಲ್ಲಾ ಕಡೆಯ ಚಿತ್ರಕಲೆಯೂ ಮೂಲತಃ ರೇಖೆಯಿಂದ ಕಲ್ಪಿತವಾದುದು. ಮುಂದೆ ಪಾಶ್ಚಾತ್ಯ ದೇಶಗಳಲ್ಲಿ ವರ್ಣ ಪ್ರಧಾನವಾಗಿ ಚಿತ್ರರಚನೆ ಬೆಳೆದು ಹರಡಿದರೂ ಕೂಡ, ರೇಖೆಗೂ ಒಂದು ಸ್ಥಾನವಿದ್ದೆ ಇರುತ್ತದೆ. ಆದರೆ ಪೌರ್ವಾತ್ಯ ಚಿತ್ರ ಸಂಪ್ರದಾಯದಲ್ಲಿ ರೇಖೆ ಅತ್ಯವಶ್ಯಕವಾದ ಮಾಧ್ಯಮ. ಚಿತ್ರವು ಮೂಲತಃ ರೂಪುಗೊಳ್ಳುವುದೇ ರೇಖೆಯಿಂದ. ಅದರ ಒಳ ವಿವರಗಳು ಎದ್ದು ಕಾಣುವುದು ರೇಖೆಗಳ ಮೂಲಕವೆ. ಪರ್ಷಿಯಾ ದಿಂದ ಹಿಡಿದು ಜಪಾನಿನವರೆಗೆ ಇರುವ ಪೌರ್ವಾತ್ಯ ದೇಶಗಳ ಸಾಂಪ್ರದಾಯಿಕ ಕಲೆಯಲ್ಲಿ ರಚಿತವಾದುದು ರೇಖೆಗಳ ಆಧಾರದಿಂದ ಕಿರು ಚಿತ್ರವಾಗಲೀ ಬೃಹತ್ ಭಿತ್ತಿಚಿತ್ರವಾಗಲೀ, ಅದು ರೇಖೆಯ ಮೂಲಕವೇ.[35] ಎಂಬ ವಿವರಗಳು ರೇಖಾಚಿತ್ರದ ಮಹತ್ವವನ್ನು ಸಾರುತ್ತದೆ.

ರೇಖೆಗಳ ಸಹಾಯದಿಂದ ಒಂದು ವಸ್ತುವಿನ ಮೈವಳಿಕೆ ಎಂಥದು, ಅದು ನಯವೇ, ನಾರು ನಾರೇ, ಬೊಟ್ಟು ಬೊಟ್ಟೇ ಅಥವಾ ಇನ್ನಿತರ ಬಗೆಯದೇ ಎಂಬ ಸ್ಪರ್ಶಾನುಭವಗಳನ್ನು ಸೂಚಿಸ ಬಹುದಾಗಿದೆ. ಬರೆಯುವ ರೇಖೆಗಳಿಂದ ಅವುಗಳ ಮೇಳದಿಂದ, ಉದ್ದ ಮತ್ತು ಅಗಲವುಳ್ಳ

೩೪. ಬಿ.ವಿ.ಕೆ. ಶಾಸ್ತ್ರಿ, (ಸಂ) ರೇಖಾಚಿತ್ರ ಪು.೩೪

೩೫. ಅದೇ ಪು.೫

ಕಾಗದದ ಮೇಲೆ ಆಕೃತಿ ರೇಖಿಸುವ ಸ್ಥಳಗಳ ಮೇಲಿಂದ ನಮ್ಮ ಮನಸ್ಸಿನ ಮೇಲೆ ಶಾಂತಿ, ಅಶಾಂತಿ, ತಳಮಳ, ಆನಂದ ಮೊದಲಾದ ಭಾವನೆಗಳ ಕಲ್ಪನೆಯನ್ನು ಮೂಡಿಸಬಹುದು. ಚಿತ್ರದ ಲಂಬರೇಖೆಗಳು ಒಂದು ತೆರನ ಭಾವನೆ ಮೂಡಿಸಿದರೆ ಸಮತಳ ರೇಖೆಗಳು ಇನ್ನೊಂದು ತೆರನ ಭಾವನೆ ಒದಗಿಸುತ್ತವೆ. ಸರಳ ರೇಖೆಗಳು ಪ್ರೇರಿಸುವ ಭಾವನೆ ಬೇರೆ, ವಕ್ರ ರೇಖೆಗಳು ಮೂಡಿಸುವಂಥವು ಬೇರೆ, ಹರಕು ಮುರುಕಾದ ರೇಖೆಗಳ ಪರಿಣಾಮ ಬೇರೆ, ಅಂಕುಡೊಂಕಾದ ರೇಖೆಗಳ ಪರಿಣಾಮವೇ ಬೇರೆ.[೩೬] ಚಿತ್ರಕಲಾವಿದನಿಗೆ ಮೂಲಭೂತವಾಗಿ ರೇಖಾ ಪ್ರಧಾನತೆ ಅತಿ ಮುಖ್ಯ. ಮನುಷ್ಯನಿಗೆ ಬೆನ್ನೆಲುಬು ಎಷ್ಟು ಮುಖ್ಯವೋ ಹಾಗೆ ಚಿತ್ರಕಲೆಗೆ ರೇಖೆಗಳೇ ಮುಖ್ಯ. ರೇಖಾ ಲಾಲಿತ್ಯಬಲ್ಲವ ಉತ್ತಮ ಕಲಾವಿದನಾಗಬಲ್ಲ.[೩೭] "ರೇಖಾಚಿತ್ರವು ಕಲಾಕೃತಿಯ ಜೀವಾಳ" ಈ ಮಾತುಗಳನ್ನು ಫ್ರಾನ್ಸಿನ ಕಳೆದ ಶತಮಾನದ ಸುಪ್ರಸಿದ್ಧ ಕಲಾ ಇತಿಹಾಸತಜ್ಞ ಹೆನ್ರಿ ಪೋಸಿಲೋನ್ ಎಂಬುವನು ತನ್ನ "Life of forms" ಎಂಬ ಪುಸ್ತಕದಲ್ಲಿ ಉಲ್ಲೇಖಿಸಿದ್ದಾನೆ. ರೇಖಾಚಿತ್ರ ಕಲಾವಿದನ ಸಂಪೂರ್ಣ ಪ್ರತಿಭೆಯನ್ನು ಹೊರಗೆಡುಹುವ ಸಾಧನವೂ ಹೌದು.[೩೮] ಈ ರೀತಿಯಾದ ರೇಖಾಚಿತ್ರದ ಮಾಹಿತಿಗಳು ದಕ್ಕುತ್ತವೆ.

ರೇಖೆಗೆ ಮನಸ್ಸಿನ ನೈಜ ಭ್ರಾಮಕ ಕಲ್ಪನೆಗಳಿದ್ದು ಅದಕ್ಕೆ ಮೂರ್ತರೂಪ ಕೊಡುವ ಶಕ್ತಿಯಿದೆ. ಒಂದು ಸ್ಕೆಚ್ ಅಂದರೆ ಗೆರೆಯಲ್ಲಿ ಕಲಾವಿದನ ಪರಿಶೀಲನಾತತ್ವ ಮತ್ತು ಕುಂಚ ಅಥವಾ ಪೆನ್ಸಿಲ್, ಪೆನ್ನುಗಳೊಂದಿಗೆ ಬೆಸೆದುಕೊಂಡ ಅವನ ಕುಶಲತೆ ಅವನನ್ನು ದುಡಿಸಿಕೊಂಡ ರೀತಿ ಇವೆಲ್ಲ ಮುಖ್ಯವಾಗುತ್ತವೆ.[೩೯] ಕರ್ನಾಟಕದಲ್ಲಿ ಕೆ.ಕೆ. ಹೆಬ್ಬಾರ್, ಆರ್.ಎಂ. ಹಡಪದ, ವಿ.ಬಿ. ಹಿರೇಗೌಡರ, ಶಂಕರಪಾಟೀಲ, ವಿಜಯ ಸಿಂಧೂರ, ವಿ.ಜಿ.ಅಂದಾನಿ, ಎಸ್.ಜಿ. ವಾಸುದೇವ, ಎಂ.ಜೆ. ವಾಚೇದಮಠ, ಮುಂತಾದವರ ಸಾಲಿನಲ್ಲಿ ಕಾಳೆಯವರು ಕೂಡಾ ಪ್ರಮುಖವಾಗಿ ನಿಲ್ಲುತ್ತಾರೆ.

ಹಿಂದೆ ಸಾಂಪ್ರದಾಯಿಕ ಹಾಗೂ ನವ್ಯ ಶೈಲಿಯ ಕಲಾವಿದರಲ್ಲಿ ಅನೇಕರು ತಾವು ದಿನಕ್ಕೆ ೧೫ ರಿಂದ ೨೦ ರೇಖಾಚಿತ್ರಗಳನ್ನು ತಪ್ಪದೆ ಮಾಡುವುದಾಗಿ ಶಿಕ್ಷಣದ ಅಂತ್ಯದ ವೇಳೆಯಲ್ಲಿ ತಮ್ಮ ಗುರುಗಳಿಗೆ ಮಾತು ಕೊಡುತ್ತಿದ್ದು ಅದರಂತೆ ಜೀವಿತಾವಧಿಯ ಕೊನೆಯವರೆಗೂ

೩೬. ಶಿವರಾಮ ಕಾರಂತ, ಕಲಾಪ್ರಪಂಚ, ಪು.೩೬

೩೭. ಜಿ.ವೈ. ಹುಬ್ಳಿಕರ್, ಸಂ. ಕಲಾವಾರ್ತೆ, ಪು.೧

೩೮. ಡಾ. ಡಿ.ವಿ. ಉಪಧ್ಯಾಯ, ರೇಖಾಚಿತ್ರ ಕಲೆಯ ತಾಯಿ, ಪು.೭

೩೯. ಡಾ. ಎಸ್.ಸಿ. ಪಾಟೀಲ, ವರ್ಣಸಂಚಯ, ಪು.೨೦

ನಡೆದುಕೊಳ್ಳುತ್ತಿದ್ದರು.[೮೦] ಈ ಮಾತಿಗೆ ಕಾಳೆಯವರು ಹೊರತಾಗಿಲ್ಲ. ಅವರು ಸಹ ದಿನನಿತ್ಯ ಸ್ಕೇಚ್‌ಗಳನ್ನು ಹಾಕುವುದುನ್ನು ಅಭ್ಯಾಸ ಮಾಡಿಕೊಂಡು ಬಂದಿದ್ದಾರೆ.

ಕಲಾವಿದ ಹಾಕುವ ಯಾವುದೇ ಗೆರೆ ಶಕ್ತಿಯುತವಾಗಿರಬೇಕು. ಅಂಥ ರೇಖೆಗಳಿಗೆ ದೃಢವಾದ ರೇಖೆಗಳು ಎಂದು ಕರೆಯುತ್ತಾರೆ. ಯಾವುದೇ ಒಂದು ಉತ್ತಮವಾದ ರೇಖಾಚಿತ್ರದಲ್ಲಿರುವ ಗೆರೆಗಳಲ್ಲಿಯೂ ದೃಢತೆಯು ಅತ್ಯಂತ ಪ್ರಮುಖ ಅಂಶವಾಗಿ ಪರಿಗಣಿಸಲ್ಪಡುತ್ತದೆ. ದೃಢವಾದ ರೇಖೆಗಳಿದ್ದ ಚಿತ್ರಕ್ಕೆ ವಿಶೇಷವಾದ ಒಂದು ಕೌಶಲ್ಯ ಮತ್ತು ಮಹತ್ವ ಲಭಿಸುತ್ತದೆ. ರೇಖೆಗಳಲ್ಲಿ ಕಾಣುವ ಈ ದೃಢತೆಯು ಕಲಾವಿದನ ಪ್ರತಿದಿನದ ಅವಿರತ ಸಾಧನೆಯನ್ನು ಅವಲಂಬಿಸಿರುತ್ತದೆ. ಮತ್ತು ಆತನ ಸಾಧನೆಯನ್ನು ಸಂಕೇತಿಸುತ್ತದೆ.[೮೧] ಕಾಳೆಯವರು ತಮ್ಮ ಬದುಕಿನುದ್ದಕ್ಕೂ ರೇಖಾ ಚಿತ್ರಗಳನ್ನು ದಿನನಿತ್ಯ ರಚಿಸುತ್ತಾ ಬಂದಿದ್ದಾರೆ. ಮತ್ತು ಅದರಲ್ಲಿ ಸಾಧನೆಯನ್ನು ಕಂಡುಕೊಂಡಿದ್ದಾರೆ.

ಕಲಾವಿದ ತಾನು ಚಿತ್ರಿಸಬೇಕಾದ ವಸ್ತುಗಳನ್ನು ತನಗೆ ತೃಪ್ತಿಕೊಡುವ ವಿವಿಧ ಭಂಗಿಗಳಿಂದ ರೇಖಾಚಿತ್ರ ರಚಿಸಿ, ಅನಂತರ ವರ್ಣಚಿತ್ರ ಮಾಡುವ ಪದ್ಧತಿ ೧೫ನೇ ಶತಮಾನದಿಂದ ಪಾಶ್ಚಾತ್ಯ ರಲ್ಲಿ ಒಂದು ಶಿಸ್ತಾಗಿ ರೂಢಿಗೆ ಬಂದಿತು. ಕಾಳೆಯವರು ತಮ್ಮ ಕಲಾ ವ್ಯಾಸಂಗದಲ್ಲಿ ಕೂಡ ಕಲಿಯುತ್ತಿದ್ದುದು ಇದನ್ನೆ, ಹಾಗೆ ತಮ್ಮ ಸ್ಕೆಚ್ ಪುಸ್ತಕಗಳಲ್ಲಿ ತಾವು ಕಂಡ ದೃಶ್ಯಗಳನ್ನು ರೇಖಿಸುವುದು ಅವರ ಹವ್ಯಾಸ ಆದರೆ ಕಾಳೆಯವರು ತಮ್ಮ ವರ್ಣಚಿತ್ರಗಳಲ್ಲಿ ಹೆಚ್ಚಾಗಿ ಕಲ್ಪನಾವಿಲಾಸಕ್ಕೆ ಪ್ರಾಮುಖ್ಯತೆ ಕೊಟ್ಟಿದ್ದಾರೆ. ಸಾಂಪ್ರದಾಯಿಕ ಕಲಾವಿದರಲ್ಲಿ ಹೆಚ್ಚಾಗಿ ಕ್ಷಿಪ್ರ ರೀತಿಯ ಸ್ಕೇಚ್‌ಗಳಲ್ಲದೆ ಅದು ತಿದ್ದಿತೀಡಿ ಬರೆದ ಪರಿಪೂರ್ಣ ರೇಖಾಚಿತ್ರಗಳಾಗಿರುತ್ತವೆ. ಆದರೆ ಕಾಳೆಯವರ ಸಾಂಪ್ರದಾಯಿಕ ಕಲಾಕೃತಿಗಳಲ್ಲಿ ಪರಿಪೂರ್ಣ ರೇಖಾಚಿತ್ರ ಕಂಡುಬಂದರೆ, ಅವರ ದಿನನಿತ್ಯ ಅಭ್ಯಾಸದ ರೇಖಾಚಿತ್ರಗಳ ಕ್ಷಿಪ್ರ ರೀತಿಯ ರೇಖಾಚಿತ್ರಗಳಾಗಿವೆ.

ಭಾರತೀಯ ಚಿತ್ರಕಲಾ ಸಂದರ್ಭದಲ್ಲಿ ರೇಖಾಚಿತ್ರ ಬೇರೆ ವರ್ಣಚಿತ್ರ ಬೇರೆ ಎಂದು ವಿಂಗಡಿಸಲು ಸಾಧ್ಯವಿಲ್ಲದಂಥ ಅವಿನಾಭಾವ ಸಂಬಂಧವಿರುತ್ತದೆ ಎಂಬ ಮಾತಿನಂತೆ ವಿ.ಟಿ. ಕಾಳೆಯವರು ಅನೇಕ ರೇಖಾಚಿತ್ರಗಳನ್ನು ರಚಿಸಿದ್ದಾರಲ್ಲದೆ, ಅವರ ವರ್ಣಚಿತ್ರಗಳಲ್ಲೂ ಕೂಡಾ ರೇಖೆಗಳೆ ಪ್ರಮುಖವಾಗಿ ಕಂಡುಬರುತ್ತವೆ. ಅಲ್ಲದೆ ನಾಡಿನ ಅನೇಕ ಸಾಂಪ್ರದಾಯಿಕ ಕಲಾವಿದರಲ್ಲಿಯೂ ಕೂಡಾ ಈ ಅಂಶ ಕಂಡುಬರುತ್ತದೆ. ಇಲ್ಲಿ ಪೂರ್ಣಪ್ರಮಾಣದ ರೇಖಾಚಿತ್ರ ಗಳನ್ನು ಈ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗಿದೆ.

---

೮೦. ಕೆ.ಜ್ಞಾನೇಶ್ವರ, ಶ್ರೀ ತಿಪ್ಪಾಜಪ್ಪನವರ ರೇಖಾಚಿತ್ರಗಳು, ಪು.೫

೮೧. ಡಾ. ಡಿ.ವಿ.ಉಪಧ್ಯಾಯ, ರೇಖಾಚಿತ್ರ ಕಲೆಯ ತಾಯಿ, ಪು.೨೪೧

ಕಾಳೆಯವರು ರೇಖಾಚಿತ್ರದ ಪ್ರತಿಭೆಯನ್ನು ಅವರು ತಮ್ಮ ಬಾಲ್ಯದಲ್ಲಿಯೇ ತೋರ್ಪಡಿಸಿದ್ದಾರೆ. ಅವರು ಅಸಾಂಖ್ಯ ರೇಖಾಚಿತ್ರಗಳನ್ನು ರಚಿಸಿದ್ದು, ಅವುಗಳನ್ನು ಇಲ್ಲಿ ವಿಂಗಡಿಸಿ ಅಧ್ಯಯನ ಮಾಡಲಾಗಿದೆ.

೧. ಕಾಳೆಯವರು ಬಾಲ್ಯದಲ್ಲಿ ರಚಿಸಿದ ರೇಖಾಚಿತ್ರಗಳು

೨. ನಿಸರ್ಗ ಆಧಾರಿತ ರೇಖಾಚಿತ್ರಗಳು

೩. ದಿನನಿತ್ಯ ಅಭ್ಯಾಸಕ್ಕಾಗಿ ರಚಿಸಿದ ರೇಖಾಚಿತ್ರಗಳು

೪. ಶಿರಭಾವ ಮತ್ತು ವ್ಯಕ್ತಿಚಿತ್ರಗಳು

೫. ಐತಿಹಾಸಿಕ ಅವಶೇಷಗಳ ಮೂರ್ತಿಶಿಲ್ಪಗಳ ರೇಖಾಚಿತ್ರಗಳು

೬. ಗ್ರಂಥಗಳಿಗೆ ಮಾಡಿಕೊಟ್ಟ ಅಸಂಖ್ಯಾ ಸಾಂದರ್ಭಿಕ ರೇಖಾಚಿತ್ರಗಳು


೭. ತೊಗಲು ಗೊಂಬೆಯಾಟದ ಕಲಾವಿದರಿಗೆ ರಚಿಸಿಕೊಟ್ಟ ರೇಖಾಚಿತ್ರಗಳು

ಈ ರೀತಿಯಾಗಿ ಕಾಳೆಯವರ ಒಟ್ಟಾರೆ ರೇಖಾಚಿತ್ರಗಳನ್ನು ಏಳು ಭಾಗಗಳನ್ನಾಗಿ ವಿಂಗಡಿಸಿ ಅಧ್ಯಯನ ಮಾಡಲಾಗಿದೆ.

ಬೆಳೆಯುವ ಸಿರಿ ಮೊಳಕೆಯಲ್ಲಿ ನೋಡು ಎಂಬಂತೆ ಕಾಳೆಯವರು ಬಾಲ್ಯದಲ್ಲಿಯೇ ಉನ್ನತ ಮಟ್ಟದ ರೇಖಾ ಚಿತ್ರಗಳನ್ನು ಚಿತ್ರಿಸುವಲ್ಲಿ ಹಿಡಿತ ಸಾಧಿಸಿರುವುದು ಅವರ ಕೆಲವು ರೇಖಾ ಚಿತ್ರಗಳಿಂದ ಮನಗಾಣಬಹುದು. ಅವರು ತಮ್ಮ ಹದಿಮೂರನೇ ವಯಸ್ಸಿನಲ್ಲಿ ರಚಿಸಿರುವ ಅಪೂರ್ವ ಎನಿಸಿರುವ ಕೆಲವು ರೇಖಾಚಿತ್ರಗಳು ಅಧ್ಯಯನದ ಅವಧಿಯಲ್ಲಿ ಸಿಕ್ಕಿವೆ. ಅವುಗಳನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

ಕಾಳೆಯವರು ಗದಗ ಮುನ್ಸಿಪಲ್ ಹೈಸ್ಕೂಲಿನಲ್ಲಿ ೮ನೇ ತರಗತಿಯಲ್ಲಿದ್ದಾಗ ಆ ಸ್ಕೂಲಿನವರು ಬಾಲಕ ಕಾಳೆಯವರಿಂದ ಶಾಲಾ ವಾರ್ಷಿಕ ಸಂಚಿಕೆಗಾಗಿ ಕೆಲವು ರೇಖಾಚಿತ್ರಗಳನ್ನು ರಚಿಸಲು ಹೇಳಿದ್ದರು. ಅವರ ಅಜ್ಞೆಯಂತೆ ಕಾಳೇಯವರು ರೇಖಾಚಿತ್ರಗಳನ್ನು ರಚಿಸಿಕೊಟ್ಟು ಆಶ್ಚರ್ಯ ಮೂಡಿಸಿದರು. ಆವಾಗಲೇ ಅವರಲ್ಲಿದ್ದ ಕಲಾವಿದನೊಬ್ಬ ಬೆಳಕು ಕಾಣತೊಡಗಿದ. ಕಾಳೆಯವರು ರಚಿಸಿದ ರೇಖಾಚಿತ್ರಗಳು ಅವು ಮೀರಾ, ಮೇನಕಾ ಮತ್ತು ವಿಶ್ವಾಮಿತ್ರ, ಅಫ್ಜಲ್‌ಖಾನನ ಕೊಲೆ, ಶಕುಂತಲಾ ಪತ್ರಲೇಖನ, ಅಕ್ಕಮಹಾದೇವಿ, ಝಾನ್ಸಿರಾಣಿ ಲಕ್ಷ್ಮಿಬಾಯಿ, ರಾಮನ ನಿರ್ಗಮನ, ನಳ ಮತ್ತು ದಮಯಂತಿ ಎಂಬ ಈ ಶೀರ್ಷಿಕೆಗಳ ಆಧಾರದ ಮೇಲೆ ಬಾಲಕ ಕಾಳೆಯವರ ಅಪೂರ್ವ ಎನ್ನುವಂತಹ ರೇಖಾಚಿತ್ರಗಳನ್ನು ರಚಿಸಿದ್ದಾರೆ. ಇವು ಎಲ್ಲಾ ಪೆನ್ನಿನಿಂದ





ಕಾಳೆಯವರು ಬಾಲ್ಯದಲ್ಲಿ ರಚಿಸಿದ ರೇಖಾಚಿತ್ರಗಳು

ART is **TRUTH**



Akka Mahadevi



Laxmi Bai of Zansi



Abdication of Rama



Nala & Damayanti

by:- Kumar Kale V. T.

ಕಾಳೆಯವರು ಬಾಲ್ಯದಲ್ಲಿ ರಚಿಸಿದ ರೇಖಾಚಿತ್ರಗಳು

ಮಾಡಿದಂತಹ ರೇಖಾಕಲಾಕೃತಿಗಳಾಗಿದ್ದು ಅದ್ಭುತ ಸಂಯೋಜನೆಗಳನ್ನೊಳಗೊಂಡಿವೆ. ಆಗಲೇ ಅವರು ಒಬ್ಬ ಮಹಾನ್ ಕಲಾವಿದನೆಂದು ಸಾಬೀತುಗೊಳಿಸಿದ್ದಾರೆ. ಆದರೆ ಅವರಿಗೆ ಸಿಗಬೇಕಾದ ಪ್ರೋತ್ಸಾಹ, ಮನ್ನಣೆ ಸಿಗಲಿಲ್ಲವೆಂದೆನ್ನಿಸುತ್ತದೆ. ಈ ರೇಖಾಚಿತ್ರಗಳನ್ನು ಗಮನಿಸಿದ್ದಾಗ, ಸಮಕಾಲೀನ ಸಂದರ್ಭದಲ್ಲಿ ರೇಖಾಚಿತ್ರಗಳನ್ನು ಕುರಿತು ಚರ್ಚಿಸಲ್ಪಡುವ ಕಲಾವಿದರ ಸಾಲಿನಲ್ಲಿ ವಿಮರ್ಶಕರ ದೃಷ್ಟಿಯಲ್ಲಿ ನಿಲ್ಲುತ್ತಿದ್ದರು ಎನಿಸುತ್ತದೆ. ಪ್ರಸ್ತುತ ಕಲಾಕ್ಷೇತ್ರದ ಸಂದರ್ಭದಲ್ಲಿ ಅನೇಕ ಕಲಾವಿದರ ರೇಖಾಚಿತ್ರಗಳು ವಿಮರ್ಶೆಗೆ ಚರ್ಚೆಗೆ ಒಳಗಾಗಿವೆ. ಆದರೆ ಕಾಳೆಯವರ ರೇಖಾಚಿತ್ರಗಳ ಕುರಿತಾಗಲಿ, ವರ್ಣಚಿತ್ರಗಳ ಕುರಿತಾಗಲಿ ಕಲಾಕ್ಷೇತ್ರ ದಿವ್ಯಮೌನ ತಾಳಿದೆ. ಒಬ್ಬ ಕಲಾವಿದ ತಾನು ರಚಿಸಿರುವ ಕಲಾಕೃತಿಗಳನ್ನು ಪ್ರದರ್ಶಿಸುವುದು ಅನಿವಾರ್ಯ, ಆಗಲೇ ಅದು ವಿಮರ್ಶಕರ ಕಣ್ಣಿಗೆ ಬೀಳುವುದು ಮತ್ತು ಅದು ಚರ್ಚಿಸಲ್ಪಡುತ್ತದೆ. ನಾಡಿನ ಕಲಾವಿದರು ಹಾಗೇ ಮಾಡಿದ್ದಾರೆ ಕೂಡ. ಆದರೆ ಕಾಳೆಯವರು ಇಲ್ಲಿಯವರೆಗೂ ವ್ಯಕ್ತವ್ಯಕ್ತಿ ಪ್ರದರ್ಶನ ಮಾಡಿದ್ದು ಒಂದೇ ಬಾರಿ ಅದು ಗದಗಿನ ತಮ್ಮ ವಿಜಯ ಕಲಾಮಂದಿರದಲ್ಲಿ. ನಂತರ ಅವರಿಗೆ ಕಲಾಕೃತಿಗಳನ್ನು ಪ್ರದರ್ಶಿಸುವುದು ಬೇಡ. ನನ್ನ ಕಲಾಕೃತಿಗಳನ್ನು ನೋಡಲು ಇಚ್ಛಿಸಿವವರು ತಾವು ಇರುವಲ್ಲಿಗೆ ಬಂದು ವೀಕ್ಷಿಸಿಸಲಿ. ಪ್ರಚಾರ ಮಾಡುವುದು ಬೇಡ ಎಂಬ ನಿಲುವನ್ನು ತಾಳಿದ್ದು ಎಲೆಮರೆಯ ಕಾಯಿಯಂತೆ ಇದ್ದು ಇವರು ತಮ್ಮ ಜೀವನವಿಡೀ ಮೌನವಾಗಿಯೇ ಸಂಡೂರಿನಲ್ಲಿದ್ದುಕೊಂಡು ಕಲಾ ಆರಾಧನೆಯಲ್ಲಿ ತೊಡಗಿದ್ದಾರೆ. ಅವರಿಗೆ ಅನೇಕ ಪ್ರಶಸ್ತಿ, ಸನ್ಮಾನ, ಪುರಸ್ಕಾರಗಳು ಹುಡುಕಿಕೊಂಡು ಬಂದಿವೆ. ಪ್ರಚಾರಪ್ರಿಯತೆಯಿಂದ ದೂರವಿರುವ ಕಾಳೆಯವರು ಯಾವುದೇ ಪ್ರಶಸ್ತಿಯನ್ನಾಗಲಿ, ಸನ್ಮಾನವನ್ನಾಗಲಿ ಬಯಸಿದವರಲ್ಲ. ಅಂತಹ ವ್ಯಕ್ತಿತ್ವ ಹೊಂದಿರುವ ಕಾಳೆಯವರು, ಏನೇ ಇದ್ದರೂ ನಾಡಿನ ಪತ್ರಿಕೆಗಳು, ಕಲಾವಿಮರ್ಶಕರೂ, ಲೇಖಕರು, ಕಲಾವಿದರು ಇವರನ್ನು ಗುರುತಿಸಿರುವುದು ಅವರ ಕಲಾಕೃತಿಗಳನ್ನು ಕುರಿತು ಚರ್ಚಿಸಿರುವುದು ತುಂಬಾನೇ ಕಡಿಮೆ.

ಅಕ್ಕಮಹಾದೇವಿಯ ರೇಖಾಚಿತ್ರದಲ್ಲಿ ಪಶುಪಕ್ಷಿಗಳೊಂದಿಗೆ ಅಕ್ಕಮಹಾದೇವಿ "ಚನ್ನಮಲ್ಲಿ ಕಾರ್ಜುನನ್ನು ನೀವು ಕಂಡರೇ, ನೀವು ಕಂಡಿರೇ" ಎಂದು ಸಂಭೋದಿಸುವಂತಿದೆ. ಈ ಸಂಯೋಜನೆಯಲ್ಲಿ ಪ್ರಮುಖ ಆಕೃತಿಯ ಹಿನ್ನೆಲೆಯಲ್ಲಿ ಗಿಡಮರಗಳ ಸಮೂಹವಿದ್ದು, ಪಕ್ಷಿಗಳು ಅಕ್ಕ ಮಹಾದೇವಿಯ ಪ್ರಶ್ನೆಯನ್ನು ಗಮನಿಸುವಂತೆ ಸಂಯೋಜಿಸಿರುವುದು. ಬಾಲಕ ಕಾಳೆಯವರ ಕಲ್ಪನಾಚಾತುರ್ಯಕ್ಕೆ ಸಾಕ್ಷಿಯಾಗಿದೆ. ಎಲ್ಲಿಯೂ ಶರೀರದ ಪ್ರಮಾಣಬದ್ಧತೆ, ತಪ್ಪಿದಂತೆ ಕಂಡು ಬರುವುದಿಲ್ಲ ಒಂದು ಪರಿಪೂರ್ಣತೆ ಅಲ್ಲಿಯಿದೆ. ಹದಿಮೂರು ವರ್ಷದ ಬಾಲಕ ಈ

ಕಲಾಕೃತಿಗಳನ್ನು ರಚಿಸಿದ್ದು ಎಂದಾಗ ಇದನ್ನು ನಂಬಲು ಕಷ್ಟವಾಗುತ್ತದೆ. ಅಂತಹ ಒಂದು ಪ್ರಬುದ್ಧ ರೇಖಾಚಿತ್ರ ಕಾಳೆಯವರು ಬಾಲಕರಿದ್ದಾಗಲೇ ಕಲಾಕ್ಷೇತ್ರಕ್ಕೆ ಕೊಟ್ಟಿದ್ದಾರೆ.

ಇನ್ನು, ನಳ ಮತ್ತು ದಮಯಂತಿಯ ಕಲಾಕೃತಿಯಲ್ಲಿ ನಡುರಾತ್ರಿ ಕಾಡಿನ ಮಧ್ಯದಲ್ಲಿ ಕಲ್ಲು, ಗಿಡ-ಮರ, ವಿಷಜಂತುಗಳ ಮಧ್ಯೆ ದಮಯಂತಿ ತನ್ನ ಗಂಡ ಬಳಿಯಲ್ಲಿರುವಾಗ ನನಗೇಕೆ ಭಯ ಎಂದು ನೆಮ್ಮದಿಯಿಂದ ಮೈಮರೆತು ನಿದ್ರಿಸುವಂತಿದೆ. ಇತ್ತ ನಳ ಸೌಂದರ್ಯದ ಖನಿಯಾದ ತನ್ನ ಹೆಂಡತಿಯನ್ನು ಈ ಮಧ್ಯರಾತ್ರಿ ಬಿಟ್ಟು ಹೋಗುವುದು ಹೇಗೆ ಎಂಬ ತೊಳಲಾಟದಲ್ಲಿದ್ದು ಅವಳಿಗೆ ಎಚ್ಚರವಾಗದರಿಲೆಂದು ಅವಳಕಡೆಗೆ ನೋಡುತ್ತ ಮೆಲ್ಲಗೆ ಹೆಜ್ಜೆಹಾಕುತ್ತಿದ್ದಾನೆ. ಈ ಸಂಯೋಜನೆಯಲ್ಲಿ ನಳನಿಂತ ಭಂಗಿಯ ರೇಖಾಕೃತಿ, ಅಲ್ಲಿ ರೇಖೆಗಳನ್ನು ದುಡಿಸಿಕೊಂಡಿರುವ ರೀತಿ, ದಮಯಂತಿ ಮಲಗಿರುವ ಭಂಗಿ ಆಕರ್ಷಣೀಯವಾಗಿದೆ. ಅಂತೆಯೇ ಮೀರಾಳ ಭಕ್ತಿಪೂರ್ವಕ ರೇಖಾಕೃತಿ ಶಕುಂತಲೆ ಪತ್ರಲೇಖನ ಬರೆಯುವುದರಲ್ಲಿ ತನ್ನ ಪ್ರೇಮಿಗೆ ಏನು ಬರೆಯಬೇಕು ಎಂದು ಯೋಚನಾ ಮಗ್ನಳಾಗಿ ಕುಳಿತಿರುವ ಭಂಗಿ, ಹಿನ್ನೆಲೆಯಾಗಿ, ಸಖಿಯರು ಅವಳ ಯೋಚನೆ ಯಲ್ಲಿ ಪಾಲ್ಗೊಂಡ ದೃಶ್ಯ ಜಿಂಕೆಯು ಶಕುಂತಲೆಯನ್ನು ಆಶ್ಚರ್ಯದಿಂದ ನೋಡುತ್ತಾ ಇರುವಂತೆ ಚಿತ್ರಿಸಿದ ಇವರ ಈ ರೇಖಾಕೃತಿ ಉತ್ತಮ ಸಂಯೋಜನೆ ಹೊಂದಿದ್ದು ಮುದನೀಡುವಂತಿದೆ. ಮತ್ತು ಶೋಕ ಸಾಗರದಲ್ಲಿ ಮುಳುಗಿರುವ ರಾಮಾಯಣದ ಒಂದು ದೃಶ್ಯ ಸಂಯೋಜನೆ ಭಾವಪ್ರಧಾನವಾಗಿದೆ. ಅಲ್ಲಿ ಕಾಡಿಗೆ ಹೊರಟು ನಿಂತಿರುವ ರಾಮ, ಲಕ್ಷ್ಮಣ, ಸೀತೆಯನ್ನು ಹೋಗಬೇಡಿಯೆಂದು ತಡೆಯೊಡ್ಡುತ್ತಿರುವ ದಶರಥ ಮತ್ತು ಪ್ರಜೆಗಳ, ಶೋಕತಪ್ತವಾದ ಮುಖಭಾವ, ಕರುಣಾರಸ ಮೂಡಿಸುತ್ತದೆ. ಇಲ್ಲೆಲ್ಲಾ ರೇಖೆಯು ಪ್ರಧಾನವಾಗಿ ಮೂಡಿಬಂದರು ಹೆಚ್ಚಿನ ಪರಿಣಾಮಕ್ಕಾಗಿ ಅಲ್ಲಲ್ಲಿ ನೆರಳು ಬೆಳಕನ್ನು ತೋರಿಸಲಾಗಿದೆ. ಇಂತಹ ಉತ್ತಮ ಸಂಯೋಜನಾ ರೇಖಾಚಿತ್ರಗಳನ್ನು ಕಾಳೆಯವರು ತಮ್ಮ ಬಾಲ್ಯದಲ್ಲಿಯೇ ಚಿತ್ರಿಸಿರುವುದು ಅದ್ಭುತ ಆಶ್ಚರ್ಯವೇ ಸರಿ.

ಅ. ಕಿಷ್ಕಿಂದೆ ರೆಸ್ಟೋರೆಂಟಿನ್ ನಿಸರ್ಗ ರೇಖಾಚಿತ್ರಗಳು

ಆ. ಮಡಿಕೇರಿಯ ನಿಸರ್ಗ ರೇಖಾಚಿತ್ರ

ಇ. ಸಂಡೂರಿನ ದೃಶ್ಯಗಳು

ಈ. ಹಂಪೆಯ ದೃಶ್ಯಗಳು

ಅ. ಕಾಳೆಯವರ ನಿಸರ್ಗ ಆಧಾರಿತ ರೇಖಾಚಿತ್ರಗಳು

ಕಾಳೆಯವರು ಪ್ರಕೃತಿ ಚಿತ್ರವನ್ನೂ ತಮ್ಮ ರೇಖೆಗಳಲ್ಲಿ ಸೆರೆಹಿಡಿಯುವ ಪರಿ ಅವರ ಕಲಾಕೌಶಲ್ಯವನ್ನು ರೇಖೆಗಳೊಂದಿಗೆ ಅವರ ಪ್ರೀತಿಯನ್ನು ಆಸಕ್ತಿಯನ್ನು ಸಾರುವಂತಿದೆ. ಅವರ

ಒಂದು ಪ್ರಕೃತಿದೃಶ್ಯ ಸರಣಿ ಕಿಷ್ಕಿಂದೆ ರೆಸ್ಟೋರೆಂಟ್‌ನ ದೃಶ್ಯಗಳು ಮೋಹಕವಾಗಿ ರೇಖೆಯಲ್ಲಿ ಮೂಡಿವೆ. ನಾವು ದಿನನಿತ್ಯ ನೋಟ್ಸಗಳಿಗಾಗಿ ಬಳಸುವ ಸಾಧಾರಣ ಪೇಪರಿನ ಮೇಲೆಯೂ ಕಾಳೆಯವರು ತಮ್ಮ ರೇಖೆಗಳೊಂದಿಗೆ ಆಟ ಆಡಿದ್ದಾರೆ. ಎತ್ತರವಾದ ಬೆಟ್ಟಗಳ ಅಡಿಯಲ್ಲಿ ಪುಟ್ಟ ಪುಟ್ಟ ಗುಡಿಸಿಲಿನ ಆಕಾರದ ಕಟ್ಟಡದ ವಿನ್ಯಾಸ ಹಿನ್ನೆಲೆಯಲ್ಲಿ ಎತ್ತರವಾದ ಮತ್ತು ಚಿಕ್ಕ ಚಿಕ್ಕ ಮರಗಳು ಪ್ರವಾಸಿಗರನ್ನು ತನ್ನತ್ತ ಆಕರ್ಷಿಸುತ್ತ ನಿಂತಿರುವ ಈ ರಮ್ಯವಾದ ತಾಣವನ್ನು ಕಾಳೆಯವರು ಅಷ್ಟೇ ಆಕರ್ಷಣೆಯವಾಗಿ ರೇಖಿಸಿದ್ದು ನೋಡುಗರನ್ನು ವಿಸ್ಮಯಗೊಳಿಸುವಂತಿದೆ.

ಆ. ಮಡಿಕೇರಿಯ ನಿಸರ್ಗ ರೇಖಾಚಿತ್ರ

ಈ ರೇಖಾಚಿತ್ರವು ೧೯೬೩ರಲ್ಲಿ ಪೆನ್ನಿನ ಮಾಧ್ಯಮದಲ್ಲಿ ರಚಿಸಿದ್ದು, ಇಡೀ ಮಡಿಕೇರಿಯ ದೃಶ್ಯ ವೈಭವವು ಕಾಳೆಯವರ ರೇಖೆಗಳಲ್ಲಿ ಮೇಳೈಸಿದೆ ಎನ್ನಬಹುದು. ದೃಗ್ಗೋಚರ ನಿಯಮವನ್ನು ಇಲ್ಲಿ ರೇಖೆಯ ಮುಖಾಂತರ ತೋರಿಸಿದ್ದು, ಇಡೀ ದೃಶ್ಯವು ಸಂಯೋಜನೆ ನಿಯಮಕ್ಕೆ ಬದ್ಧವಾಗಿದೆ. ಇಲ್ಲಿ ಒಂದೊಂದು ರೇಖೆಯಲ್ಲಿಯೂ ಜೀವ ಕಳೆಯಿದ್ದು ಅತ್ಯಂತ ಕ್ಷಿಪ್ರಗತಿಯಲ್ಲಿ ಈ ಕಲಾಕೃತಿ ಯನ್ನು ರಚಿಸಿದಂತೆ ಕಂಡುಬರುತ್ತದೆ.

ಇ. ಸಂಡೂರಿನ ದೃಶ್ಯಗಳು

ಸಂಡೂರಿನೊಂದಿಗೆ ಅನೇಕ ವರ್ಷಗಳ ಒಡನಾಟ ಅಲ್ಲಿಯ ಕಟ್ಟಡಗಳನ್ನು ನಿಸರ್ಗವನ್ನು ವಿವಿಧ ನೋಟವನ್ನು ಕಾಳೆಯವರಿಗೆ ತಮ್ಮ ರೇಖಾಚಿತ್ರಗಳಲ್ಲಿ ಹಿಡಿದಿಡುವಂತೆ ಮಾಡಿತು. ಈ ಎಲ್ಲಾ ರೇಖಾಚಿತ್ರಗಳು ಪೆನ್ನಿನ ಮಾಧ್ಯಮದಲ್ಲಿದ್ದು, ಅತ್ಯಂತ ಕ್ಷಿಪ್ರಗತಿಯಲ್ಲಿ ಮೂಡಿಬಂದವು ಗಳಾಗಿವೆ. ಸಂಡೂರಿನ ದೇವಾಲಯಗಳು, ರಸ್ತೆಗಳು, ಮನೆಗಳು ಮುಂತಾದವುಗಳು ಕಾಳೆಯವರಿಂದ ರೇಖಿಸಲ್ಪಟ್ಟಿವೆ.

ಈ. ಹಂಪೆಯ ದೃಶ್ಯಗಳು

ಹಂಪೆಯ ಕಲ್ಲುಬಂಡೆಗಳನ್ನು ನೋಡುವುದು ಒಂದು ಸ್ವರ್ಗ ಸುಖ. ಅದು ಕಲಾವಿದನೊಬ್ಬನ ಕಣ್ಣುಗಳಲ್ಲಿ ಇನ್ನೂ ವಿಭಿನ್ನವಾಗಿ ಕಂಗೊಳಿಸುವುದು ಸಹಜ. ದೊಡ್ಡ ದೊಡ್ಡ ಕಲ್ಲುಗಳ ಮೇಲೆ, ಇನ್ನೇನು ಉರುಳಿ ಬೀಳುವುದೋ ಏನೋ ಎನ್ನುವಂತೆ ತುದಿಯಲ್ಲಿ ನಿಂತಿರುವ ಕಲ್ಲುಗಳು ಶತ-ಶತಮಾನ ಕಳೆದರೂ ಹಾಗೇ ನಿಂತಿರುವ ಈ ಪ್ರಕೃತಿ ನಿರ್ಮಿಸಿರುವ ಸೌಂದರ್ಯವನ್ನು ನೋಡುವುದೇ ಕಣ್ಣಿಗೆ ಹಬ್ಬ. ಇಂತಹ ಕಲ್ಲು ಬಂಡೆಗಳನ್ನು ಕಾಳೆಯವರು ಅವುಗಳ ಎದುರುಗಡೆ ಧ್ಯಾನದಂತೆ ಕುಳಿತು ಒಂದೊಂದು ಕಲ್ಲನ್ನು ಕೂಡಾ ಆಳವಾಗಿ ವೀಕ್ಷಿಸಿ ಅಭ್ಯಾಸಮಾಡಿ ತಮ್ಮ ರೇಖೆಯ ಮುಖಾಂತರ ಅವುಗಳ ಸೌಂದರ್ಯವನ್ನು ಕಾಗದದ ಮೇಲೆ ಸೆರೆಹಿಡಿದಿರುವುದು, ಒಂದು










ಕಿಷ್ಕಿಂದ ರೆಸ್ಟೋರಂಟ್ ರೇಖಾಚಿತ್ರಗಳು










ಸಂಡೂರಿನ ದೃಶ್ಯಗಳ ರೇಖಾಚಿತ್ರಗಳು









ನಿಸರ್ಗ ರೇಖಾಚಿತ್ರಗಳು

ಅನಿವರ್ಚನೀಯ ಅನುಭವವನ್ನುಂಟುಮಾಡುತ್ತದೆ. ರೇಖೆಯ ಮುಖಾಂತರ ನೆರಳು-ಬೆಳಕಿನ ಆಟ ಅಲ್ಲಿ ನಡೆದಿದೆ. ಸಂಯೋಜನೆ ಕೂಡಾ ಅದ್ಭುತವಾಗಿದ್ದು ಕೆಲವೇ ಕೆಲವು ರೇಖೆಗಳ ಮುಖಾಂತರ ದೃಶ್ಯವನ್ನು ಸೆರೆಹಿಡಿಯಲಾಗಿದೆ. ಇನ್ನೂ ಪ್ರಕೃತಿ ಚಿತ್ರಣ ಎಂದಾಕ್ಷಣ ಅಲ್ಲಿ ಸಂಯೋಜನೆಗೆ ಮಹತ್ವವಿದ್ದೇ ಇರುತ್ತದೆ. ಅಲ್ಲಿ ಮುಖ್ಯ ಆಕೃತಿ ಮಧ್ಯದಲ್ಲಿದ್ದು ನೆಲ ಮತ್ತು ಆಕಾಶವನ್ನು ಚಿತ್ರಿಸಲು ಕೂಡಾ ಅದಕ್ಕೆ ಸ್ಥಳ ಕೊಡಬೇಕಾಗುತ್ತದೆ. ನೆಲವಾಗಲಿ, ಆಕಾಶದ ಚಿತ್ರಣವಾಗಲಿ ಕಾಳೆಯವರ ಒಂದೆರಡು ರೇಖೆಯಲ್ಲಿಯೇ ಅದರ ಪೂರ್ಣ ಚಿತ್ರಣ ಕಟ್ಟಿಕೊಟ್ಟಿರುವುದು ಒಂದು ವೈಶಿಷ್ಟ್ಯವಾಗಿದೆ. ಸಾಮಾನ್ಯ ವ್ಯಕ್ತಿಗೆ ಅದು ಗೀಚಿದಂತೆ ಕಂಡುಬಂದಿರಬಹುದು. ಆದರೆ ಅದಕ್ಕೆ ಅದರದೆ ಆದ ಒಂದು ಸೌಂದರ್ಯ ಅಲ್ಲಿದೆ.

ರೇಖಾಚಿತ್ರದ ದೃಶ್ಯವನ್ನು ವರ್ಣಚಿತ್ರಣದಲ್ಲಿ ಕಾಳೆಯವರು ಮೂಡಿಸಿದಾಗ, ತುಂಬಾ ವಿವರಣೆಗೆ ಮಹತ್ವಕೊಟ್ಟಿರುವುದು ಕಂಡುಬರುತ್ತದೆ. ಅವರ ಪ್ರಕೃತಿ ವರ್ಣಚಿತ್ರಗಳಲ್ಲಿ ಕಂಡು ಬರುತ್ತದೆ. ತುಂಬಾ ಕ್ಷಿಪ್ರವಾಗಿ ರೇಖಾಚಿತ್ರಗಳನ್ನು ರಚಿಸಿದಂತೆ ಕಂಡುಬರುತ್ತದೆ. ಸಂಡೂರಿನ ದೃಶ್ಯಗಳನ್ನು, ಗೋವಾದ ದೃಶ್ಯಗಳನ್ನು ಬೇಲೂರು ಹಳೇಬೀಡಿನ ಅನೇಕ ದೃಶ್ಯಗಳಲ್ಲಿ ಕಾಳೆಯವರು ತಮ್ಮ ರೇಖೆಗಳಲ್ಲಿ ಚಿತ್ರಿಸಿದ್ದಾರೆ. ಹೀಗೆ ಅನೇಕ ನಿಸರ್ಗ ಚಿತ್ರಗಳನ್ನು ಚಿತ್ರಿಸಿದ್ದಾರೆ. ಅಲ್ಲದೇ ಅನೇಕ ಸಂಯೋಜನಾ ಚಿತ್ರಗಳನ್ನು ತಮ್ಮ ರೇಖಾಚಿತ್ರಗಳಲ್ಲಿ ಮೂಡಿಸಿದ್ದಾರೆ. ಅನೇಕ ವ್ಯಕ್ತಿ ಚಿತ್ರಣ, ಭಾವಚಿತ್ರಣಗಳನ್ನು ರೇಖೆಗಳಲ್ಲಿ ಮೂಡಿಸಿದ್ದಾರೆ.

೩. ಕಾಳೆಯವರು ದಿನನಿತ್ಯ ಅಭ್ಯಾಸಕ್ಕಾಗಿ ರಚಿಸಿದ ರೇಖಾಚಿತ್ರಗಳು

ಕ್ಷಿಪ್ರಗತಿಯಿಂದ ರೇಖಾಚಿತ್ರಗಳನ್ನು ರಚಿಸುವುದು ಚಿತ್ರಕಲೆಯ ಕಲಿಕೆಯ ವೇಳೆಯಲ್ಲಿ ಇಂದಿಗೂ ಕಡ್ಡಾಯವಾಗಿ ಇರುವ ಪಠ್ಯವಸ್ತು. ರೂಪದರ್ಶಿಯನ್ನು ವಿವಿಧ ಭಾವಭಂಗಿಗಳಲ್ಲಿ ಇರಿಸಿ ಅಂಕನೆ ಮಾಡಿಕೊಳ್ಳುವುದು ಒಂದಾದರೆ, ಬಸ್ ಅಥವಾ ರೈಲ್ವೆ ನಿಲ್ದಾಣಗಳಲ್ಲಿ ಹಲವು ರೀತಿಯಲ್ಲಿ ಕುಳಿತ ವಿಶ್ರಮಿಸಿಕೊಂಡ, ನಿಂತ ಭಂಗಿಯಲ್ಲಿರುವುವವರನ್ನು ಕ್ಷಿಪ್ರ ರೀತಿಯಲ್ಲಿ ಅಂಕನೆ ಮಾಡುವುದು ಇನ್ನೊಂದು. ಈ ಹಿಂದಿನ ಶಿಕ್ಷಣ ಪದ್ಧತಿಯಲ್ಲಿ ಈ ರೀತಿ ಅಂಕಣ ಮಾಡಿಕೊಂಡು ಬಂದು ಆಕಾರಗಳನ್ನು ಇರಿಸಿಕೊಂಡು ಸಂಯೋಜನಾ ಚಿತ್ರ ರಚಿಸಿಬೇಕಿತ್ತು. ಇಂದು ಕೇವಲ ಪಳೆಯುಳಿಕೆಯಂತೆ ಈ ಪದ್ಧತಿ ಉಳಿದಿದೆ.[೪೨]

ಕಲಾವಿದನ ಅಭಿವ್ಯಕ್ತಿ ಕುರಿತ ತುಡಿತಕ್ಕೆ ಸಮಯ, ಪರಿಸರಗಳ ನಿರ್ಬಂಧವಿಲ್ಲ. ಯಾವಾಗಲೂ ಅವರ ಹತ್ತಿರ ಸ್ಕೆಚ್‌ಬುಕ್ ಇದ್ದೇ ಇರುತ್ತದೆ. ಅವರ ಗಮನ ಸೆಳೆದ ಯಾವುದೇ

---

೪೨. ಕೆ. ಜ್ಞಾನೇಶ್ವರ, ಲೇ. ಶ್ರೀ ತಿಪ್ಪಾಜಪ್ಪನವರ ರೇಖಾಚಿತ್ರಗಳು, ಪು.೫













ದಿನನಿತ್ಯ ಅಂಖಣೆಯ ರೇಖಾಚಿತ್ರಗಳು











ದಿನನಿತ್ಯ ಅಂಕಣೆಯ ರೇಖಾಚಿತ್ರಗಳು









ದಿನನಿತ್ಯ ಅಂಕನೆಯ ರೇಖಾಚಿತ್ರಗಳು

ವಸ್ತು ವಿಷಯವಿರಲಿ ನೋಡಿದ ತಕ್ಷಣ ತಮ್ಮ ಸ್ಕೆಚ್‌ಬುಕ್‌ನಲ್ಲಿ ಅವುಗಳನ್ನು ಮೂಡಿಸುತ್ತಾ ಹೋಗುತ್ತಾರೆ. ಹೀಗಾಗಿ ಕಲಾವಿದನೊಬ್ಬನ ಸೃಜನಶೀಲ ಪ್ರಜ್ಞೆ ಯಾವಾಗಲೂ ಜಾಗೃತವಾಗಿರುತ್ತದೆ. ಕಾಳೆಯವರು ತಮ್ಮ ವಿದ್ಯಾರ್ಥಿ ದಸೆಯಿಂದಲೂ ದಿನನಿತ್ಯ ಕಣ್ಣಿಗೆ ಕಾಣುವ ವಿಧ ವಿಧ ಆಕಾರ ಗಳನ್ನು ತಮ್ಮ ಸ್ಕೆಚ್‌ಬುಕ್‌ನಲ್ಲಿ ಮೂಡಿಸುತ್ತಾ ಬಂದಿರುತ್ತಾರೆ. ಅವರ ದಿನನಿತ್ಯ ರಚಿಸಲ್ಪಟ್ಟ ಅಂಕನೆಗಳು ಅಸಂಖ್ಯಾತ, ಇಲ್ಲಿರುವ ಅವರ ಅಂಕನೆಗಳು ಹೆಚ್ಚಾಗಿ ಕ್ಷಿಪ್ರಗತಿಯಲ್ಲಿ ಪೆನ್ನಿನ ಮಾಧ್ಯಮದಲ್ಲಿ ರಚಿಸಲ್ಪಟ್ಟ ರೇಖಾಚಿತ್ರಗಳಾಗಿದ್ದು ಉತ್ಕೃಷ್ಟವಾದ ರೇಖೆಗಳನ್ನು ಇವು ಹೊಂದಿವೆ. ಇಲ್ಲಿ ವಿವಿಧ ಭಂಗಿಯಲ್ಲಿರುವ ವ್ಯಕ್ತಿ ಚಿತ್ರಗಳು ಹೆಚ್ಚಾಗಿದ್ದು, ಏಕವ್ಯಕ್ತಿಯ ರೇಖಾಚಿತ್ರ ಮತ್ತು ಗುಂಪು ವ್ಯಕ್ತಿಗಳ ಸಂಯೋಜನಾ ರೇಖಾಚಿತ್ರಗಳನ್ನು ಮತ್ತು ಹಿನ್ನೆಲೆಯನ್ನು ಪರಿಣಾಮ ಕಾರಿಯಾಗಿ ಕಾಳೆಯವರು ತಮ್ಮ ರೇಖಾಚಿತ್ರಗಳಲ್ಲಿ ತಂದಿರುತ್ತಾರೆ.

ಚಿತ್ರ ೧ ಮತ್ತು ೨ರಲ್ಲಿ ಈ ದೃಶ್ಯದಲ್ಲಿ ಸಿನಿಮಾ ಚಿತ್ರೀಕರಣ ನಡೆಯುವ ಸಂದರ್ಭದಲ್ಲಿ ತೆಗಿಯಲ್ಪಟ್ಟ ಸಂಯೋಜನಾ ರೇಖಾಚಿತ್ರವಾಗಿದೆ. ಇದು ವಿಶ್ರಾಂತ ಸ್ಥಿತಿಯಲ್ಲಿ ಎಲ್ಲಾ ವ್ಯಕ್ತಿಗಳು ಕಂಡುಬರುತ್ತಾರೆ. ಇಲ್ಲಿರುವ ವ್ಯಕ್ತಿಗಳ ಹಾವಭಾವ ಭಂಗಿ ಬದಲಾಗುವ ಮುಂಚೆ ಅತ್ಯಂತ ವೇಗವಾಗಿ ಅಲ್ಲಿರುವ ದೃಶ್ಯವನ್ನು ಅವರ ವಿವಿಧ ಭಾವಭಂಗಿಗಳನ್ನು ಸೆರೆ ಹಿಡಿಯುವಲ್ಲಿ ಕಾಳೆಯವರು ಯಶಸ್ವಿಯಾಗಿದ್ದು, ಈ ದೃಶ್ಯ ವಿಶೇಷ ಪರಿಣಾಮವನ್ನುಂಟು ಮಾಡುತ್ತದೆ.

ಅಲೆಮಾರಿ ಜನಗಳ ದೃಶ್ಯ

ಚಿತ್ರ ೧, ೨, ೩, ೪ರಲ್ಲಿ ಅಲೆಮಾರಿಗಳ ಜೀವನವನ್ನು ಪ್ರತಿಬಿಂಬಿಸುವಂತಿವೆ ಈ ರೇಖಾಚಿತ್ರ ಗಳು ಅತ್ಯಂತ ಕಡಿಮೆ ಗೆರೆಗಳಲ್ಲಿವೆ. ಆ ದೃಶ್ಯವನ್ನು ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದ್ದಾರೆ ಕಾಳೆಯವರು. ಇವೆಲ್ಲಾ ರೇಖೆಗಳು ವೇಗವಾಗಿ ಒಡೆದು ಒಡೆದು ವಿಶೇಷ ಪರಿಣಾಮಕಾರಿ ರೇಖೆಗಳು ಸುಂದರವಾಗಿ ಮೂಡಿ ಬಂದಿವೆ.

ಐತಿಹಾಸಿಕ ಅವಶೇಷಗಳ ಕಟ್ಟಡಗಳನ್ನು ಕಾಳೆಯವರು ಇದ್ದಿಲು ಚಾರಕೋಲ ಮಾಧ್ಯಮದಲ್ಲಿ ಅತ್ಯಂತ ಕ್ಷಿಪ್ರಗತಿಯಲ್ಲಿ ಮಾಡಿರುವುದು ಕಂಡುಬರುತ್ತದೆ. ಇಲ್ಲಿ ಪಾಳುಬಿದ್ದ ಐತಿಹಾಸಿಕ ಅವಶೇಷಗಳ ದೃಶ್ಯಗಳನ್ನು ದೊಡ್ಡ ದೊಡ್ಡ ಕಲ್ಲುಬಂಡೆಗಳನ್ನು ಕೆಲವೇ ಕೆಲವು ಗೆರೆಗಳಲ್ಲಿ ಅತ್ಯಂತ ವೇಗವಾಗಿ ರಚಿಸಿರುವುದು ಕಂಡುಬರುತ್ತದೆ. ಅನೇಕ ದೇವತೆಗಳ, ಮೂರ್ತಿಶಿಲ್ಪಗಳ ರೇಖಾಚಿತ್ರಗಳನ್ನು ಅವುಗಳ ಬಾಹ್ಯ ಲಕ್ಷಣಗಳನ್ನು ಅತ್ಯಂತ ಕಡಿಮೆ ಗೆರೆಗಳಲ್ಲಿ ಚಾರಕೋಲ ಮಾಧ್ಯಮದಲ್ಲಿ ಅಷ್ಟೇ ಪರಿಣಾಮಕಾರಿಯಾಗಿ ಅವರ ಮೂರ್ತಿಶಿಲ್ಪಗಳ ರೇಖಾಚಿತ್ರಗಳು ಮೂಡಿಬಂದಿರುತ್ತವೆ.

೪. ಶಿರಭಾವ ಚಿತ್ರಗಳು ಮತ್ತು ವ್ಯಕ್ತಿ ಚಿತ್ರಗಳು

ಕಾಳೆಯವರ ಈ ರೇಖಾಚಿತ್ರಗಳು ಪೆನ್ನು ಮಾಧ್ಯಮದಲ್ಲಿ ರಚನೆಗೊಂಡಿದ್ದು, ಕಡಿಮೆ ಗೆರೆಗಳಲ್ಲಿಯೆ ವ್ಯಕ್ತಿಯ ಪೂರ್ಣಪ್ರಮಾಣದ ಭಾವವನ್ನು ಸೆರೆಹಿಡಿದಿದ್ದಾರೆ. ಅಲ್ಲದೇ ವ್ಯಕ್ತಿಯ ಮುಖದಲ್ಲಿ ಒಂದು ರೀತಿಯ ಜೀವಕಳೆಯನ್ನು ತುಂಬುವಲ್ಲಿ ಸ್ಪಂತಿಕೆಯಿದೆ. ಇವೆಲ್ಲಾ ಭಾವಚಿತ್ರಗಳು ಹೆಚ್ಚಾಗಿ ರಾಜಮನೆತನದ ಪೋಷಕು, ರಾಜ ಸಹಜ ಗಂಭೀರ ಮುಖ ಭಾವವನ್ನು ಹೊಂದಿದ್ದು, ಇದನ್ನು ಕಾಳೆಯವರು ತಮ್ಮ ರೇಖೆಗಳಲ್ಲಿಯೇ ಅತ್ಯಂತ ಯಶಸ್ವಿಯಾಗಿ ಸೆರೆ ಹಿಡಿದಿದ್ದಾರೆ.

೫. ಕಾಳೆಯವರ ಐತಿಹಾಸಿಕ ಅವಶೇಷಗಳ ಮೂರ್ತಿ ಶಿಲ್ಪಗಳು ಮತ್ತು ಕಟ್ಟಡಗಳ ರೇಖಾಚಿತ್ರಗಳು

ಕಾಳೆಯವರು ಅನೇಕ ಐತಿಹಾಸಿಕ ಅವಶೇಷಗಳ ರೇಖಾಚಿತ್ರಗಳನ್ನು ರಚಿಸಿದ್ದು, ಅವುಗಳು ಹೆಚ್ಚಾಗಿ ಪೆನ್ಸಿಲ್ ಮಾಧ್ಯಮದಲ್ಲಿರುವುದು ಕಂಡುಬರುತ್ತಿದ್ದು, ಅತ್ಯಂತ ಕ್ಷಿಪ್ರಗತಿಯಲ್ಲಿ ರಚಿಸಿದಂತೆ ಕಂಡುಬರುತ್ತವೆ. ಕರ್ನಾಟಕದಾದ್ಯಂತ ಇರುವ ಐತಿಹಾಸಿಕ ಸ್ಥಳಗಳಿಗೆ ಭೇಟಿಕೊಟ್ಟು ಕಾಳೆಯವರು ಅವುಗಳಲ್ಲಿರುವ ಭಗ್ನ ಸೌಂದರ್ಯವನ್ನು ತಮ್ಮ ರೇಖಾಚಿತ್ರಗಳಲ್ಲಿ ಹಿಡಿದಿಟ್ಟಿದ್ದಾರೆ.

೬. ಗ್ರಂಥಗಳಿಗೆ ಮಾಡಿಕೊಟ್ಟ ಅಸಂಖ್ಯಾ ಸಾಂದರ್ಭಿಕ ರೇಖಾಚಿತ್ರಗಳು

ಕರ್ನಾಟಕ ಸರ್ಕಾರ ಪಠ್ಯಪುಸ್ತಕ ಸಮಿತಿಯವರಿಗೆ ಕಾಳೆಯವರು ಹತ್ತು ಸಾವಿರಕ್ಕೂ ಮೇಲ್ಪಟ್ಟು ಸಾಂದರ್ಭಿಕ ರೇಖಾಚಿತ್ರಗಳನ್ನು ರಚಿಸಿಕೊಟ್ಟಿದ್ದಾರೆ. ಅವುಗಳು ಹೆಚ್ಚಾಗಿ ಪೆನ್ನಿನ ಮಾಧ್ಯಮದಲ್ಲಿರುವುದು ಕಂಡುಬರುತ್ತದೆ. ಇವುಗಳೆಲ್ಲಾವು ಪಠ್ಯಗಳಿಗೆ ಅವುಗಳ ವಿಷಯಗನ್ನು ಸಂವಹನಗೊಳಿಸುವಲ್ಲಿ ಕಾಳೆಯವರ ರೇಖಾಚಿತ್ರಗಳ ಪಾತ್ರ ಮಹತ್ವದ್ದು. ಅವರ ಸಾಂದರ್ಭಿಕ ರೇಖಾಚಿತ್ರಗಳಲ್ಲಿ ಆಕಾರಗಳ ಸಂಯೋಜನೆ, ಪ್ರಕೃತಿದೃಶ್ಯ, ಪ್ರಾಣಿ ಪಕ್ಷಿ ಪಾತ್ರೆ ಪಗಡೆ, ಜಾಯಿತಿ ಆಕಾರಗಳು ಮುಂತಾದವುಗಳನ್ನು ಕಾಣಬಹುದು.

೭. ತೊಗಲುಗೊಂಬೆಯಾಟದ ಕಲಾವಿದರಿಗೆ ರಚಿಸಿಕೊಟ್ಟ ರೇಖಾಚಿತ್ರಗಳು

ಕಾಳೆಯವರು ತೊಗಲು ಗೊಂಬೆಯಾಟಗಾರರಿಗೆ ನೂರಾರು ರೇಖಾಚಿತ್ರಗಳನ್ನು ರಚಿಸಿ ಕೊಟ್ಟಿದ್ದು ಮಹತ್ವದ್ದಾಗಿದೆ. ಅವುಗಳು ಬಳ್ಳಾರಿಯ ತೊಗಲುಗೊಂಬೆ ಆಟಗಾರರಾದ ಬೆಳಗಲ್ ವೀರಣ್ಣ ಅವರ ಮನೆಯಲ್ಲಿ ಸಂಗ್ರಹಿತಗೊಂಡಿವೆ. ಕಾಳೆಯವರು ರಚಿಸಿಕೊಟ್ಟ ಅನೇಕ ಪೌರಾಣಿಕ, ಐತಿಹಾಸಿಕ ರೇಖಾಚಿತ್ರಗಳ ಆಧಾರದ ಮೇಲೆ ಈ ಆಟಗಾರರು ಗೊಂಬೆಗಳನ್ನು ತಯಾರಿಸಿ ಕೊಂಡಿರುವುದು ಕಾಣುತ್ತೇವೆ.











ವ್ಯಕ್ತಿಗಳ ಶಿರಭಾವ ರೇಖಾಚಿತ್ರಗಳು














ಐತಿಹಾಸಿಕ ಅವಶೇಷಗಳ ಮೂರ್ತಿಶಿಲ್ಪಗಳ ರೇಖಾಚಿತ್ರಗಳು










ಐತಿಹಾಸಿಕ ದೇವಾಲಯ ಕಟ್ಟಡಗಳ ರೇಖಾಚಿತ್ರಗಳು











ಐತಿಹಾಸಿಕ ಕಟ್ಟಡಗಳ ರೇಖಾಚಿತ್ರಗಳು









ಐತಿಹಾಸಿಕ ಸ್ಥಳಗಳ ರೇಖಾಚಿತ್ರಗಳು














ಐತಿಹಾಸಿಕ ಸ್ಥಳಗಳ ರೇಖಾಚಿತ್ರಗಳು





ಸಾಂದರ್ಭಿಕ ರೇಖಾಚಿತ್ರಗಳು



ಸಾಂದರ್ಭಿಕ ರೇಖಾಚಿತ್ರಗಳು






ಸಾಂದರ್ಭಿಕ ರೇಖಾಚಿತ್ರಗಳು



ಸಾಂದರ್ಭಿಕ ರೇಖಾಚಿತ್ರಗಳು



ಸಾಂದರ್ಭಿಕ ರೇಖಾಚಿತ್ರಗಳು






ಸಾಂದರ್ಭಿಕ ರೇಖಾಚಿತ್ರಗಳು





ಸಾಂದರ್ಭಿಕ ರೇಖಾಚಿತ್ರಗಳು






ಸಾಂದರ್ಭಿಕ ರೇಖಾಚಿತ್ರಗಳು




ಸಾಂದರ್ಭಿಕ ರೇಖಾಚಿತ್ರಗಳು






ಕಾಳೆಯವರ ಸಾಂದರ್ಭಿಕ ರೇಖಾಚಿತ್ರಗಳು




ಸಾಂದರ್ಭಿಕ ರೇಖಾಚಿತ್ರಗಳು



ಸಾಂದರ್ಭಿಕ ರೇಖಾಚಿತ್ರಗಳು






ಸಾಂದರ್ಭಿಕ ರೇಖಾಚಿತ್ರಗಳು



ಸಾಂದರ್ಭಿಕ ರೇಖಾಚಿತ್ರಗಳು
















ಸಾಂದರ್ಭಿಕ ರೇಖಾಚಿತ್ರಗಳು













ಸಾಂದರ್ಭಿಕ ರೇಖಾಚಿತ್ರಗಳು

ಕಾಳೆಯವರು ತಮ್ಮ ಬದುಕಿನುದ್ದಕ್ಕೂ ಬಾಲ್ಯದಿಂದಲೂ ಚಿತ್ರಕಲೆಯಲ್ಲಿ ಆಸಕ್ತಿಯಿಂದಿದ್ದು ಅವರು ಬಾಲಕರಾಗಿದ್ದಾಗ ರಚಿಸಿದ ರೇಖಾಚಿತ್ರಗಳಿಂದ ಮನಗಾಣಬಹುದು. ಅಲ್ಲದೇ ಸಾವಿರಾರು ರೇಖಾಚಿತ್ರಗಳನ್ನು ಅವರು ರಚಿಸಿದ್ದು, ಅವುಗಳು ವೈವಿಧ್ಯಮಯವಾಗಿವೆ. ಅಲ್ಲದೇ ವಿವಿಧ ಮಾಧ್ಯಮಗಳಲ್ಲಿ ವಿವಿಧ ವಿಷಯಗಳನ್ನೊಳಗೊಂಡು ರಚಿತಗೊಂಡಿವೆ. ಈ ರೇಖಾಚಿತ್ರ ಕಲಾಪ್ರಕಾರದಲ್ಲಿಯೂ ಕೂಡಾ ಹಲವು ರೇಖಾಚಿತ್ರಗಳು ಅವರ ಅಂತಃಕರಣದಿಂದ ಮೂಡಿಬಂದಿವೆ. ಹಲವು ರೇಖಾಚಿತ್ರಗಳು ವ್ಯಾಪಾರಿ ಮನೋಭಾವದ ಹಿನ್ನೆಲೆಯಲ್ಲಿ ರಚಿತಗೊಂಡಿವೆ. ಆದರೂ ಈ ರೇಖಾಚಿತ್ರಗಳಲ್ಲಿ ಲಯಬದ್ಧತೆ, ಸ್ಪಷ್ಟತೆ, ಸ್ವಚ್ಛವಾದ ರೇಖೆಗಳು ಕಲಾತ್ಮಕತೆಯನ್ನು ಅವರು ಎಲ್ಲಿಯೂ ಕೈಬಿಟ್ಟಿಲ್ಲ. ವ್ಯಾಪಾರಿ ಮನೋಭಾವದ ರೇಖಾಚಿತ್ರಗಳಾದರೂ ಕೂಡಾ ಅವುಗಳಿಗೂ ಕಾಳೆಯವರು ನ್ಯಾಯ ಒದಗಿಸಿದ್ದಾರೆ ಎನ್ನಬಹುದು. ರೇಖಾ ಚಿತ್ರಗಳನ್ನು ಅವರು ದಿನನಿತ್ಯದ ಕಾಯಕ ಎಂಬುವಂತೆ ರಚಿಸುತ್ತಾ ಬಂದಿದ್ದಾರೆ. ಅವರ ಅನೇಕ ರೇಖಾಚಿತ್ರಗಳು ಸಾಂಪ್ರದಾಯಿಕ ಶ್ರೀಮಂತಿಕೆಯ ಲಕ್ಷಣಗಳನ್ನು ಹೊಂದಿದ್ದು, ಅವರ ಕ್ಷಿಪ್ರಗತಿಯ ರೇಖಾಚಿತ್ರಗಳು ಸಮಕಾಲೀನತೆಗೆ ಸ್ಪಂದಿಸುವಂತಿವೆ. ಅವರ ರೇಖಾಚಿತ್ರಗಳು ಇಂದು ಸರಿಯಾದ ವ್ಯವಸ್ಥೆಯಿಲ್ಲದೆ, ಸಾಕಷ್ಟು ಸಂಖ್ಯೆಯಲ್ಲಿ ಕಣ್ಮರೆಯಾಗಿರುವುದು ವಿಷಾದನೀಯ.

ವಿ.ಟಿ. ಕಾಳೆಯವರ ರೇಖಾಚಿತ್ರಗಳ ಅಧ್ಯಯನದಿಂದ ಕಂಡುಬರುವ ಪ್ರಮುಖ ಅಂಶಗಳು

೧. ಕಾಳೆಯವರು ಪೆನ್ಸಿಲ್, ಇಂಕ್, ಪೆನ್ನು, ಚಾರ್ಕೋಲ್ ಬ್ರಶ್, ಮಾಧ್ಯಮದಲ್ಲಿ ರಚಿಸಿದ ಈ ಎಲ್ಲಾ ಚಿತ್ರಗಳು ವೈವಿಧ್ಯಮಯವಾದ ವಿಷಯಗಳನ್ನೊಳಗೊಂಡಿದ್ದು, ಅವರ ವರ್ಣಚಿತ್ರ ಗಳಲ್ಲಿಯೂ ಕೂಡಾ ರೇಖೆಗಳೇ ಪ್ರಮುಖವಾಗಿ ಕಂಡುಬರುತ್ತವೆ.

೨. ಅವರ ರೇಖಾಚಿತ್ರಗಳು ದಿನನಿತ್ಯದ ಅಂಕನೆಗಳ ರೇಖಾಚಿತ್ರಗಳು ಸಮಕಾಲೀನ ಸ್ಪಂದನೆಯಿಂದ ಕೂಡಿವೆ.

೩. ಅವರ ಕ್ಷಿಪ್ರಗತಿಯ ರೇಖಾಚಿತ್ರಗಳಲ್ಲಿ ಕಂಡುಬರುವುದು ಅತ್ಯಲ್ಪ ಗೆರೆಗಳಿಂದ ಪೂರ್ಣ ಕಲ್ಪನೆಯ ಚಿತ್ರಗಳು.

೪. ಅತ್ಯಂತ ಕ್ಷಿಪ್ರಗತಿ ಅವರ ರೇಖೆಗಳಲ್ಲಿ ಕಂಡುಬರುತ್ತದೆ. ಅಲ್ಲದೇ ರೇಖೆಯು ಅವರ ಕಲೆಯ ಜೀವಾಳ ಕೂಡ ಆಗಿದೆ.

೫. ಕಾಳೆಯವರ ರೇಖೆಗಳಲ್ಲಿ ಚಲನೆಯಿದೆ, ಲಯಬದ್ಧತೆ, ವೈಯಕ್ತಿಕ ಶೈಲಿಯ ಛಾಪು ಇದೆ.

೬. ಅವರ ರೇಖೆಗಳು ಭಾವ ಪ್ರಧಾನವಾಗಿವೆ. ಅಲ್ಲದೇ ಸಾಂಪ್ರದಾಯಕ್ಕೆ ಹೆಚ್ಚು ಒತ್ತು ಕೊಟ್ಟಿವೆ.

೭. ಇವರ ರೇಖಾಚಿತ್ರಗಳು ಸ್ಪಷ್ಟವಾಗಿ, ಸ್ಫುಟವಾಗಿ, ದೃಢವಾಗಿವೆ.

೮. ಕಾಳೆಯವರು ಅನೇಕ ಕ್ಷಿಪ್ರಗತಿಯ ರೇಖಾಚಿತ್ರಗಳನ್ನು ರಚಿಸಿದ್ದಾರೆ. ಅಲ್ಲದೇ ತಿದ್ದಿತೀಡಿ ಬರೆದ ಪರಿಪೂರ್ಣ ರೇಖಾಚಿತ್ರಗಳನ್ನು ಅವರ ವರ್ಣಚಿತ್ರಗಳಲ್ಲಿ ಕಾಣಬಹುದು.

೯. ಕಾಳೆಯವರ ರೇಖಾಚಿತ್ರಗಳಲ್ಲಿ, ಅಜಂತಾ ಭಿತ್ತಿಚಿತ್ರಗಳ, ರಜಪೂತ ಕಲೆಯಲ್ಲಿರುವ ರೇಖೆಗಳ ಲಯಬದ್ಧತೆ ಮತ್ತು ಬಂಗಾಲಿ ಚಿತ್ರ ಶೈಲಿಯ ಪ್ರಭಾವ ಕಂಡುಬರುತ್ತದೆ.

೧೦. ಕಾಳೆಯವರ ರೇಖಾಚಿತ್ರ ಕಲಾಪ್ರಕಾರದಲ್ಲಿ ಹಲವು ರೇಖಾಚಿತ್ರಗಳು ಅವರ ಅಂತಃಕರಣದಿಂದ ಮೂಡಿಬಂದಿವೆ. ಅಲ್ಲದೇ ಹಲವು ರೇಖಾಚಿತ್ರಗಳು ವ್ಯಾಪಾರಿ ಮನೋಭಾವದ ಹಿನ್ನೆಲೆಯಲ್ಲಿ ರಚಿತಗೊಂಡಿವೆ.

೧೧. ಅವರ ಅನೇಕ ರೇಖಾಚಿತ್ರಗಳು ಸಾಂಪ್ರದಾಯಿಕ ಶ್ರೀಮಂತಿಕೆಯ ಲಕ್ಷಣಗಳನ್ನು ಹೊಂದಿದ್ದು, ಅವರ ಕ್ಷಿಪ್ರಗತಿಯ ರೇಖಾಚಿತ್ರಗಳು ಸಮಕಾಲೀನತೆಗೆ ಸ್ಪಂದಿಸುವಂತಿವೆ.

೧೨. ಕಾಳೆಯವರು ಒಬ್ಬ ಉತ್ತಮ ವರ್ಣಚಿತ್ರಕಲಾವಿದರಂತೆ ಒಬ್ಬ ಉತ್ತಮ ರೇಖಾಚಿತ್ರ ಕಲಾವಿದರು ಕೂಡ ಹೌದು.

೧೩. ಭಾರತೀಯ ರೇಖೆಗಳೇ ಭಾರತೀಯ ಕಲೆಯ ಜೀವಾಳ. ಹಾಗೆಯೇ ಕಾಳೆಯವರ ಕಲಾಕೃತಿಗಳಲ್ಲಿ ಸಹಜವಾಗಿಯೇ ಭಾರತೀಯ ಕಲೆಯ ಗುಣಲಕ್ಷಣಗಳು ಕಂಡುಬರುತ್ತವೆ.

ಅಧ್ಯಾಯ ೪

ವಿ.ಟಿ. ಕಾಳೆಯವರ ವರ್ಣಚಿತ್ರಗಳು

ಅಧ್ಯಾಯ ನಾಲ್ಕು

ವಿ.ಟಿ. ಕಾಳೆಯವರ ವರ್ಣಚಿತ್ರಗಳು

ವಿ.ಟಿ.ಕಾಳೆಯವರು ತಮ್ಮ ಬದುಕಿನುದ್ದಕ್ಕೂ ಅನೇಕ ವರ್ಣಚಿತ್ರಗಳನ್ನು ವಿಭಿನ್ನ ಮಾಧ್ಯಮದಲ್ಲಿ ವಿಭಿನ್ನ ವಿಷಯಗಳನ್ನೊಳಗೊಂಡು ರಚಿಸಿದ್ದು ಅವುಗಳನ್ನು ವಿಷಯಾನುಸಾರವಾಗಿ ವಿಂಗಡಿಸಿ ಇಲ್ಲಿ ಅಧ್ಯಯನ ಮಾಡಲಾಗಿದೆ. ಅಲ್ಲದೇ ಈ ಅಧ್ಯಾಯವು ಒಟ್ಟು ಅಧ್ಯಯನದ ಹೃದಯ ಭಾಗದಂತಿದ್ದು ಅತ್ಯಂತ ಮಹತ್ವಪೂರ್ಣವಾಗಿದೆ.

ವಿ.ಟಿ. ಕಾಳೆಯವರ ವರ್ಣಚಿತ್ರಗಳು

ಸಂಯೋಜನೆ ಚಿತ್ರಗಳು

೧. ರಾಗಮಾಲಾ ಚಿತ್ರಗಳು
೨. ದೇವತಾ ಚಿತ್ರಗಳು
೩. ದಿನದ ನಾಲ್ಕು ಪ್ರಹರಗಳ ಚಿತ್ರಗಳು
೪. ನವ್ಯಶೈಲಿಯ ಸೃಜನಾತ್ಮಕ ಚಿತ್ರಗಳು
೫. ವಾಣಿಜ್ಯಕ್ಕೆ ಸಂಬಂಧಿಸಿದ ಸಂಯೋಜನಾ ಚಿತ್ರಗಳು

ಭಾವಚಿತ್ರ ಮತ್ತು ಚಿತ್ರಗಳು

೧. ರೂಪದರ್ಶಿ ಆಧಾರಿತ ಚಿತ್ರಗಳು
೨. ಛಾಯಾಚಿತ್ರ ಆಧಾರಿತ ಚಿತ್ರಗಳು
೩. ಕಲ್ಪನೆಯ ಆಧಾರಿತ ಚಿತ್ರಗಳು

ನಿಸರ್ಗ ವ್ಯಕ್ತಿಚಿತ್ರಗಳು

೧. ಶ್ರವಣಬೆಳಗೊಳದ ನಿಸರ್ಗ ಚಿತ್ರಗಳು
೨. ಸಂಡೂರಿನ ನಿಸರ್ಗ ಚಿತ್ರಗಳು
೩. ಗುತ್ತಿಕೋಟೆಯ ನಿಸರ್ಗ ದೃಶ್ಯ
೪. ಹಂಪೆಯ ಐತಿಹಾಸಿಕ ಕಟ್ಟಡಗಳ ದೃಶ್ಯಗಳು
೫. ಗೋವಾದ ನಿಸರ್ಗ ಚಿತ್ರಗಳು
೬ ಮಡಿಕೇರಿಯ ನಿಸರ್ಗ ಚಿತ್ರಗಳು
೭. ತಮಿಳುನಾಡಿನ ನಿಸರ್ಗ ಚಿತ್ರಗಳು

ವಿ.ಟಿ.ಕಾಳೆಯವರ ಸಂಯೋಜನಾ ಚಿತ್ರಗಳು

ಕಾಳೆಯವರು ತಮ್ಮ ಬದುಕಿನುದ್ದಕ್ಕೂ ಅನೇಕ ಸಂಯೋಜನಾ ಸರಣಿ ಚಿತ್ರಗಳನ್ನು ರಚಿಸಿದ್ದು, ಅವು ಕ್ರಮವಾಗಿ; ರಾಗಮಾಲಾ ಚಿತ್ರಗಳು, ದೇವತಾ ಚಿತ್ರಗಳು, ದಿನದ ನಾಲ್ಕು ಪ್ರಹರಗಳ ಚಿತ್ರಗಳು, ಆಧುನಿಕ ಸಂವೇದನೆಯ ಚಿತ್ರಗಳು, ಗ್ರಾಮೀಣ ಜನಜೀವನವನ್ನು ಕುರಿತು ಮಾಡಿರುವ ಚಿತ್ರಗಳು, ಹಾನಗಲ್ಲ ಕುಮಾರಸ್ವಾಮಿಯವರ ಜೀವನಾಧಾರಿತ ಕಲಾಕೃತಿಗಳನ್ನು ಸಂಯೋಜಿಸಿ ಕೃತಿ ರಚಿಸಿರುವುದು ಕಂಡುಬರುತ್ತದೆ. ಕಾಳೆಯವರ ಸಂಯೋಜನಾ ಕಲಾಕೃತಿಗಳಲ್ಲಿ ಹೆಚ್ಚಿನ ಸರಣಿ ಚಿತ್ರಗಳು ಭಾರತೀಯ ಕಲೆಯ ಅಂತಃಸತ್ವವನ್ನು ಪ್ರತಿನಿಧಿಸಬಲ್ಲ ಕಲಾಕೃತಿಗಳಾಗಿದ್ದು, ಅವರ ಅಂತಃಕರಣದಿಂದ ಈ ಕಲಾಕೃತಿಗಳು ಮೂಡಿಬಂದಿವೆ ಎನ್ನಬಹುದು.

ಕಾಳೆಯವರ ಸಂಯೋಜನಾ ಕಲಾಕೃತಿಗಳನ್ನು ಅಧ್ಯಯನ ಮಾಡುವ ಮೊದಲಿಗೆ ಇಲ್ಲಿ ಸಂಯೋಜನೆ ಎಂಬ ಪದದ ಹುಟ್ಟು, ಅರ್ಥ, ಅದರ ರೂಪರೇಷೆ, ಮುಂತಾದವುಗಳನ್ನು ಸ್ಥೂಲವಾಗಿ ಅಧ್ಯಯನ ಮಾಡಲಾಗಿದೆ.

'ಸಂಯೋಜನ' ಎಂಬ ಶಬ್ದವನ್ನು ಇಂಗ್ಲಿಷ್‌ನ Composition ಎಂಬ ಪದಕ್ಕೆ ಸಂವಾದಿಯಾಗಿ ಬಳಸಲಾಗುತ್ತದೆ. ಯುಜ್ ಎಂದರೆ ಸೇರಿಸು, ಕೂಡಿಸು, ಜೋಡಣೆ, ಕ್ರಮವಾಗಿ ಇರಿಸು ಎಂದರ್ಥ. ಸಂಯೋಜನೆ ಎಂದಾಗ ಒಟ್ಟಂದ ಗಮನಿಸಿದ ಜೋಡಣೆ. ಯುಜ್ ಮೂಲಕ 'ಯೋಜನೆ'ಗೆ ಪೂರ್ವಭಾವಿಯಾಗಿ ಯೋಜಿಸಿ ಸಿದ್ಧಪಡಿಸುವ ಅರ್ಥವೂ ಇದೆ. ಇಂಗ್ಲಿಷಿನ ಪದಕ್ಕೆ ಹಲವಾರು ಅರ್ಥಗಳಿವೆ. ಶಾಲೆಯಲ್ಲಿ ಬರೆಯುವ ಅಭ್ಯಾಸ ಪ್ರಬಂಧದಿಂದ ತೊಡಗಿ ಮುದ್ರಣಾಲಯದಲ್ಲಿ ಅಕ್ಷರ ಮೊಳೆ ಜೋಡಿಸವುದಕ್ಕು, ಸಂಗೀತ ರಚನೆ ಮಾಡುವುದಕ್ಕೂ ಬಳಕೆಯಾಗುತ್ತಿದೆ. ಅಂಗ ಅಥವಾ ಭಾಗಗಳನ್ನು ಒಂದು 'ಪೂರ್ಣ'ವಾಗಿ ಜೋಡಿಸುವ ಕಲೆ ಎಂಬುದು ಮೂಲಾರ್ಥ. ಕಲೆಯ ಸಂದರ್ಭದಲ್ಲಿ ಒಂದು ಕಲಾ ಕೃತಿಯಲ್ಲಿ ಅದರ ಅಂಗಭಾಗಗಳನ್ನು ಒಟ್ಟಂದದ ದೃಷ್ಟಿಯಿಂದ ಕಲಾತ್ಮಕವಾಗಿ ಒಂದು ಪೂರ್ಣರೂಪವಾಗಿ ಅಳವಡಿಸುವುದು.[೧] ಒಟ್ಟಂದ ಎಂದರೆ ಬರೀ ಮೊತ್ತವಲ್ಲ; ಅದನ್ನು ಮೀರಿದ ಅನುಭವ. ಪ್ರೊ. ಎಂ.ಎಚ್. ಕೃಷ್ಣಯ್ಯನವರು ಹೇಳುವಂತೆ "ಉತ್ತಮ ಸಂಯೋಜನೆಯ ಗುಣ ಯಾವುದು? ಹೇಗಿದೆ? ಎಂಬುದು ಅನುಭವ ವೇದ್ಯವೇ ಹೊರತು ವಿವರಣೆಗೆ ದಕ್ಕುವುದಿಲ್ಲ. ಏಕೆಂದರೆ ಉತ್ತಮ ಸಂಯೋಜನೆಯ ಸಾಧ್ಯತೆಗಳು ಅಪಾರವಾದದ್ದು"[೨] ಎಂಬ ಮಹತ್ವದ ಅಂಶಗಳು ಕಂಡುಬರುತ್ತವೆ.

---

೧. ಪ್ರೊ. ಎಂ.ಎಚ್. ಕೃಷ್ಣಯ್ಯ, (ಸಂ) ಕಲೆ ಮತ್ತು ರಸಾಸ್ವಾದನೆ ಪು.೮೪

೨. ಅದೇ ಪು.೮೫



ಬಾಗೇಶ್ರಿ ರಾಗಿಣಿ

"ನೋಡಲು ದೃಷ್ಟಿಗೆ ಹಿತವಾಗಿರುವಂತೆ ಇರಿಸುವುದೇ ಸಂಯೋಜನೆಯಾಗುತ್ತದೆ"[೩] ಎಂದು ಅ.ಲ. ನರಸಿಂಹನ್ ಅವರ ಅಭಿಪ್ರಾಯಪಡುತ್ತಾರೆ.

ವಿ.ಟಿ. ಕಾಳೆಯವರು ಕಲಾಕೃತಿಗಳಲ್ಲಿ ಸಂಯೋಜನೆ ಕುರಿತು ಹೇಳುವಂತೆ "ಕಲಾವಿದನು ಚಿತ್ರಿಸಿರುವ ಮುಖ್ಯವಸ್ತುವಿಗೆ ಸಂಬಂಧಿಸಿದಂತೆ ಪೂರಕವಾದ ಇತರ ಆಕೃತಿಗಳನ್ನು ಹೊಂದಿಸಿ ಚಿತ್ರರಚಿಸುವ ಕಲಾತ್ಮಕತೆಗೆ ಸಂಯೋಜನೆ ಎಂದು ಕರೆಯುತ್ತಾರೆ. ಚಿತ್ರ ಸಂಯೋಜನೆಯು ಚಿತ್ರಕಲೆಯ ಎಲ್ಲಾ ವಿಷಯಗಳಲ್ಲಿ ಅತಿ ಪ್ರಾಮುಖ್ಯ ಹಾಗೂ ಮಹತ್ವದ ವಿಷಯವಾಗಿರುತ್ತದೆ. ಕಲಾವಿದನ ಬುದ್ಧಿಮತ್ತೆಯು ಚಿತ್ರ ಸಂಯೋಜನೆಯಿಂದಲೇ ಪ್ರಕಟಗೊಳ್ಳುತ್ತದೆ. ಕಲಾವಿದನ ರಚನಾತ್ಮಕ, ಕ್ರಿಯಾತ್ಮಕ, ಅಭಿವ್ಯಕ್ತಿ ಕೌಶಲ್ಯಗಳು ಚಿತ್ರ ಸಂಯೋಜನೆಯ ಮುಖಾಂತರವೇ ಬೆಳಕಿಗೆ ಬರುತ್ತವೆ".[೪] ಎಂಬುದು ಕಾಳೆಯವರ ಅಭಿಪ್ರಾಯವಾಗಿದೆ.

ಸಂಯೋಜನೆಯ ಪರಿಕಲ್ಪನೆ ಆಧುನಿಕವೇನಲ್ಲ. ಐತಿಹಾಸಿಕ ಭಿತ್ತಿಚಿತ್ರಗಳಲ್ಲಿ, ಇತಿಹಾಸ ಪೂರ್ವ ಗುಹೆಗಳ ಭಿತ್ತಿಯಲ್ಲಿಯೂ ಕೂಡಾ ಸಂಯೋಜನೆಯುಂಟು. ಚಿತ್ರ ಸಂಯೋಜನೆಯು ಸಾಂಪ್ರದಾಯಿಕವಾಗಿರಲಿ, ಆಧುನಿಕವಾಗಿರಲಿ, ಆಧುನಿಕ ಪಂಥಗಳಿಗನುಸಾರವಾಗಿರಲಿ, ಸಮಕಾಲೀನ ಕೃತಿಯಾಗಿರಲಿ ಅದರಲ್ಲಿ ಚಿತ್ರ ಸಂಯೋಜನೆಯ ಮೂಲ ತತ್ವಗಳಾಗಲಿ, ನಿಯಮ ನಿಬಂಧನೆ ಗಳಾಗಲಿ ಇಲ್ಲದೆ ಹೋದಲ್ಲಿ ಅದೊಂದು ಪರಿಪೂರ್ಣ ಕಲಾಕೃತಿಯಾಗಿಲಾರದು[೫] ಎಂಬ ಮಾತು ಪ್ರಸ್ತುತವಾಗಿದೆ.

ಪಾಶ್ಚಿಮಾತ್ಯರಲ್ಲಿ ಯಾವ ಬಗೆಯ ಭಾವನೆಯ ಆಕಾರಗಳನ್ನು ಯಾವ ಕಥಾ ಸಂದರ್ಭದಲ್ಲಿ ಹೇಗೆ ಇರಿಸಬೇಕೆಂಬ, ಅವುಗಳಿಗೆ ಪೂರಕವಾಗಿ ಹಿನ್ನೆಲೆ ಮುನ್ನಲೆಗಳನ್ನು ತುಂಬ ಬೇಕೆಂಬ ಬಗ್ಗೆ ಒಂದು ನಿಶ್ಚಿತ ತತ್ವ(ಥಿಯರಿ)ಗಳನ್ನು ಪ್ರತಿಪಾದಿಸಿದೆ. ಸಾಮಾನ್ಯವಾಗಿ ಅಡ್ಡ ಅಗಲವಿರುವ ಫಲಕದಲ್ಲಿ ದೃಷ್ಟಿ ಅಡ್ಡಕ್ಕೆ ಹಾಯುವುದರಿಂದ ಆಕಾರಗಳನ್ನು ಸಾಲಾಗಿ ಇರಿಸಬೇಕೆಂದೂ ಎತ್ತರ ಹೆಚ್ಚಿರುವ ಫಲಕದಲ್ಲಿ ದೃಷ್ಟಿ ಕೆಳಗಿನಿಂದ ಮೇಲೆ ಹಾಯುವುದರಿಂದಲೂ ಚಚ್ಚೌಕವಾದ ಆಕೃತಿ ಯಲ್ಲಿ ವೃತ್ತಾಕಾರವಾಗಿ ದೃಷ್ಟಿ ಹರಿಯುವುದರಿಂದ ಇವುಗಳಿಗೆ ಪೂರಕವಾಗಿ ಆಕೃತಿಗಳನ್ನು ಇರಿಸಬೇಕೆಂದೂ ಹೇಳಿಕೆಗಳಿವೆ. ಆಕೃತಿಗಳು ಉದ್ದವಾಗಿದ್ದರೆ ಮುಖಂಡನಂತೆ ಕಾಣುವುದೆಂದು, ಅಡ್ಡವಾಗಿದ್ದರೆ ಮಲಗಿದ ವಿಶ್ರಾಂತ ಸ್ಥಿತಿಯೆಂಬುದು ಮೂಲೆಯಿಂದ ಮೂಲೆಗೆ ಅಡ್ಡ ಹಾಯ್ದಿದ್ದರೆ

---

೩. ಅ.ಲ.ನರಸಿಂಹನ, (ಸಂ) ಕಲಾಕೋಶ ಪು.೩೩೨

೪. ವಿ.ಟಿ.ಕಾಳೆ, (ಸಂ) ಕಲಾಕೋಶ ಪು.೩೨೯

೫. ಅದೇ ಪು.೩೩೧

ಹಾರಾಟದ ಅನುಭವ ನೀಡುವುದೆಂದೂ, ತ್ರಿಕೋನಾಕಾರದ ರಚನೆಯಲ್ಲಿ ಬಲಿಷ್ಠತೆಯನ್ನು ಕಾಣಬಹುದೆಂದು ವ್ಯಾಖ್ಯಾನಗಳಿವೆ[೬] ಎಂಬ ವಿವರಣೆಯು ಸಂಯೋಜನೆಯ ಲಕ್ಷಣಗಳನ್ನು ಹೇಳುತ್ತದೆ.

ಚಿತ್ರ ಸಂಯೋಜನೆಯ ಮೂಲತತ್ವಗಳಾದ ವರ್ಣ (colour), ರೇಖೆ (Drawing), ಆಕೃತಿ (form), ಮೈವಳಿಕೆ (texture), ಸ್ಥಳವಕಾಶ, ಮುಂತಾದವುಗಳ ಅರ್ಥವ್ಯಾಪ್ತಿಗಳನ್ನು ಐಕ್ಯತೆ(unity) ಸಾಮರಸ್ಯತೆ, ಸಮತೂಕ (balance), ಲಯ (rhythm), ಒತ್ತು ಮತ್ತು ಪ್ರಮಾಣ ಮುಂತಾದ ಚಿತ್ರ ಸಂಯೋಜನೆಯ ನಿಯಮಗಳನ್ನು ತಿಳಿದಲ್ಲದೆ ಚಿತ್ರ ಸಂಯೋಜನೆಯು ಪರಿಪೂರ್ಣ ಕೃತಿಯೆನಿಸಲು ಸಾಧ್ಯವಿಲ್ಲ. ಪ್ರತಿಯೊಂದು ರೇಖೆ, ವರ್ಣಗಳಿಗೆ ಪ್ರತ್ಯೇಕವಾದ ಗುಣ ಸ್ವಭಾವಗಳಿರುವುದರಿಂದ ಕಲಾವಿದನು ಚಿತ್ರಿಸಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಗುಣ ವಿಶೇಷಗಳ ವರ್ಣಗಳನ್ನು ಈ ರೇಖೆಗಳನ್ನೂ ಚಿತ್ರಿಸಿದಾಗಲೇ ಚಿತ್ರವು ಅರ್ಥಪೂರ್ಣವಾಗುತ್ತದೆ.[೭] ಹೀಗೆ ಈ ಎಲ್ಲಾ ಅಂಶಗಳು ಸಂಯೋಜನೆಯೊಂದರ ಮುಖ್ಯವಾದ ಅಂಗಗಳಾಗಿವೆ ಎನ್ನಬಹುದು. ಇವುಗಳನ್ನು ಒಂದೊಂದಾಗಿ ಇಲ್ಲಿ ವಿವರಣೆಯನ್ನು ಕೊಡಲಾಗಿದೆ.

ವರ್ಣ

ಸಂಯೋಜನಾ ಕಲಾಕೃತಿಯೊಂದರಲ್ಲಿ ವರ್ಣವು ಪ್ರಮುಖವಾದ ಪಾತ್ರವಹಿಸುತ್ತದೆ. ಮೊದಲಿಗೆ ನಮ್ಮ ಕಣ್ಣನ್ನು ತೀವ್ರವಾಗಿ ಸೆಳೆಯುವುದು ಕಲಾಕೃತಿಯಲ್ಲಿರುವ ಬಣ್ಣ. ಕಲಾಕೃತಿಯೊಂದರಲ್ಲಿರುವ ರೇಖೆಗಳು, ಆಕಾರಗಳು, ವಸ್ತುವಿಷಯ ಇವುಗಳಿಗಿಂತಲೂ ಮುಖ್ಯವಾಗಿ ವರ್ಣವು ನಮ್ಮ ಮನಸ್ಸಿನ ಮೇಲೆ ಅತ್ಯಂತ ತೀವ್ರವಾಗಿ ಪರಿಣಾಮವನ್ನು ಬೀರುತ್ತದೆ. ಸಂಯೋಜನೆಲ್ಲಿರುವ ವರ್ಣಗಳು ಸಾಮರಸ್ಯ ಭಿನ್ನತೆ ಇವು ವಿಶೇಷವಾದ ಪರಿಣಾಮವನ್ನುಂಟು ಮಾಡುತ್ತದೆ.

ಚಿತ್ರಕಲೆಯಲ್ಲಿ ವರ್ಣವನ್ನು ಇತಿಹಾಸಪೂರ್ವದ ಆದಿಮಾನವನಿಂದಲೂ ಬಳಸಲ್ಪಟ್ಟಿದೆ. ಪ್ರಾಣಿಗಳ ರಕ್ತದಿಂದಲೂ, ಸಸ್ಯಗಳಿಂದಲೂ ಬಣ್ಣ ಬಣ್ಣದ ಕಲ್ಲುಗಳನ್ನು ಕುಟ್ಟಿಪುಡಿ ಮಾಡಿ ಬಣ್ಣವನ್ನು ಲೇಪಿಸಿರುವುದು ಈಗಲೂ ಗುಹಾಚಿತ್ರಗಳಲ್ಲಿ ಕಂಡುಬರುವ ಅಂಶವಾಗಿದೆ. ಹೀಗೆ ಬಣ್ಣವೆಂಬುದು ಕಲಾವಿದನ ಒಂದು ಭಾಗವಾಗುತ್ತಾ ಬಂದಿದೆ.

---

೬. ಅ.ಲ.ನರಸಿಂಹನ, (ಸಂ) ಕಲಾಕೋಶ ಪು.೩೩೨

೭. ವಿ.ಟಿ.ಕಾಳೆ, (ಸಂ) ಕಲಾಕೋಶ ಪು.೩೩೧

ವಿಜ್ಞಾನಿಗಳ ಅನ್ವೇಷಣೆಯ ಪ್ರಕಾರ ಮಾನವರಿಗೆ ಮಾತ್ರ ಬಣ್ಣಗಳ ಲೋಕವನ್ನು ಕಾಣಬಲ್ಲಂಥ ಕಣ್ಣುಗಳಿವೆ. (ಕೆಲವೊಂದು ಜಾತಿಯ ವಾನರಗಳಿಗೂ ಈ ಅನುಕೂಲವುಂಟೆಂದು ಹಲವು ಸಂಶೋಧಕರ ಪ್ರತಿಪಾದನೆಗಳೂ ಉಂಟು.) ಇದಕ್ಕೆ ಕಾರಣ ಮನುಜನ ನಯನಗಳಿಲ್ಲರುವ ಶಕಾಲೆ (rods) ಹಾಗೂ ಶಂಕ(cones)ಗಳೆಂದು ಕೂಡ ನಮಗೆ ಜೀವ ವಿಜ್ಞಾನವು ತಿಳಿಸಿದೆ. 'ಬಣ್ಣ' ಎಂಬ ಶಬ್ದವು ಸಂಸ್ಕೃತದ 'ವರ್ಣ'ದಿಂದ ಉದಯಿಸಿದ ತದ್ಭವವೆಂಬುದು ಸಾಬೀತಾಗಿದೆ. ವರ್ಣ ಎಂಬುದಕ್ಕೆ 'ಆಯ್ಕೆ' ಎಂಬ ಅರ್ಥವನ್ನು ಕೆಲವರು ನಿರ್ವಚಿಸುವುದುಂಟು. ಇವುಗಳ ಚೆಲುವಿಗೊಂದು ಪ್ರಶಸ್ತಿಯಿದೆ, ಪ್ರಶಂಸೆ ಇಲ್ಲಿರುವುದೂಂಟು. ವಿನೂತನ ಭಾಷೆ ಇವುಗಳಿಗೊಂದು ಸಾಹಿತ್ಯ ಸ್ವಾರಸ್ಯವಿದೆ. ಸಂಗೀತ ಸಾಮರಸ್ಯವಿದೆ ಹೀಗೆ ಬಣ್ಣಗಳ ಲೋಕಕ್ಕೆ ವರ್ಣದ ಎಲ್ಲಾ ಅರ್ಥಗಳೂ ಸಂಗತ.[೮] ವರ್ಣಗಳ ಕುರಿತಾದ ಈ ಅರ್ಥಗಳು ಮಹತ್ವಪೂರ್ಣವಾಗಿವೆ.

ಇಂಗ್ಲಿಷಿನಲ್ಲಿ 'ಬಣ್ಣ' (ವರ್ಣ) ಎಂಬುದನ್ನು Colour ಎಂಬ ಶಬ್ದದಿಂದ ಕರೆದರೆ, ಅದರ ಸೂಕ್ಷ್ಮ ವ್ಯತ್ಯಾಸವನ್ನು ವರ್ಣಛಾಯೆ (hue) ಎಂಬ ಪದದಿಂದ ಕರೆಯುತ್ತಾರೆ.[೯] ಚಿತ್ರಕಲೆಯಲ್ಲಿ ಬಣ್ಣವು ಕಲಾಕೃತಿಯ ಜೀವಾಳ. ಕಲಾವಿದನ ಭಾವನೆಗಳಿಗೆ ಜೀವ ತುಂಬುವ ಪ್ರಾಣವಾಯು. ಚಿತ್ರಕಲಾವಿದರು ಬಳಸುವ ಬಣ್ಣಗಳನ್ನು ಎಣ್ಣೆ ಬಣ್ಣ, ನೀರು ಬಣ್ಣ, ಹುಡಿ ಬಣ್ಣ, ಪೋಸ್ಟರ್ ಬಣ್ಣ, ಪೇಸ್ಟಲ್ ಬಣ್ಣ, ಅಕ್ರಾಲಿಕ್ ಬಣ್ಣ ಮುಂತಾಗಿ ಕರೆಯಲಾಗುತ್ತದೆ. ಬಣ್ಣಗಳ ವೈವಿಧ್ಯತೆಗಳಿಗನುಗುಣವಾಗಿ ಕಲಾವಿದರು ವಿವಿಧ ತಂತ್ರ ಹಾಗೂ ವಿಧಾನಗಳಲ್ಲಿ ಚಿತ್ರಿಸುತ್ತಾರೆ. ಈ ಬಣ್ಣಗಳು ಕಲಾವಿದರ ಭಾವಾಭಿವ್ಯಕ್ತಿಗಳಿಗೆ ಸರಳವೂ, ಸುಲಭವೂ ಆದ ಮಾಧ್ಯಮಗಳಾಗಿರುತ್ತವೆ. ಬಹು ಪುರಾತನ ಕಾಲದಿಂದ ಇಂದಿನವರೆಗೂ ಬಣ್ಣಗಳನ್ನು ಕಲಾವಿದರು ಬಳಸುತ್ತಿದ್ದಾರೆ.[೧೦] ಎಂಬ ಈ ಮಾತು ಬಣ್ಣಗಳ ಮಹತ್ವವನ್ನು ಸಾರುತ್ತದೆ.

ಬಣ್ಣಗಳನ್ನು ಮೂಲ ಬಣ್ಣಗಳು, ಪೂರಕ ಬಣ್ಣಗಳು, ವಿರೋಧ ಬಣ್ಣಗಳು, ಗಾಢ ಬಣ್ಣಗಳು, ತೆಳುಬಣ್ಣಗಳು, ತಂಪು ಬಣ್ಣಗಳು, ಪ್ರಖರ ಬಣ್ಣಗಳು, ಪಾರದರ್ಶಕ ಬಣ್ಣಗಳು, ಅಪಾರದರ್ಶಕ ಬಣ್ಣಗಳೆಂದು ಕರೆಯಲಾಗುತ್ತದೆ. ಹಸಿರು, ನೀಲಿ, ಕೆಂಪು, ಹಳದಿ, ಕೇಸರಿ, ಬೂದು ಹಾಗೂ ಶಾಮ ಬಣ್ಣಗಳು ಮೂಲ ಬಣ್ಣಗಳೆಂದು ಸಾಮಾನ್ಯವಾದ ಒಂದು ತಿಳುವಳಿಕೆಯಿದೆ. ಈ ಎಲ್ಲ ಬಣ್ಣಗಳು ಕಾಮನಬಿಲ್ಲಿನ ಬಣ್ಣಗಳಾಗಿರುತ್ತವೆ. ಆದರೆ ಬಣ್ಣಗಳ

---

೮. ಡಾ. ಆರ್.ಗಣೇಶ್, ಕಲಾಕೌತುಕ, ಪು.೪೧

೯. ಡಾ. ಶಿವರಾಮಕಾರಂತ, ಕಲಾಪ್ರಪಂಚ, ಪು.೮೫

೧೦. ಕೆ.ವಿ. ಕಾಳೆ, ಕರ್ನಾಟಕದ ಚಿತ್ರಕಲೆಯಲ್ಲಿ ಬಣ್ಣದ ಬಳಕೆ, ಪು.೫

ಉತ್ಪತ್ತಿ ಸಂದರ್ಭದಲ್ಲಿ ನೀಲಿ, ಹಳದಿ ಹಾಗೂ ಕೆಂಪು ಬಣ್ಣಗಳು ಮಾತ್ರ ಮೂಲ ಬಣ್ಣಗಳೆಂದು ನಿರ್ಧರಿಸಲಾಗಿದೆ. ಚಿತ್ರಕಲೆಯಲ್ಲಿ ಈ ಮೂರು ಬಣ್ಣಗಳೇ ಮೂಲ ಬಣ್ಣಗಳು ಇವುಗಳ ಮಿಶ್ರಣದಿಂದ ನೂರಾರು ಸಾವಿರಾರು ಬಣ್ಣಗಳನ್ನು ತಯಾರಿಸಿಕೊಳ್ಳುತ್ತಾರೆ.[೧೧]

ಮೂಲ ಬಣ್ಣಗಳು	- ನೀಲಿ, ಹಳದಿ, ಕೆಂಪು
ದ್ವಿತೀಯ ವರ್ಗದ ಬಣ್ಣಗಳು	- ಹಳದಿ ಹಾಗೂ ನೀಲಿ ಬಣ್ಣಗಳ ಸಮ ಪ್ರಮಾಣದ ಮಿಶ್ರಣ = ಹಸಿರು
	- ಹಳದಿ ಹಾಗೂ ಕೆಂಪು ಬಣ್ಣಗಳ ಸಮ ಪ್ರಮಾಣದ ಮಿಶ್ರಣ = ಕೇಸರಿ
	- ನೀಲಿ ಹಾಗೂ ಕೆಂಪು ಬಣ್ಣಗಳ ಸಮ ಪ್ರಮಾಣದ ಮಿಶ್ರಣ = ನೇರಳೆ[೧೨]
ಪ್ರಖರ ಬಣ್ಣಗಳು	- ಕೆಂಪು, ಕೇಸರಿ, ಹಳದಿ
ತಂಪು ಬಣ್ಣಗಳು	- ನೀಲಿ, ನೇರಳೆ, ಪಾಚಿ
ವಿರೋಧ ಬಣ್ಣಗಳು	- ಮೂಲ ಬಣ್ಣಗಳಾದ ನೀಲಿ, ಹಳದಿ ಹಾಗೂ ಕೆಂಪು ಬಣ್ಣಗಳು ಒಂದಕ್ಕೊಂದು ವಿರೋಧ ಅಥವಾ ಪ್ರತಿಕೂಲ ನೋಟವನ್ನು ಬಿಂಬಿಸುವ ಬಣ್ಣಗಳಾಗಿವೆ.[೧೩] ಕಪ್ಪು ಹಾಗೂ ಬಿಳಿ ಬಣ್ಣಗಳೂ ಪರಸ್ಪರ ವಿರೋಧಿ ಬಣ್ಣಗಳು.

ಭಾರತೀಯ ಕಲೆಯು ಪಾರಮಾರ್ಥಿಕ ರಸ ಸಿದ್ಧಾಂತಗಳ ತಳಹದಿಯ ಮೇಲೆಯೇ ಬೆಳೆದು ಬಂದಿತು. ವಾಚ್ಯಾರ್ಥ ಹಾಗೂ ವ್ಯಂಗ್ಯಾರ್ಥಗಳಿಂದ ಭಾರತೀಯ ರಸ ಸಿದ್ಧಾಂತ ಪ್ರಾರಂಭವಾಯಿತು. ಈ ಸಿದ್ಧಾಂತ ಕೇವಲ ಸಾಹಿತ್ಯಕ್ಕೆ ಮಾತ್ರ ಸೀಮಿತವಾಗಿರದೆ ಚಿತ್ರಕಲೆಗೂ ಸಂಬಂಧಿಸಿದುದ್ದಾಗಿರುತ್ತದೆ. ಕಲಾವಿದನ ಕೌಶಲ್ಯ, ಜಾಣ್ಮೆ, ಬುದ್ಧಿಮತ್ತೆ ಅಧ್ಯಯನಗಳನ್ನು ಅವಲಂಬಿಸಿ ಕಲಾಕೃತಿಯ ಶ್ರೇಷ್ಠತೆಯ ಮಟ್ಟವನ್ನು ನಿರ್ಧರಿಸಬಹುದು. ಇವೆಲ್ಲಕ್ಕೂ ಮೂಲ ಬಣ್ಣಗಳ ಬಳಕೆ. ರಸಗಳು

---

೧೧. ಕೆ.ವಿ.ಕಾಳೆ, ಕರ್ನಾಟಕದ ಚಿತ್ರಕಲೆಯಲ್ಲಿ ಬಣ್ಣದ ಬಳಕೆ, ಪು.೧೭

೧೨. ಅದೇ ಪು.೧೮

೧೩. ಅದೇ ಪು.೨೧

ಒಂಭತ್ತು. ಅವುಗಳು ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಭೀಭತ್ಸ, ಅದ್ಭುತ ಮತ್ತು ಶಾಂತ ಈ ಒಂಭತ್ತು ರಸಗಳಿಗೂ ಒಂದೊಂದು ಬಣ್ಣದ ಸಂಕೇತವಿರುತ್ತದೆ.

ಶೃಂಗಾರ ರಸಕ್ಕೆ	-	ಶ್ಯಾಮ ಬಣ್ಣ
ಹಾಸ್ಯ ರಸಕ್ಕೆ	-	ಶ್ವೇತ ಬಣ್ಣ ಅಥವಾ ಬಿಳಿ ಬಣ್ಣ
ಕರುಣ ರಸಕ್ಕೆ	-	ಬೂದು ಬಣ್ಣ
ರೌದ್ರ ರಸಕ್ಕೆ	-	ಕೆಂಪು ಬಣ್ಣ
ವೀರ ರಸಕ್ಕೆ	-	ಗೌರ ಬಣ್ಣ
ಭಯಾನಕ ರಸಕ್ಕೆ	-	ಕಪ್ಪು ಬಣ್ಣ
ಭೀಭತ್ಸ ರಸಕ್ಕೆ	-	ನೀಲ ಬಣ್ಣ
ಅದ್ಭುತ ರಸಕ್ಕೆ	-	ಹಳದಿ ಬಣ್ಣ

ಈ ಎಲ್ಲಾ ಸಂಕೇತಗಳಿಗನುಸಾರವಾಗಿ ಒಂದು ಚಿತ್ರಕಲಾಕೃತಿಯ ನಿರ್ಮಾಣವಾಗುತ್ತದೆ ಆದರೂ ಆಯಾ ರಸ ಪ್ರಧಾನ ಕಲಾಕೃತಿಗಳಲ್ಲಿ ಪೂರಕವಾಗಿ ಸಾಂಕೇತಿಕ ಬಣ್ಣದ ಬಳಕೆಯು ನಿರ್ವಹಣೆ ಮಾತ್ರ ಜಾಣ್ಮೆ ಅಭಿವ್ಯಕ್ತಿ ಕೌಶಲ್ಯಗಳನ್ನವಲಂಬಿಸಿರುತ್ತದೆ. ರಜಪೂತ ಮಿನಿಯೇಚರ್ ಕಲಾಕೃತಿಗಳಲ್ಲಿಯೂ 'ರಾಗಮಾಲಾ' ಸರಣಿಯ ಕಲಾಕೃತಿಗಳ್ಲ ಹಲವು ರಾಗಗಳಿಗೆ ನಿಶ್ಚಿತ ರೂಪ, ಆಕಾರ, ಬಣ್ಣ, ನಿಲುವುಗಳನ್ನು ನೀಡಿ, ಅಲ್ಲಲ್ಲಿ ಆಯಾ 'ರಸ'ಗಳನ್ನು ತಿಳಿಸುವ ಶ್ಲೋಕ ಇಲ್ಲವೆ ಹಾಡುಗಳನ್ನು ಬರೆದು ವಿವಿಧ ರಸ ಭಾವಗಳ ಚಿತ್ರಣ ಮಾಡಿರುವುದನ್ನು ಕಾಣುತ್ತೇವೆ.[೧೪] ಈ ಎಲ್ಲಾ ರಸಗಳ ಬಣ್ಣಗಳನ್ನು ವಿ.ಟಿ. ಕಾಳೆಯವರು ತಮ್ಮ ಭಾರತೀಯ ಕಲಾ ಶೈಲಿಯ ಕಲಾಕೃತಿಗಳಲ್ಲಿ ಯಶಸ್ವಿಯಾಗಿ ತಂದಿದ್ದಾರೆ ಎನ್ನಬಹುದು.

ಕಲಾಕೃತಿಗಳಲ್ಲಿ ತಂಪು ಬಣ್ಣಗಳು, ಪ್ರಖರ ಬಣ್ಣಗಳ ಲೇಪನದಿಂದ ಕಲಾವಿದರು ಚಿತ್ರದಲ್ಲಿ ಚಲನೆಯನ್ನುಂಟು ಮಾಡುತ್ತಾರೆ. ಪ್ರಖರ ಬಣ್ಣಗಳು ಚಿತ್ರ ಸಂಯೋಜನೆಯಲ್ಲಿ ಮುಂದಕ್ಕೆ ಬಂದಂತೆ ಕಂಡುಬರುತ್ತವೆ ಮತ್ತು ತಂಪು ಬಣ್ಣಗಳು ಕಲಾಕೃತಿಯಲ್ಲಿ ಆಳದ ಅನುಭವವನ್ನುಂಟು ಮಾಡುತ್ತವೆ. ಇದರಿಂದ ಚಿತ್ರವು ಹಿಂದೆ ಮುಂದೆ ಚಲಿಸಿದಂತೆ ಭಾಸವಾಗುವ ಸಾಧ್ಯತೆಯಿರುತ್ತದೆ. ಈ ಕಲಾಕೃತಿಯು ಸಂಯೋಜನೆ ಅವಕಾಶವೊಂದರಲ್ಲಿ ಇಡೀ ಕಲಾಕೃತಿಯಾಗಿ ಪ್ರಖರ ವರ್ಣಗಳಿಂದ

---

೧೪. ಕೆ.ವಿ. ಕಾಳೆ, ಕರ್ನಾಟಕದ ಚಿತ್ರಕಲೆಯಲ್ಲಿ ಬಣ್ಣದ ಬಳಕೆ, ಪು.೧೯

ತುಂಬಿದ್ದು ಒಂದು ಕಡೆ ಮಾತ್ರ ಗಾಢವರ್ಣವಿದ್ದರೆ ಅಲ್ಲಿ ತೂತು ಬಿದ್ದಂತಹ ಅನುಭವ ಕೊಡುತ್ತದೆ. ಹಾಗೇ ಕಲಾಕೃತಿಯ ಅವಕಾಶದಲ್ಲಿ ಗಾಢ ವರ್ಣವಿದ್ದು ಒಂದುಕಡೆ ಮಾತ್ರ ಪ್ರಖರವರ್ಣವಿದ್ದರೆ ಅದು ಕಲಾಕೃತಿಯನ್ನು ಬಿಟ್ಟು ಹೊರಗೆ ಜಿಗಿಯುತ್ತಿರುವ ಅನುಭವ ಕೊಡುತ್ತದೆ. ಒಟ್ಟಿನಲ್ಲಿ ಬಣ್ಣಗಳ ಹೊಂದಾಣಿಕೆ ಚಿತ್ರಸಂಯೋಜನೆಯಲ್ಲಿ ಮುಖ್ಯ ಅಂಶವಾಗಿದ್ದು ಬಣ್ಣವು ಅತ್ಯಂತ ಪ್ರಮುಖವಾಗಿದೆ.

ರೇಖೆ (Drawing)

ಚಿತ್ರ ಸಂಯೋಜನೆಯಲ್ಲಿ ರೇಖೆಯು ಒಂದು ಪ್ರಮುಖ ಭಾಗವಾಗಿದೆ. ನಿಸರ್ಗದಲ್ಲಿ ವಾಸ್ತವವಾಗಿ ರೇಖೆಯೆಂಬುದಿಲ್ಲ. ರೇಖೆ ತಾತ್ವಿಕವಾಗಿ ಹೇಳುವಲ್ಲಿ ಬಳಸುವ ಶಬ್ದ. ರೇಖೆ ಒಂದು ಆಯಾಮವನ್ನು ಸೂಚಿಸುತ್ತದೆ. ವಾಸ್ತವವಾಗಿ ರೇಖೆ ಎನ್ನುವುದು ಆಕಾರ (shape). ರೂಪ ಅಥವಾ ಆಕಾರಗಳ ಬಾಹ್ಯ ಅಂಚನ್ನು ರೇಖೆಯಾಗಿ ಭಾವಿಸುತ್ತೇವೆ. ಬಣ್ಣಗಳು ವರ್ಣಛಾಯಾಗಳ ಅಂತರದ ಹೊರಭಾಗವೇ ರೇಖೆಯಾಗಿ ಅನುಭವಕ್ಕೆ ಬರುತ್ತದೆ. ರೇಖೆಗಳು ಅನೇಕ ಬಗೆಯವು. ನೇರ, ಓರೆ, ವಕ್ರ ಇತ್ಯಾದಿ. ರೇಖಾಚಿತ್ರಗಳಲ್ಲಿ ಅಥವಾ ವರ್ಣಚಿತ್ರದಲ್ಲಿ ಗೆರೆ, ಕುಂಚದ ಎಳೆತ ಇವುಗಳಿಗೆ ಅನುಗುಣವಾಗಿ ನಾವು ಭಾವನಾತ್ಮಕವಾಗಿ ಸ್ಪಂದಿಸುತ್ತೇವೆ. ಖಚಿತ ರೇಖೆ, ಅಸ್ಪಷ್ಟ ರೇಖೆ, ದಪ್ಪಗೆರೆ, ಸೂಕ್ಷ್ಮಗೆರೆ, ಉದ್ದರೇಖೆ, ಅಡ್ಡರೇಖೆ, ನಿರಂತರಗೆರೆ, ತುಂಡು ತುಂಡುಗೆರೆ, ವಕ್ರ ರೇಖೆ, ಸುರುಳಿರೇಖೆ ಹೀಗೆ ಇವುಗಳ ಸಾಮ್ಯ ವೈದೃಶ್ಯ ಒಂದು ಬಗೆಯ ಸಂತೋಷ ನೀಡುತ್ತದೆ.[೧೫] ವರ್ಣಚಿತ್ರಗಳಲ್ಲಿಯೂ ಸಹ ರೇಖೆಗಳಿಗೆ ಪ್ರಮುಖ ಸ್ಥಾನವನ್ನು ನೀಡಿದ ಹಲವಾರು ಕಲಾವಿದರ ಕಲಾಕೃತಿಗಳಲ್ಲಿ ನಾವು ಕಾಣುತ್ತೇವೆ. ಕಾಳೆಯವರ ಚಿತ್ರ ಸಂಯೋಜನಾ ಕಲಾಕೃತಿಗಳೆಲ್ಲವೂ ರೇಖಾ ಪ್ರಧಾನವಾದ ಕಲಾಕೃತಿಗಳಾಗಿವೆ. ಅವರ ವರ್ಣಕಲಾಕೃತಿಗಳಲ್ಲಿ ರೇಖೆಗಳು ಲಲಿತವಾಗಿ, ಸ್ಫುಟವಾಗಿ ಸ್ಪಷ್ಟವಾಗಿ ದೃಢವಾಗಿ ಹರಿದಾಡಿರುವುದನ್ನು ಕಾಣಬಹುದು.

ಭಾರತೀಯ ಚಿತ್ರಕಲಾ ಶೈಲಿಯು ಎರಡು ಆಯಾಮವುಳ್ಳದ್ದಾಗಿದ್ದು ರೇಖೆಗಳೇ ಪ್ರಧಾನವಾಗಿರುವುದನ್ನು ಇತಿಹಾಸ ಕಾಲದಿಂದಲೂ ಭಿತ್ತಿಚಿತ್ರಗಳಲ್ಲಿ, ಹಸ್ತಪ್ರತಿ ಚಿತ್ರಗಳಲ್ಲಿ ಕಾಣುತ್ತೇವೆ. ಭಾರತದಲ್ಲಿ ಚಿತ್ರಕ್ಷೇತ್ರದಲ್ಲಿ ಪುನರುಜ್ಜೀವನ ಕಾಲವಾದ ಬಂಗಾಳ ಕಲಾ ಶೈಲಿಯಲ್ಲಿಯೂ ಕೂಡಾ ಚಿತ್ರ ಸಂಯೋಜನೆಯಲ್ಲಿ ರೇಖೆಗಳು ಪ್ರಮುಖವಾಗಿ ಕಂಗೊಳಿಸಿವೆ. ಬಂಗಾಲ ಕಲಾ ಶೈಲಿಯಿಂದ ಪ್ರಭಾವಿತರಾದ ಕಾಳೆಯವರು ಚಿತ್ರ ಸಂಯೋಜನಾ ಕಲಾಕೃತಿಗಳಲ್ಲಿಯೂ ಕೂಡಾ ರೇಖೆಗಳು ಪ್ರಮುಖವಾಗಿ ಕಂಡುಬಂದಿವೆ.

೧೫. ಪ್ರೊ. ಎಂ.ಎಚ್. ಕೃಷ್ಣಯ್ಯ, ಕಲೆ ಮತ್ತು ರಸಾಸ್ವಾದನೆ, ಪು.೮೯

ಆಕೃತಿ (Form)

ಚಿತ್ರ ಸಂಯೋಜನೆಯಲ್ಲಿ ಆಕೃತಿಗಳು ಬಹುಮುಖ್ಯವಾದ ಅಂಗವಾಗಿವೆ. ಆಕೃತಿಗಳು ಇಲ್ಲದೇ ಒಂದು ಸಂಯೋಜನಾ ಕೃತಿ ಪೂರ್ಣಗೊಳ್ಳಲು ಸಾಧ್ಯವಿಲ್ಲವೆಂದೇ ಹೇಳಬಹುದು.

ಚಿತ್ರಕಾರ ಒಂದು ಚಿತ್ರದಲ್ಲಿ ಹಲವು ಆಕೃತಿಗಳ ಸಮೂಹವನ್ನು ಬರೆಯುವ ಪ್ರಸಂಗದಲ್ಲಿ ಅವುಗಳ ಸ್ಥಾನ, ಗಾತ್ರ, ಅವುಗಳ ನಡುವಣ ಅವಕಾಶ ಇವನ್ನೆಲ್ಲ ಸೂಚಿಸಿದಾಗ ಮಾತ್ರವೇ ಎಂದರೆ ಆಕೃತಿಗಳ ನಡುವಣ ಅವಕಾಶವನ್ನು ತೋರಿಸಿದಾಗ ಬರೆದ ಆ ಚಿತ್ರವಸ್ತುಗಳು ಚಪ್ಪಟೆಯಾಗಿಲ್ಲ; ಅದಕ್ಕೆ ಉದ್ದಗಲಗಳ ಜೊತೆಗೆ ಮೂರನೆಯ ಮಾನವಾದ ದಪ್ಪವೂ ಇದೆ ಎಂಬ ಕಲ್ಪನೆ ಬಂದೀತು.[೧೬] ಒಂದು ಹಿನ್ನೆಲೆಯ ಮುಂದಕ್ಕೆ ಕಾಣಿಸುವ ವಿವಿಧ ರೂಪಗಳಾಗಲಿ, ಆಕೃತಿಗಳಾಗಲಿ ತಮ್ಮ ಆಚೀಚೆ ಏನಿದೆ, ಹಿಂದೆ ಮುಂದೆ ಏನಿದೆ ಎಂಬ ಕಲ್ಪನೆಯನ್ನು ನೀಡಲೇಬೇಕಾಗುತ್ತದೆ. ಅದರಿಂದಾಗಿ ಆಕೃತಿ, ಆಕೃತಿಗಳ ನಡುವೆ ಇರುವ ಅವಕಾಶದ (Space) ಕಲ್ಪನೆ ಬಲು ಮುಖ್ಯವೆನಿಸುತ್ತದೆ. ಒಂದು ಆಕೃತಿಗೆ ಈ ಅವಕಾಶ ಹಿನ್ನೆಲೆಯಾಗುತ್ತದೆ. ವಿಶಾಲ ಅವಕಾಶದ ಮುಂದೆ ಬರೆದ ಒಂದು ರೂಪ ಅಥವಾ ಆಕೃತಿ, ಆದರ ಯಾವ ಭಾಗದಲ್ಲಿದೆ, ಅದು ಕಡುಪಿನ ಬಣ್ಣದಾಗಿದ್ದರೆ ಹೇಗೆ ಕಾಣಿಸುತ್ತದೆ, ಅದು ಗಾತ್ರದ್ದಾದರೆ ಹೇಗೆ ಕಾಣುತ್ತದೆ, ತೀರಾ ಚಿಕ್ಕದಾದರೆ ಹೇಗೆ ಕಾಣಿಸಿತು ಎಂಬೆಲ್ಲಾ ಎಣಿಕೆಗಳು ಸಮಪಿದ್ದಾಗ ಮಾತ್ರವೇ ಆಕೃತಿಗಳ ಮತ್ತು ರೂಪಗಳ ಹಂಚಿಕೆ ಸಮತೋಲನ (balance)ದಿಂದ ಕಾಣಿಸುತ್ತದೆ. ಚಿತ್ರದಲ್ಲಿ ಒಂದೇ ಒಂದು ಆಕೃತಿ ಇದ್ದಾಗಲೂ ಕೂಡ ಆಚೀಚಿನ ಅವಕಾಶ ಎಷ್ಟು ದೊಡ್ಡದು, ಎಷ್ಟು ಚಿಕ್ಕದು, ಎಂಥದ್ದು ಎಂಬುದು ಚಿತ್ರರಚನೆಗೆ ಮುಖ್ಯ ವಿಷಯವಾಗುತ್ತದೆ. ಆ ಆಕೃತಿ ಚಿತ್ರದಲ್ಲಿ ಕಾಣಿಸುವ ಅವಕಾಶದೊಡನೆ ಹಿತವಾದ ಮೇಳದಿಂದ ಕಾಣಿಸಬೇಕಾಗುತ್ತದೆ. ಹೀಗೆ ಆಕೃತಿ ಮತ್ತು ರೂಪಗಳು ಕಾಣಿಸುವ ಸ್ಥಾನಮಾನ ಎಂದರೆ ಅವು ಆವರಿಸುವ ವಿಸ್ತಾರ, ಹಿಂದುಮುಂದಣ ದೂರ ಮೊದಲಾದವು ಪ್ರಮುಖ ವಿಷಯಗಳಾಗುತ್ತವೆ.[೧೭] ಕಾಳೆಯವರ ಬಹುತೇಕ ಸಂಯೋಜನಾ ಕಲಾಕೃತಿಗಳಲ್ಲಿ ಒಂದೇ ಒಂದು ಮುಖ್ಯ ಆಕೃತಿಯಿದ್ದು ಅವಕಾಶದ ಬಳಸುವಿಕೆಯಲ್ಲಿ ಸಮತೋಲನ ಕಾಯ್ದುಕೊಂಡಿದ್ದಾರೆ. ಆ ಮುಖ್ಯ ಆಕೃತಿಯೊಂದಿಗೆ ಹಿನ್ನೆಲೆಯಲ್ಲಿ ವರ್ಣದೊಂದಿಗೆ ಸಂಯೋಜಿಸಿರುವುದು ಕಂಡುಬರುತ್ತದೆ. ಈ ತೆರನಾದ ಅವರ ಈ ಸಂಯೋಜನಾ ನಿರೂಪಣೆಗೆ ಬಂಗಾಲಿ ಕಲಾವಿದ ಕ್ಷಿತ್ರೀಂದ್ರನಾಥ ಮಜುಂದಾರ ಅವರ ಪ್ರಭಾವ ಪ್ರೇರಣೆಯು ಇರುವುದು ಕಂಡುಬರುತ್ತದೆ.

---

೧೬ ಡಾ. ಶಿವರಾಮಕಾರಂತ, ಕಲಾಪ್ರಪಂಚ, ಪು.೬೭

೧೭. ಅದೇ ಪು.೬೮

ಮೈವಳಿಕೆ (Texture)

ಒಂದು ಕಲಾಕೃತಿಯಲ್ಲಿ ಮೈವಳಿಕೆಯು ಆ ಕಲಾಕೃತಿಯಲ್ಲಿ ವಿಶೇಷ ಪರಿಣಾಮಾವನ್ನುಂಟು ಮಾಡುತ್ತದೆ. ಮೈವಳಿಕೆ ಆಕಾರದ ಮೇಲ್ಮೈಗುಣಗಳನ್ನು ತಿಳಿಸುತ್ತದೆ. ಇದು ಸರಳವೋ, ಅಲಂಕಾರಿಕವೋ ಆಗಿರಬಹುದು. ನಯ ಅಥವಾ ಒರಟಾಗಿರಬಹುದು. ಮೈವಳಿಕೆಯು ನಮ್ಮ ಸ್ಪರ್ಶ ಮತ್ತು ದೃಶ್ಯ ಇಂದ್ರಿಯವೆರಡಕ್ಕೂ ಗೋಚರವಾಗುತ್ತದೆ.[೧೮] ಒಂದು ಚಿತ್ರಿತವಾದ ಕಲಾಕೃತಿಯ ಮೈವಳಿಕೆಯು ನಯವಾಗಿರಬಹುದು, ಒರಟಾಗಿರಬಹುದು. ಇದು ಆಯಾ ಕಲಾವಿದರ ನಿರೂಪಣೆಗೆ ಸಂಬಂಧಿಸಿದೆ. ಕೆಲವರು ತಮ್ಮ ಕಲಾಕೃತಿಗಳಲ್ಲಿ ಕುಂಚವನ್ನು ಬಳಸದೆ ಪೆಲೆಟ್ ಚಾಕುವಿನಿಂದ ಬಣ್ಣಮೆತ್ತಿ, ತೀಡಿ ಕೆರೆದು ಚಿತ್ರಿಸುತ್ತಾರೆ. ಇನ್ನೂ ಕೆಲವು ಸ್ಪ್ರೇಡ್ ಮೇಥೆಡ್(ವಿಧಾನ)ನಲ್ಲಿ ಕಲಾಕೃತಿಗಳನ್ನು ರಚಿಸುತ್ತಾರೆ. ಹರಿದ ಬಟ್ಟೆಗಳು ಮತ್ತು ಇನ್ನಿತರ ವಸ್ತುಗಳನ್ನು ಅಂಟಿಸಿ ತೆಗೆದು ಆ ಕಲಾಕೃತಿಗೆ ವಿಶೇಷವಾದ ಮೆರಗನ್ನು ನೀಡಲು ಪ್ರಯತ್ನಿಸುತ್ತಾರೆ. ವಿಭಿನ್ನ ಮಾಧ್ಯಮಗಳಲ್ಲಿ ವಿಭಿನ್ನವಾದ ಮೈವಳಿಕೆ ಮಾಡುವ ಸಾಧ್ಯತೆಗಳಿವೆ.

ವಿ.ಟಿ.ಕಾಳೆಯವರ ಸಂಯೋಜನಾ ಕಲಾಕೃತಿಗಳನ್ನು ಎರಡು ರೀತಿಯಲ್ಲಿ ಮಾಡಿರುವನ್ನು ಕಾಣಬಹುದು. ಸಾಂಪ್ರದಾಯಿಕ ವಿಷಯವಸ್ತುವಿರುವ ಕಲಾಕೃತಿಗಳು, ಜಲವರ್ಣದ ವಾಷ್ ತಂತ್ರದಲ್ಲಿ ನಿರೂಪಿತವಾಗಿವೆ. ಹಾಗೆಯೇ ಆಧುನಿಕ ಸಂವೇದನಾ ಕಲಾಕೃತಿಗಳು ಹೆಚ್ಚಾಗಿ ತೈಲವರ್ಣ ದಲ್ಲಿ ರಚಿತಗೊಂಡಿವೆ. ಇವು ಪೆಲಟ್ ಚಾಕುವಿನಿಂದ ಬಣ್ಣವನ್ನು ಮೆತ್ತಿ, ತೀಡಿ ಕೆರೆದು ಮಾಡಿ ವಿಶೇಷ ಮೈವಳಿಕೆಯನ್ನು ತಮ್ಮ ಕಲಾಕೃತಿಯಲ್ಲಿ ತಂದಿದ್ದಾರೆ. ಸಾಂಪ್ರದಾಯಿಕ ಕಲಾಕೃತಿಳಲ್ಲಿ ಮೊದಲಿಗೆ ಪೇಪರಿನ ಮೇಲೆ ಜಲವರ್ಣವನ್ನು ಲೇಪಿಸಿ ನೀರಿನಿಂದ ತೊಳೆದು ಪುನಃ ಪುನಃ ಮತ್ತೆ ನೀರಿನಲ್ಲಿ ತೊಳೆದು ಕೊನೆಯದಾಗಿ ಜಲವರ್ಣವನ್ನು ಲೇಪಿಸಿ ಕೃತಿ ರಚಿಸುವುದು ಇದು ವಾಷ್ ತಂತ್ರವಾಗಿದ್ದು ವಿಶೇಷ ಪರಿಣಾಮಕಾರಿಯಾದ ಮೈವಳಿಕೆಯನ್ನು ಸೃಷ್ಟಿಸಲು ಸಾಧ್ಯತೆಯುಂಟು. ಇದು ಅವರ ಮೆಚ್ಚಿನ ಕಲಾತಂತ್ರ ಕೂಡ ಆಗಿದೆ.

ಲಯ (Rhythm)

ಚಿತ್ರಗಳ ಜೋಡಣಾ ವಿಧಾನದಲ್ಲಿ ಬರುವ ಇನ್ನೊಂದು ಮುಖ್ಯ ಅಂಶ ಲಯ. ಪದ್ಯ, ಸಂಗೀತದಲ್ಲಿ ಲಯ ಸುಲಭಗ್ರಾಹ್ಯ ಶಬ್ದ, ಸ್ವರ ಪುನರಾವೃತಿಯಿಂದ. ಆದರೆ, ಚಿತ್ರದಲ್ಲಿ ಲಯಾನುಭವ ಬೇರೆ ಬಗೆಯದು. ಒಂದು ರೂಪಿಕೆ (motif), ರೂಪಾಂಶ, ಬಣ್ಣ ಮುಂತಾದವು ನಿಯತವಾಗಿಯೋ ಅನಿಯತವಾಗಿ ಅದೇ ರೀತಿಯಲ್ಲಿಯೇ ಅಥವಾ ವ್ಯತ್ಯಾಸ ರೀತಿಯಲ್ಲಿಯೆ

---

೧೮. ರವಿಕುಮಾರ ಕಾಶಿ, ಕಲಾಕೋಶ, ಪು.೧೨೧

ಅಂತರದಲ್ಲಿ ಪುನರಾವೃತಿಗೊಂಡಾಗ ಲಯದ ಅನುಭವ ವಾಗುತ್ತದೆ. ಬಣ್ಣದ ವಿವಿಧ ಛಾಯೆಗಳ ಮೂಲಕವೂ ಇನ್ನೂ ಅನೇಕ ಸೂಕ್ಷ್ಮ ರೀತಿಯಲ್ಲಿಯೂ ಲಯವನ್ನು ಕಲಾವಿದರು ಸಾಧಿಸುತ್ತಾರೆ.[೧೯] ಭಾರತೀಯ ಕಲಾವಿದರು ಪ್ರಾಚೀನ ಕಾಲದಿಂದಲೂ ರೂಪದರ್ಶಿ ಅಥವಾ ಮಾದರಿಗಳನ್ನು ನೋಡುತ್ತಾ ಚಿತ್ರಸುತ್ತಿರಲಿಲ್ಲ. ಎಲ್ಲವನ್ನೂ ಏಕಾಗ್ರತೆಯಿಂದ ಗ್ರಹಿಸಿ, ಧ್ಯಾನಿಸಿ ಅನಂತರ ಸ್ಮರಣೆ ಯಿಂದಲೇ ಚಿತ್ರ, ಶಿಲ್ಪ ರಚಿಸುತ್ತಿದ್ದರು. ಅದ್ದರಿಂದ ವಿವರಕ್ಕಿಂತ ಜೀವರೂಪಿ ಮುಖ್ಯಾಂಶಗಳ ಕಡೆ ಗಮನ. ನಿಸರ್ಗದಲ್ಲಿನ ಲಯವನ್ನು ಗ್ರಹಿಸುತ್ತಿದ್ದರು. ಆ ಲಯವನ್ನೇ ರಚನೆಯಲ್ಲಿ ಮೂಡಿಸು ತ್ತಿದ್ದರು.[೨೦] ಕಾಳೆಯವರ ಕಲಾಕೃತಿಗಳಲ್ಲಿ ಲಯದ ಅಂಶ ಪ್ರಮುಖವಾಗಿ ಕಂಡುಬರುತ್ತದೆ. ಅವರ ಕಲಾಕೃತಿಗಳಲ್ಲಿರುವ ಬಣ್ಣಗಳು, ಕುಂಚದ ಬೀಸು, ರೇಖೆಗಳ ಆಕಾರಗಳ ಹೊಂದಿಸುವಿಕೆ ಹೀಗೆ ಪ್ರತಿಯೊಂದರಲ್ಲೂ ಲಯಾತ್ಮಕತೆ ಕಾಣಿಸುತ್ತದೆ.

ಸಮತೋಲನ (Balance)

ಸಂಯೋಜನೆಯಲ್ಲಿ ಗಮನಿಸಬೇಕಾದ ಬಹುಮುಖ್ಯವಾದ ಅಂಶವೆಂದರೆ ಸಮತೋಲನ. ಬ್ಯಾಲೆನ್ಸ್ ಎಂದಾಗ ಅಳತೆ, ತೂಕ, ಲೇಕ್ಕಾಚಾರಕ್ಕೆ ಸಂಬಂಧಿಸಿದ್ದು ಎಂದರೂ ಸಮತೂಕದ ಮನುಷ್ಯ ಎಂದಾಗ ಅರ್ಥವ್ಯಾಪ್ತಿಯು ಬೇರೆಯಾಗುತ್ತದೆ. ಚಿತ್ರ ಸಂಯೋಜನೆಯಲ್ಲೂ ಅಷ್ಟೇ ವಿಶಿಷ್ಟವಾದ ವ್ಯಾಪಕವಾದ ಅರ್ಥವಿದೆ.[೨೧] ಕಲೆಗೆ ಸಂಬಂಧಿಸಿದಂತೆ 'ಸಮತೋಲ' ಎಂದಾಗ ವಿನ್ಯಾಸ, ಆಕೃತಿ, ರೂಪ ಬಣ್ಣಗಳನ್ನು ಸೌಂದರ್ಯ ದೃಷ್ಟಿಯಿಂದ ಮುದಗೊಳಿಸುವಂತೆ ಕಣ್ಣಿಗೆ ಅಪ್ಯಾಯಮಾನವಾಗುವಂತೆ ಸಂತೋಷ ಕೊಡುವಂತೆ ಇರಿಸುವುದು ಅಥವಾ ಸಾಂಗತ್ಯಪೂರ್ಣವಾದ ಸಮಗ್ರತೆಯುಳ್ಳ ಸಂಯೋಜನಾ ವಿಧಾನ ಎನ್ನಬಹುದು.[೨೨] ಎಂಬಿತ್ಯಾದಿ ಅಂಶಗಳು ಪ್ರಮುಖವಾಗಿ ಕಂಡುಬರುತ್ತದೆ.

ಇನ್ನೊಂದು ಉದಾಹರಣೆ ಒಂದು ಚಿತ್ರದ ಚೌಕಟ್ಟಿನಲ್ಲಿ ಬರುವ ಎಲ್ಲ ಘಟಕಗಳ ದಾರ್ಶನಿಕ ತೂಕಗಳು ಚಿತ್ರದ ಒಟ್ಟಾರೆ ಹದಕ್ಕೆ ಅವಶ್ಯ. ತಕ್ಕಡಿಯಲ್ಲಿ ತೂಗಿದಾಗ ತಕ್ಕಡಿಯ ಕೋಲು ಲಂಬವಾಗಿ ನಿಂತತೆಯೇ ಇದೂ ಸಹ. ಒಟ್ಟಿನಲ್ಲಿ ಎಲ್ಲಾ ಘಟಕಗಳೂ ಒಮ್ಮತದಿಂದಿರುವಂತೆ ಕಂಡರೆ ನೋಡುವ ಕಣ್ಣಿಗೆ ಶ್ರಮ ಕಡಿಮೆ. ನಾವು ಯಾವತ್ತೂ ನೋಡುವ ದೃಷ್ಟಿಯಲ್ಲಿ ಆಕಾಶ ಮೇಲೆ, ಭೂಮಿ ಕೆಳಗೆ ಅರ್ಥಾತ್ ತೆಳುಭಾಗ ಮೇಲೆ ಹಾಗೂ ಗಾಢ ಭಾಗ ಕೆಳಗೆ ಹಾಗಾಗಿ

---

೧೯. ಪ್ರೊ. ಎಂ.ಎಚ್. ಕೃಷ್ಣಯ್ಯ, (ಸಂ) ಕಲೆ ಮತ್ತು ರಸಾಸ್ವಾದನೆ ಪು. ೮೯

೨೦. ಅದೇ ಪು.೮೯

೨೧. ಅದೇ ಪು.೮೭

೨೨. ಅದೇ ಪು.೮೭

ಚಿತ್ರದಲ್ಲಿ ನಮಗೆ ಈ ತ್ರಿಕೋನಾಕೃತಿಯ ಸಮತೋಲನ ಸಹಜವೆನ್ನಿಸುತ್ತದೆ. ಸಂಯೋಜನ ಯಲ್ಲಿರುವ ಅಸಮತೋಲನ ಬಣ್ಣ, ಗಾತ್ರ, ಆಕಾರ ಇತ್ಯಾದಿಗಳಿಂದ ಸರಿತೂಗಿಸುತ್ತಾರೆ. ಇದು ಒಂದು ರೀತಿಯ ದೃಶ್ಯಕೌತುಗಳಲ್ಲೊಂದು.[೨೩] ಒಂದು ಸಂಯೋಜನಾ ಕಲಾಕೃತಿಯು ಪೂರ್ಣಗೊಳ್ಳ ಬೇಕಾದರೆ ಈ ಎಲ್ಲಾ ಅಂಶಗಳು ಆ ಕಲಾಕೃತಿಯಲ್ಲಿ ಅಗತ್ಯವಾಗಿ ಇರಬೇಕಾಗುತ್ತದೆ. ಆಗಲೇ ಅದು ಒಂದು ಉತ್ತಮ ಸಂಯೋಜನಾ ಕಲಾಕೃತಿ ಎನಿಸಿಕೊಳ್ಳಲು ಸಾಧ್ಯವಾಗುತ್ತದೆ. ಕಾಳೆಯವರ ಸಂಯೋಜನಾ ಕಲಾಕೃತಿಗಳಲ್ಲಿ ಈ ಅಂಶಗಳು ಕಂಡುಬರುತ್ತವೆ.

ಕಾಳೆಯವರ ಸಂಯೋಜನಾ ಚಿತ್ರಗಳು

೧. ರಾಗಮಾಲಾ ಚಿತ್ರಗಳು

ಭಾರತೀಯ ಕಲಾಪರಂಪರೆ ಮಾನವ ಇತಿಹಾಸದಲ್ಲಿಯೆ ಅತ್ಯಂತ ಪುರಾತನವೂ ಶ್ರೀಮಂತವೂ ಆಗಿದೆ. ಪ್ರಾಚೀನ ಗ್ರಿಸ್, ಈಜಿಪ್ಟ್, ಬ್ಯಾಬಿಲೋನ್, ಮೆಕ್ಸಿಕೊ ಸಂಸ್ಕೃತಿಗಳ ಕಲೆಗಿಂತ ಭಾರತೀಯ ಕಲೆ ಕೇವಲ ಸಂಗ್ರಹಾತ್ಮಕ ಅಥವಾ ಐತಿಹಾಸಿಕ ಆಸಕ್ತಿಗಿಂತ ಮಿಗಿಲಾದುದು. ಭಾರತೀಯ ಚಿತ್ರಕಲೆಯ ಭವ್ಯ ಪರಂಪರೆಯಲ್ಲಿ ರಾಗಮಾಲ ಚಿತ್ರಗಳಿಗೆ ಮಹತ್ವದ ಸ್ಥಾನವಿದೆ.[೨೪] ರಾಗಮಾಲಾ ಚಿತ್ರಗಳು ಭಾರತೀಯ ಚಿತ್ರಕಲಾ ಇತಿಹಾಸದಲ್ಲಿ ಮಾತ್ರವೇ ಅಲ್ಲ. ಜಗತ್ತಿನ ಚಿತ್ರಕಲಾ ಇತಿಹಾಸದಲ್ಲಿ ಅನಾದೃಶ್ಯವಾಗಿವೆ. ಈ ಸಂಪ್ರದಾಯವನ್ನು ಅನುಕರಿಸಿದವರು ವಿರಳ. ರಾಬರ್ಟ್ ಸ್ಪೆಸ್, ಪಮೇಲಾ ಕೋಲ್ಮನ್, ಸ್ಮಿತ್ ಎಂಬ ಇಂಗ್ಲಿಷ್ ಚಿತ್ರಗಾರರು ಚೋಪಿನ್, ಷಮಾನ್ ಮೊದಲಾದವರ ಕೃತಿಗಳ ಆಧಾರದ ಮೇಲೆ ಚಿತ್ರಗಳನ್ನು ಬರೆಯಲೆತ್ನಿಸಿದರು. ಆದರೆ ಇಂತಹ ಪ್ರಯತ್ನ ಯೂರೋಪಿನಲ್ಲಿ ದೊಡ್ಡ ಪ್ರಮಾಣದಲ್ಲಿ ಆಗಿಲ್ಲದಿರುವುದು ಕಂಡುಬರುತ್ತದೆ.[೨೫]

ರಾಗಮಾಲಾ ಚಿತ್ರಪರಂಪರೆ ೧೬ರಿಂದ ೧೯ನೆಯ ಶತಮಾನದವರೆಗೆ ಅವ್ಯಹತವಾಗಿ ಪ್ರವಹಿಸಿತು. ದಕ್ಖನಿ, ರಾಜಸ್ತಾನಿ, ಪಹಾಡಿ, ಕಾಂಗ್ರಾ, ಮೊಘಲ್, ಗುಜರಾತ, ಜೈಪುರ, ಬುಂದಿ, ಮಾಳವಾ ಮೊದಲಾದ ಶೈಲಿಗಳಾಗಿ ಕವಲೊಡೆಯಿತು. ಇವೆಲ್ಲವುಗಳಲ್ಲಿ ರಾಜಸ್ತಾನಿ ಸಂಪ್ರದಾಯ ಪ್ರಮುಖವಾದುದು. ರಾಗಮಾಲಾ ಚಿತ್ರಗಳು ಉತ್ತರ ಭಾರತದಲ್ಲಿ ಹುಟ್ಟಿ ಬೆಳೆದುದರಿಂದ ಹಿಂದುಸ್ತಾನಿ ರಾಗಗಳನ್ನು ವಸ್ತುವಾಗಿಸಿಕೊಂಡಿವೆ.[೨೬] ಲಭ್ಯವಿರುವ ಅತಿ ಪುರಾತನ ರಾಗಮಾಲಾ

---

೨೩. ರವಿಕುಮಾರ ಕಾಶಿ, ಕಲಾಕೋಶ, ಪು.೩೩೪

೨೪. ಡಾ. ಬಿ.ಆರ್. ಹಿರೇಮಠ (ಸಂ) ನಿಜದ ನೆಲೆ, (ಅಭಿನಂದನ ಗ್ರಂಥ), ಪು. ೩೪೦

೨೫. ಅ.ನ.ಕೃ., ಚಿತ್ರಕಲೆ, ಪು. ೭೦

೨೬. ಡಾ. ಬಿ.ಆರ್. ಹಿರೇಮಠ (ಸಂ) ನಿಜದ ನೆಲೆ, (ಅಭಿನಂದನ ಗ್ರಂಥ), ಪು. ೩೪೨

ಚಿತ್ರಸಂಪುಟ ಕ್ರಿ.ಶ. ೧೪೭೫ರದ್ದು, ಈ ರಾಗಮಾಲ ಚಿತ್ರಗಳು ಕಲ್ಪಸೂತ್ರದಲ್ಲಿ ಕಂಡುಬರುತ್ತವೆ. ಕಲ್ಪಸೂತ್ರ ತೀರ್ಥಂಕರರ ದಿವ್ಯ ಚರಿತ್ರೆಗಳು. ೧೫ನೆಯ ಶತಮಾನದಲ್ಲಿ ಜೈನ ವ್ಯಾಪಾರಿಗಳು ಪರ್ಶಿಯಾದಿಂದ ಕಾಗದ ಆಮದು ಮಾಡಿಕೊಂಡರು. ಕಾಗದದೊಂದಿಗೆ ಪರ್ಶಿಯನ್ ಚಿಕಣಿ ಚಿತ್ರಗಳೂ ಭಾರತಕ್ಕೆ ಬಂದವು.[೨೭] ಕಾಳೆಯವರ ರಾಗಮಾಲಾ ಚಿತ್ರಗಳು ಅವರ ಉಳಿದ ಕಲಾಕೃತಿಗಳಿಗಿಂತ ವಿಭಿನ್ನ ಅನುಭವವನ್ನುಂಟು ಮಾಡುತ್ತವೆ. ಅವರ ರಾಗಮಾಲಾ ಕಲಾಕೃತಿಗಳು ವಿಶಿಷ್ಟ ಸಂಯೋಜನೆಗಳಿಂದ ಪರಿಣಾಮಕಾರಿಯಾಗಿ ರಚಿತಗೊಂಡಿದ್ದು, ಸಂಗೀತದ ರಾಗಗಳನ್ನು ಕುರಿತು ಕಲಾಕೃತಿಗಳನ್ನು ರಚಿಸಿರುವ ಕಲಾವಿದರ ಸಂಖ್ಯೆ ಅತ್ಯಲ್ಪ. ಅದರಲ್ಲಿ ಕಾಳೆಯವರು ಈ ಬಗೆಯ ಕಲಾಕೃತಿಗಳ ರಚನೆಯಿಂದ ಹೆಸರು ಪಡೆದವರು. ಇದು ಕಾಳೆಯವರ ವೈಶಿಷ್ಟ್ಯವೆನ್ನಬಹುದು.

ರಾಗಮಾಲಾ ಎಂದರೆ ಸಂಗೀತ ರಾಗಗಳ 'ಹಾರ' ಎಂದರ್ಥ. ರಾಗಮಾಲಾ ಚಿತ್ರಗಳು ಸಂಗೀತ ಮತ್ತು ಚಿತ್ರಕಲೆ ಇವೆರಡು ಲಲಿತಕಲೆಗಳ ಸಂಗಮ. ಪರಸ್ಪರ ಕೊಡುಕೊಳ್ಳುವಿಕೆಯಿಂದ ಶ್ರೀಮಂತವಾಗಿವೆ. ಸಂಗೀತ ಅಮೂರ್ತ ಕಲೆ. ಚಿತ್ರಕಲೆ ಮೂರ್ತ ಕಲೆ. ಸಂಗೀತ ಕಾಲದಲ್ಲಿ (time) ಅಭಿವ್ಯಕ್ತಗೊಂಡರೆ ಚಿತ್ರಕಲೆ ಅವಕಾಶದಲ್ಲಿ (space) ಅಭಿವ್ಯಕ್ತಿಗೊಳ್ಳುತ್ತದೆ. ಪ್ರತಿಯೊಂದು ಶ್ರವಣಾರ್ಹ ಧ್ವನಿಗೂ ಒಂದು ದೃಗ್ಗೋಚರ ಪ್ರತಿಮಾರೂಪವಿರುತ್ತದೆಂಬ ಗ್ರಹಿಕೆಯುಂಟು. ಆ ದೃಗ್ಗೋಚರ ಪ್ರತಿಮಾ ರೂಪವನ್ನು ರೇಖೆ ಬಣ್ಣಗಳಲ್ಲಿ ಸೆರೆ ಹಿಡಿಯುವ ಪ್ರಯತ್ನ ರಾಗಮಾಲಾ ಚಿತ್ರಗಳದ್ದು. ನಿರ್ದಿಷ್ಟವಾದ ಸಂಗೀತದ ರಾಗ ಒಂದನ್ನು ಕೇಳಿದಾಗ ಉಂಟಾಗುವ ಭಾವತನ್ಮಯತೆ, ನಿರ್ದಿಷ್ಟವಾದ ಚಿತ್ರಕೃತಿಯನ್ನು ನೋಡಿದಾಗಲೂ ಉಂಟಾಗುವಂತೆ ಚಿತ್ರ ರಚಿಸುವುದಾಗಿದೆ. ಪ್ರತಿ ರಾಗಕ್ಕೂ ತನ್ನದೇ ಆದ ಗುಣ ವಿಶೇಷತೆಗಳಿವೆ. ಅವು ಆಯಾ ರಾಗದ ಚಿತ್ರಣದಲ್ಲಿ ಅಭಿವ್ಯಕ್ತವಾಗಬೇಕು. ಸಂಗೀತದ ಏರಿಳಿತದಿಂದ ಉಂಟಾಗುವ ತರಂಗಗಳ ಆತ್ಯಂತಿಕವಾದ ನಾದಲೋಕವು ಚಿತ್ರಕಲೆಯಲ್ಲಿನ ರೇಖಾ ವಿನ್ಯಾಸ, ಸಂಯೋಜನಾ ಕೌಶಲ್ಯ ಮತ್ತು ವರ್ಣವಿನ್ಯಾಸದ ಹೊಂದಾಣಿಕೆಯಿಂದ ಉಂಟಾಗುವ ಅನುಭವ ಗಮ್ಯವಾದ ನೋಟಗಳು ನೋಡುಗನಲ್ಲಿ ಪ್ರತಿಬಿಂಬಿತವಾಗಬೇಕು.[೨೮] ಒಟ್ಟಿನಲ್ಲಿ ಎರಡು ಭಿನ್ನ ಮಾಧ್ಯಮದ ಮಿಶ್ರಣವೆ ರಾಗಮಾಲಾ ಚಿತ್ರಗಳು.

ಪ್ರತಿರಂಗೂ, ರಾಗದೊಳಕ್ಕೆ ರೂಪಾಂತರ ಹೊಂದಿ ಕಿವಿಗೆ ಕೇಳಿಸುತ್ತವೆ. ಪ್ರತಿ ದೃಶ್ಯ ರೂಪಕ್ಕೆ ಒಂದು ಶ್ರವ್ಯಧ್ವನಿ ಕೂಡ ಇರುತ್ತದೆ. ಅದಕ್ಕೆ ಚಿತ್ರಗಳನ್ನು ನೋಡುತ್ತಿದ್ದರೆ ಪರೋಕ್ಷವಾಗಿ

---

೨೭. ಡಾ. ಬಿ.ಆರ್. ಹಿರೇಮಠ (ಸಂ) ನಿಜದ ನೆಲೆ, (ಅಭಿನಂದನ ಗ್ರಂಥ), ಪು.೩೪೧

೨೮. ಡಾ. ಎಸ್.ಸಿ. ಪಾಟೀಲ, ವಿ.ಟಿ. ಕಾಳೆ, ಪು.೧೦

ನಮಗೆ ಸಂಗೀತ ಕೇಳಿಸಿದಂತೆ ಇರುತ್ತದೆ. ಸಂಗೀತ ಕೇಳುತ್ತಾ ಇದ್ದರೆ ಪರೋಕ್ಷವಾಗಿ ನಮಗೆ ಚಿತ್ರಗಳು ಕಾಣಿಸಿದಂತೆ ಇರುತ್ತದೆ.[೨೯] ಎಂಬ ಅಂಶಗಳು ಕುತೂಹಲಕಾರಿ ಯಾಗಿ ಕಂಡುಬರುತ್ತವೆ.

ಎರಡು ಕಲೆಗಳನ್ನು ಬೆಸೆದು ಹೇಗೆ ಹೊಸ ಹೊಸ ಪ್ರಯೋಗವನ್ನು ನೀಡಬಹುದು ಎಂಬುದಕ್ಕೆ ಈ ಚಿತ್ರಗಳು ಉತ್ತಮ ಉದಾಹರಣೆ. ಇಂತಹ ಪ್ರಯೋಗಗಳಿಗೆ ಕಲಾವಿದ ಸಂಗೀತ ಹಾಗೂ ಚಿತ್ರ ಎರಡೂ ಕಲೆಗಳಲ್ಲಿ ಪರಿಣತಿಯನ್ನು ಪಡೆದಿರಬೇಕಾಗಿರುತ್ತದೆ.[೩೦] ಕಾಳೆಯವರು ಸಂಗೀತದ ಜ್ಞಾನವನ್ನು ಪಡೆದುಕೊಂಡಿರುವ ಕಲಾವಿದ. ಸಂಗೀತದ ಒಡನಾಟದಲ್ಲಿ ಅವರು ಅನೇಕ ವರ್ಷ ಕಳೆದಿದ್ದಾರೆ. ಗದುಗಿನ ವಿಜಯ ಕಲಾಮಂದಿರದಲ್ಲಿ ಚಿತ್ರಕಲೆಯನ್ನು ಕಲಿಸುವುದರ ಜೊತೆಗೆ ನಾಟಕ, ಸಂಗೀತ ಕಲೆಗೂ ಅಲ್ಲಿ ಪ್ರೋತ್ಸಾಹವಿತ್ತು. ಸಹಜವಾಗಿಯೆ ಕಾಳೆಯವರಿಗೆ ಸಂಗೀತದಲ್ಲಿ ಆಸಕ್ತಿ ಮೂಡಿತ್ತು. ಅಲ್ಲಿ ಕಾಳೆಯವರು ಕಲಾಶಿಕ್ಷಕರಾಗಿ ಸೇವೆಸಲ್ಲಿಸುತ್ತಿದ್ದಂತಹ ಸಂದರ್ಭದಲ್ಲಿ ಅಲ್ಲಿರುವಂತಹ ಸಂಗೀತಗಾರರ ಜೊತೆಯ ಆಪ್ತ ಒಡನಾಟವೆ ಸಂಗೀತದಲ್ಲಿ ಆಸಕ್ತಿ ಹೆಚ್ಚಿಸಿತು. ಅಲ್ಲದೇ ತಮ್ಮ ಗುರುಗಳಾದ ಸಿ.ಎನ್. ಪಾಟೀಲ ಮತ್ತು ಹಿರಿಯ ಕಲಾವಿದರಾದ ಡಾ. ಎಂ.ವಿ. ಮಿಣಜಗಿಯವರು ಸಂಗೀತ ರಾಗಗಳ ಮೇಲೆ ಕಲಾಕೃತಿಗಳನ್ನು ರಚಿಸಿರುವುದನ್ನು ನೋಡಿ ಪ್ರಭಾವಿತಗೊಂಡಿದ್ದರು. ಕಾಳೆಯವರ ಮೇಲೆ ಇವರ ಪ್ರಭಾವವಿದ್ದರೂ ಕೂಡಾ ತಮ್ಮ ರಾಗಮಾಲಾ ಕಲಾಕೃತಿಗಳಲ್ಲಿ ಭಿನ್ನತೆ ಮೂಡಿಸಿದ್ದಾರೆ. ಒಂದೇ ರಾಗ ಬೇರೆ ಬೇರೆ ಚಿತ್ರಗಾರರ ಮೇಲೆ ಬೇರೆ ಬೇರೆ ಪರಿಣಾಮವನ್ನುಂಟು ಮಾಡುವ ಸಾಧ್ಯತೆಗಳಿವೆ. ಹೀಗಾಗಿ ಕಾಳೆಯವರು ಇವರಿಬ್ಬರಿಗಿಂತಲೂ ಭಿನ್ನವಾದ ಪರಿಣಾಮವನ್ನು ತಮ್ಮ ಕಲಾಕೃತಿಗಳಲ್ಲಿ ಮೂಡಿಸಿದ್ದಾರೆ.

ಮೊದಲಿಗೆ ರಾಗಗಳ ಮೇಲೆ ಚಿತ್ರ ರಚಿಸಿದವರು ಡಾ. ಎಂ.ವಿ. ಮಿಣಜಗಿಯವರು. ಅವರು ರಜಪೂತ ಶೈಲಿಯ ಪ್ರಭಾವದಿಂದ ಅನೇಕ ರಾಗಮಾಲ ಚಿತ್ರಗಳನ್ನು ರಜಪೂತ ಶೈಲಿಯಲ್ಲಿ ಚಿತ್ರಿಸಿದರೂ ಕೂಡ ರಜಪೂತ ಶೈಲಿಯಲ್ಲಿ ಬರುವಂತೆ ಕಿರು ರೂಪವನ್ನು ಪಡೆಯದ ಇವರ ಕಲಾಕೃತಿಗಳು ದೊಡ್ಡ ಪ್ರಮಾಣದಲ್ಲಿ ರಚಿತಗೊಂಡಿವೆ. ಅವರ ಕೆಲವು ರಾಗಗಳಲ್ಲಿ ಮಾಲಕಂಸ, ತೋಡಿ, ಮೇಘಮಲ್ಹಾರ, ಪಟಮಂಜರಿ, ಗುರ್ಜರಿ ಜೋಗಿ, ಆಸಾವರಿ, ಸೂರತ್ ಮುಖ್ಯವಾದವುಗಳು. ಈ ರಾಗಗಳ ಮೇಲೆ ಮಿಣಜಗಿಯವರು ಕಲಾಕೃತಿಗಳನ್ನು ರಚಿಸಿ ಪ್ರಸಿದ್ಧಿ ಪಡೆದವರು. ಇವರ ನಂತರ ಈ ವಿಷಯ ಕುರಿತು ಚಿತ್ರರಚಿಸಿರುವವರಲ್ಲಿ ಕಾಳೆಯವರನ್ನು ಗುರುತಿಸಲಾಗುತ್ತದೆ. ಕಾಳೆಯವರು ಈ ರಾಗಮಾಲಾ ಕಲಾಕೃತಿಗಳ ಸರಣಿಯಲ್ಲಿ ಅವರದೇ

---

೨೯. ಎಸ್. ಸಂಜೀವದೇವ್, ಅನು. ಹರಿಹರಪ್ರಿಯ, ರಸರೇಖೆ ಪು.೧೪೦

೩೦. ಪುಂಡಲಿಕ ಕಲಿಗನೂರು, ಸಂ. ಶಿವಣ್ಣ ಜಿ.ಕೆ., ಕಲಾವಾರ್ತೆ ಪು.೧೫

ಆದ ವಿಭಿನ್ನ ಶೈಲಿಯ ಛಾಪನ್ನು ಮೂಡಿಸಿದ್ದಾರೆ. ಇವರ ಎಲ್ಲ ರಾಗಮಾಲಾ ವಿಷಯಕ್ಕೆ ಸಂಬಂಧಿಸಿದ ಚಿತ್ರಗಳು ಕಿರು ರೂಪತ್ಮಕವಾಗಿವೆ. (ಡಬಲ್ ಇಂಪಿರಿಯಲ್ ೨೪x೩೦ ಸೈಜ್)

ಶಾಸ್ತ್ರೀಯ ಸಂಗೀತದಲ್ಲಿ ಬರುವ ರಾಗಗಳಲ್ಲಿ ಸ್ತ್ರೀರಾಗ, ಪುರುಷರಾಗ ಎಂಬ ವಿಂಗಡಣೆಯಿದೆ. ಅವುಗಳನ್ನು ಕ್ರಮವಾಗಿ ರಾಗ ರಾಗಿಣಿ ಎಂದು ಹೆಸರಿಸಲಾಗಿದೆ. ಕಾಳೆಯವರು ರಚಿಸಿದ ರಾಗಮಾಲಾ ಚಿತ್ರಗಳ ಸರಣಿಯಲ್ಲಿ ರಾಗ ಬಸಂತ, ರಾಗ ಭೈರವ, ರಾಗ ಮೇಘಮಲ್ಹಾರ ಮುಂತಾದವುಗಳು ಪುರುಷ ರಾಗಗಳಾದರೆ ಭೈರವಿ, ಭಾಗ್ಯಶ್ರೀ, ಕೇದಾರ, ತೋಡಿ ಮುಂತಾದವುಗಳು ಸ್ತ್ರೀ ಪ್ರಧಾನ ರಾಗಗಳಾಗಿವೆ. ವೀರತನ, ಉತ್ಸಾಹ, ಸಾಹಸ ಈ ಅಂಶಗಳನ್ನೊಳಗೊಂಡ ರಾಗಗಳು ಪುರುಷ ರಾಗಗಳಾದರೆ, ಪ್ರೇಮ, ವಿರಹ, ಕೋಮಲತೆ, ರತಿ ಮೊದಲಾದ ಭಾವಗಳನ್ನು ತೋರಿಸುವ ಅಂಶಗಳು ಸ್ತ್ರೀ ರಾಗಗಳಾಗುತ್ತವೆ. ಕಾಳೆಯವರು ರಾಗಗಳ ಮೇಲೆ ಚಿತ್ರರಚಿಸಿದ್ದಲ್ಲದೇ ಸಪ್ತಸ್ವರಗಳಾದ ಸ ರಿ ಗ ಮ ಪ ದ ನಿ ಎಂಬ ಏಳು ಸ್ವರಗಳಿಗೆ ದೃಶ್ಯರೂಪ ನೀಡಿ ಕಲಾಪ್ರಪಂಚಕ್ಕೆ ಅಪರೂಪದ ಕೊಡುಗೆಗಳನ್ನು ನೀಡಿರುವರು. ಈ ಸಾಂಪ್ರದಾಯಿಕ ಸಂಗೀತ ಪದ್ಧತಿಯನ್ನು ಅನುಸರಿಸಿಯೇ ಕಾಳೆಯವರು ಕಲಾಕೃತಿಗಳಲ್ಲಿ ತಮ್ಮ ವಿಷಯವಸ್ತುವನ್ನು ಕಂಡುಕೊಂಡಿರುವ ಕಾಳೆಯವರಲ್ಲಿ ಸ್ವರಗಳನ್ನು ಕುರಿತು ರಾಗಗಳನ್ನು ಕುರಿತು ಆಳವಾದ ಅಧ್ಯಯನ ಅವರ ಕಲಾಕೃತಿಗಳ ಮುಖಾಂತರ ಕಂಡುಕೊಳ್ಳಬಹುದು.

ಕಾಳೆಯವರು ಈ ರಾಗಮಾಲಾ ಕಲಾಕೃತಿಗಳ ಸರಣಿಯಲ್ಲಿ ಅವರದೇ ಆದ ವಿಭಿನ್ನ ಶೈಲಿಯ ಛಾಪನ್ನು ಮೂಡಿಸಿದ್ದಾರೆ. ಕಾಳೆಯವರೇ ಹೇಳುವಂತೆ "ಭಾರತೀಯ ಕಿರುರೂಪದಲ್ಲಿರುವ ರಾಗಮಾಲಾ ಚಿತ್ರಗಳು ಸುಂದರವಾಗಿವೆ. ಆದರೂ ಅದು ತನ್ನದೇ ಆದ ನಿಯಮಗಳಿಗೆ ಪ್ರಮಾಣ ಬದ್ಧತೆಗೆ ಒಳಗಾಗಿದೆ. ನಾನು ಅವರು ರಚಿಸಿದ ಕಿರು ರೂಪತ್ಮಾಕ ಕಲಾಕೃತಿಗಳಿಗಿಂತ ಭಿನ್ನವಾಗಿ ಮತ್ತು ಸೌಂದರ್ಯಪ್ರಜ್ಞೆಯ ನೆಲೆಯಲ್ಲಿ ಈ ರಾಗಮಾಲ ಕಲಾಕೃತಿಗಳನ್ನು ರಚಿಸಲು ಯೋಚಿಸಿ ಕಾರ್ಯರೂಪಕ್ಕೆ ತಂದಿರುತ್ತೇನೆ". ಎನ್ನುವ ಕಾಳೆಯವರು ಸಂಗೀತದ ಬಗ್ಗೆ ತಿಳಿದುಕೊಂಡು, ಹಾಡುವ ಸಮಯ, ಋತುಮಾನ ಆ ರಾಗದ ರಸ, ಆ ರಾಗ ಯಾವ ರಸವನ್ನು ಬಿಂಬಿಸುತ್ತದೆ ಎನ್ನುವುದನ್ನು ತಿಳಿದುಕೊಂಡಾಗ ಆ ರಾಗದ ಚಿತ್ರ ಮಾಡಲು ಸಾಧ್ಯವಾಗುತ್ತದೆ ಎನ್ನುತ್ತಾರೆ. ಮತ್ತೆ ಮುಂದುವರೆದು ಹಾಗೇ ನಾನು ಕೆಲವೊಂದರಲ್ಲಿ ರಾಗಗಳ ಅಧ್ಯಯನ ಮಾಡಿ ಆ ರಾಗಗಳನ್ನು ಚಿತ್ರಿಸಿದ್ದೇನೆ ಎನ್ನುತ್ತಾರೆ ಕಾಳೆಯವರು. ಎರಡು ಕಲೆಗಳನ್ನು ಬೆಸೆದು ಹೇಗೆ ಹೊಸ ಹೊಸ ಪ್ರಯೋಗವನ್ನು ನೀಡಬಹುದು ಎಂಬುದಕ್ಕೆ ಈ ಚಿತ್ರಗಳು ಉತ್ತಮ ಉದಾಹರಣೆಯಾಗಿವೆ.

ಕಾಳೆಯವರು ಹಿಂದೂಸ್ಥಾನಿ ರಾಗಗಳ ಮೇಲೆ ಚಿತ್ರ ರಚಿಸಿದ್ದಾರೆ. ಅವು ರಾಗ ಬಸಂತ, ತೋಡಿ, ಭೈರವ, ಭೈರವಿ, ಕೇದಾರ, ಭಾಗ್ಯಶ್ರೀ, ಮೇಘ ಮುಂತಾದವುಗಳಲ್ಲದೇ ಸಂಗೀತದ ಸಪ್ತಸ್ವರಗಳನ್ನು ಕುರಿತು ಚಿತ್ರ ರಚಿಸಿದ್ದಾರೆ. ಅವರ ರಾಗಮಾಲಾ ಕಲಾಕೃತಿಗಳು ರಜಪೂತ ಶೈಲಿಯಿಂದ ಪ್ರಭಾವಿತಗೊಂಡಿದ್ದರೂ ತಮ್ಮದೇ ಆದ ವಿಭಿನ್ನ ನೆಲೆಯ ಸೌಂದರ್ಯ ಪ್ರಜ್ಞೆಯಿಂದ ರಾಗಮಾಲಾ ಕಲಾಕೃತಿಗಳನ್ನು ರಚಿಸಿದ್ದಾರೆ. ರಜಪೂತ ಕಲಾಶೈಲಿಗಿಂತ ಭಿನ್ನವಾಗಿ ಇವರ ಕಲಾಕೃತಿಗಳು ಕಂಡುಬರುತ್ತವೆ.

ಡಾ. ಬಿ.ಕೆ. ಹಿರೇಮಠ ಅವರು ಕಾಳೆಯವರ ರಾಗಮಾಲಾ ಚಿತ್ರಗಳ ಕುರಿತು ಹೇಳುವುದೇನೆಂದರೆ ಕಾಳೆಯವರ ರಾಗಮಾಲಾ ಚಿತ್ರಗಳು ರಜಪೂತ ಶೈಲಿಯಿಂದ ಪ್ರಭಾವಿತಗೊಂಡು ಆ ಕಲೆಯ ಶೈಲಿಯನ್ನು ಬಳಸಿಕೊಂಡರು ಸಹ ಅದರ ತದ್ರೂಪ ಅಂತ ಎಲ್ಲಿಯೂ ಅನಿಸುವುದಿಲ್ಲ. ಆದರೆ ಮಿಣಜಿಗಿಯವರ ರಾಗಮಾಲಾ ಚಿತ್ರಗಳ ಶೈಲಿಗೂ ಮತ್ತು ರಜಪೂತ ಶೈಲಿಯ ನಡುವೆ ವ್ಯತ್ಯಾಸ ಕಂಡುಬರುವುದಿಲ್ಲ. ಕಾಳೆಯವರ ರಾಗಮಾಲಾ ಚಿತ್ರಗಳು ರಜಪೂತ ಶೈಲಿಯಿಂದ ಭಿನ್ನವಾದಂತಹ ಅನುಭವ ನೀಡುತ್ತವೆ. ಸಿ.ಎಸ್. ಪಾಟೀಲರೂ ಕೂಡ ರಾಗಮಾಲಾ ಚಿತ್ರಗಳನ್ನು ರಚಿಸಿದರು ಕೂಡ, ಅವರ ಚಿತ್ರಗಳಲ್ಲಿ ಸೂಕ್ಷ್ಮತೆಗಳು ಕಾಣಿಸುತ್ತಿರಲಿಲ್ಲ. ಅತಿಯಾದ ಅಲಂಕರಣೆ ಕಂಡುಬರುತ್ತಿತ್ತು. ಹೀಗಾಗಿ ಅವರ ರಾಗಮಾಲಾ ಚಿತ್ರಗಳು ಸ್ವಾಭಾವಿಕತೆಯಿಂದ ದೂರವಾಗುತ್ತಿದ್ದವು. ಕಾಳೆಯವರು ತಮ್ಮ ಕಲಾಕೃತಿಗಳ ಆಕೃತಿಗಳಲ್ಲಿ ವರ್ಣ ಮತ್ತು ರೇಖೆಗಳಲ್ಲಿ ಸಮತೋಲನ ತರುತ್ತಿದ್ದರು. ಕಲಾಕೃತಿಗಳ ಆಶಯ, ಆಕೃತಿಗಳು ಒಂದಕ್ಕೊಂದು ಪೂರಕವಾಗಿದ್ದು, ಯಾವುದು ಕೂಡ ಅತಿಯಾಯ್ತು ಅನಿಸುತ್ತಿರಲಿಲ್ಲ. ಅಷ್ಟು ಸೂಕ್ಷ್ಮತೆ ಅಲ್ಲಿ ಕಂಡುಬರುತ್ತಿತ್ತು. ಒಟ್ಟು ಸಂಯೋಜನೆಯಲ್ಲಿ ಸಮತೋಲನ ಕಂಡುಬರುತ್ತಿತ್ತು.

ಹೀರೇಮಠ ಅವರು ಮುಂದುವರೆದು ಹೇಳುವುದೇನೆಂದರೆ, ಕರ್ನಾಟಕದ ಕಲಾವಿದರೊಬ್ಬ ರಜಪೂತ ಕಲೆಯ ಶೈಲಿಯನ್ನು ಅದರ ಆಶಯವನ್ನು ಅಧ್ಯಯನ ಮಾಡಿ ಅದರ ಸಾರವನ್ನು ಗ್ರಹಿಸಿ, ತಮಗೆ ಸರಿ ಹೊಂದುವ ರೀತಿಯಲ್ಲಿ ಅದನ್ನು ರೂಪಿಸಿದವರು ಅಂದರೆ ಅದು ಕಾಳೆಯವರು ಎನ್ನಬಹುದು. ಸ್ವಂತಿಕೆ ಎಂಬುವುದು ಇವರ ರಾಗಮಾಲಾ ಚಿತ್ರಗಳಲ್ಲಿ ಕಂಡುಬರುತ್ತದೆ[೨೧] ಎಂದು ಕಾಳೆಯವರ ರಾಗಮಾಲಾ ಚಿತ್ರಗಳ ಒಳನೋಟಗಳನ್ನು ಕುರಿತು ಹೀರೇಮಠ ಅವರು ಮಾರ್ಮಿಕವಾಗಿ ವಿವರಿಸಿದ್ದಾರೆ.

---

೩೧. ಡಾ. ಬಿ.ಕೆ. ಹಿರೇಮಠ (೬೮), ಬಾಗಲಕೋಟೆ, ಅವರೊಂದಿಗೆ ಸಂದರ್ಶನ, ದಿನಾಂಕ ೨೯.೧.೨೦೧೦

ವರ್ಣ ಮತ್ತು ಧ್ವನಿ, ಮನಸ್ಸಿನಲ್ಲಿ ರಸಭಾವನೆಗಳನ್ನುಂಟು ಮಾಡುವುದರಲ್ಲಿ ಕೆಲವು ಬಣ್ಣ ಮತ್ತು ಧ್ವನಿಗಳಲ್ಲಿ ಸಮಾನ ಗುಣಗಳಿವೆ ಎಂಬುದನ್ನು ವಿದೇಶಗಲ್ಲಿ ಆಧುನಿಕ ವಿಜ್ಞಾನಿಗಳು ಒಪ್ಪಿ ತತ್ಸಂಬಂಧ ಶೋಧನೆಗಳನ್ನು ಮಾಡುತ್ತಿದ್ದಾರೆ. ಯಾವ ವರ್ಣವಿನ್ಯಾಸಗಳು ಯಾವ ರಾಗ ಭಾವಗಳಿಗೆ ಸಮ ಎಂದು ತಿಳಿಯಲು ಹಲವು ಪ್ರಯೋಗಗಳನ್ನು ಮಾಡಿದ್ದಾರೆ. ಆ ದಿಶೆಯಲ್ಲಿ ಶೋಧಿಸುತ್ತಿರುವ ಆಧುನಿಕರಲ್ಲಿ ಅಮೆರಿಕದ ಥಾಮಸ್ ವಿಲ್‌ಫ್ರೆಡ್‌ನೂ ಒಬ್ಬನು. ಅವನಿಗಿಂತ ಹಿಂದಿನವರು ಸರಿಸಮಾನವೆಂದು ತೋರಿದ ಧ್ವನಿ ಮತ್ತು ವರ್ಣಗಳನ್ನು ಜೊತೆಗೂಡಿಸಿ ಪ್ರದರ್ಶಿಸಿದ್ದರು. ಅದಕ್ಕೆ 'Glarrilux' ಎಂದು ಹೆಸರು. ಆದರೆ ಅದು ಸಾಕಷ್ಟು ಸಫಲತೆ ಪಡೆಯಲಿಲ್ಲ. ನಮ್ಮಲ್ಲಿ ಮೂರು ಶತಮಾನಗಳ ಹಿಂದೆನೇ ರಾಗಮಾಲಾ ಚಿತ್ರಗಳ ಮುಖಾಂತರ ಇಂತಹ ಒಂದು ಪ್ರಯೋಗವಾಗಿರುವುದು ಕಂಡುಬರುತ್ತದೆ.[೩೨]

ರಾಗಮಾಲಾ ಚಿತ್ರಗಳ ಪರಂಪರೆ ನಮ್ಮ ಭಾರತದಲ್ಲಿ ಪ್ರಾಚೀನ ಕಾಲದಿಂದಲೇ ಬೆಳೆದು ಬಂದಿದೆ. ವಿಷ್ಣುಧರ್ಮೋತ್ತರ ಪುರಾಣ, ಸಮರಾಂಗಣ ಸೂತ್ರಧಾರ ಗ್ರಂಥಗಳಲ್ಲಿ ರಾಗಮಾಲಾ ಚಿತ್ರಗಳ ಬಗ್ಗೆ ವಿವರಗಳಿವೆ. ಇಲ್ಲಿ ಉತ್ತಮ ಸಂಗೀತವು ಕೇಳುಗನಲ್ಲಿ ಉಂಟುಮಾಡುವ ಭಾವತನ್ಮಯತೆಯ ಚಿತ್ರ ನೋಡಿದಾಗಲೂ ಉಂಟಾಗಬೇಕು. ಆ ರೀತಿಯಲ್ಲಿ ಚಿತ್ರ ರಚಿಸಬೇಕು ಎಂಬುದಾಗಿ ಸೂಚಿಸಲಾಗಿದೆ. ಮುಂದೆ ರಜಪೂತರ ಕಾಲಕ್ಕೆ ರಾಗಮಾಲ ಚಿತ್ರಗಳ ವಿಶೇಷ ಸರಣಿ ಚಿತ್ರಗಳು ರಚನೆಯಾಗಿವೆ. ಸಾಮಾನ್ಯವಾಗಿ ಭಾರತೀಯ ಕಿರುರೂಪ ಚಿತ್ರಕಲೆಯ ಹೆಚ್ಚಿನ ಶೈಲಿಗಳಲ್ಲಿ ರಾಗಮಾಲಾ ಚಿತ್ರಗಳು ಚಿತ್ರಾಂಕನಗೊಂಡಿರುವುದು ವಿಶೇಷ.[೩೩]

ಪರ್ಸಿಬ್ರೌನರು ಹೇಳುವಂತೆ ರಾಗಮಾಲಾ ಸಂಪ್ರದಾಯ ರಜಪೂತ ಚಿತ್ರಕಲೆಯಿಂದ ಆರಂಭ ವಾಯಿತು. ಒಂದು ರಾಗ ತಮ್ಮ ಮೇಲೆ ಮೂಡುವ ಪರಿಣಾಮಕ್ಕೆ ಆಕಾರ ಕೊಟ್ಟ ಚಿತ್ರಕಾರರು ಚಿತ್ರಗಳನ್ನು ರಚಿಸುತ್ತಿದ್ದರು. ಕೆಲವು ಸಲ ಚಿತ್ರವಸ್ತು ರಾಗಭಾವದ ಒಂದು ವ್ಯಾಖ್ಯಾನವೂ ಆಗುತ್ತಿತ್ತು. ಒಂದು ಚಿತ್ರ ಹೇಗೆ ಹೃದಯದಲ್ಲಿ ನಾದ ತರಂಗಗಳನ್ನು ಎಬ್ಬಿಸುವುದೋ ಹಾಗೆಯೇ ರಾಗವು ಒಂದು ಚಿತ್ರವನ್ನು ಕಣ್ಣಿಗೆ ಕಟ್ಟುತ್ತದೆ.[೩೪] ಎಂಬುವುದು ಪರ್ಸಿ ಬ್ರೌನರ ಸೂಕ್ತವಾದ ಅಭಿಪ್ರಾಯವಾಗಿದೆ.

ರಜಪೂತ ಸಂಪ್ರದಾಯ ರಾಗ-ರಾಗಿಣಿ ಮಾಲೆಯ ಒಂದು ವಿಶಿಷ್ಟ ಪದ್ಧತಿಯನ್ನುಬೆಳೆಸಿತು. ಈ ಚಿತ್ರಗಳನ್ನು ಕಲಾವಿಮರ್ಶಕರು ಕಾಣುವ ಸಂಗೀತ ಎಂದು ಕರೆದಿದ್ದಾರೆ. ಒಂದು ರಾಗದ

---

೩೨. ಪಿ.ಆರ್. ತಿಪ್ಪಸ್ವಾಮಿ (ಸಂ) ಕಲಾಕೋಶ ಪು.೨೮೧

೩೩. ಡಾ. ಎಸ್.ಸಿ. ಪಾಟೀಲ, ವಿ.ಟಿ.ಕಾಳೆ ಪು.೧೮

೩೪. ಅ.ನ.ಕೃಷ್ಣರಾಯರು, ಕರ್ನಾಟಕದ ಕಲಾವಿದರು ಪು.೯

ಭಾವ, ರಸಗಳಿಗೆ ಅನುಗುಣವಾದ ರೀತಿಯಲ್ಲಿ ವಸ್ತುವನ್ನು ನಿರ್ಮಿಸಿ ರಾಗಭಾವನೆಯನ್ನು ಮೂಡುವುದಕ್ಕೆ ಚಿತ್ರಗಾರರು ಪ್ರಯತ್ನಿಸಿದರು.[೩೫]

ಮಧ್ಯಕಾಲದ ಚಿತ್ರಕಲಾ ಸಂಪ್ರದಾಯ ಎರಡು ಮುಖವಾಗಿ ಹೊರಟಿತು. ಹಿಂದೂ ಭಾವನೆ, ವಿಚಾರಗಳನ್ನು ಅವಲಂಬಿಸಿದ ಪಹರಿ, ಕಾಂಗ್ರಾ ಸಂಪ್ರದಾಯ ಇದನ್ನು ರಜಪೂತ ಸಂಪ್ರದಾಯ ಎಂತಲೂ ಕರೆಯುತ್ತಾರೆ. ಮುಸ್ಲಿಮ ಭಾವನೆ ವಿಚಾರಗಳನ್ನು ಅವಲಂಬಿಸಿದ ಮೊಘಲ್ ಸಂಪ್ರದಾಯ.[೩೬] ಮೊಘಲ್ ಚಿತ್ರಕಲೆ ಚಲಾವಣೆಗೆ ಬಂದ ಸಮಯದಲ್ಲಿಯೇ ರಜಪೂತ ಚಿತ್ರಕಲೆ ಕೂಡಾ ಚಲಾವಣೆಗೆ ಬಂತು. ರಾಜಸ್ಥಾನ ಕಲೆ ಎಂದೂ ಕರೆಯಲ್ಪಡುವ ಈ ಕಲೆಯಲ್ಲಿ ಮುಖ್ಯವಾಗಿ ಎರಡು ಶಾಖೆಗಳಿವೆ. ಮೊದಲನೆಯದು ಜಯಪುರ ಶೈಲಿಯಾದರೆ, ಎರಡನೆಯದು ಪಹಾಡಿ ಶೈಲಿ. ಈ ರಜಪೂತ ಕಲೆಯು ತನ್ನ ಔನ್ನತ್ಯವನ್ನು ಕಂಡಿದ್ದು ೧೮ನೆಯ ಶತಮಾನದಲ್ಲಿ. ಈ ಸಂದರ್ಭದಲ್ಲಿ ರಚಿತವಾದ ಕೃತಿಗಳಲ್ಲಿ ಹಿಂದೂ ಧರ್ಮಕ್ಕೆ ಸಂಬಂಧಿಸಿದ ಹಾಗೂ ಜನರ ದೈನಂದಿನ ಜೀವನದ ಘಟನೆಗಳಿಂದ ಕೂಡಿವೆ.[೩೭]

ರಾಗಗಳ ಉಗಮದ ಬಗೆಗೆ ಹಲವಾರು ಮಾತುಗಳಿವೆ. ಅವುಗಳಲ್ಲಿ ಸೋಮೇಶ್ವರ ಮತ ಮಹತ್ವದ್ದು. ಸೋಮೇಶ್ವರ (ಆಳ್ವಿಕೆ ಕ್ರಿ.ಶ. ೧೧೨೬-೨೮) ಕಲ್ಯಾಣ ಚಾಲುಕ್ಯ ಅರಸ. ಅವನು ತನ್ನ ಮಾನಸೋಲ್ಲಾಸದಲ್ಲಿ ಶಿವನ ಐದು ಮುಖಗಳಿಂದ (ಶಿವನಿಗೆ ಪಂಚಾನನ/ಪಂಚಮುಖಿ ಎಂದು ಹೆಸರಿದೆ.) ಶ್ರೀ, ವಸಂತ, ಭೈರವ, ಪಂಚಮ, ಮೇಘ ರಾಗಗಳು ಹುಟ್ಟಿದವು ಮತ್ತು ಪಾರ್ವತಿಯ ಮುಖದಿಂದ ನಟನಾರಾಯಣ ರಾಗ ಹೊರಹೊಮ್ಮಿತು ಎಂದು ಹೇಳಿದ್ದಾನೆ. ಕ್ರಮೇಣ ಈ ಪುರುಷ ರಾಗಗಳಿಗೆ ರಾಗಪತ್ನಿಯರು ಜೊತೆಗೂಡಿ ರಾಗಪುತ್ರ-ಪುತ್ರಿಯರು ಸಂಭವಿಸಿ ಅಸಂಖ್ಯಾ ರಾಗಗಳ ಪರಿವಾರವೇ ನಿರ್ಮಿತಗೊಂಡಿದೆ. ಸ್ವರ್ಗದಲ್ಲಿ ಗಂಧರ್ವ ಲೋಕವನ್ನೆ ಭಾರತೀಯ ಕಲ್ಪನೆ ಸೃಷ್ಟಿಸಿದೆ. ಪ್ರತಿಯೊಂದು ದೇವತೆಗೆ ಒಂದಿಲ್ಲೊಂದು ವಾದ್ಯವನ್ನು ಕಲ್ಪಿಸಿದೆ. ಶಿವನಿಗೆ ಡಮರುಗ, ಕೃಷ್ಣನಿಗೆ ಕೊಳಲು, ಸರಸ್ವತಿ ವೀಣೆ, ನಾರದನಿಗೆ ತಂಬೂರಿ, ದತ್ತಾತ್ರೆಯನಿಗೆ ಶಂಖ ಇತ್ಯಾದಿ. ಹಲವಾರು ರಾಗಗಳಿಗೆ ದೇವತೆಗಳ ಹೆಸರಿಟ್ಟಿರುವುದು ಧಾರ್ಮಿಕ ನಂಟನ್ನು ಬಲಗೊಳಿಸುತ್ತದೆ. ಭೈರವ, ಭೈರವಿ, ಶಂಕರಾ, ಶ್ರೀ, ನಟನಾರಾಯಣ, ಸರಸ್ವತಿ, ಗೌರಿ, ದುರ್ಗಾ, ಪರಮೇಶ್ವರಿ ಇತ್ಯಾದಿ.[೩೮] ಎಂಬ ಮಾಹಿತಿಗಳು ರಾಗಗಳ ಕುರಿತು ಮಹತ್ವದಾಗಿವೆ.

---

೩೫. ಅ.ನ.ಕೃಷ್ಣರಾಯರು, ಕರ್ನಾಟಕದ ಕಲಾವಿದರು ಪು.೧೧

೩೬. ಅದೇ ಪು.೧೦

೩೭. ಅ.ನ.ಕೃ, ಚಿತ್ರಕಲೆ ಪು.೭೦

೩೮. ಡಾ. ಬಿ.ಆರ್. ಹಿರೇಮಠ (ಸಂ) ನಿಜದ ನೆಲೆ, (ಅಭಿನಂದನ ಗ್ರಂಥ), ಪು.೩೪೧

ಅಜಂತಾ ಚಿತ್ರಕಲೆ ಸಂಪ್ರದಾಯವನ್ನು ಅನುಸರಿಸಿದರೆ, ಮೊಘಲ ಚಿತ್ರಕಲೆ ಸಂಪ್ರದಾಯವನ್ನು ನಿರಾಕರಿಸಿ ಪ್ರಗತಿ ಮಾರ್ಗವನ್ನು ಹಿಡಿಯಿತು. ಇವೆರಡರ ಮಧ್ಯೆ ಸೇತುವೆ ಕಟ್ಟಿ ಸುವರ್ಣ ಮಾಧ್ಯಮ ಮಾರ್ಗವನ್ನು ಅಳವಡಿಸಿಕೊಂಡ ಕೀರ್ತಿ ರಜಪೂತ ಚಿತ್ರಕಾರರಿಗೆ ಸಲ್ಲುತ್ತದೆ. ಹದಿನಾರನೆಯ ಶತಮಾನದ ಮಧ್ಯಭಾಗದಿಂದ ಹತ್ತೊಂಬತ್ತನೆಯ ಶತಮಾನದವರೆಗೆ ಅಂದರೆ ಸುಮಾರು ಮೂರುವರೆ ಶತಮಾನ ಕಾಲ ಈ ಚಿತ್ರಕಲಾ ಸಂಪ್ರದಾಯ ಭಾರತವನ್ನು ಬೆಳಗಿಸಿತು.[೩೯] ರಜಪೂತ ಮತ್ತು ಮೊಘಲ್ ಸಂಪ್ರದಾಯಗಳಲ್ಲಿ ನಿರ್ಮಿತವಾದ ಸೂಕ್ಷ್ಮ ಪ್ರತಿರೂಪ ಕಲಾಕೃತಿಗಳಲ್ಲಿ ಅಸಮಾನವಾದ ರೇಖಾ ಸೌಂದರ್ಯ, ವರ್ಣ ಸಂಯೋಜನೆ ಮತ್ತು ಆಕೃತಿ ವಿಧಾನಗಳು ಕಂಡುಬರುತ್ತವೆ. ಕಲಾಕ್ಷೇತ್ರದಲ್ಲಿ ರಜಪೂತ ಚಿತ್ರಕಲೆಗೆ ಒಂದು ಅಸಮಾನ ಸ್ಥಾನವಿದೆ. ಇದರ ರೇಖಾವಿನ್ಯಾಸ ಕಾವ್ಯ ಕಲ್ಪನೆಯು ಮೋಹಕ ಶೈಲಿಯಾಗಿದೆ. ವೈಷ್ಣವ ಕಾವ್ಯ ಸಂಗೀತಗಳನ್ನು ಚಿತ್ರಕಲೆಯ ಮಧ್ಯವರ್ತಿಗಳಿಸಿದ ರಸಮಯ ಪ್ರಯತ್ನವಾಗಿದೆ.[೪೦] ರಜಪೂತ ಚಿತ್ರಕಲೆಯನ್ನು ಹಿಂದೂಸ್ಥಾನಿ ಸಂಗೀತದ ಸೂಕ್ಷ್ಮವಾದ ರೋಮಾಂಚನಕಾರಕವಾದ ನಾದಗತಿಯ ಓಘನೊಡನೆ ಹೋಲಿಸಬಹುದು.[೪೧]

ಭಾರತೀಯ ಸಂಗೀತದ ಸತ್ವವನ್ನು ರಜಪೂತ ಕಲಾವಿದರು ದೃಶ್ಯದ ಮುಖಾಂತರ ಪ್ರತಿಬಿಂಬಿಸಿರುವುದರ ಹಿನ್ನೆಲೆಯಲ್ಲಿ ಡಾ. ಆನಂದ ಕುಮಾರಸ್ವಾಮಿಯವರು ಪ್ರಪಂಚದ ಉತ್ತಮ ಕಲಾ ಶ್ರೇಣಿಯಲ್ಲಿ ರಜಪೂತ ಕಲಾವಿದರಿಗೆ ಶ್ರೇಷ್ಠ ಸ್ಥಾನ ಸಲ್ಲಬೇಕು ಎಂದು ಹೇಳಿದ್ದಾರೆ. ರಾಗಮಾಲಾ ಚಿತ್ರಗಳಿಗೆ ರಜಪೂತ ಕಲಾವಿದರ ಕೊಡುಗೆ ಅಪಾರ. ಅತ್ಯಂತ ಸೂಕ್ಷ್ಮವಾಗಿ ಕಿರುರೂಪದಲ್ಲಿ ಸುಂದರವಾಗಿ ಕಾವ್ಯಮಯವಾಗಿ ರಚಿಸಿದ್ದಾರೆ.

ರಾಗಮಾಲಾ ಚಿತ್ರಗಳ ಅರ್ಥವನ್ನು ತಿಳಿಯುವಾಗ ರಾಗದ ಬಗ್ಗೆ ಮೊದಲು ತಿಳಿದುಕೊಳ್ಳುವುದು ಅವಶ್ಯ. ರಾಗಗಳು ಭಾರತೀಯ ಸಂಗೀತ ಶ್ರೇಷ್ಠ ಕೊಡುಗೆ. ಪ್ರತಿ ರಾಗಕ್ಕೂ ವಿಶಿಷ್ಟ ರಸೋತ್ಪಾದನೆ ಅಭಿವ್ಯಕ್ತಿ ಮಾಡುವ ಅದ್ಭುತ ಶಕ್ತಿಯಿದೆ. ಭಾರತೀಯ ಸಂಗೀತಕ್ಕೆ ಒಂದು ಭವ್ಯ ಪರಂಪರೆಯಿದೆ. ಭಾರತೀಯ ಶಾಸ್ತ್ರೀಯ ಸಂಗೀತ ಪದ್ಧತಿಯಲ್ಲಿ ರಾಗ ಪರಂಪರೆಗೆ ಮಹತ್ವದ ಸ್ಥಾನವಿದೆ. ರಾಗಗಳು ಈ ಸಂಗೀತದ ಜೀವಧಾತುಗಳು. ರಾಗಗಳು ವಿವಿಧ ಸ್ವರಗಳಿಂದ ಕೂಡಿದ ಸಂಗೀತದ ಉತ್ಕೃಷ್ಟ ಸಂಯೋಜನೆಗಳು.[೪೨]

೩೯. ಪಿ.ಆರ್. ತಿಪ್ಪೆಸ್ವಾಮಿ, (ಸಂ) ಕಲಾಕೋಶ ಪು.೨೮೧

೪೦. ಪಿ.ಆರ್. ತಿಪ್ಪೆಸ್ವಾಮಿ, (ಸಂ) ಚಿತ್ರಕಲಾ ಪ್ರಂಪಚ ಪು.೯೯

೪೧. ಅದೇ ಪು.೯೯

೪೨. ಡಾ. ಹನುಮಣ್ಣನಾಯಕ ದೊರೆ, ರಾಗದೀಪಿಕೆ, ಹಿಂದೂಸ್ಥಾನಿ ರಾಗ ಮತ್ತು ಚೀಜುಗಳ ಗ್ರಂಥ ಪು.೯

ಸಂಗೀತ ಅನಾದಿಕಾಲದಿಂದ ಮಾನವ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದೆ. ಲಲಿತಕಲೆಗಳಲ್ಲಿ ಸಂಗೀತವು ಪ್ರಥಮ ಸ್ಥಾನವನ್ನು ಪಡೆದಿದೆ. ಭಾರತವು ಭವ್ಯ ಸಂಗೀತ ಪದ್ಧತಿಗಳಾದ ಹಿಂದೂಸ್ಥಾನಿ ಮತ್ತು ಕರ್ನಾಟಕ ಸಂಗೀತ ಪದ್ಧತಿಗಳನ್ನು ಒಳಗೊಂಡಿದೆ. ರಾಗಮಾಲಾ ಚಿತ್ರಗಳೆಲ್ಲವೂ ಹಿಂದೂಸ್ಥಾನಿ ಸಂಗೀತವನ್ನು ಅವಲಂಬಿಸಿವೆ. ರಾಗವನ್ನು ಭಾರತೀಯ ಸಂಗೀತದ ಆತ್ಮವೆನ್ನಬಹುದು. ಕೇಳುಗರ ಮನಸ್ಸಿಗೆ ಆನಂದವನ್ನುಂಟು ಮಾಡುವ ಸ್ವರ, ವರ್ಣಗಳ ರಚನೆಯೇ ರಾಗ, ಗಾಯನವು ಭಾರತೀಯ ಸಂಗೀತದ ಒಂದು ವೈಶಿಷ್ಟ್ಯವಾಗಿರುವುದು ಮಾತ್ರವಲ್ಲದೇ ಜೀವಾಳವಾಗಿದೆ.[೪೩]

ನಾರದನ 'ಸಂಗೀತ ಮಕರಂದ' ಗ್ರಂಥದಲ್ಲಿ ಇದರ ಕಾಲ ಸುಮಾರು ೫ ರಿಂದ ೧೧ನೇ ಶತಮಾನದ ನಡುವೆಯಿರಬಹುದು. ಇದರಲ್ಲಿ ನಾರದನು ಪ್ರಪ್ರಥಮವಾಗಿ ರಾಗವರ್ಗೀಕರಣದ ಬಗ್ಗೆ ಉಲ್ಲೇಖಿಸಿದ್ದು, ರಾಗಗಳನ್ನು 'ಪುಲ್ಲಿಂಗರಾಗ', 'ಸ್ತ್ರೀಲಿಂಗರಾಗ' ಹಾಗೂ 'ನಪುಂಸಕರಾಗ' ಗಳೆಂದು ವರ್ಗೀಕರಿಸಿದ್ದಾನೆ. ವರ್ಗೀಕರಣವು ರಸಗಳನ್ನಾಧರಿಸಿ ಮಾಡಲ್ಪಟ್ಟಿದೆ. ಶೃಂಗಾರ, ವೀರರಸಗಳನ್ನು ಪ್ರತಿಪಾದಿಸುವ ರಾಗಗಳನ್ನು ಪುಲ್ಲಿಂಗ, ರಾಗಗಳಲ್ಲಿ ಪ್ರೇಮ, ವಿರಹ, ವಿಭಿನ್ನ, ಮನೋಭಾವಗಳನ್ನು ಪ್ರತಿಪಾದಿಸುವ ರಾಗಗಳನ್ನು ಸ್ತ್ರೀಲಿಂಗರಾಗಗಳಲ್ಲಿ ಶಾಂತ, ಭಯಾನಕ ಹಾಗೂ ಭೀಭತ್ಸ ರಸಗಳನ್ನುಳ ರಾಗಗಳನ್ನು ನಪುಂಸಕ ರಾಗಗಳಲ್ಲಿ ವರ್ಗೀಕರಿಸಿದ್ದಾನೆ. ಶಿವನ ಐದು ಮುಖಗಳಿಂದ ಐದು ರಾಗಗಳ ಉತ್ಪನ್ನ ಹಾಗೂ ಆ ರಾಗಗಳು ಯಾವುದೆಂಬುದನ್ನು ಉಲ್ಲೇಖಿಸಿದ್ದಾನೆ. ಅವು ವಸಂತ, ಭೈರವ, ಪಂಚಮ, ಮೇಘ, ನಟನಾರಾಯಣ"[೪೪] ಇವುಗಳಲ್ಲಿ ಕೆಲವು ರಾಗಗಳ ಮೇಲೆ ಕಾಳೆಯವರು ಕಲಾಕೃತಿಗಳನ್ನು ರಚಿಸಿದ್ದಾರೆ.

ರಾಗ ಪರಿವಾರ ಪದ್ಧತಿಯಲ್ಲಿ ಪ್ರಧಾನರಾಗ ಹಾಗೂ ಅದರ ಅಡಿಯಲ್ಲಿ ಬರುವ ಉಪರಾಗಗಳಾದ ರಾಗಿಣಿಗಳು ಅವುಗಳಿಗೆ ಪುತ್ರರಾಗ, ಪುತ್ರವಧುರಾಗ ಹೀಗೆ ಒಂದು ಸಂಸಾರದಂತೆ ರಾಗ ರಾಗಿಣಿಗಳನ್ನು ವರ್ಗೀಕರಿಸಲಾಗಿದೆ. ಇದು ಹಿಂದೂಸ್ಥಾನಿ ಸಂಗೀತ ಪದ್ಧತಿಯಲ್ಲಿ ಇಂದಿಗೂ ಬಳಕೆಯಲ್ಲಿದ್ದು ರಾಗಮಾಲಾ ಚಿತ್ರಗಳಿಗೆ ಸ್ಫೂರ್ತಿಯನ್ನು ಕೊಟ್ಟಿತ್ತು. ಉದಾಹರಣೆಗೆ,

೪೩. ಡಾ. ಸಂಪದಾಭಟ್ಟ, (ಸಂ) ಹಿಂದೂಸ್ಥಾನಿ ಸಂಗೀತ ಮತ್ತು ರಾಗಮಾಲಾ ಚಿತ್ರಗಳು, (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ೧೯೯೯) ಪು.೪೯

೪೪. ಅದೇ ಪು.೪೯

ಭೈರವ ರಾಗ

ಐದು ಪತ್ನಿಯರು (ರಾಗಿಣಿ) | ಎಂಟು ಪುತ್ರರು

ವಂಗಾಲಿ ಭೈರವಿ ವೇಲಾವಲಿ ಘಾನ್ಕರೆ ಸ್ನೇಹರೆ

ವಂಗಾಲ ಪಂಚಮಿ ಮಧು ಹರ್ಷ ದೇಶಾಲ ಲಲಿತ ವೀಲಾವಲ ಮಾಧವಾ[೪೫]

ಈ ವರ್ಗೀಕರಣದ ಆಧಾರದ ಮೇಲೆ ಕಾಳೆಯವರು ಅನೇಕ ರಾಗ-ರಾಗಿಣಿಗಳ ಕುರಿತು ಕಲಾಕೃತಿಗಳನ್ನು ರಚಿಸಿದ್ದಾರೆ.

ರಾಗಗಳು ಕೇವಲ ಆರು ರಾಗಿಣಿಗಳು ಮೂವತ್ತು. ಅಂದರೆ ಎಲ್ಲಾ ಸೇರಿ ಮೂವತ್ತಾರು ಎಂಬುದು ಪ್ರಚಲಿತದಲ್ಲಿದೆ.[೪೬] ಅವುಗಳು ಭೈರವ, ಮಾಲ್ಕಂಸ, ಹಿಂಡೋಲ, ಶ್ರೀ, ದೀಪಕ ಹಾಗೂ ಮೇಘ ಇವು ಒಂದೊಂದು ರಾಗಗಳು, ಆರು ಋತುಗಳಿಗೆ ಸಂಬಂಧಿಸಿವೆ. ಅವು ಶಿಶಿರ (ಚಳಿಗಾಲ) ಹೇಮಂತ (ಚಳಿಗಾಲದ ಮುನ್ನಾ), ಶರದ (ಶರತ್ಕಾಲ) ವಸಂತ (ವಸಂತಕಾಲ) ಗ್ರೀಷ್ಮ (ಬೇಸಿಗೆ) ಹಾಗೂ ವರ್ಷ (ಮಳೆಗಾಲ)

ಈ ಮೂಲ ೩೬ ರಾಗರಾಗಿಣಿಗಳು ಒಂದೇ ಪ್ರತಿಮಾ ಲಕ್ಷಣಗಳನ್ನು ಹೊಂದಿರುತ್ತಿದ್ದವು. ಶೈಲಿಗಳು ಭಿನ್ನವಾದರೂ ಎಲ್ಲಾ ಚಿತ್ರಗಳ ಮೂಲ ತತ್ವಗಳು ಒಂದೇ ಆಗಿರುತ್ತಿದ್ದವು.[೪೭] ಸಂಗೀತ ಹಾಗೂ ಚಿತ್ರಕಲೆಯ ಕ್ಷೇತ್ರಗಳಿಗೆ ಅಮೂಲ್ಯ ಕೊಡುಗೆಯನ್ನು ಈ ರಾಗಮಾಲಾ ಕಲ್ಪನೆ ಚಿತ್ರಗಳು ನೀಡಿವೆ.

ರಾಗಗಳ ಬಗ್ಗೆ ಧ್ಯಾನ ಮಾಡುವ ಸಮಯದಲ್ಲಿ ಯಾವುದೇರಸ ವಿಶೇಷವನ್ನು ಉತ್ಪನ್ನ ಮಾಡುವುದಕ್ಕಾಗಿ ಒಂದು ವಿಶೇಷ ವಾತಾವರಣದ ಕಲ್ಪನೆಯನ್ನು ಮಾಡಲಾಗಿದೆ. ಈ ಆಧಾರದ ಮೇಲೆ ವೀರ, ಕರುಣ, ಶೃಂಗಾರ ಮುಂತಾದ ಎಲ್ಲಾ ಪ್ರಕಾರದ ರಸಗಳಿಗಾಗಿ ರಾಗಗಳನ್ನು ಹೆಸರಿಸಲಾಗಿದೆ. ಉದಾಹರಣೆಗೆ ವಸಂತ ರಾಗವು ಪ್ರಕೃತಿಯ ವಸಂತೋಲ್ಲಾಸದ ವಾತಾವರಣವನ್ನು

---

೪೫. ಡಾ. ಸಂಪದಾಭಟ್ಟ, (ಸಂ) ಹಿಂದೂಸ್ಥಾನಿ ಸಂಗೀತ ಮತ್ತು ರಾಗಮಾಲಾ ಚಿತ್ರಗಳು, (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ೧೯೯೯) ಪು.೬೦

೪೬. ಅದೇ ಪು. ೮೭

೪೭. ಅದೇ ಪು. ೧೬೦

ತೋರಿಸುತ್ತದೆ. ಮೇಘವು ಮಳೆಯ ಸಂಕೇತವನ್ನು ತೋರಿಸಿದರೆ, ಭೈರವಿ ಪ್ರೇಮ, ಭಕ್ತಿ ಭಾವವನ್ನು ವ್ಯಕ್ತ ಮಾಡುತ್ತದೆ.[೪೮] ಕಾಳೆಯವರು ರಚಿಸಿದ ರಾಗಗಳ ಚಿತ್ರಗಳು ಆಯಾ ರಾಗಗಳ ಭಾವಾರ್ಥ, ಅದು ಹೊರಸೂಸುವ ರಸಗಳೊಂದಿಗೆ ಆಯಾ ರಾಗದ ಹಿನ್ನೆಲೆಯೊಂದಿಗೆ ಈ ಕೆಳಗಿನಂತೆ ಒಂದೊಂದಾಗಿ ವಿವರಿಸಲಾಗಿದೆ.

ಬಾಗೇಶ್ರೀ ರಾಗ (ರಾಗಿಣಿ)

ಕಾಳೆಯವರು ರಾಗ ರಾಗಿಣಿಯರ ಕುರಿತು ರಚಿಸಿದ ಕಲಾಕೃತಿಗಳಲ್ಲಿ ಬಾಗೇಶ್ರೀ ರಾಗವು ವೈಶಿಷ್ಟ್ಯಪೂರ್ಣವಾಗಿ ಕಂಡುಬರುತ್ತದೆ. ಇದು ಹೆಣ್ಣು ರಾಗವಾಗಿದ್ದು, ೧೯೫೭ರಲ್ಲಿ ಈ ಕಲಾಕೃತಿಯನ್ನು ರಚಿಸಲಾಗಿದೆ. ೩೦"x೪೦" ಅಳತೆಯ ಅವಕಾಶದಲ್ಲಿ ವಾಷ್ ತಂತ್ರದಲ್ಲಿ ಮೂಡಿಬಂದಿದೆ.

"ರಾಗಚಂದ್ರಿಕಾ ಸಾರ" ಎಂಬ ಪ್ರಾಚೀನ ಗ್ರಂಥವು ಭಾಗೇಶ್ರೀ ರಾಗವನ್ನು ಕುರಿತು ಈ ರೀತಿಯಾದ ವಿವರಣೆ ಕೊಡುತ್ತದೆ.

ಕೋಮಲ ಸತ್ಯರ್ಗಮನೆಯೋ ವಾದಿ ಸಂಬಾದಿನಾಯಸೌ|
ತೇವ್ರಾ ರಿಧಾ ವರ್ಧರಾತ್ರೇ ಗೀತಾ ವಾಗೀಶ್ವರೀ ಬುಧ್ಯೈ:||

ಅತ್ಯಂತ ಮಧುರವಾದ ಈ ರಾಗವು ಕಾಫಿಥಾಟಗೆ ಸೇರುತ್ತದೆ. ಈ ರಾಗದಲ್ಲಿ ಗಾಂಧಾರ, ಮಧ್ಯಮ ಮತ್ತು ನಿಷಾದ ಸ್ವರಗಳು ಕೋಮಲ ಸ್ವರೂಪದವುಗಳಾಗಿವೆ. ಮತ್ತು ಉಳಿದ ಸ್ವರಗಳು ಶುದ್ಧ ಸ್ವರೂಪದವುಗಳಾಗಿವೆ. ಮಧ್ಯರಾತ್ರಿಯ ಈ ರಾಗದ ಪ್ರಯೋಗ ಸಮಯವಾಗಿದೆ. ಈ ರಾಗವನ್ನು ಸಿನಿಮಾ, ಮರಾಠಿ ಮತ್ತು ಕನ್ನಡ ರಂಗ ಗೀತೆಗಳಿಗೆ ಹೆಚ್ಚಾಗಿ ಬಳಸಿದ್ದು ಕಂಡುಬರುತ್ತದೆ.

ಬಾಗೇಶ್ರೀ ರಾಗ

ಲಕ್ಷಣ ಗೀತೆ   ಸ್ಥಾಯಿ   ತಾಳ ಝುಪತಾಲ (ಮಧ್ಯೆ ಲಯ)

ಗಾವೋ ಬಾಗೇಸರೀ|
ಮೃದು ಲಗತ ಸುರಗನಿ
ಖರಹಾರ ಪ್ರಿಯಠಾಠ|
ತೇವರ ಕರತ ಧರಿ|
ಅಂತರಾ
ಮಧ್ಯಮ ಕರೇ ಜಾನ

೪೮. ಕಾಳೆಯವರೊಂದಿಗೆ ಸಂದರ್ಶನ

ಸಮವಾದಿ ಸಮಾನ

ಪಂಚಮ ಕರೇ ಅಲ್ಲ|

ಮಧನಿಧಮಪಗರೆರೆಸಾ|[೪೯]

ಈ ರಾಗಕ್ಕೆ ಪೂರಕವಾಗಿ ಕಾಳೆಯವರು ರಾಗದ ಲಕ್ಷಣವನ್ನು ಅದರ ಭಾವರ್ಥವನ್ನು ರೇಖೆ ಬಣ್ಣಗಳಿಂದ ಅವಕಾಶದ ಸಂಯೋಜನೆಯಲ್ಲಿ ಅತ್ಯಂತ ಯಶಸ್ವಿಯಾಗಿ ಸೆರೆ ಹಿಡಿದಿದ್ದಾರೆ ಎನ್ನಬಹುದು.

ಪರಿಶುದ್ಧ ಪರಿಪೂರ್ಣ ಸಮರ್ಪಣಾ ಭಾವ ಈ ರಾಗದ ಪ್ರಮುಖ ಲಕ್ಷಣವಾಗಿದೆ. ಈ ರಾಗದ ಅಂತಃರಂಗವನ್ನು ಕಾಳೆಯವರು ತಮ್ಮ ಕುಂಚದಲ್ಲಿ ಯಶಸ್ವಿಯಾಗಿ ಸೆರೆಹಿಡಿದಿದ್ದಾರೆ ಎನ್ನಬಹುದು. ಈ ಕೃತಿಯ ಸಂಯೋಜನೆಯು ವರ್ಣಗಳ ಸಮ್ಮಿಳತವೂ, ಆಕಾರಗಳೂ ರೇಖಾ ವೈಖರಿಯೂ ಪರಿಣಾಮಕಾರಿಯಾಗಿ ಮೂಡಿಬಂದಿವೆ. ಈ ರಾಗಕ್ಕೆ ತಕ್ಕಂತೆ ಭಾವವನ್ನು ರೇಖೆ ಬಣ್ಣಗಳಿಂದ ಚಿತ್ರವಾಗಿ ಮೂಡಿಸಿರುವ ಪರಿ ಕಾಳೆಯವರ ಅದ್ಭುತ ಕಲ್ಪನೆಗೆ ಸಾಕ್ಷಿ. ರಜಪೂತ ಶೈಲಿಯ ಪ್ರಭಾವವನ್ನು ಈ ಕಲಾಕೃತಿಯಲ್ಲಿ ಢಾಳಾಗಿ ಕಾಣಬಹುದು.

ವಿ.ಟಿ. ಕಾಳೆಯವರು ಈ ಕಲಾಕೃತಿಯನ್ನು ಕುರಿತು ಹೇಳುವಂತೆ "ಒಂದು ರಾಗಮಾಲಾದ ಚಿತ್ರದಲ್ಲಿರುವ ಕೇಂದ್ರಬಿಂದು ನಾಯಕ ಅಥವಾ ನಾಯಕಿಯ ಭಾವದ ಆಧಾರದ ಮೇಲೆ ರಾಗದ ಅನುಭೂತಿಯನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಉದಾಹರಣೆಗೆ ಬಾಗೇಶ್ರೀ ರಾಗಿಣಿ ಆಕಾಶದಲ್ಲಿ ತೇಲಿಕೊಂಡು ಹೋಗುತ್ತಿದ್ದಾಳೆ. ಸಾಮಾನ್ಯವಾಗಿ ಯಾರೂ ಆಕಾಶದಲ್ಲಿ ತೇಲಿಕೊಂಡು ಹೋಗುವುದಿಲ್ಲ. ಅವಳ ಜೊತೆ ಇಡೀ ನಿಸರ್ಗ ಗಿಡ, ಮರಗಳೆಲ್ಲಾ ತೇಲಿಕೊಂಡು ಹೋಗುತ್ತಿವೆ. ಅವಳು ತನ್ನ ಪ್ರಿಯಕರನ ದರ್ಶನಕ್ಕೆ ಅಡಿಯಿಂದ ಮುಡಿಯವರೆಗೆ ಸಿಂಗರಿಸಿಕೊಂಡು ಹೋಗುತ್ತಿದ್ದಾಳೆ. ಅವಳ ಪ್ರಿಯಕರ ಹುಣ್ಣಿಮೆಯ ಚಂದ್ರ ಆತನು ಕೂಡ ಅವಳೆಡೆಗೆ ಉತ್ಸುಕತೆ ಯಿಂದ ಬಂಗಾರದ ಜಿಂಕೆಯ ಮೇಲೆ ಕುಳಿತು ಬರುತ್ತಿದ್ದಾನೆ. ಅಲ್ಲಿ ಒಂದು ಹಂಸ ಪಕ್ಷಿ ಹಾರುತ್ತಾ ಹೋಗುತ್ತಿದೆ. ಅದು ಅವಳ ಜೀವಸ್ವರ, ಪ್ರಾಣಿಪಕ್ಷಿ, ಅವಳ ಪ್ರಾಣವೇ ಹೋಗುತ್ತಿದೆ ಎಂಬ ಸಾಂಕೇತಿಕತೆ ಇಲ್ಲಿದೆ. "ಇದು ನನ್ನ ಕಲ್ಪನೆಯಿಂದ ಮೂಡಿಬಂದ ಕಲಾಕೃತಿಯಾಗಿದೆ". ಮುಂದುವರೆದು ಕಾಳೆಯವರು ಹೇಳುವಂತೆ "ಒಬ್ಬ ಸಂಗೀತಗಾರ ಹಾಡುವಾಗ ಆ ರಾಗದ ಸ್ವರ ವಾದಿ-ಸಂವಾದಿ ಕೆಲಸವೇನು? ಸಂವಾದಿ ಸ್ವರದ ಕೆಲಸವೇನು? ಯಾವಾಗ ಇದನ್ನು ಹಾಡಲಾಗುತ್ತದೆ?

---

೪೯. ಡಾ. ಹನುಮಣ್ಣನಾಯಕ ದೊರೆ, ರಾಗ ದೀಪಿಕೆ ಹಿಂದೂಸ್ಥಾನಿ ರಾಗ ಮತ್ತು ಚೀಜುಗಳ ಗ್ರಂಥ, ಪು. ೨೪೯

ಯಾವ ಪ್ರಹರದಲ್ಲಿ ಹಾಡುತ್ತಾರೆ? ಅದರ ರಸ ಎಂಥಹದು? ಎಂಬುದನ್ನು ತಿಳಿದುಕೊಂಡು ಮಾಡಿದಾಗ ಇಂತಹ ಕಲಾಕೃತಿ ರಚಿಸಲು ಸಾಧ್ಯವಾಯಿತು. ಒಂದು ಸಂದರ್ಭದಲ್ಲಿ 'ರಾಜೀವ ಪುರಂದರೆ' ಎಂಬ ಸಂಗೀತಗಾರರು ಹಾಡು ಹೇಳುವಾಗ ಅದನ್ನು ಕೇಳಿ ಆ ರಾಗದ ಕಲ್ಪನೆ ಮನಸ್ಸಿನಲ್ಲಿ ಮೂಡಿ ಈ ಬಾಗೇಶ್ರೀ ಚಿತ್ರ ರಚಿಸಿದೆ''[೫೦] ಎಂದು ಸಂದರ್ಶನ ಸಮಯದಲ್ಲಿ ಕಾಳೆಯವರು ಹೇಳುತ್ತಾರೆ.

ಈ ಕಲಾಕೃತಿಯು ಅವರ ಚಿತ್ರ ರಚನಾ ಪ್ರತಿಭೆಗೆ ಸಾಕ್ಷಿಯಾಗಿ ನಿಲ್ಲುತ್ತದೆ ಎನ್ನಬಹುದು. ಕಾಳೆಯವರ ಸೌಂದರ್ಯ ಪ್ರಜ್ಞೆ ಇಲ್ಲಿ ಅತ್ಯಂತ ಯಶಸ್ವಿಯಾಗಿ ಕೆಲಸ ಮಾಡಿದೆ. ನೋಡುಗರನ್ನು ಭ್ರಮಾಲೋಕಕ್ಕೆ ಕೊಂಡಯ್ಯುವ ಈ ಕಲಾಕೃತಿಯು ಸೆಮಿ ಸರಿಯಾಲಿಸಂ ಶೈಲಿಯ ಕಲ್ಪನೆಯನ್ನು ಮೂಡಿಸುತ್ತದೆ.

ಈ ರಾಗದ ವಿವರಣೆಯನ್ನು ಹೀಗೆ ಕೊಡಬಹುದಾಗಿದೆ. ಪರಿಶುದ್ಧ ಪರಿಪೂರ್ಣ ಸಮರ್ಪಣಾ ಭಾವ ಈ ರಾಗದ ಪ್ರಮುಖ ಅಂಶವಾಗಿದೆ. ಸೂರ್ಯ ಮುಳುಗಿ ಚಂದ್ರೋದಯದ ಸಮಯದಲ್ಲಿ ಈ ರಾಗವನ್ನು ಹಾಡಲಾಗುತ್ತದೆ. ಇಲ್ಲಿ ಸುಂದರವಾದ ಹೆಣ್ಣೊಂದು ತನ್ನ ಪ್ರಿಯಕರನ ದರ್ಶನಕ್ಕಾಗಿ ತನ್ನನ್ನು ಅಡಿಯಿಂದ ಮುಡಿಯವರೆಗೂ ಶೃಂಗಾರಿಸಿಕೊಂಡು ಕೈಯಲ್ಲಿ ಸಂಗೀತ ಸಾಧನವೊಂದನ್ನು ಹಿಡಿದು ಅದನ್ನು ನುಡಿಸುತ್ತಾ ಆ ಸ್ವರವನ್ನು ಆನಂದಿಸುತ್ತಾ ಆಕಾಶದಲ್ಲಿ ತೇಲುತ್ತಾ ಹೋಗು ತ್ತಿದ್ದಾಳೆ. ಇದು ಹೆಣ್ಣು ರಾಗವಾಗಿರುವುದದರಿಂದ ಕಾಳೆಯವರು ಇಲ್ಲಿ ಹೆಣ್ಣಿನ ಆಕೃತಿಯನ್ನು ಚಿತ್ರಿಸಿದ್ದಾರೆ. ಇಡೀ ಪ್ರಕೃತಿಯೇ ಅವಳೊಂದಿಗೆ ಆಕಾಶದಲ್ಲಿ ತೇಲುತ್ತಾ ಹೊರಟಂತೆ ತೋರಿಸಿ ದ್ದಾರೆ. ಅವಳು ತನ್ನ ಪ್ರಿಯತಮನನ್ನು ನೋಡುವ ಕಾತುರತೆಯನ್ನು ತೋರಿಸಲು ಸಾಂಕೇತಿಕವಾಗಿ ಹಾರುತ್ತಿರುವ ಪಕ್ಷಿಯನ್ನು ಚಿತ್ರದಲ್ಲಿ ತೋರಿಸಲಾಗಿದೆ. ಹುಣ್ಣಿಮೆಯ ಚಂದ್ರನೇ ಅವಳ ಪ್ರಿಯಕರ. ಆತ ಬಂಗಾರ ವರ್ಣದ ಜಿಂಕೆಯ ಮೆಲೆ ಕುಳಿತು ಸವಾರಿ ಮಾಡುತ್ತಿದ್ದಾನೆ. ಹುಣ್ಣಿಮೆಯ ಬೆಳಕಿನ ಪ್ರಖರತೆ ಎಲ್ಲೆಡೆ ವ್ಯಾಪಿಸಿದೆ. ನಕ್ಷತ್ರಗಳು ಮಿನುಗುತ್ತಿವೆ. ಅವಳು ತೊಟ್ಟಂತಹ ಹಸಿರು ಬಣ್ಣದ ಮುಸ್ಲಿಂ ಶೈಲಿಯ ಉಡುಪನ್ನು ಹೋಲುವ ಪೈಜಾಮ ಮೇಲೆ ಪಾರದರ್ಶಕವಾದ ಉದ್ದನೆಯ ಬಿಳಿ ಬಣ್ಣದ ಲಂಗ, ಕೆಂಪು ಬಣ್ಣದ ರವಿಕೆ ಹೂವಿನ ನಕ್ಷೆಯನ್ನು ಒಳಗೊಂಡ ಪಾರದರ್ಶಕ ಮೇಲು ಹೊದಿಕೆ, ಅವಳ ಆಭರಣಗಳಲ್ಲಿನ ಕುಸುರಿ ಕೆಲಸ ಅವಳ ಮುಗ್ಧ ಸೌಂದರ್ಯ, ಹಿನ್ನೆಲೆಯಲ್ಲಿ ತೇಲುತ್ತಿರುವ ಮೋಡಗಳು, ಮಿನುಗುತ್ತಿರುವ ನಕ್ಷತ್ರಗಳು ಚಿತ್ರದಲ್ಲಿರುವ ಪ್ರಮುಖ ಆಕೃತಿಗೆ ಪೂರಕವಾಗಿದ್ದು ಆಕೃತಿ ಜೀವಕಳೆಯಿಂದ ಕಂಗೊಳಿಸುವಲ್ಲಿ

---

೫೦. ವಿ.ಟಿ. ಕಾಳೆಯವರೊಂದಿಗೆ ಸಂದರ್ಶನ ದಿನಾಂಕ ೧೫.೩.೨೦೦೯

ಸಹಾಯಕವಾಗಿದೆ. ಈ ಎಲ್ಲಾ ಅಂಶಗಳನ್ನು ಕಾಳೆಯವರು ತಮ್ಮ ಈ ಕಲಾಕೃತಿಯಲ್ಲಿ ಅತ್ಯಂತ ಮಾರ್ಮಿಕವಾಗಿ ತಂದಿದ್ದಾರೆ. ಈ ರಾಗಕ್ಕೆ ತಕ್ಕಂತೆ ಭಾವವನ್ನು ರೇಖೆ ಬಣ್ಣಗಳಿಂದ ಚಿತ್ರವಾಗಿ ಮೂಡಿಸಿರುವ ಪರಿ ಕಾಳೆಯವರ ಅದ್ಭುತ ಕಲ್ಪನೆಗೆ ಹಿಡಿದ ಕನ್ನಡಿ. ಉಳಿದ ರಾಗಗಳ ಕಲಾಕೃತಿಗಳಿಗಿಂತ ಭಿನ್ನ ಅನುಭವ ಈ ಕಲಾಕೃತಿ ನೀಡುತ್ತದೆ.

ರಾಗ ಮೇಘ

ಹಿಂದೂಸ್ಥಾನಿ ಸಂಗೀತ ಪದ್ಧತಿಯಲ್ಲಿ ಆರು ಋತುಗಳಿಗೆ ಅನುಸರಿಸಿ ಆರು ಮುಖ್ಯ ರಾಗಗಳನ್ನು ಮನ್ನಿಸಲಾಗಿದೆ. ಬೈರವ, ಮಾಲ್ಕಂಸ, ಹಿಂಡೋಲ, ಶ್ರೀ, ದೀಪಕ ಹಾಗೂ ಮೇಘ. ಇಲ್ಲಿ ಆರು ಋತುಗಳೆಂದರೆ,

ಶಿಶಿರ : ಚಳಿಗಾಲ (ಭೈರವ)

ಹೇಮಂತ : ಚಳಿಗಾಲದ ಮುನ್ನ (ಮಾಲ್ಕಂಸ)

ಶರದ : ಶರತ್ಕಾಲ (ಹಿಂಡೋಲ)

ವಸಂತ : ವಸಂತಕಾಲ (ಶ್ರೀ)

ಗ್ರೀಷ್ಮ : ಬೇಸಿಗೆ (ದೀಪಕ)

ವರ್ಷಾ : ಮಳೆಗಾಲ (ಮೇಘ)[೫೧]

ಮಧ್ಯಾಹ್ನಾನಂತರ ಮಳೆಗಾಲದಲ್ಲಿ ಹಾಡತಕ್ಕ ರಾಗವೆಂದು ಇದಕ್ಕೆ ಪ್ರಸಿದ್ಧಿ ದೊರೆತಿದೆ.[೫೨] ಮೇಘರಾಗವು ಗಂಡು ರಾಗವಾಗಿದೆ. ಇದು ಗಂಭೀರ ಸ್ವಭಾವದ ರಾಗವಾಗಿದೆ. ರಜಪೂತ ಶೈಲಿಯಲ್ಲಿ ಬರುವ ಮೇಘ ಮಲ್ಹಾರ ರಾಗದ ಚಿತ್ರದ ಶೈಲಿಯಲ್ಲಿ ರಾಗ ಮೇಘವನ್ನು ಆಗಸದಲ್ಲಿ ದಟ್ಟ ಮೋಡಗಳು ಕವಿದು ಮಳೆ ಸುರಿಯುವ ಸಂದರ್ಭದಲ್ಲಿ ಹಾಡಲಾಗುತ್ತದೆಯೆಂಬ ಅರ್ಥವನ್ನು ಸೂಚಿಸುವ ಸಲುವಾಗಿ ಚಿತ್ರಗಳಲ್ಲಿ ದಟ್ಟ ಮೊಡ, ಮಳೆಯ ಲಕ್ಷಣಗಳನ್ನು ಮುಖ್ಯ ಪಾತ್ರದಲ್ಲಿ ಚಿತ್ರಿಸಲಾಗಿದೆ. ಉಳಿದ ಹಿನ್ನೆಲೆ ನಿಸರ್ಗ ವೇಷಭೂಷಣಗಳಲ್ಲಿ ಅಲ್ಪಸ್ವಲ್ಪ ಭಿನ್ನತೆ ಕಂಡರೂ ಚಿತ್ರಗಳಲ್ಲಿ ದಟ್ಟವಾದ ಮೋಡ ಮಳೆಯ ವಾತಾವರಣಗಳು ಎತ್ತಿ ತೋರಿಸಲ್ಪಟ್ಟಿವೆ[೫೩] ಎಂಬ ವಿವರಣೆ ಕಂಡುಬರುತ್ತದೆ.

---

೫೧. ಡಾ. ಸಂಪದಾಭಟ್ಟ, (ಸಂ) ಹಿಂದೂಸ್ಥಾನಿ ಸಂಗೀತ ಮತ್ತು ರಾಗಮಾಲಾ ಚಿತ್ರಗಳು, (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ೧೯೯೯) ಪು.೯೯

೫೨. ಅ.ನ.ಕೃ., ಕರ್ನಾಟಕದ ಕಲಾವಿದರು, ಪು.೧೫

೫೩. ಅದೇ ಪು.೧೫



ಮೇಘ ರಾಗ

ಕೆಲವು ಚಿತ್ರಗಳನ್ನು ರಾಗದಲ್ಲಿ ಹಾಡಲಾಗುವ ಬಂದೀಶಗಳನ್ನು ಅನುಸರಿಸಿ ರಚಿಸಲಾಗಿದೆ. ಉದಾಹರಣೆಗೆ ಮೇಘಮಲ್ಹಾರ, ಈ ರಾಗಗಳಲ್ಲಿಯ ಬಂದೀಶಗಳು, ಮಳೆ ಗುಡುಗುಗಳಿಗೆ ಸಂಬಂಧಿಸಿರುತ್ತದೆ. ಹೀಗಾಗಿ ಚಿತ್ರಗಳಲ್ಲೂ ಮಳೆಗಾಲದ ವಾತಾವರಣವನ್ನು ಚಿತ್ರಿಸಲಾಗಿದೆ.[೫೪] ಡಾ. ಎಂ.ಮಿಣಜಗಿಯವರ ಮೇಘಮಲ್ಹಾರ ಕಲಾಕೃತಿಯಲ್ಲಿ ವೀರಸರದ ಪ್ರತಿಪಾದನೆಯಿಲ್ಲದೆ, ಕರುಣಾರಸದ ಪ್ರತಿಪಾದನೆಯಿದೆ.

ಮಲ್ಹಾರ ರಾಗಿಣಿ ಮೇಘರಾಗವನ್ನು ನುಡಿಸಿ ಮಳೆ ಬರಿಸುತ್ತಾಳೆ. ನೀರಿಲ್ಲದೆ ಪರಿತಪಿಸುತ್ತಿರುವ ಜಿಂಕೆಗಳು, ನವಿಲು, ಬಕಗಳು, ವರ್ಷಾಗಮನವನ್ನು ನಿರೀಕ್ಷಿಸುತ್ತಿವೆ. ಮೋಡಗಳು ಕವಿದಿವೆ[೫೫] ಎಂಬ ವಿವರಣೆಯಿದ್ದರೆ ವಿ.ಟಿ. ಕಾಳೆಯವರ ಮೇಘ ರಾಗ ಇದಕ್ಕಿಂತ ಬಿನ್ನವಾಗಿ ರಚನೆಗೊಂಡಿದೆ. ಮಿಣಜಗಿಯವರ ಮೇಘಮಲ್ಹಾರ ರಾಗದಲ್ಲಿ ರಾಗಿಣಿ ಕಂಡುಬಂದರೆ, ಕಾಳೆಯವರ ಕಲಾಕೃತಿಯಲ್ಲಿ ಪುರುಷ ಕೃತಿ ಪ್ರಮುಖವಾಗಿದ್ದು ದಟ್ಟವಾದ ಮೋಡಗಳ ಮೇಲೆ ಕುಳಿತು ಚಲಿಸುತ್ತಿದೆ. ಮಳೆಯ ಸಂದರ್ಭದಲ್ಲಿ ಬರುವ ಮಿಂಚು ಗುಡುಗುಗಳ ಅನುಭವ ಉಂಟು ಮಾಡುತ್ತದೆ. ಜಲವರ್ಣದ ವಾಷ್‌ತಂತ್ರದಲ್ಲಿ ಪರಿಣಾಮಕಾರಿಯಾದ ಸಂಯೋಜನೆಯು ಈ ಕಲಾಕೃತಿ ಹೊಂದಿದೆ. ಇಲ್ಲಿ ರೇಖೆಗಳ ಕುಶಲತೆ ಆಕರ್ಷಣೀಯವಾಗಿ ಕಂಡುಬಂದಿದೆ.

ರಾಗ ಭೈರವಿ (ರಾಗಿಣಿ)

'ಭೈರವಿ' ಇದು ಹೆಣ್ಣು ರಾಗವಾಗಿದೆ. ಭೈರವ ರಾಗದ ಪತ್ನಿ ಎಂದು ಈ ರಾಗವನ್ನು ಕರೆಯಲಾಗುತ್ತದೆ. ಭೈರವ ಇದು ಶಿವನ ಇನ್ನೊಂದು ರೂಪವಾಗಿರುವುದರಿಂದ ಭೈರವಿಯನ್ನು ಪಾರ್ವತಿಯ ಇನ್ನೊಂದು ರೂಪವಾಗಿ ಕರೆಯಲಾಗುತ್ತದೆ. ಈ ಕಲಾಕೃತಿಯು ಜಲವರ್ಣದ ವಾಷ್‌ತಂತ್ರದಲ್ಲಿ ಮೂಡಿಬಂದಿದೆ.

ಭೈರವಿ ರಾಗದ ಬಗೆಗೆ ಪ್ರಾಚೀನ ಗ್ರಂಥಗಳಲ್ಲಿರುವ ಉಲ್ಲೇಖಗಳು:

೧. 'ರಾಗ ಚಂದ್ರಿಕಾಸಾರ' ಗ್ರಂಥದಲ್ಲಿರುವ ಶ್ಲೋಕ :

ಸಖಿ ಕೋಮಲ ಸುರಭೈರವೀ ಸಂಪೂರನ ಸುರ ಹೋಯೀ|
ಮ-ಸವಾದೀ - ಸಂವಾದಿ ಹೈಂ. ಸಖ ಜೋ ಚಾ ಹೆ ಕೋಯೀ||

---

೫೪. ಅ.ನ.ಕೃ., ಕರ್ನಾಟಕದ ಕಲಾವಿದರು, ಪು. ೧೯೭

೫೫. ಡಾ. ಸಂಪದಾಭಟ್ಟ, (ಸಂ) ಹಿಂದೂಸ್ಥಾನಿ ಸಂಗೀತ ಮತ್ತು ರಾಗಮಾಲಾ ಚಿತ್ರಗಳು, (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ೧೯೯೯) ಪು.೭೩



ಭೈರವಿ ರಾಗಿಣಿ

ಈ ರಾಗವು ಭೈರವಿ ಥಾಟದಿಂದ ಜನಿಸುತ್ತದೆ. ಇದರಲ್ಲಿ ಎಲ್ಲ ಸ್ವರಗಳು ಕೋಮಲವಾಗಿವೆ. ಇದು ಸಂಪೂರ್ಣ ಜಾತಿಯ ರಾಗವಾಗಿದೆ. ಇದರ ಸಮಯವು ಬೆಳಗಿನ ಪ್ರಥಮ ಪ್ರಹರವಾಗಿದೆ. ಇದು ಅತ್ಯಂತ ಲೋಕಪ್ರಿಯ ರಾಗವಾಗಿದೆ. ಸುಗಮ ಸಂಗೀತ, ಸಿನಿಮಾ ಸಂಗೀತ, ಜನಪದ ಪ್ರಕಾರಗಳಲ್ಲಿ ಇದರ ಬಳಕೆ ಅಧಿಕವಾಗಿದೆ. ಗಜಲ್, ಠುಮರಿ, ಟಪ್ಪಾ, ಹೋರಿ ಇತ್ಯಾದಿ ಪ್ರಕಾರಗಳಲ್ಲಿಯೂ ಹೆಚ್ಚಾಗಿ ಈ ರಾಗ ಉಪಯೋಗವಾಗುವುದು ಕಂಡುಬರುತ್ತದೆ.[೫೬]

ಭೈರವಿ ರಾಗ

ಲಕ್ಷಣ ಗೀತೆ ಸ್ಥಾಯಿ ತಾಳ ತೀನತಾಲ (ಮಧ್ಯ ಲಯ)

ಭೈರವೀ ಕಹಿ ಮನ ಮಾನೀ|
ಕೋಮಲ ಸಬ ಸುರ ಕರ ಗುನಿಗಾವತ
ಪ್ರಥಮ ಪಹರಕೀ ಠಾನೀ ಹೋ||
ಅಂತರಾ
ಮಧ್ಯಮ ವಾದಿ ಸುರ ಸಮ ವಾದೀ|
ಭಕ್ತಿ ರಸ ಕೀ ಖಾನೀ|
ಸಬ ಕೋಯೀ ಗಾವತ ಸಬಕೋ ರಿಯಾವತ
ಭೈರವಿ ಶಾಸ್ತ್ರ ಪ್ರಮಾನಿ ಹೋ||[೫೭]

ಶಿವನ ದೇವಸ್ಥಾನದಲ್ಲಿ ಶಿವಲಿಂಗದ ಮುಂದೆ ಕುಳಿತು ಪಾರ್ವತಿ ವಾದ್ಯವೊಂದನ್ನು ನುಡಿಸುತ್ತಾ ಶಿವನ ಆರಾಧನೆಯಲ್ಲಿ ತೊಡಗಿರುವುದು. ಇದು ಪ್ರೇಮ, ಭಕ್ತಿ, ಶ್ರದ್ಧೆಯ ಭಾವವನ್ನು ಮೂಡಿಸುವ ರಾಗವಾಗಿದೆ. ಸಂಗೀತ ಕಛೇರಿಯ ನಡಿಸುವ ಸಂದರ್ಭದಲ್ಲಿ ಸಂಗೀತಗಾರರು ಈ ರಾಗವನ್ನು ಕೊನೆಯಲ್ಲಿ ಹಾಡುತ್ತಾರೆ.

ರಜಪೂತ ಶೈಲಿಯಲ್ಲಿರುವ ಭೈರವಿ ರಾಗಿಣಿಯಲ್ಲಿ ಕುಮಾರಿ ನಾಯಿಕೆಯನ್ನು ಪ್ರಸ್ತುತ ಪಡಿಸಲಾಗಿದೆ. ಇಲ್ಲಿ ಆಕೆ ನಾಯಕನ ಪ್ರಾಪ್ತಿಗಾಗಿ ಶಿವ ಅಥವಾ ಯಾವುದೋ ದೇವತೆಯ ಮುಂದೆ ನಿಂತು ಪೂಜಿಸುತ್ತಿರುವಂತೆ ತೋರಿಸಲಾಗಿದೆ. ಈ ರಾಗದ ಪ್ರಸ್ತುತೀಕರಣದ ಸಮಯದಲ್ಲಿ ಅಧಿಕವಾಗಿ ಪಾರ್ವತಿಯು ಶಿವನನ್ನು ಆರಾಧಿಸುತ್ತಿರುವಂತೆ ಆ ಚಿತ್ರಿಸಲ್ಪಟ್ಟಿದೆ. ಕೆಲವು ಕಡೆ

೫೬. ಡಾ. ಹನುಮಣ್ಣನಾಯಕ ದೊರೆ, ರಾಗ ದೀಪಿಕೆ ಹಿಂದೂಸ್ಥಾನಿ ರಾಗ ಮತ್ತು ಚೀಜುಗಳ ಗ್ರಂಥ, ಪು.೩೨

೫೭. ಅದೇ ಪು.೩೩

ಸಾಮಾನ್ಯ ಸುಂದರ ಯುವತಿಯೋರ್ವಳು ಶಿವಲಿಂಗದ ಉಪಾಸನೆ ಮಾಡುತ್ತಿರುವಂತೆ ಚಿತ್ರಿಸಲಾಗಿದೆ. ಬೈರವಿಯ ಗಾನ ಸಮಯವು ಪ್ರಾತಃಕಾಲವಾಗಿದೆ. ದೇವತೆಗಳನ್ನು ಆರಾಧಿಸುವುದು ಪ್ರಾತಃ ಕಾಲವೇ ಆಗಿದೆ.[೫೮]

ರಾಗ ರಾಗಿಣಿಯರ ಕುರಿತು ಪಿ. ಶಾಮರಾವ್ ಅವರು ತಮ್ಮ ಲೇಖನವೊಂದರಲ್ಲಿ ಭೈರವಿ ರಾಗದ ಕುರಿತು ಹೀಗೆ ವರ್ಣಿಸಿದ್ದಾರೆ. ಬೈರವಿ ಗೌರ ಬಣ್ಣದ ಮೈಚ್ಛಾಯೆಯುಳ್ಳುವಳು. ಪದ್ಮಭರಿತವಾದ ಕೊಳದ ಪಕ್ಕದಲ್ಲಿ ಸ್ಪಟಿಕ ಕಾಂತಿಯುಳ್ಳ ರಂಗಮಂಟಪದಲ್ಲಿ ಕುಳಿತು, ಧ್ಯಾನಪರವಶಳಾಗಿ, ಶಿವನನ್ನು ತಾಳ ಸಹಿತವಾದ ಗೀತಗಳಿಂದ ಆರಾಧಿಸುವಳು[೫೯] ಎಂದು. ಈ ಮಾಹಿತಿಯನ್ನು ಆಧರಿಸಿ ಕಾಳೆಯವರ ಈ ಭೈರವಿ ಕಲಾಕೃತಿ ಸಂಯೋಜನೆಗೊಂಡಿದೆ. ಈ ಕಲಾಕೃತಿಯ ರಜಪೂತ ಶೈಲಿಯ ಪ್ರಭಾವವನ್ನು ಹೊಂದಿದ್ದರೂ ಸಹ ಕಾಳೆಯವರ ವೈಯಕ್ತಿಕ ಛಾಪು ಇಲ್ಲಿ ಪ್ರಮುಖವಾಗಿ ಕಂಡುಬರುತ್ತದೆ.

ತೋಡಿ ರಾಗ (ರಾಗಿಣಿ)

ತೋಡಿರಾಗವು ಹೆಣ್ಣು ರಾಗವಾಗಿದೆ. ತೋಡಿ ರಾಗವು ಕರುಣೆ, ಪ್ರೇಮ, ವ್ಯಾತ್ಸಲ್ಯ, ಶೃಂಗಾರ, ಏಕಾಂಗಿತನ (ವಿರಹ), ಮುಂತಾದ ನವಿರಾದ ಭಾವಗಳನ್ನು ಹೊರಸೂಸುತ್ತದೆ.


ಚೀಜು ಸ್ಥಾಯಿ ತಾಳ ತೀನತಾಲ (ಮಧ್ಯೆ ಲಯ)

ಮೋರೇ ಮನ ಜಾಯ ಶರನತು ಮುಕಂದಾ।
ವಿಮಲ ಭಾವ ಧರ ಅಂತಃಕರನಾ
ಟೂಟತ ಸಬ ಭ ಪಂಧಾ॥
ಅಂತರಾ
ಮೇರಾ ಮೇರಾ ನಾಕಮ ತೀರಾ।
ಯ್ಯೂಂಟಾ ಕಲ ಜುಗ ಧಂಗಾ
ದೋ ದಿನಕೋ ಜಗ ಚತುರ ಸಮಯ ಸಬ।
ಸಾಂಚ ಏಕ ಗೋವಿಂದಾ[೬೦] ಇದು ತೋಡಿರಾಗದ ಭಾವಾರ್ಥವಾಗಿದ್ದು,

---

೫೮. ಡಾ. ಹನುಮಣ್ಣನಾಯಕ ದೊರೆ, ರಾಗ ದೀಪಿಕೆ ಹಿಂದೂಸ್ಥಾನಿ ರಾಗ ಮತ್ತು ಚೀಜುಗಳ ಗ್ರಂಥ, ಪು.೩೨

೫೯. ಪಿ. ಶಾಮರಾವ್, ಭಾರತೀಯ ಕಲಾದರ್ಶನ, ಪು.೧೪೧





ತೋಡಿ ರಾಗಿಣಿ

ರಾಗಮಾಲೆಯಲ್ಲಿ ತೋಡಿ ರಾಗಕ್ಕೆ ಇರುವ ಸ್ಥಾನ ಬೇರೆ ಯಾವ ರಾಗಕ್ಕೂ ಇಲ್ಲ ಎನ್ನಬಹುದು. ಮಾಲಕಂಸನ ಪ್ರಿಯಳಾದ ತೋಡಿ ರಾಗಿಣಿ ಪೀತವರ್ಣಳಾಗಿದ್ದಾಳೆ. ಕೇಸರಿ, ಪಚ್ಚ ಕರ್ಪೂರ ಅವಳ ದೇಹವನ್ನು ಅಲಂಕರಿಸಿವೆ. ಅವಳು ಧರಿಸಿರುವ ಶುದ್ಧಶ್ವೇತಾಂಬರ ಪೀನಪಯೋಧರೆ, ಕೃಶಾಂಗಿ, ಆಳವಾದ ನಾಭಿ ಪ್ರದೇಶ, ಮೇಘರಾಶಿಯಲ್ಲಿ ಅವಳ ತಲೆಗೂದಲು, ಹರಿಣ ನೇತ್ರ, ಅವಳ ಹಲ್ಲುಗಳು ಮುತ್ತಿನ ಮಾಲೆಯಂತಿವೆ. ಅಮೂಲ್ಯ ರತ್ನಗಳಿಂದ ಅಲಂಕೃತವಾದ ವಸ್ತ್ರಧರಿಸಿದ್ದಾಳೆ. ಹುಲ್ಲುಗದ್ದೆಯ ಮೇಲೆ ಪವಡಿಸಿ ವೀಣೆ ನುಡಿಸುತ್ತಿದ್ದಾಳೆ. ಅವಳ ಸಂಗೀತ ಸಾಧನಕ್ಕೆ ಮೃಗ ಪಕ್ಷಿಗಳು ಮಾರುಹೋಗಿವೆ. ಅವಳ ಸಂಗೀತದಲ್ಲಿ ತಲ್ಲೀನಗೊಂಡ ಜಿಂಕೆಗಳು ನಿರ್ಭಯವಾಗಿ ಅವಳ ಬಳಿ ನರ್ತಿಸುತ್ತಿವೆ.[೬೦] ಹೀಗೆ ರಜಪೂತ ಶೈಲಿಯಲ್ಲಿರುವ ತೋಡಿ ರಾಗಿಣಿಯ ಕುರಿತು ವಿವರಣೆ ಕಂಡುಬರುತ್ತದೆ.

ಪ್ರತ್ಯೇಕ ರಾಗ-ರಾಗಿಣಿಗಳು ಒಂದೊಂದು ರೀತಿಯ ಭಾವನಾತ್ಮಕ ಪ್ರೇಮ ಸ್ಥಿತಿಯ ಪ್ರಸಂಗ ವನ್ನು ಹೊಂದಿರುತ್ತದೆ. ಈ ಭಾವನಾತ್ಮಕ ಸ್ಥಿತಿಯ ಜೊತೆಗೆ ಪ್ರಕೃತಿಯ ಸಹಯೋಗವನ್ನು ತೆಗೆದುಕೊಳ್ಳಲಾಗುತ್ತದೆ.[೬೧] ಇದು ಎಲ್ಲಾ ರಾಗ ರಾಗಿಣಿಗಳಿಗೂ ಅನ್ವಯಿಸುತ್ತದೆ.

ರಾಗಿಣಿ ತೋಡಿಯಲ್ಲಿ ನಾಯಕಿಯನ್ನು ವೀಣೆಯೊಂದಿಗೆ ಪ್ರಸ್ತುತಪಡಿಸಲಾಗಿದೆ. ಈ ರಾಗಿಣಿಯ ನಾಯಕಿಯಲ್ಲಿ ಪ್ರೇಮ ಭಾವದ ಸಂಚಾರ ಹಾಗೂ ಅದರ ಪ್ರತಿಕ್ರಿಯೆಗಳು ಉಂಟಾಗಿವೆ. ಇದರ ಅರ್ಥ ಪ್ರಸ್ತುತ ನಾಯಕಿಯ ಮುಂದೆ ಒಂದು ಹೊಳೆಯುವ ಚಿನ್ನದ ಬಣ್ಣದ ಜಿಂಕೆಯಿದ್ದು ಅದನ್ನು ನಾಯಕಿಯ ಪ್ರತಿ ಆಕರ್ಷಿತವೆಂದು ತೋರಿಸಲಾಗಿದೆ.

'ರಾಗಚಂದ್ರಿಕಾಸಾರ' ಎಂಬ ಪ್ರಾಚೀನ ಗ್ರಂಥದಲ್ಲಿರುವ ಒಂದು ಶ್ಲೋಕವು ತೋಡೀ ರಾಗವನ್ನು ಹೀಗೆ ವರ್ಣಿಸುತ್ತದೆ.

"ಲೇಖೇ ಮನಿ ಕೋಮಲ ರಿಗಧವಾಧೀ ಧೈವತ ಸಾಜ|
ಸಂವಾದೆ ಗಂಧಾರ ಹೈ, ತೋಡೀ ರಾಗ ಬೀರಾಜ||"

ತೋಡಿರಾಗ ಎನ್ನುವ ಪದಕ್ಕೆ ರಂಗು ಎಂದೂ ಅರ್ಥ. ರಾಗ ತೋಡಿ ರಾಗ ಮಾತ್ರವೇ ಅಲ್ಲ ಅನುರಾಗ ಕೂಡಾ ಆಗಿದೆ.[೬೨] ತೋಡಿ ಜನಕ ಥಾಟ ರಾಗವಾಗಿದೆ. ಪ್ರಾತಃಕಾಲ ಮಧ್ಯಾಹ್ನಗಳ ಸಂಧಿಕಾಲ. ಸಂಧಿಕಾಲದಲ್ಲಿ ಹಾಡತಕ್ಕದ್ದು. ಗಂಭೀರ ಭಕ್ತಿ ಪ್ರತಿಪಾದಿಸುವುದು ರಾಗದ ಉದ್ದೇಶ.

---

೬೦. ಅ.ನ.ಕೃ., ಚಿತ್ರಕಲೆ, ಪು.೭೩

೬೧. ಡಾ. ಹನುಮಣ್ಣನಾಯಕ ದೊರೆ, ರಾಗ ದೀಪಿಕೆ ಹಿಂದೂಸ್ಥಾನಿ ರಾಗ ಮತ್ತು ಚೀಜುಗಳ ಗ್ರಂಥ, ಪು.೪೨

೬೨. ಎಸ್. ಸಂಜೀವದೇವ್, (ಅನು) ಹರಿಹರಪ್ರಿಯ, ರಸರೇಖೆ, ಪು. ೧೪೦

ತೋಡಿ ಸಂಪೂರ್ಣ ರಾಗ ತೋಡಿ ಅರಣ್ಯ ಮೃಗಗಳನ್ನು ಕೂಡಾ ಸೆರೆ ಹಿಡಿಯುತ್ತದೆ.[೬೩] ಎಂಬ ವಿವರಗಳು ಸಿಗುತ್ತವೆ.

ಈ ರಾಗವನ್ನು ಮೀಯಾಕೀ ತೋಡಿ ಎಂದೂ ಕರೆಯುತ್ತಾರೆ. ಮೀಯಾ ಅಂದರೆ ತಾನಸೇನ ಎಂದರ್ಥ. ತಾನಸೇನನು ಈ ರಾಗವನ್ನು ರಚಿಸಿದನೆಂಬ ಕಾರಣಕ್ಕಾಗಿ ಇದಕ್ಕೆ ಮಿಯಾಕೀ ತೋಡೀ ಎಂಬ ಹೆಸರು ಪ್ರಾಪ್ತವಾಗಿದೆ.

ಕೋಮಲಸ್ವರಗಳು : ರಿ ಗ ಧ[೬೪]

ತೀವ್ರ ಸ್ವರಗಳು : ಮ ನಿ

ಡಾ. ಎಂ.ಮಿಣಜಗಿಯವರು ಚಿತ್ರಿಸಿದ ತೋಡಿ ರಾಗಿಣಿ ಚಿತ್ರದಲ್ಲಿ ತೋಡಿ ರಾಗಿಣಿ ವೀಣೆಯನ್ನು ಹಿಡಿದಿದ್ದಾಳೆ. ಒಂದು ಜಿಂಕೆಗೆ ಅವಳು ಎಳೆ ಗರಿಕೆ ನೀಡುತ್ತಿದ್ದಾಳೆ. ರಾಗಿಣಿಯ ಚಿತ್ತಸ್ವಾಸ್ಥ್ಯ, ಅಮಿತಾನಂದ, ನಿಸರ್ಗ ಮೈತ್ರಿ, ಮುಂತಾದ ಅಂಶಗಳು ಮಿಣಜಗಿಯವರ ಚಿತ್ರದಲ್ಲಿ ಮೂರ್ತಿಭವಿಸಿವೆ.[೬೫] ಅ.ನ.ಕೃ. ಅವರು ಹೇಳುವಂತೆ, ಪಹಡಿ ಚಿತ್ರಗಾರರು ನೀಲ ಸುವರ್ಣ ಬಣ್ಣಗಳನ್ನು ಧಾರಳವಾಗಿ ಬಳಸುತ್ತಾರೆ. ಪಹಡಿ ಚಿತ್ರದಲ್ಲಿ ಹಿನ್ನೆಲೆಯ ಮರಗಳಿಗೆ ಬಹಳ ಪ್ರಾಧಾನ್ಯ ದೊರೆಯುತ್ತದೆ. ನಾಯಕಿಯ ಮುಖಭಾವದಲ್ಲಿ ಲಾಲಿತ್ಯಕ್ಕಿಂತ ಗಾಂಭೀರ್ಯ ಹೆಚ್ಚು. ಮಿಣಜಗಿಯವರು ಪಹಡಿ ಚಿತ್ರಗಾರರಿಗಿಂತ ಹೆಚ್ಚು ನಯವಾಗಿ ತಮ್ಮ ತೋಡಿಯನ್ನು ಚಿತ್ರಿಸಿದ್ದಾರೆ. ನಾಯಕಿಯ ರೂಪ ಅವರ್ಣನೀಯ ಸೌಂದರ್ಯದಿಂದ ಕೂಡಿದೆ. ಸೌಂದರ್ಯ ತನ್ನ ಪೂರ್ಣವಿಲಾಸ ವನ್ನು ಮೈವೆತ್ತು ಬಂದಂತೆ ಮೂಡಿ ಬಂದಿದೆ. ತೋಡಿಚಿತ್ರ.[೬೬] ಹೀಗೆ ಅ.ನ.ಕೃ ಅವರು ಮಿಣಜಗಿ ಯವರ ತೋಡಿರಾಗದ ಚಿತ್ರವನ್ನು ಕುರಿತು ವಿಶ್ಲೇಷಣೆ ಮಾಡಿದ್ದಾರೆ. ಕಾಳೆಯವರು ರಚಿಸಿದ ತೋಡಿರಾಗದ ಚಿತ್ರವು ಮಿಣಜಗಿಯವರ ಚಿತ್ರಕ್ಕಿಂತಲೂ ತುಂಬಾ ಭಿನ್ನವಾಗಿ ಸಂಯೋಜಿಸಿರುವುದು ಕಂಡುಬರುತ್ತದೆ. ಮಿಣಜಗಿಯವರ ತೋಡಿರಾಗದ ಚಿತ್ರದಲ್ಲಿ ನಾಯಕಿಯು ನಿಂತ ಭಂಗಿಯಲ್ಲಿದ್ದು ಒಂದು ಕೈಯಲ್ಲಿ ವೀಣೆ ಹಿಡಿದುಕೊಂಡು ಇನ್ನೊಂದು ಕೈಯಿಂದ ಜಿಂಕೆಗೆ ಗರಿಕೆ ತಿನ್ನಿಸುತ್ತಿರುವುದು ಕಾಳೆಯವರ ಸಂಯೋಜನೆಯಲ್ಲಿ ನಾಯಕಿ ಸಖಿಯೊಂದಿಗೆ ಕುಳಿತಿರುವ ಭಂಗಿಯಲ್ಲಿದ್ದು ಜಿಂಕೆಯ ಮೈಯನ್ನು ವಾತ್ಸ್ಯಲದಿಂದ ಸವರುತ್ತಾ ಗರಿಕೆಯನ್ನು ತಿನ್ನಿಸುತ್ತಿದ್ದಾಳೆ. ರಜಪೂತ ಶೈಲಿಗಿಂತಲೂ ಸುಂದರತೆಯನ್ನು, ಲಾಲಿತ್ಯವನ್ನು ತರುವ ಉದ್ದೇಶ ಕಾಳೆಯವರದಾಗಿದ್ದು ಅದು ಇಲ್ಲಿ

---

೬೪. ಅ.ನ.ಕೃ., ಕರ್ನಾಟಕ ಕಲಾವಿದರು, ಪು.೧೪

೬೫. ಡಾ. ಹನುಮಣ್ಣನಾಯಕ ದೊರೆ, ರಾಗ ದೀಪಿಕೆ ಹಿಂದೂಸ್ಥಾನಿ ರಾಗ ಮತ್ತು ಚೀಜುಗಳ ಗ್ರಂಥ, ಪು.೪೩

೬೬. ಅ.ನ.ಕೃ., ಚಿತ್ರಕಲೆ, ಪು.೭೩

ಯಶಸ್ವಿಗೊಂಡಿದೆ ಎನ್ನಬಹುದು. ಮಿಣಜಗಿಯವರು ದೊಡ್ಡ ಗಾತ್ರದ ಕ್ಯಾನ್ವಾಸಿನ ಅವಕಾಶದಲ್ಲಿ ರಾಗ ರಾಗಿಣಿಯರ ಚಿತ್ರ ರಚಿಸಿರುತ್ತಾರೆ ಮತ್ತು ಅವು ಪೂರ್ತಿಯಾಗಿ ರಜಪೂತ ಶೈಲಿಯನ್ನು ಒಳಗೊಂಡಿವೆ. ಕಾಳೆಯವರು ರಾಗಮಾಲಾ ಚಿತ್ರಗಳಲ್ಲಿ ರಜಪೂತ ಬುಂದಿ ಶೈಲಿಯ ಪ್ರಭಾವವಿದ್ದರೂ ಸಹ ಅವರು ಈ ಕಲಾಕೃತಿಗಳಲ್ಲಿ ತಮ್ಮದೇ ಆದ ವೈಯಕ್ತಿಕ ಶೈಲಿಯನ್ನು ಛಾಪಿಸಿದ್ದಾರೆ ಮತ್ತು ಅವರ ಈ ರಾಗಮಾಲಾ ಕಲಾಕೃತಿಗಳನ್ನು ಚಿಕ್ಕ ಗಾತ್ರದ ಅವಕಾಶದಲ್ಲಿ ಸಂಯೋಜಿಸಿರುವುದು ಕಂಡುಬರುತ್ತದೆ.

ಪಿ. ಶಾಮರಾವ್ ಅವರು ಬರೆದ ರಾಗ ರಾಗಿಣಿಯರ ಕುರಿತಾದ ಲೇಖನವೊಂದರಲ್ಲಿ ಬರುವ ರಾಗ ರಾಗಿಣಿಯರ ಕುರಿತು ಬರೆಯಲಾದ ವಿವರಣೆಯನ್ನು ಅನುಸರಿಸಿ ಕಾಳೆಯವರು ರಾಗಮಾಲಾ ಕಲಾಕೃತಿಗಳನ್ನು ಸಂಯೋಜಿಸಿ ಚಿತ್ರರಚಿಸುವುದು ಕಂಡುಬರುತ್ತದೆ. ಅದರಲ್ಲಿ ಬರುವ ತೋಡಿ ರಾಗಿಣಿಯ ವಿವರ ಹೀಗೆ ಇದೆ.

ಸಖಿಸಹಿತ ಪ್ರಿಯನನ್ನು ಹುಡಿಕಿಕೊಂಡು ವನಾಂತರಕ್ಕೆ ಹೋಗಲು, ಅವರಲ್ಲಿ ಬಳಕೆಯಾದ ಜಿಂಕೆಗಳು ಹತ್ತಿರ ಬರುವವು. ಸಖಿ ಸಾರಂಗವನ್ನು ಬಾರಿಸುವ ಸಮಯದಲ್ಲಿ ಜಿಂಕೆಗಳಿಗೆ ಗರಿಕೆಯನ್ನು ಕೊಡುತ್ತಾ. ಈ ರಾಗಿಣಿ ಪ್ರೀತಿಸುವಳು[೬೭] ಎಂಬ ವಿವರಣೆಯನ್ನು ಕಾಳೆಯವರ ತೋಡಿ ರಾಗಿಣಿ ಕಲಾಕೃತಿಯಲ್ಲಿ ಢಾಳಾಗಿ ಕಾಣಬಹುದು. ಚಿಕ್ಕಗಾತ್ರದಲ್ಲಿರುವ ತೋಡಿರಾಗಿಣಿಯ ಕಾಳೆಯವರ ಈ ಕಲಾಕೃತಿಯ ಸಂಯೋಜನೆಯಲ್ಲಿ ರಾಗಿಣಿಯು ಮರವೊಂದರ ಕೆಳಗಡೆ ಕಟ್ಟೆಯ ಮೇಲೆ ಅರಾಮವಾಗಿ ಕುಳಿತು ಜಿಂಕೆಯೊಂದನ್ನು ಪ್ರೀತಿಯಿಂದ ನೇವರಿಸುತ್ತಾ ಅದಕ್ಕೆ ಹುಲ್ಲನ್ನು ತಿನ್ನಿಸುತ್ತಿದ್ದಾಳೆ. ತೋಟದಲ್ಲಿರುವ ಗಿಡವೆಲ್ಲಾ ಫಲಪುಷ್ಪ ಭರಿತವಾಗಿದೆ. ಪಕ್ಕದಲ್ಲಿ ಅವಳ ಸಖಿಯು ಕುಳಿತು ಸಾರಂಗವನ್ನು ನುಡಿಸುವಲ್ಲಿ ಮಗ್ನವಾಗಿದ್ದಾಳೆ. ಇನ್ನೊಂದು ಜಿಂಕೆಯು ನೇರವಾಗಿ ವೀಕ್ಷಕರಿಗೆ ಮುಖಾಮುಖಿಯಾದಂತ ಸಂಯೋಜನೆ ಈ ಕಲಾಕೃತಿ ಹೊಂದಿದೆ. ಇಲ್ಲಿ ಬಣ್ಣಗಳ ವೈವಿಧ್ಯತೆ ಒಂದಕ್ಕೊಂದು ಪೂರಕವಾಗಿದೆ. ಮುಖ್ಯ ಆಕೃತಿಯಾದ ರಾಗಿಣಿಯ ವಾತ್ಸಲ್ಯಭರಿತ ಕರುಣಾ ಜನಕವಾದ ಭಾವವನ್ನು ಕಾಳೆಯವರು ಯಶಸ್ವಿಯಾಗಿ ತಮ್ಮ ಕುಂಚದಲ್ಲಿ ಸೆರೆಹಿಡಿದ್ದಾರೆ. ಇಲ್ಲೆಲ್ಲಾ ವಾಷ್‌ತಂತ್ರದ ನಿರೂಪಣೆಯೊಂದಿಗೆ ರೇಖೆಯು ಪ್ರಮುಖವಾಗಿ ಕಂಡುಬಂದಿದ್ದು ಕಾಳೆಯವರ ಕಲಾ ಪ್ರತಿಭೆ ರೇಖೆ ಮೇಲಿನ ಹಿಡಿತ, ನಾಜೂಕುತನ ಕೆಲಸ ಮಾಡಿದೆ.

ತೋಡಿರಾಗಿಣಿಯ ಯಾವುದೇ ಚಿತ್ರವನ್ನು ನೋಡಿದ ಕೂಡಲೇ ಆ ಚಿತ್ರ ತೋಡಿ ರಾಗಿಣಿಗೆ ಸಂಬಂಧಿಸಿದ್ದು ಎಂಬ ಕಲ್ಪನೆ ತಾನಾಗಿಯೇ ಬರುವಷ್ಟು ಸಾಮ್ಯತೆ ಎಲ್ಲ ತೋಡಿ ರಾಗಿಣಿಯ

---

೬೭. ಪಿ. ಶಾಮರಾವ್, ಭಾರತೀಯ ಕಲಾದರ್ಶನ, ಪು.೧೪೪

ಚಿತ್ರಗಳಲ್ಲಿ ಕಂಡುಬರುತ್ತದೆ.[೧೮] ಎಂಬ ಮಾತಿಗೆ ನಿದರ್ಶನವೆಂಬುವಂತೆ ಕಾಳೆಯವರ ಪ್ರಸ್ತುತ ತೋಡಿ ರಾಗಿಣಿ ಚಿತ್ರವೂ ಮೂಡಿಬಂದಿದೆ.

ರಾಗ ಕೇದಾರ (ರಾಗಿಣಿ)

ಕೇದಾರ ಇದು ಹೆಣ್ಣು ರಾಗವಾಗಿದೆ. ಈ ರಾಗವನ್ನು ರಾತ್ರಿ ಸರಿಹೊತ್ತಿನಲ್ಲಿ ಹಾಡಲಾಗುತ್ತದೆ. ಇದು ಒಬ್ಬ ಪ್ರೇಯಸಿಯ ವಿರಹದ ಭಾವವನ್ನು ಹೊರಸೂಸುವ ರಾಗವಾಗಿದೆ.

ಪ್ರಾಚೀನ ಗ್ರಂಥಗಳಲ್ಲಿರುವ ಕೇದಾರ ರಾಗದ ಬಗೆಗಿನ ಶ್ಲೋಕ ಹಿಗಿದೆ.

ರಾಗಚಂದ್ರಿಕಾಸಾರ ಗ್ರಂಥದಲ್ಲಿರುವ ಶ್ಲೋಕ :

ಮಧಯಮ ಧೈತೀವರ ಸಬಹಿ ಆರೋಹತಂಗ ಹಾನ |
ಸಮಸಂವಾದೀ ವಾದಿತೇಂ ಕೇದಾರಾ ಪಹಿಚಾನ್[೧೯]

ಕೇದಾರ ರಾಗ

ಚೀಜು ಸ್ಥಾಯಿ ತಾಳ ಏಕತಾಲ (ವಿಲಂಬಿತ)

೨. ಮೋರ ಬೋಲೇ ರೇ ಸಾವನರೇ ಋತು|
ಬನ ಘುನ ಡಾರ ಡಾರ|
ಅಂತರಾ
ಆಚ ಪಿಯಾ ಘರ ಆಯೋ ಮೋರೆ ಸಜನೇ|
ಲೇ ಹೂಂ ಬಲೈಯಾ ಬಾರ ಬಾರ|[೨೦]

ಈ ರಾಗವು ಕೇದಾರ ರಾಗದ ಭಾವಾರ್ಥವನ್ನು ಹೊರಸೂಸುತ್ತದೆ. ಕಾಳೆಯವರು ಈ ರಾಗದ ಭಾವಾರ್ಥವನ್ನು ವಿವರಿಸುವಂತೆ ಕೇದಾರ ರಾಗಿಣಿ ತನ್ನ ಪ್ರಿಯಕರನ ಮೇಲೆ ಮುನಿಸಿಕೊಂಡು, ಸಂಸಾರದ ಮೇಲೆ ಬೇಸರಗೊಂಡು ಸನ್ಯಾಸಿಯಾಗಿ ವನಕ್ಕೆ ಹೋಗಿ ಅಲ್ಲಿ ಕುಟೀರವೊಂದನ್ನು ಕಟ್ಟಿಕೊಂಡು ವಾಸ ಮಾಡತೊಡಗುತ್ತಾಳೆ. ಆದರೆ ಪುನಃ ಅವಳಿಗೆ ಹಿಂದಿನ ನೆನಪು ಕಾಡತೊಡಗುತ್ತದೆ.[೨೧] ಈ ದ್ವಂದ್ವದ ಭಾವವೇ ಕೇದಾರ ರಾಗಿಣಿಯಾಗಿದೆ. ಆ ತಳಮಳ,

---

೧೮. ಡಾ. ಸಂಪದಾಭಟ್ಟ, (ಸಂ) ಹಿಂದೂಸ್ಥಾನಿ ಸಂಗೀತ ಮತ್ತು ರಾಗಮಾಲಾ ಚಿತ್ರಗಳು, (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ೧೯೯೯) ಪು.೫೦

೧೯. ಡಾ. ಹನುಮಣ್ಣನಾಯಕ ದೊರೆ, ರಾಗ ದೀಪಿಕೆ ಹಿಂದೂಸ್ಥಾನಿ ರಾಗ ಮತ್ತು ಚೀಜುಗಳ ಗ್ರಂಥ, ಪು.೨

೨೦. ಅದೇ ಪು.೩

೨೧. ವಿ.ಟಿ. ಕಾಳೆಯವರೊಂದಿಗೆ ಸಂದರ್ಶನ ದಿನಾಂಕ ೨೯.೮.೨೦೦೯





ಕೇದಾರ ರಾಗಿಣಿ

ಅಸಮಾಧಾನದ ದ್ಯೋತಕವಾಗಿ ಅಲ್ಲಿ ಶ್ವಾನವೊಂದನ್ನು ಚಿತ್ರಿಸಲಾಗಿದೆ. ಅವಳ ದುಃಖ ಪ್ರತಿನಿಧಿಸುವಂತೆ ಅಲ್ಲಿ ಪೂರ್ಣ ಚಂದಿರವಿದ್ದರೂ ಬೆಳದಿಂಗಳಿಲ್ಲ. ಆ ಕತ್ತಲು, ಅವಳು ವೀಣೆಯೊಂದನ್ನು ನುಡಿಸಲು ಕುಳಿತಿರುವ ಭಂಗಿ, ಮುಖದಲ್ಲಿ ತೋರ್ಪಡಿಸಿದ ಭಾವನೆ ಈ ಎಲ್ಲ ಅಂಶಗಳು ಅವಳ ವಿರಹ ಭಾವನೆಯನ್ನು ದುಃಖವನ್ನು ಪ್ರತಿಬಿಂಬಿಸುತ್ತವೆ.

ಚಿತ್ರದ ಸಂಯೋಜನೆ, ವರ್ಣಗಳ ಸಮ್ಮಿಳಿತ, ರೇಖಾ ವೈಖರಿ, ಹಿನ್ನೆಲೆಯಲ್ಲಿರುವ ನಿಸರ್ಗ, ನಾಯಕಿಯು ವೀಣೆ ನುಡಿಸಲು ಕುಳಿತಿರುವ ಭಂಗಿ, ಅವಳ ಮುಖದ ಮೇಲಿನ ಭಾವ ಈ ಎಲ್ಲ ಅಂಶಗಳು ಈ ಕಲಾಕೃತಿಯಲ್ಲಿ ಪರಿಣಾಮಕಾರಿಯಾಗಿ ವ್ಯಕ್ತಗೊಂಡಿದೆ. ಹಿಂಬದಿಯಲ್ಲಿ ಬೂದಿ ಶೈಲಿಯ ಪ್ರಭಾವವನ್ನು ಕಾಣಬಹುದು. ಒಟ್ಟಾರೆ ಸಂಯೋಜನೆಯು ರಾಗದ ಭಾವಾರ್ಥಕ್ಕೆ ಪೂರಕವಾಗಿ ಮೂಡಿಬಂದಿದೆ.

ರಾಗ ಭೈರವ

'ಅಭಿನವ ರಾಗ ಮಂಜರೀ' ಗ್ರಂಥದಲ್ಲಿರುವ ಶ್ಲೋಕವು ಭೈರವ ರಾಗವನ್ನು ಕುರಿತು ಹೀಗೆ ವರ್ಣಿಸುತ್ತದೆ.

ಸೌ ಮ ಷೌ ಧ ಪೌ ಮಗೌ ರಿಗೌ ಮಪೇ ಮಗೌ ರಿಸೌ | ಭರವ್ಯೆ
ನಿತ್ಯಪೂರ್ಣಃ ಸಾಧ್ಯೆವಂತಶಃ ಪ್ರಭಾತಗಃ ||

ಈ ರಾಗವು ಭೈರವ ಥಾಟಿಗೆ ಸೇರಿದೆ. ಇದು ಸಂಪೂರ್ಣ ಜಾತಿಯ ರಾಗವಾಗಿದೆ. ರಿಷಭ ಮತ್ತು ದೈವತ ಸ್ವರಗಳು ಇದರಲ್ಲಿ ಕೋಮಲವಾಗಿದೆ. ಭಕ್ತಿ ಮತ್ತು ನಿವೇದನಪೂರ್ವಕ ಭಾವವನ್ನು ಈ ರಾಗ ಹೊಂದಿದೆ.[೭೨]

ಭೈರವ ರಾಗ

ಭೈರವ ಎಂದರೆ ಶಿವನ ಒಂದು ರೂಪ. ಇದು ಗಂಡು ರಾಗವಾಗಿದೆ. ಈ ರಾಗವು ಭೈರವ ಥಾಟಗೆ ಸೇರಿದೆ. ಇದು ಸಂಪೂರ್ಣ ಜಾತಿಯ ರಾಗವಾಗಿದೆ. ರಿಷಭ ಮತ್ತು ದೈವತ ಸ್ವರಗಳು ಇದರಲ್ಲಿ ಕೋಮಲವಾಗಿದೆ. ಭಕ್ತಿ ಮತ್ತು ನಿವೇದನಾ ಪೂರ್ವಕ ಭಾವವನ್ನು ಈ ರಾಗ ಹೊಂದಿದೆ.[೭೩] ಇದು ಗಂಭೀರ ಭಾವವನ್ನು ಹೊರಸೂಸುವ ರಾಗವಾಗಿದೆ. ಈ ರಾಗವನ್ನು ಪ್ರಾತಃ ಕಾಲದಲ್ಲಿ ಹಾಡಲಾಗುತ್ತದೆ. ರಸ, ಶಾಂತಿ, ಗಂಭೀರ, ಭಕ್ತಿ ರಸವನ್ನು ಈ ರಾಗ ಹೊಂದಿದೆ.

---

೭೨. ಡಾ. ಹನುಮಣ್ಣನಾಯಕ ದೊರೆ, ರಾಗ ದೀಪಿಕೆ ಹಿಂದೂಸ್ತಾನಿ ರಾಗ ಮತ್ತು ಚೀಜುಗಳ ಗ್ರಂಥ, ಪು.೩
೭೩. ಅದೇ ಪು.೬



ರಾಗ ಭೈರವ

ಭೈರವ ರಾಗ

ಚೀಜ ಸ್ಥಾಯಿ ತಾಳ ತೀನತಾಲ (ಮಧ್ಯೆ ಲಯ)

ಅಬನ ಜಗಾವೋ ಪ್ಯಾರೇ ಮೈಕಾ
ಲಾಗಲಿ ಅಖಿ ಮೇರಿ ಅಬ ಹುಂ ನೇಕ ಪಲ|
ಕಯಪಕ ನಿಸಿ ನಾರೀ ಜಾಗೀ ಜಗಾಯೀ ತುಮ||
ಅಂತರಾ
ಸೋವನ ದೇ ಮೋಹೇ ಆನಂದ ಭುವನಗರ
ಲಾಗೋಂಗೇ ತೇರೆ ಛತಿಯಾ|
ಶರಮ ಅಬಿ ತೊ ಜೀನ ಜಾವೋ ಆಜ||[೭೪]

ಪಿ. ಶಾಮರಾವ್ ಅವರು ಉಲ್ಲೇಖಿಸಿದಂತೆ, ಭೈರವರಾಗವು ಮಹಾದೇವನ ಅವತಾರ. ಮಹಾದೇವನ ಮುಖದಿಂದ ಜನಿಸಿದ ಸುಂದರವಾದ ಸನ್ಯಾಸಿ, ಸ್ಮೋದ್ಘೋಷಿತ. ಅವನ ಜಡೆಯಿಂದ ಗಂಗೆಯು ಭೂಮಿಯ ಕಡೆ ಹರಿಯುತ್ತಾಳೆ. ಅರ್ಧ ಚಂದ್ರಾಕಾರದ ಹಣೆ. ಅಲ್ಲಿ ಫಾಲ ನೇತ್ರವು, ತಿಲಕವು ಇರುತ್ತವೆ. ಕತ್ತಿನಲ್ಲಿ ಕಪಾಲ ಮಾಲೆಯನ್ನು ದೇಹದ ಮೇಲೆ ಗಜಾಂಬರ ಅಥವಾ ಜಿಂಕೆ ಚರ್ಮವನ್ನು ಧರಿಸಿರುವನು. ಕಿಂಕಿಣೀಯುತನಾಗಿರುವನು. ಅವನ ಭುಜಗಳ ಮೇಲೆ, ಕೈಗಳ ಸುತ್ತಾ ನಾಗಸರ್ಪಗಳು ಹರಿಯುತ್ತಲಿರುವವು. ಯುವಕನು ತಪೋಮಗ್ನ ನಾಗಿರುವನು.[೭೫]

ಈ ವಿವರಣೆಗೆ ಅನುಸಾರವಾಗಿ ಕಾಳೆಯವರು ಭೈರವ ರಾಗದ ಕಲಾಕೃತಿಯನ್ನು ರಚಿಸಿರುವುದು ಕಂಡುಬರುತ್ತದೆ. ಸಂಯೋಜನೆಯ ದೃಷ್ಟಿಯಿಂದ ನೋಡುವುದಾದರೆ ಇಲ್ಲಿರುವ ವರ್ಣಗಳು ಸಾಮ್ಯತೆ, ರೇಖಾ ಲಾಲಿತ್ಯ, ಅವಕಾಶದಲ್ಲಿರುವ ಆಕಾರಗಳನ್ನು ಹೊಂದಿಸಿರುವ ರೀತಿ ಈ ಎಲ್ಲಾ ಅಂಶಗಳು ಒಂದಕ್ಕೊಂದು ಪೂರಕವಾಗಿವೆ. ರುಂಡಮಾಲೆಯನ್ನು ಧರಿಸಿ ತಪೋನಿರತನಾದ ಶಿವನು ಗಂಭೀರ ಮುಖ ಮುದ್ರೆಯನ್ನು ಹೊಂದಿದ್ದಾನೆ. ಹಿನ್ನಲೆಯಲ್ಲಿ ಸ್ತ್ರೀ ಆಕೃತಿಯೊಂದು ರಾಗವನ್ನು ನುಡಿಸುತ್ತಿದ್ದಾಳೆ. ವಾಷ್‌ತಂತ್ರದಲ್ಲಿ ಪರಿಣಾಮಕಾರಿಯಾಗಿ ಮೂಡಿಬಂದ ಈ ಕಲಾಕೃತಿಯೂ ಬೂಂದಿ ಶೈಲಿಯ ಪ್ರಭಾವವನ್ನು ಹೊಂದಿರುವುದು ಕಂಡುಬರುತ್ತದೆ. ಇಲ್ಲೆಲ್ಲಾ ಪ್ರಧಾನವಾಗಿ ಕಂಡುಬರುವುದು ರೇಖೆಗಳ ಲಾಲಿತ್ಯ. ಅದರ ಸೊಬಗು ಸೌಂದರ್ಯವೇ ಇಲ್ಲಿ

---

೭೪. ಡಾ. ಹನುಮಣ್ಣನಾಯಕ ದೊರೆ, ರಾಗ ದೀಪಿಕೆ ಹಿಂದೂಸ್ಥಾನಿ ರಾಗ ಮತ್ತು ಚೀಜುಗಳ ಗ್ರಂಥ, ಪು.೬
೭೫. ಪಿ. ಶಾಮರಾವ್, ಭಾರತೀಯ ಕಲಾದರ್ಶನ ಪು.೧೪೦

ಪ್ರಮುಖವಾಗಿದೆ ಎನ್ನಬಹುದು. ಭಾರತೀಯ ಚಿತ್ರಶೈಲಿ ಎರಡು ಆಯಮಾವುಳ್ಳ ರೇಖಾ ಪ್ರಧಾನ್ಯತೆ ಹೊಂದಿದೆ ಎಂಬುದಕ್ಕೆ ಈ ಕಲಾಕೃತಿಯು ಪೂರಕವಾಗಿದೆ.

ರಾಗ ಬಸಂತ

ಈ ರಾಗವು ಗಂಡು ರಾಗವಾಗಿದೆ. ರಾತ್ರಿಯ ಹೊತ್ತಿನಲ್ಲಿ ಈ ರಾಗವನ್ನು ಹಾಡಲಾಗುತ್ತದೆ (ರಾತ್ರಿಯ ೪ನೇ ಪ್ರಹರ). 'ರಾಗ ಚಂದ್ರಿಕಾಸಾರ' ಗ್ರಂಥದಲ್ಲಿರುವ ಒಂದು ಶ್ಲೋಕವು ಬಸಂತರಾಗವನ್ನು ಹೀಗೆ ವಿವರಿಸುತ್ತದೆ.

ದೋ ಮಧ್ಯಮ ಕೋಮಲ ರಿಖಬ ಚಢತನ ಪಂಚಮ ಕೀನ್ಹ|
ಸಮವಾದೀ ಸಂವಾದಿತೇಂಯಹ ವಸಂತ ಕಹದೀನ್ಹ||[೭೬]

ಈ ರಾಗವು ಋತುರಾಗವೆಂದು ಪ್ರಸಿದ್ಧವಾಗಿದೆ. ಅನೇಕ ಚೀಜುಗಳಲ್ಲಿ ವಸಂತ ಋತುವಿನ ವರ್ಣನೆ ಕಂಡುಬರುವುದರಿಂದಾಗಿ ಈ ರಾಗವು ವಸಂತ ಋತುರಾಗವಾಗಿದೆ. ರಾಗ ಸಮಯವು ಶಾಸ್ತ್ರಕ್ಕನುಸಾರವಾಗಿ ಇದರ ಸಮಯವು ರಾತ್ರಿಯ ನಾಲ್ಕನೆಯ ಪ್ರಹರವಾಗಿದೆ. ಇದರ ಸ್ವಭಾವವು ಗಂಭೀರವಾಗಿದೆ.[೭೭] ಈ ರಾಗವನ್ನು ಮೌಸಮಿ ರಾಗವೆಂದೂ ಕರೆಯುವರು.

ವಸಂತಕಾಲದಲ್ಲಿ ಮಾವಿನ ಮರಗಳು ಫಲ ಬಿಡಲಾರಂಭಿಸಿರುತ್ತವೆ. ಅರಣ್ಯದ ತುಂಬ ಕೆಂಪು ಹೂವುಗಳು ತುಂಬಿರುತ್ತವೆ. ಕೋಗಿಲೆಗಳು ಮಾವಿನ ಚಿಗುರುಗಳನ್ನು ಅರಸುತ್ತಿರುತ್ತವೆ.[೭೮] ಬಸಂತ ರಾಗವು ಪ್ರಕೃತಿಯ ವಸಂತೋಲ್ಲಾಸದ ವಾತಾವರಣವನ್ನು ತೋರಿಸುತ್ತದೆ. ವಸಂತರಾಗದ ಬಗ್ಗೆ ಈ ಕೆಳಗಿನಂತೆ ವಿವರಣೆಯಿದೆ.

ಈತನು ಆರು ಮುಖಗಳನ್ನು, ಹತ್ತು ಕೈಗಳನ್ನು ಹೊಂದಿದ್ದಾನೆ. ರಾಗ ವಸಂತನು ಚಿನ್ನದಂತೆ ಹೊಳೆಯುತ್ತಿದ್ದಾನೆ. ಆತನು ತಾಳ, ಶಂಖ, ಚಕ್ರ, ಖಡವಂಗ ಕಮಲದ ಹೂ ಹಾಗೂ ಫಲಗಳನ್ನು ಹಿಡಿದಿದ್ದಾನೆ. ಇನ್ನೆರಡು ಕೈಗಳು ವರದ ಹಾಗೂ ಅಭಯ ಮುದ್ರೆಯಲ್ಲಿವೆ. ಆತನು ಕೋಗಿಲೆಯ ಮೇಲೆ ಕುಳಿತಿದ್ದು ಚೈತ್ರ ಹಾಗೂ ವೈಶಾಖ ಋತುಗಳಲ್ಲಿ ಹಾಡುತ್ತಾನೆ.[೭೯]

ಲೇಖಕರಾದ ಪಿ. ಶಾಮರಾವ್ ಅವರು ವಸಂತ ರಾಗದಲ್ಲಿರುವ ಪ್ರಮುಖ ವ್ಯಕ್ತಿಯ ಕುರಿತು ಈ ರೀತಿ ವಿವರಣೆ ನೀಡಿದ್ದಾರೆ. ಯುವತಿಯರ ಪ್ರಿಯನಾದವನಿಗೆ ಅರುಣೋದಯದ


---


೭೬. ಡಾ. ಹನುಮಣ್ಣನಾಯಕ ದೊರೆ, ರಾಗ ದೀಪಿಕೆ ಹಿಂದೂಸ್ಥಾನಿ ರಾಗ ಮತ್ತು ಚೀಜುಗಳ ಗ್ರಂಥ,ಪು.೩೩೧

೭೭. ಅದೇ ಪು. ೩೩

೭೮. ಡಾ. ಸಂಪದಾಭಟ್ಟ, (ಸಂ) ಹಿಂದೂಸ್ಥಾನಿ ಸಂಗೀತ ಮತ್ತು ರಾಗಮಾಲಾ ಚಿತ್ರಗಳು, (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ೧೯೯೯) ಪು.

೭೯. ಅದೇ ಪು. ೫೨





ರಾಗ ಬಸಂತ

ಕಮಲ ಪತ್ರಗಳ ರೋಜಾಕಾಂತಿ ಕಣ್ಣಗಳಲ್ಲಿ ತಾಂಡವಾಡುವುದು. ದೇಹದ ಛಾಯೆ ಚಿನ್ನದ ಹಳದಿ, ಪೀತಾಂಬರಗಳಿಂದಲೂ ಮಾವಿನ ಚಿಗುರುಗಳಿಂದಲೂ ಮಾವಿನ ಪುಷ್ಪಗುಚ್ಛಗಳಿಂದಲೂ ಅಲಂಕೃತನಾಗಿ ಶೋಭಿಸುತ್ತಿರುವನು. ಸಂಧ್ಯಾರಾಗದಲ್ಲಿ ಸಿಂಹಾಸನದಲ್ಲಿ ಕುಳಿತು ತಂಬೂರಿ ಶೃತಿಗೆ ಪಕ್ಕ ವಾದ್ಯಗಳ ಸಹಿತ ಹಾಡುತ್ತಾ ಸಖಿಯರೊಂದಿಗೆ ಸೇವೆ ಪಡೆಯುವನು.[೮೦] ಎಂಬ ಈ ವಿವರಣೆಯನ್ನು ಕಾಳೆಯವರು ತಮ್ಮ ಈ ಕಲಾಕೃತಿಯಲ್ಲಿ ಮಾರ್ಮಿಕವಾಗಿ ತಂದಿದ್ದಾರೆ. ಈ ಸಂಯೋಜನೆಯ ಹಿನ್ನೆಲೆಯಲ್ಲಿ ವಸಂತಕಾಲವನ್ನು ಪ್ರತಿನಿಧಿಸುವ ಹೂವು, ಹಣ್ಣು ಬಿಟ್ಟ ಸಮೃದ್ಧಿಯಿಂದ ಕೂಡಿದ ಗಿಡ ಮರ, ಗಿಡಗಳ ಮೇಲೆ ಅಲ್ಲಲ್ಲಿ ಕುಳಿತು ವಸಂತಕಾಲವನ್ನು ಪ್ರತಿನಿಧಿಸುವಂತೆ ಕುಳಿತಿರುವ ಕೋಗಿಲೆಗಳು, ಸುಂದರವಾಗಿ ಮೂಡಿಬಂದಿದೆ. ಮುನ್ನಲೆಯಲ್ಲಿ ಜೋಕಾಲಿಯ ಮೇಲೆ ಕುಳಿತ ನಾಯಕ ನಾಯಕಿ ವಸಂತಕಾಲದ ಸೊಬಗನ್ನು ಸವಿಯುತ್ತಿದ್ದಾರೆ. ಸಖಿಯರು ಚಾಮರವನ್ನು ಬೀಸಿ ಸೇವೆ ಮಾಡುತ್ತಿದ್ದಾರೆ. ಈ ರಾಗದ ಪ್ರತಿನಿಧಿಯಾದ ಇಲ್ಲಿರುವ ನಾಯಕನ್ನು ಪಿ. ಶಾಮರಾವ್ ಅವರು ವಿವರಿಸಿದಂತೆ ಹಳದಿ ಮೈಛಾಯೆಯುಳ್ಳವನಾಗಿದ್ದು, ಮಾವಿನ ಚಿಗುರುಗಳಿಂದಲೂ ಮಾವಿನ ಪುಷ್ಪಗುಚ್ಛಗಳಿಂದಲೂ ಅಲಂಕೃತನಾಗಿ ಶೋಭಿಸುತ್ತಿರುವನು. ಆತನ ಪ್ರೇಯಸಿಯ ನಾಚಿಕೊಂಡು ಕುಳಿತಿರುವ ಗಿಯು ಆಕರ್ಷಕವಾಗಿದೆ. ಭಾರತೀಯ ಕಿರುರೂಪ ಚಿತ್ರಕಲೆಗೆ ಅತ್ಯಂತ ನಿಕಟವಾಗಿ ಆ ಲಕ್ಷಣಗಳು ಪ್ರಮುಖವಾಗಿ ಕಂಡುಬರುತ್ತವೆ. ಒಟ್ಟಿನಲ್ಲಿ ಸಂಯೋಜನೆಯ ಒಪ್ಪಂದ ಒಂದಕ್ಕೊಂದು ಪೂರಕವಾಗಿದ್ದು, ಬಣ್ಣಗಳ ಸಮ್ಮಿಳಿತ, ಸ್ಫುಟವಾದ ರೇಖೆಗಳು, ಸಂಯೋಜನೆಗೆ ವಿಶೇಷ ಮೆರಗನ್ನು ನೀಡಿದೆ.

ಸಪ್ತಸ್ವರಗಳ ಕಲಾಕೃತಿಗಳು

ಸಂಗೀತದಲ್ಲಿ ಬರುವ ಸಪ್ತಸ್ವರಗಳಾದ ಸ ರಿ ಗ ಮ ಪ ದ ನಿ ಯಾದ ಈ ಪ್ರತಿ ಸ್ವರಗಳ ರೂಪ ಚಿತ್ರಣವನ್ನು ಚಿತ್ರಿಸಿದ ಕಾಳೆಯವರು ಕಲಾ ಲೋಕಕ್ಕೆ ನೀಡಿದ ಅಪರೂಪದ ಕೊಡುಗೆಗಳು. ಕಾಳೆಯವರ ಕಲಾಕೃತಿಗಳಲ್ಲಿಯೇ ವಿಶಿಷ್ಟ ಹೊಸತನದ ಅನುಭವ ಈ ಕಲಾಕೃತಿಗಳು ನೀಡುತ್ತವೆ ಎನ್ನಬಹುದು. ಈ ಸಪ್ತಸ್ವರಗಳ ಕಲಾಕೃತಿಗಳ ರಚನೆಯ ಹಿನ್ನೆಲೆಯಲ್ಲಿ ಸ್ವರಗಳ ಕುರಿತು ಆಳವಾದ ಅಧ್ಯಯನ ಕಾಳೆಯವರಲ್ಲಿ ಕಂಡುಬರುತ್ತದೆ.

ಸಂಗೀತದಲ್ಲಿ ಬರುವ ಪ್ರತಿಯೊಂದು ರಾಗದಲ್ಲಿ ಸಪ್ತಸ್ವರಗಳು ಇರಲೇಬೇಕು. ಶ್ರೋತೃವಿಗೆ ಆನಂದವನ್ನುಂಟು ಮಾಡುವ ನಾದಕ್ಕೆ 'ಸ್ವರ' ಎಂದು ಹೆಸರು. ಸಂಗೀತದ ದಿಗ್ಗಜರು ರಾಗದಲ್ಲಿ ಬರುವ ಈ ಸಪ್ತಸ್ವರಗಳನ್ನು ಏಳು ಪಶುಗಳ ಬಾಯಿಯಿಂದ ಬರುವ ಶಬ್ದಕ್ಕೆ ಹೋಲಿಸಿರುವುದುಂಟು.

---

೮೦. ಪಿ. ಶಾಮರಾವ್, ಭಾರತೀಯ ಕಲಾದರ್ಶನ ಪು.೧೪೦

ಅಲ್ಲದೇ ಪ್ರತಿಯೊಂದು ಸ್ವರಕ್ಕೂ ಅದರದೇ ಆದ ವರ್ಣಗಳು, ಆ ಸ್ವರ ಸೂಸುವ ರಸಗಳು ಇದ್ದು ವಿಭಿನ್ನ ಅನುಭವ ನೀಡುತ್ತವೆ. ಕಾಳೆಯವರು ಇದನ್ನೆಲ್ಲಾ ಆಳವಾಗಿ ಅಧ್ಯಯನ ಮಾಡಿ ಆಯಾ ಸ್ವರಕ್ಕೆ ಸಂಬಂಧಿಸಿದಂತೆ ಪ್ರತಿಸ್ವರದ ಚಿತ್ರಣಕ್ಕೂ ಅದರದೇ ವರ್ಣದ ಲೇಪನ, ಪ್ರಮುಖ ಆಕೃತಿಗಳ ಹಿನ್ನೆಲೆಯಲ್ಲಿ ಸ್ವರಕ್ಕೆ ಸಂಬಂಧಿಸಿದಂತೆ ಆಲಾಪ ಸಾದೃಶ್ಯವನ್ನು ಪ್ರತಿನಿಧಿಸುವ ಪಶುಗಳನ್ನು ಹಿನ್ನೆಲೆಯಾಗಿ ಕಾಳೆಯವರು ವ್ಯವಸ್ಥಿತವಾಗಿ ಸಂಯೋಜಿಸಿದ್ದಾರೆ. ಸ್ತ್ರೀ ದೇವತಾ ರೂಪದಲ್ಲಿ ಈ ಸ್ವರಗಳನ್ನು ಹೋಲಿಸಿ ಚಿತ್ರಿಸಲಾಗಿದೆ. ಸ್ವರಗಳು ಅಂದರೆ ಅವು ದೇವತೆಯ ಸ್ವರೂಪ ಎಂಬ ಪರಿಕಲ್ಪನೆ ಮೂಡುತ್ತದೆ. ಈ ಸ್ವರಗಳ ಚಿತ್ರಗಳನ್ನು ಕಾಳೆಯವರು ತೈಲವರ್ಣದಲ್ಲಿಯಲ್ಲದೇ ಜಲವರ್ಣದಲ್ಲಿಯೂ ರಚಿಸಿದ್ದಾರೆ. ವಾಷ್‌ತಂತ್ರವನ್ನು ಉಪಯೋಗಿಸಿ ಜಲವರ್ಣ ಕಲಾಕೃತಿಗಳನ್ನು ರಚಿಸಿದ್ದಾರೆ. ಈ ಸರಣಿ ಕಲಾಕೃತಿಗಳಲ್ಲಿ ಅವರ ರೇಖೆಗಳ ಮೇಲಿನ ಹಿಡಿತ, ವರ್ಣಗಳ ವೈಭವ, ರೇಖಾ ಪ್ರಾಮುಖ್ಯತೆ ಪರಿಣಾಮಕಾರಿಯಾಗಿ ಮೂಡಿಬಂದಿವೆ.

ಕಾಳೆಯವರು ಸ್ವರಗಳ ಕುರಿತು ಕಲಾಕೃತಿಗಳನ್ನು ರಚಿಸುವ ಮೊದಲು ಹಿನ್ನೆಲೆಯಾಗಿ ಸಂಗೀತಕ್ಕೆ ಸಂಬಂಧಿಸಿದಂತೆ ಅನೇಕ ಗ್ರಂಥಗಳನ್ನು ಅಧ್ಯಯನ ಮಾಡಿ, ಅದರಿಂದ ಸ್ಫೂರ್ತಿ ಪಡೆದು ಸ್ವರಗಳ ಕುರಿತಾದ ಕಲಾಕೃತಿಗಳಿಗೆ ಜೀವ ತುಂಬಿದ್ದಾರೆ. 'ಸಂಗೀತ ರತ್ನಾಕರ' ಎಂಬ ಪ್ರಾಚೀನ ಗ್ರಂಥವನ್ನು ಅಧ್ಯಯನ ಮಾಡಿ ಈ ಗ್ರಂಥದಲ್ಲಿರುವ ಪ್ರತಿಯೊಂದು ರಾಗದ ಸ್ವರಗಳು ಹೇಗೆ ಹುಟ್ಟುತ್ತವೆ. ಅದರ ಗುಣಸ್ವಭಾವ, ವರ್ಣನೆ ಮೊದಲದವುಗಳನ್ನು ತಿಳಿದುಕೊಂಡಿದ್ದಾರಲ್ಲದೆ, ಅ.ನ.ಕೃ ಅವರ ಸಂಪಾದಕತ್ವದಲ್ಲಿ ಬಂದ 'ಕಲಾ ದರ್ಶನ' ಎಂಬ ಗ್ರಂಥದಲ್ಲಿ ಲೇಖಕ ಪಿ.ಶ್ಯಾಮರಾವ್ ಅವರು ಸ್ವರಗಳ ಕುರಿತು ಆಳವಾದ ವಿಚಾರಗಳನ್ನು ಬರೆದಿದ್ದಾರೆ. ಇವುಗಳ ಅಧ್ಯಯನ ಮಾಡಿರುವ ಕಾಳೆಯವರು ಈ ಎಲ್ಲಾ ಗ್ರಂಥಗಳ ಆಧಾರದ ಮೇಲೆ ನಾನು ಈ ಸ್ವರಗಳ ಕುರಿತು ಚಿತ್ರ ರಚಿಸಿರುತ್ತೇನೆ" ಎನ್ನುತ್ತಾರೆ.

ಈ ಸಪ್ತಸ್ವರಗಳ ಕಲಾಕೃತಿಗಳ ರಚನೆಯ ಹಿನ್ನೆಲೆಯಲ್ಲಿ ಸ್ವರಗಳ ಕುರಿತು ಆಳವಾದ ಅಧ್ಯಯನ ಕಾಳೆಯವರಲ್ಲಿ ಕಂಡುಬರುತ್ತದೆ. ಈ ಏಳು ಸ್ವರಗಳನ್ನು ನಿರೂಪಿಸುವ ಸಂಸ್ಕೃತ ಶ್ಲೋಕವೊಂದಿದೆ. ಈ ಶ್ಲೋಕದ ಆಧಾರದ ಮೇಲೆ ಕಾಳೆಯವರು ಸಪ್ತಸ್ವರಗಳ ಚಿತ್ರಗಳನ್ನು ಪರಿಣಾಮಕಾರಿಯಾಗಿ ಮೂಡಿಸಿದ್ದಾರೆ. ಅದು ಹೀಗಿದೆ.

"ಮಯೂರಸ್ಯ ಸ್ವರ ಷಡ್ಜಂ
ರಿಷಭೋ ವೃಷಭ ಧ್ವನಿಃ
ಅಜೋವಧಿತಿ ಗಾಂಧಾರಂ
ಕ್ರಿಂಚಹಕ್ಷಣತಿ ಮಧ್ಯಮಂ

ಪಂಚಮಮ್ ಕೋಕಿಲೋವಕ್ತಿ

ಗಜಾನ್ನಿಷಾದ ಸಂಜಾತಃ"[೮೧]

ರಾಗದಲ್ಲಿ ಬರುವ ಈ ಸಪ್ತಸ್ವರಗಳನ್ನು ಸಂಗೀತದ ವಿದ್ವಾಂಸರು ಏಳು ಪಶುಗಳ ಬಾಯಿಯಿಂದ ಬರುವ ಶಬ್ದಕ್ಕೆ ಹೋಲಿಸಿರುವುದು ಒಂದು ಅದ್ಭುತ ಆಶ್ಚರ್ಯವನ್ನುಂಟು ಮಾಡುತ್ತದೆ. ಅವು ಕ್ರಮವಾಗಿ :

ಸ - ಷಡ್ಜ : ನವಿಲು ಸ್ವರ

ರಿ - ರಿಷಭ : ಗೂಳಿಯ ಗುಟುರು

ಗ - ಗಾಂಧಾರ : ಮೇಕೆಯ ಸ್ವರ

ಮ - ಮಧ್ಯಮ : ಕ್ರೌಂಚಪಕ್ಷಿಯ ಸ್ವರ (ಕಾಲ್ಪನಿಕ ಪಕ್ಷಿ)

ಪ - ಪಂಚಮಿ : ಕೋಗಿಲೆಯ ಕೂಜನ

ದ - ದೈವತ : ಕುದುರೆಯ ಹೇಷಾರವ

ನಿ - ನಿಷಾದ : ಆನೆಯ ಘೀಳಿಡುವಿಕೆ

೧೩ನೇ ಶತಾಬ್ಧಿಯಲ್ಲಿ ಶಾರ್ಙ್ಗದೇವನು 'ಸಂಗೀತ ರತ್ನಾಕರ'ವನ್ನು ರಚಿಸಿದನು. ಇದರಲ್ಲಿ ಹೊಸದಾಗಿ ಬಂದ ರಾಗಗಳನ್ನು ತಟಸ್ಥರಾಗಗಳೆಂದು ಕರೆಯಲಾಗಿದೆ. ರಾಗದಲ್ಲಿ ಬರುವ ಏಳು ಸ್ವರಗಳನ್ನು ಪಶುಗಳ ಬಾಯಿಯಿಂದ ಬರುವ ಶಬ್ದಕ್ಕೆ ಹೋಲಿಸಲಾಗಿದೆ.[೮೨] ಹೀಗೆ ಪ್ರತಿಯೊಂದು ಸ್ವರಕ್ಕೂ ಅದರದೇ ಆದ ವರ್ಣಗಳು, ಸ್ವರ ಸೂಸುವ ರಸಗಳು, ಇದ್ದು ಕಾಳೆಯವರು ಇದನ್ನೆಲ್ಲಾ ಆಳವಾಗಿ ಅಧ್ಯಯನ ಮಾಡಿ ಆಯಾ ಸ್ವರಕ್ಕೆ ಸಂಬಂಧಿಸಿದಂತೆ ವರ್ಣಲೇಪನ, ಸ್ವರಗಳನ್ನು ಪ್ರತಿನಿಧಿಸುವ ಆಯಾ ದೇವತೆಗಳ ಪ್ರಮುಖ ಆಕೃತಿಗಳ ಹಿನ್ನೆಲೆಯಲ್ಲಿ ಸ್ವರಕ್ಕೆ ಸಂಬಂಧಿಸಿದಂತೆ ಆಲಾಪ ಸಾದೃಶ್ಯವನ್ನು ಪ್ರತಿನಿಧಿಸುವ ಪಶುಗಳನ್ನು ಹಿನ್ನೆಲೆಯಾಗಿ ಕಾಳೆಯವರು ವ್ಯವಸ್ಥಿತವಾಗಿ ಸಂಯೋಜಿಸಿದ್ದಾರೆ. ಸ್ತ್ರೀ ದೇವತಾ ರೂಪದಲ್ಲಿ ಚಿತ್ರಿಸಲಾದ ಸ್ವರಗಳ ಹೋಲಿಕೆ ಸ್ವರಗಳು ಎಂದರೆ ಅವು ದೇವತೆಯ ಸ್ವರೂಪ ಎಂಬ ಪರಿಕಲ್ಪನೆಯನ್ನುಂಟು ಮಾಡುತ್ತವೆ. ಪ್ರತಿಯೊಂದು ಸ್ವರವೂ ಪ್ರತ್ಯೇಕ ದೇವತೆಯಿದ್ದ ಹಾಗೇ. ಈ ಎಲ್ಲಾ ದೇವತೆಗಳು ಸಂಗೀತ ಸರಸ್ವತಿಯನ್ನು ಆರಾಧಿಸುತ್ತವೆ. ಸ್ವರಗಳು ಸ್ತ್ರೀ ದೇವತೆಗಳಾದರೆ, ಆಲಾಪ ಸಾದೃಶ್ಯವನ್ನು ಪ್ರತಿನಿಧಿಸುವ ಪಶುಗಳು ಗಂಡು ಜಾತಿಗಳಾಗಿದ್ದು, ಪುರುಷ ಸಂಕೇತವಾಗಿರುವುದು ವಿಶಿಷ್ಟವೆನಿಸುತ್ತದೆ.

---

೮೧. ವಿ.ಟಿ. ಕಾಳೆಯವರೊಂದಿಗೆ ಸಂದರ್ಶನ ದಿನಾಂಕ ೨೯.೯.೨೦೦೯

೮೨. ಡಾ. ಸಂಪದಾಭಟ್ಟ, (ಸಂ) ಹಿಂದೂಸ್ಥಾನಿ ಸಂಗೀತ ಮತ್ತು ರಾಗಮಾಲಾ ಚಿತ್ರಗಳು, (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ೧೯೯೯) ಪು.೫೦

ಸಪ್ತಸ್ವರಗಳಿಗೆ ಪ್ರತ್ಯೇಕವಾದ ರೂಪ, ಲಾವಣ್ಯಗಳಿದ್ದು ಪ್ರತ್ಯೇಕವಾದ ಬಣ್ಣ ಅಲಂಕಾರಗಳು ಇರುತ್ತವೆ. ಪ್ರತಿ ಸ್ವರಕ್ಕೂ ಪ್ರತ್ಯೇಕವಾದ ಗುಣ ಸ್ವಭಾವಗಳಿರುತ್ತವೆ. ಎಂಬುದು ಕಾಳೆಯವರ ಚಿಂತನೆಯಿಂದ ಮೂಡಿಬಂದಿದೆ.

ಸಪ್ತಸ್ವರಗಳು ಸ ರಿ ಗ ಮ ಪ ದ ನಿ ಹೇಗೆ ಸದ್ವಿನಿಯೋಗದ, ಸಮ್ಮಿಳನದಲ್ಲಿ ಓಂಕಾರವನ್ನು ಪ್ರತಿಬಿಂಬಿಸುವವೋ ಹಾಗೆಯೇ ಸಪ್ತ ವರ್ಣಗಳು. ಊದಾ, ನೀಲ, ಆಕಾಶದ ನೀಲ, ಹಸಿರು, ಹಳದಿ, ಕಿತ್ತಳೆ, ಕೆಂಪು, ತಕ್ಕಂಥ ಮಿಶ್ರಣದಲ್ಲಿ ಅವರ್ಣಿತ ನಿಷ್ಕಲಂಕ ತೇಜಸ್ಸನ್ನು ಸಾಧಿಸುತ್ತವೆ. ಈ ಸಪ್ತಸ್ವರಗಳು ತ್ರಿಗುಣಾತ್ಮಕಗಳಾಗಿ ಸರ್ವಶಕ್ತಿ ಸಂಭೂತಗಳಾಗಿವೆ. ರಾಗರಾಗಿಣಿಯರು ಈ ಸಪ್ತಸ್ವರಗಳು ವಿವಿಧ ಸಮ್ಮಿಳನದಲ್ಲಿ ಜನಿಸಿ ತ್ರಿಗುಣಾತ್ಮಕಗಳಾಗಿ ಇರುವುದಲ್ಲದೆ, ಸಮಸ್ತ ಭಾವೋಪೇತವಾಗಿದ್ದು ನವರಸಗಳನ್ನು ಬಿಂಬಿಸುತ್ತವೆ. ಶ್ರುತಿ ಸಹಿತವಾದ ಇವುಗಳ ಗಾಯನ ಮಾನವನ ಮನೋಪ್ರವೃತ್ತಿಯ ಮೇಲೆ ಪರಿಣಾಮವನ್ನುಂಟು ಮಾಡಿ ಅವನ ಮುಕ್ತಿ ಸಾಧನೆಗೆ ಸತ್ಪಥವನ್ನು ಕಲ್ಪಿಸಿ ಕೊಡುತ್ತದೆ. ಆದ ಕಾರಣ ಭಕ್ತಿ ಮಾರ್ಗದಲ್ಲಿ ಸಂಗೀತಕ್ಕೆ ಹೆಚ್ಚು ಮನ್ನಣೆಯಿರುತ್ತದೆ[೮೨] ಎಂಬ ಮಾತು ಪ್ರಸ್ತುತ.

ರಾಮಾಯಣ ಕಾಲದಲ್ಲಿದ್ದ ಸ್ವರಗಳ ಬಗ್ಗೆ ವಿವರಣೆ ನೀಡುತ್ತಾ ಅವುಗಳಿಗೆ ದ್ವೀಪ, ಸ್ಥಾನ, ಆಲಾಪ, ಕುಲ, ವಂಶ, ವರ್ಣ, ದೇವತೆ, ರಸಗಳ ಬಗ್ಗೆ ಉಲ್ಲೇಖಿಸಲಾಗಿದೆ.[೮೩] (ಕೋಷ್ಟಕವನ್ನು ಗಮನಿಸಿ)

ಹೀಗೆ ವಿಂಗಡಣೆ ಮಾಡಲಾದ ಸ್ವರಗಳನ್ನು ಅಧ್ಯಯನ ಮಾಡಿ ಕಾಳೆಯವರು ಪ್ರತಿ ಸ್ವರಕ್ಕೂ ಆಯಾ ದೇವತೆಯನ್ನು ಆ ಸ್ವರ ಸೂಸುವ ರಸವನ್ನು ಮುಖ್ಯ ಆಕೃತಿಯ ಹಿನ್ನೆಲೆಯಲ್ಲಿ ಆಲಾಪ ಸಾದೃಶ್ಯವನ್ನು ಪ್ರತಿನಿಧಿಸುವ ಪಶುಗಳನ್ನು ಆಯಾ ಸ್ವರಗಳಿಗೆ ಹೋಲಿಕೆಯಾಗುವ ವರ್ಣ ಲೇಪನಗಳನ್ನು ಕಾಳೆಯವರು ತಮ್ಮ ಕಲಾಕೃತಿಗಳಲ್ಲಿ ಸಂಯೋಜಿಸಿ ಸೆರೆಹಿಡಿದಿದ್ದಾರೆ.

ಭಾರತೀಯ ಕಲಾದರ್ಶನ ಎಂಬ ಗ್ರಂಥದಲ್ಲಿ ಪಿ. ಶಾಮರಾವ್ ಅವರು ಬರೆದ ರಾಗ ರಾಗಿಣಿ ಕುರಿತಾದ ಲೇಖನದಲ್ಲಿ ಸಪ್ತಸ್ವರಗಳ ಕುರಿತು ಪ್ರತಿ ಸ್ವರಗಳ ಬಣ್ಣ, ದೇವತೆ, ಆ ಸ್ವರ ಸೂಸುವ ರಸಗಳು ಮುಂತಾದವುಗಳನ್ನು ಕುರಿತು ವಿವರಣೆಯಿದೆ. ಈ ಆಧಾರದ ಮೇಲೆ ಕಾಳೆಯವರು ಸ್ವರಗಳನ್ನು ಹೋಲುವ ದೇವತೆಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ.

---

೮೩. ಪಿ. ಶಾಮರಾವ್, ಭಾರತೀಯ ಕಲಾದರ್ಶನ ಪು.೧೩೪

ಸ್ವರಗಳ ಹೆಸರು	ದ್ವೀಪ	ಸ್ಥಾನ	ಆಲಾಪ ಸಾದೃಶ್ಯ	ಕುಲ	ವಂಶ	ವರ್ಣ	ದೇವತೆ	ರಸ
ಷಡ್ಜ	ಜಂಬೂ	ಕಂಠ	ಮಯೂರ	ಗೀರ್ವಾಣ	ಬ್ರಹ್ಮ	ಕಮಲದಳ	ಮನ್ಹಿ	ಶೃಂಗಾರ
ಋಷಭ	ಪ್ಲಕ್ಷ	ಹೃದಯ	ನೀಲಕಂಠಪಕ್ಷಿ	ಋಷಿ	ಕ್ಷತ್ರಿಯ	ಶುಭ್ರ, ರಜರಹಿತ	ಯಮ	ಅದ್ಭುತ
ಗಾಂಧಾರ	ಕುಶ	ನಾಸಿಕ	ಆಡು	ಗೀರ್ವಾಣ	ವೈಶ್ಯ	ಚಿನ್ನದ	ಚಂದ್ರಕುಲ	ಅದ್ಭುತ
ಮಧ್ಯಮ	ಕ್ರೌಂಚ	ಎದೆ	ಕ್ರೌಂಚ	ಗೀರ್ವಾಣ	ಬ್ರಹ್ಮ	ಶ್ವೇತ	ಲಕ್ಷ್ಮೀ	ಕರುಣ
ಪಂಚಮ	ಶಾಲ್ಮಲಿ	ಕಂಠ	ಕೋಗಿಲೆ		ಪಿತೃ	ಕಪ್ಪು	ಗಣನಾಥ	ಹಾಸ್ಯ
ದೈವಕ	ಶ್ವೇತ	ಹಣೆ	ಕಪ್ಪೆ	ಋಷಿ	ಉತ್ತಮ	ಹಳದಿ	ನಾರದ	ಭೀಭತ್ಸ
ನಿಷಾಧ	ಪುಷ್ಕರ	ಗಂಟಲಿನ ಮೇಲ್ಭಾಗ	ಆನೆ	ವೈಶ್ಯ	ಅಸುರ	ಶ್ವೇತ, ರಕ್ತ ಮಿಶ್ರಿತ	ತುಂಬುರ ಸೂರ್ಯ	ಭಯಾನಕ

೮೪. ಡಾ. ಸಂಪದಾಭಟ್ಟ, ಹಿಂದೂಸ್ಥಾನಿ ಸಂಗೀತ ಮತ್ತು ರಾಗಮಾಲಾ ಚಿತ್ರಗಳು (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ೧೯೯೯), ಪು.೨೪

ಸ್ವರಶಕ್ತಿ ಸಂಭೂತಳಾದ ದೇವಿಯನ್ನು ಸಪ್ತಸ್ವರಗಳು ತಮ್ಮ ತಮ್ಮ ಪ್ರತ್ಯೇಕರೂಪಗಳಿಂದ ಆರಾಧಿಸಿ ವರ್ಣಿಸುವವು. ಅವಳ ಶಕ್ತಿ ಅದ್ವಿತೀಯವಾದದ್ದು. ಅವಳು ಪಂಚದೇವ, ಪಂಚಪ್ರಾಣ, ಸಂಭೂತಳಾಗಿ ತ್ರಿಗುಣಾತ್ಮಕಳಾಗಿರುತ್ತಾಳೆ. ಸಪ್ತಸ್ವರಗಳು ಅವಳ ಅವತಾರಗಳು.[೮೫] ಹೀಗೆ ಸ್ವರಗಳನ್ನು ಆಯಾ ದೇವತೆಗಳಿಗೆ ಹೋಲಿಸಲಾಗಿದೆ. ಸ್ವರಗಳು ಎಂದರೆ ದೇವತೆಗೆ ಸಮಾನವೆಂಬ ಅರ್ಥ ಕೊಡುತ್ತದೆ. ಹೀಗೆ ಸಂಗೀತಕ್ಕೆ ನಮ್ಮ ಸಂಸ್ಕೃತಿ ಕೊಟ್ಟ ಸ್ಥಾನ ತುಂಬಾ ಪವಿತ್ರವಾದದ್ದು ಎಂಬುದನ್ನು ಕಂಡುಕೊಳ್ಳಬಹುದಾಗಿದೆ. ಸಂಗೀತಕ್ಕೆ ನಮ್ಮ ಸಂಸ್ಕೃತಿಯಲ್ಲಿ ಅಪಾರ ಮನ್ನಣೆ ಯುಂಟು. ಸಂಗೀತವೆಂದರೆ ಅದು ದೇವರಿಗೆ ಸಮಾನ. ಹೀಗೆ ಕಾವ್ಯಗಳಲ್ಲಿರುವ ಸ್ವರ ದೇವತೆಗಳಿಗೆ ಕಾಳೆಯವರು ರೇಖೆ ಬಣ್ಣಗಳಿಂದ ಮೂರ್ತರೂಪ ನೀಡಿ ಕಲಾ ಲೋಕಕ್ಕೆ ಅಪೂರ್ವ ಕೊಡುಗೆ ನೀಡಿದ್ದಾರೆ. ಇಲ್ಲಿ ಆಯಾ ಸ್ವರಗಳನ್ನು ಕ್ರಮವಾಗಿ ಈ ಕೆಳಗಿನಂತೆ ವಿವರಿಸಲಾಗಿದೆ.

ಸ - ಷಡ್ಜಸ್ವರ

ಆಲಾಪ ಸಾದೃಶ್ಯ	:	ಮಯೂರ (ನವಿಲು)
ವರ್ಣ	:	ಕಮಲದಳದ ವರ್ಣ
ರಸ	:	ಶೃಂಗಾರ
ಸ್ಥಾನ	:	ಕಂಠ
ವಂಶ	:	ಬ್ರಹ್ಮವಂಶ
ದೇವತೆ	:	ವಹ್ನಿ

'ಸ' ಅವತಾರವು ಕೋಟಿ ವಿದ್ಯುಲ್ಲತಾ ತೇಜಸ್ಸನ್ನು ಹೊಂದಿ ಗಂಧರ್ವರಿಂದ ವಿಧ ವಿಧವಾಗಿ ಸ್ತುತಿಸಲಾಗಿದೆ. ಬಣ್ಣ ಶ್ವೇತ, ಕಣ್ಣುಗಳು ಕೆಂಪು, ದೇಹವು ಶ್ವೇತ, ಚಂದನದಿಂದ ಕೂಡಿದ್ದು, ಧವಧವಳಿಸುವ ಶ್ವೇತ ಮುತ್ತಿನ ಆಭರಣಯುತವಾಗಿದೆ. ಅವಳ ಉಡುಪುಗಳು ಶ್ವೇತ ಬಣ್ಣದವು. ಅಷ್ಟಸಿದ್ಧಿದಾಯಕಳು ಸೌಂದರ್ಯದ ಖನಿ. ಭಕ್ತರ ಅಭೀಷ್ಟಗಳನ್ನು ಸದಾ ಪೂರೈಸುವಳು ಎಂದು 'ಸ' ಸ್ವರದ ಕುರಿತು ವಿಶ್ಲೇಷಣೆ ಮಾಡಲಾಗಿದೆ. ಈ ವಿಶ್ಲೇಷಣೆ ಆಧಾರದ ಮೇಲೆ ಕಾಳೆಯವರು ಈ ಕಲಾಕೃತಿಯನ್ನು ರಚಿಸಿರುವುದು ಕಂಡುಬರುತ್ತದೆ.

ಸಪ್ತಸ್ವರಗಳಲ್ಲಿ ಮೊದಲನೆಯದಾದ ಷಡ್ಜಸ್ವರ ಆಧಾರಿತ ಈ ಕಲಾಕೃತಿಯು ವಾಷ್‌ತಂತ್ರದಲ್ಲಿ ರೇಖಾ ಪ್ರಧಾನವಾಗಿ ಪರಿಣಾಮಕಾರಿಯಾಗಿ ಮೂಡಿಬಂದಿದೆ. ಈ ಸ್ವರದ ಆಲಾಪ ಸಾದೃಶ್ಯ ಮಯೂರ (ನವಿಲು) ಈ ಪಕ್ಷಿ ಹೊರಡಿಸುವ ಶಬ್ದವನ್ನು ಈ ಸ್ವರಕ್ಕೆ ಹೋಲಿಸಲಾಗಿದೆ. ಈ

---

೮೫. ಪಿ. ಶಾಮರಾವ್, ಭಾರತೀಯ ಕಲಾದರ್ಶನ ಪು.೧೩೫






ಷಡ್ಜ ಸ್ವರ

ಸ್ವರದ ಬಣ್ಣ ಶ್ವೇತ ಅಥವಾ ತೆಳು ಗುಲಾಬಿಯಾಗಿದ್ದು ಇದು ಶೃಂಗಾರ ರಸವನ್ನುಂಟುಮಾಡುತ್ತದೆ. ಮತ್ತು ಈ ಸ್ವರದ ಸ್ಥಾನ ಕಂಠ, ವಂಶ ಬ್ರಹ್ಮವಂಶ,ಈ ಕಲಾಕೃತಿಯಲ್ಲಿರುವ ಮುಖ್ಯ ಆಕೃತಿಯಾದ ದೇವತೆಯು ಮನ್ನಿ. ಈ ದೇವತೆಯು ವಿಶಾಲವಾದ ತಿಳಿ ಬಣ್ಣದ ಕಮಲದ ಹೂವಿನ ಮೇಲೆ ನಿಂತಿದ್ದು, ನಿಂತಿರುವ ಭಂಗಿ ಲಯಾತ್ಮಕವಾಗಿದ್ದು, ಅತ್ಯಂತ ಸುಂದರವಾಗಿ ಸ್ಫುಟವಾದ ರೇಖೆಯನ್ನು ಹೊಂದಿದೆ. ಅಲಂಕಾರದ ಕುಸುರಿ ಕೆಲಸವನ್ನು ಇಲ್ಲಿ ಗಂಭೀರವಾಗಿ ಪರಿಗಣಿಸಲಾಗಿದೆ. ಬಲಗೈಯಲ್ಲಿ ಕಮಲದ ಹೂವನ್ನು ಹಿಡಿದುನಿಂತಿರುವ ದೇವತೆಯ ಹಿನ್ನೆಲೆಯಲ್ಲಿ ತಿಳಿಯಾದ ಬಣ್ಣದಿಂದ ರಚಿಸಲಾಗಿದೆ. ನವಿಲು ತನ್ನ ನೋಟವನ್ನು ದೇವತೆ ಕಡೆಗೆ ನೆಟ್ಟಿದೆ. ಮುಖ್ಯ ಆಕೃತಿಯ ಹಿನ್ನೆಲೆಯಲ್ಲಿಯೂ ಸಹ ತಿಳಿ ಗುಲಾಬಿಯಲ್ಲಿ ರಚಿತಗೊಂಡಿದ್ದು ಅತ್ಯಂತ ನಾಜೂಕಿನಿಂದ ಸುರುಳಿಸುತ್ತಿದ್ದಂತೆ ನೀರಿನ ಅಲೆಗಳನ್ನು ರಚಿಸಲಾಗಿದ್ದು, ರೇಖೆಗಳ ಮುಖಾಂತರ ರಜಪೂತ ಸಾಂಪ್ರದಾಯಿಕ ಕಿರುರೂಪಚಿತ್ರಗಳಂತೆ ಕಂಡುಬರುತ್ತದೆ.

ಕಾಳೆಯವರ ಈ ಕಲಾಕೃತಿಯು ಅವರ ವಾಷ್‌ತಂತ್ರದ ಕುಶಲತೆಗೆ ಸಾಕ್ಷಿಯಾಗಿದೆ. ಹಾಗೆಯೇ ಉಳಿದ ಸ್ವರಗಳ ಚಿತ್ರಗಳಿಗಿಂತಲೂ ವಿಭಿನ್ನ ನೋಟವನ್ನು ಇದು ಹೊಂದಿದೆ. ಉಳಿದ ಸ್ವರ ಗಳಲ್ಲಿರುವ ಮುಖ್ಯ ಆಕೃತಿಯು ದೇವತೆಗಳು ವೀಕ್ಷಕರೊಂದಿಗೆ ನೇರವಾದ ನೋಟವನ್ನು ಹರಿಸಿದ್ದಾರೆ, ಆದರೆ ಸ ಸ್ವರದಲ್ಲಿರುವ ದೇವತೆಯ ವೀಕ್ಷಕರೊಂದಿಗೆ ನೇರವಾದ ನೋಟವಿಲ್ಲದೆ ಮುಖವನ್ನು ಪಕ್ಕಕ್ಕೆ ಹೊರಳಿಸಿ ನಿಂತಿರುವ ಭಂಗಿಯನ್ನು ಹೊಂದಿರುವುದು ಸಂಯೋಜನೆಯಲ್ಲಿರುವ ಇತರ ಆಕೃತಿಗಳೊಂದಿಗೆ ಒಂದಕ್ಕೊಂದು ಸಂಬಂಧ ಹೋಲಿಕೆಯಲ್ಲಿ ಸಂಯೋಜನೆಯು ಯಶಸ್ವಿಯಾಗಿದೆ. ಕಲಾವಿದನ ಅಂತಃಕರಣದಿಂದ ಮೂಡಿಬಂದ ಕಲಾಕೃತಿ ಇದಾಗಿದೆ ಎನ್ನಬಹುದು. ಮತ್ತು ಕಲಾವಿದ ಉಳಿದ ಸ್ವರಗಳ ಕಲಾಕೃತಿಗಳಿಗಿಂತ ಈ ಕಲಾಕೃತಿಗೆ ಹೆಚ್ಚು ಮಹತ್ವ ನೀಡಿದ್ದಾರೆ ಎಂಬುವುದು ಕಂಡುಬರುತ್ತದೆ. ಸೂಕ್ಷ್ಮ ಸ್ಫುಟವಾದ ರೇಖಾ ವಿನ್ಯಾಸ, ರೇಖೆಗಳ ಮೇಲಿನ ಹಿಡಿತ, ವರ್ಣಗಳ ವೈಭವ ಸೃಷ್ಟಿಸಿದ್ದು ಕಣ್ಣಿಗೂ ಮನಸ್ಸಿಗೂ ಕೋಮಲ ಮತ್ತು ಹಿತವಾದ ಭಾವನೆಯನ್ನುಂಟು ಮಾಡುವಲ್ಲಿ ಕಾಳೆಯವರ ಈ ಕಲಾಕೃತಿ ಯಶಸ್ವಿಯಾಗಿದೆ.

ರಿ - ರಿಷಭ ಸ್ವರ

ಆಲಾಪ	:	ಗೂಳಿ
ವರ್ಣ	:	ಶುದ್ಧ ರಜ ರಹಿತ
ರಸ	:	ಅದ್ಭುತ
ಸ್ಥಾನ	:	ಹೃದಯ



ಗಾಂಧಾರ ಸ್ವರ



ರಿಷಭ ಸ್ವರ

ವಂಶ : ಕ್ಷತ್ರಿಯವಂಶ

ದೇವತೆ : ಯಮ[೮೬]

'ರಿ' ದೃಶ್ಯವು ಕೆಂಪು ಮಿಂಚಿನಿಂತೆ ಕಣ್ಣು ಕುಕ್ಕುತ್ತದೆ. ಇವಳು ಮಹಾಶಕ್ತಿಯಾಗಿ ಬ್ರಹ್ಮನ ಸೃಷ್ಟಿಯ ಶಕ್ತಿಯನ್ನು ಪಡೆದಿರುತ್ತಾಳೆ. ಅವಳದು ಸುಂದರಾಕಾರವಾದರೂ, ಅಷ್ಟಬಾಹುಗಳಿಂದಲೂ ಕೆಂಪು ಮೈ ಛಾಯೆಯಿಂದಲೂ, ಕೆಂಪು ಆಭರಣಗಳಿಂದಲೂ, ಕೆಂಪು ಹೂವಿನಹಾರದಿಂದಲೂ, ಜೊತಾಡುವ ನಾಲಿಗೆಯಿಂದಲೂ, ಉಗ್ರರೂಪವನ್ನು ತಾಳಿ ಭಯಾಂಕರಳಾಗಿರುವಳು. ಬ್ರಹ್ಮನಂತೆ ಅಷ್ಟ ಸಿದ್ಧಿದಾಯಕಳಾಗಿರುತ್ತಾಳೆ[೮೭] ಎಂಬ ವಿವರಣೆಯು 'ರಿ' ಸ್ವರಕ್ಕೆ ಅನ್ವಯಿಸಿ ಹೇಳಲಾಗಿದೆ.

ಸಪ್ತಸ್ವರಗಳಲ್ಲಿ ಎರಡನೆಯದಾದ ರಿ ಸ್ವರವನ್ನು ಗೂಳಿಯ ಗುಟುರಿನಿಂದ ಹೊರಡುವ ಶಬ್ದಕ್ಕೆ ಹೋಲಿಸಲಾಗಿದೆ. ಈ ಸ್ವರದ ಬಣ್ಣ ಕೆಂಪು. ಸ್ಥಾನ ಹೃದಯ, ಈ ಸ್ವರವು ಅದ್ಭುತ ರಸವನ್ನುಂಟು ಮಾಡುತ್ತದೆ. ಈ ಎಲ್ಲಾ ವಿವರಣೆಗಳನ್ನೊಳಗೊಂಡಂತೆ ಕಾಳೆಯವರ ಈ ಕಲಾಕೃತಿಯು ವಾಷ್ ತಂತ್ರದಲ್ಲಿ ಮೂಡಿಬಂದಿದೆ. ಅತ್ಯಂತ ಶಕ್ತಿಯುತವಾದ, ಸ್ಫುಟವಾದ ರೇಖೆಗಳೇ ಇಲ್ಲಿ ಪ್ರಾಮುಖ್ಯತೆಯನ್ನು ಪಡೆದಿವೆ. ಮುಖ್ಯ ಆಕೃತಿಯ ರಚನೆಯ ಅವಕಾಶದ ಮಧ್ಯದಲ್ಲಿ ರಚಿಸಿಲಾಗಿದ್ದು ಸಂಯೋಜನೆಯಲ್ಲಿರುವ ಇತರ ಆಕೃತಿಗಳು ಮುಖ್ಯ ಆಕೃತಿಗೆ ಪೂರಕವಾಗುವಂತೆ ರಚಿಸಲಾಗಿದೆ. ಆಲಾಪ ಸಾದೃಶ್ಯದ ಗೂಳಿಯು ಈ ಸಂಯೋಜನೆಯಲ್ಲಿ ಗಂಭೀರವಾಗಿ ಕುಳಿತಿರುವ ದೃಶ್ಯ ಕಂಡುಬರುತ್ತದೆ. ರೇಖೆಗಳ ಮುಖಾಂತರವೇ ತೋರಿಸಲಾದ ನೀರಿನ ಅಲೆಗಳು ಸಂಗೀತದಲ್ಲಿ ಬರುವ ಲಯಗಳಿಗೆ ಸಂಕೇತಗಳಂತಿವೆ.

ಗ - ಗಾಂಧಾರ ಸ್ವರ

ಆಲಾಪ : ಆಡು (ಮೇಕೆ)

ವರ್ಣ : ಚಿನ್ನ

ರಸ : ಅದ್ಭುತ

ಸ್ಥಾನ : ನಾಶಿಕ

ವಂಶ : ವೈಶ್ಯವಂಶ

ದೇವತೆ : ಚಂದ್ರಕುಲ[೮೮]

---

೮೬. ಡಾ. ಸಂಪದಾಭಟ್ಟ, (ಸಂ) ಹಿಂದೂಸ್ಥಾನಿ ಸಂಗೀತ ಮತ್ತು ರಾಗಮಾಲಾ ಚಿತ್ರಗಳು, (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ೧೯೯೯) ಪು.೮೪

೮೭. ಪಿ. ಶಾಮರಾವ್, ಭಾರತೀಯ ಕಲಾದರ್ಶನ ಪು.೧೩೪

೮೮. ಡಾ. ಸಂಪದಾಭಟ್ಟ, (ಸಂ) ಹಿಂದೂಸ್ಥಾನಿ ಸಂಗೀತ ಮತ್ತು ರಾಗಮಾಲಾ ಚಿತ್ರಗಳು, (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ೧೯೯೯) ಪು.೮೫





ಮಧ್ಯಮ ಸ್ವರ

'ಗ' ಸ್ವರೂಪದಲ್ಲಿ ದೇವಿಯು ಮಹಾಶಕ್ತಿಯುತಳಾಗಿ, ಅರುಣೋದಯದ ಸೂರ್ಯಕಾಂತಿಯನ್ನು ಪಡೆದು, ನಿರ್ಮಲೆಯಾಗಿರುವಳು. ಮಂದಸ್ಮಿತಳು, ನಿರಂಜನೆ ಕೂಡ. ಕೆಂಪು ಪೀತಾಂಬರಗಳಿಂದಲೂ, ಕೆಂಪು ರತ್ನಗಳಿಂದಲೂ ಶೋಭಿತವಾಗಿ ಚತುರ್ಬಾಹುಗಳನ್ನು ಪಡೆದಿರುವಳು ಮಹಾಶಕ್ತಿಯುತಳು.[೮೯]

ಸಪ್ತಸ್ವರಗಳಲ್ಲಿ ಮೂರನೆಯದಾದ 'ಗ' ಸ್ವರವನ್ನು ಆಡು ಅಥವಾ ಮೇಕೆಯು ಹೊರಸೂಸುವ ಶಬ್ದಕ್ಕೆ ಹೋಲಿಸಲಾಗಿದೆ. ಈ ಸ್ವರವು ಚಿನ್ನದ ಬಣ್ಣವನ್ನು ಹೊಂದಿದೆ. ಈ ಸ್ವರವು ನಾಶಿಕದಿಂದ ಹುಟ್ಟುತ್ತದೆ. ಈ ಸ್ವರವು ಅದ್ಭುತ ರಸವನ್ನುಂಟು ಮಾಡುತ್ತದೆ.

ಮ - ಮಧ್ಯಮ ಸ್ವರ

ಆಲಾಪ ಸಾದೃಶ್ಯ	:	ಕ್ರೌಂಚಪಕ್ಷಿ (ಪುರಾಣದ ಕಾಲ್ಪನಿಕ ಪಕ್ಷಿ)
ವರ್ಣ	:	ಶ್ವೇತ
ರಸ	:	ಕರುಣ
ಸ್ಥಾನ	:	ಎದೆ
ವಂಶ	:	ಬ್ರಹ್ಮವಂಶ
ದೇವತೆ	:	ಲಕ್ಷ್ಮಿ

'ಮ' ಅವತಾರಕ್ಕೆ ದಶಬಾಹುಗಳಿಂದ್ದು, ತನ್ನ ಕಪ್ಪು ಮೈ ಛಾಯೆಯಿಂದಲೂ, ಅತ್ಯಂತ ಹಳದಿ ಬಣ್ಣದ ಪೀತಾಂಬರಗಳಿಂದಲೂ ಸುಂದರಿಯಾದರೂ, ಉಗ್ರರೂಪವನ್ನು ತಾಳಿ ಭಯಂಕರಳಾಗಿರುತ್ತಾಳೆ. ಆದರೆ ಧರ್ಮಾರ್ಥ ಕಾಮ ಮೋಕ್ಷಗಳನ್ನು ನೀಡುವುದರಲ್ಲಿ ಅಪ್ರಮೇಯಳು[೯೦] ಎಂಬ ವಿವರಣೆ ಈ ಸ್ವರದ ಕುರಿತು ಕಂಡುಬರುತ್ತದೆ.

ಸಪ್ತಸ್ವರಗಳಲ್ಲಿ ನಾಲ್ಕನೆಯದಾದ 'ಮ' ಸ್ವರವು ಕ್ರೌಂಚ ಪಕ್ಷಿ ಹೊರಡಿಸುವ ಶಬ್ದವಾಗಿದೆ. ಇದು ಪೌರಾಣಿಕ ಕಾಲ್ಪನಿಕ ಪಕ್ಷಿ. ಈ ಸ್ವರವು ದೇವತೆ ಲಕ್ಷ್ಮೀ ಎದೆಯಿಂದ ಹುಟ್ಟಿಕೊಂಡಿದೆ. ಇದು ಕರುಣ ರಸವನ್ನುಂಟು ಮಾಡುತ್ತದೆ. ರೇಖೆಗಳಿಂದ ರಚಿಸಿದ ಸುರಳಿಯಾಕಾರದ ನೀರಿನ ಅಲೆಗಳ ಮೇಲೆ ಈ ಸ್ವರ ದೇವತೆ ಆಶೀರ್ವಾದ ನೀಡಿರುವ ಭಂಗಿಯಲ್ಲಿ ನಿಂತಿರುವುದು ಆಕರ್ಷಣೆಯವಾಗಿ ಮೂಡಿಬಂದಿದೆ. ಗಾಢವಾದ ಹಳದಿ ಬಣ್ಣದ ಉಡುಪನ್ನು ಆಭರಣಗಳನ್ನು ತೊಟ್ಟಿರುವ ಈ ದೇವತೆಯು ಸ್ವರ ಸೂಸುವ ಬಣ್ಣಕ್ಕೆ ಪೂರಕವಾಗಿದೆ. ಹಿನ್ನೆಲೆಯಲ್ಲಿ ಕ್ರೌಂಚಪಕ್ಷಿ

೮೯. ಪಿ. ಶಾಮರಾವ್, ಭಾರತೀಯ ಕಲಾದರ್ಶನ ಪು.೧೩೫

೯೦. ಅದೇ ಪು. ೧೩೫





ಪಂಚಮ ಸ್ವರ

ರಚನೆ ಪರಿಣಾಮಕಾರಿಯಾಗಿದೆ. ಇಲ್ಲೆಲ್ಲಾ ರೇಖೆಗಳು ದೃಢವಾಗಿ, ಸ್ಫುಟವಾಗಿ ಶಕ್ತಿಯುತವಾಗಿ ಕಂಡುಬರುತ್ತವೆ.

ಪ - ಪಂಚಮ ಸ್ವರ

ಆಲಾಪ ಸಾದೃಶ್ಯ	:	ಕೋಗಿಲೆಯ ಕೂಜನ
ವರ್ಣ	:	ಕಪ್ಪು
ರಸ	:	ಹಾಸ್ಯ
ಸ್ಥಾನ	:	ಕಂಠ
ವಂಶ	:	ಪಿತೃವಂಶ
ದೇವತೆ	:	ಗಣನಾಥ

'ಪ' ಈ ಶಕ್ತಿಯ ಸ್ವರೂಪವು ಶರಶ್ಚಂದ್ರಕಾಂತಿಯನ್ನು ಬೀರುತ್ತಾ ಮಹಾ ಮೋಕ್ಷ ದಾಯಕಳಾಗಿರುತ್ತಾಳೆ. ಇವಳು ದ್ವಿಬಾಹುಗಳುಳ್ಳ ಪದ್ಮಾಕ್ಷಿ. ಇವಳ ದೇಹವು ಕೆಂಪು ಗಂಧದಿಂದ ಲೇಪಿತವಾಗಿ, ಪದ್ಮಹಾರದಿಂದಲೂ, ವಿವಿಧ ಬಣ್ಣದ ಉಡುಪುಗಳಿಂದಲೂ, ಚಿತ್ರ ವಿಚಿತ್ರ ಬಣ್ಣಗಳ ಮಣಿ, ಮುತ್ತು, ರತ್ನಗಳಿಂದ ರಚಿಸಿದ ಅಲಂಕಾರದಿಂದ ಪ್ರಜ್ವಲಿಸುತ್ತದೆ[೯೧] ಎಂಬ ವಿವರಣೆ ಕಾಣುತ್ತೇವೆ.

ಆಶೀರ್ವಾದ ನೀಡುವ ಭಂಗಿಯಲ್ಲಿರುವ ಈ ಸ್ತ್ರೀ ದೇವತಾ ಸ್ವರದ ಶೈಲಿಯು ವಾಷ್‌ತಂತ್ರದಲ್ಲಿ ಅದ್ಭುತವಾಗಿ ಮೂಡಿಬಂದಿದೆ. ಸಾಂಕೇತಿಕವಾಗಿ ನೀರಿನ ಅಲೆಗಳಂತಿರುವ ರೇಖಾಚಿತ್ರದಿಂದ ಚಿತ್ರಿಸಿದ ಸ್ವರದ ದೇವತೆಯು ಈ ನೀರಿನ ಅಲೆಗಳ ಮೇಲೆ ನಿಂತಂತೆ ಚಿತ್ರಿಸಲಾಗಿದೆ. ಈ ಸ್ವರದ ದೇವತೆಯು ಎರಡು ಕೈಗಳನ್ನು ಹೊಂದಿದ್ದು ನಾಟ್ಯದ ಭಂಗಿಯಲ್ಲಿರುವಂತೆ ಕಂಡುಬರುತ್ತದೆ. ಹಿನ್ನೆಯಲ್ಲಿ ಕೋಗಿಲೆ ಪಕ್ಷಿಯಿದ್ದು ಇದು ಹೆಣ್ಣು ಕೋಗಿಲೆಯಾಗಿದೆ. ಪ್ರಕೃತಿಯಲ್ಲಿ ಸಾಮಾನ್ಯವಾಗಿ ಗಂಡು ಕೋಗಿಲೆಯು ಕಪ್ಪು ಬಣ್ಣದ್ದಾಗಿರುತ್ತದೆ. ಹೆಣ್ಣು ಕೋಗಿಲೆಯು ಬೂದು ಬಣ್ಣದ್ದಾಗಿರುತ್ತದೆ. ಇಲ್ಲಿ ಚಿತ್ರಿಸಿರುವ ಕೋಗಿಲೆ ಹೆಣ್ಣು. ಇಂಪಾದ ಸ್ವರವನ್ನು ಹೊರಡಿಸುತ್ತದೆ. ಇಲ್ಲಿ ಹೆಣ್ಣು ಕೋಗಿಲೆಯನ್ನು ಚಿತ್ರಿಸಿದ್ದು ಮುಖ್ಯ ಆಕೃತಿಗೆ ಪೂರಕವಾಗಿದೆ. ತಲೆಯ ಮೇಲೆ ಕಿರೀಟ, ಇಳಿಬಿಟ್ಟ ಕೇಶರಾಶಿ, ಆಭರಣಗಳಿಂದ ಅಲಂಕೃತವಾದ ಈ ಸ್ವರದ ದೇವತೆಯನ್ನು ಚಿತ್ರಿಸಲಾಗಿದೆ.

---

೯೧. ಪಿ. ಶಾಮರಾವ್, ಭಾರತೀಯ ಕಲಾದರ್ಶನ ಪು.೧೩೫



ಧೈವತ ಸ್ವರ

ಧ - ಧೈವತ ಸ್ವರ

ಆಲಾಪ ಸಾದೃಶ್ಯ	:	ಕುದುರೆಯ ಹೇಷಾರವ
ವರ್ಣ	:	ಹಳದಿ
ರಸ	:	ಭೀಭತ್ಸ
ಸ್ಥಾನ	:	ಹಣೆ
ವಂಶ	:	ಉತ್ತಮವಂಶ
ದೇವತೆ	:	ನಾರದ

'ಧ' ದೇವಿಯ ಈ ಅವತಾರಕ್ಕೆ ಷಡ್ಬಾಹುಗಳು, ಮೇಘಚ್ಛಾಯೆಯು ರಕ್ತಾಂಬಗಳು ಇರುತ್ತವೆ. ಸುಂದರಿಯಾಗಿದ್ದು ಧರ್ಮಾರ್ಥ ಕಾಮ ಮೋಕ್ಷಗಳನ್ನು ಭಕ್ತರಿಗೆ ಪ್ರಸಾದಿಸುತ್ತಾ ಹಳದಿ ಮಿಂಚಿನಂತೆ ಹೊಳೆಯವಳು.[೯೨]

ಸಪ್ತಸ್ವರಗಳಲ್ಲಿ ಆರನೇಯದಾದ ಧೈವತ ಸ್ವರದ ದೇವಿಯು ಆರು ಕೈಗಳನ್ನು ಹೊಂದಿದ್ದು ರಕ್ತದಂತಹ ವರ್ಣದ ಉಡುಪನ್ನು ಧರಿಸಿರುತ್ತಾಳೆ ಮತ್ತು ಹಳದಿ ಈ ಸ್ವರದ ಬಣ್ಣವಾಗಿದೆ. ಈ ಸ್ವರವು ಕುದುರೆಯ ಹೇಷಾರವ ಶಬ್ದದಿಂದ ಹುಟ್ಟಿದೆ. ಈ ಸ್ವರದ ಸ್ಥಾನ ಹಣೆ. ಈ ಸ್ವರವು ಭಯಾನಕ ರಸವನ್ನುಂಟು ಮಾಡುತ್ತದೆ. ಈ ಕಲಾಕೃತಿಯ ಸಂಯೋಜನೆಯು ಪರಿಣಾಮಕಾರಿಯಾಗಿ ಮೂಡಿಬಂದಿದ್ದು, ರೇಖಾ ಪ್ರಾಧಾನ್ಯತೆ ಇಲ್ಲಿ ಕಂಡುಬರುತ್ತದೆ. ಸಂಯೋಜನೆ ಯಲ್ಲಿರುವ ಸ್ತ್ರೀ ದೇವತಾ ಆಕೃತಿಯು ಕೆಂಪು ಬಣ್ಣದ ಉಡುಪನ್ನು ತೊಟ್ಟಿದ್ದು. ಅವಕಾಶದ ಹಿನ್ನೆಯಲ್ಲಿ ಹಳದಿ ಬಣ್ಣ ಆವರಿಸಿಕೊಂಡಿದ್ದು ಈ ಬಣ್ಣ ಸ್ವರಕ್ಕೆ ಪೂರಕವಾಗಿ ಮೂಡಿಬಂದಿದ್ದು ಸಂಯೋಜನೆಯು ಇಲ್ಲಿ ಯಶಸ್ವಿಗೊಂಡಿದೆ ಎನ್ನಬಹುದು. ಹಿನ್ನೆಲೆಯಲ್ಲಿರುವ ಕೆನೆಯುತ್ತಿರುವ ಕುದುರೆಯ ಆಕೃತಿಯು ಆ ಆಕೃತಿಗೆ ಲೇಪಿಸಲಾದ ತಿಳಿಯಾದ ಬಿಳಿಬಣ್ಣ ಸ್ಫುಟವಾಗಿ ಎಳೆದಿರುವ ಹೊರ ರೇಖೆಯನ್ನು ಅತ್ಯಂತ ಸೂಕ್ಷ್ಮವಾಗಿ ನಾಜೂಕಾದ ಕುಂಚದಿಂದ ರೇಖೆಯನ್ನು ಎಳೆದಿರುವುದು ಪ್ರಬುದ್ಧ ಕಲಾವಿದನ ಪ್ರತಿಭೆಗೆ ಸಾಕ್ಷಿಯಾಗಿದೆ.

ನಿ - ನಿಷಾದ ಸ್ವರ

ಆಲಾಪ ಸಾದೃಶ್ಯ	:	ಆನೆಯ ಘೀಳಿಡುವಿಕೆ
ವರ್ಣ	:	ಕಪ್ಪು
ರಸ	:	ಭಯಾನಕ

೯೨. ಪಿ. ಶಾಮರಾವ್, ಭಾರತೀಯ ಕಲಾದರ್ಶನ ಪು.೧೩೫



ನಿಷಾದ ಸ್ವರ

ಸ್ಥಾನ	:	ಗಂಟಲಿನ ಮೇಲ್ಭಾಗ
ವಂಶ	:	ಅಸುರ ವಂಶ
ದೇವತೆ	:	ತುಂಬಿದ ಸೂರ್ಯ


'ನಿ' ಕೋಟಿ ಮಿಂಚುಗಳ ಹೊಳಪನ್ನು ಹೊಂದಿದ ಈ ಅವತಾರಕ್ಕೆ ದಳಿತಾಂಜನದ ಕಪ್ಪು ಬಣ್ಣದ ದೇಹವಿರುತ್ತದೆ. ಜೋಲಾಡುವ ನಾಲಿಗೆಯು, ಚತುರ್ಬಾಹುಗಳು, ಸುಂದರವಾದ ಕಣ್ಣುಗಳು, ಇವಳಿಗೆ ಇರುತ್ತವೆ. ಇವಳ ದೇಹವು ಕಪ್ಪುಬಣ್ಣದ ಚಾರುಚಂದನದಿಂದ ಬಳಿಯಲಾಗಿದೆ. ಇವಳು ಕಪ್ಪು ಬಣ್ಣದ ಪೀತಾಂಬರಗಳನ್ನು ಧರಿಸಿರುವಳು. ಮೇಘಕಾಂತಿಯ ನೀಲ ಬಣ್ಣದ್ದು ಇವಳ ಸುಂದರ ಮುಖವು[೯೩] ಎಂಬ ವಿಶ್ಲೇಷಣೆಯಿರುವ ಈ ಸ್ವರದ ಕುರಿತು ರಚಿಸಲಾದ ಈ ಕಲಾಕೃತಿ ಸ್ವರವು ನಿಷಾದವಾಗಿದೆ. ಆನೆಯ ಘೀಳಿಡುವ ಸ್ವರದಿಂದ ಪಡೆಯಲಾಗಿದೆ. ಈ ಸ್ವರದ ಬಣ್ಣ ಕಪ್ಪು. ಸ್ವರದ ಸ್ಥಾನ ಗಂಟಲು, ಇದು ಭಯಾನಕ ರಸವನ್ನುಂಟುಮಾಡುವ ಈ ಕಲಾಕೃತಿ ಯಲ್ಲಿರುವ ಸ್ತ್ರೀ ದೇವತಾ ಆಕೃತಿಯು ನಾಲ್ಕು ಕೈಗಳನ್ನು ಹೊಂದಿದ್ದು ನೀರಿನ ಅಲೆಯ ಮೇಲೆ ನಿಂತಂತೆ ಚಿತ್ರಿಸಲಾಗಿದೆ. ಹಿನ್ನೆಲೆಯಲ್ಲಿ ಆನೆಯನ್ನು ರೇಖೆಗಳ ಮುಖಾಂತರ ಅದ್ಭುತ ಪರಿಣಾಮಕಾರಿ ಯಾಗಿ ಚಿತ್ರಿಸಲಾಗಿದೆ. ಸ್ತ್ರೀ ದೇವತಾ ಆಕೃತಿಯು ಗಾಢವಾದ ಕಪ್ಪು ಬಣ್ಣದಿಂದ ಆಕರ್ಷಣೀಯ ವಾಗಿ ಮೂಡಿ ಬಂದಿದೆ. ಹರಡಿಕೊಂಡಿರುವ ಕೂದಲು ಜೊತುಬಿದ್ದ ನಾಲಿಗೆ, ಕಪ್ಪುಬಣ್ಣ ಈ ಎಲ್ಲಾ ಅಂಶಗಳು ರಾಕ್ಷಸರೂಪವನ್ನು ತೋರಿಸುವಂತಿದ್ದು ಭಯಾನಕತೆಯನ್ನುಂಟು ಮಾಡುತ್ತದೆ.

ನಾದಲೋಲೆ ಸಂಗೀತ ಸರಸ್ವತಿ

ಈ ಕಲಾಕೃತಿಯ ಕೇಂದ್ರದಲ್ಲಿ ದೇವಿ ಸರಸ್ವತಿಯಿದ್ದು ಬಿಳಿ ಕಮಲದ ಹೂವು ಅವಳ ಆಸನವಾಗಿದೆ. ಈ ಚಿತ್ರದ ಸರಸ್ವತಿ ಚಿತ್ರ ಜೀವಕಳೆಯಿಂದ ತುಂಬಿದೆ. ಈ ಕೃತಿಯ ಸಂಯೋಜನೆಯು ಆಸಕ್ತಿಕರವಾಗಿದೆ. ಪ್ರಮುಖ ಆಕಾರದೊಂದಿಗೆ ಚಿಕ್ಕ ಚಿಕ್ಕ ಆಕೃತಿಗಳು ಇಲ್ಲಿ ಸಂಯೋಜನೆಗೊಂಡಿದೆ. ಸರಸ್ವತಿಯನ್ನು ಮಾಲಾಕಾರದಲ್ಲಿ ಅಲಂಕರಿಸಿದ ತಾಳ ಪುರುಷರು ಇದ್ದು, ಅವು ದಾದರ ತಾಲ, ರೂಪಕ ತಾಲ, ಕೆಹರವಾ ತಾಲ, ಝುಪ ತಾಲ, ರೂಪಕ ತಾಲ, ಚೌತಾಲ ಮತ್ತು ತೀನ ತಾಲವಾಗಿವೆ. ಅಲ್ಲದೇ ಕೆಳ ಭಾಗದಲ್ಲಿ ಸಪ್ತಸ್ವರ ದೇವತೆಗಳ ಆಕೃತಿಗಳು ಇದ್ದು, ಅವು ಸ ರಿ ಗ ಮ ಪ ದ ನಿ ಎಂಬ ಸ್ವರಗಳಾಗಿವೆ. ಅಗ್ರಸ್ಥಾನದಲ್ಲಿ ಪರಮಾನಂದ ಸ್ವರೂಪದ ಹಂಸ ವಿರಾಜಿಸಿದೆ. ಈ ಸಂಯೋಜನೆಯಲ್ಲಿರುವ ಎಲ್ಲಾ ಆಕೃತಿಗಳು ಅವರ ಅವರ ಸ್ಥಾನದಲ್ಲಿ ವಿರಾಜಿಸಿದ್ದು ಅವರದೇ ಆದ ವರ್ಣ ಮತ್ತು ಆಕಾರಗಳನ್ನು ಹೊಂದಿದ್ದು ಹಿನ್ನೆಲೆಯಲ್ಲಿ ತೆಳುವಾದ

---

೯೩. ಪಿ. ಶಾಮರಾವ್, ಭಾರತೀಯ ಕಲಾದರ್ಶನ ಪು.೧೩೫





ಸಂಗೀತ ಸರಸ್ವತಿ

ವರ್ಣವನ್ನು ಲೇಪಿಸಲಾಗಿದೆ. ಈ ಕಲಾಕೃತಿಯು ತೈಲವರ್ಣದಿಂದ ಮಾಡಲಾಗಿದೆ. ಇಲ್ಲಿರುವ ಎಲ್ಲಾ ಆಕಾರಗಳು ಒಂದಕ್ಕೊಂದು ಪೂರಕವಾಗಿದ್ದು ಸಂಗೀತ ಲೋಕವೊಂದನ್ನು ತೆರೆದಿಟ್ಟಂತೆ ಚಿತ್ರವನ್ನು ಸಂಯೋಜಿಸಲಾಗಿದೆ.

ಕಾಳೆಯವರು ಚಿತ್ರಿಸಿದ ಉಷಾ, ದಿವಾ, ಸಂಧ್ಯಾ ಹಾಗೂ ನಿಶಾ ಎಂಬ ದಿನದ ನಾಲ್ಕು ಪ್ರಹರಗಳನ್ನು ಪ್ರತಿನಿಧಿಸುವ ಭಾವಸುಂದರಿಯರ ತೈಲಚಿತ್ರಗಳು ಯಾರನ್ನಾದರೂ ಮೂಕವಿಸ್ಮಿತಗೊಳಿಸುವಂಥವು. ಈ ಚಿತ್ರಗಳಲ್ಲಿ ಕಾಳೆಯವರು ಸಮಯ ಭಾವ ಪ್ರಜ್ಞೆಯೊಂದಿಗೆ ಬಣ್ಣ ಬೆರಸಿ ತಮ್ಮ ಅಪೂರ್ವ ಕಲಾಪ್ರೌಢಿಮೆಯನ್ನು ಮೆರೆದಿದ್ದಾರೆ.[೯೪]

---

೯೪. ಗುರುನಾಥ ಇನಾಮದಾರ, ತರಂಗ, (ಮಾಸಪತ್ರಿಕೆ) ೧೯೯೮, ಪು. ೬೮

ದಿನದ ನಾಲ್ಕು ಪ್ರಹರಗಳ ಕಲಾಕೃತಿಗಳು

ಕಾಳೆಯವರು ಈ ಸರಣಿ ಸಂಯೋಜನಾ ಕಲಾಕೃತಿಗಳು ಉತ್ಕೃಷ್ಟ ಕಲಾಪ್ರೌಢಿಮೆಯ ಮಾದರಿ ಎನ್ನಬಹುದಾಗಿದೆ. ಇಲ್ಲಿ ಅವರ ಪ್ರತಿಭೆ, ಕಲಾವಂತಿಕೆ, ಸೌಂದರ್ಯ ಪ್ರಜ್ಞೆ, ಕೆಲಸ ಮಾಡಿದೆ. ಈ ಕಲಾಕೃತಿಗಳು ಭಾರತೀಯ ಅಂತಃಸತ್ವದಿಂದ ಒಡಮೂಡಿವೆ, ಮತ್ತು ಕಲಾವಿದರ ಅಂತಃಕರಣದಿಂದ ಅತ್ಯಂತ ಪರಿಣಾಮಕಾರಿಯಾಗಿ ಮೂಡಿಬಂದಿದೆ ಎನ್ನಬಹುದು. ಈ ಕಲಾಕೃತಿಗಳು ಜಲವರ್ಣ ವಾಷ್‌ತಂತ್ರದಲ್ಲಿ ಮತ್ತು ತೈಲವರ್ಣದಲ್ಲಿ ಮೂಡಿಬಂದಿದ್ದು ಚಿತ್ರಿತ ವಿಷಯ ವಸ್ತುವು ಭಿನ್ನವಾಗಿದೆ. ಕಲಾಕೃತಿಯಲ್ಲಿರುವ ವಸ್ತುವಿನ ನಿರೂಪಣೆ ಕೂಡಾ ಅಷ್ಟೇ ಭಿನ್ನವಾಗಿ ಪರಿಣಾಮಕಾರಿಯಾಗಿ ಚಿತ್ರಗಳು ಸಂಯೋಜನೆಗೊಂಡಿದೆ. ಈ ಎಲ್ಲಾ ಕಲಾಕೃತಿಗಳು ಬಂಗಾಲ ಕಲಾಶೈಲಿ ಪ್ರಭಾವದಿಂದ ಒಡಮೂಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆಯಾದರೂ ಶೈಲಿಯಲ್ಲಿ ಕಲಾವಿದರ ಸ್ವಂತಿಕೆಯನ್ನು ಗುರುತಿಸಬಹುದಾಗಿದೆ.

ದಿನದ ನಾಲ್ಕು ಪ್ರಹರಗಳ ಸಮಯವನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ.

೧. ೬ ರಿಂದ ೯ ಗಂಟೆಯವರೆಗೆ (೩ ತಾಸು) ಪ್ರಾತಃಕಾಲ (ಉಷಾ)

೨. ೯ ರಿಂದ ೧೨ ಗಂಟೆಯವರೆಗೆ (೩ ತಾಸು) ಹಗಲು (ದಿವಾ)

೩. ೩ ರಿಂದ ೬ ಗಂಟೆಯವರೆಗೆ (೩ ತಾಸು) ಸಾಯಂಕಾಲ, ಮುಂಜಾನೆ (ಸಂಧ್ಯಾ)

೪. ೯ ರಿಂದ ೧೨ ಗಂಟೆಯವರೆಗೆ (೩ ತಾಸು) ರಾತ್ರಿ (ನಿಶಾ)[೯೫]

ಈ ಪ್ರಹರಗಳ ಆಧಾರದ ಮೇಲೆ ಕಾಳೆಯವರು ನಾಲ್ಕು ಕಲಾಕೃತಿಗಳನ್ನು ಆಯಾ ಸಮಯಕ್ಕೆ ಅನುಸಾರವಾಗಿ, ಆ ಸಮಯದಲ್ಲಿ ನಡೆಯುವ ಕಾರ್ಯಗಳ್ನು ಪ್ರತಿಬಿಂಬಿಸುವಂತೆ ಚಿತ್ರ ರಚಿಸಿದ್ದು, ಚಿತ್ರಗಳಲ್ಲಿ ಲಯಾತ್ಮಕತೆಯಿದೆ. ವರ್ಣ ಸಮ್ಮಿಳತವಿದೆ. ಅತ್ಯಂತ ತಂಪು ಬಣ್ಣಗಳನ್ನು ಉಪಯೋಗಿಸಿದ್ದು ಮುಖ್ಯ ಆಕೃತಿಗೆ ಧಕ್ಕೆ ಬಾರದಂತೆ ಹಿನ್ನೆಲೆಯಲ್ಲಿ ತೆಳು ಬಣ್ಣವನ್ನು ಲೇಪಿಸಿ ಸಂಯೋಜಿಸಿದ್ದಾರೆ.

ಈ ಎಲ್ಲಾ ಕಲಾಕೃತಿಗಳಲ್ಲಿ ರೇಖೆಗಳೇ ಪ್ರಮುಖವಾಗಿ ಕಂಡುಬರುತ್ತಿದ್ದು ಬಂಗಾಲಿ ಕಲಾಶೈಲಿಯ ಛಾಪು, ಭಾವಗೀತಾತ್ಮಕತೆ ಇಲ್ಲಿ ಮುಖ್ಯವಾಗಿ ಕಂಡುಬರುತ್ತದೆ. ಈ ಎಲ್ಲಾ ಕಲಾಕೃತಿಗಳಲ್ಲಿಯ ಆಕೃತಿಗಳು ಆಯಾ ಸಮಯವನ್ನು ಪ್ರತಿಬಿಂಬಿಸುವಂತಿದೆ. ಅಲ್ಲದರಲ್ಲೇ

---

೯೫. ಡಾ. ಹನುಮಣ್ಣನಾಯಕ ದೊರೆ, ರಾಗ ದೀಪಿಕೆ ಹಿಂದೂಸ್ಥಾನಿ ರಾಗ ಮತ್ತು ಚೀಜುಗಳ ಗ್ರಂಥ, ಪು.೨೫೯






ಉಷಾ (ಉಷಃಕಾಲ)



ದಿವಾ (ಹಗಲು)





ಸಂಧ್ಯಾ (ಸಂದಿಕಾಲ)





ನಿಶಾ(ರಾತ್ರಿ)

ಅದ್ಭುತ ಅರ್ಥಗಳನ್ನು ಕಟ್ಟಿಕೊಡುತ್ತವೆ ಈ ಕಲಾಕೃತಿಗಳು. ಇಲ್ಲಿ ಕಲಾವಿದರ ಸೌಂದರ್ಯ ಪ್ರಜ್ಞೆಯು ಕೆಲಸ ಮಾಡಿದೆ. ಈ ಕಲಾಕೃತಿಗಳ ಪರಿಕಲ್ಪನೆಯನ್ನು ಈ ರೀತಿಯಾಗಿ ವಿವರಿಸಲಾಗಿದೆ.

ಉಷಃಕಾಲ (ಮುಂಜಾನೆಯ ಮೊದಲು ೬-೯ ಗಂಟೆಯ ಕಾಲ)

ಇದು ಸೂರ್ಯ ಹುಟ್ಟುವ ಮುಂಚಿನ ಸಮಯ. ಸೂರ್ಯ ಹುಟ್ಟುವ ಮೊದಲು ಒಂದು ತೆರನಾದ ಕೇಸರಿ ವರ್ಣ ಎಲ್ಲಡೆ ವ್ಯಾಪಿಸಿರುತ್ತದೆ. ಇದು ಇಡೀ ಜಗತ್ತೇ ಹಾಸಿಗೆ ಬಿಟ್ಟು ಮೈಗೊಡವಿ ಎದ್ದೇಳುವ ಸಮಯ.[೯೬] ಈ ಕಲಾಕೃತಿಯಲ್ಲಿ ಮುಖ್ಯ ಆಕೃತಿಯಾದ ಸ್ತ್ರೀಯೊಬ್ಬಳು ಅದೇ ತಾನೇ ಹಾಸಿಗೆಯಿಂದ ಮೈ ಮುರಿದು ಏಳುವಂತೆ ಚಿತ್ರಿಸಲಾಗಿದೆ. ಹಿನ್ನೆಲೆಯಲ್ಲಿ ಕೇಸರಿ ವರ್ಣ ವ್ಯಾಪಿಸಿದ್ದು, ಇದು ಪ್ರಾತಃಕಾಲದ ಕಲ್ಪನೆ ಬರುವಂತೆ ಸಂಯೋಜನೆಗೊಂಡಿದ್ದು ಈ ಪ್ರಾತಃಕಾಲದ ಸಮಯವೇ ಅವಳಾಗಿದ್ದಾಳೆ. ಬಣ್ಣಗಳ ಸಮ್ಮಿಳಿತ, ಸ್ಫುಟವಾದ ರೇಖೆಗಳು ಆಕೃತಿಯ ಭಾವ ಭಂಗಿ ಲಯಾತ್ಮಕತೆಯಿಂದ ಕೂಡಿದ್ದು ಹಿನ್ನೆಲೆಗೂ ಮುನ್ನಲೆಯಲ್ಲಿರುವ ಆಕೃತಿಯ ಮಧ್ಯೆ ಸಮತೋಲನ ಇಲ್ಲಿ ಕಂಡುಬರುತ್ತದೆ.

ದಿವಾ (ಹಗಲು ಕಾಲ)

'ದಿವಾ' ಎಂದರೆ ಹಗಲು ಹೊತ್ತು. ಪ್ರತಿಯೊಬ್ಬರ ದಿನದ ಚರಿತ್ರೆ ಪ್ರಾರಂಭವಾಗುವ ಸಮಯ. ಪ್ರತಿ ಬೆಳಗು; ಹೊಸ ಜನ್ಮ. ಜೀವನವನ್ನು ಪುನಃ ಪ್ರಾರಂಭಿಸುವ ಸಮಯ. ಹೀಗೆ ಇಲ್ಲಿ ದಿವಾ ಸಮಯವನ್ನು ಪ್ರತಿನಿಧಿಸುವ ಸ್ತ್ರೀಯೊಬ್ಬಳು ಜೀವನ ಚರಿತ್ರೆಯನ್ನು ಬರೆಯುತ್ತಿದ್ದಾಳೆ.[೯೭] ಈ ಕಲಾಕೃತಿಯು ಅತ್ಯಾಕರ್ಷಕವಾಗಿ ಮೂಡಿಬಂದಿದ್ದು ಪ್ರಾತಃ ಸಮಯ ಸರಿದು ಬೆಳಕು ಸ್ಪಷ್ಟವಾಗಿ ಪಸರಿಸಿದ್ದುದನ್ನು ಸ್ಪಷ್ಟವಾಗಿ ಮೂಡಿಸಿದ್ದಾರೆ. ಕಲಾವಿದರು ಇಲ್ಲಿರುವ ಸ್ತ್ರೀ ಆಕೃತಿಯಲ್ಲಿರುವ ಲಯಾತ್ಮಕ ಭಂಗಿಯು ಕಲಾವಿದರ ಕಲಾವಂತಿಕೆ ಕಲಾ ಪ್ರಜ್ಞೆ ಯಶಸ್ವಿಯಾಗಿ ಕೆಲಸ ಮಾಡಿದೆ. ಬಣ್ಣಗಳ ಸಮ್ಮಿಳಿತದ ಕಣ್ಣಿಗೆ ಹಿತಕರವಾಗಿದೆ. ಬಣ್ಣಗಳ ನಾಜೂಕುತನ ಇಲ್ಲಿ ಪ್ರಮುಖವಾಗಿ ಕಂಡುಬರುತ್ತದೆ. ಇಲ್ಲಿರುವ ರೇಖೆಗಳು ಅದ್ಭುತ ಪರಿಣಾಮವನ್ನುಂಟು ಮಾಡುತ್ತವೆ. ಅಲ್ಲದೇ ಸುಲಲಿತವಾಗಿ ಹರಿದಾಡಿವೆ. ಈ ಕಲಾಕೃತಿಯು ಬಂಗಾಳ ಕಲಾಶೈಲಿಯನ್ನು ಸ್ಫುಟವಾಗಿ ಎತ್ತಿ ತೋರಿಸುತ್ತದೆ.

ಸಂಧ್ಯಾ (ಸಂದಿಕಾಲ)

'ಸಂಧ್ಯಾಕಾಲ' ದಿನದ ಎರಡು ಸಂದರ್ಭದಲ್ಲಿ ಈ ಸಮಯ ಬರುತ್ತದೆ. ಸೂರ್ಯೋದಯದ ಮೊದಲು ಮತ್ತು ಸೂರ್ಯಾಸ್ತದ ನಂತರದ ಕಾಲವನ್ನು ಸಂಧ್ಯಾಕಾಲ ಎನ್ನಲಾಗುತ್ತದೆ. ಇದನ್ನು

---

೯೬. ವಿ.ಟಿ. ಕಾಳೆಯವರೊಂದಿಗೆ ಸಂದರ್ಶನ ದಿನಾಂಕ ೧೭.೨.೨೦೦೯

೯೭. ವಿ.ಟಿ. ಕಾಳೆಯವರೊಂದಿಗೆ ಸಂದರ್ಶನ ದಿನಾಂಕ ೧೭.೨.೨೦೦೯

ಸಂಧಿಕಾಲವೆಂತಲೂ ಕರೆಯಲಾಗುತ್ತದೆ. ಕಾರಣ ಆ ಸಮಯದಲ್ಲಿ ಸಾಕಷ್ಟು ಬೆಳಕು ಇರುವುದಿಲ್ಲ, ಸಾಕಷ್ಟು ಕತ್ತಲೂ ಕೂಡಾ ಇರುವುದಿಲ್ಲ."[೯೮] ಒಟ್ಟಿನಲ್ಲಿ ಹಗಲು ಮತ್ತು ರಾತ್ರಿಯ ಮಧ್ಯದ ಕಾಲ ಇದಾಗಿದೆ. ಈ ಸಂಧ್ಯಾಕಾಲದ ಸಂದರ್ಭವನ್ನು ಕಾಳೆಯವರು ತಮ್ಮ ಕಲ್ಪನೆಯಲ್ಲಿ ಸೆರೆಹಿಡಿದಿದ್ದಾರೆ. ಇಲ್ಲೆಲ್ಲಾ ತಂಪುವರ್ಣಗಳಿದ್ದು, ಸಂಧ್ಯಾಕಾಲದ ಪರಿಸರವನ್ನು ಅತ್ಯಂತ ಯಶಸ್ವಿಯಾಗಿ ಸೆರೆಹಿಡಿದಿದ್ದಾರೆ. ಈ ಕಲಾಕೃತಿಯಲ್ಲಿ ಅರ್ಧಭಾಗ ಕತ್ತಲು ಆವರಿಸಿಕೊಂಡಿದ್ದರೆ, ಇನ್ನು ಅರ್ಧಭಾಗ ಬೆಳಕು ಆವರಿಸಿಕೊಂಡಿದೆ. ಇದರಿಂದ ಸಂಧ್ಯಾಕಾಲದ ಪೂರ್ಣಪ್ರಮಾಣದ ರೂಪರೇಷೆಗಳು ಇಲ್ಲಿ ಯಶಸ್ವಿಯಾಗಿ ಮೂಡಿಬಂದಿದೆ.

ನಿಶಾ (ರಾತ್ರಿ)

'ನಿಶಾ' ಇದು ರಾತ್ರಿ ವಿಶ್ರಾಂತಿ ಪಡೆಯುವ ಸಮಯವಾಗಿದೆ. ಈ ಸಮಯ ಸಂದರ್ಭ ಕಾಲವನ್ನು ಪೂರ್ಣ ಪ್ರಮಾಣದಲ್ಲಿ ಪ್ರತಿಬಿಂಬಿಸುವಂತೆ ಇಲ್ಲಿರುವ ಸ್ತ್ರೀ ಆಕೃತಿಯು ಮೂಡಿ ಬಂದಿದೆ. ರಾತ್ರಿಯ ಸಂದರ್ಭದಲ್ಲಿ ವಿಶ್ರಾಂತಿ ಪಡೆಯಲು ಅವಳು ತನ್ನ ಉಡುಪನ್ನು ಬದಲಾಯಿಸುವ ನಿಟ್ಟಿನಲ್ಲಿ ನಿರತಳಾಗಿದ್ದಾಳೆ. ವೀಕ್ಷಕರಿಗೆ ಬೆನ್ನು ತೋರಿಸಿ ನಿಂತಿರುವ ಭಂಗಿ ಪ್ರಮಾಣಬದ್ಧತೆಯಿಂದ ಕೂಡಿದ್ದು ಅತ್ಯಾಕರ್ಷಕವಾಗಿದೆ. ಬೂದು ಮತ್ತು ಕಪ್ಪು ವರ್ಣವು ಇಲ್ಲಿ ಪ್ರಮುಖವಾಗಿ ಕಂಡುಬರುತ್ತಿದ್ದು ರಾತ್ರಿಯ ಸಮಯವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರವನ್ನು ಸಂಯೋಜಿಸಲಾಗಿದೆ. ಮಬ್ಬುಗತ್ತಲು ಇಡೀ ಕಲಾಕೃತಿಯನ್ನು ಆವರಿಸಿದಂತೆ ಕಂಡುಬರುತ್ತಿದ್ದು ಸ್ತ್ರೀ ಆಕೃತಿಯು ಹಿನ್ನೆಲೆಯಿಂದ ಸ್ಫುಟವಾಗಿ ಕಾಣಿಸುತ್ತಿದೆ. ಗಾಢವರ್ಣದಿಂದ ಮೇಲು ಹೋದಂತೆ ಬೂದು ಬಣ್ಣದ ತೆಳುವರ್ಣವಿದ್ದು ಈ ಕಲಾಕೃತಿಯಲ್ಲಿ ಬಣ್ಣಗಳ ಸಮತೋಲನ ಉತ್ಕೃಷ್ಟಮಟ್ಟದಲ್ಲಿದೆ ಎಂಬುದನ್ನು ಮನಗಾಣಬಹುದಾಗಿದೆ. ಇಲ್ಲಿ ಬಣ್ಣಗಳು ಕಣ್ಣಿಗೆ ತಂಪನ್ನು ನೀಡುವಂತೆ ಕಂಡುಬರುತ್ತವೆ.

---

೯೮. ವಿ.ಟಿ. ಕಾಳೆಯವರೊಂದಿಗೆ ಸಂದರ್ಶನ ದಿನಾಂಕ ೧೭.೨.೨೦೦೯

ದೇವತಾ ಚಿತ್ರಗಳು

ಕಾಳೆಯವರು ಅನೇಕ ದೇವತೆಗಳ ಸರಣಿ ಚಿತ್ರಗಳನ್ನು ಜಲವರ್ಣ ಮಾಧ್ಯಮದಲ್ಲಿ ವಾಷ್ ತಂತ್ರವನ್ನು ಉಪಯೋಗಿಸಿ ಅಪೂರ್ವ ಎನ್ನಿಸುವಂತಹ ಕಲಾಕೃತಿಗಳನ್ನು ರಚಿಸಿದ್ದಾರೆ.ಅವು ಪುರುಷ ದೇವತೆಗಳು ಮತ್ತು ಸ್ತ್ರೀ ದೇವತೆಗಳ ಚಿತ್ರಗಳಾಗಿವೆ. ಈ ದೇವತೆಗಳ ಚಿತ್ರಗಳ ಹಿನ್ನೆಲೆಯಲ್ಲಿ ಪುರಾಣಗಳ ಕುರಿತು ಆಳವಾದ ಅಧ್ಯಯನ ಕಾಳೆಯವರಲ್ಲಿ ಕಂಡುಬರುತ್ತದೆ. ಅಲ್ಲದೇ ಕಾಳೆಯವರು ಹೇಳುವಂತೆ ಮೈಸೂರು ಶೈಲಿಯ ಪ್ರಭಾವ ಈ ಕಲಾಕೃತಿಗಳಲ್ಲಿ ಕಂಡುಬರುತ್ತದೆ. ಕಾಳೆಯವರು ರಚಿಸಿದ ಪೌರಾಣಿಕ ದೇವತೆಗಳೆಲ್ಲಾ ವೇದಕಾಲದ ದೇವತೆಗಳಾಗಿವೆ. (ವೇದಿಕ ಗಾಡ್ಸ್) ಅವು ವರುಣ, ಅಗ್ನಿ, ವಾಯು, ಇಂದ್ರ, ಸೂರ್ಯ ಇವು ಪುರುಷ ದೇವತೆಗಳಾದರೆ, ಇಂದ್ರಾಣಿ, ಬ್ರಾಹ್ಮಿ (ಐಂದ್ರಿ), ವೈಷ್ಣವಿ, ಕೌಮಾರಿ, ಮಹೇಶ್ವರಿ, ಚಂಡಿ, ನರಸಿಂಹಿ, ಇವು ಸ್ತ್ರೀ ದೇವತೆಗಳಾಗಿವೆ. ಈ ದೇವತೆಗಳನ್ನು 'ಸಪ್ತಮಾತೃಕೆಯರು' ಎಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ಎಲ್ಲಾ ದೇವಾಲಯಗಳ ಪ್ರವೇಶದ್ವಾರದಲ್ಲಿ ಈ ಸಪ್ತಮಾತೃಕೆಯರ ಮೂರ್ತಿಗಳನ್ನು ಕಾಣಬಹುದಾಗಿದೆ.

ಈ ದೇವತೆಗಳ ಕುರಿತು ಕಾಳೆಯವರು ಹೇಳುವಂತೆ "ಪುರಾಣ ಆಧಾರಿತ ವೇದಕಾಲದ ದೇವತೆಗಳನ್ನು ಚಿತ್ರಿಸಬೇಕೆಂದು ಪುರಾಣಕ್ಕೆ ಸಂಬಂಧಿಸಿದ ಪುಸ್ತಕಗಳ ಅಧ್ಯಯನ ಮಾಡಿದೆ. ಹಲವು ಮೂರ್ತಿಶಿಲ್ಪಗಳನ್ನು ಅಭ್ಯಸಿಸಿದೆ. ನಂತರವೇ ಈ ವೇದಕಾಲದ ದೇವತೆಗಳ ಚಿತ್ರಗಳು ಮೂಡಿಬರಲು ಸಾಧ್ಯವಾಯಿತು" ಎಂದು ಹೇಳುತ್ತಾರೆ. ಕಾಳೆಯವರು ಸಂಡೂರು ರೆಸಿಡೆನ್ಸಿ ಶಾಲೆಯಲ್ಲಿ ಶಿಕ್ಷಕರಾಗಿದ್ದಾಗ ಅಲ್ಲಿರುವ ಪುರಾಣಗಳ ಕುರಿತಾದ ಪುಸ್ತಕಗಳ ಆಳವಾದ ಅಧ್ಯಯನವೇ ಪುರಾಣ ದೇವತೆಗಳ ಕುರಿತು ಸ್ಪಷ್ಟವಾದ ಕಲ್ಪನೆ ಮೂಡಿಬರಲು ಸಾಧ್ಯವಾಯಿತು.

ಕಾಳೆಯವರ ಈ ದೇವತಾ ಚಿತ್ರಗಳಲ್ಲಿ ಮಾತ್ರ ಮೈಸೂರು ಶೈಲಿಯ ಪ್ರಭಾವವು ಕಂಡು ಬರುತ್ತದೆ. ಉಡುಪುಗಳು ಆಭರಣಗಳ ರಚನೆಯಲ್ಲಿ ಹೊಯ್ಸಳ ಶಿಲ್ಪ ಕಲಾ ಶೈಲಿಯಲ್ಲಿ ಬರುವ ಆಭರಣಗಳು, ಉಡುಪುಗಳು ಕೂಡಾ ಕಾಳೆಯವರನ್ನು ಪ್ರಭಾವಿಸಿದೆ. ಆದರೂ ಈ ಕಲಾಕೃತಿಗಳಲ್ಲಿ ಕಾಳೆಯವರ ವೈಯಕ್ತಿಕ ಛಾಪು ಕಂಡುಬರುತ್ತದೆ ಎನ್ನಬಹುದು.

ಪುರುಷ ದೇವತಾ ಚಿತ್ರಗಳು

ದೇವತಾ ಚಿತ್ರಗಳಲ್ಲಿ ಬರುವ ಎಲ್ಲಾ ಪ್ರಧಾನ ಪುರುಷ ದೇವತೆಗಳಾದ ವರುಣ, ಸೂರ್ಯ, ವಾಯು, ಇಂದ್ರ, ಅಗ್ನಿ ಇವೆಲ್ಲಾ ಆಯಾ ದೇವತೆಗಳು ತಮ್ಮ ತಮ್ಮ ವಾಹನಗಳ ಜೊತೆ ಚಿತ್ರಿತಗೊಂಡಿದ್ದಾರೆ. ಅವು ಕ್ರಮವಾಗಿ




ವರುಣ ದೇವ



ಸೂರ್ಯ ದೇವ



ವಾಯು ದೇವ



ಇಂದ್ರ ದೇವ





ಅಗ್ನಿ ದೇವ

ವರುಣ ದೇವತೆಯ ವಾಹನ	- ನಾಲ್ಕು ಹಂಸಗಳು
ಸೂರ್ಯ ದೇವತೆಯ ವಾಹನ	- ಏಳು ಕುದುರೆಗಳು
ವಾಯು ದೇವತೆಯ ವಾಹನ	- ಎರಡು ಕುದರೆಗಳು
ಇಂದ್ರ ದೇವತೆಯ ವಾಹನ	- ಆನೆ
ಅಗ್ನಿ ದೇವತೆಯ ವಾಹನ	- ಟಗರು

ವರುಣ ದೇವತೆ

೧೯೯೮ರಲ್ಲಿ ವಾಷ್ ತಂತ್ರದಲ್ಲಿ ಚಿತ್ರಿಸಲಾದ ವರುಣ ದೇವತಾ ಚಿತ್ರವು ಇವರ ದೇವತಾ ಚಿತ್ರಗಳಲ್ಲಿ ಗಮನಸೆಳೆಯುವ ಉತ್ತಮ ಕೃತಿ. ನಾಲ್ಕು ಹಂಸಗಳನ್ನು ಹೂಡಿದ ರಥದಲ್ಲಿ ಕುಳಿತು ಪಯಣಿ ಸುತ್ತಿರುವ ವರುಣ ದೇವನು ನಾಲ್ಕು ಕೈಗಳನ್ನು ಹೊಂದಿ ಶಂಖ, ಚಕ್ರ, ಕಮಲ ಮತ್ತು ಕಳಸವನ್ನು ಹಿಡಿದುಕೊಂಡು ಪದ್ಮಾಸನದಲ್ಲಿ ಕುಳಿತಿದ್ದಾನೆ. ಇಲ್ಲಿಯ ಆಕರ್ಷಕ ಭಂಗಿ, ದೇವತೆಯ ಮುಖದಲ್ಲಿ ಮಂದಸ್ಮಿತ ನಗು, ದೈವತ್ವದ ಕಳೆ ಅಲ್ಲದೆ ಚಿತ್ರದ ಶಾಸ್ತ್ರೋಕ್ತ ಪ್ರಮಾಣ, ತಾಳಮಾನಗಳು ಕಾಳೆಯವರ ಕಲಾ ಪ್ರಬುದ್ಧತೆಯನ್ನು ತೋರಿಸಿ ಕೊಡುತ್ತದೆ. ಇಲ್ಲೆಲ್ಲಾ ದಕ್ಷಿಣದ ಭಾರತದ ಚಿತ್ರಗಳಲ್ಲಿನ ಅಲಂಕಾರ ಶೈಲಿ ಕಂಡುಬರುತ್ತದೆಯಾದರೂ ತಂತ್ರಗಾರಿಕೆ ಮಾತ್ರ ಬಂಗಾಲ ಕಲಾ ಶೈಲಿಯಲ್ಲಿ ಬರುವ ವಾಷ್‌ತಂತ್ರವನ್ನು ಇಲ್ಲಿ ಅಳವಡಿಸಲಾಗಿದೆ.

ಸೂರ್ಯ ದೇವತೆ

ಸೂರ್ಯ ದೇವತಾ ಚಿತ್ರದಲ್ಲಿ ಸೂರ್ಯನ ಪ್ರತಿರೂಪದಂತಿರುವ ದೇವತೆಯು ಏಳು ವರ್ಣಗಳಲ್ಲಿರುವ ಏಳು ಕುದುರೆಗಳನ್ನೊಳಗೊಂಡ ರಥದ ಮೇಲೆ ಪ್ರಯಾಣಿಸುತ್ತಿದ್ದಾನೆ. ಈ ಏಳು ಕುದುರೆಗಳು ಸೂರ್ಯನ ಕಿರಣಗಳನ್ನು ಅಥವಾ ಕಾಮನಬಿಲ್ಲಿನಲ್ಲಿರುವ ಏಳು ಬಣ್ಣಗಳನ್ನು ಪ್ರತಿನಿಧಿಸುವಂತಿದೆ. ಸೂರ್ಯ ದೇವನು ಪದ್ಮಾಸನದಲ್ಲಿ ಕುಳಿತಿದ್ದು ಎರಡು ಹಸ್ತಗಳಲ್ಲಿ ಕಮಲದ ಹೂವನ್ನು ಹಿಡಿದಿರುತ್ತಾನೆ. ಈ ಚಿತ್ರದಲ್ಲಿ ಪ್ರಮುಖವಾಗಿ ಗಾಢ ಹಳದಿ ಬಣ್ಣ ಪ್ರಮುಖವಾಗಿ ಎದ್ದು ಕಾಣುವುದು. ಸೂರ್ಯನ ಬಣ್ಣದ ಸಂಕೇತವಾಗಿಯೂ ಇದನ್ನು ಕಾಣಲಾಗಿದೆ. ಈ ಕಲಾಕೃತಿಯು ವಾಷ್‌ತಂತ್ರದಲ್ಲಿ ಮಾಡಲಾಗಿದ್ದು ಅವಕಾಶದ ಮಧ್ಯದಲ್ಲಿ ಪ್ರಮುಖ ಆಕೃತಿಯಿಟ್ಟು ಸಂಯೋಜಿಸಲಾಗಿದೆ. ಇಲ್ಲಿ ರೇಖೆಗಳು ಸ್ಫುಟವಾಗಿ ಎದ್ದು ಬರುವಂತಿದೆ.

ವಾಯು ದೇವತೆ

ವಾಯು ದೇವತಾ ಕೃತಿಯಲ್ಲಿರುವ ದೇವತೆಯು ಎರಡು ಕುದುರೆಗಳಿಂದ ಕೂಡಿದ ರಥದ ಮೇಲೆ ಪ್ರಯಾಣಿಸುತ್ತಿದೆ. ಈ ದೇವತೆಯ ಶರೀರವು ಗಾಢ ನೀಲಿ ವರ್ಣದಿಂದ ಕೂಡಿದೆ.

ನಾಲ್ಕು ಕೈಗಳನ್ನು ಹೊಂದಿದ್ದು ಪದ್ಮಾಸನದ ಭಂಗಿಯಲ್ಲಿ ಕುಳಿತಿದ್ದು, ಒಂದು ಕೈಯಲ್ಲಿ ಧ್ವಜವನ್ನು ಹೋಲುವ ಸಾಮಗ್ರಿಯನ್ನು ಹಿಡಿದಿದ್ದು ಇನ್ನೊಂದು ಕೈಯಲ್ಲಿ ಸಾಂಕೇತಿಕವಾಗಿ ಬೀಸಣಿಕೆಯನ್ನು ಹಿಡಿಯಲಾಗಿದೆ. ವಾಯು ಎಂದರೆ ಗಾಳಿ ಪ್ರಪಂಚದಲ್ಲಿ ಹುಟ್ಟಿದ ಪ್ರತಿ ಜೀವಿಗೂ ಅನ್ನ ನೀರಿನಷ್ಟೇ ಮುಖ್ಯವಾದದ್ದು. ಗಾಳಿ ಇದಿಲ್ಲದೆ ಭೂಮಿಯ ಮೇಲೆ ಯಾವ ಜೀವಿಯೂ ಬದುಕಲಾರದು. ಹೀಗೆ ವಾಯು ಕೂಡ ದೇವರಿಗೆ ಸಮಾನವೆಂಬ ದೃಷ್ಟಿಯಲ್ಲಿ ವಾಯು ದೇವತೆಯನ್ನು ಪೂಜಿಸಲಾಗುತ್ತದೆ. ದೈವಕಳೆಯಿಂದ ಕೂಡಿದ ಈ ಆಕೃತಿಯು ಆಶೀರ್ವಾದ ನೀಡುವ ಭಂಗಿಯಲ್ಲಿ ಆಕರ್ಷಕವಾಗಿ ಸಂಯೋಜನೆಗೊಂಡಿದೆ.

ಇಂದ್ರ ದೇವತೆ

ಇಂದ್ರ ದೇವತೆಯು ತನ್ನ ವಾಹನವಾದ ಆನೆಯ ಮೇಲೆ ಕುಳಿತಿದ್ದಾನೆ. ಗೌರವರ್ಣದಿಂದ ಕೂಡಿದ ಈತನ ದೇಹವು ಆಶೀರ್ವಾದ ನೀಡುವ ಭಂಗಿಯಲ್ಲಿದೆ. ಹಿನ್ನೆಲೆಯು ಗಾಢ ವರ್ಣದಿಂದ ಲೇಪಿತವಾಗಿದೆ.

ಅಗ್ನಿ ದೇವತೆ

ಅಗ್ನಿ ದೇವತೆಯು ಇಲ್ಲಿರುವ ಎಲ್ಲಾ ಪುರುಷ ದೇವತೆಗಳಿಗಿಂತ ಭಿನ್ನವಾದ ಲಕ್ಷಣಗಳನ್ನು ಹೊಂದಿದೆ. ಎಲ್ಲಾ ದೇವತೆಗಳು ಕುಳಿತಿರುವ ಭಂಗಿಯಲ್ಲಿ ಚಿತ್ರಿತಗೊಂಡಿದ್ದರೆ, ಈ ದೇವತೆಯು ನಿಂತಿರುವ ಭಂಗಿಯಲ್ಲಿದ್ದು ಆಶೀರ್ವಾದ ನೀಡುವ ರೂಪದಲ್ಲಿದೆ. ಈ ದೇವತೆಯ ವಾಹನ ಟಗರು. ಈ ದೇವತೆಯು ಒಂದು ದೇಹ ಎರಡು ತಲೆಗಳನ್ನೂ ಏಳು ಕೈಗಳನ್ನೂ ಮತ್ತು ಮೂರು ಕಾಲುಗಳನ್ನೂ ಹೊಂದಿದ್ದು ಗೌರವ ವರ್ಣದಿಂದ ಕೂಡಿದೆ. ಹಿನ್ನೆಲೆಯಲ್ಲಿ ಸಾಂಕೇತಿಕವಾಗಿ ಉರಿಯುತ್ತಿರುವ ಜ್ವಾಲೆಯು ಕಲ್ಪನೆ ಬರುವಂತೆ 'ಅಗ್ನಿ' ಚಿತ್ರವನ್ನು ಚಿತ್ರಿಸಲಾಗಿದೆ.

ಸಪ್ತಮಾತೃಕೆಯರ ದೇವತೆಗಳ ಕಲಾಕೃತಿಗಳು

ಪುರಾಣಗಳಲ್ಲಿ ಬರುವ ಮಾತೃದೇವತೆಗಳು ಏಳು. ಅವರನ್ನು ಸಪ್ತಮಾತೃಕೆಯರು ಎಂದು ಕರೆಯಲಾಗುತ್ತದೆ. ಯಾವುದೇ ದೇವಸ್ಥಾನಗಳಿಗೆ ಹೋದರು ಅಲ್ಲಿ ಈ ಮಾತೃದೇವತೆಗಳನ್ನು ಪ್ರತಿಷ್ಠಾಪನೆ ಮಾಡಿರುವುದನ್ನು ನೋಡಬಹುದು. ಕಾಳೆಯವರ ಕಲಾಕೃತಿಗಳಲ್ಲಿ ಈ ಸಪ್ತಮಾತೃಕೆಯರ ಪರಿಕಲ್ಪನೆ ವಿಶಿಷ್ಟ, ವಿಭಿನ್ನ ದೃಷ್ಟಿಕೋನವನ್ನು ತಾಳಿವೆ. ಅಲ್ಲದೇ ವಿಭಿನ್ನ ರೀತಿಯ ಪರಿಣಾಮವನ್ನುಂಟು ಮಾಡಿವೆ ಎನ್ನಬಹುದು.

ಸಪ್ತಮಾತೃಕೆಯರಲ್ಲಿ ಬರುವ ದೇವತೆಗಳಿಗೆ ಈ ರೀತಿಯಾದ ಹೆಸರುಂಟು, ವೈಷ್ಣವಿ, ಬ್ರಾಹ್ಮಿ, ಮಹೇಶ್ವರಿ, ಕೌಮಾರಿ, ನರಸಿಂಹಿ, ಐಂದ್ರಿ ಮತ್ತು ಚಂಡಿ ಈ ಎಲ್ಲಾ ಕಲಾಕೃತಿಗಳು ಆಯಾ ವೇಷಭೂಷಣ, ಆಕಾರಗಳಲ್ಲಿ ಭಿನ್ನತೆಯನ್ನು ಪಡೆದು ಚಿತ್ರಿತಗೊಂಡಿದೆ.

ಸಂದರ್ಶನದಲ್ಲಿ ಕಾಳೆಯವರು ಈ ಕಲಾಕೃತಿಗಳ ಕುರಿತು ಹೇಳುವಂತೆ "ಪುರಾಣಗಳಲ್ಲಿ ಸ್ತ್ರೀ ದೇವತೆಗಳಿಗೂ ಪುರುಷ ದೇವತೆಗಳಿಗೂ ವ್ಯತ್ಯಾಸವಿಲ್ಲ. ಗಂಡು ಹೆಣ್ಣು ಎರಡು ಶಕ್ತಿ ಒಂದೇ. ಗಂಡು ದೇವತೆಗಳೇ ಇಲ್ಲಿ ಹೆಣ್ಣು ದೇವತೆಗಳಾಗಿ ಪರಿವರ್ತನೆಗೊಂಡಿವೆ. ಪುರುಷನೇ ಸ್ತ್ರೀ ರೂಪಧರಿಸಿ ಮಾತೃದೇವತೆಗಳಾಗಿವೆ". ಉದಾಹರಣೆಗೆ

ಇಂದ್ರ-ಇಂದ್ರಾಣಿ

ಬ್ರಹ್ಮ-ಬ್ರಾಹ್ಮಿ

ವಿಷ್ಣು-ವೈಷ್ಣವಿ

ಕುಮಾರ-ಕೌಮಾರಿ

ಮಹೇಶ್ವರ-ಮಹೇಶ್ವರಿ

ನರಸಿಂಹ-ನಾರಸಿಂಹಿ(ಚಂಡಿ)

ಹೀಗೆ ಇಲ್ಲಿ ಗಂಡು ದೇವತೆಗಳೇ ಹೆಣ್ಣು ದೇವತೆಗಳಾಗಿವೆ. ಇಂದ್ರ-ಇಂದ್ರಾಣಿ ಒಂದೇ. ಇಂದ್ರಾಣಿ ಇಂದ್ರನ ಹೆಂಡತಿ ಅಲ್ಲ. ನಾರಸಿಂಹಿ ಚಂಡಿ ಇವರೆಡೂ ಒಂದೇ ರೂಪ. ಹೀಗೆ ನಮ್ಮ ಸನಾತನ ಧರ್ಮದಲ್ಲಿಯೇ ಸ್ತ್ರೀ ಪುರುಷರ ನಡುವೆ ಯಾವುದೇ ಭೇದವಿರಲಿಲ್ಲ ಎಂಬುದು ಕಂಡುಬರುತ್ತದೆ. ಗಂಡಿನಲ್ಲಿಯೂ ಹೆಣ್ಣುತನ, ಹೆಣ್ಣಿನಲ್ಲಿಯೂ ಗಂಡುತನವಿದೆ ಎಂಬ ವಿಶಾಲ ದೃಷ್ಟಿಕೋನ ಪುರಾಣಗಳದ್ದು. ಉದಾಹರಣೆಗೆ ದೇಹ ಒಂದೇ ದೇಹದಲ್ಲಿರುವ ಮೃದುವಾದ ಚರ್ಮ, ಮಾಂಸ ಖಂಡಗಳು ಹೆಣ್ಣುತನ, ಅದರ ಒಳಗೆಯಿರುವ ಅಸ್ತಿಗಳು (ಎಲಬು) ಗಂಡುತನ. ಇದು ಸಾಮಾನ್ಯವಾಗಿ ಎಲ್ಲರಲ್ಲಿಯೂ ಇರುತ್ತದೆ. ಹೀಗಾಗಿ ಈ ಎರಡೂ ಬೇರೆ ಬೇರೆ ಅಲ್ಲ. ಎರಡು ಒಂದೇ ಎನ್ನುವ ಭಾವ ಸನಾತನ ಧರ್ಮದಲ್ಲಿ ಕಾಣುತ್ತೇವೆ. ಈ ಉದ್ದೇಶ ಈಡೆರಲೆಂದೇ ಬಹುಶಃ ಮಾತೃದೇವತೆಯರ ಕಲ್ಪನೆ ಮೂಡಿರಬಹುದು."[೯೯] ಎನ್ನುವ ಕಾಳೆಯವರು ಈ ಪುರಾಣ ಕಲ್ಪನೆಗಳನ್ನು ಅಧ್ಯಯನ ಮಾಡಿ ಉತ್ಕೃಷ್ಟ ಮಟ್ಟದ ಮಾತೃದೇವತೆಗಳ ಚಿತ್ರ ಸೃಷ್ಟಿಯನ್ನು ಅದ್ಭುತ ಸಂಯೋಜನೆಯೊಂದಿಗೆ ಅಷ್ಟೇ ಪರಿಣಾಮಕಾರಿಯಾಗಿ ವಾಷ್‌ತಂತ್ರದಲ್ಲಿ ಚಿತ್ರಿಸಿದ್ದಾರೆ.

ಮಹೇಶ್ವರಿ ದೇವಿ

ಮಹೇಶ್ವರನ ಪ್ರತಿರೂಪವಾದ ಮಹೇಶ್ವರಿಯ ಕಲಾಕೃತಿಯಲ್ಲಿ ಮಹೇಶ್ವರನಿಗೆ ಇರಬೇಕಾದ ಬಾಹ್ಯ ಲಕ್ಷಣಗಳೇ ಇಲ್ಲಿ ಕಂಡುಬರುತ್ತವೆ. ನಾಲ್ಕು ಕೈಗಳನ್ನು ಹೊಂದಿದ ಈ ದೇವಿಯು ತನ್ನ ವಾಹನವಾದ ನಂದಿಯ ಮೇಲೆ ಆಸೀನಳಾಗಿದ್ದಾಳೆ. ಒಂದು ಕೈಯಲ್ಲಿ ಡಮರು, ಇನ್ನೊಂದು

---

೯೯. ವಿ.ಟಿ. ಕಾಳೆಯವರೊಂದಿಗೆ ಸಂದರ್ಶನ ದಿನಾಂಕ ೧೫.೩.೨೦೦೯



ಇಂದ್ರಾಣಿ (ಐಂದ್ರಿ) ದೇವಿ






ಬ್ರಾಹ್ಮಿ ದೇವಿ



ವೈಷ್ಣವಿ ದೇವಿ





ಕೌಮಾರಿ





ಮಹೇಶ್ವರಿ





ನಾರಸಿಂಹಿ ದೇವಿ



ಚಂಡಿ ದೇವಿ



ವರಾಹಿ ದೇವಿ

ಕೈಯಲ್ಲಿ ತ್ರಿಶೂಲ ಹಿಡಿದು ರಾಜ ಭಂಗಿಯಲ್ಲಿ ಕುಳಿತಿದ್ದಾಳೆ. ಹಣೆಯಲ್ಲಿ ವಿಭೂತಿ ಮೂರು ಅಕ್ಷಿಗಳನ್ನು ಹೊಂದಿರುವ ಈಕೆಯು, ರುಂಡವನ್ನು ಆಭರಣವಾಗಿ ಧರಿಸಿದ್ದಾಳೆ. ಸರ್ಪಗಳೇ ಇಲ್ಲಿ ಅವಳ ಆಭರಣಗಳಾಗಿವೆ. ಇಲ್ಲಿ ಕೇಸರಿ ವರ್ಣವು ಪ್ರಧಾನವಾಗಿ ಕಂಡುಬರುತ್ತಿದ್ದು ರೇಖೆಗಳು ಇಲ್ಲಿ ಪ್ರಮುಖವಾಗಿ ಕಂಡುಬರುತ್ತದೆ.

ಇಂದ್ರಾಣಿ (ಐಂದ್ರಿ)

ಇಂದ್ರನ ಪ್ರತಿರೂಪವಾದ ಇಂದ್ರಾಣಿ ದೇವತೆಯು ತನ್ನ ವಾಹನವಾದ ಐರಾವತದ ಮೇಲೆ ರಾಜ ಗಂಭೀರದಲ್ಲಿ ಕುಳಿತಿದ್ದಾಳೆ. ಮೈಸೂರು ಶೈಲಿಯ ಆಭರಣವನ್ನು ಇಲ್ಲಿ ಪ್ರಮುಖವಾಗಿ ಚಿತ್ರಿಸಲಾಗಿದೆ. ರೇಖೆಗಳು ಇಲ್ಲಿ ಸ್ಫುಟವಾಗಿ ಕಂಡುಬರುತ್ತವೆ.

ಬ್ರಾಹ್ಮಿ

ಬ್ರಹ್ಮನ ಪ್ರತಿರೂಪವಾದ ಬ್ರಾಹ್ಮಿ ಈ ದೇವತೆಯು ತನ್ನ ವಾಹನವಾದ ಹಂಸದ ಮೇಲೆ ಒಂದು ಕಾಲನ್ನು ಮಡಿಚಿ ಇನ್ನೊಂದನ್ನು ಇಳಿಬಿಟ್ಟು ರಾಜ ಗಂಭೀರ ಭಾವ ಮುದ್ರೆಯಲ್ಲಿ ಚಿತ್ರಿತಗೊಂಡಿದ್ದಾಳೆ. ನಾಲ್ಕು ತಲೆಗಳನ್ನು ಹೊಂದಿದ್ದು ನಾಲ್ಕು ಕೈಗಳಿವೆ. ವರ್ಣಗಳನ್ನು ಇಲ್ಲಿ ಮೋಹಕವಾಗಿ ಬಳಸಿಕೊಳ್ಳಲಾಗಿದೆ. ಅಲಂಕಾರಕ್ಕೆ ಇಲ್ಲಿ ಹೆಚ್ಚು ಪ್ರಾಶಸ್ತ್ಯ ನೀಡಲಾಗಿದೆ. ಕಾಳೆಯವರದು ಡೆಕೋರೇಟಿವ್ ಶೈಲಿ ಎಂದು ಕರೆಯಬಹುದು.

ವೈಷ್ಣವಿ ದೇವಿ

ವಿಷ್ಣುವಿನ ಪ್ರತಿರೂಪವಾದ ವೈಷ್ಣವಿ ದೇವಿಯು ತನ್ನ ವಾಹನವಾದ ಗಿಳಿಯ ಮೇಲೆ ಕುಳಿತಿದ್ದಾಳೆ. ನಾಲ್ಕು ಕೈಗಳನ್ನು ಹೊಂದಿರುವ ಈಕೆ ಒಂದು ಕೈಯಲ್ಲಿ ಚಕ್ರವನ್ನು ತಿರುಗಿಸುತ್ತಿದ್ದಾಳೆ. ಇನ್ನೊಂದು ಕೈಯಲ್ಲಿ ಗಧೆಯನ್ನು ಮತ್ತೊಂದು ಕೈಯಲ್ಲಿ ಶಂಖವನ್ನು ಹಿಡಿದಿರುವ ಈಕೆ ಆಶೀರ್ವಾದ ನೀಡುವ ಭಂಗಿಯಲ್ಲಿರುವಳು.

ಕೌಮಾರಿ

ಕುಮಾರ ದೇವತೆಯ ಪ್ರತಿರೂಪವಾದ ಕೌಮಾರಿಯು ಇಲ್ಲಿ ತನ್ನ ವಾಹನವಾದ ನವಿಲಿನ ಮೇಲೆ ಆಸೀನಳಾಗಿದ್ದಾಳೆ. ಒಂದ ಕಾಲನ್ನು ಮಡಚಿ ಇನ್ನೊಂದನ್ನು ಇಳಿಯಬಿಟ್ಟು ರಾಜಗಂಭೀರವಾಗಿ ಕುಳಿತಿದ್ದು ಆಶೀರ್ವಾದ ನೀಡುವ ಭಂಗಿಯಲ್ಲಿ ಈ ಆಕೃತಿಯಿದೆ. ಈ ದೇವಿಯು ನಾಲ್ಕು ಕೈಗಳನ್ನು ಹೊಂದಿದ್ದು, ಎರಡು ಕೈಗಳಲ್ಲಿ ವಿವಿಧ ಆಯುಧಗಳನ್ನು ಹಿಡಿದ್ದಾಳೆ. ಆಕೃತಿಯ ಹಿನ್ನೆಲೆಯು ಗಾಢ ಕಂದು ಬಣ್ಣದಿಂದ ಲೇಪಿಸಲಾಗಿದ್ದು, ಮುಖ್ಯ ಆಕೃತಿಗೆ ತೆಳುವರ್ಣ ಲೇಪಿಸಲಾಗಿದ್ದು, ಹಿನ್ನೆಲೆಯಿಂದ ಈ ಆಕೃತಿಯು ಸ್ಫುಟವಾಗಿ ಎದ್ದು ಬರುವಂತೆ ಕಂಡಬರುತ್ತದೆ.

ಸೂಕ್ಷ್ಮವಾದ ರೇಖೆಯು ಈ ಕಲಾಕೃತಿಯ ಜೀವಾಳವಾಗಿದೆ ಅಲ್ಲದೇ ಬಣ್ಣಗಳ ಸಮ್ಮಿಳಿತ ಒಂದಕ್ಕೊಂದು ಪೂರಕವಾಗಿದ್ದು ಒಟ್ಟು ಕಲಾಕೃತಿಯು ನೋಡುಗರನ್ನು ಸೆಳೆಯುವಲ್ಲಿ ಯಶಸ್ವಿ ಯಾಗಿದೆ.

ನಾರಸಿಂಹಿ

ನರಸಿಂಹ ದೇವತೆಯ ಪ್ರತಿರೂಪವಾದ ನಾರಸಿಂಹಿಯು ಇಲ್ಲಿ ಪೀಠವೊಂದರ ಮೇಲೆ ಆಸೀನಳಾಗಿದ್ದು, ನರಸಿಂಹ ದೇವತೆಯ ಬಾಹ್ಯಲಕ್ಷಣಗಳನ್ನು ಹೊಂದಿರುತ್ತಾಳೆ. ಒಂದು ಕಾಲನ್ನು ಮಡಿಚಿ ಇನ್ನೊಂದನ್ನು ಇಳಿಯಬಿಟ್ಟು ರಾಜಗಂಭೀರವಾಗಿ ಕುಳಿತಿದ್ದು ಆಶೀರ್ವಾದ ನೀಡುವ ಭಂಗಿಯಲ್ಲಿ ಈ ಆಕೃತಿಯನ್ನು ರಚಿಸಲಾಗಿದೆ. ಒಂದು ಕೈಯಲ್ಲಿ ಚಕ್ರ ಇನ್ನೊಂದು ಕೈಯಲ್ಲಿ ಶಂಖವನ್ನು ಹಿಡಿದಿದ್ದು. ಇದು ವಿಷ್ಣುದೇವತೆಯ ಆಯುಧಗಳಾಗಿವೆ. ಬಣ್ಣಗಳ ಸಮ್ಮಿಳಿತ ಅದ್ಭುತವಾಗಿದ್ದು ಸ್ಫುಟವಾದ ರೇಖೆಗಳು ಇಲ್ಲಿ ಪ್ರಮುಖವಾಗಿ ಕಂಡುಬರುತ್ತವೆ.

ಚಂಡಿ

ನಾರಸಿಂಹಿಯ ಇನ್ನೊಂದು ರೂಪವಾದ ಚಂಡಿಯು ಪೀಠವೊಂದರ ಮೇಲೆ ಆಸೀನಳಾಗಿದ್ದು, ಆಶೀರ್ವಾದ ನೀಡುವ ಭಂಗಿಯಲ್ಲಿ ಈ ಆಕೃತಿಯು ರಚಿತಗೊಂಡಿದೆ. ನಾಲ್ಕು ಕೈಗಳನ್ನು ಹೊಂದಿದ್ದು ಒಂದು ಕೈಯಲ್ಲಿ ಅಸ್ಥಿ ರುಂಡವನ್ನು ಇನ್ನೊಂದು ಕೈಯಲ್ಲಿ ಕಮಲದ ಹೂವನ್ನು ಹಿಡಿದಿದ್ದಾಳೆ. ಮೂರು ಅಕ್ಷಿಗಳನ್ನು ಹೊಂದಿದ್ದು. ಆಕರ್ಷಣೆಯವಾಗಿ ಈ ಕಲಾಕೃತಿಯು ನೋಡುಗರನ್ನು ಸೆಳೆಯುತ್ತದೆ. ಲಲಿತವಾಗಿ ಹರಿದಾಡಿದ ರೇಖೆಗಳು ಹಿನ್ನೆಲೆಯ ಕಂದುವರ್ಣದ ಲೇಪನದಿಂದ ಸ್ಫುಟವಾಗಿ ಸ್ಪಷ್ಟವಾಗಿ ಆಕೃತಿಯನ್ನು ಬೇರ್ಪಡಿಸಿದ್ದು ರೋಚಕವಾಗಿದೆ. ಹಿತಮಿತ ವಾದ ಆಭರಣಗಳನ್ನು ರಚಿಸಲಾಗಿದ್ದು ಒಟ್ಟು ಆಕೃತಿಯು ನೋಡುಗರನ್ನು ಸೆಳೆಯುವಲ್ಲಿ ಯಶಸ್ವಿ ಯಾಗಿದೆ.

ವಿ.ಟಿ.ಕಾಳೆಯವರ ಆಧುನಿಕ ಕಲಾಶೈಲಿಯ ಕಲಾಕೃತಿಗಳು

ಕಾಳೆಯವರು ಹೆಚ್ಚಾಗಿ ಸಾಂಪ್ರದಾಯಿಕ ಕಲಾ ಶೈಲಿಯಲ್ಲಿ ಕಲಾಕೃತಿಗಳನ್ನು ರಚಿಸುವುದರಲ್ಲಿ ಆಸಕ್ತಿ ಹೊಂದಿದವರು. ಆದರೂ ನವ್ಯ ಶೈಲಿಯಲ್ಲಿ ಅನೇಕ ಕಲಾಕೃತಿಗಳನ್ನು ರಚಿಸಿ ಅದರಲ್ಲೂ ಕೂಡಾ ಪ್ರಯೋಗ ಮಾಡಿ ಯಶಸ್ಸನ್ನು ಸಾಧಿಸಿದ್ದಾರೆ. ಇತ್ತೀಚೆಗೆ ಹೆಚ್ಚಾಗಿ ನವ್ಯ ಶೈಲಿಯ ಕಲಾಕೃತಿಗಳಿಗೆ ಕಲಾವಿದರು ಶೀರ್ಷಿಕೆ ರಹಿತ ಎಂಬ ಹೆಸರನ್ನು ತಮ್ಮ ಕಲಾಕೃತಿಗಳಿಗೆ ಕೊಡಲು ಇಚ್ಛಿಸುತ್ತಾರೆ. ಈ ಅಂಶವನ್ನು ಕಾಳೆಯವರು ಬಲವಾಗಿ ವಿರೋಧಿಸುತ್ತಾರೆ. "ಏನು ಗೊತ್ತೆಯಿಲ್ಲದೇ ಕಲಾಕೃತಿಗಳನ್ನು ರಚಿಸಲು ಹೇಗೆ ಸಾಧ್ಯ" ಎಂಬುವುದು ಅವರ ಅಭಿಪ್ರಾಯವಾಗಿದೆ. ಹೀಗಾಗಿಯೇ ಅವರು ತಮ್ಮ ಕಲಾಕೃತಿಗೆ ವಿಶಿಷ್ಟ ವಿಭಿನ್ನ ಶೀರ್ಷಿಕೆಗಳನ್ನು ನೀಡಿದ್ದಾರೆ. ಅವು ದಿ ಡ್ರೀಮ

(ಮಿಥ್ಯಾಲೋಕ), ತುಳಿತ, ಪ್ರಾಚೀನ ಮತ್ತು ಆಧುನಿಕತೆಗಳ ಸುಳಿಯಲ್ಲಿ, ಸ್ತ್ರೀ, ವ್ಯರ್ಥಸಾಹಸ, ಹಾಡುಗಳು, ಭಿನ್ನಭಿಪ್ರಾಯ, ಷೇಪ್ಸ್ ಮತ್ತು ಕಲರ್ಸ್ (ಆಕೃತಿಗಳು ಮತ್ತು ಬಣ್ಣಗಳು) ಮುಂತಾದವುಗಳಾಗಿವೆ.

೧೯೫೦ರಲ್ಲಿ ಕರ್ನಾಟಕವನ್ನು ಹೊರತುಪಡಿಸಿ ಭಾರತದ ಇನ್ನುಳಿದ ಪ್ರದೇಶಗಳಲ್ಲಿ ಆಧುನಿಕ ಕಲಾ ಪರಂಪರೆಯು ಶೀಘ್ರಗತಿಯಲ್ಲಿ ಬೆಳೆಯತೊಡಗಿತ್ತು. ಎಸ್.ಎಚ್. ರಝಾ, ಎಸ್.ಬಿ. ಫಣಿಕರ್, ವಿ.ಎಸ್. ಗಾಯತೋಂಡೆ, ಎಂ.ಎಫ್.ಹುಸೇನ್, ಕೆ.ಕೆ.ಹೆಬ್ಬಾರ್, ಅಕಬರ್ ಪದಮಶಿ, ಲಕ್ಷ್ಮಣ ಪೈ ಮೊದಲಾದ ದೈತ್ಯ ಕಲಾವಿದರು ಆಧುನಿಕತೆಯಲ್ಲಿ ತಮ್ಮ ಕಲಾಪ್ರತಿಭೆಯ ಪರಿಮಳವನ್ನು ವಿಶ್ವದಲ್ಲೆಡೆ ಪಸರಿಸಿದ ಕಾಲವದು. ಈ ಕಾಲಾವಧಿಯಲ್ಲಿ ಕರ್ನಾಟಕದಲ್ಲಿ ಕೇವಲ ಮೂರು ಕಲಾಶಾಲೆಗಳು ಪ್ರಾರಂಭಗೊಂಡಿದ್ದವು. ಅವು ಧಾರವಾಡದ ಶ್ರೀ ಹಾಲಭಾವಿ ಅವರ ಕಲಾಶಾಲೆ, ಹುಬ್ಬಳ್ಳಿಯ ಶ್ರೀ ಎಂ.ವಿ. ಮಿಣಜಗಿಯವರ ಕಲಾಶಾಲೆ ಮತ್ತು ಗದುಗಿನ ವಿಜಯ ಕಲಾಮಂದಿರದ ಕಲಾಶಾಲೆ, ಈ ಮೂರು ಕಲಾಶಾಲೆಗಳಲ್ಲಿ ಸಾಂಪ್ರದಾಯಿಕ ಮತ್ತು ವಾಸ್ತವ ಶೈಲಿಗಳೇ ಪ್ರಧಾನವಾಗಿದ್ದವು. ಈ ಶಾಲೆಗಳಿಂದ ಹೊರಬಂದ ಕಲಾವಿದರು ಸ್ವಾಭಾವಿಕ ವಾಗಿ ಸಾಂಪ್ರದಾಯವಾದಿಗಳೇ ಆಗಿದ್ದರು. ಮೈಸೂರಿನ ಜಯ ಚಾಮರಾಜೇಂದ್ರ ಟೆಕ್ನಿಕಲ್ ಕಾಲೇಜಿನಲ್ಲಿಯೂ ಉಚ್ಚಕಲಾ ಶಿಕ್ಷಣವನ್ನು ನೀಡುತ್ತಿದ್ದರೂ ಪರಂಪರಾನುಗತ ಶೈಲಿಯಿಂದ ಇಲ್ಲಿನ ಕಲಾವಿದರು ಹೊರಗೆ ಬಂದಿರಲಿಲ್ಲ. ಇದೇ ಅವಧಿಯಲ್ಲಿ ಕಾಳೆಯವರು ಆಧುನಿಕ ಕಲಾ ಶೈಲಿಯತ್ತ ತಮ್ಮ ಒಲವನ್ನು ತೋರಿದರು. ೧೯೫೪ ರಿಂದ ೧೯೫೭ರವರೆಗೆ ಅವರು ಜಲವರ್ಣ ಗಳಲ್ಲಿ ಚಿತ್ರಿಸಿದ ಕಲಾಕೃತಿಗಳು ಸಾಕಷ್ಟು ಕಣ್ಮರೆಯಾಗಿವೆ. ಆ ಕಾಲದಲ್ಲಿ ಅವರು ಚಿತ್ರಿಸಿದ "ಸ್ತ್ರೀ ಮತ್ತು ಗೋಟ್ಸ್" ಎಂಬ ಎರಡು ಕಲಾಕೃತಿಗಳು ಮಾತ್ರ ಲಭ್ಯವಿರುತ್ತದೆ.[೧೦೦]

ಕಾಳೆಯವರು ಗದಗಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಅಕಾಡೆಮಿಕ್ ಕಲಾ ಶೈಲಿಯಲ್ಲಿಯೆ ಹೆಚ್ಚಾಗಿ ಕಲಾಕೃತಿಗಳನ್ನು ರಚಿಸುತ್ತಿದ್ದರೂ ಸಹ ಮುಂಬೈನ ಜೆ.ಜೆ. ಕಲಾಶಾಲೆಯ ಸಂಪರ್ಕ ಇವರಿಗೆ ಇದ್ದುದರಿಂದ ಅಲ್ಲಿ ಹೊಸದಾಗಿ ಪ್ರವೇಶ ಪಡೆದ ಆಧುನಿಕ ಕಲಾಶೈಲಿಯ ಪ್ರಭಾವ, ಪ್ರೇರಣೆ ಯಿಂದ ಕಾಳೆಯವರು ಆಧುನಿಕ ಕಲಾಶೈಲಿಯಲ್ಲಿಯ ಕಲಾಕೃತಿಗಳನ್ನು ರಚಿಸಲು ತೊಡಗು ವಂತಾಯಿತು. ಇವುಗಳ ಸಂಖ್ಯೆ ಕಡಿಮೆಯಿದ್ದರೂ ಅವು ಅಪೂರ್ವವಾದ ವಿಚಾರಗಳಿಂದ ಕೂಡಿವೆ. ಅವುಗಳನ್ನು ಇಲ್ಲಿ ಒಂದೊಂದಾಗಿ ವಿಶ್ಲೇಷಿಸಲಾಗಿದೆ. ಇವರ ಆಧುನಿಕ ಕಲಾಕೃತಿಗಳು ಎಲ್ಲವೂ ಬದುಕಿನ ವಿವಿಧ ಮುಖಗಳನ್ನು, ವಿವಿಧ ಸಂದರ್ಭದ ಅನುಭವಗಳನ್ನು, ವಿಭಿನ್ನ ಆಶಯಗಳನ್ನು ಹೊಂದಿವೆ.


---

೧೦೦. ಡಾ. ಎಸ್.ಸಿ. ಪಾಟೀಲ, ವಿ.ಟಿ. ಕಾಳೆ, ಪು. ೩೧











ಬಣ್ಣಗಳು ಮತ್ತು ಆಕಾರಗಳು









ಬಣ್ಣಗಳು ಮತ್ತು ಆಕಾರಗಳು

ಕಲರ್ ಲ್ಯಾಂಡ್ ಷೇಪ್ಸ್ (ಬಣ್ಣಗಳು ಮತ್ತು ಆಕೃತಿಗಳು)

ಕಾಳೆಯವರು ಇತ್ತೀಚೆಗೆ ಸಮಕಾಲೀನ ಎನಿಸುವಂತಹ ಈ ವಿಷಯಕ್ಕೆ ಸಂಬಂಧಿಸಿದಂತೆ ನೂರಾರು ಕಲಾಕೃತಿಗಳನ್ನು ರಚಿಸಿದ್ದಾರೆ. ಕಲರ್ ಲ್ಯಾಂಡ್ ಷೇಪ್ಸ್ ಎಂಬ ವಿಶಿಷ್ಟ ಶೀರ್ಷಿಕೆಯನ್ನು ಹೊಂದಿರುವ ಈ ಕಲಾಕೃತಿಗಳನ್ನು ಜಲವರ್ಣದಲ್ಲಿ ಕಾಳೆಯವರು ರಚಿಸಿರುತ್ತಾರೆ. ಈ ಕಲಾಕೃತಿಗಳು ನೋಡಲು ಬಣ್ಣಗಳು ಮತ್ತು ಆಕಾರಗಳ ಸಂಯೋಜನೆ ಮಾತ್ರ ಕಂಡಬರುವಂತಿದ್ದರೂ, ಅಮೂರ್ತ ಕಲಾಕೃತಿಯ ಕಲ್ಪನೆ ಎನಿಸಿದರೂ ಕೂಡಾ ಗಮನವಿಟ್ಟು ನೋಡಿದಾಗ ಬೇರೆ ಬೇರೆ ಆಕಾರಗಳು ಒಂದೊಂದಾಗಿ ಕಾಣಲು ತೊಡುಗುತ್ತವೆ. ಈ ಕಲಾಕೃತಿಗಳು ನೋಡುಗರ ಸಾಮರ್ಥ್ಯ ವನ್ನು ಅವರ ತಾಳ್ಮೆಯನ್ನು ಕುತೂಹಲವನ್ನು ಪರೀಕ್ಷೆ ಮಾಡುವಂತಿವೆ. ಆಕಾಶದಲ್ಲಿ ತೇಲುತ್ತಿರುವ ಮೋಡಗಳು ಒಂದೊಂದು ಆಕಾರಗಳನ್ನು ಹೊಂದಿದ್ದು ಬೇರೆ ಬೇರೆ ವ್ಯಕ್ತಿಗಳಿಗೆ ಬೇರೆ ಬೇರೆ ಆಕಾರಗಳು ಅದರಲ್ಲಿ ಕಾಣುವ ಸಾಧ್ಯತೆಗಳಿರುತ್ತದೆ. ಅದೇ ರೀತಿಯಾದ ಆಕಾರಗಳು ಈ ಕಲಾಕೃತಿಗಳಿದ್ದು ಬೇರೆ ಬೇರೆ ವ್ಯಕ್ತಿಗಳಿಗೆ ಬೇರೆ ಬೇರೆ ತೆರನಾದ ಆಕಾರಗಳನ್ನು ಅವರು ಮನಸ್ಸಿನಲ್ಲಿ ಸೃಷ್ಟಿಸಿಕೊಳ್ಳಲು ಸಹಾಯವಾಗುವುದರಿಂದ ಈ ಕಲಾಕೃತಿಗಳು ವೀಕ್ಷಕರ ಕುತೂಹಲವನ್ನು ಹೆಚ್ಚು ಮಾಡುತ್ತವೆ. ಒಟ್ಟಿನಲ್ಲಿ ಈ ಕಲಾಕೃತಿಗಳು ಕುತೂಹಲಕಾರಿಯಾಗಿ ಮೂಡಿಬಂದಿದ್ದು ನೋಡುಗ ರನ್ನು ತನ್ನ ಪ್ರಪಂಚದೊಳಕ್ಕೆ ಎಳೆದುಕೊಂಡು ಹೋಗುತ್ತವೆ.

೧೯೯೭ರಲ್ಲಿ ಕರ್ನಾಟಕ ಲಲಿತ ಕಲಾ ಆಕಾಡೆಮಿಯವರು ಹಾಗೂ ಬೀಳಗಿಯ ಮಾತೃಭೂಮಿ ಸಂಸ್ಥೆಯವರು ನಡೆಸಿದ ಹಿರಿಯ ಕಲಾವಿದರ ಶಿಬಿರಗಳಲ್ಲಿ ಇದೇ ಸರಣಿಗೆ ಸಂಬಂಧಿಸಿದ ಕಲಾಕೃತಿಗಳನ್ನೇ ಅವರು ಚಿತ್ರಿಸಿಕೊಟ್ಟಿದ್ದಾರೆ. ಇವುಗಳಲ್ಲಿ ಚಿತ್ರಿತವಾದ ಆಕೃತಿಗಳು ಹಾಗೂ ವರ್ಣ ವೈಭವಗಳು ಚಿತ್ತಾಕರ್ಷಕವಾಗಿರುತ್ತವೆ.[೧೧೧] ಎಂಬ ಮಾಹಿತಿಗಳು ಲಭ್ಯವಾಗಿದ್ದು ಮಹತ್ವ ಪೂರ್ಣವಾಗಿದೆ.

ದಿ ಡ್ರೀಮ್ (ಕನಸು)

ಈ ಸಂಯೋಜನಾ ಕಲಾಕೃತಿಯಲ್ಲಿ ವ್ಯಕ್ತಿಯೊಬ್ಬ ಆಕಾಶದಲ್ಲಿ ಹಾರುತ್ತಾ ಹೊರಟಂತಿದೆ. ಈ ಕಲಾಕೃತಿಯ ಮೈವಳಿಕೆಯು ವಿಶಿಷ್ಟವಾಗಿದ್ದು. ಬ್ಲೇಡನಿಂದ ಈ ಪರಿಣಾಮದ ಸೃಷ್ಟಿಯಾಗಿದೆ. ಇಲ್ಲಿರುವ ವ್ಯಕ್ತಿಗೆ ಪಕ್ಷಿಗಳ ತರಹ ರೆಕ್ಕೆಗಳಿದ್ದು ಆತ ಆಕಾಶದಲ್ಲಿ ಹಾರುತ್ತಿದ್ದಾನೆ. ಇದು ಸೆಮಿ ಸರ್‍ರಿಯಾಲಿಸಂನ ಶೈಲಿಯನ್ನು ನೆನಪಿಸುವಂತಿದೆ. ಕಾಳೆಯವರು ಈ ಕಲಾಕೃತಿ ರಚಿಸುವುದರ ಹಿನ್ನೆಲೆಯಾಗಿ ಅವರಿಗೆ ಕೆಲವು ದಿನಗಳು ಕನಸಿನಲ್ಲಿ ಆಕಾಶದಲ್ಲಿ ಹಾರುತ್ತಿರುವಂತೆ ಕನಸು

---

೧೧೧. ಡಾ. ಎಸ್.ಸಿ. ಪಾಟೀಲ, ವಿ.ಟಿ. ಕಾಳೆ, ಪು. ೩೧

ಬಿದ್ದಿರುವ ಪರಿಣಾಮವೇ ಈ ಕಲಾಕೃತಿ ಸೃಷ್ಟಿಸಿಲು ಸಾಧ್ಯವಾಯಿತು. ಹೀಗಾಗಿ ಈ ಕಲಾಕೃತಿ ನೋಡಿದ ತಕ್ಷಣ ಇದು ಒಂದು ಭ್ರಮಾಲೋಕ, ಮಿಥ್ಯಾಲೋಕ ಎಂಬ ಕಲ್ಪನೆ ಮೂಡುತ್ತದೆ. ಹಿನ್ನೆಲೆಯಲ್ಲಿ ಬೆಟ್ಟ ಗುಡ್ಡ ನದಿ ಅಲ್ಲಿನ ಪ್ರತಿಬಿಂಬ ಸಂಯೋಜನೆ ವಿಭಿನ್ನ ಪರಿಣಾಮವನ್ನುಂಟು ಮಾಡುತ್ತದೆ.

ಇಂಪರೀಯಲ್ ಅಳತೆಯಲ್ಲಿ ಜಲವರ್ಣ ಮಾಧ್ಯಮದಲ್ಲಿ ಈ ಕಲಾಕೃತಿ ಮೈದಾಳಿದೆ. ಡಾ. ಎಸ್.ಸಿ. ಪಾಟೀಲ ಅವರ ಅಭಿಪ್ರಾಯದಲ್ಲಿ ಈ ಕಲಾಕೃತಿಯು ಈ ಕೆಳಗಿನಂತೆ ವಿಶ್ಲೇಷಣೆ ಗೊಂಡಿದೆ. "ಮಾನವ ಜೀವಿಯೊಂದು ಕನಸುಗಾರನೆಂಬುದನ್ನು ಈ ಕೃತಿಯು ಬಿಂಬಿಸುತ್ತದೆ. ಬಹುತರವಾಗಿ ಲಿಯೋನಾರ್ಡೋ ಡಾವಿನ್ಸಿ ಯ ವೈಮಾನಿಕ ಕಲ್ಪನೆಯೇ ಕಾಳೆಯವರ ಈ ಕೃತಿಗೆ ಪ್ರೇರಣೆಯಾಗಿರಬೇಕೆಂದು ತೋರುತ್ತದೆ. ಮನುಷ್ಯನೊಬ್ಬ ರೆಕ್ಕೆಗಳನ್ನು ಕಟ್ಟಿಕೊಂಡು ಅಂಧಕಾರ ಮಯವಾದ ಲೋಕದ ಜಂಜಡಗಳನ್ನು ತೊರೆದು ಆಕಾಶದಲ್ಲಿ ತೇಲುತ್ತಿದ್ದಾನೆ. ಆದರೂ ಭವದ ಕಪ್ಪು ಅವನ ಬೆನ್ನು ಬಿಡುತ್ತಿಲ್ಲ"[೧೦೨] ಎಂಬ ವಿಶ್ಲೇಷಣೆ ಮಾಡಲಾಗಿದೆ.

ಗೋಟ್ಸ್

೧೯೫೫ರಲ್ಲಿ ಚಿತ್ರಿಸಿದ ಗೋಟ್ಸ್ ಕಲಾಕೃತಿಯು ತೈಲವರ್ಣ ಮಾಧ್ಯಮದಲ್ಲಿ ರಚಿಸಿದ ಕಲಾಕೃತಿಯಾಗಿದ್ದು ಚಿತ್ರದ ತಂತ್ರಕ್ಕಾಗಿ ಪೇಂಟಿಂಗ್ ನೈಫನ್ನು ಬಳಸಲಾಗಿದೆ. ಈ ಚಿತ್ರದ ತಳಹದಿ ಗಾಗಿ ರೆಕ್ಸಿನ್ ಶೀಟನ್ನು ಉಪಯೋಗಿಸಲಾಗಿದೆ. ಹಸಿರಿನಿಂದ ಕಂಗೊಳಿಸುವ ನಿಸರ್ಗ ರಮಣೀಯ ತಾಣವೊಂದರಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತ ಗರಿಕೆ ಸೊಪ್ಪುಗಳನ್ನು ತಿನ್ನುತ್ತಿರುವ ಮೇಕೆಗಳ ಗುಂಪನ್ನು ಈ ಕಲಾಕೃತಿಯಲ್ಲಿ ತೋರಿಸಲಾಗಿದೆ. ಹೊಟ್ಟೆ ತುಂಬ ಸೊಪ್ಪನ್ನು ತಿಂದ ಮೇಕೆಯೊಂದು ಮಲಗಿ ವಿಶ್ರಮಿಸುತ್ತಲಿದೆ. ಪೇಂಟಿಂಗ್ ನೈಫ್‌ನ ಬಳಕೆಯು ಕುಂಚದಷ್ಟೇ ನವಿರಾಗಿ ಕೃತಿಯನ್ನು ರೂಪಿಸಿದೆ.[೧೦೩] ಕುಂಚದ ಹಿಂದಿನ ತುದಿಯಿಂದ ಕೆರೆದು ಹುಲ್ಲಿನ ಆಕಾರವನ್ನು ಸೃಜಿಸಿರುವುದು ಸಮಕಾಲೀನ ಚಿತ್ರ ತಂತ್ರಗಳ ಆಶಯಕ್ಕೆ ಪೂರಕವಾಗಿ ಕಂಡುಬರುತ್ತದೆ.

ತುಳಿತ

ಈ ಕಲಾಕೃತಿಯು ವಿಜಯ ಕಲಾಮಂದಿರದ ಸುವರ್ಣ ಮಹೋತ್ಸವದ ಅಂಗವಾಗಿ ನಡೆಸಲಾದ ಕಲಾ ಶಿಬಿರದಲ್ಲಿ ರಚಿಸಲ್ಪಟ್ಟಿದ್ದು, ದೊಡ್ಡ ಬಂಡೆಯೊಂದು ಸಣ್ಣ ಪುಡಿಗಲ್ಲನ್ನು ತುಳಿದು ಕುಣಿಯುತ್ತಲಿದೆ. ಹಿನ್ನೆಲೆಯಲ್ಲಿ ರಾಷ್ಟ್ರಧ್ವಜ, ಸ್ವಾತಂತ್ರ್ಯೋತ್ತರ ಭಾರತದ ಅಧಿಕಾರರೂಢ

---

೧೦೨. ಡಾ. ಎಸ್.ಸಿ. ಪಾಟೀಲ, ವಿ.ಟಿ. ಕಾಳೆ, ಪು. ೩೩

೧೦೩. ಅದೇ ಪು.೩೨

ಬಲಾಢ್ಯರ ಮೌಢ್ಯ ಪ್ರವೃತ್ತಿ, ಧನದಾಹ, ಅಧಿಕಾರದಾಹಗಳು ಭೀಭತ್ಸತೆಗಳನ್ನು ಬಿಂಬಿಸುವ ಒಂದು ವೈಚಾರಿಕ ಕಲಾಕೃತಿಯಾಗಿದೆ.[೧೦೪]

ಈ ಕಲಾಕೃತಿಯು ತೈಲವರ್ಣ ಮಾಧ್ಯಮದಲ್ಲಿ ಮಾಡಿದ್ದು, ನೈಫನಿಂದ ಮೈವಳಿಕೆಯನ್ನು ತಂದಿದ್ದಾರೆ. ಇಲ್ಲಿ ದೊಡ್ಡ ಹೆಬ್ಬಂಡೆಯೊಂದು ಪುಟ್ಟ ಕಲ್ಲನ್ನು ತುಳಿಯುತ್ತಾಯಿದೆ. ಇಲ್ಲಿ ಕಲ್ಲನ್ನು ಸಾಂಕೇತಿಕವಾಗಿ ಬಳಸಲಾಗಿದ್ದು ಇದರ ಹಿಂದೆಯಿರುವ ಆಶಯವೆಂದರೆ ಸಮಾಜದಲ್ಲಿ ದುರ್ಬಲ ವರ್ಗದವರ ಮೇಲೆ ಪ್ರಬಲರ ತುಳಿತ, ದಬ್ಬಾಳಿಕೆ, ಬಡವರ ಮೇಲೆ ಶ್ರೀಮಂತರ ತುಳಿತ, ಅಧಿಕಾರಿಗಳ ದರ್ಪ, ರಾಜಕೀಯ ವ್ಯಕ್ತಿಗಳು ಪ್ರಜೆಗಳ ಮೇಲೆ ಮಾಡುವ ಅನ್ಯಾಯ ಹೀಗೆ ಒಟ್ಟಿನಲ್ಲಿ ಇಲ್ಲಿರುವ ಸಂಯೋಜನೆ ಸಾಂಕೇತಿಕವಾಗಿ ಸಮಾಜದ ಅನಿಷ್ಟವನ್ನು ಅಸಮಾನತೆಯನ್ನು ಪ್ರತಿಬಿಂಬಿಸುತ್ತಿದ್ದು, ಕಲಾವಿದನ ಮನಸ್ಸು ಈ ಅಸಮಾನತೆಗೆ ರೋಸಿಹೋಗಿ ಮೂಡಿ ಬಂದಂತಹ ಕಲಾಕೃತಿ ಇದಾಗಿದೆ.

ಭಿನ್ನಾಭಿಪ್ರಾಯ

ಈ ಕಲಾಕೃತಿಯು ೩೦x೪೦ ಇಂಚುಗಳ ಅವಕಾಶದಲ್ಲಿ ಸಂಯೋಜನೆಗೊಂಡಿದ್ದು ನೈಫ್‌ನಿಂದ ಮೈವಳಿಕೆಯನ್ನು ರಚಿಸಲಾಗಿದ್ದು ಕುಂಚದ ಬಳಕೆ ಇಲ್ಲಿ ಕಂಡುಬರುವುದಿಲ್ಲ. ಒರಟು ಮೈವಳಿಕೆಯ ಅನುಭವ ಕೊಡುತ್ತದೆ. ಬದುಕಿನ ಒರಟುತನ, ವಾದ ವಿವಾದಗಳ ಬಿಸಿ ಅದು ತರುವ ಅಸಮಾಧಾನ, ಒರಟುತನದ ಪ್ರತಿಬಿಂಬ ಈ ಕಲಾಕೃತಿ. ಈ ಸಂಯೋಜನೆಯಲ್ಲಿ ಇಬ್ಬರು ಸಮಾನ ವಯಸ್ಕರು ಒಬ್ಬರಿಗೊಬ್ಬರು ಬೆನ್ನು ಮಾಡಿ ಮುಖ ಸಿಂಡರಿಸಿಕೊಂಡು ನಿಂತಿರುತ್ತಾರೆ. ಒಬ್ಬರ ಅಭಿಪ್ರಾಯ ಇನ್ನೊಬ್ಬರಿಗೆ ರುಚಿಸದು. ಎಲ್ಲರೂ ಅವರ ಅವರ ಮೂಗಿನ ನೇರಕ್ಕೆ ನಿಲುವನ್ನು ತಾಳಿರುತ್ತಾರೆ. ಹೀಗೆ ಆದಾಗ ಅಲ್ಲಿ ಅಸಮಾಧಾನದ ಹೊಗೆಯಾಡುತ್ತದೆ. ನಾವು ಇನ್ನೊಬ್ಬರ ಅಭಿಪ್ರಾಯಕ್ಕೆ ಬೆಲೆಕೊಡಬೇಕೆಂಬುದು ಚಿತ್ರದ ಆಶಯವಾಗಿದೆ. ಹಾಗಾದಾಗ ಮಾತ್ರ ಅಲ್ಲಿ ಪರಿಸರ ತಿಳಿಯಾಗಿರುತ್ತದೆ.

ಈ ಕಲಾಕೃತಿಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಸಿದ್ಧಪಡಿಸಿದ ವ್ಯಕ್ತಿ "ಶ್ರೀ ವಿ.ಟಿ.ಕಾಳೆ" ಸಾಕ್ಷ್ಯಚಿತ್ರೀಕರಣದ ಸಮಯದಲ್ಲಿ ಚಿತ್ರಿತವಾಗಿದ್ದು, ಚಂದನ ಛಾನಲ್‌ನಲ್ಲಿ ಪ್ರಸಾರಗೊಂಡಿರುತ್ತದೆ. ಈ ಕಲಾಕೃತಿಯನ್ನು ಕಾಳೆಯವರು ಎರಡು ಗಂಟೆಗಳ ಸಮಯದಲ್ಲಿ ಪೂರ್ಣಗೊಳಿಸಿರುತ್ತಾರೆ.

---

೧೦೪. ಡಾ. ಎಸ್.ಸಿ. ಪಾಟೀಲ, ವಿ.ಟಿ. ಕಾಳೆ, ಪು. ೩೨

ಪ್ರಾಚೀನ ಮತ್ತು ಆಧುನಿಕತೆಗಳ ಸುಳಿಯಲ್ಲಿ

೧೯೮೧ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಏರ್ಪಡಿಸಿದ ಹಂಪಿ ಕಲಾ ಶಿಬಿರದಲ್ಲಿ ಮೂಡಿಬಂದ ಈ ಕಲಾಕೃತಿಯು ಸರಳವಾದ ನಿರೂಪಣೆ ಹೊಂದಿದೆ. ಈ ಕಲಾಕೃತಿಯು ನೋಡುಗರನ್ನು ಯಾವುದೇ ಗೊಂದಲಕ್ಕೆ ಎಡೆ ಮಾಡದೆ ನೋಡಿಸಿಕೊಂಡು ಹೋಗುವಂತಹದು. ಒಂದೇ ವರ್ಣದಲ್ಲಿ ಮೂಡಿಸಲಾದ ಈ ಕೃತಿಯಲ್ಲಿ ನೆರಳು ಮತ್ತು ಬೆಳಕು ಪರಿಣಾಮಕಾರಿಯಾಗಿ ಮೂಡಿಬಂದಿದೆ. ಈ ಕಲಾಕೃತಿಯು ಶೀರ್ಷಿಕೆಯನ್ನು ನೇರವಾಗಿ ಪ್ರತಿಬಿಂಬಿಸುತ್ತದೆ.

ಈ ಸಂಯೋಜನೆಯಲ್ಲಿ ಪ್ರಾಚೀನ ಮತ್ತು ಆಧುನಿಕ ಎಂಬ ಜನಾಂಗದ ನಡುವಿನ ಅಂತರವನ್ನು ತೋರಿಸುವ ಪ್ರಯತ್ನ ಇದಾಗಿದೆ. ಈ ಸಂಯೋಜನೆಯಲ್ಲಿ ಅನೇಕ ರೂಪಗಳು ಇದ್ದು ಒಂದಕ್ಕೊಂದು ಪೂರಕವಾಗಿ ಕೆಲಸಮಾಡಿದೆ. ಇಲ್ಲಿ ಒಬ್ಬ ಪ್ರಾಚೀನ ಕಾಲದ ಋಷಿ ಮುನಿಯ ವೇಷದಲ್ಲಿರುವ ವ್ಯಕ್ತಿ ಶಾಸನವನ್ನು ಕೆತ್ತುತ್ತಿದ್ದಾನೆ. ಪ್ರಾಚೀನ ಕಾಲದ ಕಟ್ಟಡಗಳು ಹಾಳು ಬಿದ್ದಿವೆ. ಇದರಿಂದ ಆಗಿನ ಕಾಲದ ಪೂರ್ಣ ಕಲ್ಪನೆಯನ್ನುಂಟು ಮಾಡುವಂತಿದೆ ಈ ಸನ್ನಿವೇಶ. ಈ ಕಲಾಕೃತಿಯ ಮೇಲಿನ ಭಾಗದಲ್ಲಿ ಆಧುನಿಕ ಕಾಲದ ಯುವಕರು ನಮ್ಮ ಇತಿಹಾಸ, ಪ್ರಾಚೀನ ವೈಭವ, ಸಂಸ್ಕೃತಿ, ಆಚಾರ, ವಿಚಾರವೆನ್ನಲ್ಲಾ ಮರೆತು ಹೊಸ ಹುಮ್ಮಸಿನಲ್ಲಿ ಹೊಸದನ್ನು ಸಾಧಿಸುತ್ತೇವೆ, ಪ್ರಗತಿ ಸಾಧಿಸುತ್ತೇವೆ ಎಂದು ಧ್ವಜವೊಂದನ್ನು ಎತ್ತಿ ಹಿಡಿದುಕೊಂಡು ಹೊರಟಿದ್ದಾರೆ. ಇತಿಹಾಸವನ್ನು ಮರೆತವರು ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಇತಿಹಾಸವೇ ಅಡಿಪಾಯ ಅದರ ಮೇಲೆ ನಾವು ನಮ್ಮ ಕನಸ್ಸಿನ ಮಹಲನ್ನು ಕಟ್ಟಲು ಸಾಧ್ಯ ಎಂಬುದನ್ನು ತೋರಿಸುವ ಉದ್ದೇಶ ಈ ಕಲಾಕೃತಿಯದು. ಆಧುನಿಕ ಸಂದರ್ಭದಲ್ಲಿ ವಿಜ್ಞಾನ ಅನೇಕ ರೀತಿಯಲ್ಲಿ ಮುಂದುವರಿದು ಅದು ಮಾನವನಿಗೆ ಉಪಕಾರಿಯಾಗಿದೆ. ಅದೇ ರೀತಿಯಲ್ಲಿ ಅಪಾಯಕಾರಿಯೂ ಹೌದು ಎಂಬುದನ್ನು ಕಲಾವಿದರು ಇಲ್ಲಿ ನೇರವಾಗಿ ಮನಮುಟ್ಟುವಂತೆ ಹೇಳಿದ್ದಾರೆ. ಒಟ್ಟಿನಲ್ಲಿ ಈ ಕಲಾಕೃತಿಯು ಆಕರ್ಷಕವಾಗಿದ್ದು ದೃಶ್ಯಾತ್ಮಕವಾಗಿ ಪರಿಣಾಮಕಾರಿಯಾಗಿದೆ.

ಸ್ತ್ರೀ

ಈ ಕಲಾಕೃತಿಯು ಕಾಗದದ ಮೇಲೆ ಜಲವರ್ಣಗಳಿಂದ ಚಿತ್ರಿತವಾಗಿದೆ. ೧೯೫೪ರಲ್ಲಿ ಮೂಡಿಬಂದ ಈ ಕಲಾಕೃತಿಯು ಬ್ಲೇಡ್‌ನಿಂದ ರಚಿಸಲಾದ ಈ ಪ್ರಯೋಗಾತ್ಮಕ ಕಲಾಕೃತಿಯ ವಿಶಿಷ್ಟ ಮೈವಳಿಕೆಯನ್ನು ಪಡೆದಿದ್ದು ದೃಶ್ಯಾತ್ಮಕವಾಗಿ ವಿಶಿಷ್ಟ ಅನುಭವ ನೀಡುತ್ತದೆ. ಆಗತಾನೆ ಜೆ.ಜೆ. ಕಲಾಶಾಲೆಯಲ್ಲಿ ಆಧುನಿಕತೆ ಪ್ರವೇಶ ಪಡೆದ ಸಂದರ್ಭವಾಗಿತ್ತು ಆ ಪ್ರಭಾವ ಪ್ರೇರಣೆಯಲ್ಲಿ ಮೂಡಿಬಂದ ಸ್ತ್ರೀ ಶಕ್ತಿಯನ್ನು ಕುರಿತಾದ ಕಲಾಕೃತಿ ಇದಾಗಿದೆ. ನಮ್ಮ ಭಾರತೀಯ ಸಂಸ್ಕೃತಿಯಲ್ಲಿ

ಸ್ತ್ರೀಗೆ ವಿಶಿಷ್ಟವಾದ ಸ್ಥಾನ ಕೊಡಲಾಗಿದೆ. ಸ್ತ್ರೀ ಶಕ್ತಿಯ ದ್ಯೋತಕ, ಪ್ರಗತಿಯು ಅವಳಿಂದಲೇ, ವಿನಾಶವೂ ಅವಳಿಂದಲೇ ಎಂದು ಸಾರುವ ಆಶಯವನ್ನು ಈ ಕಲಾಕೃತಿಹೊಂದಿದೆ. ಈ ಆಶಯ ಸಾರ್ವಕಾಲಿಕ ಸತ್ಯಕೂಡ ಆಗಿದೆ. ಇಲ್ಲಿ ಸ್ತ್ರೀ ಪ್ರಧಾನವಾದ ವಸ್ತುವಾಗಿದ್ದು ಅವಳು ಜಗತ್ತಿನ ಕಣ್ಣು, ಜಗತ್ತನ್ನು ಬೆಳಗುವವಳು, ಸೃಷ್ಟಿಗೆ ಕಾರಣಕರ್ತಳು, ದೊಡ್ಡ ದೊಡ್ಡ ಕಂಬವನ್ನು ನಿಲ್ಲಿಸ ಬಲ್ಲಳು, ಅಂತೆಯೇ ಅದನ್ನು ಕೆಡವಲೂ ಕೂಡ ಶಕ್ತಳು ಎಂಬ ಉದ್ದೇಶ ಈ ಕಲಾಕೃತಿ ಹೊಂದಿದೆ. ಒಟ್ಟಿನಲ್ಲಿ ಈ ಕೃತಿಯು ಹೆಣ್ಣಿನ ಮಹತ್ವ, ಅವಳ ಸಹಜವಾದ ಸ್ತ್ರೀ ಶಕ್ತಿತ್ವ ಗುಣ, ಪುರುಷನ ಬದುಕಿನ ಒಂದು ಭಾಗವಾಗಿ, ಜೀವನಾಡಿಯಾಗಿ ಅವಳ ಪ್ರಾಮುಖ್ಯತೆ, ಇರುವಿಕೆ, ಕುರಿತು ಈ ಕಲಾಕೃತಿಯು ಸಾರುತ್ತದೆ. ಪ್ರಪಂಚದಲ್ಲಿ ಅವಳ ಸ್ಥಾನಮಾನ, ಸ್ತ್ರೀ ಧೋರಣೆಯನ್ನು ಒಟ್ಟಿನಲ್ಲಿ ಕಲಾವಿದರ ಸ್ತ್ರೀಪರ ಕಾಳಜಿಯನ್ನು ಈ ಕೃತಿ ವ್ಯಕ್ತಪಡಿಸುತ್ತದೆ. ಈ ಸಂಯೋಜನೆಯಲ್ಲಿರುವ ಆಕಾರಗಳು, ಬಣ್ಣಗಳು, ನಿರ್ವಹಿಸಿರುವ ರೀತಿ ವಿಭಿನ್ನತೆಯಿಂದ ಸಂಯೋಜನೆಗೊಂಡಿದೆ.

ಈ ಕಲಾಕೃತಿಯಲ್ಲಿ ವರ್ಣಗಳ ಲೇಪನಕ್ಕೆ ಕುಂಚಗಳ ಬದಲಾಗಿ ಬ್ಲೇಡನ್ನು ಬಳಸಲಾಗಿದೆ. ಆಗ ಇದೊಂದು ಹೊಸ ತಂತ್ರವೇ ಆಗಿತ್ತು. 'ಪೇಂಟಿಂಗ್ ನೈಫ್' ಅನ್ನು ಅನೇಕ ಕಲಾವಿದರು ತಮ್ಮ ತಂತ್ರಗಾರಿಕೆಯಲ್ಲಿ ಬಳಸುತ್ತಿದ್ದರಾದರೂ ಕಾಳೆಯವರು ಬ್ಲೇಡನ್ನು ಉಪಯೋಗಿಸಿ ಈ ಕಲಾಕೃತಿಯು ರಚಿಸಿದ್ದಾರೆ. ಒಬ್ಬ ಸ್ತ್ರೀಯ ಶಕ್ತಿ, ಸಾಮರ್ಥ್ಯಗಳನ್ನು ಈ ಕಲಾಕೃತಿಯು ಬಿಂಬಿಸುತ್ತದೆ. ಅವಳು ಜಗತ್ತನ್ನು ಪೋಷಿಸುವ ಕಾಮಧೇನು. ಹಾಲು ಕರೆಯುತ್ತಿರುವ ಸ್ತ್ರೀ ಚಿತ್ರಣವಿದ್ದು ಸ್ತ್ರೀಯಿಂದಲೇ ಜಗತ್ತಿಗೆ ಬೆಳಕು ಎಂಬುದನ್ನು ಸೂಚಿಸಲು ಕಿವಿಯ ಸ್ಥಳದಲ್ಲಿ ಉರಿಯುತ್ತಿರುವ ಕಂದಿಲು. ಹಿನ್ನೆಲೆಯಲ್ಲಿ ಗ್ರಹಾದಿಗಳನ್ನು ನೀಲ ಗಗನ, ಇವಿಷ್ಟು ಸ್ತ್ರೀ ಚಿತ್ರದ ವೈಶಿಷ್ಟ್ಯಗಳಾಗಿರುತ್ತವೆ. ಇಲ್ಲಿ ಕಾಳೆಯವರು ಸೂಚಿಸಿದ ಸೂಚನೆಗನುಸಾರವಾಗಿ ಇನ್ನು ಹಲವಾರು ಚಿತ್ರಗಳನ್ನು ಚಿತ್ರಿಸಬಹುದಾದರೂ ಅವೆಲ್ಲವುಗಳನ್ನು ಕಾಳೆಯವರು ಈ ಚಿತ್ರದಲ್ಲಿ ಅಳವಡಿಸಿ ದ್ದಾರೆ[೧೦೫] ಎಂಬ ಅಭಿಪ್ರಾಯ ಡಾ. ಎಸ್.ಸಿ. ಪಾಟೀಲರದು.

ವ್ಯರ್ಥ ಸಾಹಸ

ತೈಲವರ್ಣದಲ್ಲಿ ಮೂಡಿಬಂದ ಈ ಕಲಾಕೃತಿಯು ಕಾಳೆಯವರ ಅಪೂರ್ವ ಕಲ್ಪನೆಗಳಲ್ಲಿ ಒಂದು. ಭ್ರಮಾಲೋಕಕ್ಕೆ ಕೊಂಡೊಯ್ಯುವ ಈ ಕಲಾಕೃತಿಯು ಕುತೂಹಲವನ್ನು ಸೃಷ್ಟಿಸು ವಂತಹದು. ಇಲ್ಲಿ ಕಲಾವಿದನ ಕಲಾಕೃತಿಯ ರಚನೆಯ ಹಿಂದಿರುವ ಆಶಯವು ವಿಶಿಷ್ಟವೆನಿಸುತ್ತದೆ.

---

೧೦೫. ಡಾ. ಎಸ್.ಸಿ. ಪಾಟೀಲ, ವಿ.ಟಿ. ಕಾಳೆ, ಪು.೩೧

'ದಿ ಡ್ರೀಮ್' (ಕನಸು)



'ಸ್ತ್ರೀ'



ತುಳಿತ



ಪ್ರಾಚೀನ ಮತ್ತು ಆಧುನಿಕತೆಗಳ ಸುಳಿಯಲ್ಲಿ





ಗೋಟ್ಸ್



ಭಿನ್ನಾಭಿಪ್ರಾಯ



ಸಂವಾದ





ವ್ಯರ್ಥ ಸಾಹಸ

ಆಧುನಿಕ ಪ್ರಪಂಚದಲ್ಲಿ ಮಾನವ ಪ್ರಗತಿಯ ಹೆಸರಿನಲ್ಲಿ ಏನೇಲ್ಲಾ ಸಾಹಸ ಸಾಧನೆಗಳನ್ನು ಸಂಶೋಧನೆಗಳನ್ನು ಮಾಡಲು ಹೊರಡುತ್ತಾನೆ. ಅದರಲ್ಲಿ ಅವನು ಜಯ ಅಥವಾ ಅಪಜಯಗಳನ್ನು ಕಾಣಬಹುದು. ಮನುಷ್ಯನ ಆಲೋಚನೆಗಳು ಆತನ ಮಿತಿಯನ್ನು ಮೀರಿ ಬೆಳೆಯುತ್ತಲಿವೆ. ಈ ಆಲೋಚನೆಗಳು ಅವನ ಸಹಜ ಸ್ವಾಭಾವಿಕ ಬದುಕಿನಿಂದ ದೂರವಾಗಿಸಿವೆ. ಎಲ್ಲೆಲ್ಲೂ ಕೃತಕತೆಯೇ ಮನೆ ಮಾಡಿದೆ. ಆತನ ಆಲೋಚನೆ ಎಲ್ಲಿಯವರೆಗೆ ಇದೆ ಎಂದರೆ ಆಕಾಶಕ್ಕೆ ಮೈಲಿಗಲ್ಲುಗಳನ್ನು ಇಟ್ಟು ಭೂಮಿಯಿಂದ ಆಕಾಶವನ್ನು ಅಳತೆ ಮಾಡುವಷ್ಟು ಅವನ ಹುಚ್ಚು ಸಾಧನೆಯ ಮನೋ ಧರ್ಮ ಬೆಳೆದುನಿಂತಿದೆ. ದಿನೇ ದಿನೇ ಬೆಳೆಯುತ್ತಿರುವ ಕೈಗಾರಿಕರಣ, ನಗರೀಕರಣ, ಇವೆಲ್ಲಾ ಮನುಷ್ಯನ್ನು ಸ್ವಾಭಾವಿಕ ಬದುಕನ್ನು ಕಸಿದುಕೊಂಡಿದೆ. ಈ ಅಂಶ ಕಲಾವಿದರಾದ ಕಾಳೆಯವರ ಮನಸ್ಸನ್ನು ಅವರ ಸಂವೇದನೆಯನ್ನು ಕೆಣಕಿದೆ. ಮನುಷ್ಯನ ದಿನೇ ದಿನೇ ಬೆಳೆಯುತ್ತಿರುವ ಈ ಹುಚ್ಚು ಸಾಹಸಗಳನ್ನು ಅದು ತಂದೊಡ್ಡಿರುವ ಅಪಾಯವನ್ನು ಮನಗಂಡು ಕಲಾವಿದನ ಮನಸ್ಸು ಈ ಕಲಾಕೃತಿಯ ಮುಖಾಂತರ 'ಇದು ನಿನ್ನ ವ್ಯರ್ಥ ಸಾಹಸ' ಎಂದು ವ್ಯಂಗ್ಯ ಮಾಡಲು ಹೊರಟಿದೆ.

ಸಂಯೋಜನೆಯ ದೃಷ್ಟಿಯಿಂದ ಈ ಕಲಾಕೃತಿಯು ಅತ್ಯಂತ ಕಡಿಮೆ ವರ್ಣದಲ್ಲಿ ಮತ್ತು ಕೆಲವೇ ಆಕೃತಿಗಳಿಂದ ಸಂಯೋಜಿಸಿದ್ದು ಕುತೂಹಲಕಾರಿಯಾಗಿದೆ.


ರಿಫ್ಲೆಕ್ಸನ್-I, ರಿಫ್ಲೆಕ್ಸನ್-II

ಕಾಳೆಯವರು ಇತ್ತೀಚೆಗೆ ಚನ್ನಪಟ್ಟಣದ ಕಟ್ಟಿಗೆ ಗೊಂಬೆಗಳನ್ನೇ ಆಧರಿಸಿ ಬೊಂಬೆಗಳೇ ಜೀವಂತ ವ್ಯಕ್ತಿಗಳಂತೆ ತಮ್ಮ ತಮ್ಮ ಕಾಯಕದಲ್ಲಿ ನಿರತರಾಗಿರುವಂತೆ ವಿವಿಧ ಭಂಗಿಗಳಲ್ಲಿ ಕಲಾಕೃತಿಗಳನ್ನು ರಚಿಸಿದ್ದಾರೆ. ಆ ಕಲಾಕೃತಿಗಳಿಗೆ 'ರಿಫ್ಲೆಕ್ಸನ್-I', 'ರಿಫ್ಲೆಕ್ಸನ್-II' ಮತ್ತು ಹರಟೆ ಮುಂತಾದ ಶೀರ್ಷಿಕೆಯನ್ನು ನೀಡಿದ್ದಾರೆ.

ಕಾಳೆಯವರ ಕಲಾಕೃತಿಗಳು ಯಾವುದೇ ಒಂದು ಶೈಲಿಗೆ ಅಂಟಿಕೊಂಡವುಗಳಲ್ಲ. ವಸ್ತುವಿಗೆ ತಕ್ಕಂತೆ ಚಿತ್ರಣ ಶೈಲಿ, ತಾಂತ್ರಿಕತೆಗಳು ವೈವಿಧ್ಯತೆಯನ್ನು ಪಡೆಯುತ್ತವೆ. ಅವರು ಇತ್ತೀಚೆಗೆ ರಚಿಸಿದ 'ಪ್ರತಿಬಿಂಬ' (ರಿಫ್ಲೆಕ್ಸನ್) ಸರಣೀಯ ಚಿತ್ರಗಳು ವಿಶಿಷ್ಟ ಶೈಲಿಯಲ್ಲಿ ಚಿತ್ರಣಗೊಂಡಿವೆ. ಇವುಗಳಲ್ಲಿರುವ ಮಾನವಾಕೃತಿಗಳು ನಿಜವಾದ ಮಾನವಾಕೃತಿಗಳಾಗಿರದೇ ಚನ್ನಪಟ್ಟಣದ ಕಟ್ಟಿಗೆ ಬೊಂಬೆಗಳೇ ಮಾನವರಂತೆ ಪ್ರವರ್ತಿಸುತ್ತಿದ್ದಾರೆ.[೧೦೬] ಎಂಬ ಮಾಹಿತಿ ಮಹತ್ವದಾಗಿದೆ.

---

೧೦೬. ಡಾ. ಎಸ್.ಸಿ. ಪಾಟೀಲ, ವಿ.ಟಿ. ಕಾಳೆ, ಪು.೩೧



ರಿಫ್ಲೆಕ್ಸನ್ 1



ರಿಫ್ಲೆಕ್ಸನ್ 2



ರಿಫ್ಲೆಕ್ಸನ್ I (ಪ್ರತಿಬಿಂಬ)

ಕಾಳೆಯವರ ಈ ಕಲಾಕೃತಿಯನ್ನು ವಿಶ್ಲೇಷಿಸುವುದರ ಪೂರ್ವದಲ್ಲಿ ಈ ಕಲಾಕೃತಿಗೆ ಸಂಬಂಧಿಸಿದಂತೆ ಎರಡು ಆಧಾರಗಳನ್ನು ನೋಡಬಹುದು. ಬಂಗಾಲಿ ಶೈಲಿಯ ಕಲಾವಿದ ಕ್ಷೀತಿಂದ್ರನಾಥ ಮಜುಂದಾರ ಅವರು ಈ ವಿಷಯದ ಆಧಾರದ ಮೇಲೆ ಕಲಾಕೃತಿಯೊಂದನ್ನು ರಚಿಸಿರುತ್ತಾರೆ. ಅದಕ್ಕೆ 'ಗುರಿ' ಎಂದು ಶೀರ್ಷಿಕೆಯನ್ನು ನೀಡಿರುವರು. ಆ ಕಲಾಕೃತಿಯು ಕಾಳೆಯವರ ಮನಸ್ಸಿನ ಮೇಲೆ ಗಾಢವಾದ ಪ್ರಭಾವ ಬೀರಿರುವುದು ಕಂಡುಬರುತ್ತದೆ. ಈ ಪ್ರಭಾವ ಪ್ರೇರಣೆಯ ಆಧಾರದ ಮೇಲೆನೇ ಕಾಳೆಯವರು ಈ ಕಲಾಕೃತಿಯನ್ನು ರಚಿಸಿದ್ದಾರೆ.

ಕ್ಷಿತೀಂದ್ರನಾಥ ಮಜುಂದಾರ ಅವರು ರಚಿಸಿದ ಈ ಕಲಾಕೃತಿಯು ಕುರಿತು ೧೯೩೫ರಲ್ಲಿಯೇ ವಿಮರ್ಶೆಯನ್ನು ಬರೆಯಲಾಗಿದೆ. ಅದು 'ಗುರಿ' ಎಂಬ ಚಿತ್ರದಲ್ಲಿ ಒಬ್ಬ ಸುಂದರಿಯು ತನ್ನ ವಕ್ಷಸ್ಥಳದ ಕೋಮಲತೆಯನ್ನು ತೋರುತ್ತ ಕುಳಿತಿದ್ದಾಳೆ. ಆದರೆ ಅವಳ ಮುಖದಲ್ಲಿ ಚಿಂತೆ ಮೂಡಿದೆ. ಕೈಯಲ್ಲಿ ಒಂದು ಅಸ್ಥಿರುಂಡವನ್ನು ಹಿಡಿದು ಅದರ ಕಡೆಗೂ ತನ್ನ ದೇಹದ ಸೌಂದರ್ಯದ ಕಡೆಗೂ ದೃಷ್ಟಿಯನ್ನಿಟ್ಟು ನೋಡುತ್ತಾ ಚಿಂತಾಮಗ್ನಳಾಗಿದ್ದಾಳೆ. "ಇಂದಿನ ಈ ಸುಕುಮಾರ ಕಾಯವು ನಾಳೆ ಈ ಕುರೂಪ ಅಸ್ಥಿರುಂಡದಂತಾಗುತ್ತದಲ್ಲ ಎಂಬ ಚಿಂತೆಯ ಮೂಲಕ ಪಂಚಭೂತಾತ್ಮಕ ಸುಖ ಸೌಂದರ್ಯಗಳಿಗೆ ಮಿಗಿಲಾದ ಒಂದು ಆನಂದವಿದೆಯೆಂಬುದನ್ನು ಚಿತ್ರಗಾರನು ತೋರಿದ್ದಾನೆ"[೧೦೭] ಎಂದು ಅ.ನ.ಕೃ ಅವರು ಈ ಚಿತ್ರದ ಕುರಿತು ವಿಶ್ಲೇಷಣೆ ಮಾಡುತ್ತಾರೆ.

ಈ ಕಲಾವಿದನ 'ಗುರಿ' ಎಂಬ ಕಲಾಕೃತಿಯ ಕುರಿತು ಕಾಳೆಯವರು ಒಂದು ಕಡೆ ಹೀಗೆ ಹೇಳಿದ್ದಾರೆ. "ಕಲಾವಿದ ಕ್ಷಿತೀಂದ್ರನಾಥ ಮಜುಂದಾರ ಅವರು ಚಿತ್ರಿಸಿದ ಒಂದು ಚಿತ್ರದಲ್ಲಿ ಸುಂದರ ಯುವತಿಯೋರ್ವಳು ಕೈಯಲ್ಲಿ ತಲೆಬುರುಡೆಯನ್ನು ಹಿಡಿದು ತದೇಕಚಿತ್ತಳಾಗಿ ಬುರುಡೆ ಯನ್ನೇ ದಿಟ್ಟಿಸುತ್ತಿದ್ದಾಳೆ. ಈ ಚಿತ್ರ ನಮ್ಮ ರಾಷ್ಟ್ರಕವಿ ಕುವೆಂಪು ಅವರನ್ನು ಕೆಣಕಿತು. ಆ ಯುವತಿ ತಲೆಬುರುಡೆಯನ್ನು ನೋಡಿ ತನ್ನ ಈ ರೂಪ, ಚೆಲುವುಗಳೆಲ್ಲ ಕ್ಷಣಿಕ ಎಂದು ಅನಿಸಿರ ಬೇಕು ಅವಳಿಗೆ ಎಂದು ಭಾವಿಸಿದರು ಕುವೆಂಪು. ಅವಳೇನು ಹೇಳುತ್ತಾಳೆ ಎಂದು ಕಿವಿಗೊಟ್ಟ ಕುವೆಂಪು ಅವರಿಗೆ ಅವಳು ಹೇಳಿಕೊಳ್ಳುತ್ತಿರುವ "ಹಿಗ್ಗುವೆ ಏತಕೆ ಚೆಲುವಿನ ಹೆಣ್ಣೆ, ಕಡೆಗೀ ರೂಪಿಗೆ ಗತಿ- ಮಣ್ಣೆ" ಎಂದು ಹೇಳುವ ಮಾತುಗಳು ಕೇಳಿಸಿದವು. ಅವಳ ಮಾತನ್ನೇ ಅವರು ಬರೆದಿಟ್ಟರು".[೧೦೮] ಈ ಹೇಳಿಕೆಯೆ ಕಾಳೆಯವರಿಗೆ ಈ ಕಲಾಕೃತಿ ರಚಿಸಲು ಪ್ರೇರಣೆ ನೀಡಿತು.

---

೧೦೭. ಅ.ನ.ಕೃ., ಭಾರತೀಯ ಚಿತ್ರಕಲೆಯಲ್ಲಿ ರಾಜಾರವಿವರ್ಮನ ಸ್ಥಾನ, ಪು.೮೭

೧೦೮. ಅದೇ ಪು.೮೭

ಈ ಮೇಲೆ ಹೇಳಲಾದ ಕಲಾಕೃತಿಗಿಂತ ಭಿನ್ನವಾಗಿ ಆಧುನಿಕ ಸಂದರ್ಭದಲ್ಲಿ ಕಾಳೆಯವರು ಈ ಕಲಾಕೃತಿಯನ್ನು ಭಿನ್ನ ನಿರೂಪಣೆಯಲ್ಲಿ ಸಂಯೋಜಿಸಿದ್ದಾರೆ. ಚನ್ನಪಟ್ಟಣದ ಕಟ್ಟಿಗೆಯ ಗೊಂಬೆಗಳು ಈ ವಿಷಯದ ಬಾಹ್ಯ ರೂಪಕ್ಕೆ ಪ್ರೇರಿತವಾದರೂ ಆಂತರಿಕವಾಗಿ ಕ್ಷಿತೀಂದ್ರನಾಥ ಮಜುಂದಾರ ಅವರು ಗುರಿ ಚಿತ್ರದ ವಿಷಯವಸ್ತುವನ್ನೇ ವಿಭಿನ್ನ ರೀತಿಯಲ್ಲಿ ಕಾಳೆಯವರು ತಮ್ಮ ವಿಚಾರವನ್ನು ಅಭಿವ್ಯಕ್ತಿಸಿದ್ದಾರೆ. ಚನ್ನಪಟ್ಟಣದ ಗೊಂಬೆಯ ಮಾದರಿಯಾದರೂ ತೊಗಲು ಗೊಂಬೆ ಕಲೆಯ ಛಾಪು ಇಲ್ಲಿ ಕಂಡುಬರುತ್ತದೆ.

ಕಾಳೆಯವರ ಈ ಕೃತಿಯಲ್ಲಿ ಯುವತಿಯೊಬ್ಬಳು ಸರೋವರದ ದಡದಲ್ಲಿ ಬೋರಲು ಮಲಗಿದ್ದಾಳೆ. ಅವಳ ಎದುರಿಗೆ ಒಂದು ತಲೆಬುರುಡೆ ಹಾಗೂ ಒಂದು ಅರಳಿನಿಂತಿರುವ ಹೂವು ಮತ್ತು ಬಾಡಿರುವ ಹೂವು ಇದೆ. ಅವಳ ಇಂದಿನ ಸೌಂದರ್ಯವನ್ನು ಬಾಡಿರುವ ಹೂ ಅಣುಕಿಸುವಂತಿದೆ. "ಇಂದಿನ ನಿನ್ನ ಈ ಚೆಲುವು ನಾಳೆ ಭೀಭತ್ಸ ರೂಪದ ತಲೆಬುರುಡೆಯಾಗುತ್ತದೆ. ಯೌವ್ವನ ಭರಿತ ನಿನ್ನ ಈ ಸುಕೋಮಲ ದೇಹ ಬಾಡಿದ ಹೂವಾಗುತ್ತದೆ. ಚೆಲುವೇ, ಗರ್ವಿಸದಿರು" ಎಂದು ಎಚ್ಚರಿಕೆಯನ್ನು ನೀಡುತ್ತಲಿದೆ. ಸರೋವರದಲ್ಲಿ ಇವೆಲ್ಲವುಗಳ ಪ್ರತಿಬಿಂಬವಿದ್ದು ನೀರಿನಲ್ಲಿ ಕಲಕು ಮಲಕಾಗಿ ಹೋಗಿದೆ. ಹಿನ್ನೆಲೆಯಲ್ಲಿ ಇಬ್ಬರು ಸ್ತ್ರೀಯರು ಈ ಹುಚ್ಚು ಹುಡುಗಿಯ ಚಲವನವಲನಗಳನ್ನು ಟೀಕಿಸುತ್ತಾ ನಿಂತಿದ್ದಾರೆ. ಈ ಕಲಾಕೃತಿಯಲ್ಲಿ ವರ್ಣವು ಪ್ರಧಾನವಾಗಿ ಕಂಡುಬರುತ್ತಿದ್ದು, ಸಂಯೋಜನೆಯು ಪರಿಣಾಮಕಾರಿಯಾಗಿದ್ದು ವೀಕ್ಷಕರರೊಂದಿಗೆ ನೇರವಾಗಿ ಮಾತನಾಡಿದಂತಿದೆ. ಸಾಂಕೇತಿಕತೆಯು ಈ ಕಲಾಕೃತಿಯ ಜೀವಾಳ ವಾಗಿದೆ. ನೀರಿನಲ್ಲಿರುವ ಪ್ರತಿಬಿಂಬ ಯೌವ್ವನ ಸೌಂದರ್ಯ ಶಾಶ್ವತ ಅಲ್ಲ ಮುಂದೆ ಅದು ಒಂದು ದಿನ ಮಣ್ಣಾಗಲೇ ಬೇಕು ಎಂಬ ಅರ್ಥದಲ್ಲಿ ಒಂದು ಸುಂದರ ಮುಖ ಅದರ ಎದುರುಗಡೆ ತಲೆಬುರುಡೆಯಿದ್ದು ಸುಂದರ ಮುಖದ ಹೆಣ್ಣು ಮುಂದೆ ಒಂದು ದಿನ ನನ್ನ ಸೌಂದರ್ಯಕ್ಕೆ ಇದೇ ಗತಿ ಎಂಬ ಚಿಂತೆ ಸ್ಪಷ್ಟವಾಗಿ ಕಾಣುವಂತೆ ಮುಖದಲ್ಲಿ ಮೂಡಿಬಂದಿದೆ. ಇಲ್ಲಿ ಸಾಂಕೇತಿಕ ವಾಗಿ ಒಂದು ಅರಳಿನಿಂತಿರುವ ಹೂವು ಮತ್ತು ಕಂದುಬಣ್ಣಕ್ಕೆ ತಿರುಗಿದ ಬಾಡಿದ ಹೂವನ್ನು ಚಿತ್ರಿಸಲಾಗಿದ್ದು. ಕಾಳೆಯವರ ಸಂಯೋಜನೆ ಕಲಾಕೃತಿಯಲ್ಲಿ ಇದು ಭಿನ್ನವಾದ ನೋಟವನ್ನು ಹೊಂದಿದೆ.

ರಿಫ್ಲೆಕ್ಸನ್ II (ಪ್ರತಿಬಿಂಬ)

ರಿಫ್ಲೆಕ್ಷನ್ I ರ ಕಲಾಕೃತಿಯಲ್ಲಿರುವ ನಿರೂಪಣೆಯನ್ನು ರಿಫ್ಲೆಕ್ಸನ್ II ಚಿತ್ರದಲ್ಲಿ ಕಾಣಬಹುದಾದರೂ ವಿಷಯವಸ್ತು ಭಿನ್ನವಾಗಿದ್ದು ಇಲ್ಲಿ ಮಹಿಳೆಯರು ಸಾಲಾಗಿ ವಿವಿಧ ಭಂಗಿಯಲ್ಲಿ ನಿಂತಿರುವುದು ಇದು ನಮ್ಮ ಭಾರತೀಯ ಸಾಂಪ್ರದಾಯಿಕ ಶೈಲಿಯ ಕಲಾಕೃತಿಗಳನ್ನು ನೆನಪಿಸುವಂತಿದೆ.

ಈ ಕಲಾಕೃತಿಯಲ್ಲಿ ಕೆಲವು ಹೆಂಗಳೆಯರು ನದಿ ದಡದಲ್ಲಿ ನಿಂತು ಚರ್ಚಿಸುತ್ತಿದ್ದಾರೆ. ಅವರ ಭಾವನೆಗಳು, ಅನಿಸಿಕೆಗಳೆಲ್ಲ ನೀರಿನಲ್ಲಿ ಯಥಾವತ್ತಾಗಿ ಪ್ರತಿಬಿಂಬಿಸುತ್ತಿದೆ. ಪ್ರತಿಬಿಂಬ ನಮ್ಮ ನಿಜ ಸ್ವರೂಪವನ್ನು ಚಿತ್ರಿಸುತ್ತದೆ ಎಂಬುದನ್ನು ಚಿತ್ರಿಸಲು ಕಾಳೆಯವರುಈ ಕಲಾಕೃತಿಯಲ್ಲಿ ಯತ್ನಿಸಿದ್ದಾರೆ.[೧೯೯] ಕಾಳೆಯವರ ಕಲಾಕೃತಿಗಳಲ್ಲಿ ಗೊಂಬೆಗಳಿಗೂ ಚಲನಶೀಲ ಜೀವಂತಿಕೆ ಪ್ರಾಪ್ತಿ ಯಾಗಿದೆ ಎಂಬುದನ್ನು ಅವರ ಈ ಎರಡು ಕಲಾಕೃತಿಗಳ ವೀಕ್ಷಣೆಯಿಂದ ಕಂಡುಕೊಳ್ಳಬಹುದು.

ಸಂವಾದ

ಈ ಕಲಾಕೃತಿಯಲ್ಲಿ ಇಬ್ಬರು ಸಮಾನವಯಸ್ಕಯುವತಿಯರು ಸಂವಾದದಲ್ಲಿ ತೊಡಗಿದ್ದಾರೆ. ಬುಡಕಟ್ಟು ಜನಾಂಗದ ವೇಷಭೂಷಣ ಇಲ್ಲಿ ಕಂಡುಬರುತ್ತಿದ್ದು, ಜಾನಪದೀಯ ಅಂಶಗಳು ಪ್ರಮುಖವಾಗಿ ಕಂಡುಬರುತ್ತಿದ್ದರು, ಕಲಾಕೃತಿಯ ನಿರೂಪಣೆ ಶಿಷ್ಟತೆಯಿಂದ ಕೂಡಿದೆ. ಆಕೃತಿಗಳ ಹಿನ್ನೆಲೆಯಲ್ಲಿರುವ ಕಾಡಿನ ಚಿತ್ರ ಮುಖ್ಯ ಕಲಾಕೃತಿಯ ಆಶಯಕ್ಕೆ ಪೂರಕವಾಗಿದೆ. ಈ ಕಲಾಕೃತಿಯಲ್ಲಿ ಮಹಿಳೆಯರು ಉಟ್ಟಿರುವ ಸೀರೆ, ತೊಟ್ಟಿರುವ ಆಭರಣ ವಿಶಿಷ್ಟವೆನಿಸುತ್ತದೆ. ಅತ್ಯಂತ ಕಡಿಮೆ ವರ್ಣಗಳು ಮತ್ತು ರೇಖಾ ಪ್ರಾಧ್ಯಾನತೆಯಲ್ಲಿ ಪ್ರಮುಖವಾಗಿ ಕಂಡುಬರುತ್ತಿದ್ದು ವಿಶಿಷ್ಟ ಪರಿಣಾಮವನ್ನುಂಟು ಮಾಡುವಂತಿದೆ ಈ ಕಲಾಕೃತಿ.

ಗ್ರಾಮೀಣ ಜನ ಜೀವನದ ಸರಣಿ ಕಲಾಕೃತಿಗಳು

ಈ ವಿಷಯ ವಸ್ತುವನ್ನು ಹೊಂದಿರುವ ಕಲಾಕೃತಿಗಳು ಕಾಳೆಯವರ ಇತ್ತೀಚಿನ ಅಂದರೆ ೨೦೦೮ರ ಸರಣಿ ಸಂಯೋಜನಾ ಕಲಾಕೃತಿಗಳಾಗಿವೆ. ಗ್ರಾಮೀಣ ಮಹಿಳೆಯರು ಆಯಾ ಮನೆಗೆಲಸ ದಲ್ಲಿ ನಿರತ ರಾಗಿರುವ ಅಂದರೆ, ಮೊಸರು ಕಡೆಯುವ, ಗುಂಡುಕಲ್ಲಿನಿಂದ ರುಬ್ಬುವ, ಒನಕೆಯಿಂದ ಕುಟ್ಟುವ, ಕಾಳನ್ನು ಬೀಸುವ, ಕಡಬತ್ ಕಲ್ಲಿನಲ್ಲಿ ಚಟ್ನಿ ಅರೆಯುತ್ತಿರುವ ಕಲಾಕೃತಿಗಳಾಗಿವೆ.

ಆಧುನಿಕತೆಯ ಗಾಳಿ ಈಗ ಎಲ್ಲಾ ರಂಗದಲ್ಲಿ ಬೀಸತೊಡಗಿದೆ. ಹಾಗೇ ಈ ಭರಾಟೆಯಲ್ಲಿ ಗ್ರಾಮೀಣ ಪರಿಸರ ಮನೆಯ ಪ್ರಮುಖ ಭಾಗವಾದ ಅಡುಗೆ ಮನೆಯನ್ನು ಅದು ಪ್ರವೇಶಿಸಿದ್ದು. ಅದು ತನ್ನತನವನ್ನು ನಿಧಾನವಾಗಿ ಕಳೆದುಕೊಳ್ಳುತ್ತಿದೆ. ಹೊಸ ಹೊಸ ಅನ್ವೇಷಣೆಗಳು ಮನುಷ್ಯನ ಸ್ವಾಭಾವಿಕ ಬದುಕಿನ ಮೇಲೆ ಗಾಢವಾದ ಪರಿಣಾಮ ಬೀರಿದೆ. ವೇಗದ ಬದುಕಿನ ಜಂಜಾಟದಲ್ಲಿ ನಿಧಾನಗತಿಯಾದ ಕೆಲಸವನ್ನು ಮಾಡಲು ಯಾರೂ ಇಷ್ಟಪಡುವುದಿಲ್ಲ. ಈಗ ನಿಮಿಷದಲ್ಲಿಯೇ ರುಬ್ಬುವ ಆಧುನಿಕ ಮಿಕ್ಸರ್ ಗ್ರ್ಯಾಂಡರ್ ಅಡುಗೆ ಮನೆಯಲ್ಲಿ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿದೆ.

---

೧೯೯. ಡಾ. ಎಸ್.ಸಿ. ಪಾಟೀಲ, ವಿ.ಟಿ. ಕಾಳೆ, ಪು.೩೧



ಮೊಸರನ್ನು ಕಡೆಯುತ್ತಿರುವ ಗ್ರಾಮೀಣ ಮಹಿಳೆ



ಕಡಬತ ಕಲ್ಲಿನಲ್ಲಿ ಖಾರಾ ರುಬ್ಬುತ್ತಿರುವ ಗ್ರಾಮೀಣ ಮಹಿಳೆ



ರುಬ್ಬುಗುಂಡನಲ್ಲಿ ಧಾನ್ಯಗಳನ್ನು ಅರಿಯುತ್ತಿರುವ ಗ್ರಾಮೀಣ ಮಹಿಳೆಯರು



ಒನಕ್ಕೆಯಿಂದ ಧಾನ್ಯವನ್ನು ಕುಟ್ಟುತ್ತಿರುವ ಗ್ರಾಮೀಣ ಮಹಿಳೆ





ಬೀಸುಕಲ್ಲಿನಲ್ಲಿ ಹಿಟ್ಟನ್ನು ರುಬ್ಬುತ್ತಿರುವ ಗ್ರಾಮೀಣ ಮಹಿಳೆಯರು



ಅಡುಗೆ ಕೆಲಸದಲ್ಲಿ ನಿರತಳಾದ ಗ್ರಾಮೀಣ ಮಹಿಳೆ



ಮೊಸರನ್ನು ಮಾರುತ್ತಿರುವ ಗ್ರಾಮೀಣ ವ್ಯಕ್ತಿ



ಜೋಗಿ

ಈ ಆಧುನಿಕ ಸಾಮಗ್ರಿ ಬಂದಾಗಿನಿಂದ ಗ್ರಾಮೀಣರು ಅಡುಗೆ ಮನೆಯಲ್ಲಿ ಬಳಸಲಾದ ಕಡಬತ್‌ಕಲ್ಲು, ಒನಕೆ, ಗುಂಡುಕಲ್ಲು, ಬೀಸುವಕಲ್ಲು, ಮುಂತಾದ ಸಾಮಗ್ರಿಗಳು ಮೂಲೆಗುಂಪಾಗಿ ಸೇರಿವೆ. ಈ ವಸ್ತುಗಳೊಂದಿಗೆ ಗ್ರಾಮೀಣ ಮಹಿಳೆಯರ ಬದುಕು ಹಾಸುಹೊಕ್ಕಾಗಿತ್ತು. ಗ್ರಾಮೀಣ ಮಹಿಳೆ ಸೂರ್ಯಮೂಡುವ ಮೊದಲೇ ಎದ್ದು ಜೋಳ ಮುಂತಾದ ಕಾಳುಗಳನ್ನು ಬೀಸಿ ಹಿಟ್ಟನ್ನು ಪಡೆದು ಮೊಸರನ್ನು ಕಡೆದು, ಒನಕೆಯಿಂದ ಖಾರ ಕುಟ್ಟಿ, ಹೀಗೆ ರಾತ್ರಿ ಮಲಗುವವರೆಗೂ ಒಂದಿಲ್ಲೊಂದು ಕೆಲಸದಲ್ಲಿ ನಿರತಳಾಗಿರುತ್ತಿದ್ದುದು ಸರ್ವವಿಧಿತ. ಪ್ರಸ್ತುತ ಈ ಎಲ್ಲಾ ಕೆಲಸಗಳು ಮರೆಯಾಗುತ್ತಿರುವುದು ಕಂಡುಬರುತ್ತಿದೆ.

ಗ್ರಾಮೀಣ ಪರಿಸರದಲ್ಲಿಯೇ ಬಾಲ್ಯವನ್ನು ಕಳೆದ ಕಾಳೆಯವರು ಸಹಜವಾಗಿಯೇ ತಮ್ಮ ಸುತ್ತಮುತ್ತ ತಮ್ಮ ಮನೆಯಲ್ಲಿಯೇ ತಮ್ಮ ತಾಯಿ, ಇಂತಹ ಕೆಲಸಗಳಲ್ಲಿ ನಿರತರಾಗಿರುವುದನ್ನು ನೋಡಿರುತ್ತಾರೆ. ಆ ಒಂದು ಗ್ರಾಮೀಣ ಬದುಕನ್ನು, ಪರಿಸರವನ್ನು, ಆ ನೆನಪುಗಳನ್ನು ಶಾಶ್ವತವಾಗಿ ಹಿಡಿದಿಡುವ ಉದ್ದೇಶದಿಂದ ಈ ಕಲಾಕೃತಿಗಳನ್ನು ರಚಿಸಿರುತ್ತಾರೆ.

ಈ ಕಲಾಕೃತಿಗಳು ಕರ್ನಾಟಕದ ಜನಪದವೂ ಅಲ್ಲದ ಸಂಪೂರ್ಣ ಭಾರತೀಯವೂ ಅಲ್ಲದ ವಿಶಿಷ್ಟ ಶೈಲಿಯಲ್ಲಿ ಇವರೆಡೂ ಅಂಶಗಳನ್ನು ಈ ಸರಣಿ ಕಲಾಕೃತಿಗಳಲ್ಲಿ ಕಾಳೆಯವರು ತಂದಿದ್ದಾರೆ.[೧೧೦] ಸಾಮಾನ್ಯ ಜನರಿಗೆ ಸುಲಭವಾಗಿ ಅರ್ಥವಾಗುವಂತೆ ಅವರಿಗೆ ರುಚಿಸುವಂತೆ, ಒಂದು ವರ್ಗದ ಜನರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಕಲಾಕೃತಿಗಳು ರಚನೆಗೊಂಡಿರುವುದು ಕಂಡುಬರುತ್ತವೆ.

ಗ್ರಾಮೀಣ ಪರಿಸರವನ್ನು ಕಣ್ಣಿಗೆ ಕಟ್ಟುವಂತೆ ಅವರ ಸಹಜ ಬದುಕನ್ನು ತಮ್ಮ ಕಲಾಕೃತಿಗಳಲ್ಲಿ ಸಂಯೋಜಿಸಿದ್ದಾರೆ. ಈ ಕಲಾಕೃತಿಗಳು ವೀಕ್ಷಕರೊಂದಿಗೆ ನೇರವಾಗಿ ಮಾತನಾಡುತ್ತವೆ. ಯಾವ ಗೊಂದಲವಿಲ್ಲದ ಸ್ಪಷ್ಟವಾದ ನಿರೂಪಣೆ ಇಲ್ಲಿ ಕಂಡುಬರುತ್ತದೆ. ಗ್ರಾಮೀಣ ಮಹಿಳೆಗೆ ತನ್ನ ಮನೆಯೇ ಸರ್ವಸ್ವ, ತನ್ನ ಮನೆಯಲ್ಲಿರುವ ಸದಸ್ಯರಿಗಾಗಿ ನಿತ್ಯ ದುಡಿಯುವ ಕಾರ್ಯದಲ್ಲಿಯೇ ಬದುಕಿನ ಸಾರ್ಥಕತೆಯನ್ನು ಕಾಣುತ್ತಾಳೆ. ಅವಳಿಗೆ ಜೊತೆಯಾಗಿ ಈ ಸಾಮಗ್ರಿಗಳು ಅವಳ ಕೆಲಸ ಕಾರ್ಯಗಳಿಗೆ ನೆರವಾಗುತ್ತವೆ. ಈ ಸಾಮಗ್ರಿಗಳು ಅವಳ ಬದುಕಿನ ಪ್ರಮುಖ ಅಂಗಗಳೇ ಆಗಿರುತ್ತವೆ. ಮೈಮುರಿದು ಕೆಲಸ ಮಾಡುವುದರಿಂದ ಅವಳು ದೈಹಿಕವಾಗಿ ಆರೋಗ್ಯ ಪೂರ್ಣಳಾಗಿ ಪ್ರಬಲಳಾಗಿಯೂ ಕಂಡುಬರುತ್ತಾಳೆ. ಈ ಎಲ್ಲಾ ಅಂಶಗಳನ್ನು ಕಾಳೆಯವರ ಕಲಾಕೃತಿಗಳಲ್ಲಿ ಸ್ಪಷ್ಟವಾಗಿ ಕಾಣಬಹುದು.

---

೧೧೦. ಡಾ. ಎಸ್.ಸಿ. ಪಾಟೀಲ, ವಿ.ಟಿ. ಕಾಳೆ, ಪು.೨೧

ಈ ಕೆಲಸಗಳು ಅವುಗಳಿಂದ ತಯಾರಾದ ಆಹಾರದಲ್ಲಿ ರುಚಿಕಟ್ಟುತನ, ಪೌಷ್ಟಿಕಾಂಶತೆಯಿದ್ದು ಕಲಬೆರಕೆಯಿಲ್ಲದೆ ಇರುವುದರಿಂದ ಗ್ರಾಮೀಣ ಜನರು ಆರೋಗ್ಯಪೂರ್ಣರಾಗಿ ಗಟ್ಟಿಮುಟ್ಟಾಗಿ ಕಂಡುಬರುತ್ತಾರೆ. ಪ್ರಸ್ತುತ ಈ ಎಲ್ಲಾ ಅಂಶಗಳು ಮರೆಯಾಗುತ್ತಿರುವುದು, ಕೃತಕತೆ ಎಲ್ಲಾ ಕಡೆಯೂ ವ್ಯಾಪಿಸಿದೆ. ಬದುಕಿನಲ್ಲಿ, ತಿನ್ನುವ ಆಹಾರದಲ್ಲಿ, ವೇಷಭೂಷಣಗಳಲ್ಲಿ ಸಹಜತೆ ಮರೆಯಾಗುತ್ತಿದೆ. ಈ ಎಲ್ಲಾ ಅಂಶ ಕಾಳೆಯವರ ಕಲಾವಿದನ ಸೂಕ್ಷ್ಮ ಮನಸ್ಸು ಸಹಜವಾಗಿಯೇ ಪರಿತಪಿಸಿದೆ. ಈ ಕೆಲಸ ಕಾರ್ಯಗಳನ್ನು ಅವಳೊಂದಿಗೆ ಒಂದಾಗಿರುವ ಮಹಿಳೆಯ ಬದುಕನ್ನು ದೃಶ್ಯಮಾಧ್ಯಮದ ಮುಖಾಂತರ ಶಾಶ್ವತವಾಗಿ ಹಿಡಿದಿಡುವುದೇ ಈ ಸರಣಿ ಕಲಾಕೃತಿಗಳ ಹಿಂದಿರುವ ಉದ್ದೇಶವಾಗಿದೆ. ಕಾಳೆಯವರ ಗ್ರಾಮೀಣ ಪರಿಸರದ ಕುರಿತಾದ ಪ್ರೀತಿ ಕಾಳಜಿ ಈ ಮೂಲಕ ವ್ಯಕ್ತವಾಗಿದೆ.

ಒಟ್ಟು ಈ ಕಲಾಕೃತಿಗಳು ತೈಲವರ್ಣದ ಮಾಧ್ಯಮದಲ್ಲಿ ಕ್ಯಾನ್ವಾಸಿನ ಅವಕಾಶದಲ್ಲಿ ರಚಿಸಲಾಗಿದ್ದು ಸಾಮಾನ್ಯ ಜನರಿಗೂ ಕೂಡ ಸುಲಭವಾಗಿ ಸಂವಹನಗೊಳ್ಳುವಂತೆ ಮುಖ್ಯವಾಗಿ ಇಲ್ಲಿ ಬಳಸಿರುವಂತಹ ಸ್ವಚ್ಛ ಬಣ್ಣಗಳು ನೆರಳು ಬೆಳಕಿನಾಟ ನೋಡುವವರನ್ನು ಸೆಳೆಯುವಂತಿವೆ. ಇಲ್ಲಿನ ಆಕೃತಿಗಳು ಒಂದಕ್ಕೊಂದು ಪೂರಕವಾಗಿದ್ದು ಒಟ್ಟು ಸಂಯೋಜನೆಯ ವಿಷಯವಸ್ತುವನ್ನು ನಿರ್ವಹಿಸುವಲ್ಲಿ ಯಶಸ್ವಿಗೊಂಡಿದೆ.

ವಾಣಿಜ್ಯ ಬೇಡಿಕೆಗೆ ಸಂಬಂಧಿಸಿದ ಸಂಯೋಜನಾ ಚಿತ್ರಗಳು

ಕಾಳೆಯವರು ತಮ್ಮ ಬದುಕಿನುದ್ದಕ್ಕೂ ಸಾವಿರಾರು ಕಲಾಕೃತಿಗಳನ್ನು ರಚಿಸಿದ್ದು ಅದರಲ್ಲಿ ಅವರ ಅಂತಃಪ್ರೇರಣೆಯಿಂದ ಮೂಡಿಬಂದ ಕೆಲವು ಕಲಾಕೃತಿಗಳು ನೋಡುಗರಿಗೆ ಆತ್ಮೀಯ ವೆನಿಸಿದರೆ, ಇನ್ನೂ ಕೆಲವು ಕೃತಿಗಳು ಮತ್ತೊಬ್ಬರ ಸಂತೋಷಕ್ಕಾಗಿ, ಅವರನ್ನು ಸಂತೋಷಪಡಿಸುವ ಸಲುವಾಗಿ ಬೇಡಿಕೆಗೆ ಅನುಗುಣವಾಗಿ, ವಾಣಿಜ್ಯ ಹಿನ್ನೆಲೆಯಲ್ಲಿ ಅವರ ಸಾವಿರಾರು ಕಲಾಕೃತಿಗಳು ನಾಡಿನಲ್ಲಿ ಅಷ್ಟೇ ಅಲ್ಲದೆ ದೇಶ ವಿದೇಶಗಳ ಮನೆಗಳಲ್ಲಿ, ಮಠಗಳಲ್ಲಿ ಇಂದು ಸಂಗ್ರಹಗೊಂಡಿವೆ. ಮತ್ತೊಬ್ಬರ ಬೇಡಿಕೆಗೆ ಅನುಗುಣವಾಗಿ ಈ ಕಲಾಕೃತಿಗಳನ್ನು ರಚನೆಗೊಂಡಿದ್ದರೂ ಸಹ ಅಲ್ಲಿ ಕಾಳೆಯವರ ಅಂತಃಸತ್ವ ಕಂಡುಬರುತ್ತದೆ. ಕಲಾಕೃತಿಗಳ ಕುರಿತು ಶ್ರದ್ಧೆ, ಶ್ರಮ ಕಂಡುಬರುತ್ತದೆ. ತಾವು ಮಾಡಿದ ವಾಣಿಜ್ಯ ಕಲಾಕೃತಿಗಳಿಗೆ ಪ್ರತಿಯಾಗಿ ಹಣ ಪಡೆದುಕೊಳ್ಳುತ್ತಾರಾದರೂ, ಆ ಕಲಾಕೃತಿಗಳನ್ನು ಬೇಡಿಕೆದಾರರ ಕೈಯಿಗೆ ಒಪ್ಪಿಸುವಲ್ಲಿ ದುಃಖ ಪಡುತ್ತಾರೆ. ಕಾಳೆಯವರು ಹೇಳುವಂತೆ "ಕಲಾಕೃತಿ ಯಾವುದೇ ಆಗಿರಲಿ, ಅವುಗಳ ಜೊತೆ ಒಂದು ತೆರನಾದ ಮಾನಸಿಕ ಸಂಬಂಧವಿರುತ್ತದೆ. ಅವುಗಳನ್ನು ಮತ್ತೊಬ್ಬರ ಕೈಯಿಗೆ ಒಪ್ಪಿಸುವಾಗ ಮಗಳನ್ನು ಗಂಡನ ಮನೆಗೆ ಕಳುಹಿಸುವಾಗ

ಆಗುವ ದುಃಖದಂತೆ ಒಂದು ತೆರನಾದ ದುಃಖವಾಗುತ್ತದೆ" ಎಂದು ಹೇಳುತ್ತಾರೆ. ಈ ರೀತಿಯಾಗಿ ಕಾಳೆಯವರಿಗೆ ಅವರ ಕಲಾಕೃತಿಗಳೆಂದರೆ ಒಂದು ತೆರನಾದ ಮಾನಸ ಮಕ್ಕಳು ಇದ್ದಂತೆ.

ಕಾಳೆಯವರು ತಮ್ಮ ಕಲಾಶಿಕ್ಷಣ ಪೂರೈಸಿದ ನಂತರ ತಮ್ಮ ಮಾತೃಸಂಸ್ಥೆಯಾದ ಗದಗಿನ ವಿಜಯ ಕಲಾಮಂದಿರದಲ್ಲಿಯೇ ಶಿಕ್ಷಕನಾಗಿ ೧೦-೧೨ ವರ್ಷ ಸೇವೆಸಲ್ಲಿಸಿದ್ದರು. ನಂತರ ಮದುವೆ, ಮಕ್ಕಳು, ಕಾರಣಾಂತರಗಳಿಂದ ಸಂಡೂರಿಗೆ ಬಂದು ಅವರು ಅಲ್ಲಿನ ಘೋರ್ಪಡೆಯವರು ನಡೆಸುತ್ತಿದ್ದ ವಸತಿ ಶಾಲೆಯಲ್ಲಿ ಕಲಾಶಿಕ್ಷಕ ವೃತ್ತಿಯನ್ನು ಕೈಗೊಂಡು ಸುಮಾರು ೩೫ ವರ್ಷಗಳ ಕಾಲ ಸೇವೆಸಲ್ಲಿಸಿ ಅಲ್ಲಿಯೇ ನಿವೃತ್ತಿಯನ್ನು ಕೂಡಾ ಹೊಂದಿದರು. ಈ ಮಧ್ಯೆ ಅವರ ಸಂಸಾರ ಕೂಡಾ ದೊಡ್ಡದಾಯಿತು. ಈ ಸಂಸಾರದ ನಿರ್ವಹಣೆಗೆ ಅವರು ಶಿಕ್ಷಕ ವೃತ್ತಿಯೊಂದನ್ನೆ ಅವಲಂಬಿಸಿರಲಿಲ್ಲ. ಅವರು ಕಲಿತ ಕಲಾ ಶಿಕ್ಷಣ ಅವರ ಬದುಕನ್ನು ನಿರ್ವಹಿಸಲು ಸಹಕಾರಿ ಯಾಯಿತು. ಅವರು ಶಿಕ್ಷಕ ವೃತ್ತಿಯ ಜೊತೆ ಜೊತೆಗೆ ಅನೇಕ ವಾಣಿಜ್ಯ ಬೇಡಿಕೆಗೆ ಸಂಬಂಧಿಸಿದಂತ ಕಲಾಕೃತಿಗಳನ್ನು ರಚಿಸುತ್ತಾ ಬಂದಿದ್ದಾರೆ. ಕಾಳೆಯವರು ಕರ್ನಾಟಕದ ಚಿತ್ರಪ್ರಕಾಶಕರಿಗಾಗಿ ಹಲವಾರು ದೇವ ದೇವತೆಗಳ, ಶರಣರ ಚಿತ್ರ ಕಲಾಕೃತಿಗಲನ್ನು ರಚಿಸಿಕೊಟ್ಟಿದ್ದಾರೆ. ಅವುಗಳಲ್ಲಿ, ವೀರಶೈವ ಮಹಾವೃಕ್ಷ, ವೀರಭದ್ರೋದ್ಭವ, ರೇಣುಕಾ ಮಹಾತ್ಮೆ, ಅನುಭವ ಮಂಟಪದಲ್ಲಿ ಅಕ್ಕಮಹಾ ದೇವಿ, ಅಶ್ವರೂಢ ಬಸವೇಶ್ವರ, ಎಡೆಯೂರು ಶ್ರೀ ಸಿದ್ಧಲಿಂಗೇಶ್ವರ, ಶರಣಬಸವೇಶ್ವರ ಮುಂತಾಗಿ ಮೂವತ್ತಕ್ಕೂ ಹೆಚ್ಚು ಕಲಾಕೃತಿಗಳನ್ನು ಗದುಗಿನ ಕೆ.ಎನ್. ಕಬಾಡಿ ಎಂಬ ಚಿತ್ರ ಪ್ರಕಾಶಕರು ಪ್ರಕಟಿಸಿ ಕರ್ನಾಟಕದ ಮನೆ ಮನೆಗಳಲ್ಲಿ ಕಂಗೊಳಿಸುವಂತೆ ಮಾಡಿದ್ದರು. ಆಗ ಮುದ್ರಣ ಕಲೆಯು ಈಗಿನಷ್ಟು ಪ್ರವರ್ಧಮಾನವಾಗಿ ಬೆಳೆದಿರಲಿಲ್ಲ. ತಾಮ್ರ ಇಲ್ಲವೆ ಝಿಂಕ್ ಷೀಟ್‌ಗಳ ಮೇಲೆ ಪಡಿಯಚ್ಚುಗಳನ್ನು ಸಿದ್ಧಪಡಿಸಿ, ಮುದ್ರಿಸಿ ಪ್ರಕಟಿಸುವ ಕಾಲವದು. ಶಿವಕಾಶಿಯಲ್ಲಿ ಕಲ್ಲಚ್ಚಿನಿಂದ ಮುದ್ರಿಸುವ ಕೆಲಸ ನಡೆಯುತ್ತಿತ್ತಾದರೂ ಕಬಾಡಿಯವರು ಮುಂಬಯಿಯ ಮುದ್ರಣಾಲಯದಲ್ಲಿ ತಮ್ಮ ಪ್ರಕಾಶನ ವ್ಯವಸ್ಥೆಯನ್ನು ಮಾಡಿಕೊಂಡಿದ್ದರು. ಆ ಕಾರಣವಾಗಿ ಕಾಳೆಯವರ ಮೂವತ್ತಕ್ಕೂ ಹೆಚ್ಚು ಮೂಲ ಕಲಾಕೃತಿಗಳನ್ನು ಅವುಗಳ ಪಡಿಯಚ್ಚುಗಳನ್ನೂ ಮುಂಬಯಿಯ ಮುದ್ರಣಾಲಯದಲ್ಲಿಯೇ ಇರಿಸಿದ್ದರು. ಮತ್ತೆ ಮುದ್ರಿತ ಪ್ರತಿಗಳು ಬೇಕಾದಾಗ ಮುದ್ರಿಸಿಕೊಳ್ಳಲು ಸುಲಭವಾಗುತ್ತದೆ ಎಂಬುದು ಅವರ ಉದ್ದೇಶವಾಗಿಗಿತ್ತು. ದುರ್ದೈವ ವಶಾತ್ ಆ ಮುದ್ರಣಾಲಯಕ್ಕೆ ಬೆಂಕಿಬಿದ್ದು, ಮುದ್ರಣಾಲಯವು ಸಂಪೂರ್ಣ ಭಸ್ಮವಾಗಿ ಹೋಯಿತು. ಜೊತೆಗೆ ಕಾಳೆಯವರ ಮೂಲ ಕಲಾಕೃತಿಗಳೂ ಪಡಿಯಚ್ಚುಗಳೂ ಸುಟ್ಟು ಹೋದವು. ಜೊತೆಗೆ ಕೆ.ಎನ್. ಕಬಾಡಿಯವರ ಚಿತ್ರ ಪ್ರಕಾಶನ ಸಂಸ್ಥೆಯೂ ಮುಚ್ಚಿ ಹೋಯಿತು.

ಕೆ.ಎನ್. ಕಬಾಡಿಯವರಲ್ಲದೇ ಜೈಹಿಂದ್ ಗ್ಲಾಸ್ ಟ್ರೇಡರ್ಸ್ ಸಂಸ್ಥೆಯವರೂ ಟಿ.ಜಿ. ಹಾವನೂರ ಅವರು ಬನಶಂಕರಿ, ಶರಣ ಬಸವೇಶ್ವರ, ಪಂಚಪೀಠಾಧೀಶರರು, ಶಿಶುನಾಳ ಶರೀಫ, ಮುಂತಾದ ಕಲಾಕೃತಿಗಳನ್ನು ಪ್ರಕಟಿಸಿದರು. ಅದರಂತೆ ಹಚ್ಚೆಯ ಚಿತ್ರ ಪ್ರಕಾಶನ ಸಂಸ್ಥೆಯೊಂದು ಕಲಬುರ್ಗಿ ಶರಣ ಬಸವೇಶ್ವರ, ತಿಂಥಿಣಿ ಮೌನೇಶ್ವರ ಮೊದಲಾದ ನಾಲ್ಕಾರು ಕಲಾಕೃತಿಗಳನ್ನು ಪ್ರಕಟಿಸಿದ್ದು ಅವುಗಳೆಲ್ಲ ಉತ್ತರ ಕರ್ನಾಟಕದ ಮನೆಮನೆಗಳ ಗೋಡೆಗಳನ್ನು ಅಂಲಕರಿಸಿವೆ.

ಹೀಗೆ ವ್ಯಾಪಾರಿ ದೃಷ್ಟಿಯಿಂದ ಕಾಳೆಯವರು ಕಲಾಕೃತಿಗಳನ್ನು ರಚಿಸುತ್ತಾ ಬಂದರು. ಇದಕ್ಕೆ ಪ್ರತಿಯಾಗಿ ಅವರ ಕಲಾಕೃತಿಗಳು ನಾಡಿನಾದ್ಯಂತ ಕಲಾಕೃತಿಗಳು ಮನೆ, ಮಠಗಳಲ್ಲಿ ಕಂಡು ಬಂದು ದುಡ್ಡು ಮತ್ತು ಹೆಸರನ್ನು ಗಳಿಸಿದರು. ಆ ಕಲಾಕೃತಿಗಳನ್ನು ಸ್ಥೂಲವಾಗಿ ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

೧. ಸಹಸ್ರಾರ್ಜುನ ದೇವತಾ ವರ್ಣಚಿತ್ರ

ಗದುಗಿನ ಸೋಮವಂಶ ಕ್ಷತ್ರಿಯ ಸಮಾಜಕ್ಕೆ ಮಾಡಿಕೊಟ್ಟ ಈ ಕಲಾಕೃತಿಯು ದೇಶದಲ್ಲಿ ಮೊಟ್ಟಮೊದಲಬಾರಿಗೆ ಮುದ್ರಣಗೊಂಡ ಮೌಲಿಕ ಕೃತಿ. ಸಹಸ್ರಾರ್ಜುನನ ಚಿತ್ರದ ಕಲ್ಪನೆಯನ್ನು ದೃಶ್ಯದ ಮುಖಾಂತರ ಪ್ರಕಟಪಡಿಸಿದ್ದು ಕಾಳೆಯವರೇ ಮೊದಲಿಗರು ಎಂಬ ಶ್ರೇಯಸ್ಸಿಗೆ ಪಾತ್ರರಾಗಿದ್ದಾರೆ. ಆಳೆತ್ತರದ ಈ ಬೃಹತ್ ಪ್ರಮಾಣದ ಕಲಾಕೃತಿಯು ಕ್ಯಾನ್ವಾಸಿನ ಅವಕಾಶದಲ್ಲಿ ತೈಲವರ್ಣದಿಂದ ರೂಪಗೊಂಡಿದೆ. ಈ ಕಲಾಕೃತಿಯ ಸಂಯೋಜನೆಯು ಅದ್ಭುತ ಪರಿಣಾಮಕಾರಿ ಯಾಗಿ ಮೂಡಿಬಂದಿದೆ. ಬಿಲ್ಲು ಬಾಣವನ್ನು ಹಿಡಿದು ನಿಂತ ಧೀರೋದಾತ್ತ ರೂಪದ ಅರ್ಜುನನ ಆಕೃತಿಯು ಹಿನ್ನೆಲೆಯಲ್ಲಿ ಸಾಂಕೇತಿಕವಾಗಿ ಸಹಸ್ರ ಕೈಗಳ ಕಲ್ಪನೆಯನ್ನುಂಟು ಮಾಡುವಂತೆ ಸಹಸ್ರಾರ್ಜುನ ದೇವತಾ ಚಿತ್ರವಿದ್ದು. ಚಿತ್ರದ ಹಿನ್ನೆಲೆಗೆ ಸರಿದಿರುವುದು ಮುಂದಿನ ಆಕೃತಿಯ ಮೇಲೆ ಬೆಳಕು ಬಿದ್ದು ಅದು ಪ್ರಜ್ವಲಿಸುವಂತೆ ಮಾಡಿದೆ. ಹಿಂದಿನ ಆಕೃತಿಯ ಮಬ್ಬುಗತ್ತಲಲ್ಲಿರು ವಂತೆ ರಚಿಸಲಾಗಿದ್ದು ಸಹಸ್ರಾರ್ಜುನ ದೇವತೆಯನ್ನು ಸಾಂಕೇತಿಕವಾಗಿ ಕಲ್ಪಿಸಲಾಗಿರುವುದು ವಿಶೇಷ ಪರಿಣಾಮವನ್ನುಂಟು ಮಾಡುತ್ತದೆ. ಈ ಕಲಾಕೃತಿಯ ರಚನೆಯು ಭಾಗವತ ಪುರಾಣಾಧಾರಿತ ಕೃತಿಯಾಗಿದೆ.

೨. ಬೂದೇಶ್ವರ ಕಲಾಕೃತಿ

ಈ ಕಲಾಕೃತಿಯು ಮಾಜಿ ಸಂಸದ ಶ್ರೀ ಹೆಚ್.ಜಿ. ರಾಮುಲು ಅವರ ಅಪೇಕ್ಷೆಯ ಮೇರೆಗೆ ರಚಿತವಾಗಿದ್ದು ಬೂದಗುಂಪಿಯಲ್ಲಿ ರಾಮುಲು ಅವರೇ ನಿರ್ಮಿಸಿದ ಬೂದೇಶ್ವರ ದೇವಾಲಯದಲ್ಲಿ ಸಂಗ್ರಹಿತಗೊಂಡಿದೆ. ಈ ಕಲಾಕೃತಿಯನ್ನು ತೈಲವರ್ಣದಲ್ಲಿ ರಚಿಸಲಾಗಿದೆ.

ಈಕಲಾಕೃತಿಯು ಕಾಳೆಯವರ ಕಲಾಪ್ರೌಢಿಮೆಯನ್ನು ಅವರ ಅದ್ಭುತ ಕಲ್ಪನೆಯನ್ನು ಸಾರುವಂತಿದೆ. ಸಂಯೋಜನೆಯ ಕೆಲಸವು ಇಲ್ಲಿ ತನ್ನ ವಿಶೇಷತೆಯನ್ನು ತೋರುತ್ತಿದೆ. ಇಲ್ಲಿ ರಾಮನು ಶಿವಲಿಂಗದ ಮುಂದೆ ಪದ್ಮಾಸನದ ಭಂಗಿಯಲ್ಲಿ ಕುಳಿತು ಭಕ್ತಿಭಾವದಿಂದ ಅರ್ಧ ಕಣ್ಮುಚ್ಚಿ ಕೈಜೋಡಿಸಿ ಭಕ್ತಿಲೀನನಾಗಿದ್ದಾನೆ. ಲಕ್ಷ್ಮಣನು ಭಕ್ತಿಯಿಂದ ಕೈ ಜೋಡಿಸಿ ನಿಂತಿದ್ದು ಅಣ್ಣನಾದ ರಾಮನ ಭಕ್ತಿಯನ್ನು ತದೇಕಚಿತ್ತದಿಂದ ವಿಕ್ಷಿಸುತ್ತಾ ನಿಂತಿದ್ದು ಆಕರ್ಷಕವಾಗಿದೆ. ಹಿನ್ನೆಲೆಯಲ್ಲಿ ಬೆಟ್ಟಗುಡ್ಡಗಳ ಸಾಲುಯಿದ್ದು ಅವುಗಳ ಮೆಲೆ ಹುಣ್ಣಿಮೆ ಚಂದ್ರ ಬೆಳಗುತ್ತಿದ್ದು, ಕೈಲಾಸದಲ್ಲಿ ಶಿವನು ರಾಮನ ಭಕ್ತಿಯನ್ನು ಮೆಚ್ಚಿ ಪಾರ್ವತಿಯೊಂದಿಗೆ ನೃತ್ಯದಲ್ಲಿ ತೊಡಗಿರುವಂತೆ ಚಿತ್ರವನ್ನು ಸಾಂಕೇತಿಕಸಲಾಗಿದೆ. ಇಡೀ ಚಿತ್ರ ಮೃದುವಾದ ಬಣ್ಣಗಳ ಬಳಕೆಯಿಂದ, ಆಕೃತಿಗಳ ಸಂಯೋಜನೆಯಿಂದ ನೋಡಲು ಅತ್ಯಾಕರ್ಷಕವಾಗಿ ಕಂಡುಬರುತ್ತದೆ.

೩. ಅನುಭವ ಮಂಟಪದ ದೃಶ್ಯ

೧೯೬೦ರಲ್ಲಿ ತೈಲವರ್ಣದಲ್ಲಿ ಮೂಡಿಬಂದ ಈ ದೃಶ್ಯದಲ್ಲಿ ಸಂಯೋಜನೆಯ ವ್ಯಾಕರಣವು ಅದ್ಭುತ ಕೆಲಸ ಮಾಡಿದೆ ಎಂದು ಹೇಳಬಹುದು. ೬ ಅಡಿ ಅಗಲ ೩ ಅಡಿ ಅಗಲವಿರುವ ಈ ಸಂಯೋಜನಾ ಕಲಾಕೃತಿಯಲ್ಲಿ ಮುಖ್ಯ ಆಕೃತಿಯ ಕಡೆಗೆ ಸಂಯೋಜನೆಯಲ್ಲಿರುವ ಉಳಿದ ಒಟ್ಟು ಆಕೃತಿಗಳು ಮುಖ ಮಾಡಿರುವುದು ಸಂಯೋಜನೆಯ ಶ್ರೇಷ್ಟತೆಯನ್ನು ಇದು ಸಾರುತ್ತದೆ. ೧೨ನೇ ಶತಮಾನದಲ್ಲಿ ಕಂಡ ಅಪರೂಪದ ವಚನಗಾರ್ತಿ ಅಕ್ಕಮಹಾದೇವಿಯು ಅನುಭವ ಮಂಟಪವನ್ನು ಪ್ರವೇಶಿಸಿದ್ದಾಳೆ. ಮುಂದಿನ ಆಸನದಲ್ಲಿ ಆಸೀನರಾದ ಅಲ್ಲಮಪ್ರಭುವಿನ ಕಡೆ ಮುಖ ಮಾಡಿ ಅವರೊಂದಿಗೆ ವಾದ ವಿವಾದದಲ್ಲಿ ತೊಡಗಿರುವಂತೆ ಸಂಯೋಜನೆ ಮಾಡಲಾಗಿದೆ. ಮಹಾ ವಚನಕಾರ ಬಸವಣ್ಣ ನವರು ಮತ್ತು ಅನೇಕ ಶರಣ ಶರಣೆಯರು ಅನುಭವ ಮಂಟಪ ದಲ್ಲಿದ್ದು ಎಲ್ಲರ ದೃಷ್ಟಿಯು ಅಕ್ಕಮಹಾದೇವಿಯ ಕಡೆಗೆ ನೆಟ್ಟಿರುವುದು ಅವಳ ಮಾತನ್ನು ಎಲ್ಲರು ತದೇಕಚಿತ್ತದಿಂದ ಆಲಿಸುತ್ತಿರುವಂತೆ ದೃಶ್ಯವು ಮೂಡಿ ಬಂದಿದ್ದು ಕಲಾಕೃತಿಯನ್ನು ವೀಕ್ಷಿಸುವಾಗ ಕೂಡ ನೋಡುಗರ ಗಮನ ತಟ್ಟನೆ ಅಕ್ಕಮಹಾದೇವಿಯ ಕಡೆಗೆ ಮೊದಲು ಹೋಗಿ ನಂತರ ದೃಶ್ಯದ ಇತರ ಭಾಗಗಳ ಕಡೆಗೆ ಹೊರಳುವಂತೆ ಸಂಯೋಜಿಸಿರುವುದು, ಕಾಳೆಯವರ ಸಂಯೋಜನೆಯ ತಂತ್ರದ ಪ್ರತಿಭೆಗೆ ಈ ಕಲಾಕೃತಿಯು ಸಾಕ್ಷಿಯಾಗಿವೆ. ಅಲ್ಲದೇ ಈ ಕಲಾಕೃತಿಯ ಹಿನ್ನೆಲೆಯಲ್ಲಿ ಅವರ ಆಳವಾದ ಅಧ್ಯಯನ ಕಂಡುಬರುತ್ತದೆ. ಇಲ್ಲಿ ಬಣ್ಣಗಳ ಸಮ್ಮಿಳಿತ ವಿವಿಧ ಬಣ್ಣಗಳು ಸಂಯೋಜನೆಗೆ ಪೂರಕವಾಗಿದ್ದು ರೇಖೆಗಳೆ ಈ ಕಲಾಕೃತಿಯ ಜೀವಾಳವಾಗಿದೆ. ಇಲ್ಲಿ ರೇಖೆಗಳು ಒಂದು ಆಕೃತಿಯಿಂದ ಇನ್ನೊಂದು ಆಕೃತಿಯನ್ನು ಬೇರ್ಪಡಿಸಿದಂತೆ ಕಂಡು ಬರುತ್ತದೆ.

೪. ಸಂತಶಿಶುನಾಳ ಶರಿಫರ ಜೀವನಾಧಾರಿತ ಕಲಾಕೃತಿ

ಈ ಕಲಾಕೃತಿಯನ್ನು ಜೈಹಿಂದ್ ಗ್ಲಾಸ್ ಟ್ರೆಡರ್ಸ್, ಗದಗ ಅವರು ಪ್ರಕಟಿಸಿದ್ದು. ಸಂತ ಶಿಶುನಾಳ ಶರಿಫರು ದೈವಿ ಅನುಗ್ರಹದಿಂದ ಹುಟ್ಟಿದ ಅವರ ಜೀವನ ಕಥೆಯಿಂದ ಅವರು ಸಮಾಧಿಸ್ಥರಾಗುವವರೆಗಿನ ಘಟನೆಗಳನ್ನು ಒಂದೇ ಕ್ಯಾನ್ವಾಸಿನ ಅವಕಾಶದಲ್ಲಿ ಬಣ್ಣದ ಪಟ್ಟಿಯಿಂದ ಆಯಾ ಘಟನೆಗಳಿಗೆ ತಕ್ಕಂತೆ ಭಾಗಗಳನ್ನಾಗಿ ವಿಂಗಡಿಸಿ ಚಿತ್ರವನ್ನು ಸಂಯೋಜಿಸಿರುವುದು ಕಂಡುಬರುತ್ತಿದ್ದು ಒಟ್ಟು ಶರಿಫರ ಜೀವನ ಚಿತ್ರವನ್ನು ಈ ಕಲಾಕೃತಿಯು ವೀಕ್ಷಕರಿಗೆ ನೇರವಾಗಿ ಕಟ್ಟಿಕೊಡುತ್ತದೆ. ಅವರ ಜೀವನದ ವಿವಿಧ ಹಂತಗಳನ್ನು ಸುಲಭವಾಗಿ ಅರ್ಥವಾಗುವಂತೆ ಅದ್ಭುತ ಚಿತ್ರ ಸಂಯೋಜನೆಯನ್ನು ಇಲ್ಲಿ ಕಾಳೆಯವರು ಮಾಡಿದ್ದಾರೆ. ಹಿನ್ನೆಲೆಯಲ್ಲಿ ಒಂದೇ ವರ್ಣವನ್ನು ಲೇಪಿಸಲಾಗಿದ್ದು. ಮುಂದಿನ ಆಕೃತಿಗಳು ಸ್ಫುಟವಾಗಿ ಎದ್ದು ಬರುವಂತೆ ಚಿತ್ರಿಸಲಾಗಿದೆ. ಈ ಕಲಾಕೃತಿಯ ವ್ಯಾಪಾರಿ ದೃಷ್ಟಿಯಿಂದ ರಚಿಸಲಾಗಿದ್ದರೂ ಕೂಡ ಕಾಳೆಯವರು ತಮ್ಮ ಶಕ್ತಿ, ಶ್ರದ್ಧೆ, ತಾಳ್ಮೆ ಒಟ್ಟು ತಮ್ಮ ಅಂತಃಸತ್ವವನ್ನೇ ಇದರಲ್ಲಿ ಧಾರೆ ಎರೆದಿದ್ದಾರೆ ಎನ್ನಬಹುದು.

೫. ಜಗನ್ಮಾತಾ ಶ್ರೀ ಕಾಳಿಕಾದೇವಿ ಜಗದ್ಗುರು ವಿರಾಟ ವಿಶ್ವಕರ್ಮ ಮತ್ತು ಗುರು ಮೌನೇಶ್ವರಾಯ ಅವರ ಕಲಾಕೃತಿ

ಈ ಕಲಾಕೃತಿಯು ವ್ಯಾಪಾರಿ ದೃಷ್ಟಿಯಿಂದ ರಚಿಸಲಾಗಿದ್ದು. ಒಂದೇ ಸಮತಲದ ಅವಕಾಶದಲ್ಲಿ ಮೂರು ಭಾಗಗಳನ್ನಾಗಿ ಮಾಡಿಕೊಂಡು ರಚಿಸಲಾಗಿದೆ. ಇಲ್ಲಿ ಕಾಳಿಕಾದೇವಿ, ಜಗದ್ಗುರು ವಿರಾಟ ವಿಶ್ವಕರ್ಮ ಮತ್ತು ಗುರುಮೌನೇಶ್ವರಾಯ ಅವರ ಚಿತ್ರಗಳಿದ್ದು ಆಯಾ ದೇವ ದೇವತೆಗಳಿಗೆ ಸಂಬಂಧಿಸಿದ ವೇಷಭೂಷಣಗಳು ಇಲ್ಲಿ ಕಂಡುಬರುತ್ತವೆ.

೬. ದತ್ತಾತ್ರೇಯ ದರ್ಶನ


ಈ ಕಲಾಕೃತಿಯ ಕ್ಯಾನ್ವಾಸಿನ ಅವಕಾಶದ ಮೇಲೆ ತೈಲವರ್ಣ ಮಾಧ್ಯಮದಲ್ಲಿ ರಚಿಸಿದ್ದು. ಸಂಯೋಜನೆಯ ಅತ್ಯಾಕರ್ಷಕವಾಗಿದೆ. ಸನ್ಯಾಸಿಯೊಬ್ಬರು ಬೆಟ್ಟದ ಮೇಲೆ ಧ್ಯಾನಮಗ್ನರಾಗಿ ಪದ್ಮಾಸನದ ಭಂಗಿಯಲ್ಲಿ ಕುಳಿತಿದ್ದು, ದತ್ತಾತ್ರೇಯ ದರ್ಶನಕ್ಕಾಗಿ ತಪೋಮಗ್ನರಾಗಿದ್ದಾರೆ. ಅವರ ಮುಖಭಾವ, ಕುಳಿತಿರುವ ಭಂಗಿ ಆಕರ್ಷಕವಾಗಿದೆ. ಹಿನ್ನೆಲೆಯಲ್ಲಿ ದತ್ತಾತ್ರೇಯ ದೇವತೆಯನ್ನು ಚಿತ್ರಿಸಲಾಗಿದ್ದು ಮುಖ್ಯ ಕೃತಿಯ ಆಶಯಕ್ಕೆ ಪೂರಕವಾಗಿದೆ. ಇಲ್ಲಿ ಬಣ್ಣಗಳನ್ನು ಬಳಸಿರುವ ರೀತಿ ಅದ್ಭುತವೆನಿಸುತ್ತದೆ. ಅಲ್ಲದೇ ನೋಡುಗರನ್ನುಸಹ ಭಾವನಾ ಪ್ರಪಂಚಕ್ಕೆ ಕೊಂಡಯ್ಯುತ್ತದೆ.



ಸಹಸ್ರಾರ್ಜುನ ದೇವತಾ ಚಿತ್ರ



ಭೂದೇಶ್ವರ ಕಲಾಕೃತಿ



ದತ್ತಾತ್ರೇಯ ದರ್ಶನ



ಸಂತ ಶಿಶುನಾಳ ಶರೀಫರು
(ಜೀವನಾಧಾರಿತ ಕ್ಯಾಲೆಂಡರ್ ಕಲಾಕೃತಿ)



ಕಲ್ಬುರ್ಗಿ ಶ್ರೀ ಶರಣಬಸವೇಸ್ವರ
(ಜೀವನಾಧಾರಿತ ಕ್ಯಾಲೆಂಡರ್ ಕಲಾಕೃತಿ)

ಕ್ಯಾಲೇಂಡರ್‌ನ ಮೇಲೆ ರಚಿಸಿದ ಕಲಾಕೃತಿ





ನವಗ್ರಹ ಆಧಾರಿತ ಕ್ಯಾಲೇಂಡರ್‌ನ ಕಲಾಕೃತಿ





ಅನುಭವ ಮಂಟಪದ ದೃಶ್ಯಗಳು

೭. ನವಗ್ರಹ ಕಲಾಕೃತಿ

ಇದೊಂದು ಅದ್ಭುತ ಪರಿಣಾಮಕಾರಿಯಾದ ಸಂಯೋಜನಾ ಕಲಾಕೃತಿಯಾಗಿದ್ದು ಪುರಾಣ ಆಧಾರಿತ ನವಗ್ರಹಗಳಿಗೆ ಸಂಬಂಧಿಸಿದ ದೇವತೆಗಳನ್ನು ಚಿತ್ರಿಸಿದ್ದು, ಎಂಟು ದಿಕ್ಕುಗಳ ದಿಕ್ಪಾಲಕರಾದ ಎಂಟು ದಿಕ್ಕುಗಳನ್ನು ಪ್ರತಿನಿಧಿಸುವ ದೇವತೆಗಳನ್ನು ಚಿತ್ರಿಸಿದ್ದು. ಒಟ್ಟು ಕಲಾಕೃತಿಯು ಹಿಂದೂ ಪುರಾಣಗಳ ಆಶಯಕ್ಕೆ ಪೂರಕವಾಗಿದೆ.

ಶ್ರೀ ಹಾನಗಲ್ಲ ಕುಮಾರಸ್ವಾಮಿಯವರ ಜೀವನಧಾರಿತ ಕಲಾಕೃತಿಗಳು

ಕಾಳೆಯವರು ಇತ್ತೀಚೆಗೆ ಅಂದರೆ ೨೦೧೦ರಲ್ಲಿ ಹಾನಗಲ್ ಕುಮಾರಸ್ವಾಮಿಗಳ ಜೀವನದ ಪ್ರಮುಖ ಘಟನೆಗಳನ್ನು ಆಧರಿಸಿ ಸುಮಾರು ೩೫ ವರ್ಣಚಿತ್ರಗಳನ್ನು ತೈಲಮಾಧ್ಯಮದಲ್ಲಿ ೪' x ೬' ಅಳತೆಯ ಬೃಹತ್ ಪ್ರಮಾಣದ ಕ್ಯಾನ್ವಾಸಿನ ಅವಕಾಶದಲ್ಲಿ ರಚಿಸಿದ್ದು. ಆ ಕಲಾಕೃತಿಗಳು ಪ್ರಸ್ತುತ ಬಾದಾಮಿಯ ಶಿವಯೋಗ ಮಂದಿರದಲ್ಲಿ ಸಂಗ್ರಹಿತಗೊಂಡಿವೆ. ಈ ಎಲ್ಲಾ ಕಲಾಕೃತಿಗಳು ಕುಮಾರ ಸ್ವಾಮಿಗಳ ಜೀವನದ ಪ್ರಮುಖ ಘಟನೆಗಳನ್ನು ಕಥೆಯಂತೆ ನಿರೂಪಿಸುತ್ತಾ ಹೋಗುತ್ತವೆ. ಅಲ್ಲದೇ ಜನಸಾಮಾನ್ಯರಿಗೆ ಸುಲಭವಾಗಿ ಅರ್ಥವಾಗುತ್ತವೆ. ಕುಮಾರಸ್ವಾಮಿಯವರ ಜೀವನಾಧರಿತ ಈ ಘಟನೆಗಳಿಗೆ ದೃಶ್ಯಗಳನ್ನು ಕಲ್ಪಿಸುವುದರ ಹಿಂದೆ ಕಾಳೆಯವರ ಶ್ರಮ, ಶ್ರದ್ಧೆ, ಭಕ್ತಿ, ಅಧ್ಯಯನಶೀಲತೆಯನ್ನು ಸುಲಭವಾಗಿ ಗ್ರಹಿಸಹುದಾಗಿದೆ. ಅಂದರೆ ಸ್ವಾಮೀಜಿಯವರು ಜನನ ಕಾಲದಿಂದ ಲಿಂಗೈಕ್ಯರಾಗುವವರೆಗಿನ ಅತ್ಯಂತ ಕಡಿಮೆ ಸಮಯದಲ್ಲಿಯೆ ಅಂದರೆ, ಕೇವಲ ಆರು ತಿಂಗಳುಗಳಲ್ಲಿ ಈ ಬೃಹತ್ ಪ್ರಮಾಣದ ಕಲಾಕೃತಿಗಳನ್ನು ರಚಿಸಿಕೊಟ್ಟಿದ್ದು, ಕಾಳೆಯವರು ಎಂತಹ ಶ್ರಮಜೀವಿ ಎಂಬುದನ್ನು ತೋರಿಸುತ್ತದೆ. ಈ ಎಲ್ಲ ಕಲಾಕೃತಿಗಳನ್ನು ಅಖಿಲಭಾರತ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿಯವರು ೧೨.೪.೨೦೧೦ರಲ್ಲಿ ಶಿವಯೋಗ ಮಂದಿರದ ಶತಮಾನೋತ್ಸವ ಸ್ಮಾರಕ ಭವನದಲ್ಲಿ ಉದ್ಘಾಟಿಸಿದರು.

ನಾಡಿನ ಜನತೆಯ ಉದ್ಧಾರಕ್ಕಾಗಿಯೇ ಜನ್ಮವೆತ್ತಿ ಬಂದವರು ಶಿವಯೋಗಿ ಶ್ರೀ ಹಾನಗಲ್ಲ ಕುಮಾರ ಮಹಾಸ್ವಾಮಿಗಳವರು. ಅವರು ಮಾನವ ಧರ್ಮದ ಪ್ರತಿಪಾದಕರಾಗಿ ವೀರಶೈವ ಸಮಾಜದ ಪುನರೋದ್ಧಾರಕ್ಕಾಗಿ ಜೀವ ಸವೆಸಿದವರು. ನಾಡಿನಲ್ಲಿ ಸಂಗೀತ ಸಾಹಿತ್ಯಗಳ ಪ್ರಸಾರಗೈದವರು. ಸರ್ವ ಜಾತಿಯ ಅಂಧ, ಅನಾಥ, ಅಂಗಹೀನ ಮಕ್ಕಳಿಗೆ ದಾರಿದೀಪವಾದವರು. ಶಿವಯೋಗ ಮಂದಿರ, ವೀರಶೈವ ಮಹಾಸಭೆಯ ಸಂಸ್ಥಾಪಕರಾಗಿ, ಸಮಾಜಕ್ಕಾಗಿ ತಮ್ಮ ಜೀವನವನ್ನೇ ಗಂಧದ ಕೊರಡಿನಂತೆ ತೇಯ್ದುಕೊಂಡವರು. ಕಾಯಕಯೋಗಿಯಾಗಿ, ನೇಗಿಲಯೋಗಿ ಯಾಗಿ ಉದಾತ್ತ ತತ್ವ ಪ್ರಚಾರಕರಾಗಿ, ಸಂಸ್ಕೃತಿಯ ಪ್ರಸಾರಕರಾಗಿ, ನೂತನ ಸಮಾಜದ

ನಿರ್ಮಾಪಕರಾಗಿ ಅವರು ಗೈದ ಸೇವೆ ನಿತ್ಯ ಸ್ಮರಣೀಯವಾಗಿದೆ. ಕ್ರಿ.ಶ. ೧೮೬೭ರಲ್ಲಿ ನೀಲಮ್ಮ ಮತ್ತು ಬಸವಯ್ಯ ಈ ದಂಪತಿಗಳಿಗೆ ಶಿವಯೋಗಿಯಾದ ಕುಮಾರಸ್ವಾಮಿಯವರು ಹುಟ್ಟಿದ್ದರು.[೧೧೧] ಅವರ ಜೀವನ ಚರಿತ್ರೆಯನ್ನಾಧರಿಸಿದ ಈ ಎಲ್ಲಾ ಕಲಾಕೃತಿಗಳು ಕ್ಯಾನ್ವಾಸಿನ ಮೇಲೆ ತೈಲವರ್ಣದಿಂದ ರಚಿದವುಗಳಾಗಿವೆ. ಅಲ್ಲದೇ ವಾಸ್ತವ ಶೈಲಿಯಲ್ಲಿ ಚಿತ್ರಿತವಾಗಿವೆ.

ದೃಶ್ಯ ೧.

ನೀಲಮ್ಮನವರ ಕನಸಿನ ಒಂದು ದೃಶ್ಯ

ಕುಮಾರಸ್ವಾಮಿಯವರ ತಾಯಿಯಾದ ನೀಲಮ್ಮನವರಿಗೆ ಒಂದು ದಿನ ಬೆಳಗಿನ ಜಾವ ಸ್ವಪ್ನ ಬಿದ್ದಿತು. ಸ್ವಪ್ನದಲ್ಲಿ ಜಂಗಮ ವೇಷಧಾರಿಯಾದ ಓರ್ವ ತಪಸ್ವಿ ದರ್ಶನ ನೀಡಿದರು. ನೀಲಮ್ಮ ತಪಸ್ವಿಗೆ ಭಕ್ತಿಯಿಂದ ಕೈಮುಗಿದಳು. ತಪಸ್ವಿಯು ತನ್ನ ಕರುಣೆಯ ಕೃಪಾಕಟಾಕ್ಷವನ್ನು ನೀಲಮ್ಮನ ಮೇಲೆ ಬೀರಿದ. ತನ್ನ ಕೈಯೊಳಗಿದ್ದ ಸುಗಂಧಮಯವಾದ ಪುಷ್ಪವನ್ನು ಆ ಸಾಧ್ವಿಯ ಕೈಯೊಳಗಿಟ್ಟನು. ಪುಷ್ಪ ಕೊಟ್ಟು ಶಿವನಾಜ್ಞೆಯಂತೆ ನಿನ್ನ ಗರ್ಭದಲ್ಲಿ ಶಿವಯೋಗಿ ಹುಟ್ಟಿ ಬರುತ್ತಾನೆ. ಶಿವನಾಜ್ಞೆಯಂತೆ ಆತನನ್ನು ಸಮಾಜ ಸೇವೆಗಾಗಿ ಅರ್ಪಿಸಬೇಕು ಎಂದನು. ಆ ಮಾತಿಗೆ ಆ ತಾಯಿಯು ತಮ್ಮ ಆರ್ಶಿವಾದವಿದ್ದಂತೆಯೇ ಆಗಲಿ, ತಮ್ಮ ಅಜ್ಞೆಯಂತೆ ನಡೆಯುತ್ತೇನೆ ಎಂದು ಹೇಳುತ್ತಾಳೆ. ವಚನ ಪಡೆದ ತಪಸ್ವಿಯು ಕೂಡಲೇ ಅದೃಶ್ಯನಾಗುತ್ತಾನೆ. ಪುಷ್ಪ, ತಪಸ್ವಿ, ಮಗ ಎಂದು ನೀಲಮ್ಮ ಕನವರಿಸ ತೊಡಗುತ್ತಾಳೆ. ಎಚ್ಚರಗೊಂಡ ಬಸವಯ್ಯನು ನೀಲಮ್ಮಳನ್ನು ಎಬ್ಬಿಸುತ್ತಾನೆ. ನೀಲಮ್ಮ ತನಗೆ ಬಿದ್ದ ಕನಸಿನ ವಿಚಾರವನ್ನು ಹೇಳುತ್ತಾಳೆ. ಆಗ ಬಸವಯ್ಯನು ಅವಳನ್ನು ಸಮಾಧಾನಿಸುತ್ತಾ "ಇದೆಲ್ಲ ಶಿವಲೀಲೆ, ಶಿವನ ಕೃಪೆ ನಿನ್ನ ಮೇಲೆ ಇದೆ. ಆ ಶಿವನೇ ನಿನ್ನ ಉದರದೊಳು ಜನಿಸಿ ಬರುತ್ತಾನೆ" ಎಂದು ಭವಿಷ್ಯ ನುಡಿಯುತ್ತಾನೆ.[೧೧೨]

ಈ ಒಂದು ಸನ್ನಿವೇಶದ ಆಧಾರದ ಮೇಲೆ ಮೂಡಿಬಂದ ಈ ದೃಶ್ಯವನ್ನು ಕಾಳೆಯವರು ಮೂಲ ಸನ್ನಿವೇಶಕ್ಕೆ ಸೂಕ್ತವಾಗಿ ಸಂಯೋಜಿಸಿದ್ದು ಆ ಇಡೀ ಒಂದು ಸನ್ನಿವೇಶವನ್ನು ದೃಶ್ಯದ ಮುಖಾಂತರ ನೈಜವಾಗಿ ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದ್ದಾರೆ.

ದೃಶ್ಯ ೨

ಕುಮಾರಸ್ವಾಮಿಯವರ ನಾಮಕರಣದ ದೃಶ್ಯ

ನೀಲಮ್ಮ ಕಂಡ ಕನಸು ಸತ್ಯವಾಯಿತು. ನೀಲಮ್ಮ ಗರ್ಭವತಿಯಾದಳು. ನವಮಾಸ ತುಂಬತೊಡಗಿತವು. ಆಕೆಯ ಬಯಕೆಗಳು ಶಿವಪೂಜೆ, ಶಿವಧ್ಯಾನ, ಶಿವಸ್ತೋತ್ರವಾಗಿದ್ದವು.

---

೧೧೧. ವಿ.ಬಿ. ಹಿರೇಮಠ, ಶಿವಯೋಗಿ ಹಾನಗಲ ಶ್ರೀ ಕುಮಾರ ಮಹಾಸ್ವಾಮಿಗಳು, ಪು. ೨

೧೧೨. ಅದೇ ಪು. ೬

ಕುಳಿತಲ್ಲಿ, ನಿಂತಲ್ಲಿ ಶಿವಧ್ಯಾನವೆ ಆಕೆಯ ಉಸಿರಾಗಿತ್ತು. ಒಡಲ ಕೂಸು ಅದೇ ಸಾಕ್ಷಾತ್ಕಾರ ಪಡೆದುಕೊಂಡಿತು. ಕ್ರಿ.ಶ. ೧೮೬೭ರಲ್ಲಿ ಶಾಲಿವಾಹನ ಶಕೆ ೧೭೮೯ನೇ ಪ್ರಭವನಾಮ ಸಂವತ್ಸರ ಭಾದ್ರಪದ ಶುದ್ಧ ತ್ರಯೋದಶಿ ಬುಧವಾರ ಬ್ರಾಹ್ಮೀ ಮೂಹೂರ್ತದಲ್ಲಿ ಬೆಳಗ್ಗೆ ೫ ಗಂಟೆಗೆ ಶ್ರವಣ ನಕ್ಷತ್ರ ಮೂರನೇ ಚರಣ ಕರ್ಕ ಲಗ್ನದಲ್ಲಿ ಶಿವನ ಕರುಣೆಯಿಂದ ಶಿವಯೋಗಿಯ ಜನನವಾಯಿತು.

ಶಿಶುವಿನ ಜನನವಾಗಿ ಐದಾರು ದಿನಗಳು ಕಳೆದವು. ಕೂಸು ತಾಯಿಯ ಎದೆಯ ಹಾಲನ್ನು ಕುಡಿಯಲೇ ಇಲ್ಲ. ಕಾರಣ ಯಾರಿಗೂ ತಿಳಿಯದಾಯಿತು. ಕೆಲವರು ದಾರವನ್ನು ಮಂತ್ರಿಸಿ ಕಟ್ಟಲು ತಿಳಿಸಿದರು. ಮತ್ತೆ ಕೆಲವರು ಗ್ರಾಮದೇವಿಯ ಅಂಗಾರ ಹಚ್ಚಲು ಹೇಳಿದರು. ನೀಲಮ್ಮ ಯಾರ ಮಾತನ್ನೂ ಕೇಳಲಿಲ್ಲ. ನಿತ್ಯ ಮಗನ ಮೈಗೆಲ್ಲ ಭಸ್ಮ ಸವರತೊಡಗಿದಳು. "ನಂದೀಶ್ವರ ನಿನ್ನ ಕೃಪೆ ಇರಲಿ" ಎಂದು ಪ್ರಾರ್ಥಿಸತೊಡಗಿದಳು. ಈ ಉಪಚಾರದಿಂದ ಶಿಶು ಕ್ರಮೇಣ ತಾಯಿಯ ಎದೆಹಾಲು ಕುಡಿಯತೊಡಗಿತು.

ಮಗುವಿನ ನಾಮಕರಣದ ದಿನ ಬಂದಿತು. ಮಗು ತಾಯಿಯ ಎದೆಹಾಲನ್ನು ಕುಡಿಯಲು ಉಣ್ಣುವದೆಂದು ಹಾಲಯ್ಯನೆಂದು ನಾಮಕರಣ ಮಾಡಿದರೆ ಹಾಲು ಹೆಚ್ಚಿಗೆ ಕುಡಿಯುವದೆಂದು ಸೂಚಿಸಿದರು. ಎದೆಯ ಹಾಲು ಕುಡಿದು ಮಗ ಗಟ್ಟಿಯಾಗಿ ಬೆಳೆಯಲೆಂದು ನೀಲಮ್ಮ ಅಂದು ಕೊಂಡಳು. ಹಿರಿಯರ ಮಾತನ್ನು ನಡೆಸಿದಳು. ಹಾಲಿನಂತಹ ಮನಸ್ಸು ಮಗನಿಗಿರಲಿ ಎಂದು ಕೊಂಡಳು. ಅದಕ್ಕಾಗಿ ಹಾಲಯ್ಯ ಎಂದೇ ಮಗನಿಗೆ ಹೆಸರಿಟ್ಟರು.[೧೧೩]

ಈ ದೃಶ್ಯವನ್ನು ಕಾಳೆಯವರು ಅತ್ಯಂತ ನೈಜವಾಗಿ ನೋಡುಗರ ಗಮನವನ್ನು ಸೆಳೆಯುತ್ತದೆ. ಉತ್ತರ ಕರ್ನಾಟಕದ ಸಂಪ್ರದಾಯದಲ್ಲಿನ ಮಗುವಿನ ನಾಮಕರಣ ಸಮಯದ ಸಂದರ್ಭವನ್ನು ಅತ್ಯಂತ ನೈಜವಾಗಿ ನೋಡುಗರಲ್ಲಿ ಪ್ರಭಾವನ್ನು ಬೀರುವಂತಿದೆ. ಕಿನ್ನಾಳ ಕಲೆಯ ಶೈಲಿಯಲ್ಲಿರುವ ಸಾಂಪ್ರದಾಯಿಕ ಮಗುವಿನ ಸಿಂಗಾರಗೊಂಡಿರುವ ತೊಟ್ಟಿಲು, ಕಳಸ, ಹೂವು, ಹಣ್ಣು ಮುಂತಾದವು ಗಳು. ನಾಲ್ಕಾರು ಜನ ಹೆಣ್ಣುಮಕ್ಕಳು ತೊಟ್ಟಿಲಿನ ಸುತ್ತನಿಂತಿದ್ದು, ಮಗುವಿನ ಕಿವಿಯಲ್ಲಿ ಹೆಸರನ್ನು ಹೇಳುತ್ತಿರುವ ಮಹಿಳೆಯ ಬೆನ್ನಿಗೆ ಗುದ್ದುವ ಸಂಪ್ರದಾಯ ಒಟ್ಟು ಚಿತ್ರಣ ಉತ್ತರ ಕರ್ನಾಟಕದ ಒಂದು ಸಾಂಪ್ರದಾಯಿಕ ಪದ್ಧತಿಯನ್ನು ಎತ್ತಿಹಿಡಿಯುತ್ತದೆ ಈ ದೃಶ್ಯ.

---

೧೧೩. ವಿ.ಬಿ. ಹಿರೇಮಠ, ಶಿವಯೋಗಿ ಹಾನಗಲ ಶ್ರೀ ಕುಮಾರ ಮಹಾಸ್ವಾಮಿಗಳು, ಪು.೧೬

ದೃಶ್ಯ ೩

ಮನೆಪಾಠದಲ್ಲಿ ನಿರತರಾದ ಬಾಲಕ ಕುಮಾರಸ್ವಾಮಿ

ಮಗ ಬೆಳೆದು ಊರಿನ ಕಣ್ಮಣಿಯಾಯಿತು. ಮಗುವಿನ ಆಟ-ಪಾಠಗಳು ಶತಾಯುಷಿ ಆದ ೧೦೫ ವರ್ಷದ ಅಜ್ಜ ಕೊಟ್ರಪ್ಪಯ್ಯನವರಿಗೆ ಖುಷಿ ಪಡಿಸುತ್ತಿದ್ದವು. ಮೊಮ್ಮಗನ ಮೇಲೆ ಅಜ್ಜನಿಗೆ ಬಹಳ ಪ್ರೀತಿ. ಶರಣರ ಚರಿತ್ರೆ, ನೀತಿ ಕತೆ, ನಿಜಗುಣರ ಪದ್ಯಗಳನ್ನು ಅಜ್ಜ ಹೇಳುತ್ತಿದ್ದ. ಹಾಲಯ್ಯ ತನ್ಮಯತೆಯಿಂದ ಅವುಗಳನ್ನು ಕೇಳುತ್ತಿದ್ದ. ಎಲ್ಲವನ್ನೂ ಪ್ರಶ್ನಿಸುವ ಮೊಮ್ಮಗನ ಚಿಕಿತ್ಸಕ ಬುದ್ಧಿ ಶತಾಯಾಷಿಯನ್ನು ಬೆರಗುಗೊಳಿಸುತ್ತಲಿತ್ತು.[೧೧೪]

ಈ ಸನ್ನಿವೇಶದ ದೃಶ್ಯವನ್ನು ಕಾಳೆಯವರು ಸಹಜವಾಗಿ ಸುಂದರವಾಗಿ ಚಿತ್ರಿಸಿದ್ದಾರೆ. ಬಾಲಕ ಕುಮಾರರೇಶ್ವರನ್ನು ಶ್ರದ್ಧೆಯಿಂದ ಅಜ್ಜ ಹೇಳಿಕೊಡುತ್ತಿರುವ ಪಾಠವನ್ನು ಕಲಿಯುತ್ತಿರುವ ದೃಶ್ಯ, ಶತಾಯಾಷಿ ಅಜ್ಜನ ಆಕೃತಿ, ದೂರದಲ್ಲಿಯೇ ನಿಂತು ಅಜ್ಜ ಮತ್ತು ಮೊಮ್ಮಗನ್ನು ಗಮನಿಸಿ ಆಶ್ಚರ್ಯಚಕಿತಳಾಗಿ ನಿಂತು ನೋಡುತ್ತಿರುವ ಕುಮಾರಸ್ವಾಮಿಯವರ ತಾಯಿ. ಒಟ್ಟು ಒಂದು ಮನೆಯಲ್ಲಿ ನಡೆಯುವ ಸನ್ನಿವೇಶವನ್ನು ಕಾಳೆಯವರು ಸೂಕ್ಷ್ಮವಾಗಿ ಗಮನಿಸಿ ಈ ದೃಶ್ಯವನ್ನು ತಮ್ಮ ಕ್ಯಾನ್ವಾಸಿನ ಅವಕಾಶದಲ್ಲಿ ಸೆರೆಹಿಡಿದಿರುವರು. ವೀಕ್ಷಕರೊಂದಿಗೆ ಈ ಕಲಾಕೃತಿಯು ನೇರವಾಗಿ ಸಂವಹನಗೊಳ್ಳುವಂತೆ ಸಂಯೋಜನೆಯಿದೆ.

ದೃಶ್ಯ ೪

ಬಾಲಕ ಕುಮಾರಸ್ವಾಮಿಯವರು ಭಿಕ್ಷೆಗೆ ಹೋದಾಗಿನ ನಡೆದ ಘಟನೆಯ ದೃಶ್ಯ

ಶ್ರೀಗಳು ಜನಿಸಿದ ಕುಟುಂಬದಲ್ಲಿ ಮೊದಲೇ ಬಡತನ, ಮೆಲೆ ಸಾಂಸಾರಿಕ ತಾಪತ್ರಯ. ಪ್ರತಿದಿನ ಭಿಕ್ಷೆ ಎತ್ತಿ ತಂದಾಗಲೇ ಸಂಸಾರ ನಿರ್ವಹಣೆ ಸಾಗುತ್ತಿತ್ತು. ಕುಮಾರಸ್ವಾಮಿಯವರು ಕೂಡಾ ಬಾಲಕರಿದ್ದಾಗ ಪ್ರತಿದಿವಸ ಒಂದೊಂದು ಹಳ್ಳಿಗೆ ಹೋಗಿ ಜೋಳದ ಹಿಟ್ಟನ್ನು ಭಿಕ್ಷೆ ಮಾಡಿಕೊಂಡು ಬರುತ್ತಿದ್ದರು. ಹೀಗಿರುವಾಗ ಹಾಲಯ್ಯ ನಿತ್ಯದಂತೆ ಒಂದು ಹಳ್ಳಿಗೆ ಭಿಕ್ಷೆಗೆ ಹೋದರು. ವಯೋವೃದ್ಧ ವ್ಯಕ್ತಿಯೊಬ್ಬ ಇವರನ್ನು ಕುರಿತು ವಿಚಾರಿಸಿದ. ನಂತರ ಇವರಿಗೆ ತಿಳುವಳಿಕೆ ಹೇಳಿದ. "ನೀನು ಇನ್ನು ಚಿಕ್ಕವ, ಓದಿ ವಿದ್ಯಾವಂತನಾಗಬೇಕು. ಮನೆ ಮನೆ ತಿರುಗಿ ಭಿಕ್ಷೆ ಬೇಡುವುದು ಸರಿಯಲ್ಲ" ಎಂದು ಕಳಕಳಿಯಿಂದ ಹೇಳಿದ. ವೃದ್ಧನ ಮಾತು ಸತ್ಯವೆನಿಸಿತು. ತಾನು ಓದಿ ವಿದ್ಯಾವಂತನಾಗಬೇಕು, ದುಡಿದು ಉಣ್ಣಬೇಕು ಎಂದು ನಿರ್ಧರಿಸಿದರು.[೧೧೫] ಈ

---

೧೧೪. ವಿ.ಬಿ. ಹಿರೇಮಠ, ಶಿವಯೋಗಿ ಹಾನಗಲ ಶ್ರೀ ಕುಮಾರ ಮಹಾಸ್ವಾಮಿಗಳು, ಪು.೧೬

೧೧೫. ಅದೇ ಪು.೧೮

ಸನ್ನಿವೇಶವನ್ನು ಕಾಳೆಯವರು ದೃಶ್ಯದ ರೂಪದಲ್ಲಿ ಹಿಡಿದಿಟ್ಟಿದ್ದು ಸಂಯೋಜನೆಯ ದೃಷ್ಟಿಯಿಂದ ಪರಿಣಾಮಕಾರಿಯಾಗಿದೆ.

ದೃಶ್ಯ ೫ ಮತ್ತು ೬

ವಿದ್ಯೆಯನ್ನು ಅರಸುತ್ತಾ ಚಿಂತಿತನಾಗಿ ಕುಳಿತ ಕುಮಾರೇಶ್ವರನಿಗೆ ನೆರವಾದ ಹಿರೇಮಠ ರಾಚಯ್ಯನವರೊಂದಿಗಿನ ಸನ್ನಿವೇಶದ ದೃಶ್ಯ

ಕುಮಾರರೇಶ್ವರಿಗೆ ಓದಿ ವಿದ್ಯಾವಂತನಾಗಲು ಊರಲ್ಲಿ ಶಾಲೆ ಇರಲಿಲ್ಲ. ಪರಗ್ರಾಮಕ್ಕೆ ಹೋಗಬೇಕಾಗಿತ್ತು. ಕೈಯಲ್ಲಿ ಕಾಸಿಲ್ಲ. ಭಿಕ್ಷೆ ಬೇಡದಿದ್ದರೆ ಮನೆಯಲ್ಲಿರುವವರ ಹೊಟ್ಟೆ ತುಂಬುತ್ತಿದ್ದಿಲ್ಲ. ಮನದೊಳಗೆ ಚಿಂತಿಸಿದ. ಮುಂದಿನ ಮನೆಗೆ ಹೋಗಿ ಭಿಕ್ಷೆ ಬೇಡಲು ಮನಸ್ಸಾಗಲಿಲ್ಲ. ವೃದ್ಧನ ಮಾತುಗಳು ಮನದ ಮೇಲೆ ಪರಿಣಾಮ ಬೀರಿದ್ದವು. ವಿದ್ಯ ಕಲಿಯುವುದೇ ಎಂದು ಒಳಗೆ ಚಿಂತಿಸುತ್ತಿದ್ದ. ಕೊನೆಗೆ ವಿದ್ಯೆಯ ಹಂಬಲ ತೊಟ್ಟು ಕಜ್ಜರಿ ಗ್ರಾಮಕ್ಕೆ ಕಾಲ್ನಡಿಗೆಯಲ್ಲಿ ಗ್ರಾಮಕ್ಕೆ ಹೊರಟರು. ಈ ಗ್ರಾಮದಲ್ಲಿ ಅವರಿಗೆ ಯಾರ ಪರಿಚಯವೂ ಇರಲಿಲ್ಲ. ಮೈಮೇಲೆ ಉಟ್ಟುಕೊಂಡ ಬಟ್ಟೆಯ ಹೊರತು ಹತ್ತಿರ ಏನೂ ಇರಲಿಲ್ಲ. ಹೊಟ್ಟೆ ಹಸಿದಿತ್ತು. ದೇಹ ನಡಿಗೆಯಿಂದ ಬಳಲಿತ್ತು. ಮುಂದೇನು ಮಾಡುವುದು? ಶಾಲೆಗೆ ಹೇಗೆ ಸೇರುವುದು? ಎಂದು ಚಿಂತೆಯಾಗಿತ್ತು. ಕಂಬನಿ ಸುರಿಸುತ್ತಾ ಆ ಗ್ರಾಮದ ಬೇವಿನ ಮರದ ಕಟ್ಟೆಯ ಮೇಲೆ ಕುಳಿತುಕೊಂಡರು. ದೈವವಶಾತ್ ಆ ಗ್ರಾಮದ ಹಿರೇಮಠದ ರಾಚಯ್ಯನವರು ಹಾಲಯ್ಯನನ್ನು ನೋಡಿದರು. ಮಾತನಾಡಿಸಿ ವಿಷಯ ತಿಳಿದುಕೊಂಡರು. ತಮ್ಮಲ್ಲಿಗೆ ಕರೆದುಕೊಂಡು ಹೋಗಿ ಉಪಚರಿಸಿದರು. ಪಾಟಿ, ಪುಸ್ತಕ, ಬಟ್ಟೆಬರೆ ಕೊಡಿಸಿದರು. ತಾವೇ ಕರೆದೊಯ್ದು ಮಾಸ್ತರರಿಗೆ ತಿಳಿಸಿ ಶಾಲೆಗೆ ಸೇರಿಸಿದರು.[೧೧೬] ಈ ರೀತಿಯಾದ ಕುಮಾರಸ್ವಾಮಿಯವರ ಜ್ಞಾನ ಗಳಿಕೆಯ ಅರಂಭದ ಹೆಜ್ಜೆಗಳನ್ನು ಅವರು ಪಟ್ಟ ಪಾಡನ್ನು ಈ ದೃಶ್ಯದ ಮುಖಾಂತರ ಹಿಡಿದಿಡಲು ಕಾಳೆಯವರು ಪ್ರಯತ್ನಿಸಿದ್ದಾರೆ. ಹಿನ್ನೆಲೆಯಲ್ಲಿ ಹಳ್ಳಿಯ ದೃಶ್ಯ ಅತ್ಯಂತ ನೈಜವಾಗಿ ಮೂಡಿಬಂದಿದೆ.

ದೃಶ್ಯ ೭ ತಾಯಿಯ ಋಣ ದೃಶ್ಯ

ಕುಮಾರೇಶ್ವರು ಅಧ್ಯಾತ್ಮದ ಜೀವನಕ್ಕೆ ಲೋಕ ಕಲ್ಯಾಣಕ್ಕಾಗಿ, ಸಮಾಜ ಸೇವೆಗೆ ತಮ್ಮ ಜೀವನವನ್ನು ಮುಡಿಪಾಗಿಡಲು ನಿರ್ಧರಿಸಿ ಲೌಕಿಕ ಜೀವನದಿಂದ ಮುಕ್ತಿಪಡೆದು ತಮ್ಮ ಕೈಯಿಂದ ಸಾಧ್ಯವಾದ ಹಣವನ್ನು ಗಂಟುಕಟ್ಟಿ ತಮ್ಮ ತಾಯಿಗೆ ವೃದ್ಧಾಪ್ಯದಲ್ಲಿ ಸಹಾಯವಾಗಲಿ ಎಂದು ಅದನ್ನು ಕೊಟ್ಟು ನನ್ನ ಮೋಹ ಬಿಟ್ಟುಬಿಡು ಎಂದು ಹೇಳುತ್ತಾರೆ. "ಇಂದಿನಿಂದ ನಾನು ನಿರ್ಮೋಹಿ,

೧೧೬. ವಿ.ಬಿ. ಹಿರೇಮಠ, ಶಿವಯೋಗಿ ಹಾನಗಲ ಶ್ರೀ ಕುಮಾರ ಮಹಾಸ್ವಾಮಿಗಳು, ಪು.೨೦

ಕಿಲುಬು ಕಾಸಿನ ಆಶೆಗೆ ದಾಸನಾಗಲಾರೆ. ನನಗಾಗಿ ಇಂದಿಂಗೆ ನಾಳಿಂಗೆ ಎಂದೆನಾದೊಡೆ ಆ ದೇವನಾಣೆ. ಇಂದಿನಿಂದ ನನ್ನ ನಿನ್ನ ತಾಯಿ ಮಗನ ಋಣ ಕಳಚಿತು" ಎಂದು ನುಡಿದವರೇ ಅಲ್ಲಿಂದ ಹೊರನಡೆದು ಬಿಟ್ಟರು. ದಾರಿ ಸಾಗಿದ್ದು ಹುಬ್ಬಳ್ಳಿಯ ಶ್ರೀ ಸಿದ್ಧಾರೂಢರ ಹತ್ತಿರ.[೧೧೭]

ಈ ಸನ್ನಿವೇಶದ ಸಂಯೋಜನೆಯನ್ನು ಕಾಳೆಯವರು ಮನಮುಟ್ಟುವಂತೆ ಚಿತ್ರೀಕರಿಸಿದ್ದಾರೆ. ಇಡೀ ಸನ್ನಿವೇಶದ ಕತೆಯನ್ನು ಒಂದೇ ದೃಶ್ಯದಲ್ಲಿ ಎಲ್ಲವನ್ನು ಹಿಡಿದಿಟ್ಟಿರುವುದು ಅವರ ಪ್ರತಿಭೆಗೆ ಸಾಕ್ಷಿಯಾಗಿದೆ.

ದೃಶ್ಯ ೮

ಸಿದ್ಧಾರೂಢರ ದರ್ಶನದ ದೃಶ್ಯ

ಕುಮಾರಸ್ವಾಮಿಯವರು ಹುಬ್ಬಳ್ಳಿಯ ಆರೂಢರ ಮಠದಲ್ಲಿ ಸಂಪೂರ್ಣವಾಗಿ ಜ್ಞಾನಾರ್ಜನೆ ನಡೆಸತೊಡಗಿದರು. ಹಾಲಯ್ಯನ ಜ್ಞಾನ, ಆಧ್ಯಾತ್ಮಿಕ ಚಿಂತನೆ, ಸಂಶೋಧಕ ದೃಷ್ಟಿ, ಏಕಾಗ್ರತೆ, ಮಠದಲ್ಲಿಯ ಎಲ್ಲರ ಮೇಲೆ ಪ್ರಭಾವ ಬೀರಿದವು. ಹಾಲಯ್ಯ ಸರ್ವರಿಗೆ ಪೂಜ್ಯನೀಯವಾದರು. ಎಲ್ಲರೂ ಇವರನ್ನು ಪೂಜ್ಯ ದೃಷ್ಟಿಯಿಂದ ನೋಡ ತೊಡಗಿದರು. ಇವರೊಬ್ಬ ಶಿವಯೋಗಿ ಎಂದೇ ತಿಳಿದು 'ಶ್ರೀಗಳು' ಎಂದು ಸಂಬೋಧಿಸ ತೊಡಗಿದರು. ಶ್ರೀಗಳು ಆರೂಢರಲ್ಲಿ ಪಂಚದಶಿ, ವಿಚಾರ, ಸಾಗರ, ಪರಮಾನುಭವ ಬೋಧ ಮುಂತಾದ ಗ್ರಂಥಗಳ ಅಧ್ಯಯನ ಮಾಡಿದರು.[೧೧೮] ಸಿದ್ಧಾರೂಢರು ಕೊರಳಲ್ಲಿ ಲಿಂಗವನ್ನೇ ಧರಿಸುತ್ತಿರಲಿಲ್ಲ ಎಂಬುದನ್ನು ಗಮನಿಸಿದ ಹಾಲಯ್ಯನಿಗೆ ಆಶ್ಚರ್ಯವೂ ಆಗುತ್ತಿತ್ತು. ಲಿಂಗವನ್ನು ಧರಿಸಬೇಕೋ ಬೇಡವೋ ಎಂಬ ಜಿಜ್ಞಾಸೆ ಹಾಲಯ್ಯನನ್ನು ಕಾಡತೊಡಗಿತು.

ಈ ದೃಶ್ಯದಲ್ಲಿ ಪೀಠವೊಂದರ ಮೇಲೆ ಕುಳಿತ ಸಿದ್ಧಾರೂಢರು ಅವರ ಕೆಳಗಡೆಗೆ ಭಯಭಕ್ತಿ ಯಿಂದ ಕುಳಿತ ಕುಮಾರೇಶ್ವರರು. ಈ ದೃಶ್ಯವು ನೈಜತೆಯಿಂದ ಇದ್ದು ಸನ್ನಿವೇಶದ ಕಲ್ಪನೆಯನ್ನು ಹಿಡಿದಿಡುವಲ್ಲಿ ಯಶಸ್ವಿಯಾಗಿದೆ.

ದೃಶ್ಯ ೯

ಸ್ತ್ರೀ ಮೋಹವನ್ನು ನಿರಾಕರಿಸಿದ ದೃಶ್ಯ

ಕುಮಾರ ಸ್ವಾಮಿಯವರು ಭಿಕ್ಷಾಟನೆಗೆ ಎಂದು ಶ್ರೀಮಂತರ ಮನೆ ಬಾಗಿಲಿಗೆ ಹೋದಾಗ ಆ ಮನೆಯ ಒಬ್ಬ ಸುಂದರ ಹೆಣ್ಣುಮಗಳು ಇವನರನ್ನು ನೋಡಿ ಮೋಹಗೊಂಡು ತನ್ನ

---

೧೧೭. ವಿ.ಬಿ. ಹಿರೇಮಠ, ಶಿವಯೋಗಿ ಹಾನಗಲ ಶ್ರೀ ಕುಮಾರ ಮಹಾಸ್ವಾಮಿಗಳು, ಪು.೨೪

೧೧೮. ಅದೇ ಪು.೨೫

ಆಸೆಯನ್ನು ಪ್ರಕಟಪಡಿಸಲು ಕುಮಾರ ಸ್ವಾಮಿಯವರು ಅದನ್ನು ನಿರಾಕರಿಸಿ ತಮ್ಮ ಜೋಳಿಗೆಯನ್ನೇ ಆ ಹೆಣ್ಣಿನ ಕೈಯಲ್ಲಿ ಬಿಟ್ಟು ಮುಂದೆ ಸಾಗುವ ದೃಶ್ಯವನ್ನು ಕಾಳೆಯವರು ಪರಿಣಾಮಕಾರಿಯಾಗಿ ಚಿತ್ರಿಸಿದ್ದು ಒಟ್ಟು ಸನ್ನಿವೇಶದ ಸಂಯೋಜನೆಯು ಸಂವಹನಗೊಳ್ಳಿಸುವಲ್ಲಿ ಯಶಸ್ವಿಯಾಗಿದೆ.

ದೃಶ್ಯ ೧೦

ಜಡೆಸಿದ್ಧರ ದರ್ಶನ

ಎಮ್ಮಿಗನೂರ ಜಡೆಸಿದ್ಧರು ಮಹಾ ಆರೂಢರಾಗಿದ್ದರು. ಕೇವಲ ಒಂದು ಹರಕು ಕಂಬಳಿಯ ಆಧಾರದ ಮೇಲೆ ಇರತಕ್ಕವರಾಗಿದ್ದರು. ಸಂಜ್ಞೆ ಸನ್ನೆಯಿಂದಲೇ ಭಕ್ತರ ಬಯಕೆ ತಿಳಿಸಿ ಅವುಗಳನ್ನು ಈಡೇರಿಸುತ್ತಿದ್ದರು. ಇದು ಶ್ರೀಗಳವರಿಗೆ ಗೊತ್ತಿತ್ತು. ಶ್ರೀಗಳು ಜಡೆಸಿದ್ಧರಿರುವ ಸ್ಥಳಕ್ಕೆ ಬರತೊಡಗಿದ್ದರು. ಒಂದು ಫರ್ಲಾಂಗ ದೂರದಲ್ಲಿರುವಾಗಲೇ ಜಡೆಸಿದ್ಧರು ಇವರ ಬರುವಿಕೆಯನ್ನು ಅರಿತುಕೊಂಡರು. ಶ್ರೀಗಳು ಬಂದು ಜಡೆಸಿದ್ಧರಿಗೆ ಸಾಷ್ಟಾಂಗವೆರಗಿದರು. ಜಡೆಸಿದ್ಧರು "ಓಹೋ ಬರಬೇಕು, ಶಿವಯೋಗಿಗಳು" ಎಂದು ಸಂಬೋಧಿಸಿದರು. ಶ್ರೀಗಳು ಜಡೆಸಿದ್ಧರ ಅವಸ್ಥೆಯನ್ನು ವೈರಾಗ್ಯದ ಪರಿಯನ್ನು ಕಂಡು ವಿಸ್ಮಯಗೊಂಡರು.

ಶ್ರೀಗಳು ಜಡೆಸಿದ್ಧರ ಹತ್ತಿರ ಇಷ್ಟಲಿಂಗಧಾರಣೆಯನ್ನು ಕುರಿತು ಮನದಲ್ಲಿದ್ದ ಸಂಶಯ ನಿವಾರಣೆಗಾಗಿ ಬಂದಿದ್ದರು. ಅದನ್ನು ಕೇಳುವ ಮೊದಲೇ ಜಡೆಸಿದ್ಧರು ಸಂಜ್ಞೆಯಿಂದ ತೋರಿಸಿದರು. ಮನದ ಸಂಶಯಗಳು ದೂರವಾದವು. ಮುಂದೆ ಎಲ್ಲಿಗೆ ಹೋಗಬೇಕೆಂದು ಯೋಚಿಸಿದೊಡಗಿದರು. ಜಡೆಸಿದ್ಧರಿಗೆ ಮುಂದಿನ ಮಾರ್ಗದರ್ಶನ ನೀಡಲು ಕೇಳಬೇಕೆಂದರು. ಇದನ್ನು ಅರಿತ ಜಡೆಸಿದ್ಧರು ಹಾಲಯ್ಯನನ್ನು ಉದ್ದೇಶಿಸಿ "ಎಲ್ಲಿದ್ದಿಯೋ ಅಲ್ಲಿಗೇ ಹೋದರಾಯಿತು" ಎಂದು ಮೂರ್‍ನಾಲ್ಕು ಸಾರಿ ನುಡಿದರು. ಅವರ ಆದೇಶದಂತೆ ಮರಳಿ ಹುಬ್ಬಳ್ಳಿಗೆ ಬಂದರು. ಆರೂಢರಲ್ಲಿಯೇ ಅಧ್ಯಯನ ಮುಂದುವರೆಸಿದರು.[೧೯] ಈ ಸನ್ನಿವೇಶ ಸಂಪೂರ್ಣತೆಯನ್ನು ಕಾಳೆಯವರು ದೃಶ್ಯದ ಮುಖಾಂತರ ಅತ್ಯಂತ ನೈಜವಾಗಿ ಬಿಂಬಿಸಿದ್ದಾರೆ.

ದೃಶ್ಯ ೧೧

ಎಳಂದೂರ ಬಸವಲಿಂಗ ಸ್ವಾಮಿ ಗುರುಗಳ ದರ್ಶನ

ಘನ ವೈರಾಗ್ಯಶಾಲಿಗಳು, ಮಹಾಮಹಿಮರು ಆದ ಎಳಂದೂರ ಬಸವಲಿಂಗ ಸ್ವಾಮಿಗಳು ಆಗ ದೇಶ ಸಂಚಾರ ಮಾಡುತ್ತಿದ್ದರು. ಅವರು ಎಳಂದೂರ ವಿರಕ್ತಮಠದ ಅಧಿಕಾರಿಗಳಾಗಿದ್ದರು.

---

೧೯. ವಿ.ಬಿ. ಹಿರೇಮಠ, ಶಿವಯೋಗಿ ಹಾನಗಲ ಶ್ರೀ ಕುಮಾರ ಮಹಾಸ್ವಾಮಿಗಳು, ಪು.೨೮

ಯಾವುದೋ ಒಂದು ಕಾರಣದಿಂದ ದೇಶಪರ್ಯಟನೆ ಮಾಡುತ್ತಿದ್ದರು. ಯೋಗಸಾಧನೆಯಲ್ಲಿ ಮಹಾಮಹಿಮರಾಗಿದ್ದರು. ಶ್ರೀಗಳು ಬಸವಲಿಂಗಸ್ವಾಮಿಗಳೊಡನೆ ಚರ್ಚಿಸಿದರು. ಚರ್ಚೆಯಲ್ಲಿ ವೇದಾಂತದ ನಿಜಾರ್ಥವೇ ಇರಲಿಲ್ಲ. ಎಳಂದೂರುಸ್ವಾಮಿಗಳು ಮಹಾಶಿವಯೋಗಿಗಳೆಂಬುದು ಚರ್ಚೆಯ ಮೂಲಕ ಶ್ರೀಗಳಿಗೆ ಮನವರಿಕೆಯಾಗಿತ್ತು. ಅವರ ಸೇವೆಗೈದು ಜ್ಞಾನವನ್ನು ಹೆಚ್ಚಿಸಿಕೊಳ್ಳ ಬೇಕೆಂದುಕೊಂಡರು. ತಮ್ಮ ಆಸೆಯನ್ನು ಬಸವಲಿಂಗಸ್ವಾಮಿಗಳಲ್ಲಿ ತೊಡಿಕೊಂಡರು. ಶ್ರೀಗಳು ಗುರುವಿನ ಅಪ್ಪಣೆಯನ್ನು ಶಿರಸಾವಹಿಸಿ ಪಾಲಿಸಿದರು. ಕೆಲವೇ ದಿನಗಳಲ್ಲಿ ಗುರುಗಳ ಮನಸ್ಸನ್ನು ಗೆದ್ದರು. ದೀಕ್ಷೆ ಪಡೆದು ಅವರಿಂದ ಶಿವಾನುಭವದ ಬೋಧನೆಯನ್ನು ಪಡೆಯತೊಡಗಿದರು.[೨೦]

ಈ ಸನ್ನಿವೇಶದ ಸಂಯೋಜನೆಯು ಉತ್ತಮವಾಗಿದೆ. ಬಣ್ಣಗಳ ಸಮ್ಮಿಳಿತವು ನೆರಳು ಬೆಳಕಿನ ಛಾಯೆಯು ಇಲ್ಲಿ ಪರಿಣಾಮಕಾರಿಯಾಗಿ ಮೂಡಿಬಂದಿದೆ.

ದೃಶ್ಯ ೧೨

ಲಿಂಗಪೂಜೆಯಲ್ಲಿ ನಿರತರಾದ ಬಸವಲಿಂಗಸ್ವಾಮಿಗಳು ಮತ್ತು ಕುಮಾರಸ್ವಾಮಿಯವರ ದೃಶ್ಯ

ದೇಶ ಸಂಚರಿಸುತ್ತಾ, ಗುರುಶಿಷ್ಯರೀರ್ವರು ಶಂಭುಲಿಂಗನ ಬೆಟ್ಟಕ್ಕೆ ಬಂದರು. ಅಲ್ಲಿಯ ಬೆಟ್ಟದ ಗವಿಯಲ್ಲಿ ಅನುಷ್ಠಾನಕ್ಕೆ ಕುಳಿತರು. ಆ ಸಮಯದಲ್ಲಿಯ ಶ್ರೀಗಳ ನಿಷ್ಠೆ ಧರ್ಮದ ಆಚರಣೆ ಬಸವಲಿಂಗಸ್ವಾಮಿಗಳ ಹೃದಯ ಗೆದ್ದವು. ಅವರು ಸಂತೋಷದಿಂದಲೇ ಶ್ರೀಗಳಿಗೆ ಕ್ರಿಯೋಪದೇಶವನ್ನು ಜರುಗಿಸಿದರು. ಈಗ ಶ್ರೀಗಳು ಕ್ರಿಯೋಪದೇಶದ ಸಂಸ್ಕಾರದಿಂದ ತೇಜೋವಂತ ರಾದರು.[೨೧] ಗಾಢಕತ್ತಲೆಯ ಗವಿಯೊಂದರಲ್ಲಿ ಶ್ರೀಗಳು ಮತ್ತು ಅವರ ಗುರುಗಳು ಲಿಂಗಪೂಜೆಯಲ್ಲಿ ನಿರತರಾದ ದೃಶ್ಯ ಪರಿಣಾಮಕಾರಿಯಾಗಿ ಕಂಡುಬರುತ್ತದೆ.

ದೃಶ್ಯ ೧೩

ಗುರು ಬಸವಲಿಂಗರು ಇಹಲೋಕ ತ್ಯಜಿಸಿದ ನಂತರ ಕುಮಾರಸ್ವಾಮಿಯವರು ಏಕಾಂಗಿಯಾಗಿ ಅವರ ಗದ್ದುಗೆಯ ಮುಂದೆ ಶಿವಲಿಂಗ ಪೂಜೆಯಲ್ಲಿ ನಿರತರಾದ ದೃಶ್ಯ

ಗುರುಶಿಷ್ಯರೀರ್ವರೂ ಊರಿಂದೂರಿಗೆ ಸಂಚಾರಿಸುತ್ತ ಸದ್ಭಕ್ತರನ್ನು ಉದ್ಧಾರ ಮಾಡ ತೊಡಗಿದರು. ಇವರೀರ್ವರು ಯಾವುದೇ ಗ್ರಾಮಕ್ಕೆ ಬರಲಿ ಜನ ಭಕ್ತಿಯಿಂದ ಬರಮಾಡಿ ಕೊಳ್ಳುತ್ತಿದ್ದರು. ಇವರೀರ್ವರ ಬೋಧನೆ ಕೇಳಿ ಪುನೀತರಾಗುತ್ತಿದ್ದರು. ಸಂಚಾರಿಸುತ್ತಾ ಧಾರವಾಡ ಜಿಲ್ಲೆಯ ಅಣ್ಣಿಗೇರಿ ಗ್ರಾಮಕ್ಕೆ ಬಂದರು. ಅಲ್ಲಿ ಕೆಲವು ದಿನ ಉಳಿದುಕೊಂಡು ಧರ್ಮ ಜಾಗೃತಿ

---

೧೨೦. ವಿ.ಬಿ. ಹಿರೇಮಠ, ಶಿವಯೋಗಿ ಹಾನಗಲ ಶ್ರೀ ಕುಮಾರ ಮಹಾಸ್ವಾಮಿಗಳು, ಪು.೩೧

೧೨೧. ಅದೇ ಪು.೩೨

ಮೂಡಿಸತೊಡಗಿದರು. ಆ ಸಮಯದಲ್ಲಿ ಎಳಂದೂರ ಶ್ರೀಗಳಿಗೆ ದೇಹಾಲಸ್ಯವಾಗಿ ಜಾಡ್ಯ ತಲೆದೋರಿತು. ಅವರು ಅಲ್ಲಿಯೇ ತಮ್ಮ ಇಹಲೋಕ ವ್ಯಾಪಾರ ಮುಗಿಸಿ ಶಿವಸನ್ನಿಧಿ ಸೇರಿದರು.

ಗುರುಗಳ ನಿಧನ ಶ್ರೀಗಳಿಗೆ ತುಂಬಲಾರದ ಹಾನಿ ಒದಗಿಸಿತು. ಗುರುವನ್ನಾಗಲಿದ್ದಕ್ಕಾಗಿ ಅಪಾರ ವೇದನೆ ಮನದಲ್ಲಿ ಹೆಪ್ಪುಗಟ್ಟಿತು. ಮನಸ್ಸಿನ ನಿಗ್ರಹಕ್ಕಾಗಿ ಅನುಷ್ಠಾನ ಮಾಡಲು ನಿರ್ಧರಿಸಿದರು. ಸೊರಬ ಪ್ರಾಂತ್ಯದಲ್ಲಿರುವ ಷಟ್ಕಾವ್ಯದ ಗುರುಬಸವ ಸ್ವಾಮಿಗಳವರ ಗದ್ದಿಗೆಯ ಬಳಿ ಅನುಷ್ಠಾನ ಮಾಡಲು ನಿಶ್ಚಯ ಮಾಡಿ ಅಲ್ಲಿಗೆ ಹೋದರು. ಅಲ್ಲಿ ಇವರ ಅನುಷ್ಠಾನಕ್ಕೆ ಇಬ್ಬರು ಅನುವು ಮಾಡಿಕೊಟ್ಟರು.[೧೨೨]

ಈ ದೃಶ್ಯವು ಸನ್ನಿವೇಶಕ್ಕೆ ತಕ್ಕಂತೆ ಮೂಡಿಬಂದಿದೆ. ಪೂಜೆಗೆ ಕುಳಿತ ಶ್ರೀಗಳ ಹಿನ್ನೆಲೆಯಲ್ಲಿ ಅವರ ಗುರುಗಳ ಗದ್ದುಗೆ ಇದನ್ನು ಇಬ್ಬರು ವ್ಯಕ್ತಿಗಳು ವೀಕ್ಷಿಸುತ್ತಿರುವ ದೃಶ್ಯ ಒಟ್ಟು ಸಂಯೋಜನೆಯು ಸನ್ನಿವೇಶಕ್ಕೆ ತಕ್ಕಂತೆ ರಚಿತಗೊಂಡಿದೆ.

ದೃಶ್ಯ ೧೪ ಮತ್ತು ೧೫

ಹಾನಗಲ್ಲ ಮಠದಲ್ಲಿ ಅನ್ನ ದಾಸೋಹ

ಧಾರವಾಡ ಜಿಲ್ಲೆಯ ಹಾನಗಲ್ಲು ಶಿವಭಕ್ತರ ತವರೂರು. ಅಲ್ಲಿಯ ಶ್ರೀ ಕುಮಾರಮಹಾ ಸ್ವಾಮಿಗಳವರ ಮಠ ಬಹಳ ಪ್ರಸಿದ್ಧವಾದುದು. ಆ ಮಠದ ಸ್ವಾಮಿಗಳಾಗಿದ್ದ ಶ್ರೀ ಫಕೀರಸ್ವಾಮಿ ಗಳು ತಪೋನಿಷ್ಠರಾಗಿ, ಜ್ಞಾನದಾಸೋಹ, ಅನ್ನದಾಸೋಹ, ನಡೆಸುತ್ತ ಹೆಸರುವಾಸಿಯಾಗಿದ್ದರು. ಅವರು ನುಡಿದದ್ದೆಲ್ಲ ಸತ್ಯವಾಗುತ್ತಿತ್ತು. ಮಲೆನಾಡು ಸೀಮೆಯ ಜನರಂತೂ ಇವರನ್ನು ಸಾಕ್ಷಾತ್ ಶಿವನ ಅವತಾರಿಗಳೆಂದೆ ಭಾವಿಸಿದ್ದರು. ಶ್ರೀ ಫಕೀರಸ್ವಾಮಿಗಳಿಗೆ ವಯಸ್ಸಾಗಿತ್ತು. ತಮ್ಮ ಮಠಕ್ಕೆ ಉತ್ತರಾಧಿಕಾರಿಯನ್ನು ಹುಡುಕುತ್ತಿದ್ದರು. ಕೂಡಲೇ ಅವರ ಕಣ್ಣಮುಂದೆ ಶ್ರೀಗಳು ಮೂಡಿಬಂದರು. ಅಂಥವರು ಹಾನಗಲ್ಲ ಮಠದ ಸ್ವಾಮಿಗಳಾದರೆ ಆ ಮಠದ ಕೀರ್ತಿ ಬೆಳಗುವುದೆಂದು ಯೋಚಿಸಿದರು.

ಇವರ ದಿವ್ಯ ವ್ಯಕ್ತಿತ್ವ ಫಕೀರಸ್ವಾಮಿಗಳಿಗೆ ಹಿಡಿಸಿತು. ಅವರನ್ನು ಕುರಿತು ಮಠದ ಉತ್ತರಾಧಿಕಾರಿಯಾಗಬೇಕೆಂದು ಹೇಳಿದರು. ಒಂದು ಮಠದ ಅಧಿಕಾರದ ಕಟ್ಟಳೆಗೆ ಒಳಗಾಗಿರಲು ಶ್ರೀಗಳಿಗೆ ಇಷ್ಟವಿರಲಿಲ್ಲ. ಸಮಾಜ ಸೇವೆಗಾಗಿ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಳ್ಳ ಬೇಕೆನ್ನುವುದು ಅವರ ಇಚ್ಛೆಯಾಗಿತ್ತು. ಆಗ ಫಕೀರಸ್ವಾಮಿಗಳು "ಮಠದ ಸ್ವಾಮಿತ್ವ ಸಮಾಜ ಸೇವೆಗೆ ಅಡ್ಡಿಯಾಗುವುದಿಲ್ಲ" ಎಂದಾಗ ಶ್ರೀಗಳು ಫಕೀರಸ್ವಾಮಿಗಳ ಮಾತನ್ನು ಒಪ್ಪಿಕೊಂಡರು.

---

೧೨೨. ವಿ.ಬಿ. ಹಿರೇಮಠ, ಶಿವಯೋಗಿ ಹಾನಗಲ ಶ್ರೀ ಕುಮಾರ ಮಹಾಸ್ವಾಮಿಗಳು, ಪು.೩೩

ಮುಂದೆ ಶ್ರೀಗಳು ಮಠದಲ್ಲಿಯೇ ಉಳಿದು ಫಕೀರಸ್ವಾಮಿಗಳ ಸೇವೆಯನ್ನು ಮನಮುಟ್ಟಿ ಮಾಡಿದರು. ಮೊದಲಿನಿಂದಲೂ ಸಾಗಿ ಬಂದ ಮಠದ ದಾಸೋಹ ವ್ಯವಸ್ಥೆಯನ್ನು ಮತ್ತಷ್ಟು ಉತ್ತಮಗೊಳಿಸಿದರು. ಆಗಾಗ ಸುತ್ತಮುತ್ತಲಿನ ಗ್ರಾಮಗಳ ಸೀಮೆಯಲ್ಲಿ ಸಂಚರಿಸಿ ಧರ್ಮ ಬೋಧನೆ ನೀಡಿದರು. ಅಂದಿನಿಂದ ಶ್ರೀಗಳು ಭಕ್ತರ ಹೃದಯದಲ್ಲಿ ಹಾನಗಲ್ಲ ಸ್ವಾಮಿಗಳೆಂದು ಪ್ರತಿಷ್ಠಾಪಿತರಾದರು.[೧೨೩]

ಹಾನಗಲ್ ಸುತ್ತಮುತ್ತ ಬರಗಾಲ ಬಿದ್ದು ತಿನ್ನಲು ಸರಿಯಾದ ಆಹಾರ ಸಿಗದೇ ಜನರು ರೋಗ ರುಜಿನಗಳಿಗೆ ಒಳಗಾಗಿ ತತ್ತರಿಸಿ ಹೋಗಿರುತ್ತಾರೆ. ಆ ಸಂದರ್ಭದಲ್ಲಿ ಕುಮಾರಸ್ವಾಮಿ ಅವರು ಮಠದ ಆಸ್ತಿಯಲ್ಲಾ ಮಾರಿ ಊರಿನ ಜನಕ್ಕೆ ಅನ್ನ ದಾಸೋಹ ಮಾಡುತ್ತಾರೆ. ಮತ್ತು ರೋಗಿಗಳಿಗೆ ಸ್ವತಃ ತಾವೇ ಔಷಧವನ್ನು ತಯಾರಿಸಿ ಉಪಚರಿಸುತ್ತಾರೆ. ಈ ಸನ್ನಿವೇಶದ ಸಂಯೋಜನೆಯನ್ನು ಕಾಳೆಯವರು ಉತ್ತಮವಾಗಿ ರಚಿಸಿದ್ದು ಬಣ್ಣಗಳ ಬಳಕೆ ಸಂಯೋಜನೆ ಸನ್ನಿವೇಶಕ್ಕೆ ತಕ್ಕಂತೆ ಮೂಡಿಬಂದಿದೆ. ಮತ್ತು ಇನ್ನೊಂದು ದೃಶ್ಯದಲ್ಲಿ ಕುಮಾರಸ್ವಾಮಿಯವರು ರೋಗಿಯೊಬ್ಬನಿಗೆ ಉಪಚರಿಸುತ್ತಿದ್ದು, ಬರಗಾಲ ಬಿದ್ದ ಸಂದರ್ಭದಲ್ಲಿ ಸರಿಯಾದ ಊಟ, ನೀರು ಇಲ್ಲದೇ ರೋಗರುಜಿನಗಳು ಹುಟ್ಟಿಕೊಂಡು ಜನರನ್ನು ಭಾದಿಸ ತೊಡಗಿತ್ತು. ಆ ಸಂದರ್ಭದಲ್ಲಿ ಕುಮಾರಸ್ವಾಮಿಯವರು ರೋಗಿಗಳ ಸೇವೆ ಮಾಡಿ ಅವರನ್ನು ಗುಣಮುಖರನ್ನಾಗಿ ಮಾಡುವಲ್ಲಿ ನಿರತರಾಗಿದ್ದರು. ಅವರು ಚರ್ಮರೋಗವನ್ನು ಗುಣಪಡಿಸುವಲ್ಲಿ ನಿಸ್ಸಿಮರಾಗಿದ್ದರು.

ದೃಶ್ಯ ೧೬

ವೈರಾಗ್ಯದ ಮಲ್ಲಾರ್ಯರು ಮತ್ತು ಕುಮಾರಸ್ವಾಮಿಯವರು

ಮಲ್ಲಣಾರ್ಯರು ಶಿವಯೋಗ ಮಂದಿರದ ನಿರ್ಮಾಣಕ್ಕೆ ಮೂಲ ಕಾರಣಕರ್ತರು. ಇವರು ವೈರಾಗ್ಯದ ಮಲ್ಲಣಾರ್ಯರು ಎಂದೇ ಪ್ರಸಿದ್ಧರು. ಶಿವಯೋಗ ಮಂದಿರ ನಿರ್ಮಾಣ ಆಗುವುದು ಯಾರಿಂದ ಸಾಧ್ಯವೆಂಬ ಪ್ರಶ್ನೆ ಎದುರಾದಾಗ ಇವರಿಗೆ ನೆನಪಿಗೆ ಬರುವುದು ಕುಮಾರಸ್ವಾಮಿಗಳು. ಮಲ್ಲಣಾರ್ಯರು ಕುಮಾರಸ್ವಾಮಿಯವನ್ನು ಹುಡುಕಿಕೊಂಡು ಹಾನಗಲ್ ಮಠಕ್ಕೆ ಬರುತ್ತಾರೆ. ಆ ಸಂದರ್ಭದಲ್ಲಿ ಕುಮಾರಸ್ವಾಮಿಯವರು ಮಠದಲ್ಲಿರುವುದಿಲ್ಲ. ಮಲ್ಲಣಾರ್ಯರು ಅವರ ನಿರೀಕ್ಷೆಯಲ್ಲಿಯೇ ಆ ಮಠದ ಮೊದಲ ಸ್ವಾಮಿಯವರ ಸಮಾಧಿಗೆ ತಲೆಯಿಟ್ಟು ಮಲಗಿ ಕೊಳ್ಳುತ್ತಾರೆ. ಕುಮಾರಸ್ವಾಮಿಯವರು ಮಠಕ್ಕೆ ಬಂದ ನಂತರ "ನೀನೇನಾ ಕುಮಾರಸ್ವಾಮಿ"

೧೨೩. ವಿ.ಬಿ. ಹಿರೇಮಠ, ಶಿವಯೋಗಿ ಹಾನಗಲ ಶ್ರೀ ಕುಮಾರ ಮಹಾಸ್ವಾಮಿಗಳು, ಪು.೩೭

ಎಂದು ದರ್ಪದಿಂದ ಕೇಳುತ್ತಾರೆ. ಆಗ ಅಷ್ಟೇ ವಿನಮ್ರತೆಯಿಂದ ಕುಮಾರಸ್ವಾಮಿಯವರು "ಹಾಗಂತ ಜನ ಹೇಳುತ್ತಾರೆ" ಎಂದು ಉತ್ತರಿಸುತ್ತಾರೆ. ಆ ಒಂದು ಸನ್ನಿವೇಶದ ದೃಶ್ಯ ಇದಾಗಿದ್ದು ಸಂಯೋಜನೆಯ ಸನ್ನಿವೇಶಕ್ಕೆ ತಕ್ಕಂತೆ ಮೂಡಿಬಂದಿದೆ.

ದೃಶ್ಯ ೧೭

ಶಿವಯೋಗ ಮಂದಿರದ ಸ್ಥಾಪನೆ ಕುರಿತು ನಡೆದ ಮಹಾಸಭೆ

ಶ್ರೀಗಳ ಸೇವಾಕಾರ್ಯದಲ್ಲಿ ನೆರವು ನೀಡಿದವರು ಅನೇಕರು. ಅವರಲ್ಲಿ ಶಿವಯೋಗ ಮಂದಿರದ ಸ್ಥಾಪನೆಯ ಕುರಿತು ಪ್ರೇರಣೆ ನೀಡಿದವರು ಬಾಗಲಕೋಟೆಯ ವೈರಾಗ್ಯದ ಮಲ್ಲಣಾರ್ಯರು. ಶ್ರೀಗಳ ಸಮಾಜ ಕಳಕಳಿ ಮಲ್ಲಣಾರ್ಯರಿಗೆ ತಿಳಿದಿತ್ತು. ಅವರನ್ನು ಕಂಡು ಸಮಾಜೋದ್ಧಾರಕ್ಕೆ ಇನ್ನಷ್ಟು ಪ್ರೋತ್ಸಾಹ ಕೊಡಬೇಕೆಂದು ಕೊಂಡರು. ಶ್ರೀಗಳನ್ನು ಕಾಣಲು ಹಾನಗಲ್ ಮಠಕ್ಕೆ ಬಂದರು. ಶ್ರೀಗಳು ಅವರ ಮಾತಿನಂತೆಯೇ ನಡೆಯುವುದಾಗಿ ಹೇಳಿದರು. ಅಲ್ಲದೇ ಸಮಾಜ ಸೇವಾ ಕಾರ್ಯದಲ್ಲಿ ತಮ್ಮೊಡನಿದ್ದು ಸಹಕರಿಸಬೇಕೆಂದರು. ಮಲ್ಲಣಾರ್ಯರು ಧರ್ಮದ ಪುನರೋದ್ಧಾರಕ್ಕಾಗಿ ಘನ ವೈರಾಗ್ಯದ ತಳಹದಿಯ ಮೇಲೆ ಶಿವಯೋಗ ಮಂದಿರ ಸ್ಥಾಪಿಸಬೇಕೆಂದು ಹೇಳಿದರು. ಶಿವಯೋಗ ಮಂದಿರ ಸ್ಥಾಪಿಸುವುದು ನಿಶ್ಚಿತವಾಯಿತು. ಮಲ್ಲಣಾರ್ಯರ ಜೊತೆ ಅಲ್ಲಲ್ಲಿ ಸಂಚರಿಸಿ ಈ ಕುರಿತು ಸಮಾಜದ ಭಕ್ತರಿಗೆ, ಪ್ರಮುಖರಿಗೆ ಪೀಠಾಧಿಪತಿಗಳಿಗೆ ತಿಳುವಳಿಕೆ ನೀಡಿದರು.

೧೯೦೮ರಲ್ಲಿ ಬಾಗಲಕೋಟೆಯಲ್ಲಿ ನಾಲ್ಕನೆಯ ವೀರಶೈವ ಮಹಾಸಭೆಯು ಜರುಗಿತು. ಅಲ್ಲಿ ಶಿವಯೋಗ ಮಂದಿರ ಸ್ಥಾಪನೆಯ ವಿಷಯವು ಸರ್ವಾನುಮತದಿಂದ ಒಪ್ಪಿಗೆಯಾಯಿತು. ಮಹಾಸಭೆಗೆ ಬಂದಿದ್ದ ಬೇರೆ ಬೇರೆ ಪ್ರಾಂತ್ಯಗಳ ಜನರು ಮಂದಿರ ತಮ್ಮಲ್ಲಿ ಸ್ಥಾಪಿತವಾಗಬೇಕೆನ್ನ ತೊಡಗಿದರು. ಪ್ರತಿಯೊಬ್ಬರದು ತಮ್ಮಲ್ಲಿಯೇ ಆಗಬೇಕೆನ್ನುವ ಬೇಡಿಕೆಯಿತ್ತು. ಕೊನೆಗೆ ಸ್ಥಳ ನಿರ್ಧರಿಸುವ ಹೊಣೆಯನ್ನು ಇಲಕಲ್ಲ ವಿಜಯ ಮಹಾಂತಸ್ವಾಮಿಗಳಿಗೆ ಒಪ್ಪಿಸಲಾಯಿತು. ಈ ದೃಶ್ಯವು ಶಿವಯೋಗ ಮಂದಿರ ಸ್ಥಾಪನೆಯ ಕುರಿತು ನಡೆದ ಮಹಾಸಭೆಯ ಸನ್ನಿವೇಶವಾಗಿದ್ದು ಸಂಯೋಜನೆಯ ಸನ್ನಿವೇಶಕ್ಕೆ ತಕ್ಕಂತೆಯಿದ್ದು ಇಲ್ಲಿ ಕುಳಿತಿರುವ ವ್ಯಕ್ತಿಗಳ ಗಂಭೀರತೆ, ದ್ವಂದ್ವ ಮುಖಭಾವಗಳನ್ನು ಯಶಸ್ವಿಯಾಗಿ ಸೆರೆ ಹಿಡಿಯಲಾಗಿದೆ.

ದೃಶ್ಯ ೧೮

ಇಲಕಲ್ ವಿಜಯಮಹಾಂತಸ್ವಾಮಿಯವರ ದರ್ಶನ

ಶಿವಯೋಗ ಮಂದಿರದ ಸ್ಥಾಪನೆಗೆ ಮೊದಲು ಅದನ್ನು ಎಲ್ಲಿ ಸ್ಥಾಪಿಸಬೇಕು ಎಂಬ ನಿರ್ಧಾರವನ್ನು ಇಳಕಲ್ಲ ಮಹಾಸ್ವಾಮಿಯವರಿಗೆ ಒಪ್ಪಿಸಲಾಗಿರುತ್ತದೆ. ಈ ನಿಮಿತ್ತ ಕುಮಾರಸ್ವಾಮಿ

ಯವರು ಇಳಕಲ್ಲ ಮಹಾಸ್ವಾಮಿಗಳ ಹತ್ತಿರ ಬರುತ್ತಾರೆ. ಅವರ ಬರುವ ಸುದ್ದಿಯನ್ನು ತಿಳಿದು ಇಳಕಲ್ಲ ಮಹಾಸ್ವಾಮಿಯವರು ಅವರನ್ನು ಕರೆತರಲು ಅಡ್ಡ ಪಲ್ಲಕ್ಕಿಯನ್ನು ಕಳುಹಿಸುತ್ತಾರೆ. ಐಷಾರಾಮಿ ಜೀವನದಿಂದ ದೂರವಿರುವ ಕುಮಾರಸ್ವಾಮಿಯವರು ಅದರ ಮೇಲೆ ತಾವು ಕೂಡದೇ ತಮ್ಮ ಒಬ್ಬ ಶಿಷ್ಯನನ್ನು ಆ ಪಲ್ಲಕ್ಕಿಯಲ್ಲಿ ಕೂಡಿಸಿ ಸಾಮಾನ್ಯರಂತೆ ನಡೆದುಕೊಂಡು ಬರುತ್ತಾರೆ. ಆಗ ಇಳಕಲ್ಲ ಸ್ವಾಮಿಯವರು ಪಲ್ಲಕ್ಕಿಯಲ್ಲಿರುವ ವ್ಯಕ್ತಿಯ ಕಾಲಿಗೆ ನಮಸ್ಕರಿಸಬಹುದು ಎಂದು ತಿಳಿದು ಕುಮಾರಸ್ವಾಮಿಯವರು ಜನಸಂದಣಿಯಿಂದ ತಪ್ಪಿಸಿಕೊಂಡು ಇಳಕಲ್ ಸ್ವಾಮಿಯವರ ಕಾಲಿಗೆ ನಮಸ್ಕರಿಸುವ ಸನ್ನಿವೇಶದ ದೃಶ್ಯ ಇದಾಗಿದೆ. ಈ ದೃಶ್ಯ ಸಂಯೋಜನೆಯ ಉತ್ತಮವಾಗಿ ಮೂಡಿಬಂದಿದ್ದು. ಸನ್ನಿವೇಶವನ್ನು ಯಶಸ್ವಿಯಾಗಿ ಸೆರೆಹಿಡಯಲಾಗಿದೆ. ಬಣ್ಣಗಳ ಸಮ್ಮಿಳಿತ ಹಿನ್ನೆಲೆ ವಾದ್ಯಗಳೊಂದಿಗೆ ಬರುವ ಜನಸಂದಣಿಯ ದೃಶ್ಯವು ಪರಿಣಾಮಕಾರಿಯಾಗಿ ಮೂಡಿಬಂದಿದೆ.

ದೃಶ್ಯ ೧೮

ಶಿವಯೋಗ ಮಂದಿರ ಸ್ಥಾಪಿಸಲು ಸ್ಥಳದ ಕುರಿತು ನಡೆದ ಚರ್ಚೆಯ ದೃಶ್ಯ

ವಿಜಯ ಮಹಾಂತಸ್ವಾಮಿಗಳು ಸಮಾಜದ ಪ್ರಮುಖರೊಂದಿಗೆ ಹುನಗುಂದ ಮಾರ್ಗವಾಗಿ ಸಂಚರಿಸುತ್ತಾ ಐಹೊಳೆ, ಪಟ್ಟದಕಲ್ಲು ಮಹಾಕೂಟ ಸಾಗಿ ಮುಂದೆ ಬಂದರು. ಅಲ್ಲಿಂದ ಮುಂದಕ್ಕೆ ಮಲಾಪಹಾರಿ ನದಿಯ ಗುಂಟ ಪಯಣಿಸುತ್ತಾ ಬಂದರು. ಅವರು ತಮ್ಮೊಂದಿಗೆ ಕರೆತಂದ ವಿಜಯಮಹಾಂತಮ್ಮ ಎಂಬ ಹಸು ಆ ಸ್ಥಳದಲ್ಲಿ ತಟ್ಟನೇ ನಿಂತು ಅಲ್ಲಿ ಬೆಳೆದ ಹುಲ್ಲನ್ನು ಮೇಯತೊಡಗಿತು. ಅದು ಅರಣ್ಯ ಪ್ರದೇಶವಾಗಿತ್ತದರೂ ಮಲಾಪಹಾರಿ ನದಿಯ ಪ್ರಶಾಂತ ವಾತಾವರಣವು ಅವರಿಗೆ ಹಿಡಿಸಿತು. ಅಲ್ಲಿದ್ದ ಪತ್ರಿವನ, ಗಿಡಮೂಲಿಕೆಗಳಿಂದ ಕೂಡಿದ ಪರಿಸರ ಮಹಾಂತಸ್ವಾಮಿಗಳಿಗೆ ಬಹಳ ಹಿಡಿಸಿತು. ಅಲ್ಲಿ ಶಿಥಿಲವಾಗಿದ್ದ ಒಂದು ಕಟ್ಟಡವಿತ್ತು. ಅದು "ಕೊಟ್ಟೂರು ಬಸವೇಶ್ವರ"ರು ಅನುಷ್ಠಾನ ಮಾಡಿದ ಕಟ್ಟಡವಾಗಿತ್ತು. ಶಿವಯೋಗ ಮಂದಿರ ಸ್ಥಾಪನೆಗೆ ನಮ್ಮ ಮಹಾಂತಮ್ಮ ತೋರಿಸಿದ ಈ ಜಾಗೆಯು ಸೂಕ್ತವಾದ ಸ್ಥಳವೆಂದು ಹೇಳಿದರು. ಅವರ ಅಪ್ಪಣೆಯಂತೆ ಶಿವಯೋಗ ಮಂದಿರವನ್ನು ಅಲ್ಲಿಯೇ ಸ್ಥಾಪಿಸಲು ಶ್ರೀಗಳು ಸನ್ನದ್ಧರಾದರು.

ಶಕೆ ೧೮೩೦ನೆಯ ಕೀಲನಾಮ ಸಂವತ್ಸರ ಮಾಘ ಶುದ್ಧ ೭ನೇ ಶುಭ ಮುಹೂರ್ತದಲ್ಲಿ ಶಿವಯೋಗ ಮಂದಿರವು ಸ್ಥಾಪಿಸಲ್ಪಟ್ಟಿತು. ಕೇವಲ ಏಳು ಸಾಧಕ ವಟುಗಳೊಂದಿಗೆ ಪ್ರಾರಂಭವಾದ ಶಿವಯೋಗ ಮಂದಿರದ ಖ್ಯಾತಿ ಬರಬರುತ್ತ ಹರಡತೊಡಗಿತು.[೨೪]

---

೨೪. ವಿ.ಬಿ. ಹಿರೇಮಠ, ಶಿವಯೋಗಿ ಹಾನಗಲ ಶ್ರೀ ಕುಮಾರ ಮಹಾಸ್ವಾಮಿಗಳು, ಪು.೫೪

ಈ ದೃಶ್ಯದಲ್ಲಿ ಮಹಾಂತಸ್ವಾಮಿಗಳು ಮತ್ತು ಶ್ರೀಗಳ ಸಮಾಲೋಚನೆಯ ಸಂಯೋಜನೆಯ ದೃಶ್ಯ ಉತ್ತಮವಾಗಿ ಮೂಡಿಬಂದಿದೆ.

ದೃಶ್ಯ ೨೦

ಶಿವಯೋಗ ಮಂದಿರ ಆವರಣದಲ್ಲಿ ಪಾಠವನ್ನು ಬೋಧಿಸುತ್ತಿರುವ ಕುಮಾರಸ್ವಾಮಿಯವರು

ಪ್ರಾರಂಭದಲ್ಲಿ ಶಿವಯೋಗ ಮಂದಿರ ಸ್ಥಾಪನೆಯಾದಾಗ ಏಳು ಜನ ವಿದ್ಯಾರ್ಥಿಗಳಿಂದ ಅದನ್ನು ಪ್ರಾರಂಭಿಸಲಾಯಿತು. ಆ ಏಳು ಜನ ವಿದ್ಯಾರ್ಥಿಗಳನ್ನು ಕೂಡಿಸಿಕೊಂಡು ಕುಮಾರಸ್ವಾಮಿಯವರು ಪಾಠ, ಪ್ರವಚನವನ್ನು ಬೋಧಿಸುತ್ತಿರುವ ದೃಶ್ಯವು ಇಲ್ಲಿ ಮೂಡಿಬಂದಿದ್ದು. ಶಿವಯೋಗ ಮಂದಿರದ ಆವರಣದಲ್ಲಿ ಗಿಡವೊಂದರ ನೆರಳಿನಲ್ಲಿ ಪಾಠ ಬೋಧನೆ ಸಾಗಿದೆ. ಒಟ್ಟು ದೃಶ್ಯದ ಸನ್ನಿವೇಸದ ಸಂಯೋಜನೆಯು ಸುಂದರವಾಗಿ ಮೂಡಿಬಂದಿದೆ. ಸಂಯೋಜನೆಯು ಕೇಂದ್ರ ಬಿಂದುವಿನಲ್ಲಿ ಪಾಠವನ್ನು ಭೋದಿಸುತ್ತಿರುವ ಕುಮಾರಸ್ವಾಮಿಯವರು ಮತ್ತು ಅವರ ಎದುರುಗಡೆ ಕುಳಿತ ವಿದ್ಯಾರ್ಥಿಗಳ ಸಮೂಹ ಹಿನ್ನೆಲೆಯಲ್ಲಿನ ನಿಸರ್ಗ ಒಂದಕ್ಕೊಂದು ಪೂರಕವಾಗಿ ಪರಿಣಾಮಕಾರಿಯಾಗಿ ಮೂಡಿಬಂದಿದೆ.

ದೃಶ್ಯ ೨೧

ಶಿವಯೋಗ ಮಂದಿರ ಆವರಣದಲ್ಲಿರುವ ಗೋಶಾಲೆಯಲ್ಲಿ
ಗೋವುಗಳೊಂದಿಗೆ ಕುಮಾರಸ್ವಾಮಿಯವರು

ಗೋವುಗಳ ಬಗ್ಗೆ ಶ್ರೀಗಳವರಿಗೆ ಅಪಾರ ಪ್ರೇಮ. ಪ್ರತಿನಿತ್ಯದ ಪೂಜೆಗೆ ಹಸುವಿನ ಹಾಲು, ತುಪ್ಪಗಳ ವಿನಿಯೋಗವಾಗಬೇಕಿತ್ತು. ಗೋವುಗಳಿಗಾಗಿ 'ಗೋಶಾಲೆ'ಯೊಂದನ್ನು ನಿರ್ಮಿಸಿದರು. ಗೋವುಗಳಿಗೆ ಮೇವು ಪೂರೈಕೆ, ಆರೈಕೆ ಇತ್ಯಾದಿಯನ್ನು ಎದುರುನಿಂತು ಮಾಡಿಸುತ್ತಿದ್ದರು.

ಗೋಶಾಲೆಯಲ್ಲಿ ಕಪನಳ್ಳಿಯ ಶಿವಯೋಗಾಶ್ರಮದಿಂದ ಬಂದ ಒಳ್ಳೆಯ ತಳಿಯ ಆಕಳುಗಳಿದ್ದವು. ಅವುಗಳಲ್ಲಿ 'ಶಂಕರಿ' ಎಂಬ ಹಸು ಗೋಶಾಲೆಯಲ್ಲಿತ್ತು. ಅದಕ್ಕೆ ಅಚ್ಚ ಕಪ್ಪು ಬಣ್ಣ, ಗುಂಡುಕೋಡು, ಎತ್ತರವಾದ ನಿಲುವು, ಹೊಳೆಯುವ ಕಣ್ಣುಗಳು ಇದ್ದವು. ಅದು ಗೋಮಾತೆಯ ಸಾಕಾರ ಮೂರ್ತಿಯಾಗಿತ್ತು. ಅದು ಶ್ರೀಗಳವರ ಮೆಚ್ಚುಗೆ ಪಡೆದ ಆಕಳಾಗಿತ್ತು.[೧೨೫]

ಇಲ್ಲಿ ಕುಮಾರಸ್ವಾಮಿಯವರ ಗೋವುಗಳ ಮೇಲೆಯಿರುವ ಪ್ರೀತಿಯನ್ನು ಈ ಕಲಾಕೃತಿ ವ್ಯಕ್ತಪಡಿಸುತ್ತದೆ. ಹಿನ್ನೆಲೆಯಲ್ಲಿರುವ ಗೋಶಾಲೆ, ಗೋವುಗಳು ಕೆಲಸ ಮಾಡುತ್ತಿರುವ ಆಳುಗಳಿಗೆ ಮುಂತಾಗಿ ತುಂಬಾ ಸುಂದರವಾದ ಸಂಯೋಜನೆಯನ್ನು ಈ ಕಲಾಕೃತಿ ಹೊಂದಿದೆ.

---

೧೨೫. ವಿ.ಬಿ. ಹಿರೇಮಠ, ಶಿವಯೋಗಿ ಹಾನಗಲ ಶ್ರೀ ಕುಮಾರ ಮಹಾಸ್ವಾಮಿಗಳು, ಪು.೬೩

ಹಾನಗಲ್ ಕುಮಾರಸ್ವಾಮಿಯವರ ಪವಾಡಗಳ ದೃಶ್ಯಗಳು

ದೃಶ್ಯ ೨೨

ತಪಸ್ವಿ ದೃಷ್ಟಿ

ಕುಮಾರಸ್ವಾಮಿಯವರು ಬಿರುಗಾಳಿಯಲ್ಲು ದೀಪವನ್ನು ಉರಿಸಿದ ಸಂದರ್ಭ. ಒಂದು ಸಲ ಶಿವಯೋಗ ಮಂದಿರದ ಪೂಜಾ ಸಮಯ. ಕಟ್ಟಡವಿಲ್ಲದ್ದರಿಂದ ಬಯಲು ಜಾಗೆಯಲ್ಲಿಯೇ ಪೂಜೆ ನಡೆಯುತ್ತಿತ್ತು. ಶಿಷ್ಯರು ನಮಸ್ಕರಿಸಿ ಕರ್ಪೂರವನ್ನು ಹಚ್ಚಿದರು. ಗಾಳಿ ಹೆಚ್ಚಾಗಿತ್ತು. ಕರ್ಪೂರದ ಉರಿ ಅಲ್ಲಾಡತೊಡಗಿತು. ಅದು ಆರಬಹುದೆಂದು ಶಿಷ್ಯರೊಬ್ಬರು ಬಂದು ಉರಿಯ ಸುತ್ತ ಕೈಹಿಡಿದರು. ಅಲ್ಲಿದ್ದ ಮತ್ತೊಬ್ಬರು ಸನ್ನೆ ಮಾಡಿ ಅವರನ್ನು ಕರೆದರು. ಪಿಸುಮಾತಿನಲ್ಲಿ "ಸ್ವಾಮಿಗಳವರಲ್ಲಿ ಶಕ್ತಿ ಇದ್ದರೆ ಗಾಳಿಗೆ ಕರ್ಪೂರದ ಉರಿ ಆರದಿರಲಿ" ಎಂದು ನುಡಿದರು. ಇದು ಸೂಕ್ಷ್ಮಮತಿಗಳಾದ ಶ್ರೀಗಳಿಗೆ ಕೇಳಿಸಿತು. ನೆಟ್ಟ ನೋಟದಿಂದ ಉರಿವ ಕರ್ಪೂರ ವೀಕ್ಷಿಸಿದರು. ಅಲ್ಲಾಡುತ್ತಿದ್ದ ಉರಿ ಅಲ್ಲಾಡದೇ ನಿಂತಿತು. ದೊಡ್ಡಗಾಳಿ ಬೀಸುತ್ತಿದ್ದರೂ ಅದು ಆರಲಿಲ್ಲ. ಅಲ್ಲಿದ್ದವರೆಲ್ಲ ಬೆರಗಾದರು.[೧೨೬]

ಈ ದೃಶ್ಯವು ಸನ್ನಿವೇಶಕ್ಕೆ ತಕ್ಕಂತೆ ಸಂಯೋಜನೆಗೊಂಡಿದ್ದು ಒಟ್ಟು ಕಲಾಕೃತಿಯ ಸುಲಭವಾಗಿ ಸಂವಹನಗೊಂಡಿದ್ದು ಪರಿಣಾಮಕಾರಿಯಾಗಿ ಮೂಡಿಬಂದಿದೆ.

ದೃಶ್ಯ ೨೩

ಲಿಂಗವನ್ನು ಪುನಃ ದೊರಕಿಸಿಕೊಟ್ಟ ಸನ್ನಿವೇಶ

ಈ ದೃಶ್ಯವು ಕುಮಾಸ್ವಾಮಿಯವರ ಇನ್ನೊಂದು ಪವಾಡವಾಗಿದೆ. ವಟುವೊಬ್ಬನ ಕೊರಳ ಲಿಂಗವು ನದಿಯಲ್ಲಿ ಕಳೆದು ಹೋದಾಗ ಸ್ವಾಮಿ ಕುಮಾರೇಶ್ವರರು ತಮ್ಮ ಪವಾಡದ ಮೂಲಕ ನದಿಯನ್ನೇ ಬೇರೆಡೆಗೆ ತಿರುಗಿಸಿ ಲಿಂಗವನ್ನು ಅವರಿಗೆ ಮರಳಿ ಸಿಗುವಂತೆ ಮಾಡಿದ ದೃಶ್ಯ ಇದಾಗಿದೆ. ಇವರೀರ್ವರ ಹಿಂದೆ ನಿಂತು ಈ ಪವಾಡವನ್ನು ವೀಕ್ಷಿಸುತ್ತಿರುವ ಜನ ತಮ್ಮ ಆಶ್ಚರ್ಯವನ್ನು ವ್ಯಕ್ತಪಡಿಸುತ್ತಿದ್ದಾರೆ. ಪಕ್ಕದಲ್ಲಿ ಹರಿಯುತ್ತಿರುವ ನದಿ, ಹಿನ್ನೆಲೆಯಲ್ಲಿ ಕಾಡು ಈ ಒಟ್ಟು ಸಂಯೋಜನೆಯು ಪರಿಣಾಮಕಾರಿಯಾಗಿದೆ.

---

೧೨೬. ವಿ.ಬಿ. ಹಿರೇಮಠ, ಶಿವಯೋಗಿ ಹಾನಗಲ ಶ್ರೀ ಕುಮಾರ ಮಹಾಸ್ವಾಮಿಗಳು, ಪು.೭೭

ದೃಶ್ಯ ೧೯

ಗೊಡ್ಡು ಆಕಳಿಂದ ಹಾಲು ಬರುವಂತೆ ಮಾಡಿದ ದೃಶ್ಯ

ಕುಮಾರಸ್ವಾಮಿಯವರು ತಮ್ಮ ಅಂತಃಶಕ್ತಿಯಿಂದ ಗೊಡ್ಡು ಆಕಳಿಂದ ಹಾಲು ಬರುವಂತೆ ಮಾಡಿದ ಪವಾಡ ದೃಶ್ಯ ಇದಾಗಿದ್ದು, ಸಂಯೋಜನೆಯು ಆಕರ್ಷಕವಾಗಿ ಮೂಡಿಬಂದಿದೆ. ಹಿನ್ನೆಲೆ ಯಲ್ಲಿ ಹಳ್ಳಿಯ ವಾತಾವರಣ ಹಳ್ಳಿ ಜನರ ವೇಷಭೂಷಣ ಒಟ್ಟು ಇಲ್ಲಿ ಸೆರೆಹಿಡಿಯಲಾಗಿದೆ.

ದೃಶ್ಯ ೨೦

ಕುಮಾರಸ್ವಾಮಿ ಮತ್ತು ಇತರ ಸ್ವಾಮಿಗಳು ಪಾದಯಾತ್ರೆ ಹೊರಟ ದೃಶ್ಯ

ಗದಗಿನಿಂದ ಯಡಿಯೂರು ಸಿದ್ಧಲಿಂಗೇಶ್ವರ ಮಠಕ್ಕೆ ಕುಮಾರಸ್ವಾಮಿ ಮತ್ತು ಇತರ ಸ್ವಾಮಿಯವರು ಸೇರಿ ಧರ್ಮಪ್ರಚಾರಕ್ಕೆ ಎಂದು ಪಾದಯಾತ್ರೆ ಹೊರಟ ಸನ್ನಿವೇಶವನ್ನು ಕಾಳೆಯವರು ಇಲ್ಲಿ ಸೆರೆಹಿಡಿದಿದ್ದಾರೆ. ಈ ದೃಶ್ಯದ ಸಂಯೋಜನೆಯು ಚೌಕಟ್ಟಿನೊಂದಿಗೆ ನೇರವಾಗಿ ಮುಖಾಮುಖಿಯಾದಂತೆ ಸಂಯೋಜಿಸಲಾಗಿದ್ದು, ಸನ್ನಿವೇಶವು ಸುಲಭವಾಗಿ ಅರ್ಥವಾಗುವಂತೆ ರಚಿಸಲಾಗಿದೆ. ಹಿನ್ನೆಲೆಯು ಮುಖ್ಯ ಸಂಯೋಜನೆಗೆ ಪೂರಕವಾಗಿದೆ. ವರ್ಣಗಳ ಸಮ್ಮಿಳಿತ, ಕುಂಚದ ಕೆಲಸ ಯಶಸ್ವಿಗೊಂಡಿದೆ.

ದೃಶ್ಯ ೨೧

ದವಸ ಧಾನ್ಯಗಳನ್ನು ಸಂಗ್ರಹಿಸುವ ದೃಶ್ಯ

ಸ್ವತಃ ಕುಮಾರಸ್ವಾಮಿಯವರು ಮತ್ತು ಇತರರು ಬಡಬಗ್ಗರಿಗೆ ದಾಸೋಹ ಮಾಡುವ ಉದ್ದೇಶದಿಂದ ಹಳ್ಳಿ ಹಳ್ಳಿಗೆ ಬಂಡಿಯ ಮೇಲೆ ಪ್ರಯಾಣಿಸಿ ದವಸಧಾನ್ಯಗಳನ್ನುಸಂಗ್ರಹಿಸುವ ದೃಶ್ಯ ಇದಾಗಿದ್ದು, ಸಂಯೋಜನೆಯು ಸನ್ನಿವೇಶಕ್ಕೆ ಪೂರಕವಾಗಿದ್ದು ಸುಂದರವಾಗಿ ಮೂಡಿಬಂದಿದೆ

ದೃಶ್ಯ ೨೨

ಓರ್ವ ಬಡ ಮುದುಕಿಯಿಂದ ಪಾದಸೇವೆಯ ದೃಶ್ಯ

ಓರ್ವ ಬಡ ಮುದುಕಿಯೊಬ್ಬಳು ಹುಬ್ಬಳಿಯ ಒಂದು ಓಣಿಯಲ್ಲಿ ವಾಸಿಸುತ್ತಿರುತ್ತಾಳೆ. ಆ ಓಣಿಯಲ್ಲಿ ಕುಮಾರಸ್ವಾಮಿಯವರು ಅಡ್ಡಾಡುವುದನ್ನು ದಿನಾಲು ನೋಡುವ ಮುದುಕಿ ಒಂದು ದಿನವಾದರೂ ಸ್ವಾಮಿಯ ಪಾದಪೂಜೆ ಮಾಡಬೇಕೆಂಬ ಆಸೆಯನ್ನು ಹೊಂದುತ್ತಾಳೆ. ಒಂದು ದಿನ ಪಾದಪೂಜೆ ಮಾಡಬೇಕೆಂದು ಆಹ್ವಾನ ನೀಡುತ್ತಾಳೆ. ಆಗ ಸ್ವಾಮಿಯವರ ಶಿಷ್ಯಂದಿರು ಅವಳ ತೊಟ್ಟ ಬಟ್ಟೆ ಅವಳ ಸದ್ಯದ ಪರಿಸ್ಥಿತಿಯಿಂದ ಅವಳನ್ನು ನಿರ್ಲಕ್ಷಿಸಿ ಅವಹೇಳನ ಮಾಡಲು ಕುಮಾರಸ್ವಾಮಿಯವರು ಇದನ್ನೆಲ್ಲಾ ಲೆಕ್ಕಿಸದೆ ಅವಳ ಆಹ್ವಾನವನ್ನು ಸ್ವೀಕರಿಸಿ ಪಾದಪೂಜೆಯನ್ನು

ಸ್ವೀಕರಿಸಿ ಆ ಮುದುಕಿ ಕೊಟ್ಟ ಎಂಟಾಣೆಯ ಹಣವನ್ನು ಪಡೆದು ಆಶೀರ್ವಾದಿಸುತ್ತಾರೆ. ಈ ದೃಶ್ಯ ಕುಮಾರಸ್ವಾಮಿಯವರ ಸರಳತೆಯ ಗುಣವನ್ನು ತೋರಿಸುತ್ತದೆ. ಸಂಯೋಜನೆಯ ಸನ್ನಿವೇಶಕ್ಕೆ ಪೂರಕವಾಗಿದ್ದು ಸುಲಭವಾಗಿ ಸಂವಹನಗೊಳ್ಳುತ್ತದೆ.

ದೃಶ್ಯ ೨೮

ಕುರುಬ ಗಾದಿಲಿಂಗಪ್ಪನವರು ಕುಮಾರಸ್ವಾಮಿಯವರಿಗೆ ಹಾಲು ತಂದುಕೊಟ್ಟ ದೃಶ್ಯ

ಒಂದು ಸಲ ಪ್ರವಾಹ ಬಂದು ತುಂಬಾ ತೊಂದರೆಯಾಗಿ ಕುಮಾರಸ್ವಾಮಿಯವರಿಗೆ ಕುಡಿಯಲು ಹಾಲು ಕೂಡ ಸಿಕ್ಕಿರಲಿಲ್ಲ. ಇಂತಹ ಸಮಯದಲ್ಲಿ ಕುರುಬರಾದ ಗಾದಿಲಿಂಗಪ್ಪನವರು ಹೊಳೆಯನ್ನು ಈಜುಕೊಂಡು ಇವರಿಗೆ ಕುಡಿಯಲು ಹಾಲು ತಂದುಕೊಟ್ಟರು. ಆ ಸಂದರ್ಭದಲ್ಲಿ ಕುಮಾರಸ್ವಾಮಿಯವರ ಶಿಷ್ಯಂದಿರು ಗಾದಿಲಿಂಗಪ್ಪನವರನ್ನು ಅವರ ಕೊಳಕಾಗಿರುವ ವಸ್ತ್ರಗಳನ್ನು ನೋಡಿ ಹಾಲು ಕೊಡಕೂಡದು ಎಂದು ಅಪಮಾನ ಮಾಡುತ್ತಾರೆ. ಅಗ ಕುಮಾರಸ್ವಾಮಿಯವರು ಗಾದಿಲಿಂಗಪ್ಪನವರು ತಂದು ಕೊಟ್ಟ ಹಾಲನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆ. ಈ ದೃಶ್ಯವನ್ನು ಕಾಳೆಯವರು ತಮ್ಮ ಕ್ಯಾನ್ವಾಸಿನಲ್ಲಿ ಯಶಸ್ವಿಯಾಗಿ ಸೆರೆ ಹಿಡಿದಿದ್ದಾರೆ.

ದೃಶ್ಯ ೨೯

ಕುಮಾರಸ್ವಾಮಿಯವರೊಂದಿಗೆ ಚರ್ಚೆಯಲ್ಲಿ ತೊಡಗಿದ ಧನಿಕ ಸಿರಸಂಗಿ ಲಿಂಗರಾಜ ಮತ್ತು ಅರತಾಳ ರುದ್ರಗೌಡ ದೃಶ್ಯ

ಕೋಟ್ಯಾಧೀಶರಾದ ಸಿರಸಂಗಿ ಲಿಂಗರಾಜರಿಗೆ ಆರು ಜನ ಹೆಂಡತಿಯರು. ಆದರೂ ಅವರಿಗೆ ದೇವರು ಮಕ್ಕಳ ಭಾಗ್ಯ ಕರುಣಿಸಿರಲಿಲ್ಲ. ಹೀಗಿರುವಾಗ ಆಸ್ತಿಯನ್ನು ಏನು ಮಾಡಬೇಕೆಂದು ಚಿಂತಿಸುತ್ತಿರುವಾಗ ಅರತಾಳ ರುದ್ರಗೌಡ ಎಂಬ ವ್ಯಕ್ತಿಯು ಇವರನ್ನು ಸಲಹೆಗಾಗಿ ಕುಮಾರಸ್ವಾಮಿ ಯವರ ಬಳಿ ಕರೆದುಕೊಂಡು ಬರುತ್ತಾರೆ. ಆ ಸಂದರ್ಭದಲ್ಲಿ ಕುಮಾರಸ್ವಾಮಿ ಯವರು ಇಡೀ ಸಮಾಜದ ಜನರನ್ನು ನಿಮ್ಮ ಮಕ್ಕಳೆಂದು ತಿಳಿಯಿರಿ. ಸಮಾಜದ ಕಾರ್ಯಕ್ಕೆ ನಿಮ್ಮ ಆಸ್ತಿಯನ್ನು ಕೊಟ್ಟುಬಿಡಿ ಎಂದು ಸಲಹೆ ನೀಡುತ್ತಾರೆ. ಕುಮಾರಸ್ವಾಮಿಯವರು ಹೇಳಿದಂತೆ ಪಾಲಿಸುವ ಸಿರಸಂಗಿ ಲಿಂಗರಾಜರು ಆಸ್ತಿಯನ್ನು ಸಮಾಜ ಕಾರ್ಯಕ್ಕೆ ಮೀಸಲಾಗಿಡುತ್ತಾರೆ. ಇವರು ಕಟ್ಟಿದ ಸಂಸ್ಥೆಯು ಈಗಲೂ ಕೂಡ ಅಭಿವೃದ್ಧಿ ಹೊಂದುತ್ತಾ ಬಂದಿದ್ದು. ಅದು ಕೆ.ಎಲ್.ಇ.ಡಿ. ಎಂಬ ಹೆಸರಿನೊಂದಿಗೆ ಪ್ರಚಲಿತದಲ್ಲಿದೆ. ಈ ಸನ್ನಿವೇಶವನ್ನು ಕಾಳೆಯವರು ಚಿತ್ರಿಸಿದ್ದು ಈ ವ್ಯಕ್ತಿಗಳ ಹಾವಭಾವ ಮುಖದ ಮೇಲಿನ ಗಂಭೀರತೆಯನ್ನು ತಮ್ಮ ಕುಂಚದಲ್ಲಿ ಅತ್ಯಂತ ಸೂಕ್ಷ್ಮವಾಗಿ ಸೆರೆಹಿಡಿದಿದ್ದಾರೆ.






ಶಿವಯೋಗಿ ಹಾನಗಲ ಕುಮಾರ ಮಹಾಸ್ವಾಮಿಗಳು



ಕುಮಾರಸ್ವಾಮಿಯವರ ತಾಯಿ ನೀಲಮ್ಮನವರ ಸ್ವಪ್ನಸಿದ್ಧಿಯ ದೃಶ್ಯ



ಕುಮಾರಸ್ವಾಮಿಯವರ ನಾಮಕರಣದ ದೃಶ್ಯ





ಮನೆಪಾಠದಲ್ಲಿ ನಿರತರಾದ ಬಾಲಕಕುಮಾರಸ್ವಾಮಿ



ಬಾಲಕ ಕುಮಾರಸ್ವಾಮಿಗಳು ಭಿಕ್ಷೆಗೆ ಹೊದಾಗ ನಡೆದ ಘಟನೆಯ ದೃಶ್ಯ





ವಿದ್ಯೆಯನ್ನು ಅರಸುತ್ತಾ ಚಿಂತಿತನಾಗಿ ಕುಳಿತ ಕುಮಾರಸ್ವಾಮಿಗೆ ನೆರವಾದ ಹಿರೇಮಠ ಸನ್ನಿವೇಶದ ದೃಶ್ಯ



ಪಾಠ ಪ್ರವಚನ ಭೋದಿಸುತ್ತಿರುವ ಕುಮಾರಸ್ವಾಮಿಯವರು






ತಾಯಿಯ ಋಣ



ಸಿದ್ಧಾರೂಢರ ಸ್ವಾಮಿ ಸನ್ನಿಧಿಯಲ್ಲಿ ಕುಮಾರಸ್ವಾಮಿ





ಸ್ತ್ರೀ ಮೋಹವನ್ನು ತಿರಸ್ಕರಿಸಿದ ದೃಶ್ಯ



ಜಡೆಸಿದ್ಧರ ದರ್ಶನ



ಯಳಂದೂರು ಬಸವಲಿಂಗ ಗುರುಗಳ ದರ್ಶನ




ಯಳಂದೂರು ಬಸವಲಿಂಗ ಗುರುಗಳೊಂದಿಗೆ ಕುಮಾರಸ್ವಾಮಿಯವರು



ಗುರು ಬಸವಲಿಂಗರ ಗದ್ದುಗೆಯ ಮುಂದೆ ಶಿವಲಿಂಗ ಪೂಜೆಯಲ್ಲಿ ನಿರತರಾದ ಕುಮಾರಸ್ವಾಮಿಯವರು



ಹಾನಗಲ್ ಮಠದಲ್ಲಿ ಅನ್ನದಾಸೋಹ ಮಾಡುತ್ತಿರುವ ಕುಮಾರಸ್ವಾಮಿಯವರು





ರೋಗಿಯೊಬ್ಬನ ಸೇವೆಯಲ್ಲಿ ನಿರತರಾದ ಕುಮಾರಸ್ವಾಮಿಯವರು



ವೈರಾಗ್ಯ ಮಲ್ಲಣ್ಣಾರ್ಯರು ಮತ್ತು ಕುಮಾರಸ್ವಾಮಿಯವರು



ಶಿವಯೋಗ ಮಂದಿರ ಸ್ಥಾಪನೆ ಕುರಿತು ನಡೆದ ಮಹಾಸಭೆ



ಇಳಕಲ್ಲಿನ ವಿಜಯ ಮಹಾಂತ ಸ್ವಾಮಿಗಳ ದರ್ಶನ



ಶಿವಯೋಗ ಮಂದಿರ ಸ್ಥಾಪಿಸಲು ಸ್ಥಳದ ಕುರಿತು ಚರ್ಚೆ ನಡೆಸಿದ ದೃಶ್ಯ




ಶಿವಯೋಗ ಮಂದಿರದ ಆವರಣದಲ್ಲಿ ಪಾಠವನ್ನು ಬೋಧನೆ ಮಾಡುತ್ತಿರುವ ಕುಮಾರಸ್ವಾಮಿಯವರು



ಗೋಶಾಲೆಯಲ್ಲಿ ಕುಮಾರಸ್ವಾಮಿಯವರು



ಕುಮಾರಸ್ವಾಮಿಯವರು ಬಿರುಗಾಳಿಯಲ್ಲೂ ದೀಪವನ್ನು ಉರಿಸಿದ ಪವಾಡ ದೃಶ್ಯ






ಲಿಂಗವನ್ನು ಪುನಃ ದೊರಕಿಸಿಕೊಟ್ಟ ಪವಾಡ ದೃಶ್ಯ



ಗೊಡ್ಡು ಆಕಳಿಂದ ಹಾಲುಬರುವಂತೆ ಮಾಡಿದ ಪವಾಡ ದೃಶ್ಯ





ಧರ್ಮ ಪ್ರಚಾರಕ್ಕೆ ಹೊರಟ ಕುಮಾರಸ್ವಾಮಿಯವರು ಮತ್ತು ಇತರ ಸ್ವಾಮಿಗಳ ಸಮೂಹ



ದವಸದಾನ್ಯಗಳನ್ನು ಸಂಗ್ರಹಿಸುವ ದೃಶ್ಯ





ಓರ್ವ ಬಡಮುದುಕಿಯಿಂದ ಪಾದಸೇವೆಯನ್ನು ಸ್ವೀಕರಿಸುತ್ತಿರುವ ಕುಮಾರಸ್ವಾಮಿಯವರು



ಕುರುಬ ಗಾದಿಲಿಂಗಪ್ಪನವರು ಕುಮಾರಸ್ವಾಮಿಯವರಿಗೆ ಹಾಲು ತಂದುಕೊಟ್ಟ ದೃಶ್ಯ





ಕುಮಾರಸ್ವಾಮಿಯವರೊಂದಿಗೆ ಚರ್ಚೆಯಲ್ಲಿ ತೊಡಗಿದ ಧನಿಕ ಸಿರಸಂಗಿ ಲಿಂಗರಾಜ
ಮತ್ತು ಅರಟಾಳ ರುದ್ರಗೌಡ ಅವರು



ಮುಪ್ಪಿನಲ್ಲಿ ಹಾಸಿಗೆ ಹಿಡಿದ ಕುಮಾರಸ್ವಾಮಿಯವರು



ಶ್ರೀ ಶಿವಕುಮಾ ಸ್ವಾಮಿಯವರ ಗದ್ದುಗೆ



ಗ್ರಂಥಗಳ ಅಧ್ಯಯನದಲ್ಲಿ ನಿರತರಾದ ಶ್ರೀ ಶಿವಕುಮಾ ಸ್ವಾಮಿಯವರು

ದೃಶ್ಯ ೩೦

ಲಿಂಗದಲ್ಲಿ ಲೀನವಾದ ಶ್ರೀಗಳು

ಸಮಾಜ, ಸಮಾಜ ಎನ್ನುತ್ತ ಸಂಪೂರ್ಣ ಜೀವನವನ್ನು ಸಮಾಜ ಸೇವೆಗೆ ಅರ್ಪಿಸಿಕೊಂಡರು. ನಿದ್ದೆ ನೀರಡಿಕೆ ಕಡೆಗಣಿಸಿದರು. ಸಮಯಕ್ಕೆ ಸರಿಯಾಗಿ ಊಟೋಪಚಾರ ನಡೆಯಲಿಲ್ಲ. ಧರ್ಮ ಜಾಗೃತಿ, ಸಮಾಜ ಜಾಗೃತಿಗಾಗಿ ವಯಸ್ಸಾದರೂ ಬಿಡುವಿಲ್ಲದೆ ಸಂಚರಿಸಿದರು. ಕಾಯಕೃಶವಾಯಿತು. ಅರವತ್ತು ಮೂರು ವರ್ಷವಾದರು ಸೇವೆಯ ಹುರುಪು ಕುಂದಲಿಲ್ಲ. ೧೯೩೦ರಂದು ಶ್ರೀಗಳು ಶಿವಪಾದ ಸೇರಿದರು.[೧೨೭]

ಹೀಗೆ ಹಾನಗಲ್ಲ ಕುಮಾರಸ್ವಾಮಿಯವರ ಜೀವನದ ಪ್ರಮುಖ ಘಟ್ಟಗಳನ್ನು ಪ್ರತಿಬಿಂಬಿಸುವ ಒಟ್ಟು ಮೂವತ್ತಾರು ಕಲಾಕೃತಿಗಳನ್ನು ತೈಲವರ್ಣಗಳಲ್ಲಿ ಕಳೆಯವರು ಚಿತ್ರಿಸಿದ್ದು, ಆ ಎಲ್ಲ ಕಲಾಕೃತಿಗಳೂ ಶಿವಯೋಗ ಮಂದಿರದ ಶತಮಾನೋತ್ಸವ ಸ್ಮಾರಕ ಭವನದಲ್ಲಿ ಸಂಗ್ರಹಿಸಿವೆ. ಅಲ್ಲದೇ ಈ ಸ್ಮಾರಕ ಭವನವು ಕಾಳೆಯವರ ಕಲಾಕೃತಿಗಳ ಕಲಾಗ್ಯಾಲರಿಯಂತೆಯೇ ಭಾಸವಾಗುತ್ತದೆ. ಈ ಸ್ಮಾರಕ ಭವನ ನಿರ್ಮಾಣದಲ್ಲಿ ಶಿವಯೋಗ ಮಂದಿರದ ಅಧ್ಯಕ್ಷರಾದ ಹೊಸಪೇಟೆಯ ಹೇಮಕೂಟ ಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ಸಂಗನಬಸವ ಮಹಾಸ್ವಾಮೀಜಿಯವರ ಪಾತ್ರ ಮಹತ್ವದ್ದಾಗಿದೆ. ಸ್ವಾಮೀಜಿಯವರ ಅಭೀಪ್ಸೆಯಂತೆ ಕಾಳೆಯವರು ಈ ಎಲ್ಲ ಕಲಾಕೃತಿಗಳನ್ನು ರಚಿಸಿಕೊಟ್ಟಿದ್ದಾರೆ.

೧೨೭. ವಿ.ಬಿ. ಹಿರೇಮಠ, ಶಿವಯೋಗಿ ಹಾನಗಲ ಶ್ರೀ ಕುಮಾರ ಮಹಾಸ್ವಾಮಿಗಳು, ಪು.೮೦

ಕಾಳೆಯವರ ಭಿತ್ತಿಚಿತ್ರಗಳ ನಕಲು ಚಿತ್ರಗಳು

ಕರ್ನಾಟಕ ಲಲಿತಕಲಾ ಅಕಾಡೆಮಿಯು ೧೯೭೭ರಲ್ಲಿ ನಶಿಸಿ ಹೋಗುತ್ತಿರುವ ಪ್ರಾಚೀನ ಪರಂಪರೆಯನ್ನು ಪ್ರತಿಬಿಂಬಿಸುವ ಶ್ರವಣಬೆಳಗೊಳದ ಶ್ರೀ ಮಠದಲ್ಲಿರುವ ಮಹತ್ವದ ಭಿತ್ತಿಚಿತ್ರಗಳನ್ನು ಯೋಗ್ಯ ಕಲಾವಿದರಿಂದ ನಕಲು ಮಾಡಿಸುವ ಯೋಜನೆಯೊಂದನ್ನು ರೂಪಿಸಿ ಕಾರ್ಯರೂಪಕ್ಕೆ ತರಲು ಕಲಾವಿದರ ತಂಡವೊಂದನ್ನು ಆಯ್ಕೆ ಮಾಡಿತ್ತು. ಆ ತಂಡದಲ್ಲಿ ಹಿರಿಯ ಶ್ರೇಷ್ಠ ಕಲಾವಿದರಾದ ಎಸ್.ಎಸ್. ಕುಕ್ಕೆ, ವೈ. ಸುಬ್ರಹ್ಮಣ್ಯರಾಜು, ಎಂ.ಎ. ಚೆಟ್ಟಿ, ಎಸ್.ಆರ್. ಸ್ವಾಮಿ. ಎಸ್. ಕಾಳಪ್ಪ ಈ ಹಿರಿಯ ತಲೆಮಾರಿನ ಶ್ರೇಷ್ಠ ಕಲಾವಿದರೊಂದಿಗೆ ಕಾಳೆಯವರು ಈ ಕಾರ್ಯಕ್ಕೆ ಆಯ್ಕೆಯಾಗಿದ್ದು ಹೆಮ್ಮೆಯ ವಿಷಯ. ಈ ಮಹತ್ವಕಾರ್ಯಕ್ಕೆ ಚಾಲನೆ ನೀಡಿದವರು ಆಗಿನ ಅಧ್ಯಕ್ಷರಾದ ಕೆ.ಕೆ. ಹೆಬ್ಬಾರರು.

ಅದೇ ರೀತಿ ೧೯೮೭ರಲ್ಲಿ ತುಮಕೂರು ಜಿಲ್ಲೆಯ ಶಿರಾದ ಶ್ರೀ ರೇವಣಸಿದ್ಧೇಶ್ವರ ದೇವಾಲಯದ ಭಿತ್ತಿಚಿತ್ರಗಳನ್ನು ಎಂ.ಈ. ಗುರು, ಸುಬ್ರಹ್ಮಣ್ಯರಾಜು, ಎಂ.ಎಸ್. ಚಂದ್ರಶೇಖರ ಅವರೊಂದಿಗೆ ಟಿ.ಪಿ.ಕಾಳೆಯವರ ತಂಡವು ಈ ದೇವಾಲಯದ ಭಿತ್ತಿಚಿತ್ರಗಳನ್ನು ಮೂಲ ಚಿತ್ರಗಳಿಗೆ ಲೋಪ ಬಾರದಂತೆ ಯಥಾವತ್ತಾಗಿ ರೂಪಿಸಿ. ಮೂಲ ಗುಣಲಕ್ಷಣಗಳನ್ನು ಉಳಿಸಿಕೊಂಡು ಚಿತ್ರಿಸಿದ್ದು ಈ ನಕಲು ಭಿತ್ತಿಚಿತ್ರಗಳು ಪ್ರಸ್ತುತ ಕರ್ನಾಟಕ ಲಲಿತಕಲಾ ಅಕಾಡೆಮಿಯಲ್ಲಿ ಸಂಗ್ರಹಗೊಂಡಿವೆ.



ಭಿತ್ತಿ ಚಿತ್ರಗಳನ್ನು ನಕಲು ತೆಗೆಯುತ್ತುರಿವ ಎ.ಟಿ.ಕಾಳೆಯವರು

ವಿ.ಟಿ. ಕಾಳೆಯವರು ಚಿತ್ರಿಸಿದ ಭಾವಚಿತ್ರಗಳು

ಕಾಳೆಯವರು ತಮ್ಮ ಬದುಕಿನುದ್ದಕ್ಕೂ ಸಾವಿರಾರು ಭಾವಚಿತ್ರಗಳನ್ನು ರಚಿಸಿದ್ದು ಅವು ಹೆಚ್ಚಾಗಿ ಬೇಡಿಕೆಯ ಪೂರೈಕೆಗಾಗಿ ಬದುಕಿನ ನಿರ್ವಹಣೆಗಾಗಿ, ರಚಿಸಿದ ಭಾವಚಿತ್ರಗಳೇ ಆಗಿವೆ. ಆದರೂ ಅವರ ಭಾವಚಿತ್ರಗಳಲ್ಲಿ ಕಲಾತ್ಮಕತೆ, ಸೌಂದರ್ಯ ಪ್ರಜ್ಞೆ, ಪ್ರಮಾಣ ಬದ್ಧತೆಯನ್ನು ಎಲ್ಲಿಯೂ ಕೈಬಿಟ್ಟಿಲ್ಲ. ಅವರ ಭಾವಚಿತ್ರಗಳು ಹೆಚ್ಚಾಗಿ ಬೇಡಿಕೆಗಾಗಿ ಎಂಬುವುದು ಅವರ ಪಾಲಿಗೆ ಒಂದು ನೆಪಮಾತ್ರ. ಆ ಬೇಡಿಕೆಯನ್ನು ಪೂರೈಸುವಲ್ಲಿ ಭಾವಚಿತ್ರಗಳನ್ನು ರಚಿಸುವಲ್ಲಿ ಅವರು ಆನಂದ ಪಡುತ್ತಾರೆ. ಅಲ್ಲಿ ತನ್ಮಯತೆಯಿರುತ್ತೆ, ಶ್ರದ್ಧೆಯಿರುತ್ತೆ, ಬೇಡಿಕೆ ಸಲ್ಲಿಸಿದವರ ಬಗ್ಗೆ ಪ್ರೀತಿ, ಕಾಳಜಿ, ವಿಶ್ವಾಸವಿರುತ್ತೆ, ಅವರನ್ನು ತೃಪ್ತಿಪಡಿಸುವ ಜವಾಬ್ದಾರಿಯಿರುತ್ತದೆ. ಬಂದ ಹಣಕ್ಕೆ ನ್ಯಾಯ ಒದಗಿಸಬೇಕು ಎಂಬುದರ ಕುರಿತು ಪ್ರಮಾಣಿಕತೆಯಿರುತ್ತದೆ. ಈ ಭಾವಚಿತ್ರ ಪೂರ್ಣಗೊಂಡ ನಂತರ, ಅದು ಬೇಡಿಕೆದಾರರ ಕೈಗೆ ಒಪ್ಪಿಸುವಾಗ ಒಂದು ತರಹದ ಅವ್ಯಕ್ತ ನೋವು ಇರುತ್ತದೆ. ಬೇಡಿಕೆದಾರರು ಆ ಚಿತ್ರವನ್ನು ನೋಡಿ ಖುಷಿಪಟ್ಟಾಗ ಏನೋ ಸಾಧಿಸಿರುವ ನೆಮ್ಮದಿಯನ್ನು ಆ ಒಂದು ಕಲಾಕೃತಿ ಉಂಟುಮಾಡುತ್ತದೆ. ಹೀಗೆ ಕಾಳೆಯವರಿಗೆ ಬೇಡಿಕೆ ಕಲಾಕೃತಿ ಎಂದಿಗೂ ಬೇಸರ ತರದ ಸಂಗತಿಯಾಗಿದೆ. ಅಲ್ಲದೇ ಅವರು ಅದರಲ್ಲಿ ಸಂತೋಷ, ತೃಪ್ತಿಯನ್ನು ಕಾಣುತ್ತಾರೆ.

ಕಾಳೆಯವರು ಛಾಯಾಚಿತ್ರಗಳನ್ನು ಅನುಸರಿಸಿ ಭಾವಚಿತ್ರಗಳನ್ನು ರಚಿಸುವುದು ಒಂದಾದರೆ, ರೂಪದರ್ಶಿಗಳನ್ನು ಮುಂದೆ ಕೂಡಿಸಿ ಅನೇಕ ಭಾವಚಿತ್ರಗಳನ್ನು ರಚಿಸಿರುತ್ತಾರೆ. ವಿಶಾಲ ಅರ್ಥದಲ್ಲಿ 'ಭಾವಚಿತ್ರ' ಎಂದರೆ ನಿಜವಾದ ಅಥವಾ ಕಾಲ್ಪನಿಕ ಜೀವಂತ ಅಥವಾ ಸತ್ತ ವ್ಯಕ್ತಿತ್ವವೊಂದರ ಶಿಲ್ಪ, ಚಿತ್ರ ಅಥವಾ ರೇಖಾಚಿತ್ರ, ಛಾಯಾಚಿತ್ರ ಮಾಧ್ಯಮಗಳಲ್ಲಿ ಮೂಡಿಬರುವ ಪ್ರತಿಬಿಂಬ. ಇಲ್ಲಿ ಆ ವ್ಯಕ್ತಿತ್ವದ ದೈಹಿಕ ಅಥವಾ ನೈತಿಕ ವಿಶೇಷ ಲಕ್ಷಣಗಳು ಅಥವಾ ಎರಡನ್ನು ಆ ಬಿಂಬಿಸುವಿಕೆ ಹೊಂದಿರಬಹುದು.[೧೨೮] ಎಂಬ ವಿವರಣೆ ಸೂಕ್ತವಾಗಿದೆ.

ಭಾವಚಿತ್ರವನ್ನು ಆಂಗ್ಲ ಭಾಷೆಯಲ್ಲಿ 'Portrait' ಎಂದು ಕರೆಯುತ್ತಾರೆ. ಲ್ಯಾಟೀನ್ ಭಾಷೆಯ ಕ್ರಿಯಾಪದ Protrohoವನ್ನು ಮಧ್ಯೆ ಯುಗದಲ್ಲಿ 'ಪುನರ್ ಸೃಷ್ಟಿಸು' ಅಥವಾ 'ನಕಲು ಮಾಡು' ಎಂಬ ಅರ್ಥದಲ್ಲಿ ಬಳಸಲಾಗುತ್ತಿತ್ತು. Portrait ಎಂಬ ಪದ ೧೭ನೆಯ ಶತಮಾನದಿಂದ ಬಳಕೆಯಲ್ಲಿದೆ.[೧೨೯]

---

೧೨೮. ಕೆ.ವಿ. ಸುಬ್ರಹ್ಮಣ್ಯಂ, ಮುಖಗಳೊಂದಿಗೆ ಮುಖಾಮುಖಿ, ಪು.೬

೧೨೯. ಅದೇ ಪು. ೧೦

ದೈನಂದಿನ ಜೀವನದಲ್ಲಿ ಯಾರೊಂದಿಗಾದರೂ ಮಾತನಾಡುವಾಗ ಅವರ ದೇಹದ ಇತರ ಅಂಗಾಂಗಳಿಗಿಂತಲೂ ಅವರ ಮುಖಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡುತ್ತೇವೆ. ಆದ್ದರಿಂದಲೇ ಚಿತ್ರಕಲೆಯ ಇತಿಹಾಸದಲ್ಲಿ ಹೆಚ್ಚು 'ಕ್ಲೋಸ್‌ಅಪ್'ಗಳಿರುವುದು.[೧೩೦] ಜೀವಂತ ಮುಖಗಳೇ ನಮ್ಮ ಮುಂದೆ ನಡೆದಾಡುತ್ತಾ ಮುಖಾಮುಖಿಯಾಗುತ್ತಿರುವಾಗ ಗೋಡೆಗಳ ಮೇಲೆ ಭಾವಚಿತ್ರಗಳನ್ನು ಏಕೆ ತೂಗುಹಾಕುತ್ತೇವೆ? ಈ ಭಾವಚಿತ್ರ ಕಲೆಯ ಪ್ರಕಾರಕ್ಕೆ ಪರಂಪರೆಗೆ ೫೦೦೦ ವರ್ಷಗಳ ಇತಿಹಾಸ ಏಕಿದೆ? ಈ ಪ್ರಶ್ನೆಗಳಿಗೆ ಚಿತ್ರಕಲಾ ಇತಿಹಾಸದಲ್ಲಿ ಉತ್ತರಗಳನ್ನು ಹುಡುಕುತ್ತಾ ಹೋದರೆ ನಮ್ಮ ಮುಂದೆ ಆಕರ್ಷಕ ಪುಟಗಳು ತೆರೆದುಕೊಳ್ಳುತ್ತವೆ[೧೩೧] ಎಂಬ ಮಾತು ಕೆ.ವಿ. ಸುಬ್ರಹ್ಮಣ್ಯಂ ಅವರಿಂದ ವ್ಯಕ್ತವಾಗುತ್ತದೆ.

ಯಾವುದೇ ವ್ಯಕ್ತಿಯ ರೂಪವನ್ನು ರೇಖೆ, ವರ್ಣ, ಛಾಯಾಚಿತ್ರ ಅಥವಾ ಶಿಲ್ಪ ಮಾಧ್ಯಮ ಗಳಲ್ಲಿ ರೂಪಿಸಿ ಗೋಡೆ, ಸಾರ್ವಜನಿಕ ಚೌಕ ಅಥವಾ ಛಾಯಾಚಿತ್ರ ಸಂಪುಟಗಳಲ್ಲಿ ಇರಿಸಿದರೆ ಆ ವ್ಯಕ್ತಿಯ ಬದುಕು ಸುದೀರ್ಘತೆಯನ್ನು ಆಕರ್ಷಕ ಶಕ್ತಿಯನ್ನು ಪಡೆದುಕೊಳ್ಳುವ ನಂಬಿಕೆಯೂ ಹಿಂದೊಮ್ಮೆ ಇದ್ದಿತು[೧೩೨] ಎಂಬ ಮಾತು ಕುತೂಹಲಕಾರಿಯಾಗಿದೆ.

ವಿಜ್ಞಾನ ಕ್ಷೇತ್ರ ಮುಂದುವರಿದಂತೆಲ್ಲಾ ಹೊಸ ಹೊಸ ಆವಿಷ್ಕಾರಗಳು, ಪ್ರಯೋಗಗಳು ರೂಪುಗೊಂಡವು. ಈ ಪ್ರಯೋಗಗಳು ಮಾನವನ ಮೇಲೆ ಗಾಢವಾದ ಪರಿಣಾಮಗಳನ್ನು ಬೀರಿದವು. ಅಂತಹುಗಳನ್ನು ನಿಮಿಷದಲ್ಲಿಯೇ ಎದುರಿಗಿರುವ ವ್ಯಕ್ತಿಯನ್ನು ಸೆರೆಹಿಡಿಯುವಂತಹ ಪುಟ್ಟ ವಸ್ತುವೊಂದು ಸೃಷ್ಟಿಯಾಯಿತು. ಜನರು ಕೂಡ ಇದಕ್ಕೆ ಆಕರ್ಷಿತರಾದರು. ಆ ಪುಟ್ಟ ವಸ್ತುವೇ ಕ್ಯಾಮರಾ ಎಂಬ ಹೆಸರಿನಿಂದ ಪ್ರಚಲಿತಗೊಂಡಿತು. ಇದು ೧೯ನೆಯ ಶತಮಾನದಲ್ಲಿ ಪಾಶ್ಚಾತ್ಯರಲ್ಲಿ ಬಳಕೆಯಲ್ಲಿಬಂತು.

ಯುರೋಪಿನಲ್ಲಿ ೧೬೭೫ ರಿಂದ ೧೮೫೦ರ ವರೆಗೆ ಭಾವಚಿತ್ರಕಲೆಯ ಸುವರ್ಣಯುಗವಿದ್ದಿತು. ೧೮೪೦ರಲ್ಲಿ ಛಾಯಾಚಿತ್ರ ಕಲೆ ಈ ಸ್ಥಾನವನ್ನು ಆಕ್ರಮಿಸಲಾರಂಭಿಸಿತು. ೧೯೫೦ರಲ್ಲಿ ಪೂರ್ಣವಾಗಿ ಆಕ್ರಮಿಸಿಯೇ ಬಿಟ್ಟಿತು. ಕ್ಯಾಮರಾದ ಆಧಿಪತ್ಯವನ್ನು ಮುರಿಯಲು ಕಲಾವಿದರು ಹಲವು ದಾರಿಗಳನ್ನು ಕಂಡುಕೊಂಡರು.[೧೩೩]

---

೧೩೦. ಎಚ್.ಎ.ಅನಿಲ್‌ಕುಮಾರ, ನೋಟಪಲ್ಲಟ, ಪು.೮

೧೩೧. ಕೆ.ವಿ. ಸುಬ್ರಹ್ಮಣ್ಯಂ, ಮುಖಗಳೊಂದಿಗೆ ಮುಖಾಮುಖಿ, ಪು.೧೧

೧೩೨. ಅದೇ ಪು.೧

೧೩೩. ಅದೇ ಪು.೨೦

ಭಾವಚಿತ್ರ ರಚಿಸಲಿಕ್ಕೆ ಬಹಳ ಕಾರಣಗಳೂ ಇದ್ದವು. ರಾಜರು, ಪ್ರಜೆಗಳಿಗೆ ತಮ್ಮ ಮುಖ ಪರಿಚಯ ತಿಳಿಯಲೆಂದು ತಮ್ಮ ಭಾವಚಿತ್ರ ಬರೆಯಿಸುತ್ತಿದ್ದರು. ಭಾವಚಿತ್ರಗಳನ್ನು ಒಂದು ಕುಟುಂಬದಿಂದ ಮತ್ತೊಂದುಕ್ಕೆ ಗೌರವಾರ್ಥವಾಗಿಯೋ, ಯುವರಾಜರ, ಯುವರಾಣಿಯರ ಭಾವಚಿತ್ರಗಳನ್ನು ಮದುವೆ ಮಾತುಕತೆಯ ಮುನ್ನ ಪೀಠಿಕೆಯಾಗಿಯೋ ವಿನಿಮಯ ಮಾಡಿಕೊಳ್ಳಲಾಗುತ್ತಿತ್ತು. ಭಾವಚಿತ್ರ ಸಂಗ್ರಹಾಲಯವು ಮನೆತನದ ತಲೆಮಾರಿನ ದಾಖಲೆಯಂತೆ ಕೆಲಸ ಮಾಡುತ್ತಿತ್ತು. ಇಂದು ಭಾವಚಿತ್ರಗಳನ್ನು ತೆಗೆಯುವ ಛಾಯಾಗ್ರಾಹಕರಿಗಿರುವ ಕೆಲಸದ ಭರವನ್ನು ನೋಡಿದರೆ ಆ ಕಾಲಕ್ಕೆ ಕಲಾವಿದರು ರಚಿಸಿದ ಭಾವಚಿತ್ರಗಳ ಸಂಖ್ಯೆ ಆಶ್ಚರ್ಯ ತರುವುದಿಲ್ಲ. ಏಕೆಂದರೆ ಛಾಯಾಗ್ರಹಣದ ಅನ್ವೇಷಣೆಗೆ ಮೊದಲು ಭಾವಚಿತ್ರ ರಚನೆಯೆಂಬುದು ಪ್ರತಿಯೊಬ್ಬ ಕಲಾವಿದನು ಚಿತ್ರಿಸಲು ಕಲಿಯಬೇಕಾಗಿದ್ದ ಕೆಲಸವಾಗಿತ್ತು.[೧೩೪] ರೆನೈಸಾನ್ಸ್ ಕಾಲದಿಂದ ಯುರೋಪ್ ಹಾಗೂ ಅಮೇರಿಕಾದ ದೇಶಗಳಲ್ಲಿ ಈ ಪ್ರಕಾರ ರೂಢಿಗೆ ಬಂದಿತು.[೧೩೫] ಭಾವಚಿತ್ರ ಭಾವಚಿತ್ರಗಳು ಒಂದು ಚಿತ್ರಕಲಾ ಸಂಪ್ರದಾಯವಾಗಿ ಮೂಡಿ ಬರತೊಡಗಿದ್ದಾಗ ೧೪ನೇ ಶತಮಾನದ ಸುಮಾರಿಗೆ ವ್ಯಕ್ತಿಯೊಬ್ಬನ ಮುಖಚಹರೆಗೆ ಅಪರೂಪವಾದ ಗುಣವಿರುತ್ತಿತ್ತು. ಏಕೆಂದರೆ ಆಗ ಫೋಟೋಗ್ರಾಫಿ ಇನ್ನೂ ಅನ್ವೇಷಣೆಗೊಂಡಿರಲಿಲ್ಲ. ಆಗ ಸಿರಿವಂತರು ಮತ್ತು ಕಲಾವಿದರು ಮಾತ್ರ ತಮ್ಮಗಳ ಭಾವಚಿತ್ರಗಳನ್ನು ನಿರ್ಮಿಸಿಕೊಳ್ಳಲು ಸಾಧ್ಯವಿತ್ತು.[೧೩೬] ಹೀಗೆ ಭಾವಚಿತ್ರ ರಚಿಸುವುದು ಆಗಿನ ಸಂದರ್ಭದಲ್ಲಿ ಅತ್ಯಂತ ದುಬಾರಿಯಾಗಿತ್ತು. ಕ್ಯಾಮರಾದ ಅನ್ವೇಷಣೆಯು ಕಲಾವಿದನ ಮೇಲೆ ಆತನ ನಿತ್ಯ ಕಾಯಕದ ಮೇಲೆ ಗಾಢ ಪರಿಣಾಮ ಬೀರಿತು. ತಾಸುಗಟ್ಟಲೆ ಕಲಾವಿದನ ಮುಂದೆ ಕೂಡುವುದು ಮತ್ತು ಹಣದ ಉಳಿತಾಯ ಆಗುವುದು ತಪ್ಪಿದ್ದರಿಂದ, ನಿಮಿಷದಲ್ಲೇ ತಮ್ಮ ತದ್ರೂಪವನ್ನು ಸೃಷ್ಟಿಮಾಡುವ ಕ್ಯಾಮರಾವನ್ನು ಜನ ಅವಲಂಬಿಸತೊಡಗಿದರು. ಈ ಬದಲಾವಣೆಯನ್ನು ಕಲಾವಿದರು ಛಲವಾಗಿ ಸ್ವೀಕರಿಸಿರುವುದು ಇತಿಹಾಸದಲ್ಲಿ ಕಂಡುಬರುತ್ತವೆ.

ಛಾಯಾಚಿತ್ರ ಮಾಧ್ಯಮದ ವಿರುದ್ಧದ ಪ್ರತಿಕ್ರಿಯೆಯಂತೆ ಭಾವಚಿತ್ರ ಪ್ರಕಾರ ಹೊಸತನಗಳನ್ನು ಲೇಪಿಸಿಕೊಂಡಿರುವುದೂ ಉಂಟು. ಕಂಡ ಕಂಡವರನ್ನೆಲ್ಲಾ ಚಿತ್ರಿಸುವ ಅಭ್ಯಾಸ ಬೆಳೆಯಿತು. ಟಾತಾಸೆ ಲಾವ್‌ಟ್ರೆಕ್, ಹೆಚ್ಚಾಗಿ ಡಾಮಿರ್‌ನ ಕಲಾಕೃತಿಗಳಲ್ಲಿ ಗಮನಿಸಿದಾಗ ಸಮಾಜದ ಎಲ್ಲ ವರ್ಗಗಳ ವ್ಯಕ್ತಿಗಳ ರೂಪಗಳನ್ನು ವಿಕೃತಿಗೊಳಿಸುವ ಪ್ರವೃತ್ತಿಯು ಪ್ರಾರಂಭವಾಯಿತೆನ್ನಬಹುದು.

---

೧೩೪. ಪಿ.ಆರ್. ತಿಪ್ಪೇಸ್ವಾಮಿ, (ಸಂ) ಕಲಾಪ್ರಪಂಚ, ಪು. ೩೬೩

೧೩೫. ವಿ.ಟಿ. ಕಾಳೆ, (ಸಂ) ಕಲಾಕೋಶ, ಪು. ೨೩೬

೧೩೬. ಎ. ಅನಿಲಕುಮಾರ, ನೋಟಪಲ್ಲಟ, ಪು. ೯

ಆಗಷ್ಟೇ ರೋಡಿನ್‌ನ ಶಿಲ್ಪಗಳು ಅಪೂರ್ಣವಾಗಿ ಉಳಿದುಕೊಳ್ಳುತ್ತ ವಿಶಿಷ್ಟ ಅನುಭವ ನೀಡತೊಡಗಿದ್ದವು. ರೋಡಿನ್ ನಿಂದ ಮೂಡಿಬಂದ ಈ ಶಿಲ್ಪ ರೂಪದರ್ಶಿಗೆ ಒಪ್ಪಿಗೆಯಾಗಲೇ ಇಲ್ಲ. ವ್ಯಾನ್‌ಗೋನ ಭಾವಚಿತ್ರಗಳು ಇದೇ ದೃಷ್ಟಿಯವು. ನಂತರ ಕಲಾವಿದರು ತಮ್ಮ ಅಭಿವ್ಯಕ್ತಿಯ ತುಡಿತಕ್ಕಾಗಿ ರೂಪದರ್ಶಿಗಳಿಗೆ ಹಣ ಕೊಟ್ಟು ಕರೆಯಿಸಿ ಅವರ ಭಾವಚಿತ್ರಗಳನ್ನು ಸೆರೆ ಹಿಡಿಯುತ್ತಿದ್ದರು. ಅವರಿಗೆ ನೀಡಲು ಹಣವಿಲ್ಲದೆ ಇದ್ದಲ್ಲಿ ಎಷ್ಟೋಬಾರಿ ತಮ್ಮ ಸ್ವ ಚಿತ್ರ(Self Portrait)ಗಳನ್ನು ಚಿತ್ರಿಸಿಕೊಂಡಿದ್ದು ಉಂಟು. ಪಾಶ್ಚಾತ್ಯ ದೇಶದಲ್ಲಿ ಸ್ವ ಚಿತ್ರಗಳು ಹುಟ್ಟಿಕೊಂಡಷ್ಟು ಅವುಗಳ ಸಂಖ್ಯೆ ನಮ್ಮಲ್ಲಿ ಕಡಿಮೆ ಎನ್ನಬಹುದು. ಕೆಲವೇ ಕೆಲವು ಕಲಾವಿದರು ತಮ್ಮ ಸ್ವ-ಭಾವ ಚಿತ್ರಗಳನ್ನು ಚಿತ್ರಿಸಿಕೊಂಡಿದ್ದಾರೆ.[೧೩೭]

ಭಾವಚಿತ್ರ ಪ್ರಕಾರ ಮಾನವನ ವ್ಯಕ್ತಿತ್ವವನ್ನು ಪ್ರಭಾವಶಾಲಿಯಾಗಿ ವ್ಯಕ್ತಪಡಿಸುವ ಹೆಜ್ಜೆಗಳನ್ನಿಟ್ಟಿತು. ನಂತರದಲ್ಲಿ ರೂಪದರ್ಶಿಯ ಹೊರಗಿನ ದೇಹಕ್ಕಿಂತಲೂ ಅವನ/ಅವಳ ದೈಹಿಕ ಮುಖ ಕಲಾವಿದನಿಗೆ ಹೆಚ್ಚು ಮುಖ್ಯವಾಗಿ ಕಂಡಿತು. ಭಾವಚಿತ್ರಣ ಇತರ ಚಿತ್ರಣಗಳಂತೆ ಅಲ್ಲ. ಇಲ್ಲಿ ಮುಂದೆ ಕುಳಿತಿರುವ/ನಿಂತಿರುವ ರೂಪದರ್ಶಿಯು ಕಣ್ಣಿಗೆ ಕಂಡಂತೆ ನೆರಳು ಮತ್ತು ಬೆಳಕು ತುಂಬಿಸಿ ಚಿತ್ರಿಸುವುದಿಲ್ಲ. ರೂಪದರ್ಶಿಯನ್ನು ಹೋಲದಿದ್ದರೆ ಅದು ಒಳ್ಳೆಯ ಭಾವಚಿತ್ರವಲ್ಲ. ಆದರೆ ಇಲ್ಲಿ ರೂಪದರ್ಶಿಯ ಬಾಹ್ಯದ ರೂಪುರೇಷ, ವಸ್ತುಗಳ ಹೋಲಿಕೆಯನ್ನಷ್ಟೇ ಹಿಡಿಯುವುದಿಲ್ಲ. ಅವನ ಒಟ್ಟಾರೆ ವ್ಯಕ್ತಿತ್ವದ ಶೀಲದ ಪಡಿಮೂಡಬೇಕು. ಒಟ್ಟಿನಲ್ಲಿ ರೂಪದರ್ಶಿಯ ಅಂತಃಸತ್ವವನ್ನು ಹಿಡಿದಿಡುವ, ವ್ಯಕ್ತಮಾಡುವ ಯತ್ನವಿರುತ್ತದೆ.[೧೩೮] ಭಾವಚಿತ್ರಗಳಲ್ಲಿ ಮುಖವು ಒಂದು ವಸ್ತುವಿನ ಅವಸ್ಥೆಯನ್ನು ಮೀರಿರುತ್ತದೆ. ತಾರ್ಕಿಕವಾದ ಮಾಂತ್ರಿಕ ಗುಣ ಅದಕ್ಕೆ ದೊರಕಿರುತ್ತದೆ. ಒಂದು ವ್ಯಕ್ತಿಯ ಮುಖದ ಚಿತ್ರವನ್ನು ಯಾವುದೇ ಭಾವನೆಯಿಲ್ಲದೆ ನಾವು ಸ್ವೀಕರಿಸುವುದು ಕಷ್ಟಸಾಧ್ಯ. ನಮಗಿಷ್ಟವಾಗುವ ಮತ್ತು ಇಷ್ಟವಾಗದ ಎರಡು ತುದಿಗಳ ನಡುವೆ ಅನೇಕ ಸೂಕ್ಷ್ಮ ಹಾಗೂ ಮಿಶ್ರ ಭಾವನೆಯನ್ನುಕ್ಕಿಸುವ ವಸ್ತುಗಳ ಚಿತ್ರಣಕ್ಕೂ ಭಾವಚಿತ್ರಗಳ ರಚನೆಗೂ ವ್ಯತ್ಯಾಸವಿದೆ. ಮೊದಲನೆಯ ಪ್ರಕಾರದ ಚಿತ್ರಗಳನ್ನು ಒಂದು ಮಟ್ಟಿಗೆ ನಿರ್ಭಾವುಕವಾಗಿ ವೀಕ್ಷಿಸಬಹುದು. ಅದೇ ಕಾರಣಕ್ಕೆ ಚಿತ್ರಿತ ವಸ್ತು, ಮಾಧ್ಯಮ, ಮೇಲ್ಮೈನ ವಿವರಣೆಗೆ ವಿವರಿಸುವಂತಹ ಸಾದೃಶ್ಯತೆಯನ್ನು ಛಾಯಾಚಿತ್ರದ ನೈಜತೆ ತಂದುಕೊಡಬಲ್ಲದಾದರೂ ಅದು ಕಲಾ ಕೃತಿಯಾಗಲಾರದು. ಕ್ಯಾಮರಾ ನೋಡಲಾರದು. ಅದು ನಮೂದೂ ಅಥವಾ ದಾಖಲು ಮಾಡುತ್ತದೆ ಅಷ್ಟೇ. ಮುಂದಿನ

---

೧೩೭. ಕೆ.ವಿ. ಸುಬ್ರಹ್ಮಣ್ಯಂ, ಮುಖಗಳೊಂದಿಗೆ ಮುಖಾಮುಖಿ, ಪು.೩೧

೧೩೮. ಟಿ.ಆರ್. ತಿಪ್ಪೇಸ್ವಾಮಿ, (ಸಂ) ಕಲಾಪ್ರಪಂಚ, ಪು. ೩೭೪

ಬೆಳವಣಿಗೆಯಲ್ಲಿ ಫಾವಿಸ್ಟರು ಮತ್ತು ಜರ್ಮನ್ ಎಕ್ಸ್‌ಪ್ರೆಸ್‌ನಿಸ್ಟರು ಚಿತ್ರಾತ್ಮಕ ರೂಪಕ್ಕೆ ಮನಃಶಾಸ್ತ್ರೀಯ ತೀವ್ರತೆಯನ್ನು ತಂದು ಕೊಟ್ಟರು. ಹೀಗೆ ಭಾವಚಿತ್ರ ಪ್ರಕಾರಗಳು ಶೈಲಿಯುಕ್ತವಾಗಿ ಭಿನ್ನವಾಗುತ್ತಾ ಸಾಗಲು ಮುಖ್ಯ ಕಾರಣವೆಂದರೆ ಕ್ಯಾಮರಾದ ಅನ್ವೇಷಣೆ.[೧೩೯]

ಪ್ರಾರಂಭದಲ್ಲಿ ಅರಸು ಮನೆತನಗಳಿಗೆ ಇದ್ದ ಭಾಗ್ಯ ನಂತರದಲ್ಲಿ ಸಾಮಾನ್ಯರಿಗೂ ಒದಗಿ ಅವರ ದಿನನಿತ್ಯದ ಭಾವ ಬಣ್ಣ ಬೆಡಗುಗಳು, ಅವರ ನಡುವಿನ ಪ್ರೀತಿ ಆಧಾರಗಳು ವಿಶಿಷ್ಟವಾಗಿ ದಾಖಲಿಸಲ್ಪಟ್ಟವು. ಮೇಲಿನ ಹೇಳಿಕೆಗಳು ಪಾಶ್ಚಾತ್ಯ ಭಾವಚಿತ್ರ ಕಲಾ ಇತಿಹಾಸ ಕುರಿತು ಹೇಳುತ್ತಿದ್ದರೆ, ಭಾರತದ ಭಾವಚಿತ್ರಕಲಾ ಪರಂಪರೆಗೆ ವಿಶಿಷ್ಟ ಸಂಪ್ರದಾಯ, ವಿಭಿನ್ನತೆ, ವ್ಯಾಪಕತೆಯಿರುವುದು ಕಂಡುಬರುತ್ತದೆ.

ನಗ್ನಚಿತ್ರಣ "ಚಿತ್ರ ಲಕ್ಷಣ"ದಲ್ಲಿ ಚಕ್ರವರ್ತಿಗಳ ಚಿತ್ರ ರಚನೆಯ ವಿವರಗಳಿದ್ದರೆ 'ವಿಷ್ಣುಧರ್ಮೋತ್ತರ'ದ "ಚಿತ್ರ ಸೂತ್ರ"ದಲ್ಲಿ ವಿವಿಧ ವರ್ಗದ ವ್ಯಕ್ತಿಗಳನ್ನು ಹೇಗೆ ಚಿತ್ರಿಸಬೇಕೆಂಬ ಸೂಚನೆಗಳಿವೆ. 'ನಾರದ ಶಿಲ್ಪ'ದಲ್ಲಿ ಭಾವಚಿತ್ರದ ಪ್ರಸ್ತಾಪವಿದೆ. ೧೧ ಮತ್ತು ೧೨ನೆಯ ಶತಮಾನದ ಹೊಯ್ಸಳರ ಕಾಲದಲ್ಲಿ ಭಾವಚಿತ್ರ ಪ್ರಕಾರ ಶ್ರೀಮಂತವಾಗಿತ್ತು. ಹಾಗಾಗಿಯೇ ಸಮಕಾಲೀನ ಕನ್ನಡ ಸಾಹಿತ್ಯದಲ್ಲಿ ಭಾವಚಿತ್ರಗಳ ಉಲ್ಲೇಖ ಸಾಕಷ್ಟಿದೆ. ಕನ್ನಡ ಕವಿಗಳಾದ ಪೊನ್ನ, ರುದ್ರಭಟ್ಟ, ಚೀರಘಟ್ಟ ಎಂಬ ಜನಪ್ರಿಯ ಕಲಾವಿದರ ಹೆಸರನ್ನು ಪ್ರಸ್ತಾಪಿಸಿದ್ದಾರೆ. ರೂಪ ಸಾದೃಶ್ಯವುಳ್ಳ ಭಾವಚಿತ್ರ ಪರಂಪರೆ ಆಗ ಮುಂದುವರಿದಿತ್ತು. ಹಾಗೆಯೇ 'ಛಾಂದೋಗ್ಯೋಪನಿಷತ್', 'ಉತ್ತರ ತಂತ್ರ'ಗಳ ಸಾಲಿನಲ್ಲಿ 'ಲಂಕಾವತಾರಸೂತ್ರ', 'ಶಿವತತ್ವ ರತ್ನಾಕರ'ಗಳನ್ನು ಭಾವಚಿತ್ರ-ದೈವೀಕರಣ ದೃಷ್ಟಿಗಳಿಗಾಗಿ ಗಮನಿಸಬಹುದು. ವ್ಯಾಕರಣ ವಿಭಾಗದ ೯೦೨ನೆಯ ಶ್ಲೋಕದಲ್ಲಿ "ಯಾವ ಚಿತ್ರವನ್ನು ನೋಡಿದ ಮಾತ್ರದಿಂದಲೇ ಶೃಂಗಾರ ಮೊದಲಾದ ರಸಗಳು ನಮ್ಮ ಗಮನಕ್ಕೆ ಬರವವೋ ಅಂತಹ ಚಿತ್ರವನ್ನು ಭಾವಚಿತ್ರ ಎಂದು ಹೇಳಲಾಗಿದೆ ಎಂದು ಸೋಮೇಶ್ವರನು ದಾಖಲಿಸಿದ್ದಾನೆ.[೧೪೦]

ಮನುಷ್ಯನ ಭಾವಚಿತ್ರಣಗಳ ಕೌತುಕಮಯ ಪ್ರಾರಂಭವನ್ನು ನಮ್ಮಲ್ಲಿ ಕಂಡಿದ್ದಿದೆ. ಹಾಗೆಯೇ ಪ್ರಾರಂಭದಲ್ಲಿ ಧಾರ್ಮಿಕ, ರಾಜಕೀಯ ನಾಯಕರ ಅಥವಾ ರಾಜ ಮಹಾರಾಜರುಗಳ ರೂಪಗಳು ಪರಿಪೂರ್ಣ ವಾಸ್ತವತೆಯನ್ನು ಹೊಂದಿವೆ ಎಂದು ಹೇಳಲಾಗದಾದರು ಭಾವಚಿತ್ರಗಳಾಗಿವೆ ಎಂದಂತೂ ಹೇಳಬಹುದು. ನಮ್ಮ ದೇಶದ ಇತಿಹಾಸ ಪೂರ್ವ ಶಿಲಾಶ್ರಯ ಚಿತ್ರಗಳಲ್ಲಿ ಮನುಷ್ಯನ ಭಾವಚಿತ್ರಣಗಳು ಕೌತುಕತೆಯ ಪ್ರಾರಂಭವನ್ನು ಕಂಡಿವೆ.[೧೪೧]

---

೧೩೯. ಕೆ.ವಿ. ಸುಬ್ರಹ್ಮಣ್ಯಂ, ಮುಖಗಳೊಂದಿಗೆ ಮುಖಾಮುಖಿ, ಪು.೩೨

೧೪೦. ಅದೇ ಪು.೩೨

೧೪೧. ಅದೇ ಪು.೩೮

ಗುಪ್ತರ ಕಾಲದಲ್ಲಿ ಭಾವಚಿತ್ರಕಲೆ ಉನ್ನತ ಮಟ್ಟದಲ್ಲಿತ್ತು ಎಂಬುವುದು ಸಾಹಿತ್ಯದ ಮೂಲಗಳಿಂದಲೂ ಈ ಅಂಶವನ್ನು ಗುರುತಿಸಬಹುದಾಗಿದೆ. ಉನ್ನತ ಹಂತದ ಪ್ರತಿ ವ್ಯಕ್ತಿಗೂ, ರಾಜರ ಆಸ್ಥಾನದ ವ್ಯಕ್ತಿಗಳಿಗೂ ಗುರುತು ಹಿಡಿಯಲು ಸಾಧ್ಯವಾಗುವಂತೆ ಭಾವಚಿತ್ರ ರೇಖಿಸುವ ಅಭ್ಯಾಸವಿದ್ದಿತು. ಭಾರತೀಯ ಭಾವಚಿತ್ರಕಲೆ ತನ್ನ ಅತ್ಯುನ್ನತ ಮಟ್ಟವನ್ನು ೧೭ನೆಯ ಶತಮಾನದ ಅಂತ್ಯದಲ್ಲಿ, ವಿಶೇಷವಾಗಿ ೧೭ನೆಯ ಶತಮಾನದಲ್ಲಿ ಮೊಘಲ್ ಚಕ್ರವರ್ತಿಗಳು ಅಕ್ಬರ್, ಜಹಾಂಗೀರ್ ಮತ್ತು ಶಾಹಜಹಾನ್, ಬಿಜಾಪುರದ ಎರಡನೆಯ ಇಬ್ರಾಹಿಂ ಮತ್ತು ಮಹಮ್ಮದ್ ಆದಿಲ್ ಷಾ ಹಾಗೂ ಅಬ್ದುಲ್ಲಾ, ಅಬುಲ್ ಹಸನ್ ಕುತುಬ್ ಷಾಗಳ ಕಾಲದಲ್ಲಿ ಪ್ರವರ್ಧಮಾನ ವಾಗಿತ್ತು. ಭಾವಚಿತ್ರ ರಚನೆಯು ಕಲಾಕಾರನ ವೃತ್ತಿಯ ಗೌರವಯುತವಾದ ಪ್ರಮುಖ ಅಂಗವಾಗಿತ್ತು. ಪ್ರಾರಂಭದಲ್ಲಿ ಮುಸ್ಲಿಂ ಭಾವಚಿತ್ರಗಳು ಪೂರ್ಣಮುಖ ಅಥವಾ ಹಾಗೆ ಭಾವಿಸುವಂತಿರುತ್ತಿದ್ದವು. ಆದರೆ ೧೭ನೆಯ ಶತಮಾನದಿಂದೀಚೆಗೆ ಪಾರ್ಶ್ವದೃಶ್ಯ ಭಾವಚಿತ್ರಗಳು. ಸಾಮಾನ್ಯವಾದವು. ವಿಜಯನಗರದ ಅರಸರ ಚಿತ್ರ, ಶಿಲ್ಪಗಳಲ್ಲಿ ಆ ಸಂದರ್ಭದ ಜನರ ಬದುಕು ಭಾವಚಿತ್ರಗಳು ಮೂಡಿಬಂದವು. ದೇವತೆಗಳ ರೂಪಗಳ ವೈಭವೀಕರಣದ ನಡುವೆ ಅವರ ಅರಮನೆಗಳಲ್ಲಿ ಭಾವಚಿತ್ರಗಳು ತೂಗು ಹಾಕಲ್ಪಟ್ಟಿದ್ದವು.[೧೪೨]

ರಾಜಕೀಯ ಅಸ್ಥಿರತೆಯ ನಡುವೆಯೂ ೧೭-೧೮ನೆಯ ಶತಮಾನಗಳ ಸಂದರ್ಭದಲ್ಲಿ ಮೈಸೂರು ಅರಸರು ಚಿತ್ರಕಾರರಿಗೆ ಪೋಷಣೆ ನೀಡಿದರು. ಆ ಸಂದರ್ಭದಲ್ಲಿ ಅರಸರ ಹಾಗೂ ಅರಮನೆಯ ಸಂಪರ್ಕದಲ್ಲಿದ್ದ ಹಲವಾರು ಭಾವಚಿತ್ರಗಳು ಮೂಡಿಬಂದವು. ೧೯ನೆಯ ಶತಮಾನದಿಂದೀಚೆಗೆ ಬ್ರಿಟೀಷರ ಆಡಳಿತ ಪ್ರಾರಂಭವಾದ ನಂತರದಲ್ಲಿ ವ್ಯಕ್ತಿಗಳ ಭಾವಚಿತ್ರಗಳ ರಚನೆಯಾಯಿತಲ್ಲದೇ ರವಿವರ್ಮನ ಪ್ರೆಸ್‌ನಿಂದ ರಾಷ್ಟ್ರನಾಯಕರ ಭಾವಚಿತ್ರಗಳೂ ಜನಸಾಮಾನ್ಯರನ್ನು ತಲುಪಿದವು. ಹೀಗೆ ರವಿವರ್ಮನಿಂದ ರಾಜಕೀಯ, ಸಾಮಾಜಿಕ, ಅಲ್ಲದೇ ಧಾರ್ಮಿಕ ವ್ಯಕ್ತಿಗಳ ಭಾವಚಿತ್ರಗಳೂ ಮೂಡಿ ಬಂದಿವೆ. ಎಸ್.ಎಂ. ಪಂಡಿತರು ಹಲವು ಭಾವಚಿತ್ರಗಳಲ್ಲಿ ರಾಮಕೃಷ್ಣಪರಮಹಂಸ, ಶಾರದಾದೇವಿಯರ ಭಾವಚಿತ್ರಗಳು ಪ್ರಸಿದ್ಧವಾಗಿವೆ. ಎಂ.ಎ. ಚೆಟ್ಟಿಯವರ ಭಾವಚಿತ್ರಗಳಲ್ಲಿ ಕೂಡ ಸಮಕಾಲೀನ, ಪೌರಾಣಿಕ, ವ್ಯಕ್ತಿಗಳು ಕಂಡು ಬರುತ್ತಾರೆ.[೧೪೩] ಹಾಗೆ ಕಾಳೆಯವರೂ ಅನೇಕ ಭಾವಚಿತ್ರಗಳನ್ನು ಚಿತ್ರಿಸಿದ್ದಾರೆ. ಅವರು ಐತಿಹಾಸಿಕ ವ್ಯಕ್ತಿಗಳಾದ ಬುದ್ಧ, ಬಸವಣ್ಣ, ಅಂಬೇಡ್ಕರ್, ಹುಬ್ಬಳ್ಳಿಯ ಸಿದ್ಧಾರೂಢರು, ಗಂಗಾವತಿಯ

---

೧೪೨. ಕೆ.ವಿ. ಸುಬ್ರಹ್ಮಣ್ಯಂ, ಮುಖಗಳೊಂದಿಗೆ ಮುಖಾಮುಖಿ, ಪು.೩೮

೧೪೩. ಅದೇ ಪು.

ಶ್ರೀ ಚನ್ನಬಸವೇಶ್ವರರು, ಕಂಚಿ ಶಂಕ್ರಚಾರ್ಯ ಸ್ವಾಮಿಗಳು, ಶಿವಾಜಿ ಹೀಗೆ ಅನೇಕ ಮಹಾಪುರುಷರ ಚಿತ್ರಗಳನ್ನು ಇವರು ರಚಿಸಿದ್ದಾರೆ. ಅಲ್ಲದೇ ಅನೇಕ ಸಮಕಾಲೀನ ವ್ಯಕ್ತಿಗಳನ್ನು ವ್ಯಾಪಾರ ಮನೋಭಾವದ ಹಿನ್ನೆಲೆಯಲ್ಲಿ ವೈವಿಧ್ಯಮಯವಾಗಿ ವ್ಯಕ್ತಿಚಿತ್ರಗಳನ್ನು ಚಿತ್ರಿಸಿದ್ದಾರೆ. ಇವುಗಳು ನಾಡಿನ ಉದ್ದಗಲಕ್ಕೂ ಹರಡಿಕೊಂಡಿದ್ದು, ಅವುಗಳನ್ನು ಸಂಗ್ರಹಿಸಿ ಇಲ್ಲಿ ಅಧ್ಯಯನ ಮಾಡಲಾಗಿದೆ.

ಮುಂಬಯಿಯ ಜೆ.ಜೆ. ಕಲಾಶಾಲೆಯಿಂದ ಕಲಿತು ಬಂದ ಡಿ.ಜಿ. ಬಡಿಗೇರ, ಎಂ.ವಿ. ಮಿಣಜಿಗಿ, ದಂಡಾವತಿ ಮಠ, ಹೆಬ್ಬಾರ, ಎಸ್.ಎನ್. ಸ್ವಾಮಿ, ಎಸ್.ಎಂ. ಪಂಡಿತ್, ಕೆ.ಕೆ. ಹೆಬ್ಬಾರ, ಹಾಲಬಾವಿ, ಕೇಶವಯ್ಯ, ಪಾವಂಜೆ, ಶಂಕರರಾವ್ ಆಳಂದಕರ್, ಎಂ.ಟಿ. ಬೋಪಲೆ, ಎಂ.ಎ.ಚೆಟ್ಟಿ, ಜಿ.ಎಸ್. ಶೆಣೈ, ಆರ್.ಎಂ. ಹಡಪದ ವಿಜಯಸಿಂಧೂರ, ಖಂಡೇರಾವ್, ಎಂ.ಬಿ. ಪಾಟೀಲ, ಇವರೆಲ್ಲಾ ಬ್ರಿಟೀಷ್ ಭಾವಚಿತ್ರ ಕಲಿಕಾ ಮಾದರಿಯಾದ ವಿಕ್ಟೋರಿಯನ್ ಶೈಲಿ ಯಲ್ಲಿಯೇ ಭಾವಚಿತ್ರಗಳನ್ನು ಕಲಿತು ಬಂದವರು. ಮುಂದೆ ತಮ್ಮದೇ ಆದ ವಿಶಿಷ್ಟ ಶೈಲಿಯನ್ನು ಅಳವಡಿಸಿಕೊಂಡರು.[೧೪೪] ವಿ.ಟಿ. ಕಾಳೆಯವರ ಕಲಿಕಾ ಪದ್ಧತಿಯಲ್ಲಿ ಜೆ.ಜೆ. ಕಲಾಶಾಲೆಯ ಪ್ರಭಾವವಿದ್ದುದರಿಂದ ಅವರ ಭಾವಚಿತ್ರಗಳು ಕೂಡಾ ವಿಕ್ಟೋರಿಯನ್ ಶೈಲಿಯಿಂದ ಭಿನ್ನವಾಗಿಲ್ಲ ದಿರುವುದು ಕಂಡುಬರುತ್ತದೆ.

ಭಾವಚಿತ್ರ, ಅಕಾಡೆಮಿಕ್ ಕಲಿಕಾ ಪದ್ಧತಿಯಲ್ಲಿ ಇಂದು ಕೂಡಾ ಪಠ್ಯದ ಒಂದು ಮುಖ್ಯ ವಿಷಯವಾಗಿರುವುದು ಕಂಡಬರುತ್ತದೆ. ಕಾಳೆಯವರು ತಮ್ಮ ಕಲಿಕಾ ಹಂತದಲ್ಲಿ ಕಲಿತಿದ್ದು ಕೂಡಾ ಅಕಾಡೆಮಿಕ್ ಪದ್ಧತಿಯಲ್ಲಿಯೇ ಹೀಗಾಗಿ ಭಾವಚಿತ್ರ ರಚನೆಯಲ್ಲಿ ಸಾಕಷ್ಟು ಪರಿಣತಿಯನ್ನು ಸಾಧಿಸಿದ್ದಾರೆ. ಕಾಳೆಯವರು ಮುಂಬಯಿಯ ಜೆ.ಜೆ. ಕಲಾಶಾಲೆಯಿಂದ ಕಲಾ ಶಿಕ್ಷಣದ ಪರೀಕ್ಷಾ ಪ್ರಮಾಣಪತ್ರ ಪಡೆದದ್ದು ಆ ಕಲಾಶಾಲೆಯಲ್ಲಿ ಪ್ರಾರಂಭದಿಂದಲೂ ಭಾವಚಿತ್ರ ರಚನಗೆ ಆಧ್ಯತೆಯಿತ್ತು. ಹೀಗಾಗಿ ಅವರ ಭಾವಚಿತ್ರಗಳ ಮೇಲೆ ಜೆ.ಜೆ. ಕಲಾಶಾಲೆಯ ಕಲಿಕೆಯ ವಿಧಾನ ಪ್ರಭಾವ ಬೀರಿದೆ.

ಕಾಳೆಯವರು ತಮ್ಮ ಬದುಕಿನುದ್ದಕ್ಕೂ ಅನೇಕ ಸಂದರ್ಭದಲ್ಲಿ ಭಾವಚಿತ್ರಗಳನ್ನು ಬಹುಸಂಖ್ಯೆ ಯಲ್ಲಿ ರಚಿಸಿದ್ದಾರೆ. ಅವರ ಹೆಚ್ಚಿನ ಭಾವಚಿತ್ರಗಳು ತೈಲ ಮಾಧ್ಯಮದಲ್ಲಿ ಸೃಷ್ಟಿಗೊಂಡಿವೆ ಎಂಬುದು ಅವರ ಭಾವಚಿತ್ರಗಳನ್ನು ಗಮನಿಸಿದಾಗ ಕಂಡುಬರುವ ಅಂಶ. ವಿವಿಧ ಮಾಧ್ಯಮಗಳು

೧೪೪. ಕೆ.ವಿ. ಸುಬ್ರಹ್ಮಣ್ಯಂ, ಮುಖಗಳೊಂದಿಗೆ ಮುಖಾಮುಖಿ, ಪು.೩೮

ಅವರ ಅಭಿವ್ಯಕ್ತಿಗೆ ಪೂರಕವಾಗಿದ್ದು ಕಾಳೆಯವರು ಈ ಮಾಧ್ಯಮಗಳನ್ನು ತಮ್ಮ ಕಲಾಕೃತಿಗಳಲ್ಲಿ ಸಮರ್ಪಕವಾಗಿ ದುಡಿಸಿಕೊಂಡಿದ್ದಾರೆ.

ಕಾಳೆಯವರ ಭಾವಚಿತ್ರಗಳಲ್ಲಿ ಎರಡು ವಿಧಾನಗಳು ಕಂಡುಬರುತ್ತದೆ. ಒಂದು ಸ್ಮೂತ್ ಎಫೆಕ್ಟ್ (ನುಣುಪುಗಾರಿಕೆ) ಎರಡನೆಯದು ಪ್ಯಾಚ್‌ವರ್ಕ್ (ತೇಪೆ), ತೇಪೆತರಹ ಬಣ್ಣ ಹಾಕುವುದು. ಅವರ ಭಾವಚಿತ್ರಗಳಲ್ಲಿ ಹೆಚ್ಚಾಗಿ ಅದರಲ್ಲೂ ಜನಸಾಮಾನ್ಯರ ಮೆಚ್ಚುಗೆಗಾಗಿ ಚಿತ್ರಿಸಿದ ಭಾವಚಿತ್ರಗಳಲ್ಲಿ ನುಣುಪುಗಾರಿಕೆಯನ್ನು ತಂದಿದ್ದಾರೆ. ಎರಡನೆಯದಾಗಿ ರೂಪದರ್ಶಿಗಳ ಆಧಾರವಾಗಿ ಮಾಡಲಾದ ತಮ್ಮ ಅಂತರಾಳದ ಅಭಿವ್ಯಕ್ತಿಯ ಭಾವಚಿತ್ರಣದ ಸಂದರ್ಭದಲ್ಲಿ ಬಣ್ಣವನ್ನು ತೇಪೆ ಹಾಕಿ ರಚಿಸಿರುವುದು ಕಂಡುಬರುತ್ತದೆ.

ಕಾಳೆಯವರು ರೂಪದರ್ಶಿಗಳನ್ನು ಎದುರಗಡೆ ಕೂಡಿಸಿಕೊಂಡು ಛಾಯಾಚಿತ್ರಗಳನ್ನು ನೋಡಿ ಮತ್ತು ತಮ್ಮ ಕಲ್ಪನೆಯ ಮೂಸೆಯಲ್ಲಿ ಅನೇಕ ಭಾವಚಿತ್ರಗಳನ್ನು ಮತ್ತು ಪೂರ್ಣ ಭಾವಚಿತ್ರ ರಚಿಸಿದ್ದು ಅವುಗಳನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ರೂಪದರ್ಶಿ ಆಧಾರಿತ ಚಿತ್ರಗಳು

೧. ವಿ.ಟಿ. ಕಾಳೆಯವರ ವಿದ್ಯಾರ್ಥಿನಿ 'ಪಲನಾ ಕುಲಕರ್ಣಿ'ಯವರ ಭಾವಚಿತ್ರ

ಈ ಭಾವಚಿತ್ರವು ದೂರದರ್ಶನದವರು ವಿಡಿಯೋ ಮಾಡುವ ಸಂದರ್ಭದಲ್ಲಿ ಕಾಳೆಯವರು ಅವರ ವಿದ್ಯಾರ್ಥಿಯನ್ನು ರೂಪದರ್ಶಿಯನ್ನಾಗಿ ಕೂಡಿಸಿ ಪ್ರಾತ್ಯಕ್ಷಿಕೆ ಕೊಡುವ ಸಂದರ್ಭದಲ್ಲಿ ರಚಿಸಿದಂತ ಪೂರ್ಣಭಾವ ಚಿತ್ರವಾಗಿದೆ. ಈ ಪೂರ್ಣ ಭಾವಚಿತ್ರವು ೩೦x೪೦ ಇಂಚಿನ ಕ್ಯಾನ್ವಾಸಿನ ಅವಕಾಶದ ಮೇಲೆ ವಾಟರ್ ಮೀಡಿಯಂ ಆಯಿಲ್ ವರ್ಣದಿಂದ ೨೦೦೦ನೇ ಇಸ್ವಿಯಲ್ಲಿ ಪೂರ್ಣಗೊಳಿಸಿದ ಕೃತಿಯಾಗಿದೆ. ಹಿನ್ನೆಲೆಯು ಮಂದವಾದ ವರ್ಣದ ಲೇಪನದಿಂದ ಮುಂದೆಯಿರುವ ಗಾಢವರ್ಣದ ರೂಪದರ್ಶಿಯನ್ನು ಸ್ಫುಟವಾಗಿ ಎದ್ದು ಕಾಣುವಂತೆ ಚಿತ್ರಿಸಲಾಗಿದೆ. ಇಲ್ಲಿ ಕುಂಚದ ಬೀಸುವಿಕೆ ಅದನ್ನು ಕ್ಯಾನ್ವಸಿನ ಮೇಲೆ ಆಡಿಸಿರುವ ಗುರುತುಗಳನ್ನು ಗಮನಿಸಿದರೆ, ಅತ್ಯಂತ ವೇಗದಲ್ಲಿ ಈ ಚಿತ್ರವನ್ನು ಪೂರ್ಣಗೊಳಿಸಿ ವಿಶಿಷ್ಟ ಪರಿಣಾಮವನ್ನುಂಟು ಮಾಡಿರುವುದನ್ನು ಕಾಣುತ್ತೇವೆ. ವಿವರಗಳಿಗೆ ಹೆಚ್ಚು ಒತ್ತುಕೊಡದೆ, ಬಣ್ಣಗಳ ತೇಪೆಯಿಂದಲೇ ಭಾವಚಿತ್ರಕ್ಕೆ ಜೀವಂತಿಕೆಯನ್ನು ತಂದಿರುವುದನ್ನು ನೋಡಿದರೆ ಕಾಳೆಯವರು ಅಕಾಡೆಮಿ ಶೈಲಿ ಪದ್ಧತಿಯಿಂದ ಒಂದು ಹೆಜ್ಜೆ ಮುಂದೆ ಬಂದು ಈ ಕಲಾಕೃತಿ ಪೂರ್ಣಗೊಳಿಸಿರುವಂತೆ ಕಂಡುಬರುತ್ತದೆ. ಇಲ್ಲಿ ಅವರ ಕಲಾಪ್ರಜ್ಞೆ ವಿಶಿಷ್ಟವಾಗಿ ಜಾಗೃತಗೊಂಡಂತೆ ಕಾಣಿಸುತ್ತದೆ. ರೂಪದರ್ಶಿಯ ಗಂಭೀರ ಮುಖಭಾವ, ಸೌಮ್ಯತನ, ಸರಳವಂತಿಕೆ ಸ್ಫುಟವಾಗಿ ಸ್ಪಷ್ಟವಾಗಿ ಕಾಣಿಸಿರುವುದು ರೂಪದರ್ಶಿಯ



ಪಲ್ಲನಾ ಕುಲಕರ್ಣಿ

ಭಾವಚಿತ್ರ 1.

ಅಂತರಾಳದ ಪ್ರತಿಬಿಂಬವೇ ಈ ಕಲಾಕೃತಿಯಾಗಿದೆ. ಒಂದು ವ್ಯಕ್ತಿಯ ಮುಖವನ್ನು ಚಿತ್ರಿಸುವುದು ಚಿತ್ರಕಲೆಯ ಉದ್ದೇಶ ಆಗದೆ ಚಿತ್ರಿಸಲು ಉದ್ದೇಶಿತ ವ್ಯಕ್ತಿಯ ಸ್ವಭಾವವನ್ನು ವ್ಯಕ್ತಿತ್ವವನ್ನು ಮೂಡಿಸುವ ಪ್ರಯತ್ನವಾಗಬೇಕು ನೋಡುಗನ ಮನಸ್ಸಿಗೆ ಅದರ ಅನುಭವವಾದಾಗಲೇ ಅದು ಒಂದು ಪರಿಪೂರ್ಣ ಭಾವಚಿತ್ರವಾಗುತ್ತದೆ. ಯಥಾ ಚಿತ್ರಣದ ಕೆಲಸವನ್ನು ನಿರ್ಜೀವ ಕ್ಯಾಮರ ಕೂಡ ಮಾಡುತ್ತದೆ. ಆದರೆ ಒಬ್ಬ ಕಲಾವಿದನ ಕೈಯಲ್ಲಿ ಚಿತ್ರಿತವಾದ ಭಾವಚಿತ್ರ ವಿಶಿಷ್ಟ ಪರಿಣಾಮವನ್ನುಂಟು ಮಾಡುವಂತಿರಬೇಕು ಎಂಬುದಕ್ಕೆ ಕಾಳೆಯವರ ಭಾವಚಿತ್ರಗಳನ್ನು ಅನ್ವಯಿಸಿ ಹೇಳಬಹುದು.

ರೂಪದರ್ಶಿಯ ಸ್ವಭಾವವನ್ನು ಕಾಳೆಯವರು ಇಲ್ಲಿ ಸೆರೆಹಿಡಿಯಲು ಪ್ರಯತ್ನಿಸಿದ್ದಾರೆ. ಅಲ್ಲದೆ ನೆರಳು-ಬೆಳಕಿನ ಸುಂದರತೆಯನ್ನು ಕಾಳೆಯವರು ಇಲ್ಲಿ ಅತ್ಯಂತ ಯಶಸ್ವಿಯಾಗಿ ಕಂಡುಕೊಂಡಿದ್ದಾರೆ. ಈ ಮುಖಾಂತರ ನೋಡುಗರ ಅನುಭವಕ್ಕೂ ಕೂಡಾ ಈ ಅಂಶ ಕಾಣುತ್ತದೆ. ರೂಪದರ್ಶಿಯ ಕನ್ನಡಕದ ಗಾಜು, ಕೈಯಲ್ಲಿ ತೊಟ್ಟಿರುವ ವಾಚು, ಕಿವಿಯೋಲೆ, ಬಳೆ, ಮಡಿಕೆ ಬಿದ್ದ ಬಟ್ಟೆಯ ನಿರಿಗೆಗಳು, ಈ ಎಲ್ಲಾ ಅಂಶಗಳು ಭಾವಚಿತ್ರಕ್ಕೆ ವಿಶೇಷ ಕಳೆಯನ್ನು ತಂದಿವೆ. ಒಟ್ಟಿನಲ್ಲಿ ಕಲಾವಿದರ ಅಂತರಾಳ ಅವರು ಕಲಾತ್ಮಕತೆಯ ಮನಸ್ಸು ಇಲ್ಲಿ ಕಂಡುಬರುತ್ತಿದ್ದು ಅದನ್ನು ಇಲ್ಲಿ ಯಶಸ್ವಿಯಾಗಿ ದುಡಿಸಿಕೊಂಡಿದ್ದಾರೆ ಎನ್ನಬಹುದು.

೨. 'ಮಹಾಲಕ್ಷ್ಮಿ ಅಕ್ಕ' ಅವರ ಪೂರ್ಣಭಾವಚಿತ್ರ

ಈ ಭಾವಚಿತ್ರವು ಕಾಳೆಯವರು ಕಲಾ ಶಿಕ್ಷಕರಾಗಿ ಕೆಲಸಮಾಡುತ್ತಿದ್ದ ಎಸ್.ಆರ್.ಎಸ್. ಸಂಸ್ಥೆಯಲ್ಲಿ ಸುಮಾರು ೪೦ ವರ್ಷಗಳ ಕಾಲ ಪ್ರಿನ್ಸಿಪಾಲರಾಗಿ ಸೇವೆಸಲ್ಲಿಸಿದ ಶ್ರೀಮತಿ ಮಹಾಲಕ್ಷ್ಮಿ (ಅಕ್ಕ) ಅವರ ಭಾವಚಿತ್ರವಾಗಿದ್ದು ಈ ೩೦x೪೦ ಇಂಚಿನ ಕ್ಯಾನ್ವಾಸಿನ ಅವಕಾಶದಲ್ಲಿ ತೈಲವರ್ಣದಲ್ಲಿ ಮೂಡಿಬಂದಿದೆ. ಇವರನ್ನು ಎಲ್ಲರು ಪ್ರೀತಿಯಿಂದ 'ಅಕ್ಕ' ಎಂದು ಸಂಭೋದಿಸುತ್ತಿದ್ದರು. ಇವರ ವ್ಯಕ್ತಿತ್ವ ಎಲ್ಲರ ಮೇಲೆ ಪ್ರಭಾವ ಬೀರುತ್ತಿದ್ದುದು ಸಾಮಾನ್ಯ. ಹಾಗೇ ಕಾಳೆಯವರು ಸಹಜವಾಗಿಯೇ ಇವರ ವ್ಯಕ್ತಿತ್ವದಿಂದ ಪ್ರಭಾವಿತಗೊಂಡಿದ್ದರು. ಈ ಪ್ರಭಾವದಿಂದಲೇ ಕಾಳೆಯವರಿಗೆ ಇವರ ಒಂದು ಭಾವಚಿತ್ರವನ್ನು ಅವರ ಇಡೀ ವ್ಯಕ್ತಿತ್ವವನ್ನು ತಮ್ಮ ಕ್ಯಾನ್ವಾಸಿನ ಅವಕಾಶದಲ್ಲಿ ಸೆರೆಹಿಡಿಯಬೇಕು ಎಂಬ ಅಭಿಲಾಷೆಯಿಂದ 'ಅಕ್ಕ' ಅವರನ್ನು ರೂಪದರ್ಶಿಯಾಗಿ ಕೂಡಿಸಿ, ಈ ಭಾವಪೂರ್ಣ ಕಲಾಕೃತಿಯನ್ನು ಕಾಳೆಯವರು ರಚಿಸಿದ್ದಾರೆ. ಪರಿಪಕ್ವಗೊಂಡ ಮನಸ್ಸಿನ ಗಂಭೀರತೆಯ ಮುಖ ಮುದ್ರೆ, ಶ್ರೀಮತಿ ಅಕ್ಕನವರ ಸರಳತನ, ಸರಳವಾದ ಜೀವನಶೈಲಿ, ಇಡೀ ಅವರ ಜೀವನದ ವ್ಯಕ್ತಿತ್ವವನ್ನು ಈ ಭಾವಚಿತ್ರವು



ಭಾವಚಿತ್ರ 3. ಮಹಾಲಕ್ಷ್ಮೀ ಅಕ್ಕ

ಪ್ರತಿಬಿಂಬಿಸುತ್ತದೆ. ಕಡಿಮೆ ಬಣ್ಣದಲ್ಲಿಯೇ ರೂಪದರ್ಶಿಯ ನೈಜತೆಯನ್ನು ತರಲಾಗಿದ್ದು ಹಿನ್ನೆಲೆಯು ಮಂದವಾದ ವರ್ಣವು ಮುಖ್ಯ ಆಕೃತಿಗೆ ಪೂರಕವಾಗಿದೆ. ಮುಖದ ಮೇಲೆ ಹಗುರವಾದ ಮಂದಹಾಸ, ಬದುಕನ್ನು ಗೆದ್ದ ಸಾರ್ಥಕಗೊಳಿಸಿದ ತೃಪ್ತಿ, ತೇಜಸ್ಸು, ಪ್ರಬುದ್ಧತೆ ಇಲ್ಲಿ ಮೈಳೈಸಿದ್ದು ಆಯಾ ವಯಸ್ಸಿಗೂ ಅದರದೇ ಆದ ಒಂದು ಸೌಂದರ್ಯವಿರುವಂತೆ ಆ ಸುಂದರತೆಯನ್ನು ಕಾಳೆಯವರು ಈ ಭಾವಚಿತ್ರದಲ್ಲಿ ಸೆರೆಹಿಡಿದಿದ್ದಾರೆ. ಈ ಎಲ್ಲಾ ಅಂಶನ್ನು ಕಾಳೆಯವರು ಸೂಕ್ಷ್ಮವಾಗಿ ಗಮನಿಸಿ ನೈಜತೆಯನ್ನು ತರುವಲ್ಲಿ ಯಶಸ್ವಿಯಾಗಿದ್ದಾರೆ. ಇಲ್ಲಿ ಅವರ ಸೂಕ್ಷ್ಮ ಮನಸ್ಸಿನ ಗ್ರಹಿಕೆ ಅದ್ಭುತವಾಗಿ ಕೆಲಸಮಾಡಿದೆ. ಪರೋಕ್ಷವಾಗಿ ಈ ಭಾವಚಿತ್ರದ ಮುಖಾಂತರ ಕಾಳೆಯವರ ವ್ಯಕ್ತಿತ್ವವೂ ಕೂಡಾ ಇಲ್ಲಿ ಗೋಚರವಾಗುತ್ತದೆ.

೩. 'ಮಹಾಲಕ್ಷ್ಮಿ ಅಕ್ಕ' ಅವರ ಪೂರ್ಣಭಾವ ಚಿತ್ರ

ರೂಪದರ್ಶಿಯಾಗಿ ಮುಂದೆ ಕೂಡಿಸಿ ರಚಿಸಲಾದ ಈ ಪೂರ್ಣವ್ಯಕ್ತಿಯ ಭಾವಚಿತ್ರವು ನೆರಳು-ಬೆಳಕಿನ ಸಂಯೋಜನೆಯಲ್ಲಿ ತೈಲವರ್ಣದಲ್ಲಿ ರಚಿಸಲಾಗಿದೆ. ಈ ಭಾವಚಿತ್ರದಲ್ಲಿನ ಉಡುಪುಗಾರಿಕೆ, ಮುಖದ ಮೇಲೆ ತೋರಿಸಲಾದ ರೂಪದರ್ಶಿಯ ನಡುವಯಸ್ಸು, ನೈಜತೆಯಿಂದ ಕೂಡಿದೆ. ಉಡುಪಿನಲ್ಲಿ ತೋರಿಸಲಾದ ಕುಂಚದ ವೇಗವಾದ ಬೀಸುಗಳು ಮುಖದ ಮೇಲೆ ಕಂಡುಬರುವುದಿಲ್ಲ. ದ್ವಿವರ್ಣದಲ್ಲಿ ನೆರಳು ಬೆಳಕನ್ನು ನುಣುಪುತನವನ್ನು ತಂದಿದ್ದು ಒಂದೆರಡು ಕುಂಚದ ಗೆರೆಗಳಿಂದಲೇ ಭಾವನೆಯನ್ನು ಮೂಡಿಸಲಾಗಿದೆ. ತಿಳಿ ವರ್ಣದಲ್ಲಿ ವಿಶಾಲವಾದ ಹಿನ್ನೆಲೆಯಿದ್ದು, ಈ ಕೃತಿಯ ಮುಖ್ಯ ಆಕೃತಿಯು ಹಿನ್ನೆಲೆಯನ್ನು ಬಿಟ್ಟು ಮುಂದೆ ಬಂದಂತೆ ಸಂಯೋಜಿಸಲಾಗಿದೆ. ನೆರಳು ಬೆಳಕಿನ ಆಟ ಈ ಭಾವಚಿತ್ರದಲ್ಲಿ ನೈಜವಾಗಿ ಪರಿಣಾಮಕಾರಿಯಾಗಿ ಮೂಡಿಸಲಾಗಿದೆ. ಒಟ್ಟಿನಲ್ಲಿ ಕಾಳೆಯವರು ರೂಪದರ್ಶಿಯ ವ್ಯಕ್ತಿತ್ವವನ್ನು ಇಲ್ಲಿ ಪಡಿಮೂಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕಾಳೆಯವರ ಕಲಾಪ್ರಜ್ಞೆ ಇಲ್ಲಿ ಪೂರ್ಣವಾಗಿ ಕೆಲಸಮಾಡಿದೆ.

ಎಷ್ಟೋ ಬಾರಿ ಭಾವಚಿತ್ರದಲ್ಲಿ ಕಲಾವಿದರಿಗೆ ರೂಪದರ್ಶಿಯು ನೆಪ ಮಾತ್ರ. ಈ ಚಿತ್ರಣ ಮುಖೇನ ಕಲಾವಿದ ತನ್ನ ವ್ಯಕ್ತಿತ್ವವನ್ನು ಅಲ್ಲಿ ಪ್ರತಿಬಿಂಬಿಸಿರುತ್ತಾನೆ ಎಂಬ ಮಾತು ಕಾಳೆಯವರ ಭಾವಚಿತ್ರಣಗಳಿಂದ ಸ್ಪಷ್ಟವಾಗುತ್ತದೆ. ಕಲಾವಿದರ ಮುಂದೆ ಒಬ್ಬ ರೂಪದರ್ಶಿಯನ್ನು ಕೂಡಿಸಿ ಎಲ್ಲರಿಗೂ ಆ ವ್ಯಕ್ತಿಯ ಚಿತ್ರ ಬಿಡಿಸಲು ಹೇಳಿದರೆ, ಎಲ್ಲರು ಆ ವ್ಯಕ್ತಿಯನ್ನು ಚಿತ್ರಿಸಿದರು, ತಮ್ಮ ತಮ್ಮ ವ್ಯಕ್ತಿತ್ವವನ್ನು ಅದರಲ್ಲಿ ಸೇರಿಸಿಯೇ ಚಿತ್ರಿಸುವರು. ಇದು ವ್ಯಕ್ತಿ ಚಿತ್ರಣವಾದರೂ ಚಿತ್ರಿಸುವ ಕಲಾವಿದನ ವ್ಯಕ್ತಿತ್ವ ಅದರಲ್ಲಿ ಸೇರುತ್ತದೆ ಎನ್ನುವುದನ್ನು ಮರೆಯುವಂತಿಲ್ಲ. ಅದಕ್ಕೆ ಕಲಾವಿದನ ವ್ಯಕ್ತಿತ್ವ ಎನ್ನುವುದು. ಚಿತ್ರಿಸುವವನ ವ್ಯಕ್ತಿತ್ವ ಬೆಳೆದಷ್ಟು ಅವನ ಚಿತ್ರದಲ್ಲಿ ಆ



ಮಹಾಲಕ್ಷ್ಮೀ ಅಕ್ಕಾ

ಭಾವಚಿತ್ರ 2.

ವ್ಯಕ್ತಿತ್ವದ ಛಾಯೆ ನಿಖರವಾಗುತ್ತಾ ಹೋಗುತ್ತದೆ. ಒಬ್ಬ ಕಲಾವಿದನ ಶೈಲಿಯನ್ನು ಅವನ ಸೃಜನಶೀಲ ಕೃತಿಗಳಲ್ಲಿ ಅಷ್ಟೇ ಅಲ್ಲ. ಅವನ ವ್ಯಕ್ತಿ ಚಿತ್ರದಲ್ಲೂ ಗುರುತಿಸಬಹುದು. ಇದನ್ನು ಕಲಾವಿದನ ಗೆರೆ ಎಳೆಯುವ ವಿಧಾನ ಬಣ್ಣ ಹಾಕುವ ಕ್ರಮ ಹಾಗೂ ಸಂಯೋಜನಾ ಶೈಲಿಯಲ್ಲಿ ಅಲ್ಲದೆ, ಕುಂಚದ ಎಳೆತದಲ್ಲಿ ಕೂಡಾ ಸಹಜವಾಗಿ ಗುರುತಿಸಬಹುದಾಗಿದೆ"[೧೪೫] ಎಂಬ ಮಾತುಗಳು ಅಕ್ಷರಶಃ ಕಾಳೆಯವರ ಭಾವಚಿತ್ರಣ ಶೈಲಿಗೆ ಅನ್ವಯಿಸಿ ಹೇಳಬಹುದು.

ಕಾಳೆಯವರು ಹೆಚ್ಚಾಗಿ ಗಂಭೀರ, ಶಾಂತತೆ, ಸರಳತನ, ನಿರ್ಲಿಪ್ತ ಮನಸ್ಥಿತಿಯವರನ್ನೇ ತಮ್ಮ ಭಾವಚಿತ್ರಣಗಳ ಅಭಿವ್ಯಕ್ತಿಗೆ ಆಯ್ಕೆ ಮಾಡಿಕೊಳ್ಳುತ್ತಾರೆ. ಅದು ನೋಡುಗರ ಅನುಭವಕ್ಕೆ ಬರುತ್ತದೆ ಕೂಡಾ. ಈ ಭಾವಚಿತ್ರಗಳು ಕಾಳೆಯವರ ಕುಂಚದ ಕುಶಲತೆಗೆ ಮನಸ್ಸಿನ ಪಕ್ವತೆಗೆ ಹಿಡಿದ ಕನ್ನಡಿಯಾಗಿದೆ.

ಕಲಾವಿದ ತನ್ನ ಚಿತ್ರಕ್ಕೆ ಒಬ್ಬ ವ್ಯಕ್ತಿಯನ್ನು ಆಯ್ದುಕೊಳ್ಳಲು ಒಂದು ಅಂತಃ ಪ್ರೇರಣೆ ಅಥವಾ ಉದ್ದೇಶ ಇದ್ದೇ ಇರುತ್ತದೆ. ಕೆಲವು ಸಂದರ್ಭದಲ್ಲಿ ವ್ಯಕ್ತಿಯ ಬಾಹ್ಯ ಆಕಾರ ಅಥವಾ ಆಕೃತಿ ಪ್ರೇರಣೆಯಾದರೆ ಬೇರೆ ಸಂದರ್ಭದಲ್ಲಿ ವ್ಯಕ್ತಿಯ ಒಳಗಿರುವ ವ್ಯಕ್ತಿತ್ವ ಪ್ರೇರಣೆಯಾಗಿರುವ ಸಾಧ್ಯತೆಯಿದೆ.[೧೪೬]

ಕಾಳೆಯವರು ಛಾಯಾಚಿತ್ರವನ್ನು ಅವಲಂಬಿಸಿ ಹಲವಾರು ಭಾವಚಿತ್ರಗಳನ್ನು ರಚಿಸಿರುತ್ತಾರೆ. ಈ ಎಲ್ಲ ಚಿತ್ರಗಳು ಹೆಚ್ಚಾಗಿ ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ಅವರನ್ನು ತೃಪ್ತಿಪಡಿಸಲು ಮಾಡಿದಂತಹ ಭಾವಚಿತ್ರಗಳಾಗಿವೆ. ಆದರೂ ಈ ಭಾವಚಿತ್ರಗಳಲ್ಲಿಯೂ ಕೂಡಾ ಕಾಳೆಯವರು ಎಲ್ಲಿಯೂ ಕಲಾತ್ಮಕತೆಯನ್ನು ಕೈಬಿಟ್ಟಿಲ್ಲ. ಅವರ ವೈಯಕ್ತಿಕ ಛಾಪು ಈ ಕಲಾಕೃತಿಗಳಲ್ಲಿ ಕಂಡುಬರುತ್ತದೆ. ಈ ಭಾವಚಿತ್ರಗಳನ್ನು ಇಲ್ಲಿ ವಿಶ್ಲೇಷಣೆಗೆ ಒಳಡಿಸಲಾಗಿದೆ.

ಛಾಯಾಚಿತ್ರಗಳಾನ್ನಾಧರಿಸಿ ರಚಿಸಿದ ಭಾವಚಿತ್ರಗಳು

ಕಾಳೆಯವರು ಛಾಯಾಚಿತ್ರಗಳನ್ನಾಧರಿಸಿ ನೂರಾರು ಭಾವಚಿತ್ರಗಳನ್ನು ರಚಿಸಿದ್ದು ಅವುಗಳು ೧೦"x೧೨" ಅಳತೆಯಿಂದ ೬'x೪'ರ ಅಳತೆಯವರೆಗಿನ ಕಲಾಕೃತಿಗಳಿವೆ. ಅವರ ಭಾವಚಿತ್ರಗಳು ಕರ್ನಾಟಕದಾದ್ಯಂತ ಇದ್ದು ಅವು ಸಂಡೂರಿನ ಶ್ರೀ ಎಂ.ವೈ. ಘೋರ್ಪಡೆಯವರ ಮನೆಯಲ್ಲಿ ಗಂಗಾವತಿಯ ಶ್ರೀ ಎಚ್.ಜಿ. ರಾಮುಲು ಅವರ ಮನೆಯಲ್ಲಿ ಮತ್ತು ಚನ್ನಬಸವೇಶ್ವರ ಮಠದಲ್ಲಿ

---

೧೪೫. ಶಂಕರಪಾಟೀಲ, ಚಿತ್ರಕಲಾ ಚಿಂತನೆ, ಪು.೫೯

೧೪೬. ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ, ಕಲಾವಿದ ಆರ್.ಎಂ. ಹಡಪದ (ಪಿಎಚ್.ಡಿ. ಮಹಾಪ್ರಬಂಧ), ಪು.೧೦೫

ಅಲ್ಲದೆ, ಗದಗ, ಬೆಂಗಳೂರು, ಹುಬ್ಬಳ್ಳಿ, ಬಳ್ಳಾರಿ, ಹೊಸಪೇಟೆ ಮುಂತಾದವುಗಳ ಕಡೆ ಅಲ್ಲದೆ ಐರ್ಲೆಂಡ್‌ನ ಡಬ್ಲಿನ್‌ನಲ್ಲಿಯೂ ಯು.ಎಸ್.ಎ.ನ ಸೇಂಟ್ ಲೂಯಿಸ್ ಪಾರ್ಕನಲ್ಲಿಯೂ ಕಾಳೆಯವರ ಭಾವಚಿತ್ರಗಳು ಇದ್ದು, ದೇಶ ವಿದೇಶದಲ್ಲಿ ಅವರ ಕಲಾಕೃತಿಗಳ ಸಂಗ್ರಹವಿರುವುದು.

ಎಂ.ವೈ. ಘೋರ್ಪಡೆಯವರ ಭಾವಚಿತ್ರಗಳು

ಮಾಜಿ ಸಚಿವರಾದ ಸಂಡೂರಿನ ರಾಜಮನೆತನದ ಎಂ.ವಾಯ್. ಘೋರ್ಪಡೆಯವರ ವ್ಯಕ್ತಿತ್ವ ವಿವಿಧ ಭಂಗಿಯಲ್ಲಿರುವ ಛಾಯಾಚಿತ್ರಗಳ ಆಧಾರದಿಂದ ಕಾಳೆಯವರು ಸುಮಾರು ಎಂಟು ಹತ್ತು ಭಾವಚಿತ್ರಗಳನ್ನು ತಮ್ಮ ಕ್ಯಾನ್ವಾಸಿನ ಅವಕಾಶದಲ್ಲಿ ತೈಲವರ್ಣದಿಂದ ರಚಿಸಿರುತ್ತಾರೆ. ಘೋರ್ಪಡೆಯವರ ವಿವಿಧ ವಯೋಮಾನವನ್ನು ಈ ಭಾವಚಿತ್ರಗಳು ಸಾರುತ್ತವೆ.

ಸಂಡೂರಿನ ಎಸ್.ಆರ್.ಎಸ್. ವಸತಿಶಾಲೆಯಲ್ಲಿ ಕಾಳೆಯವರು ಸುಮಾರು ಮೂವತ್ತು ವರ್ಷಗಳ ಕಾಲ ಕಲಾಶಿಕ್ಷಕರಾಗಿ ಸೇವೆಸಲ್ಲಿಸಿರುತ್ತಾರೆ. ಆ ಶಾಲೆಯ ಮುಖ್ಯಾಧಿಕಾರಿಯಾದ ಎಂ.ವಾಯ್. ಘೋರ್ಪಡೆಯವರೊಂದಿಗಿನ ದೀರ್ಘ ಸಮಯದ ಆತ್ಮೀಯ ಒಡನಾಟ, ಅಲ್ಲದೆ ಘೋರ್ಪಡೆಯವರ ಶಿಸ್ತು, ವಿವಿಧ ಕ್ಷೇತ್ರಗಳಲ್ಲಿ ಅವರಿಗಿದ್ದ ಆಸಕ್ತಿ, ಆ ಕ್ಷೇತ್ರಗಳಲ್ಲಿ ಅವರು ತೋರಿದ ಸಾಧನೆ, ಸುಧಾರಣೆ, ಇಡೀ ಅವರ ವ್ಯಕ್ತಿತ್ವ ಕಾಳೆಯವರನ್ನು ತೀವ್ರವಾಗಿ ಪ್ರಭಾವಿಸಿರು ವುದು ಕಂಡುಬರುತ್ತದೆ. ಈ ಪ್ರಭಾವ ಪ್ರೇರಣೆಯಿಂದಲೇ ಕಾಳೆಯವರು ಘೋರ್ಪಡೆ ಯವರ ಭಾವಚಿತ್ರಗಳನ್ನು ಅವರ ವ್ಯಕ್ತಿತ್ವದ ವಿವಿಧ ಮುಖಗಳನ್ನು ತಮ್ಮ ಕ್ಯಾನ್ವಾಸಿನಲ್ಲಿ ಶಾಶ್ವತವಾಗಿ ಹಿಡಿದಿಟ್ಟಿದ್ದಾರೆ.

ಚಿತ್ರ ೧. ಎಂ.ವೈ. ಘೋರ್ಪಡೆ

ಘೋರ್ಪಡೆಯವರು ಕುದುರೆಯ ಮೇಲೆ ಕುಳಿತಿದ್ದು, ಕುದುರೆಯು ನಿಂತಿರುವ ಭಂಗಿ ಆಕರ್ಷಕವಾಗಿದೆ. ಘೋರ್ಪಡೆಯವರ ಮುಖಭಾವವು ಇಲ್ಲಿ ನೈಜತೆಯಿಂದ ಕೂಡಿದೆ. ಒಟ್ಟಿನಲ್ಲಿ ಕಲಾಕೃತಿ ನೋಡುಗರ ಕಣ್ಮನ ಸೆಳೆಯುವಂತಿದೆ. ಸಾಯಂಕಾಲ ಬೀಳುವ ಹಿತವಾದ ಬಿಸಿಲನ್ನು ಆ ಸಮಯ ಸಂದರ್ಭವನ್ನು ಕಾಳೆಯವರು ತಮ್ಮ ಕ್ಯಾನ್ವಾಸಿನಲ್ಲಿ ಹಿಡಿದಿದ್ದಾರೆ.

ಚಿತ್ರ ೨. ಎಂ.ವೈ. ಘೋರ್ಪಡೆ

ಎಂ.ವಾಯ್. ಘೋರ್ಪಡೆಯವರ ಈ ಎರಡನೇ ಭಾವಚಿತ್ರದಲ್ಲಿ ರಾಜನ ಪೋಷಾಕಿನಲ್ಲಿ ಕೈಯಲ್ಲಿ ಕತ್ತಿ ಹಿಡಿದುಕೊಂಡು ನಿಂತರುವ ಭಂಗಿ ಆಕರ್ಷಕವಾಗಿ ಮೂಡಿಬಂದಿದೆ. ಕ್ಯಾನ್ವಸಿನ ಅವಕಾಶದಲ್ಲಿ ತೈಲವರ್ಣದಿಂದ ೩೦x೪೦ ಇಂಚಿನ ಅಳತೆಯ ಕ್ಯಾನ್ವಾಸಿನಲ್ಲಿ ಮನೋಜ್ಞವಾಗಿ ಅವರ ಕಾಲ್ಪನಿಕ ಭಾವಚಿತ್ರವನ್ನು ಕಾಳೆಯವರು ಸೆರೆ ಹಿಡಿದಿದ್ದಾರೆ. ರಾಜಮನೆತನದವರಾದ



ಚಿತ್ರ 1. ಎಂ.ವೈ.ಘೋರ್ಪಡೆ



ಚಿತ್ರ 2. ಎಂ.ವೈ.ಘೋರ್ಪಡೆ



ಚಿತ್ರ 3. ಎಂ.ವಾಯ್.ಘೋರ್ಪಡೆಯವರ ಶಿರಭಾವಚಿತ್ರ



ಚಿತ್ರ 4. ಎಂ.ವಾಯ್.ಘೋರ್ಪಡೆ

ಘೋರ್ಪಡೆಯವರು ಈ ರಾಜನ ಪೋಷಕು ಅವರಿಗೆ ಪೂರಕವಾಗಿಯೇ ಮೂಡಿಬಂದಿದೆ. ಅವರು ಠೀವಿಯಿಂದ ನಿಂತಿರುವ ಭಂಗಿ, ಅವರ ಬದುಕಿನ ಶಿಸ್ತನ್ನು ಕಟ್ಟುನಿಟ್ಟುವತನವನ್ನು ಪ್ರತಿಬಿಂಬಿಸುವಂತಿದೆ ಈ ಕಲಾಕೃತಿ. ಈ ಭಾವಚಿತ್ರದಲ್ಲಿ ಕುಂಚದ ನಯಗಾರಿಕೆ ಬಣ್ಣಗಳು ನುಣುಪುತನವನ್ನು ಕಾಳೆಯವರು ಮೆರೆದಿದ್ದಾರೆ. ಇದು ಘೋರ್ಪಡೆಯವರ ಪೂರ್ಣ ಪ್ರಮಾಣದ ತದ್ರೂಪದ ಭಾವಚಿತ್ರವಾಗಿದೆ.

ಚಿತ್ರ ೩. ಎಂ.ವೈ. ಘೋರ್ಪಡೆಯವರ ಶಿರಭಾವಚಿತ್ರ

ಈ ಭಾವಚಿತ್ರ ೧೬x೨೦ ಇಂಚಿನ ಕ್ಯಾನ್ವಾಸಿನ ಅವಕಾಶದಲ್ಲಿ ತೈಲವರ್ಣದಿಂದ ರಚಿಸಿದ ಘೋರ್ಪಡೆಯವರ ಶಿರಭಾವಚಿತ್ರವಾಗಿದ್ದು. ಈ ಭಾವಚಿತ್ರವು ಘೋರ್ಪಡೆಯವರ ವಯೋಮಾನವನ್ನು ಸ್ಪಷ್ಟವಾಗಿ ಹೇಳುತ್ತದೆ. ಭಾವದಲ್ಲಿ ಸ್ಪಷ್ಟತೆಯಿದ್ದು ಸುಲಭವಾಗಿ ವಿವರಕ್ಕೆ ನಿಲುಕುವಂತೆ ಈ ಚಿತ್ರವು ಮೂಡಿಬಂದಿದೆ.

ಕಾಳೆಯವರು ತಮ್ಮ ಭಾವಚಿತ್ರಗಳಲ್ಲಿ ವ್ಯಕ್ತಿಗಳ ತದ್ರೂಪತನ ಅಷ್ಟೇ ಅಲ್ಲದೆ ಅದರಲ್ಲಿ ಜೀವಂತಿಕೆಯನ್ನು ತಂದು ನೋಡುಗರನ್ನು ಬೆರಗುಗೊಳಿಸುತ್ತಾರೆ. ಅವರ ಭಾವಚಿತ್ರಗಳಲ್ಲಿನ ಈ ಅಂಶ ಮನಸ್ಸನ್ನು ಮುಟ್ಟುತ್ತದೆ.

ಚಿತ್ರ ೪. ಎಂ.ವೈ. ಘೋರ್ಪಡೆ

ಈ ಭಾವಚಿತ್ರದಲ್ಲಿ ೨'x೩' ಫೀಟ್ ಕ್ಯಾನ್ವಾಸಿನ ಅವಕಾಶದಲ್ಲಿ ತೈಲವರ್ಣದಲ್ಲಿ ರಚಿಸಲಾದ ಭಾವಚಿತ್ರವಾಗಿದ್ದು ಘೋರ್ಪಡೆಯವರು ಒಬ್ಬ ಉತ್ತಮ ಛಾಯಾಗ್ರಾಹಕ ಕಲಾವಿದರು ಅವರು ಪ್ರಕೃತಿಯ ಅನೇಕ ಮಗ್ಗಲುಗಳನ್ನು ಗಿಡ, ಮರ, ಪಕ್ಷಿ ಪ್ರಾಣಿಗಳನ್ನು ತಮ್ಮ ಕ್ಯಾಮರಾದಲ್ಲಿ ವಿಶಿಷ್ಟವಾಗಿ ಕಲಾತ್ಮಕವಾಗಿ ಸೆರೆಹಿಡಿಯುತ್ತಾರೆ. ಅವರ ಈ ಕಲಾವಂತಿಕೆಯನ್ನು ಒಬ್ಬ ಉತ್ತಮ ಛಾಯಾಗ್ರಾಹಕ ಕಲಾವಿದನನ್ನು ಈ ಭಾವಚಿತ್ರವು ಪ್ರತಿಬಿಂಬಿಸುತ್ತದೆ. ಈ ಭಾವಚಿತ್ರದ ಹಿನ್ನೆಲೆಯಲ್ಲಿ ಸಾಂಕೇತಿಕವಾಗಿ ಕಾಡಿನ ಕಲ್ಪನೆ ಮೂಡುವಂತೆ ಚಿತ್ರಿಸಲಾಗಿದ್ದು. ಈ ಭಾವಚಿತ್ರಕ್ಕೆ ಪೂರಕವಾಗಿದೆ. ಛಾಯಾಚಿತ್ರ ನೋಡಿ ಈ ಚಿತ್ರವನ್ನು ರಚಿಸಿರುವುದರಿಂದ ಇಲ್ಲಿ ನೆರಳು ಬೆಳಕಿನ ನಿರ್ವಹಣೆಯಲ್ಲಿ ಹಗುರತನವಿದೆ.

ಘೋರ್ಪಡೆಯವರ ಮಗಳು ಅನುರಾಧ ಅವರ ಭಾವಚಿತ್ರಗಳು

ಚಿತ್ರ ೧. ಅನುರಾಧ ಅವರ ಭಾವಚಿತ್ರ

ಅನುರಾಧ ಅವರ ಭಾವಚಿತ್ರಗಳು ಘೋರ್ಪಡೆಯವರ 'ಅನುರಾಧ ಹಾಲ್'ನಲ್ಲಿ ತೂಗು ಹಾಕಲ್ಪಟ್ಟಿವೆ. ಪೂರ್ಣಭಾವ ಚಿತ್ರವು ೩೦x೪೦ ಇಂಚಿನ ಕ್ಯಾನ್ವಾಸಿನ ಅವಕಾಶದಲ್ಲಿ ತೈಲವರ್ಣದಲ್ಲಿ



ಚಿತ್ರ 1. ಎಂ.ವೈ.ಘೋರ್ಪಡೆಯವರ ಪುತ್ರಿ ಅನುರಾಧಾ





ಎಂ.ವೈ.ಘೋರ್ಪಡೆಯವರ ಪುತ್ರಿ ಅನುರಾಧಾ

ರಚಿಸಲಾಗಿದ್ದು. ಅಳೆತ್ತರದ ಅಳತೆಯಲ್ಲಿದ್ದು ಈ ಪೂರ್ಣಭಾವಚಿತ್ರವು ಸಂಯೋಜನೆ ದೃಷ್ಟಿಯಿಂದ ಇಲ್ಲಿ ಬಳಸಲಾದ ಬಣ್ಣಗಳಿಂದ ನೋಡುಗರ ಮನಕ್ಕೆ ಮುದವನ್ನು ನೀಡುವಂತಿದೆ. ಮರಾಠಿ ಮಹಿಳೆಯ ವೇಷಭೂಷಣವನ್ನು ಧರಿಸಿದ ಅನುರಾಧ ಅವರ ಭಾವಚಿತ್ರದಲ್ಲಿ ಮುಖ್ಯವಾಗಿ ಆಕರ್ಷಣೆಯಾಗುವುದು ಸೀರೆಯ ಮೇಲಿನ ಕಸೂತಿ, ಮೂಗುನತ್ತು, ಹಿನ್ನೆಲೆಯಲ್ಲಿನ ಮಂದ ಬಣ್ಣ ಮುಂದೆಯಿರುವ ಆಕೃತಿಯನ್ನು ಸ್ಫುಟವಾಗಿ ಕಂಗೊಳಿಸುವಲ್ಲಿ ಸಹಾಯವಾಗಿದೆ. ವ್ಯಕ್ತಿಯು ನಿಂತಿರುವ ಭಂಗಿಯು ಆಕರ್ಷಣೀಯವಾಗಿದೆ. ಈ ಕಲಾಕೃತಿಯನ್ನು ಗಮನಿಸಿದಾಗ ಎಸ್.ಎಂ. ಪಂಡಿತ ಮತ್ತು ರಾಜಾರವಿವರ್ಮನ ಕಲಾಕೃತಿಗಳ ಪ್ರಭಾವವಿರುವುದು ಕಂಡುಬರುತ್ತದೆ. ಅವರು ಕಲಾಕೃತಿಗಳನ್ನು ನಿರ್ವಹಿಸುವ ರೀತಿಯಲ್ಲಿ ಕಾಳೆಯವರ ಈ ಭಾವಚಿತ್ರಗಳ ರಚನೆಗೊಂಡಿವೆ ಎನ್ನಬಹುದು.

ಚಿತ್ರ ೨. ಅನುರಾಧ ಅವರ ಭಾವಚಿತ್ರ

ಪಾರ್ಶ್ವನೋಟವನ್ನು ಹೊಂದಿದ ಈ ಪೂರ್ಣಭಾವ ಚಿತ್ರವು ೩೦x೪೦ ಇಂಚಿನ ಕ್ಯಾನ್ವಾಸಿನ ಅವಕಾಶದಲ್ಲಿ ತೈಲವರ್ಣದಲ್ಲಿ ಮಾಡಲಾಗಿದೆ. ಈ ಕಲಾಕೃತಿಯಲ್ಲಿ ವರ್ಣಗಳ ಸಮ್ಮಿಳಿತ ಹಿನ್ನೆಲೆಯಲ್ಲಿ ಸಂಡೂರಿನ ಪ್ರಸಿದ್ಧ ಕೆರೆ, ಮಾನಸ ಸರೋವರದ ಪ್ರಕೃತಿ ಸೌಂದರ್ಯವನ್ನು ಕಾಳೆಯವರು ಮನೋಜ್ಞವಾಗಿ ತಮ್ಮ ಕ್ಯಾನ್ವಾಸಿನಲ್ಲಿ ಸೆರೆಹಿಡಿದಿದ್ದಾರೆ. ಈ ಭಾವಚಿತ್ರದಲ್ಲಿ ಮುಖ್ಯ ಆಕೃತಿಯಲ್ಲಿ ನಿಂತಿರುವ ಭಂಗಿ, ಉಡುಪಿನ ಶೈಲಿ, ಮುಖದ ಮೇಲೆ ಮೂಡಿಬಂದ ಹಗುರವಾದ ಮಂದಹಾಸ, ನೆರಳು ಬೆಳಕು, ಮನಸ್ಸಿಗೆ ಮುದವನ್ನು ನೀಡುವಂತಿದ್ದು ನಿಸರ್ಗವನ್ನು ಆಕೃತಿಯ ಹಿನ್ನೆಲೆಯಲ್ಲಿ ತೋರಿಸಿದ್ದು ಪಾಶ್ಚಾತ್ಯ ಕಲಾ ಶೈಲಿಯನ್ನು ನೆನಪಿಗೆ ತರುವಂತಿದೆ. ಈ ಎರಡು ಭಾವಚಿತ್ರಗಳಲ್ಲಿ ಕಾಳೆಯವರ ಭಾವಚಿತ್ರಣದ ಕುರಿತು ಅವರ ಆಸಕ್ತಿಯನ್ನು ತೋರಿಸುತ್ತದೆ.

ಎಂ.ವಾಯ್. ಘೋರ್ಪಡೆಯವರ ಮೊಮ್ಮಗನ ಭಾವಚಿತ್ರ

ತೈಲವರ್ಣ ಮಾಧ್ಯಮದಲ್ಲಿ ಮೂಡಿಬಂದ ಈ ಭಾವಚಿತ್ರವು ೩೦"x೪೦" ಅಳತೆಯ ಕ್ಯಾನ್ವಾಸಿನ ಅವಕಾಶದಲ್ಲಿ ರಚಿತಗೊಂಡಿದ್ದು ಬಾಲಕನ ವಯೋಮಾನವನ್ನು ಮುಗ್ಧ ಮಂದಹಾಸ ವನ್ನು ಬಾಲಕ ತೊಟ್ಟಿರುವ ಉಡುಪನ್ನು ಅತ್ಯಂತ ನವಿರಾಗಿ ನಿರೂಪಿಸಲಾಗಿದೆ. ಅಲ್ಲದೇ ಆ ಬಟ್ಟೆಯ ನುಣುಪುತನ ಮೈವಳಿಕೆಯನ್ನು ಅದರ ನೆರಿಗೆಯನ್ನು ಇಲ್ಲಿ ಅತ್ಯಂತ ಯಶಸ್ವಿಯಾಗಿ ಸೆರೆಹಿಡಿಯಲಾಗಿದೆ. ಅಲ್ಲದೇ, ಹಿನ್ನೆಲೆಯಲ್ಲಿ ಐತಿಹಾಸಿಕ ವಾಸ್ತುಶಿಲ್ಪವಿದ್ದು, ಅದರ ಮುಂದೆ ಯಿರುವ ಈ ಮುಖ್ಯ ಆಕೃತಿಯು ಸ್ಫುಟವಾಗಿ ಕಂಗೊಳಿಸುವಂತೆ ಸಂಯೋಜಿಸಲಾಗಿದ್ದು ಇದು ಭಾವಚಿತ್ರವಾದರೂ ಸಹ ಇಲ್ಲಿರುವ ಬಣ್ಣಗಳು, ಹಿನ್ನೆಲೆ ಮುನ್ನಲೆ ಒಂದಕ್ಕೊಂದು ಪೂರಕ ವಾಗಿದ್ದು ಸಂಯೋಜನಾ ಕಲಾಕೃತಿಯಂತೆ ಕಂಡುಬರುತ್ತದೆ.



ಎಂ.ವೈ. ಘೋರ್ಪಡೆಯವರ ಮೊಮ್ಮಗನ ಭಾವಚಿತ್ರ

ಎಚ್.ಆರ್. ಗವಿಯಪ್ಪ ಗಂಗಾವತಿ

ಗಂಗಾವತಿಯ ಮಾಜಿ ಸಚಿವ ಎಚ್.ಜಿ. ರಾಮಲು ಅವರ ನಿವಾಸದಲ್ಲಿರುವ ಅವರ ತಂದೆಯ ಭಾವಚಿತ್ರ ಇದಾಗಿದೆ. ಈ ಭಾವಚಿತ್ರವು ಛಾಯಾಚಿತ್ರದ ಆಧಾರದ ಮೇಲೆ ರಚಿಸಲಾಗಿದ್ದು ೪x೬ ಅಡಿ ಅಳತೆಯನ್ನು ಹೊಂದಿದೆ. ಇದನ್ನು ತೈಲವರ್ಣದಲ್ಲಿ ರಚಿಸಲಾಗಿದ್ದು, ಭಾವಪೂರ್ಣವಾಗಿ ನೈಜವಾಗಿ ಚಿತ್ರಣಗೊಂಡಿದೆ. ಎಚ್.ಆರ್. ಗವಿಯಪ್ಪನವರ ಶಿಸ್ತು, ಠೀಕುಠಾಕು, ಜೀವಂತಿಕೆಯಿಂದ ಕೂಡಿದ್ದು ಇಲ್ಲಿ ಅದು ಪ್ರತಿಬಿಂಬಿತವಾಗಿದೆ. ತಲೆಯ ಮೇಲಿನ ಪೇಟಾ, ಕೋಟು, ಧೋತರ, ನಿಂತಿರುವ ಭಂಗಿ ಈ ಎಲ್ಲಾ ಅಂಶಗಳು ಕಾಳೆಯವರ ಕುಂಚದಲ್ಲಿ ಆಕರ್ಷಣೀಯವಾಗಿ ಮೂಡಿಬಂದಿದೆ.

ಎಚ್.ಜಿ. ರಾಮುಲು ಮಾಜಿ ಸಂಸದರು ಗಂಗಾವತಿ. ಅವರ ಭಾವಚಿತ್ರ

ತೈಲವರ್ಣದಲ್ಲಿ ೩x೪ ಅಡಿ ಅಳತೆಯಲ್ಲಿ ರಚಿಸಲಾದ ಈ ಭಾವಚಿತ್ರವು. ಅತ್ಯಂತ ನೈಜವಾಗಿ ಮೂಡಿಬಂದಿದೆ. ಈ ಭಾವಚಿತ್ರವು ಮಧ್ಯವಯಸ್ಕನ ವಯೋಮಾನವನ್ನು ಅವರ ವ್ಯಕ್ತಿತ್ವವನ್ನು ಅವರ ದೇಶಭಕ್ತಿಯನ್ನು ಅವರು ಕುಳಿತಿರುವ ಭಂಗಿ, ಅಪ್ಪಟ ಭಾರತೀಯ ಉಡುಪುಗಾರಿಕೆ ಮುಂತಾದವುಗಳನ್ನು ಮಾರ್ಮಿಕವಾಗಿ ಸೆರೆಹಿಡಿಯಲಾಗಿದೆ.

ಎಚ್.ಜಿ. ರಾಮುಲು ಅವರ ಪತ್ನಿ ದಿ. ಸರೋಜಮ್ಮ ಅವರ ಭಾವಚಿತ್ರ

ಈ ಭಾವಚಿತ್ರವು ತೈಲವರ್ಣದಲ್ಲಿ ೩೦"x೪೦" ಅಳತೆಯಲ್ಲಿ ಅತ್ಯಂತ ನೈಜವಾಗಿ ಮೂಡಿಬಂದಿದ್ದು ನೋಡುಗರ ಗಮನವನ್ನು ಸೆಳೆಯುವಂತಿದೆ. ಸರೋಜಮ್ಮನವರ ಅಂತರಂಗದ ಪ್ರತಿಬಿಂಬವೇ ಆಗಿದೆ ಈ ಭಾವಚಿತ್ರ. ಅವರ ಸೌಮ್ಯತೆ, ಸರಳತನ, ಗುಣವನ್ನು ಮಾರ್ಮಿಕವಾಗಿ ಸೆರೆಹಿಡಿಯಲಾಗಿದೆ. ಉಡುಪುಗಾರಿಕೆಯಲ್ಲಿ ಆಕರ್ಷಕವಾದ ಕೆಲಸವಾಗಿದೆ. ಬಟ್ಟೆಯ ಮೃದುತನ, ಅನುಭವಕ್ಕೆ ಬರುತ್ತದೆ. ಒಟ್ಟಿನಲ್ಲಿ ಈ ಕಲಾಕೃತಿಯು ಅತ್ಯಾಕರ್ಷಕವಾಗಿ ಮೂಡಿದೆ.

ಶ್ರೀ ತಿಮ್ಮಾರೆಡ್ಡಿ ಗಣಿ ಮಾಲಿಕ ಬಳ್ಳಾರಿ

ಈ ಕಲಾಕೃತಿಯು ಬಳ್ಳಾರಿಯ ಗಣಿ ಮಾಲಿಕರೊಬ್ಬರ ಕಲಾಕೃತಿಯಾಗಿದ್ದು ೪x೬ ಅಡಿ ಅಳತೆಯ ಕ್ಯಾನ್ವಸಿನ ಮೇಲೆ ತೈಲವರ್ಣದಲ್ಲಿ ರಚಿಸಲಾಗಿದೆ. ಈ ಭಾವಚಿತ್ರದಲ್ಲಿ ಮುಖ್ಯ ಆಕೃತಿಯ ಮುಂದೆ ಬಂದಂತೆ ಇದ್ದು ಹಗುರವಾದ ಬಣ್ಣಗಳನ್ನು ಉಪಯೋಗಿಸಲಾಗಿದೆ. ಕಲಾಕೃತಿಯು ನೈಜವಾಗಿ ಮೂಡಿಬರಲು ಸಹಾಯಕವಾಗಿದೆ. ಮುಖ್ಯ ಆಕೃತಿಯ ಇಳಿವಯಸ್ಸು ನೆರೆತ ಕೂದಲು ಮುಖದ ಮೇಲೆ ಮಡುಗಟ್ಟಿದ ಬದುಕಿನ ಅನುಭವಗಳನ್ನು ಅತ್ಯಂತ ನೈಜವಾಗಿ ಸೆರೆಹಿಡಿಯಲಾಗಿದೆ. ಅವರ ಉಡುಪುಗಾರಿಕೆ, ಅವರು ಕುಳಿತರುವ ಹಿಂದಿನ ಆಸನ, ಇವನ್ನೆಲ್ಲಾ



ಮಾಜಿ ಎಂ.ಎಲ್.ಎ. ರಾಮುಲು



ಮಾಜಿ ಎಂ.ಎಲ್.ಎ. ರಾಮುಲು ಅವರ ಪತ್ನಿ



ಮಾಜಿ ಎಂ.ಎಲ್.ಎ. ರಾಮುಲು ಅವರ ತಂದೆ



ಗಣೆ ಮಾಲಿಕರು ತಿಮ್ಮಾ

ಗಮನಿಸಿದರೆ, ಈ ಕಲಾಕೃತಿಯು ಭೌತಿಕ ಶ್ರೀಮಂತಿಕೆಯ ಪ್ರತೀಕ ಎನಿಸುತ್ತದೆ. ಅಲ್ಲದೆ ಕಲಾವಿದನ ಆಂತರಿಕ ಕಲಾ ಶ್ರೀಮಂತಿಕೆಯು ಇಲ್ಲಿ ಯಶಸ್ವಿಯಾಗಿ ಕೆಲಸ ಮಾಡಿದೆ.

ಕಾಳೆಯವರ ಬಾಲ್ಯ ಸ್ನೇಹಿತ ಎಸ್.ಟಿ. ಹಿರೇಮಠ ಅವರ ಭಾವಚಿತ್ರ

ಈ ಭಾವಚಿತ್ರವು ಆಳೆತ್ತರದ ಕ್ಯಾನ್ವಾಸಿನ ಅವಕಾಶದ ಮೇಲೆ ತೈಲವರ್ಣ ಮಾಧ್ಯಮದಲ್ಲಿ ರಚಿಸಲಾಗಿದೆ. ಈ ಭಾವಚಿತ್ರದಲ್ಲಿರುವ ವ್ಯಕ್ತಿಯ ವ್ಯಕ್ತಿತ್ವವನ್ನು ಅತ್ಯಂತ ನೈಜವಾಗಿ ಸೆರೆಹಿಡಿಯಲಾಗಿದೆ. ಮುಖ್ಯ ಆಕೃತಿಗೆ ಪೂರಕವಾದ ವರ್ಣವನ್ನು ಹಿನ್ನೆಲೆಯಲ್ಲಿ ಬಳಸಲಾಗಿದ್ದು ಈ ಅಂಶ ಮುಖ್ಯ ಆಕೃತಿಯನ್ನು ಮತ್ತಷ್ಟು ಸುಂದರಗೊಳಿಸಿದೆ. ಕಾಳೆಯವರು ಕಾಯಾ, ವಾಚಾ ಮತ್ತು ಮನಸ್ಸಿನಿಂದ ಈ ಭಾವಚಿತ್ರವನ್ನು ರಚಿಸಿದಂತೆ ಕಂಡುಬರುತ್ತದೆ. ಇಲ್ಲಿ ನೆರಳು ಬೆಳಕನ್ನು ಹಿತಮಿತವಾಗಿ ತಂದಿದ್ದು ಒಟ್ಟು ಈ ಭಾವಚಿತ್ರದಲ್ಲಿ ಮುಖ್ಯ ಆಕೃತಿಯ ವ್ಯಕ್ತಿತ್ವವನ್ನು ಸಮರ್ಥವಾಗಿ ಸೆರೆಹಿಡಿಯಲಾಗಿದೆ.

ಮಾಸ್ಟರ್ ಸಿ.ವಿ.ವಿ. ಅವರ ಭಾವಚಿತ್ರ

ಬಳ್ಳಾರಿಯ ಹಿರಿಯ ಚಿತ್ರಕಲಾವಿದ ಶ್ರೀ ಕೊಂಡಾಚಾರ ಅವರು ಸ್ವತಃ ಕಲಾವಿದರಾಗಿದ್ದರು ತಮ್ಮ ಯೋಗ ಗುರುಗಳಾದ ಮಾಸ್ಟರ್ ಸಿ.ವಿ.ವಿ. ಅವರ ಆಳೆತ್ತರದ ಭಾವಚಿತ್ರವನ್ನು ಕಾಳೆಯವರೇ ಚಿತ್ರಿಸಿಕೊಡಬೇಕೆಂಬುದು ಕೊಂಡಾಚಾರರ ಆಶಯವಾಗಿತ್ತು. ಸ್ವತಃ ಆಚಾರರೇ ಬಳ್ಳಾರಿಯಲ್ಲಿ ಸ್ಥಾಪಿಸಿದ ಮಾಸ್ಟರ್ ಸಿ.ವಿ.ವಿ. ಯೋಗಾಶ್ರಮದಲ್ಲಿ ಆ ಭಾವಚಿತ್ರವನ್ನು ತೂಗು ಹಾಕಬೇಕೆಂಬ ಅವರ ಪ್ರಬಲ ಇಚ್ಛೆಗನುಸಾರವಾಗಿ ಶ್ರೀ ಕಾಳೆಯವರು ಆಚಾರರಿಗೆ ಮಾಸ್ಟರ್ ಸಿ.ವಿ.ವಿ. ಅವರ ಆಳೆತ್ತರದ ಭಾವಚಿತ್ರವನ್ನು ತೈಲವರ್ಣದಲ್ಲಿ ಚಿತ್ರಿಸಿ ಕೊಟ್ಟರು.[೧೪೭] ಈ ಭಾವಚಿತ್ರವು ೪x೬ ಅಡಿ ಅಳತೆಯನ್ನು ಹೊಂದಿದ್ದು ನೈಜವಾಗಿ ಮೂಡಿಬಂದಿದೆ. ಮುಖ್ಯ ಆಕೃತಿಯ ಹಿಂದಿರುವ ಪ್ರತಿಭೆಯು ಮುಖ್ಯ ಆಕೃತಿಗೆ ಪೂರಕವಾಗಿದ್ದು, ದೈವೀ ಸ್ವರೂಪದ ಕಲ್ಪನೆಯನ್ನುಂಟು ಮಾಡುತ್ತದೆ. ವರ್ಣಗಳ ಸಮ್ಮಿಳಿತ ಶಾಂತ ಸ್ವರೂಪವಾಗಿದ್ದು ಮುಖಭಾವವು ಎದ್ದು ಕಾಣುವಂತೆ ರಚಿಸಲಾಗಿದೆ.

ಗಂಗಾವತಿಯ ಶ್ರೀ ಚನ್ನಬಸವೇಶ್ವರ ಸ್ವಾಮೀಜಿಯವರ ಭಾವಚಿತ್ರಗಳು

ಕಾಳೆಯವರು ಗಂಗಾವತಿಯ ಶ್ರೀ ಚನ್ನಬಸವೇಶ್ವರ ಕಲ್ಯಾಣ ಮಂಟಪಕ್ಕಾಗಿ ಹಲವಾರು ಕಲಾಕೃತಿಗಳನ್ನು ರಚಿಸಿ ಕೊಟ್ಟಿದ್ದಾರೆ. ಅವುಗಳಲ್ಲಿ ೧೨ ಅಡಿ ಉದ್ದ ೩ ಅಡಿ ಅಗಲದ ಗಿರಿಜಾಕಲ್ಯಾಣದ ಕಲಾಕೃತಿಯೂ, ಲಕ್ಷದೀಪೋತ್ಸವ ಕಲಾಕೃತಿಗಳಲ್ಲದೆ ಬಸವೇಶ್ವರ, ಚನ್ನಬಸವ ಸ್ವಾಮಿಜೀಯವರ ಆಳೆತ್ತರದ ಕಲಾಕೃತಿಗಳೂ ಚನ್ನಬಸವ ಸ್ವಾಮೀಜಿಯವರ ಎದೆ ಮಟ್ಟದ

---

೧೪೭. ಡಾ. ಎಸ್.ಸಿ. ಪಾಟೀಲ, ವಿ.ಟಿ.ಕಾಳೆ, ಪು. ೩೫



ಭಾವಚಿತ್ರ 4. ಕಾಳೆಯವರ ಬಾಲ್ಯ ಸ್ನೇಹಿತ ಎಸ್. ಟ. ಹಿರೇಮಠ










ಹೊಸಪೇಟೆ ಗೋಶಾಲೆಗೆ ದಾನವನ್ನು ನೀಡಿದ ವ್ಯಕ್ತಿಗಳ ಭಾವಚಿತ್ರಗಳು











ಹೊಸಪೇಟೆ ಗೋಶಾಲೆಗೆ ದಾನವನ್ನು ನೀಡಿದ ವ್ಯಕ್ತಿಗಳ ಭಾವಚಿತ್ರಗಳು







ಹೊಸಪೇಟೆ ಗೋಶಾಲೆಗೆ ದಾನವನ್ನು ನೀಡಿದ ವ್ಯಕ್ತಿಗಳ ಭಾವಚಿತ್ರಗಳು










ಹೊಸಪೇಟೆ ಗೋಶಾಲೆಗೆ ದಾನವನ್ನು ನೀಡಿದ ವ್ಯಕ್ತಿಗಳ ಭಾವಚಿತ್ರಗಳು









ಹೊಸಪೇಟೆ ಗೋಶಾಲೆಗೆ ದಾನವನ್ನು ನೀಡಿದ ವ್ಯಕ್ತಿಗಳ ಭಾವಚಿತ್ರಗಳು







ಹೊಸಪೇಟೆ ಗೋಶಾಲೆಗೆ ದಾನವನ್ನು ನೀಡಿದ ವ್ಯಕ್ತಿಗಳ ಭಾವಚಿತ್ರಗಳು

ಕಲಾಕೃತಿಗಳು ಈ ಮಠದಲ್ಲಿವೆ. ಚನ್ನ ಬಸವೇಶ್ವರ ಭಾವಚಿತ್ರಗಳು ಆಳೆತ್ತರದ ಭಾವಚಿತ್ರಗಳಿದ್ದು ತೈಲವರ್ಣದಲ್ಲಿ ರಚಿತಗೊಂಡಿರುತ್ತವೆ.

ಈ ಭಾವಚಿತ್ರಗಳು ದೈವೀ ಸ್ವರೂಪದ ಪುರುಷನ ವ್ಯಕ್ತಿತ್ವದ ಕಲ್ಪನೆಯನ್ನು ಕಾಳೆಯವರು ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದ್ದಾರೆ. ಆಕೃತಿಯ ಮುಖದ ಮೇಲಿನ ದೈವಿ ಕಳೆಯನ್ನು ಸೆರೆಹಿಡಿಯಲಾಗಿದೆ. ವರ್ಣಗಳು ಸಮ್ಮಿಳಿತ ಮುಖ್ಯ ಆಕೃತಿಗೆ ಪೂರಕವಾಗಿ ಕೆಲಸ ಮಾಡಿದೆ.

ಶ್ರೀ ಕಂಚಿ ಶಂಕರಚಾರ್ಯರ ಭಾವಚಿತ್ರಗಳು

ಈ ಭಾವಚಿತ್ರಗಳು ಛಾಯಾಚಿತ್ರದ ಆಧಾರದಿಂದಲೇ ತೈಲವರ್ಣದಲ್ಲಿ ರಚಿಸಿದ ಕಲಾಕೃತಿಯಾಗಿದ್ದು ೬x೪ ಅಡಿಯ ಕ್ಯಾನ್ವಸಿನ ಅವಕಾಶದಲ್ಲಿದ್ದು, ಬಹೃತ್‌ಕಾರದ ಭಾವಚಿತ್ರವಾಗಿದೆ. ಕೆಲವೇ ವರ್ಣಗಳಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಈ ಚಿತ್ರವನ್ನು ಕಟ್ಟಿಕೊಡಲಾಗಿದೆ. ಶಂಕರಚಾರ್ಯರ ಬದುಕಿನ ಶೈಲಿ, ಭೌತಿಕ ಜೀವನವನ್ನು ತೊರೆದು ಆಧ್ಯಾತ್ಮದ ಜೀವನವನ್ನು ಒಪ್ಪಿಕೊಂಡಿರುವ ಅವರ ವ್ಯಕ್ತಿತ್ವವು ಪ್ರತಿಬಿಂಬಿತವಾಗಿದೆ. ಇದಲ್ಲದೇ ಕಂಚಿ ಪರಮಾಚಾರ್ಯರ ಇನ್ನೂ ಹಲವಾರು ವಿವಿಧ ಭಂಗಿಯ ಭಾವಚಿತ್ರಗಳನ್ನು ರಚಿಸಿದ್ದು ವಿವಿಧ ಅಳತೆಯ ಕ್ಯಾನ್ವಾಸಿನಲ್ಲಿ ತೈಲವರ್ಣಗಳಲ್ಲಿ ಚಿತ್ರಿತವಾಗಿವೆ. ಅಲ್ಲದೇ ಘೋರ್ಪಡೆಯವರ ಮನೆಯಲ್ಲಿಯೂ ಹೊಸಪೇಟೆಯ ಶ್ರೀ ಹೆಚ್.ಜಿ. ರಂಗನಗೌಡರ ಮನೆಯಲ್ಲಿಯೂ ಸಂಗ್ರಹಗೊಂಡಿವೆ. ಕಾಳೆಯವರು ಶಿರಡಿ ಸಾಯಿಬಾಬಾ ಅವರ ವಿವಿಧ ಅಳತೆಯ, ವಿವಿಧ ಭಂಗಿಯ ಭಾವಚಿತ್ರಗಳನ್ನು ರಚಿಸಿದ್ದು ಎಲ್ಲವೂ ಘೋರ್ಪಡೆಯವರ ನಿವಾಸದಲ್ಲಿರುತ್ತವೆ.

ಯು.ಎಸ್.ಎ.ದ ಸೆಂಟ್ ಲೂಯಿಸ್ ಪಾರ್ಕ್‌ನ ನ್ಯಾಯಮೂರ್ತಿ ಹಾಗೂ ಪತ್ನಿಯ ಭಾವಚಿತ್ರ

ಈ ಚಿತ್ರವು ವಿದೇಶಿ ದಂಪತಿಗಳದಾಗಿದ್ದು, ೨೪x೩೦ ಇಂಚಿನ ಅಳತೆಯ ಕ್ಯಾನ್ವಸಿನ ಅವಕಾಶದಲ್ಲಿ ತೈಲವರ್ಣದಲ್ಲಿ ರಚಿತಗೊಂಡಿದೆ. ಇಲ್ಲಿ ಚರ್ಮದ ಬಣ್ಣ ಚರ್ಮದ ಮೃದುತನದ ಅನುಭವ ನೋಡುಗರಿಗೆ ಕುತೂಹಲವುಂಟು ಮಾಡುತ್ತದೆ.

ಛಾಯಾಚಿತ್ರಗಳನ್ನಾಧರಿಸಿ ರಚಿಸಿದ ಶಿರಭಾವಚಿತ್ರಗಳು

ಹೊಸಪೇಟೆಗೆ ಹತ್ತಿರದಲ್ಲಿರುವ ಜೈನ ಗೋಶಾಲೆಗೆ ಕಾಳೆಯವರು ಸುಮಾರು ಅರವತ್ತು ಶಿರ ಭಾವಚಿತ್ರಗಳನ್ನು ರಚಿಸಿದ್ದು ಅವೆಲ್ಲವೂ ಗೋಶಾಲೆಗೆ ದಾನ ಮಾಡಿದ ದಾನಿಗಳ ಭಾವಚಿತ್ರಗಳಾಗಿರುತ್ತವೆ. ಈ ಎಲ್ಲ ಭಾವಚಿತ್ರಗಳನ್ನು ಗೋಶಾಲೆಯ ಒಂದು ಕೋಣೆಯಲ್ಲಿ ತೂಗು ಹಾಕಲಾಗಿದೆಯಾದರೂ ಭಾವಚಿತ್ರಗಳಿಗೆ ಸರಿಯಾದ ವ್ಯವಸ್ಥೆಯಿಲ್ಲದೇ, ಬಹಳಷ್ಟು ಭಾವಚಿತ್ರಗಳ





ಕಂಚಿ ಶಂಕರಾಚಾರ್ಯರು

ಮೇಲೆ ಧೂಳು ಕುಳಿತಿದ್ದರಿಂದ ಮಬ್ಬು ಮಬ್ಬಾಗಿ ಕಾಣಿಸುತ್ತವೆ. ಮತ್ತು ಸರಿಯಾದ ಬೆಳಕಿನ ವ್ಯವಸ್ಥೆಯಿಲ್ಲದೆ ನೋಡುಗರಿಗೆ ತೊಂದರೆಯಾಗುವಂತಹ ಕೋಣೆಯಲ್ಲಿ ಈ ಭಾವಚಿತ್ರಗಳನ್ನು ಇರಿಸಲಾಗಿದೆ. ಈ ಕೋಣೆಯನ್ನು ಕಾಳು ಕಡಿಯ ಸಂಗ್ರಹದ ಕೊಠಡಿಯಾಗಿಯೂ ಕೂಡಾ ಕೆಲಸಕ್ಕೆ ಬಳಸಿಕೊಳ್ಳಲಾಗಿದೆ. ಆ ಕಾಳನ್ನು ತಿನ್ನಲು ಪಕ್ಷಿಗಳು ಬಂದು ಈ ಕಲಾಕೃತಿಗಳ ಮೇಲೆ ಕುಳಿತು ಗಲೀಜು ಮಾಡಿವೆ. ಹಾಗೆಯೇ ಮಳೆ ಬಂದಾಗ ಮಳೆ ನೀರು ಚಿತ್ರಗಳ ಫ್ರೇಮ್‌ನಲ್ಲಿ ಇಳಿದು ಚಿತ್ರಗಳು ಮಂಜುಮಂಜಾಗಿ ಕಾಣಿಸುತ್ತಿವೆ. ಈ ಭಾವಚಿತ್ರಗಳು ಸರಿಯಾದ ಸ್ಥಳದಲ್ಲಿ ವ್ಯವಸ್ಥಿತವಾಗಿ ಇರಿಸುವ ಅಗತ್ಯವಿದೆ.


ಈ ಭಾವಚಿತ್ರಗಳು ೧೯೮೭-೮೯ನೇ ಇಸ್ವಿಯ ಮಧ್ಯದಲ್ಲಿ ರಚಿಸಲಾದ ಚಿತ್ರಗಳಾಗಿದ್ದು ಕ್ಯಾನ್ವಾಸಿನ ಅವಕಾಶದಲ್ಲಿ ತೈಲವರ್ಣದಿಂದ ರಚಿಸಲಾಗಿದ್ದು ೧೨x೧೫ ಅಳತೆಯ ಭಾವಚಿತ್ರ ಗಳಾಗಿವೆ. ಈ ಭಾವಚಿತ್ರಗಳು ಹೆಚ್ಚಾಗಿ ರಾಜಸ್ಥಾನಿ ರಾಜ್ಯದ ಮಾರವಾಡಿ ಜನಾಂಗದ ಭಾವಚಿತ್ರ ಗಳಾಗಿದ್ದು ಅವರ ತೊಟ್ಟಂತಹ ವೇಷಭೂಷಣಗಳಿಂದ ಕಂಡುಕೊಳ್ಳಬಹುದಾಗಿದೆ. ಈ ಎಲ್ಲಾ ಚಿತ್ರಗಳು ನೈಜತೆಯಿಂದ ಕೂಡಿದ್ದು ಮುಖದ ಮೇಲೆ ಮೂಡಿರುವ ಒಂದೊಂದು ಗೆರೆಯನ್ನು ಕೂಡಾ ಅತ್ಯಂತ ನೈಜವಾಗಿ ಚಿತ್ರಿಸಿರುವುದು ಕಾಳೆಯವರ ಕುಂಚದ ಕುಶಲತೆಯನ್ನು ತೋರಿಸುತ್ತದೆ. ಕಾಳೆಯವರು ಈ ಭಾವಚಿತ್ರಗಳು ಅತ್ಯಂತ ಶ್ರದ್ಧೆಯಿಂದ, ಆಸಕ್ತಿಯಿಂದ, ಶ್ರಮದಿಂದ ರಚಿಸಿದಂತೆ ಕಂಡುಬರುತ್ತದೆ. ನಿಜವಾದ ಛಾಯಾಚಿತ್ರಗಳೆನೋ ಎಂಬ ಭ್ರಮೆಯನ್ನುಂಟು ಮಾಡುವಂತೆ ಈ ಭಾವಚಿತ್ರಗಳು ನೋಡುಗರನ್ನು ಆಶ್ಚರ್ಯಚಕಿತಗೊಳಿಸುವಂತಿವೆ.

ಕಾಳೆಯವರ ಕಲ್ಪನೆಯಿಂದ ಮೂಡಿಬಂದ ಭಾವಚಿತ್ರಗಳು

ಕಾಳೆಯವರು ನಾಡಿನಾದ್ಯಾಂತ ಅನೇಕ ಮಠ, ಮಾನ್ಯಗಳಿಗೆ ಅನೇಕ ವಿಭೂತಿ ಪುರುಷರಾದ ಸಮಾಜ ಸುಧಾರಕ ಬಸವಣ್ಣನವರ ಭಾವಚಿತ್ರಗಳು, ಚನ್ನಬಸವಣ್ಣ, ಮರಾಠ ಸಾಮ್ರಾಜ್ಯದ ದೊರೆ ಶಿವಾಜಿಯ ಭಾವಚಿತ್ರಗಳನ್ನು ಸಾಯಿಬಾಬಾ, ಮಹಾತ್ಮ ಗಾಂಧೀಜಿಯ ಭಾವಚಿತ್ರಗಳು ಪ್ರಸಿದ್ಧಿಯನ್ನು ಪಡೆದಿವೆ. ತಮ್ಮ ಕಲ್ಪನೆಯ ಮೂಸೆಯಲ್ಲಿ ಬೃಹತ್ತಾಕಾರದ ಕ್ಯಾನ್ವಾಸಿನ ಅವಕಾಶದಲ್ಲಿ ರಚಿಸಿ ಮನೆಮಾತಾಗಿದ್ದಾರೆ. ಅವು ಗಂಗಾವತಿ, ಬಳ್ಳಾರಿ, ಗದಗ, ಸಂಡೂರು, ಧಾರವಾಡ, ಚಿತ್ರದುರ್ಗ ಮುಂತಾದ ಮಠ ಮಾನ್ಯಗಳಲ್ಲಿ ನೋಡಲು ಸಿಗುತ್ತವೆ.

ಅಣ್ಣಾ ಬಸವಣ್ಣನವರ ಭಾವಚಿತ್ರಗಳು

ಧಾರವಾಡದ ನಡಕಟ್ಟಿ ಬಂಧುಗಳಿಂದ ಪ್ರಕಟಗೊಂಡ ಶಿವಪೂಜಾ ನಿರತ ಬಸವಣ್ಣನವರ ಚಿತ್ರಗಳ ಪ್ರತಿಗಳು ಕರ್ನಾಟಕದಲ್ಲಷ್ಟೇ ಅಲ್ಲ, ವಿದೇಶಿಗಳಲ್ಲಿಯೂ ಕೂಡಾ ಸಂಗ್ರಹವಾಗಿವೆ. ಅದರ ಮೂಲ ಪ್ರತಿಯೂ ಚಿತ್ರದುರ್ಗದ ಮುರಘರಾಜೇಂದ್ರ ಮಠದಲ್ಲಿರುತ್ತದೆ. ಈ ಕೃತಿಯನ್ನು



ಅಣ್ಣ ಬಸವಣ್ಣನವರು
















ಕಾಳೆಯವರು ರಚಿಸಿದ ಶ್ರೀ ಛತ್ರಪತಿ ಶಿವಾಜಿಯವರ ವಿವಿಧ ಬಂಗಿಗಳು





ಚೆನ್ನಬಸವಣ್ಣನವರು



ಚೆನ್ನಬಸವ ಸ್ವಾಮಿಜಿಯವರು

ರಚಿತಗೊಂಡಿದೆ. ಇದನ್ನು ಗದಗಿನ ತೋಂಟದಾರ್ಯರ ಮಠದಲ್ಲಿ ಕಾಣುತ್ತೇವೆ. ಈ ಭಾವಚಿತ್ರದಲ್ಲಿ ಕಾಳೆಯವರು ತಮ್ಮಲ್ಲಿನ ಆಧ್ಯಾತ್ಮದ ಒಲವನ್ನು ಹರಿಸಿದ್ದಾರೆ ಎನ್ನಬಹುದು. ಪದ್ಮಾಸನದಲ್ಲಿ ಕುಳಿತ ಚನ್ನಬಸವಣ್ಣನವರು ವಚನಗಳನ್ನು ತಮ್ಮ ಪಾಂಡಿತ್ಯವನ್ನು ಪ್ರಸ್ತುತ ಪಡಿಸುತ್ತಿದ್ದಾರೆ ಎಂಬುವ ಭಂಗಿಯು ಅತ್ಯಾಕರ್ಷಕವಾಗಿದ್ದು ನೋಡುಗರನ್ನು ಮಂತ್ರಮುಗ್ಧರನ್ನಾಗಿ ಸುತ್ತದೆ. ಮುಖದ ಮೇಲೆ ಮೂಡಿದ ಹಗುರವಾದ ಮುಗಳುನಗೆ, ಪ್ರಸನ್ನತೆಯನ್ನು, ಜ್ಞಾನಿಯ ಕಣ್ಣುಗಳನ್ನು ಕಾಳೆಯವರು ಯಶಸ್ವಿಯಾಗಿ ಸೆರೆಹಿಡಿದಿರುವರು. ಅವರು ಎಂತಹ ಜ್ಞಾನಿ ಎಂಬುವುದು ಅವರ ಮುಖಭಾವವೇ ಹೇಳುವಂತೆ ಕಾಳೆಯವರು ರಚಿಸಿದ ಈ ಭಾವಚಿತ್ರ ಮೂಡಿಬಂದಿದೆ. ಆಕೃತಿಯ ಹಿನ್ನೆಲೆಯಲ್ಲಿ ಗಾಢವರ್ಣ ಲೇಪಿಸಲಾಗಿದ್ದು ಪ್ರಧಾನ ಆಕೃತಿಯು ಎದ್ದು ಕಾಣುವಂತೆ ಚಿತ್ರಿಸಲಾಗಿದ್ದು, ಚಿತ್ರವನ್ನು ಪರಿಣಾಮಕಾರಿಯನ್ನಾಗಿಸಿದೆ. ಹಿದಿರುವ ಪ್ರಭೆಯು ಚನ್ನಬಸವಣ್ಣನವರ ಜ್ಞಾನದ ಸಂಕೇತವಾಗಿದ್ದು ಈ ಕಲಾಕೃತಿಗೆ ಪೂರಕವಾಗಿದೆ. ಬಣ್ಣಗಳ ಸಮ್ಮಿಳಿತ ಕಣ್ಣಿಗೆ ಹಿತವಾಗಿವೆ. ಕೆಲವೇ ಬಣ್ಣಗಳನ್ನು ಉಪಯೋಗಿಸಿರುವುದು ಯಾವುದೇ ಗೊಂದಲವಿಲ್ಲದೇ ಈ ಕಲಾಕೃತಿ ನೋಡಿಸಿಕೊಂಡು ಹೋಗುತ್ತದೆ.

ಗುರುದೇವ ರವೀಂದ್ರನಾಥ ಟ್ಯಾಗೋರ

ಇದು ರವೀಂದ್ರನಾಥ ಟ್ಯಾಗೋರ ಅವರ ಶಿರಭಾವಚಿತ್ರವಾಗಿದ್ದು, ಕಾಗದದ ಮೇಲೆ ಜಲವರ್ಣದಿಂದ ರಚಿಸಲಾಗಿದೆ. ನೇರವಾಗಿ ವಿಕ್ಷಕರೊಂದಿಗೆ ಮುಖಾಮುಖಿ ಆದಂತೆ ಈ ಭಾವಚಿತ್ರವನ್ನು ಕಟ್ಟಿಕೊಡಲಾಗಿದ್ದು ಹಿನ್ನೆಲೆಯಲ್ಲಿರುವ ಗಾಢ ವರ್ಣವು ಪ್ರಧಾನ ವ್ಯಕ್ತಿಯ ಈ ಭಾವಚಿತ್ರವನ್ನು ಸ್ಪುಟವಾಗಿ ಕಾಣುವಂತೆ ರಚಿಸಲಾಗಿದೆ. ನೋಡುಗರಿಗೆ ಕೂಡ ಅದರ ಸ್ಪಷ್ಟತೆಯ ಅನುಭವವಾಗುತ್ತದೆ. ಈ ಭಾವಚಿತ್ರದಲ್ಲಿ ರವೀಂದ್ರನಾಥ ಟ್ಯಾಗೋರ ಅವರ ವಯೋಮಾನವನ್ನು ನೇರವಾಗಿ ಹೇಳುವಂತಿದ್ದು ಅವರ ಬಿಳಿವಸ್ತ್ರ, ನೆರೆತ ಕೂದಲು, ಗಡ್ಡ, ಮೀಸೆ, ಸ್ಪಷ್ಟವಾಗಿ ಮೂಡಿಬಂದಿದ್ದು ಆಕರ್ಷಣೀಯವಾಗಿ ಕಂಡುಬರುತ್ತದೆ. ಅಲ್ಲದೇ ಪರಿಣಾಮಕಾರಿ ನೆರಳು ಬೆಳಕನ್ನು ಈ ಕಲಾಕೃತಿಯಲ್ಲಿ ತರಲಾಗಿದೆ. ಇದು ಕಾಳೆಯವರ ಒಂದು ಅತ್ಯುತ್ತಮ ಜಲವರ್ಣದ ಭಾವಚಿತ್ರ ಕಲಾಕೃತಿ ಎನ್ನಬಹುದು.

ಮಹಾತ್ಮಗಾಂಧೀಜಿಯವರ ಪೂರ್ಣಭಾವಚಿತ್ರ

ಈ ಭಾವಚಿತ್ರವು ಕ್ಯಾನ್ವಾಸಿನ ಅವಕಾಶದಲ್ಲಿ ತೈಲವರ್ಣದಿಂದ ರಚಿಸಲಾಗಿದೆ. ಆಳೆತ್ತರದ ಅಳತೆಯಲ್ಲಿ ಮೂಡಿಬಂದ ಗಾಂಧೀಜಿಯವರ ಈ ಪೂರ್ಣಭಾವಚಿತ್ರವು ಅವರ ವ್ಯಕ್ತಿತ್ವವನ್ನು ಗಾಂಧೀಜಿಯವರ ಅಂತರಂಗವನ್ನು ಅವರ ಜೀವನಾನುಭವನ್ನು ಒಂದೇ ಬಣ್ಣದಲ್ಲಿ ಉತ್ಕೃಷ್ಟವಾಗಿ




ಮಹಾತ್ಮಾ ಗಾಂಧೀಜಿ



ರವೀಂದ್ರನಾಥ ಟ್ಯಾಗೋರ್



ಶ್ರೀ ಸಾಯಿಬಾಬಾ



ಮಾಸ್ಟರ್ ಸಿ. ವಿ. ವಿ. ಅವರ ಭಾವಚಿತ್ರ

ಕಟ್ಟಿಕೊಡಲಾಗಿದೆ. ಕಂದು ಬಣ್ಣವನ್ನು ಉಪಯೋಗಿಸಿ ಆ ಬಣ್ಣದಿಂದಲೇ ಆಕೃತಿಗೆ ನೆರಳು ಬೆಳಕನ್ನು ನೀಡಿರುವುದು ಕಲಾಕೃತಿಯು ನೋಡಗರಿಗೆ ವಿಶೇಷ ಪರಿಣಾಮವನ್ನುಂಟು ಮಾಡುತ್ತದೆ. ನನ್ನ ಬದುಕೇ ನನ್ನ ಸಂದೇಶವಾಗಿದೆ. ಎಂಬ ತತ್ವ ಹೊಂದಿರುವ ಗಾಂಧೀಜಿಯವರ ಮಾತಿಗೆ ಪೂರಕವಾಗಿ ಈ ಕಲಾಕೃತಿಯು ಮೂಡಿಬಂದಿದ್ದು ಒಟ್ಟು ಅವರ ವ್ಯಕ್ತಿತ್ವದ ಪ್ರತಿಬಿಂಬವಾಗಿದೆ ಈ ಕಲಾಕೃತಿ. ಈ ಭಾವಚಿತ್ರವು ಸಂಡೂರಿನ ರೆಸಿಡೆನ್ಸಿಯಲ್ ಸ್ಕೂಲ್‌ನಲ್ಲಿ ಸಂಗ್ರಹಿಸಲಾಗಿದೆ.

ಕಾಳೆಯವರ ನಿಸರ್ಗ ಚಿತ್ರಗಳು

ಕಾಳೆಯವರು ನಿಸರ್ಗ ಚಿತ್ರಗಳನ್ನು ರಚಿಸಿದ್ದು ಸಾವಿರಾರು. ಅವುಗಳಲ್ಲಿ ಜಲವರ್ಣ, ತೈಲವರ್ಣ, ಅಕ್ರ್ಯಾಲಿಕ್ ಮಾದ್ಯಮದಲ್ಲಿ ರಚಿಸಲಾಗಿದ್ದು, ನಿಸರ್ಗದ ವಿವಿಧ ದೃಶ್ಯಗಳನ್ನು ಕಾಳೆಯವರು ಸೆರೆಹಿಡಿದಿದ್ದು ಅವುಗಳನ್ನು ಇಲ್ಲಿ ವಿಂಗಡಿಸಿ ಅಧ್ಯಯನ ಮಾಡಲಾಗಿದೆ.

೧. ಶ್ರವಣಬೆಳಗೊಳದ ನಿರ್ಸಗ ದೃಶ್ಯ

೨. ಸಂಡೂರಿನ ನಿರ್ಸಗ ದೃಶ್ಯಗಳು

೩. ಗುತ್ತಿಕೋಟೆಯ ನಿರ್ಸಗ ದೃಶ್ಯ

೪. ಹಂಪಿಯ ಐತಿಹಾಸಿಕ ಕಟ್ಟಡಗಳ ದೃಶ್ಯಗಳು

೫. ಗೋವಾದ ನಿರ್ಸಗ ದೃಶ್ಯಗಳು

೬. ಮಡಿಕೇರಿಯ ನಿರ್ಸಗ ದೃಶ್ಯಗಳು

೭. ತಮಿಳುನಾಡಿನ ನಿರ್ಸಗ ದೃಶ್ಯಗಳು

ಕಾಳೆಯವರ ನಿಸರ್ಗ ಕಲಾಕೃತಿಗಳ ಅಧ್ಯಯನದೊಂದಿಗೆ ಪಾಶ್ಚಾತ್ಯ ಮತ್ತು ಪೌರ್ವಾತ್ಯ ನಿಸರ್ಗ ಕಲಾಕೃತಿಗಳನ್ನು ಇಲ್ಲಿ ಸ್ಥೂಲವಾಗಿ ಅಧ್ಯಯನದಲ್ಲಿ ತರಲಾಗಿದೆ. ಕಾಳೆಯವರ ನಿಸರ್ಗ ಕಲಾಕೃತಿಗಳನ್ನು ಅರ್ಥಮಾಡಿಕೊಳ್ಳಲು ಸಾಮ್ಯತೆ ಮತ್ತು ವೈರುಧ್ಯವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಇದು ಸಹಕಾರಿಯಾಗಿದೆ.

ಪ್ರತಿಯೊಬ್ಬ ಕಲಾವಿದನು ಸಹಜವಾಗಿಯೇ ನಿಸರ್ಗದಿಂದ ಪ್ರಭಾವಿತಗೊಂಡಿರುತ್ತಾನೆ. ನಿಸರ್ಗ ಚಿತ್ರಗಳನ್ನು ಪ್ರಕೃತಿ ಚಿತ್ರಗಳು ಭೂದೃಶ್ಯ ಚಿತ್ರಗಳು ಎಂತಲೂ ಕರೆಯುತ್ತಾರೆ. ಆಂಗ್ಲ ಭಾಷೆಯಲ್ಲಿ ಇದನ್ನು ಲ್ಯಾಂಡಸ್ಕೇಪ್ ಎಂದು ಕರೆಯುತ್ತಾರೆ. ಇದು ಹೆಚ್ಚು ಬಳಕೆಯಲ್ಲಿರುವ ಪದ ಕೂಡ ಆಗಿದೆ.

ಪ್ರಕೃತಿಗೆ ಹತ್ತಿರವಾದ, ನೇರವಾದ ಅಭಿವ್ಯಕ್ತಿಗೆ ಲ್ಯಾಂಡ್‌ಸ್ಕೇಪ್ ಎಂದು ೧೫ನೆಯ ಶತಮಾನದಿಂದ ಕರೆಯಲಾಗುತ್ತಿದೆ. ಗ್ರಾಮೀಣ ದೃಶ್ಯ ಎಂಬರ್ಥದಲ್ಲಿ ಡಚ್ ಪದದಿಂದ ಈ ಪದ ಹುಟ್ಟಿಕೊಂಡಿದೆ. ದೃಶ್ಯಗಳ ಅಲಂಕೃತ ಚಿತ್ರಣಗಳು ಇಂದು ನಾವು ಲ್ಯಾಂಡ್‌ಸ್ಕೇಪ್ ಎಂದು ಕರೆಯುವ ಭೂದೃಶ್ಯಗಳು ರೋಮನ್ನರ ಕಾಲದಿಂದಲೂ ಕಾಣಿಸಿಕೊಂಡಿವೆ. ಭೂದೃಶ್ಯ ಚಿತ್ರಣ ತನ್ನದೇ ಆದ ಪೂರ್ಣ ಸ್ವತಂತ್ರ ಅಸ್ತಿತ್ವವನ್ನು ಕಂಡುಕೊಂಡಿದ್ದು, ಪುನರುಜ್ಜೀವನ (೧೫-೧೬ನೆಯ ಶತಮಾನ) ಕಾಲದಲ್ಲಿ. ಡಚ್ ಭಾವಚಿತ್ರಗಳ ಹಿನ್ನೆಲೆಯಲ್ಲಿ ಭೂದೃಶ್ಯಗಳನ್ನು ಚಿತ್ರಿಸಿ ಆನಂದಿಸುವ ಅಭ್ಯಾಸ ಆರಂಭವಾಗಿದ್ದು ೧೬ನೆಯ ಶತಮಾನದಲ್ಲಿ. ಸಂಪೂರ್ಣ

ಭೂದೃಶ್ಯದ ಚಿತ್ರವು ೧೮ನೆಯ ಶತಮಾನದ ಅಂತಿಮ ದಶಕಗಳಲ್ಲಿ ಹಾಗೂ ೧೯ನೆಯ ಶತಮಾನದ ಉದ್ದಕ್ಕೂ ಕಾಣಿಸಿಕೊಂಡಿತು. ಇಂಗ್ಲೆಂಡಿನ ಕಾನ್ಸಟೆಬಲ್, ಟರ್ನರ್, ಜರ್ಮನಿಯ ಫ್ರೆಡ್ರಿಕ್ ಮತ್ತು ಇಂಪ್ರೆಸನಿಸ್ಟ್ ಕಲಾವಿದರನ್ನು ಉದಾಹರಿಸಬಹುದು. ನಮ್ಮ ದೇಶದ ಸಾಂಪ್ರದಾಯಿಕ ಕಿರುರೂಪ ಚಿತ್ರಗಳಲ್ಲಿ ಭೂದೃಶ್ಯಗಳು ಸುಂದರವಾಗಿ ವೈವಿಧ್ಯಮಯವಾಗಿ ಕಾಣಿಸಿಕೊಂಡಿವೆ. ೧೯ನೆಯ ಶತಮಾನದ ಅಂತ್ಯ ಹಾಗೂ ೨೦ನೆಯ ಶತಮಾನದ ಆರಂಭದಲ್ಲಿ ಭಾರತದ ರಾಜಾರವಿರ್ಮನ ತೈಲವರ್ಣ ಚಿತ್ರಗಳೇ ಅಲ್ಲದೆ ಒಲಿಯೋಗ್ರಾಫ್ ಕೃತಿಗಳಲ್ಲೂ ಭೂದೃಶ್ಯ ಕಲೆ ವೈಭವಿಕರಣಗೊಂಡಿದೆ.[೧೪೯] ನಿಸರ್ಗ ಚಿತ್ರಕ್ಕೆ ಅದರದೇ ಆದ ಗುಣಲಕ್ಷಣ, ವಿಧಾನಗಳುಂಟು. ಒಬ್ಬ ಕಲಾವಿದ ತಾನು ಆಯ್ಕೆ ಮಾಡಿಕೊಂಡ ನಿಸರ್ಗದ ಒಂದು ದೃಶ್ಯದ ಮುಂದೆ ಧ್ಯಾನಸ್ಥನಾಗಿ ಕುಳಿತು ಕ್ಯಾನ್ವಾಸ್ ಅಥವಾ ಪೇಪರಿನ ಮೇಲೆ ತನ್ನ ಮೆಚ್ಚಿನ ಮಾಧ್ಯಮದ ಮುಖಾಂತರ ಆ ದೃಶ್ಯವನ್ನು ಸೆರೆಹಿಡಿಯುತ್ತಾನೆ. ಇಲ್ಲಿ ಕ್ಯಾಮಾರಾ ಮಾಡುವ ಕೆಲಸಕ್ಕೂ ಕಲಾವಿದ ರಚಿಸುವ ನಿಸರ್ಗ ಚಿತ್ರಕ್ಕೂ ತುಂಬಾ ವ್ಯಾತ್ಯಾಸ ಕಂಡುಬರುತ್ತದೆ. ಕ್ಯಾಮಾರಾ ತನ್ನ ಮುಂದೆ ಇರುವ ದೃಶ್ಯವನ್ನು ಯಥಾವತ್ತಾಗಿ ಸೆರೆಹಿಡಿದ್ದರೆ, ಕಲಾವಿದನು ಆ ದೃಶ್ಯವನ್ನು ಸಂಯೋಜನೆಯ ಜ್ಞಾನವನ್ನು ಅದರಲ್ಲಿ ಅಳವಡಿಸಿ ಆ ದೃಶ್ಯವನ್ನು ತಾನು ಇಚ್ಛಿಸಿದ ರೀತಿಯಲ್ಲಿ ಬದಲಾಯಿಸಿ ರಚಿಸುವ ಅವಕಾಶ ಕಲಾವಿದನಿಗೆ ಇರುತ್ತದೆ. ಆ ದೃಶ್ಯದಲ್ಲಿರುವ ಆಕಾರಗಳನ್ನು, ಬಣ್ಣಗಳನ್ನು, ತನಗೆ ಸರಿಹೊಂದುವಂತೆ ಬದಲಾಯಿಸುವ ಅವಕಾಶ ಕಲಾವಿದನಿಗೆ ಇರುತ್ತದೆ. ಇಲ್ಲಿ ಒಬ್ಬ ಕಲಾವಿದನ ಅನುಭವ, ಸೌಂದರ್ಯ ಪ್ರಜ್ಞೆ, ಕಲಾಪ್ರಜ್ಞೆ, ಆಯಾ ಕಲಾವಿದನ ಸಾಮರ್ಥ್ಯಕ್ಕೆ ಅನುಗುಣವಾಗಿ ಕೆಲಸ ಮಾಡುತ್ತದೆ. ಹತ್ತು ಜನ ಕಲಾವಿದನರನ್ನು ಕುರಿತು. ಒಂದೇ ನಿಸರ್ಗ ದೃಶ್ಯವನ್ನು ಚಿತ್ರಿಸಲು ಹೇಳಿದರೆ. ಆ ಹತ್ತು ಜನ ಕಲಾವಿದರು ವಿಭಿನ್ನವಾಗಿಯೇ ಚಿತ್ರಿಸುತ್ತಾರೆ. ರುಮಾಲೆ ಚನ್ನಬಸವಯ್ಯನವರ ದೃಷ್ಟಿಯಲ್ಲಿ ನಿಸರ್ಗ ದೃಶ್ಯವು ಕಂಡಿದೆ ಬೇರೆ. ಹಡಪದವರ ದೃಷ್ಟಿಯಲ್ಲಿ ಪಿ.ಆರ್. ತಿಪ್ಪೇಸ್ವಾಮಿ, ಕೆ. ವೆಂಕಟಪ್ಪ, ಜೆ.ಎಸ್.ಖಂಡೇರಾವ್ ಇವರ ದೃಷ್ಟಿಯಲ್ಲಿ ನಿಸರ್ಗವು ಬೇರೆ ಬೇರೆ ದೃಷ್ಟಿಯಲ್ಲಿಯೇ ಕಂಡುಬಂದಿದೆ.[೧೫೦] ಹಾಗೇ ಕಾಳೆಯವರು ನಿಸರ್ಗ ಚಿತ್ರಗಳು ಇದಕ್ಕೆ ಭಿನ್ನವಾಗಿಲ್ಲ. ಅವರ ತೈಲಮಾಧ್ಯಮದಲ್ಲಿ ರಚಿಸಿದ ನಿಸರ್ಗ ಚಿತ್ರಗಳು ಯಥಾವತ್ತಾದ ಚಿತ್ರ ಶೈಲಿಗೆ ಹತ್ತಿರವಾಗಿವೆ. ಆದರೂ ಕೂಡಾ ಅಲ್ಪಸ್ವಲ್ಪ ಬದಲಾವಣೆ ಆಗಿದೆ. ಹಾಗೇ ಅವರ ಜಲವರ್ಣ ಮಾಧ್ಯಮದ ನಿಸರ್ಗ ಚಿತ್ರದಲ್ಲಿ ಸಾಂಕೇತಿಕತೆಗೆ ಹೆಚ್ಚಿನ ಮಹತ್ವಕೊಟ್ಟಂತೆ ಕಂಡುಬರುತ್ತದೆ. ಅವರ ಪ್ರತಿಭೆ ಸ್ಫುಟವಾಗಿ ಕಂಡುಬಂದಿರುವುದು ಕೂಡಾ ಜಲವರ್ಣ ಮಾಧ್ಯಮದಲ್ಲಿ. ಈ ನಿಟ್ಟಿನಲ್ಲಿ ಅಧ್ಯಯನದ ವಿಶ್ಲೇಷಣೆ ಮಾಡಲಾಗಿದೆ.

---

೧೪೯. ಪಿ.ಆರ್. ತಿಪ್ಪೇಸ್ವಾಮಿ, (ಸಂ) ಕಲಾಕೋಶ, ಪು.೨೫೦

೧೫೦. ಅದೇ ಪು.

ಲ್ಯಾಂಡಂಸ್ಕೇಪ್ ಪೇಂಟಿಂಗ್ ಕಲೆಯು ಬಹು ಪುರಾತನ ಕಾಲದಿಂದಲೂ ಬೆಳೆದುಬಂದಿದೆ ಎಂಬುದಕ್ಕೆ ರೋಮನ್ ಸಾಮ್ರಾಜ್ಯದ ಪಾಂಪೆ(Popeli)ಯಲ್ಲಿ ಇಂದಿಗೂ ಉಳಿದು ಬಂದಿರುವ ಕಲಾಕೃತಿಗಳು ಸಾಕ್ಷಿಯಾಗಿವೆ. ಆದರೂ ೧೬ನೆಯ ಶತಮಾನದವರೆಗೂ ಯುರೋಪಿನಲ್ಲಿ ಲ್ಯಾಂಡ್‌ಸ್ಕೆಪ್ ಪೇಂಟಿಂಗ್ ಸಹ ಒಂದು ಕಲಾಪ್ರಕಾರವೆಂದು ಪರಿಗಣಿಸಲ್ಪಟ್ಟಿರಲಿಲ್ಲ. ಜರ್ಮನ್ ಕಲಾವಿದ ಅಲ್ಬ್‌ಡಾರ್ಪರನು ಪ್ರಪ್ರಥಮ ನಿಸರ್ಗ ರಮ್ಯ ದೃಶ್ಯಗಳನ್ನು ಚಿತ್ರಿಸಿದ ಕಲಾವಿದನೆಂಬ ಕೀರ್ತಿಗೆ ಪಾತ್ರನಾಗಿದ್ದಾನೆ. ೧೭ನೆಯ ಶತಮಾನದಲ್ಲಿ ಮರಗಳು, ಬಂಡೆ, ಬೆಟ್ಟಗಳ ಸಾಂಪ್ರದಾಯಿಕ ಜೋಡಣೆಗಳೊಂದಿಗೆ ಲ್ಯಾಂಡ್‌ಸ್ಕೆಪ್ ಚಿತ್ರಣ ಕಲೆಯು ಅಭಿವೃದ್ಧಿಗೊಂಡಿತು. ಇದೇ ಕಾಲದ ರೂಯಿಸ್ಪೇಲ್ ಹೋಬ್ಬೆಮಾ, ಸೆಫರ್ಸ್ ಮತ್ತು ರೆಂಬ್ರಾಂಡ್‌ರಂಥ ಮಹಾನ್ ಕಲಾವಿದರು ಲ್ಯಾಂಡ್‌ಸ್ಕೇಪ್ ಚಿತ್ರಗಳನ್ನು ಚಿತ್ರಿಸಿದ್ದಾರೆ. ರಮ್ಯಪಂಥದ ಫ್ರೀಟ್‌ರಿಚ್ ಮತ್ತು ಟರ್ನ್‌ರರಂಥ ಅದ್ವಿತೀಯ ಕಲಾವಿದರು ಲ್ಯಾಂಡ್‌ಸ್ಕೇಪ್ ಚಿತ್ರಣಕ್ಕೆ ವೈಭವವನ್ನು ತಂದುಕೊಟ್ಟರು. ಈ ವೇಳೆಗಾಗಲೇ ಲ್ಯಾಂಡ್‌ಸ್ಕೇಪ್ ಚಿತ್ರಣದಲ್ಲಿ ವಿವಿಧ ಋತುಮಾನಗಳಲ್ಲಿ ಕಂಡುಬರುವ ನಿಸರ್ಗದ ವೈವಿಧ್ಯತೆಗಳಲ್ಲಿ ವಾಯುಮಂಡಲದ ಬದಲಾವಣೆಗಳು. ಸೂರ್ಯನ ಬೆಳಕಿನ ಚೆಲ್ಲಾಟಗಳು ಮುಂತಾದ ವೈವಿಧ್ಯತೆಗಳನ್ನು ತುಂಬಿ ಚಿತ್ರವು ಹೆಚ್ಚು ಸ್ವಾಭಾವಿಕವಾಗಿ ಕಾಣುವಂತೆ ಚಿತ್ರಿಸುವ ಪ್ರಯತ್ನಗಳು ಸಾಕಷ್ಟು ಪ್ರಮಾಣದಲ್ಲಿ ಬೆಳೆದು ಬಂದವು. ಅಲ್ಲದೇ ಲ್ಯಾಂಡ್‌ಸ್ಕೇಪ್ ಚಿತ್ರಣವೂ ಪ್ರತ್ಯೇಕ ಕಲಾ ಪ್ರಕಾರವಾಗಿ ಬೆಳೆಯತೊಡಗಿತು. ಅನಂತರ ೧೯ ಮತ್ತು ೨೦ನೆಯ ಶತಮಾನಗಳಲ್ಲಿ ಸಮಷ್ಟಿ ಪರಿಣಾಮವಾದ ಲ್ಯಾಂಡ್‌ಸ್ಕೇಪ್‌ನ್ನು ತಮ್ಮದೇ ಆದ ರೀತಿಯಲ್ಲಿ ಚಿತ್ರಿಸದರಲ್ಲದೆ. ಲ್ಯಾಂಡ್‌ಸ್ಕೇಪ್ ಚಿತ್ರಣವು ವಿಶ್ವವ್ಯಾಪಿಯಾಗಿ ವಿರಾಟ್ ಸ್ವರೂಪವನ್ನು ತಳೆಯುವಂತೆ ಮಾಡಿದರು. ಅವರಲ್ಲಿ ಸಿಂಝಾನೆ, ವ್ಯಾನಗೋ, ಕೋರ್ಬಿನ್ ಮುಂತಾದವರು ಅಗ್ರಗಣ್ಯ ಲ್ಯಾಂಡ್‌ಸ್ಕೇಪ್ ಚಿತ್ರಕಲಾವಿದರೆಂದು ವಿಶ್ವವಿಖ್ಯಾತಿಯಾಗಿದ್ದಾರೆ.[೧೫೧]

ಪ್ರಾಚೀನ ಕಾಲದ ಭಾರತೀಯ ಕಲೆಗಳಲ್ಲಿ ನಮಗೆ ಕೇವಲ ಪ್ರಕೃತಿ ಚಿತ್ರಗಳು ಕಂಡು ಬರುವುದಿಲ್ಲ. ನಮ್ಮ ಕಲಾವಿದರು ಒಂದು ಚಿತ್ರದಲ್ಲಿ ಹಿನ್ನೆಲೆಯಾಗಿ ಪ್ರಕೃತಿ ಸೌಂದರ್ಯವನ್ನು ಉಪಯೋಗಿಸಿರುವುದು ವಿಪುಲವಾಗಿ ಕಂಡುಬರುತ್ತದೆ. ಪುರಾಣಗಳಿಂದ ಇತಿಹಾಸ ಕಾಲದವರೆಗೆ ಗಮನಿಸಿದಾಗ ನಮ್ಮ ದೇಶದ ಚಿತ್ರವಸ್ತು ಏನು ಎನ್ನುವುದರ ಅನುಭವವಾಗುತ್ತದೆ. ಅಲ್ಲಿ ನಮಗೆ ಕಾಣುವುದು ರಾಜರು, ಅವರ ಅರಮನೆಗಳು, ಅಲ್ಲಿನ ಉದ್ಯಾನಗಳು ಇತ್ಯಾದಿ. ಚೀನಾ ದೇಶದ ಗುಡ್ಡ ಬೆಟ್ಟಗಳು ಮೊದಲು ಪರ್ಶಿಯನ್ ಚಿತ್ರಗಳಲ್ಲಿ ಕಾಣಿಸಿಕೊಂಡವು. ಅದೇ

---

೧೫೧. ವಿ.ಟಿ. ಕಾಳೆ, ಚಿತ್ರಕಲಾದರ್ಪಣ, ಪು. ೧೩.೨

ಪರ್ವತಗಳು ಮುಸ್ಲಿಂ ದೊರೆಗಳ ಮೂಲಕ ಭಾರತಕ್ಕೆ ಬಂದವು. ನಮ್ಮ ಕಿರುರೂಪ ಚಿತ್ರಗಳಲ್ಲಿಯೂ ಕೂಡಾ ಅದೇ ರೀತಿಯ ಬೆಟ್ಟಗಳು ಬಂದು ನಿಂತವು.[೧೫೨] ಹೀಗೆ ನಮ್ಮ ದೇಶದಲ್ಲಿ ಮೊದಲಿಗೆ ಪ್ರಕೃತಿ ಚಿತ್ರಣವು ಒಂದು ಸ್ವತಂತ್ರ ಕಲಾಪ್ರಕಾರವಾಗಿ ಹೊರಹೊಮ್ಮಿರಲಿಲ್ಲ. ಭಾರತಕ್ಕೆ ಬ್ರಿಟಿಷರ ಆಗಮನದಿಂದಾಗಿ ಕಲಾಶಾಲೆಗಳು ಪ್ರಾರಂಭವಾದ ನಂತರ ಬ್ರಿಟಿಷರ ಆಳ್ವಿಕೆಯಲ್ಲಿ ಅವರ ಕಲಿಕಾ ಪದ್ಧತಿಯ ಅನುಸಾರವಾಗಿ ಅಕಾಡೆಮಿಕ ಶೈಲಿಯಲ್ಲಿ ಪ್ರಕೃತಿ ಚಿತ್ರಣವು ಒಂದು ಸ್ವಂತತ್ರ ಕಲಾಪ್ರಕಾರವಾಗಿ ಬೆಳೆಯಿತು. ಬ್ರಿಟಿಷರ ಕಲಾಶಾಲೆಯಲ್ಲಿ ಕಲಿತ ಅನೇಕ ಕಲಾವಿದರು. ಪ್ರಕೃತಿ ಚಿತ್ರಣಗಳನ್ನು ರಚಿಸಿದ್ದಾರೆ; ರಚಿಸುತ್ತಿದ್ದಾರೆ. ಕಾಳೆಯವರು ಕೂಡಾ ಅಕಾಡೆಮಿಕ ಕಲಾ ಶೈಲಿಯಲ್ಲಿಯೇ ಸಾವಿರಾರು ಪ್ರಕೃತಿ ಚಿತ್ರಣಗಳನ್ನು ವಿವಿಧ ಮಾಧ್ಯಮಗಳಲ್ಲಿ ರಚಿಸಿರುತ್ತಾರೆ.

ಇದುವರೆಗೂ ಭೂದೃಶ್ಯ ಚಿತ್ರದ ಹಿನ್ನೆಲೆಯಲ್ಲಿ ಬರುತ್ತಿತ್ತು. ಈಗ ಅದೇ ಬೇರೆಯಾಗಿ ಬರತೊಡಗಿತು. ಇಂತಹ ಒಂದು ಪ್ರಕಾರವೂ ಹೊರಗಡೆಯದೇ ಆದರೂ ನಮ್ಮ ದೇಶದಲ್ಲೂ ಪ್ರಕೃತಿ ಸಂಪತ್ತಿಗೆ ಕೊರತೆಯಿಲ್ಲವೆಂಬುದು ತೋರಿಬಂತು. ಹನುಮಯ್ಯ, ಎಂ.ಎಸ್. ಚಂದ್ರಶೇಖರ್, ಟಂಕಸಾಲೆ, ಪಾವಂಜೆ, ವೆಂಕಟಪ್ಪ, ರುಮಾಲೆ ಚನ್ನಬಸವಯ್ಯ, ಕಮಡೋಳಿ, ಇನಾಮತಿ, ಸುಂಕದ್, ಹಾಲಬಾವಿ ಮುಂತಾದ ಅನೇಕ ಪ್ರಕೃತಿ ಚಿತ್ರ ಕಲಾವಿದರು ಪ್ರಕೃತಿ ಚಿತ್ರಗಳನ್ನು ತಮ್ಮ ಕ್ಷೇತ್ರವನ್ನಾಗಿ ಆಯ್ಕೆ ಮಾಡಿಕೊಂಡವರು.[೧೫೩] ಆದರೆ ಆರ್.ಎಂ. ಹಡಪದ, ಜೆ.ಎಸ್. ಖಂಡೆರಾವ್ ಪ್ರಕೃತಿ ಚಿತ್ರವನ್ನು ತಮ್ಮ ಅಭಿವ್ಯಕ್ತಿಯ ಒಂದು ಪ್ರಮುಖ ಭಾಗವಾಗಿ ಮಾಡಿಕೊಂಡರು. ಕಾಳೆಯವರ ಪ್ರಕೃತಿ ಚಿತ್ರಗಳು ಕೂಡಾ ಕಾಳೆಯವರ ಕಲಾಭಿವ್ಯಕ್ತಿಯಲ್ಲಿ ಬರುವ ಸಂಯೋಜನಾ ಚಿತ್ರಗಳು, ಭಾವಚಿತ್ರಗಳು, ರೇಖಾಚಿತ್ರಗಳಂತೆ ಪ್ರಕೃತಿ ಚಿತ್ರಗಳು ಅವರ ಅಭಿವ್ಯಕ್ತಿಯ ಒಂದು ಪ್ರಮುಖ ಭಾಗವನ್ನಾಗಿ ಕಂಡುಕೊಳ್ಳಲಾಗಿದೆ.

ಕರ್ನಾಟಕದಲ್ಲಿ ಇವತ್ತಿಗೂ ಪ್ರಕೃತಿ ಚಿತ್ರಣವು ಕಲಾಶಿಕ್ಷಣದ ಒಂದು ಭಾಗವೇ ಆಗಿದೆ. ಭಾರತೀಯ ಕಲಾವಿದನಿಗೆ ಪ್ರಕೃತಿಯು ಅಸಾಮಾನ್ಯವಾಗಿ ಕಾಣುವುದಿಲ್ಲ. ಅದು ತಲಾತಲಾಂತರಗಳಿಂದ ಬಂದ ಧಾರ್ಮಿಕ ನಿಲುವು ಮತ್ತು ರಾಷ್ಟ್ರ ಪ್ರೇಮಗಳ ಪರಂಪರೆಯಲ್ಲಿ ಸೇರಿಕೊಂಡಂತಹ ಒಂದು ಆತ್ಮೀಯ ಸನ್ನಿವೇಶ. ಯುರೋಪ ಅಥವಾ ಚೈನಾದ ಚಿತ್ರಗಳಲ್ಲಿ ಪ್ರಕೃತಿಯು ಕೈಗೆಟುಕದಂಥಹ ಶ್ರೀ ಮದ್ಗಾಂಭೀರ್ಯದಿಂದ ಕೂಡಿರುವಂಥದ್ದು. ಆದರೆ ಭಾರತೀಯ ಚಿತ್ರಗಳಲ್ಲಿ

೧೫೨. ವಿ.ಟಿ. ಕಾಳೆ, ಚಿತ್ರಕಲಾದರ್ಪಣ, ಪು. ೧೩೩

೧೫೩. ಪಿ.ಆರ್. ತಿಪ್ಪೇಸ್ವಾಮಿ, (ಸಂ) ಕಲಾಕೋಶ, ಪು.೩೨೯

ಅದು ಹಾಗಲ್ಲ, ಮಾನವೀಯ ಭಾವನೆಗಳಿಗೆ ಪ್ರತಿಸ್ಪಂದಿಸುವ ರೀತಿಯದು.[೧೫೪] ಎಂಬ ಮಾತು ಭಾರತೀಯ ನಿಸರ್ಗ ಚಿತ್ರಕಲಾವಿದರಿಗೆ ಅನ್ವಯಿಸುವಂತೆ ಕಾಳೆಯವರ ನಿಸರ್ಗ ಕಲಾಕೃತಿಗಳನ್ನು ಕುರಿತು ಕೂಡಾ ಈ ಮಾತು ಹೆಚ್ಚು ಸೂಕ್ತವೆನಿಸುತ್ತದೆ.

ನಿಸರ್ಗ ದೃಶ್ಯಗಳನ್ನು ಯಥಾವತ್ತಾಗಿ ಚಿತ್ರಿಸುವುದು ಸಾಮಾನ್ಯವಾಗಿ ಪಾಶ್ಚಾತ್ಯ ಶೈಲಿಯಲ್ಲಿ ಕಂಡುಬಂದರೆ, ನಿಸರ್ಗದ ಸೌಂದರ್ಯವನ್ನು ಅನುಭವಿಸಿ ಅದರಿಂದುಂಟಾಗುವ ಭಾವತೀವ್ರತೆಗಳನ್ನು ಅಭಿವ್ಯಕ್ತಪಡಿಸುವುದು ಭಾರತೀಯ ಕಲಾಪರಂಪೆಯಾಗಿದೆ. ಭಾರತೀಯ ಕಿರುರೂಪ ಚಿತ್ರಗಳಲ್ಲಿ ಇದಕ್ಕೆ ಸ್ಪಷ್ಟವಾದ ನಿದರ್ಶನ ಕಂಡುಬರುತ್ತದೆ. ಕಾಳೆಯವರ ನಿಸರ್ಗ ಚಿತ್ರ ರಚನಾ ಪದ್ಧತಿಯು ಪಾಶ್ಚಾತ್ಯವಾಗಿದ್ದರೂ ಆ ದೃಶ್ಯವನ್ನು ಅವರು ಅನುಭವಿಸಿ ಚಿತ್ರಿಸುವಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಿಕೊಳ್ಳುವಲ್ಲಿ, ವರ್ಣ ವಿನ್ಯಾಸ ಮಾಡುವಲ್ಲಿ ಆಕಾರಗಳನ್ನು ಪುನರ್ ರೂಪಿಸಿಕೊಂಡು ಸಂಯೋಜನೆಗೊಳಿಸುವಲ್ಲಿ, ಮನಸ್ಸಿನ ತುಡಿತಗಳನ್ನು ಕಲಾಕೃತಿಯಲ್ಲಿ ಬೆಸೆಯುವಲ್ಲಿ ಭಾರತೀಯತೆಯ ಪ್ರಭಾವ ಅವರಲ್ಲಿ ಕಂಡುಬರುತ್ತದೆ.[೧೫೫] ಈ ನಿಟ್ಟಿನಲ್ಲಿ ಕಾಳೆಯವರ ನಿಸರ್ಗ ಕಲಾಕೃತಿಗಳನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದ್ದು ಅವರು ರಚಿಸಿದ ನಿಸರ್ಗ ಕಲಾಕೃತಿಗಳನ್ನು ಒಂದೊಂದಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಕಲಾವಿದ ಅಮೀನ ಸಾಹೇಬ ಕಮಡೋಳಿ ಅವರು ಹೇಳುವಂತೆ ಕಲಾವಿದ ನಿಸರ್ಗ ಚಿತ್ರರಚನೆ ಬರಿಗುಡ್ಡ, ಗಿಡ, ಮೋಡಗಳನ್ನು ಚಿತ್ರಿಸುವುದಲ್ಲ. ಬದಲಾಗಿ ಆಯಾ ಪ್ರದೇಶದ ಪರಿಸರದ ವೈಶಿಷ್ಟ್ಯಗಳನ್ನು ಚಿತ್ರದಲ್ಲಿ ತುಂಬಬೇಕಲ್ಲದೆ ಅದರಲ್ಲಿ ಗಾಳಿ ಸುಳಿದಾಡುವ ಅನುಭವವೂ ಆಗಬೇಕು. ಮಳೆ, ಬಿಸಿಲು, ಮೋಡಕವಿದ ವಾತಾವರಣ ಪ್ರತಿಯೊಂದರ ಅನುಭವವೂ ಚಿತ್ರದಿಂದ ನಮಗಾಗಬೇಕು. ಅಲ್ಲದೇ ನಾವು ಸದ್ಯ ಇರುವ ವಾತಾವರಣವನ್ನು ಮರೆಯುವಂತೆ ಮಾಡಿ ಚಿತ್ರದಲ್ಲಿರುವ ವಾತಾವರಣದೊಡನೆ ಒಂದಾಗುವ ಅನುಭವವನ್ನು ಅವು ತಂದು ಕೊಡಬೇಕು ಎನ್ನುತ್ತಿದ್ದರು.[೧೫೬] ಕಾಳೆಯವರ ನಿಸರ್ಗ ಜಿತ್ರಗಳು ಈ ಮಾತಿಗೆ ಹೊರತಾಗಿಲ್ಲ. ಅವರ ನಿಸರ್ಗ ಚಿತ್ರಗಳಲ್ಲಿ ಈ ತೆರನಾದ ಜೀವಂತಿಕೆಯನ್ನು ಕಾಣಬಹುದು.

೧. ಚಂದ್ರಗಿರಿ ಬೆಟ್ಟದ ಮಹಾದ್ವಾರ ಶ್ರವಣಬೆಳಗೊಳದ ನಿಸರ್ಗ ದೃಶ್ಯ

ಈ ನಿಸರ್ಗ ದೃಶ್ಯ ಜಲವರ್ಣ ಮಾಧ್ಯಮದಿಂದ ರಚಿಸಲಾಗಿದ್ದು ಇಲ್ಲಿ ಕಾಳೆಯವರ ಪ್ರತಿಭೆ, ಕಲಾಪ್ರಜ್ಞೆ ಅನಾವರಣಗೊಂಡಿದೆ ಎನ್ನಬಹುದು. ಅತ್ಯಂತ ಕಡಿಮೆ ಬಣ್ಣದಲ್ಲಿಯೇ

---

೧೫೪. ಕೆ.ಎಸ್. ಶ್ರೀನಿವಾಸಮೂರ್ತಿ, ರುಮಾಲೆ ಚೆನ್ನಬಸವಯ್ಯ, ಪು.೫

೧೫೫. ಡಾ. ಎಸ್.ಸಿ. ಪಾಟೀಲ, ವಿ.ಟಿ. ಕಾಳೆ, ಪು.೪೪

೧೫೬. ಬಿ.ಕೆ. ಹಿರೇಮಠ, ಅಮೀನಸಾಹೇಬ ಕಮಡೋಳಿ, ಪು.೩

ದೃಶ್ಯವನ್ನು ಪರಿಣಾಮಕಾರಿಯಾಗಿ ಮೂಡಿಸಿದ್ದಾರೆ. ಈ ಕಲಾಕೃತಿಯನ್ನು ಗಮನಿಸಿದರೆ ಅತ್ಯಂತ ವೇಗವಾಗಿ ಇದನ್ನು ಪೂರ್ಣಗೊಳಿಸಿರುವುದೆಂದು ಕಂಡುಕೊಳ್ಳಬಹುದು. ಪರಸ್ಪೆಕ್ಟಿವ್ ಜ್ಞಾನ ಇಲ್ಲಿ ಅದ್ಭುತವಾಗಿ ಕೆಲಸಮಾಡಿದೆ.

೨. ಸಂಡೂರಿನ ದೃಶ್ಯಗಳು

ಸಂಡೂರು ನಿಸರ್ಗ ಸೃಷ್ಟಿಸಿದ ರಮಣೀಯ ತಾಣ. ಇದನ್ನು ಕರ್ನಾಟಕದ ಕಾಶ್ಮೀರ ಎಂದು ಕರೆಯುತ್ತಾರೆ. "ಸೀ ಸಂಡೂರ ಇನ್ ಸೆಪ್ಟೆಂಬರ್" ಎಂಬ ಗಾಂಧೀಜಿಯವರ ಹೇಳಿಕೆಯು ಪ್ರಸಿದ್ಧವಾಗಿದೆ. ಅಲ್ಲಿರುವ ಬೃಹತ್ ಪ್ರಮಾಣದ ಬೆಟ್ಟ-ಗುಡ್ಡಗಳು, ಹಳ್ಳ-ತೊರೆಗಳು, ಹಸಿರು, ಪೌರಾಣಿಕ ದೇವಾಲಯಗಳು, ಅಲ್ಲಿರುವ ಮನೆಗಳು, ಈ ಮುಂತಾದ ದೃಶ್ಯಗಳು ಕಲಾವಿದ ಕಾಳೆಯವರಿಗೆ ಸಹಜವಾಗಿಯೆ ತಟ್ಟಿವೆ. ಮತ್ತು ಆ ರಮಣೀಯ ದೃಶ್ಯಗಳನ್ನು ತಮ್ಮ ಅಭಿವ್ಯಕ್ತಿಯಲ್ಲಿ ಮೂಡಿಸುವ ತುಡಿತ ಉಂಟಾಗಿರುವುದು ಸಹಜ. ಕಾಳೆಯವರು ಸುಮಾರು ೩೫-೪೦ ವರ್ಷಗಳಿಂದ ಸಂಡೂರಿನಲ್ಲಿಯೇ ನೆಲೆನಿಂತವರು. ಸಂಡೂರು ಅವರ ಬದುಕಿನ ಒಂದು ಭಾಗವೇ ಆಗಿದೆ. ಅಲ್ಲಿನ ಸುಂದರ ದೃಶ್ಯಗಳ ಪುನರ್ ರೂಪಿಸುವ ತುಡಿತಕ್ಕೊಳಗಾಗಿರುವುದು ಸಹಜವಾಗಿದೆ.

೩. ಸಂಡೂರಿನ ಮನೆಯೊಂದರ ದೃಶ್ಯ I ಮತ್ತು II

ಈ ದೃಶ್ಯದ ಚಿತ್ರಗಳನ್ನು ಕಾಳೆಯವರು ಸಂಡೂರಿಗೆ ಬಂದ ಪ್ರಾರಂಭದಲ್ಲಿ ರಚಿಸಿದಂತಹ ಚಿತ್ರಗಳು. ಆ ಸಂದರ್ಭ ಸಂಡೂರಿನಲ್ಲಿ ನಡೆಯುವ ಗಣಿ ಕೈಗಾರಿಕೆ ಕೆಲಸ ಈಗಿನಷ್ಟು ತೀವ್ರವಾಗಿ ನಡೆದಿರಲಿಲ್ಲ. ಹಚ್ಚ ಹಸಿರಿನ ಗಿಡಗಳು ಜೀವಂತಿಕೆಯಿಂದ ಕಂಗೊಳಿಸುವಂತಹ ಪರಿಸರ ಆಗ ಕಂಡುಬರುತ್ತಿತ್ತು. ಕಾಳೆಯವರು ಆಗಿನ ಪರಿಸರವನ್ನು ತಮ್ಮ ಕಲಾಕೃತಿಯ ಮುಖೇನ ಶಾಶ್ವತ ಗೊಳಿಸಿದ್ದಾರೆ. ಕಾಳೆಯವರು ಸಂಡೂರಿಗೆ ಬಂದಾಗ ಪ್ರಾರಂಭದಲ್ಲಿ ಸಂಡೂರಿನ ಓಣಿಯೊಂದರ ಮನೆಯನ್ನು ಅದ್ಭುತ ನೆರಳು ಬೆಳಕಿನ ಸಂಯೋಜನೆಯಲ್ಲಿ ಹಿಡಿದಿಟ್ಟಿದ್ದಾರೆ. ಇಲ್ಲಿರುವ ವರ್ಣ ಸಂಯೋಜನೆಯಲ್ಲಿ ಜಿಂವತಿಕೆಯಿಂದ ಅತ್ಯಂತ ಹಳೆಯ ಕಾಲದ ಪುಟ್ಟ ಮನೆಯಿದು ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆ ಮನೆಯ ಮುಂದೆ ಹರಿಯುತ್ತಿರುವ ನಾಲೆ, ನೀರಿನ ಬೋರ್‌ವೆಲ್, ಹಳೆಯ ಕಟ್ಟಡ, ಹಿನ್ನೆಲೆಯಲ್ಲಿ ಸಂಡೂರಿನ ಬೆಟ್ಟದ ಸೌಂದರ್ಯವನ್ನು ತಮ್ಮ ಕಲಾಕೃತಿಯ ಮುಖಾಂತರ ಹಿಡಿದಿಟ್ಟಿದ್ದಾರೆ. ಈ ನಿಸರ್ಗ ಚಿತ್ರವನ್ನು ಗಮನಿಸಿದರೆ, ಬೆಳಗಿನ ಸೂರ್ಯ ಹುಟ್ಟಿದ ತುಸುಹೊತ್ತಿನ ನಂತರದ ವಾತಾವರಣ ಎಂದೆನಿಸುತ್ತದೆ. ಹೀಗೆ ನಿರ್ದಿಷ್ಟ ಸಮಯವನ್ನು ಕಾಳೆಯವರು ಸೆರೆಹಿಡಿದಿದ್ದಾರೆ. ಈ ನಿಸರ್ಗ ಕಲಾಕೃತಿಯು ಜಲವರ್ಣದಿಂದ ಮೂಡಿಬಂದಿದೆ.

ಶ್ರೀಕ್ಷೇತ್ರ [illegible] (ಸಂಡೂರು)



ಸಂಡೂರಿನ ಒಂದು ದೃಶ್ಯ





ಸಂಡೂರಿನ ದೃಶ್ಯ



ಗುತ್ತಿ ಕೋಟೆಯ ನಿಸರ್ಗ ದೃಶ್ಯ



ಇನ್ನೊಂದು ದೃಶ್ಯದಲ್ಲಿ ಹಚ್ಚ ಹಸುರಿನಿಂದ ಕೂಡಿದ ಗಿಡ, ಮರಗಳ ಮಧ್ಯದಲ್ಲಿ ಪುಟ್ಟ ಮನೆ, ಹಸುರಿನ ಮಧ್ಯೆಯಿರುವ ಬಿಳಿ ಬಣ್ಣದಲ್ಲಿರುವ ಈ ಮನೆಯ ಸಂಯೋಜನೆ ಪರಿಣಾಮಕಾರಿಯಾಗಿ ಮೂಡಿ ಬಂದಿದೆ. ಇದು ಜಲವರ್ಣದಲ್ಲಿ ರಚಿಸಲಾಗಿದ್ದು, ನೆರಳು ಬೆಳಕನ್ನು ಪರಿಣಾಮಕಾರಿಯಾಗಿ ಮೂಡಿಸುವಲ್ಲಿ ಯಶಸ್ಸನ್ನು ಕಾಣಲಾಗಿದೆ.

ಇನ್ನೊಂದು ಸಂಡೂರಿನ ದೇವಸ್ಥಾನವಾದ ಹರಿಶಂಕರ ದೇವಸ್ಥಾನದ ಆವರಣದ ನಿಸರ್ಗ ಚಿತ್ರವು ತೈಲವರ್ಣದಲ್ಲಿ ರಚಿಸಲಾಗಿದ್ದು ಅತ್ಯಂತ ಮನಮೋಹಕವಾಗಿದೆ. ಹಿನ್ನೆಲೆಯ ಮಂದವಾದ ವರ್ಣದಿಂದ ದೇವಸ್ಥಾನವು ಸ್ಪುಟವಾಗಿ ಎದ್ದುಬಂದಿದೆ. ಕುಂಚದ ಕೈಚಳಕ ಇಲ್ಲಿ ಪ್ರಮುಖವಾಗಿ ಕಂಡುಬರುತ್ತದೆ. ಇದು ೪'x೬' ಅಳತೆಯ ಕೃತಿಯಾಗಿದೆ.

೪. ಗುತ್ತಿಕೋಟೆಯ ನಿಸರ್ಗ ದೃಶ್ಯ

ಆಂಧ್ರ ಪ್ರದೇಶದಲ್ಲಿರುವ ಈ ಗುತ್ತಿಕೋಟೆಯ ಬೃಹತ್ ಪ್ರಮಾಣದ ನಿಸರ್ಗ ಚಿತ್ರವಾಗಿದ್ದು ಕಾಳೆಯವರ ಅದ್ಭುತ ಕಲಾಕೌಶಲ್ಯಕ್ಕೆ, ಕಲಾ ಪ್ರೌಢಿಮೆಗೆ ಸಾಕ್ಷಿಯಾಗಿ ನಿಲ್ಲುತ್ತದೆ. ತೈಲವರ್ಣದಲ್ಲಿ ಮೂಡಿಬಂದ ಈ ಕಲಾಕೃತಿಯು ೮x೧೦ ಅಡಿಯ ಅಳತೆಯನ್ನು ಹೊಂದಿದ್ದು, ಕಾಳೆಯವರ ನಿಸರ್ಗ ಚಿತ್ರಣಗಳಲ್ಲಿಯೇ ಬೃಹತ್ತಾದ ಚಿತ್ರವಾಗಿದ್ದು ಈ ಚಿತ್ರವು ಘೋರ್ಪಡೆಯವರ ನಿವಾಸದ ಅನುರಾಧ ಹಾಲ್‌ನಲ್ಲಿ ತೂಗು ಹಾಕಲ್ಪಟ್ಟಿದೆ. ಕಾಳೆಯವರ ಪುತ್ರನಾದ ಶ್ರೀನಾಥ ಕಾಳೆಯವರು ಹೇಳುವಂತೆ ಈ ನಿಸರ್ಗ ದೃಶ್ಯವನ್ನು ಚಿತ್ರಿಸುವ ಸಂದರ್ಭದಲ್ಲಿ ಕಾಳೆಯವರು ಸ್ವತಃ ಗುತ್ತಿಕೋಟೆಯ ಪರಿಸರದಲ್ಲಿ ನಿಂತು ಅಲ್ಲಿರುವ ದೃಶ್ಯವನ್ನು ಮೊದಲಿಗೆ ಜಲವರ್ಣದಲ್ಲಿ ರಚಿಸಿಕೊಂಡು ಬಂದು ನಂತರ ತೈಲವರ್ಣದಲ್ಲಿ ರಚಿಸಿರುತ್ತಾರೆ. ಈ ಕಲಾಕೃತಿಯನ್ನು ಪೂರ್ಣಗೊಳಿಸಲು ಕಾಳೆಯವರಿಗೆ ಸುಮಾರು ಆರು ತಿಂಗಳು ಬೇಕಾಯಿತು. ಈ ಪರಿಶ್ರಮ, ಕುಶಲತೆ ಮೇಲ್ನೋಟಕ್ಕೆ ಕಂಡುಬರುತ್ತದೆ.

ಈ ನಿಸರ್ಗ ಚಿತ್ರವು ಅತ್ಯಂತ ನೈಜಶೈಲಿಯಲ್ಲಿ ರಚಿಸಲಾಗಿದ್ದು ಅಲ್ಲಿರುವ ಒಂದೊಂದು ಕಲ್ಲನ್ನು ಹುಲ್ಲನ್ನು ಕಾಳೆಯವರ ಕಣ್ಣಿಗೆ ಕಂಡ ಪ್ರತಿಯೊಂದು ವಸ್ತುವನ್ನು ಕೂಡಾ ತಮ್ಮ ಕ್ಯಾನ್ವಾಸಿನಲ್ಲಿ ಯಶಸ್ವಿಯಾಗಿ ಸೆರೆಹಿಡಿದಿದ್ದಾರೆ. ಈ ಗುತ್ತಿಕೋಟೆಯ ದಾರಿಯೊಂದರಲ್ಲಿ ಘೋರ್ಪಡೆಯವರು ಕೈಯಲ್ಲಿ ಕ್ಯಾಮರಾ ಹಿಡಿದುಕೊಂಡು ಬರುವಂತೆ ಸಂಯೋಜಿಸಿರುವುದು ಒಟ್ಟು ಕಲಾಕೃತಿಗೆ ಪೂರಕವಾಗಿ ಮೂಡಿಬಂದಿದ್ದು ಸಂಶೋಧಕನೊಬ್ಬ ಸಂಶೋಧನೆಯಲ್ಲಿ ತೊಡಗಿರುವ ಭಾವ ತಟ್ಟನೆ ಮೂಡುತ್ತದೆ. ಅಲ್ಲದೇ ವೀಕ್ಷಕರಿಗೂ ಕೂಡಾ ಆ ಕಲಾಕೃತಿಯು ಒಳಗೆ ಇಣುಕಿ ನೋಡಿಬಂದಂತಹ ಅನುಭವ ಮೂಡಿದರೆ ಆಶ್ಚರ್ಯವಿಲ್ಲ. ಅಷ್ಟು ನೈಜತೆಯನ್ನು ಕಲಾವಿದ ತರುವಲ್ಲಿ ಕಲಾವಿದರು ಯಶಸ್ವಿಯಾಗಿದ್ದಾರೆ.


ಅತ್ಯಂತ ಕಡಿಮೆ ವರ್ಣದಲ್ಲಿಯೇ ಇಡೀ ಚಿತ್ರದ ಪರಿಣಾಮವನ್ನು ಕಟ್ಟಿಕೊಟ್ಟಿದ್ದಾರೆ. ಮಾನೋ ಕಲರ್ ಎಂದು ಕರೆಯಲ್ಪಡುವ ಹೆಚ್ಚು ಕಡಿಮೆ ಒಂದೇ ವರ್ಣದಲ್ಲಿಯೇ ನೆರಳು ಬೆಳಕನ್ನು ಮೂಡಿಸಿ ಇಡೀ ದೃಶ್ಯವನ್ನು ಹಿಡಿದಿಟ್ಟಿರುವುದು ಕಾಳೆಯವರ ನಿಸರ್ಗ ಚಿತ್ರಣದ ವಿಶೇಷತೆ ಕೂಡ ಆಗಿದೆ.

ಹಂಪೆಯ ಐತಿಹಾಸಿಕ ಕಟ್ಟಡಗಳು ದೃಶ್ಯಗಳು

ಕಾಳೆಯವರು ತಮ್ಮ ಬದುಕಿನಲ್ಲಿ ಹಂಪೆಗೆ ಅನೇಕ ಬಾರಿ ವಿವಿಧ ಸಂದರ್ಭದಲ್ಲಿ ಭೇಟಿ ಕೊಟ್ಟಿದ್ದಾರೆ. ಹಂಪೆಯ ವಿಭಿನ್ನ ಐತಿಹಾಸಿಕ ಹಾಳುಬಿದ್ದ ಕಟ್ಟಡಗಳು ಅವರನ್ನು ಆಕರ್ಷಿಸಿವೆ. ಕಲಾವಿದನಿಗೆ ಈ ಆಕರ್ಷಣೆ ಸಹಜ. ಅಂತೆಯೇ ಕಾಳೆಯವರ ವಿವಿಧ ಕಟ್ಟಡಗಳ ತಮ್ಮ ಬೃಹತ್ ಪ್ರಮಾಣದ ಕ್ಯಾನ್ವಾಸಿನ ಅವಕಾಶದಲ್ಲಿ ತೈಲವರ್ಣದಲ್ಲಿ ರಚಿಸಿದ ಕಲಾಕೃತಿಗಳು ಕಾಣಸಿಗುತ್ತವೆ. ಅವುಗಳಲ್ಲಿ ಮುಖ್ಯವಾಗಿ ಕಲ್ಲಿನ ತೇರು, ಕಮಲಮಹಲು, ವಾಚ್‌ಟವರ್, ಜೈನಬಸದಿ ಮುಂತಾದವುಗಳನ್ನು ಕಾಣಬಹುದು.

ಕಾಳೆಯವರ ಈ ಎಲ್ಲ ಹಂಪೆಯ ದೃಶ್ಯಗಳಲ್ಲಿ ಯಥಾವತ್ತತೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. ಒಂದು ಫೋಟೋ ಗ್ರಾಫಿಯು ಮೂಡಿಸುವ ತದ್ರೂಪತನ ಈ ಎಲ್ಲಾ ಕಲಾಕೃತಿ ಗಳಲ್ಲಿ ಕಂಡು ಬರುತ್ತದೆ. ಆದರೂ, ಛಾಯಾಚಿತ್ರಗಳನ್ನು ಮೂಡಿಸುವ ಪರಿಣಾಮವೇ ಬೇರೆ, ಕುಂಚದಿಂದ ಬಣ್ಣಗಳನ್ನು, ಲೇಪಿಸಿ ಕೃತಿ ರಚಿಸಿದಾಗ ಸಿಗುವ ಪರಿಣಾಮವೆ ಬೇರೆ. ಕಲಾವಿದನ ಕುಂಚದಿಂದ ಮೂಡಿಬಂದ ದೃಶ್ಯವೊಂದು ಅತ್ಯಂತ ಅಮಿತಾನಂದದಿಂದ ಕೂಡಿರುತ್ತದೆ. ಜನಸಾಮಾನ್ಯರಿಗೆ ಈ ಕಲಾಕೃತಿಗಳು ತುಂಬಾ ಹತ್ತಿರವಾಗಿವೆ ಎನ್ನಬಹುದು. ಎಷ್ಟೋ ಜನ ಈ ಕಲಾಕೃತಿಗಳನ್ನು ಕಂಡು "ಒಬ್ಬ ಕಲಾವಿದ ಇಷ್ಟೊಂದು ನೈಜತೆ ತರಲು ಹೇಗೆ ಸಾಧ್ಯ!" ಎಂಬ ಉದ್ಗಾರ ಹೊರಡಿಸಿರುವುದುಂಟು.

ನನ್ನ ಅಧ್ಯಯನದ ಅವಧಿಯಲ್ಲಿ ಕಂಡಿರುತ್ತೇನೆ. ಕಾಳೆಯವರ ಇನ್ನೊಂದು ವಿಶೇಷತೆ ಯೆಂದರೆ ಆಯಾ ಕಟ್ಟಡಗಳ ಎದುರಿನಲ್ಲಿಯೇ ಕುಳಿತು ಕ್ಯಾನ್ವಾಸಿನಲ್ಲಿ ತೈಲವರ್ಣದಲ್ಲಿ ಆ ದೃಶ್ಯದ ಯಥಾವತ್ತತೆಯನ್ನು ತರಲು ಶ್ರಮಿಸುತ್ತಾರೆ. ಅಲ್ಲದೇ ಯಶಸ್ವಿ ಕೂಡ ಆಗುತ್ತಾರೆ. ತೈಲವರ್ಣದಲ್ಲಿ ಒಂದು ಕಲಾಕೃತಿಯನ್ನು ಪೂರ್ಣಗೊಳಿಸಲು ತುಂಬಾ ಸಮಯ ಬೇಕಾಗುತ್ತದೆ. ಅದು ಎಷ್ಟೇ ದಿನಗಳಾದರೂ ಕಾಳೆಯವರು. ಆ ಕಲಾಕೃತಿ ಪೂರ್ಣಗೊಳ್ಳುವವರೆಗೂ, ಆ ಸ್ಥಳ ದಲ್ಲಿಯೇ ಕುಳಿತು ಆ ಲ್ಯಾಂಡ್‌ಸ್ಕೇಪ್‌ನ್ನು ಪೂರ್ಣಗೊಳಿಸಿರುವುದನ್ನು ನನ್ನ ಅಧ್ಯಯನದ ಅವಧಿಯಲ್ಲಿ ಕಂಡಿರುತ್ತೇನೆ. ಹೀಗೆ ಕಲಾಕೃತಿಯೊಂದನ್ನು ಪೂರ್ಣಗೊಳಿಸುವಲ್ಲಿ ಅವರ ಪರಿಶ್ರಮ



ಹಂಪಿಯ ಕಮಲ ಮಹಲ



ಹಂಪಿಯ ಕಲ್ಲಿನ ರಥ










ಹಂಪಿಯ ದೃಶ್ಯಗಳು





ವಾಚ್ ಟವರ್, ಹಂಪಿ



ಮಡಿಕೇರಿ ಒಂದು ದೃಶ್ಯ

ಮತ್ತು ತಾವು ಅಂದುಕೊಂಡಂತೆ ಆಗುವವರೆಗೂ ಅದನ್ನು ಬಿಡದ ಹಟ, ಮಾಡಿಯೇ ತಿರುತ್ತೇನೆ ಎಂಬ ಛಲ. ಅವರ ಪ್ರತಿಯೊಂದು ಕಲಾಕೃತಿಯಲ್ಲಿಯೂ ಕಂಡು ಬರುತ್ತದೆ. ಹೀಗಾಗಿ ಅವರೊಬ್ಬ ಅಪಾರ ಪರಿಶ್ರಮ ಜೀವಿ. ಆ ಪರಿಶ್ರಮದಲ್ಲಿಯೇ ಅವರು ವಿರಾಮವನ್ನು ಕಾಣುವಂತಹ ವ್ಯಕ್ತಿತ್ವ ಅವರದು.

ಕಾಳೆಯವರ ಪ್ರಕೃತಿ ಚಿತ್ರಗಳಲ್ಲಿ ಹೆಚ್ಚಾಗಿ ತೈಲವರ್ಣದಲ್ಲಿ ರಚಿಸಿದ ಪ್ರಕೃತಿ ಚಿತ್ರಗಳು ಪಾಶ್ಚಾತ್ಯ ಶೈಲಿಯಲ್ಲಿ ಕಂಡು ಬಂದರೆ ಜಲವರ್ಣದಿಂದ ರಚಿಸಿದ ಪ್ರಕೃತಿ ಚಿತ್ರಗಳು ಭಾರತೀಯ ಶೈಲಿಯೆಂದು ಕರೆಯಬಹುದು.

ಗೋವಾದ ನಿಸರ್ಗ ದೃಶ್ಯಗಳು

ಕಾಳೆಯವರು ಗೋವಾ ರಾಜ್ಯಕ್ಕೆ ಅನೇಕ ಸಲ ಭೇಟಿಕೊಟ್ಟಿದ್ದು, ಅಲ್ಲಿನ ನಿಸರ್ಗ ಸೌಂದರ್ಯದ ರಮ್ಯ ತಾಣಗಳು ಅತ್ಯಂತ ತೀವ್ರವಾಗಿ ಕಾಳೆಯವರ ಮನಸ್ಸನ್ನು ಆಕರ್ಷಿಸಿದೆ ಎನ್ನಬಹುದು. ಗೋವಾ ಎಂದರೆ ಅದು ಸಮುದ್ರಗಳ ನಾಡು. ಅಲ್ಲಲ್ಲಿ, ಸಮುದ್ರ ತೀರಗಳು, ಸಹಜವಾಗಿಯೇ ಎಲ್ಲರ ಮನಸ್ಸನ್ನು ಸೆರೆ ಹಿಡಿದಿರುತ್ತವೆ. ಕೆಲವರಿಗೆ ಇದು ವಿಭಿನ್ನವಾಗಿಯೇ ಪರಿಣಾಮವನ್ನು ಮೂಡಿಸುತ್ತದೆ. ಈ ದೃಶ್ಯಗಳನ್ನು ತಮ್ಮ ಅಭಿವ್ಯಕ್ತಿಯಲ್ಲಿ ಸೆರೆಹಿಡಿಯಬೇಕೆಂಬ ತುಡಿತವೇ ಕಾಳೆಯವರಿಗೆ ಈ ದೃಶ್ಯಗಳನ್ನು ರಚಿಸಲು ಪ್ರೇರಣೆಯಾಗಿದೆ. ಕಾಳೆಯವರು ಅಲ್ಲಿನ ಸಮುದ್ರ ತೀರದ ಅನೇಕ ದೃಶ್ಯಗಳನ್ನು, ತೀರದಲ್ಲಿರುವ ಕಟ್ಟಡಗಳನ್ನು ಮನೋಜ್ಞವಾಗಿ ಸೆರೆ ಹಿಡಿದಿಟ್ಟಿದ್ದಾರೆ. ಹಾಫ್ ಇಂಪೀರಿಯಲ್ ಅಳತೆಯಲ್ಲಿರುವ ಈ ಕೆಲ ಕೃತಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಜಲವರ್ಣದಿಂದ ರಚಿಸಲಾಗಿದೆ. ಅತ್ಯಂತ ವೇಗವಾಗಿ ರಚಿಸಿದಂತೆ ಕಂಡುಬರುವ ಈ ನಿಸರ್ಗ ಕೃತಿಗಳನ್ನು ನೋಡಿದಾಗ ಇಲ್ಲಿ ಅತ್ಯಂತ ವೇಗವಾದ ಕುಂಚಗಳ ಬೀಸು ಕಂಡು ಬರುತ್ತವೆ ಮತ್ತು ಅಷ್ಟೇ ಪರಿಣಾಮಕಾರಿಯಾಗಿವೆ. ಪ್ರಮುಖವಾದ ದೃಶ್ಯವನ್ನು ಮುಖ್ಯವಾಗಿ ತೋರಿಸಿ ದೂರದ ದೃಶ್ಯವನ್ನು ಮಂಜು ಮಂಜಾಗಿ ತೋರಿಸಿ ವಿಶಿಷ್ಟ ಪರಿಣಾಮವನ್ನುಂಟು ಮಾಡಿದ್ದಾರೆ. ಇದು ಜಲವರ್ಣದ ವಿಶೇಷತೆಯಾದರೆ, ತೈಲವರ್ಣದ ನಿಸರ್ಗ ಕಲಾಕೃತಿಗಳಲ್ಲಿ ವಿವರಣೆ ಹೆಚ್ಚಾಗಿ ಕಂಡುಬರುತ್ತಿದ್ದು ಛಾಯಾಚಿತ್ರಣದ ಪರಿಣಾಮ ಬೀರಿದೆ.

ಮಡಿಕೇರಿಯ ನಿಸರ್ಗ ದೃಶ್ಯಗಳು

ಹಚ್ಚಹಸುರಿನಿಂದ ಕೂಡಿದ ನಿಸರ್ಗ ರಮಣೀಯ ತಾಣಗಳು ನಿಸರ್ಗ ಕೃತಿಗಳ ರಚಿಸುವಲ್ಲಿ ಕಾಳೆಯವರ ಮೆಚ್ಚಿನ ಆಯ್ಕೆ ಎಂಬುವುದು ಅವರ ನಿಸರ್ಗ ಕಲಾಕೃತಿಗಳಿಂದ ಕಂಡುಕೊಳ್ಳಬಹುದು. ಇದಕ್ಕೆ ಅತ್ಯುತ್ತಮ ಉದಾಹರಣೆಯೆಂದರೆ ಕಾಳೆಯವರು ರಚಿಸಿದ ಮಡಿಕೇರಿಯ ನಿಸರ್ಗದೃಶ್ಯ. ಹಚ್ಚಹಸುರಿನಿಂದ ಕಂಗೊಳಿಸುವ ನಿಸರ್ಗದ ಮಧ್ಯೆ ಅಲ್ಲಲ್ಲಿ ನಿರ್ಮಾಣಗೊಂಡಿರುವ ಕೆಂಪು



ಗೋವಾದ ಒಂದು ದೃಶ್ಯ



ಅಗೋಡಾ ಕೋಟೆ (ಗೋವಾ)









ಗೋವಾದ ದೃಶ್ಯಗಳು





ಗೋವಾದ ಒಂದು ದೃಶ್ಯ



ಓಲ್ಡ್ ಗೋವಾ



ಗೋವಾದ ದೃಶ್ಯಗಳು





ತಮಿಳನಾಡಿನ ನಿಸರ್ಗಚಿತ್ರಗಳು





ಶ್ರವಣ ಬೆಳಗೊಳ (ಚಂದ್ರಗಿರಿ)



ಶ್ರವಣ ಬೆಳಗೊಳ ಮಾನಸ್ತಂಭ



ಹಂಚಿನ ಮನೆಗಳು, ದೂರಕ್ಕೆ ಹೋದಂತೆ ಬೆಟ್ಟಗಳು, ಆಕಾಶ ಮತ್ತು ಭೂಮಿ ಒಂದಾದಂತೆ ಕಾಣುವ ಸಂದರ್ಭದಲ್ಲಿ ಮಂಜು ಮಂಜಾದಂತೆಯಿರುವ ಬೆಟ್ಟಗಳು ಇವು ಎಲ್ಲಾ ಅಂಶಗಳು ನಿಸರ್ಗ ದೃಶ್ಯದಲ್ಲಿ ಅತ್ಯಂತ ಮಾರ್ಮಿಕವಾಗಿ ಮೂಡಿಬಂದಿವೆ. ತುಂಬಾ ವೇಗದಲ್ಲಿ ಮಾಡಿ ಮುಗಿಸಿದಂತೆ ಕಂಡುಬರುವ ಈ ಕಲಾಕೃತಿಯು ಜಲವರ್ಣದಿಂದ ಕೂಡಿದ್ದು, ಅಲ್ಲಲ್ಲಿ ವಿಶೇಷ ಪರಿಣಾಮವನ್ನುಂಟು ಮಾಡುವ ಸಲುವಾಗಿ ಮಿಶ್ರವರ್ಣದ ಲೇಪನ ಕಂಡುಬರುತ್ತದೆ.

ತಮಿಳುನಾಡಿನ ನಿಸರ್ಗ ದೃಶ್ಯಗಳು

ಕಾಲೆಯವರು ತಮಿಳುನಾಡಿನ ಅನೇಕ ನಿಸರ್ಗದೃಶ್ಯಗಳನ್ನು ಚಿತ್ರಿಸಿದ್ದು, ಈ ನಿಸರ್ಗ ದೃಶ್ಯಗಳನ್ನು ಜಲವರ್ಣದಲ್ಲಿ ರಚಿಸಲಾಗಿದ್ದು, ಕೆಲವು ಮಿಶ್ರವರ್ಣಗಳನ್ನು ಇಲ್ಲಿಯೂ ಸಹ ಉಪಯೋಗಿಸಲಾಗಿದೆ. ಮಿಶ್ರವರ್ಣಗಳಲ್ಲಿ ಪ್ರಕೃತಿ ದೃಶ್ಯಗಳನ್ನು ಸೆರೆಹಿಡಿಯುವುದು ಕಾಳೆಯವರ ವಿಶೇಷತೆ ಎಂದು ಹೇಳಬಹುದು. ಈ ಎಲ್ಲಾ ನಿಸರ್ಗ ಚಿತ್ರಗಳು ಹಾಫ್ ಇಂಪೀರಿಯಲ್ ಅಳತೆಯಲ್ಲಿವೆ.

ಈ ಎಲ್ಲ ವರ್ಣಕಲಾಕೃತಿಗಳು ವಿವಿಧ ವಸ್ತು ವಿಷಯಗಳನ್ನೊಳಗೊಂಡ, ವಿವಿಧ ಅವಕಾಶದಲ್ಲಿ ವಿವಿಧ ಮಾಧ್ಯಮದಲ್ಲಿ ಪರಿಣಾಮಕಾರಿಯಾಗಿ ಮೂಡಿಬಂದಿದ್ದು, ನಾಡಿನ ಕಲಾಕ್ಷೇತ್ರಕ್ಕೆ ಅಪೂರ್ವವಾದ ಕಾಣಿಕೆಯಾಗಿವೆ. ಅಲ್ಲದೇ ನಾಡಿನ ಕಲಾ ಶ್ರೀಮಂತಿಕೆಯನ್ನು ಹೆಚ್ಚಿಸಿವೆ. ಕಾಳೆಯವರು ರಚಿಸಿದ ವರ್ಣಚಿತ್ರಗಳು ಸಾವಿರಾರು. ಅಧ್ಯಯನದ ಅವಧಿಯಲ್ಲಿ ಸಿಕ್ಕ ಕಲಾಕೃತಿಗಳನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಿ ಒಟ್ಟು ಅವರ ಕಲಾಕೃತಿಗಳನ್ನು ಒಂದೆಡೆ ಹಿಡಿದಿಡುವ ಸಮಗ್ರ ಅಧ್ಯಯನ ಮಾಡುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಅಧ್ಯಾಯ ೫

ವಿ.ಟಿ. ಕಾಳೆಯವರ ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿ

ಅಧ್ಯಾಯ ಐದು

ವಿ.ಟಿ. ಕಾಳೆಯವರ ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿ

"ಭಾರತೀಯ ಕಲೆ ಸ್ವರ್ಗದತ್ತ ಸಾಗುವ ಸಾಧನ". ಐಹಿಕ ಬದುಕಿಗೆ ಆದ್ಯತೆ ನೀಡಿದ ಪಾಶ್ಚಾತ್ಯ ಕಲಾ ಸಂಪ್ರದಾಯ ಮತ್ತು ಆ ನಾಡಿನಿಂದ ಬಂದ ಕಲಾವಿದ ಹಾಗೂ ಕಲಾ ವಿಮರ್ಶಕ ಪ್ರೊ. ಈ.ಬಿ. ಹ್ಯಾವೆಲ್ ಅವರು. ಭಾರತೀಯ ಕಲೆಯನ್ನು ಕಂಡು ಸಂತೋಷದಿಂದ ತೆಗೆದ ಉದ್ಗಾರವಿದು. ವಿದೇಶಿಯರಾದರೂ ಹ್ಯಾವೆಲ್ ಭಾರತೀಯರ ಉನ್ನತ ಜೀವನ ಸಂಸ್ಕೃತಿ ಮತ್ತು ದರ್ಶನ ಇಲ್ಲಿಯ ಕಲಾ ಪ್ರಕಾರಗಳಲ್ಲಿ ಹಾಸುಹೊಕ್ಕಾಗಿರುವುದನ್ನು ಕಂಡು ದಂಗಾದ, ಮೆಚ್ಚಿದ, ಅದರತ್ತ ಆಸಕ್ತಿ ತಾಳಿದ, ಅದರ ಪುನರುತ್ಥಾನಕ್ಕಾಗಿ ಪರಿಶ್ರಮಿಸಿದ. ಭಾರತೀಯರು ನಿಸರ್ಗದ ನಿಗೂಢತೆಯಲ್ಲೂ ಅದರ ಅದ್ಭುತ ಸೌಂದರ್ಯದಲ್ಲೂ ಬದುಕಿನ ಗಾಢತೆಯನ್ನು ಶಿವ ಚೈತನ್ಯವನ್ನು ಕಂಡರು. ಆ ಶಕ್ತಿಯನ್ನು ಕುರಿತು ಚಿಂತಿಸಿದರು, ಪ್ರೀತಿಸಿದರು, ಆರಾಧಿಸಿದರು, ಅದರಲ್ಲೇ ಪರಮಶಾಂತಿಯನ್ನು ಕಂಡುಕೊಂಡರು. ಕೊನೆಗೆ ಜೀವನ್ಮುಕ್ತಿಯ ಸಾಧನವನ್ನಾಗಿಸಿ ಕೊಂಡರು. ಈ ಹಿನ್ನೆಲೆಯಲ್ಲಿ ಮೈದಾಳಿದ ಇಲ್ಲಿಯ ಕಲಾ ಪ್ರಕಾರಗಳ ಪರಮಗುರಿ ಮುಕ್ತಿಯಾದರೆ ಅದಕ್ಕೆ ತಳಹದಿ ಧರ್ಮ. ಹೀಗಾಗಿ ಭಾರತೀಯ ಕಲೆಗೆ ತನ್ನದೇ ಆದ ವೈಶಿಷ್ಟ್ಯತೆಯಿದೆ, ಚೆಲುವಿದೆ, ಚೈತನ್ಯವಿದೆ, ಉನ್ನತ ಬದುಕಿನ ಮಾರ್ಗಸೂಚಿ ಇದೆ. ಈ ಎಲ್ಲಾ ತತ್ವಗಳು ಇಲ್ಲಿಯ ಸಾಹಿತ್ಯದಲ್ಲಿ ಸ್ಫುರಣಗೊಂಡಿವೆ. ಶಿಲೆಯಲ್ಲಿ ಅರಳಿ ನಿಂತಿವೆ. ಶಬ್ದದಲ್ಲಿ ಪಾಡನ ಗೊಂಡಿವೆ, ಸಂಗೀತದಲ್ಲಿ ಸುಶ್ರಾವ್ಯವಾಗಿ ಆಲಾಪನೆಯಲ್ಲಿ ಅಲೆ ಅಲೆಯಾಗಿ ಅನುಕರಣಗೊಂಡಿವೆ.

ಕುಂಚದಲ್ಲಿ ಕುಡಿಯೊಡೆದಿವೆ. ಇಲ್ಲಿಯ ಎಲ್ಲ ಕಲೆಗಳ ಆಳಕ್ಕಿಳಿದು ನೋಡಿದಾಗ ನಮಗೆ ದಕ್ಕುವುದು ದೈವಿ ಸಮರ್ಪಣೆ ಹಾಗೂ ಜೀವನೋನ್ನತಿ. ಹೀಗಾಗಿ ಆಯಾ ಭೂಪ್ರದೇಶ ಪರಿಸರಕ್ಕೆ ಅನುಸಾರವಾಗಿ ಮೈದಾಳಿದ ಇಲ್ಲಿಯ ಎಲ್ಲ ಕಲೆಗಳಲ್ಲಿರುವ ಏಕಸೂತ್ರ ಸತ್ಯಂ ಶಿವಂ ಸುಂದರಂ ಎಂಬ ದಾರ್ಶನಿಕ ತತ್ವ.[೧] ಈ ನಿಟ್ಟಿನಲ್ಲಿ ಕಾಳೆಯವರ ವಾಷ್‌ತಂತ್ರದಲ್ಲಿ ಮೂಡಿಬಂದ ಕಲಾಕೃತಿ ಮತ್ತು ಸಾಂಪ್ರದಾಯಿಕ ವಿಷಯ ವಸ್ತುವನ್ನು ಹೊಂದಿರುವ ಕಲಾಕೃತಿಗಳು ಭಾರತೀಯ ಅಂಶಗಳನ್ನು ಹೊಂದಿ ಮೈದಾಳಿ ಮೂಡಿಬಂದಿದ್ದು, ಈ ಮೇಲಿನ ಹೇಳಿಕೆಯು ಕಾಳೆಯವರ ಕಲಾಕೃತಿಗಳಿಗೆ ಹೆಚ್ಚು ಸಮರ್ಪಕವಾಗಿದೆ.

ಸಾಮಾನ್ಯವಾಗಿ ಎಲ್ಲಾ ಕಲಾವಿದರು ಇತರ ಕಲಾವಿದರಿಂದ ಮತ್ತು ಘಟನೆಗಳಿಂದ ಅಲ್ಲದೇ ತಮ್ಮ ಸುತ್ತಮುತ್ತಲಿನ ಸಂಸ್ಕೃತಿಯಿಂದ ಪರಿಸರದಿಂದ ಪ್ರಭಾವಕ್ಕೆ ಒಳಗಾಗಿರುತ್ತಾರಾದರೂ ಕಲಾಕೃತಿಗಳನ್ನು ರಚಿಸುವುದರಲ್ಲಿ ತಮ್ಮದೇ ಆದ ತಂತ್ರ, ಶೈಲಿಯನ್ನು ಸಹ ಹೊಂದಿರುತ್ತಾರೆ. ಈ ಮಾತಿಗೆ ಕಾಳೆಯವರು ಕೂಡಾ ಹೊರತಾಗಿಲ್ಲ. ಕಾಳೆಯವರು ಬಂಗಾಲಿ ಕಲಾಶೈಲಿಯಿಂದ ಹೆಚ್ಚು ಪ್ರಭಾವಿತರಾಗಿರುವುದು, ಅವರ ಸಂಯೋಜನಾ ಕಲಾಕೃತಿಗಳಿಂದ ಕಂಡುಬರುತ್ತದೆ. ರೇಖಾ ಪ್ರಧಾನವಾದ ಭಾರತೀಯ ಕಲಾಶೈಲಿಯನ್ನು ಅವರು ಹೆಚ್ಚು ಇಷ್ಟಪಡುವ ಕಲಾವಿದರು. ಅಲ್ಲದೇ ಕಾಳೆಯವರ ಕಲಾಕೃತಿಗಳಲ್ಲಿ ಈ ಅಂಶ ಹೆಚ್ಚು ಪ್ರಖರವಾಗಿ ಕಂಡುಬರುತ್ತದೆ. ಬಂಗಾಳಿ ಕಲಾವಿದರುಗಳಾದ ಅಬ್ದುಲ್ ರೆಹಮಾನ್ ಚುಗ್ತಾಯಿ, ಕ್ಷಿತೀಂದ್ರನಾಥ ಮಜುಂದಾರ ಇವರುಗಳ ಕಲಾಕೃತಿಗಳನ್ನು ಹೆಚ್ಚು ಇಷ್ಟಪಡುವರೆಂಬುದು ಇವರ ರಾಗಮಾಲಾ ಕಲಾಕೃತಿಗಳನ್ನು ಮತ್ತು ಇತರ ಸರಣಿ ಕಲಾಕೃತಿಗಳನ್ನು ಗಮನಿಸಿದಾಗ ಈ ಅಂಶ ಸ್ಪಷ್ಟವಾಗಿ ಕಂಡುಬರುತ್ತದೆ. ಬಂಗಾಲಿ ಕಲಾವಿದರುಗಳ ಕಲಾಕೃತಿಗಳ ಜೀವನಾಡಿಯಾದ ವಾಷ್‌ತಂತ್ರವನ್ನು ಮತ್ತು ಎರಡು ಆಯಾಮಗಳ ಚಿತ್ರವನ್ನು ಬಂಗಾಲಿ ಕಲಾಶೈಲಿಯೆಂದೇ ಗುರುತಿಸಲಾಗುತ್ತದೆ. ಈ ಅಂಶವನ್ನು ಕಾಳೆಯವರು ತಮ್ಮ ಕಲಾಕೃತಿಗಳ ಜೀವನಾಡಿಯನ್ನಾಗಿ ಮಾರ್ಪಡಿಸಿದ್ದಾರೆ. ಕಾಳೆಯವರ ಸಂಯೋಜನಾ ಕಲಾಕೃತಿಗಳಲ್ಲಿ ಭಾರತೀಯತೆ ಕಂಡುಬಂದರೆ, ಅವರ ನಿಸರ್ಗಚಿತ್ರ ಮತ್ತು ಭಾವಚಿತ್ರಗಳ ಮೇಲೆ ಹೆಚ್ಚಾಗಿ ಪಾಶ್ಚಾತ್ಯ ಪ್ರಭಾವ ಕಂಡುಬರುತ್ತದೆ.

ಕಲಾವಿದರಾಗಿ ಕಾಳೆ ಅವರು ಭಾರತೀಯ ಪಾರಂಪರಿಕ ಶೈಲಿಯ ಚಿತ್ರಕಲೆಯನ್ನು ಮುಂದುವರಿಸಿಕೊಂಡು ಬರುವುದರೊಂದಿಗೆ ಹೊಸತನವನ್ನು ಕಲಾಕೃತಿಗಳಲ್ಲಿ ಬಿಂಬಿಸಿದ್ದಾರೆ. ಅವರ ಕಲಾಕೃತಿಗಳಲ್ಲಿನ ಸೂಕ್ಷ್ಮ ರೇಖಾವಿನ್ಯಾಸ ಮತ್ತು ಬಣ್ಣಗಾರಿಕೆಯಲ್ಲಿನ ಪ್ರಬುದ್ಧತೆ, ಹದಗಾರಿಕೆ,

---

೧. ಡಿ.ಎಸ್. ಅಕ್ಕಿ, ಎಂ.ಟಿ. ಭೂಪತಿ, ಪು.೧

ಆಶ್ಚರ್ಯ ಮತ್ತು ಸಂತೋಷಗಳನ್ನು ನೀಡುತ್ತವೆ[2] ಎಂದು ಡಾ. ಶಿವಾನಂದ ಬಂಟನೂರು ಅವರು ಕಾಳೆಯವರ ಕಲಾಕೃತಿಗಳ ಕುರಿತು ಹೇಳಿದ್ದಾರೆ.

ಕಾಳೆಯರ ಕಲಾಕೃತಿಗಳು ಭಾರತೀಯ ವಿಷಯವಸ್ತುವುಳ್ಳ ಕಲಾ ಪದ್ಧತಿಯಲ್ಲಿಯೇ ಮೂಡಿ ಬಂದಿದ್ದರೂ, ಅವರ ಭಾವಚಿತ್ರಗಳಲ್ಲಿ ಪಾಶ್ಚಾತ್ಯ ಪ್ರಭಾವ ಕಂಡುಬರುತ್ತದೆ ಎಂಬ ಮಾತಿಗೆ ಕಾಳೆಯವರು ಈ ರೀತಿ ಹೇಳುತ್ತಾರೆ. “ಮೊದಲಿಗೆ ನಮ್ಮ ಭಾರತದಲ್ಲಿ ಭಾವಚಿತ್ರ ಮಾಡುವ ಪದ್ಧತಿನೇ ಇರಲಿಲ್ಲ. ಭಾವಚಿತ್ರ ರಚನೆ ಪ್ರಾರಂಭವಾಗಿದ್ದು ಭಾರತಕ್ಕೆ ಬ್ರಿಟಿಷರು ಬಂದು ಕಲಾಶಾಲೆಗಳನ್ನು ಆರಂಭಿಸಿದ ನಂತರವೇ. ಮುಂಬಿಯಿಯ ಜೆ.ಜೆ. ಸ್ಕೂಲಿನಲ್ಲಿ ಭಾವಚಿತ್ರ ಕುರಿತು ಒಂದು ವಿಷಯವಿತ್ತು. ಅಲ್ಲಿ ಬ್ರಿಟಿಷ ಪದ್ಧತಿಯಲ್ಲಿಯೇ ಕಲಿಸುತ್ತಿದ್ದರು. ಅಲ್ಲಿ ಕಲಿತು ಬಂದ ಯಾರೇ ಕಲಾವಿದರು ಭಾವಚಿತ್ರಗಳನ್ನು ತುಂಬಾ ಚೆನ್ನಾಗಿ ಮಾಡುತ್ತಾರೆ. ಉದಾಹರಣೆಗೆ ವಿಜಯ ಸಿಂಧೂರ, ಮಿಣಜಗಿ, ಹಾಲಭಾವಿ, ಆರ್.ಎಂ. ಹಡಪದ, ಎಂ.ಬಿ. ಪಾಟೀಲ ಹೀಗಾಗಿ ಯಾವುದೇ ಕಲಾವಿದರ ಭಾವಚಿತ್ರಗಳ ಮೇಲೆ ಪಾಶ್ಚಾತ್ಯ ಪ್ರಭಾವ ಸ್ವಾಭಾವಿಕ”[3] ಎನ್ನುವ ಕಾಳೆಯವರು ಸಹ ಜೆ.ಜೆ. ಕಲಾಶಾಲೆಯ ಪದ್ಧತಿಯಲ್ಲಿಯೇ ಕಲಿತಿರುವುದರ ಪರಿಣಾಮವಾಗಿ ಆ ಶಾಲೆಯ ಪ್ರಭಾವ ಇವರ ಭಾವಚಿತ್ರಗಳ ಮೇಲೆ ಸಾಕಷ್ಟು ಪರಿಣಾಮವನ್ನುಂಟು ಮಾಡಿದೆ.

ಕಾಳೆಯವರ ನಿಸರ್ಗಚಿತ್ರಗಳು ಮತ್ತು ಭಾವಚಿತ್ರಗಳಲ್ಲಿ ಹೆಚ್ಚಾಗಿ ಕಂಡುಬರುವುದು ಸೂಕ್ಷ್ಮವಾದ ವಿವರಣೆ. ಕಣ್ಣೆದುರಿಗೆ ಕಾಣುವ ಇಂಚು ಇಂಚಿಗೂ ಅವರು ಅಷ್ಟೇ ಪ್ರಾಮುಖ್ಯತೆ ಕೊಡುವುದು ಅವರ ಸ್ವಭಾವ. ಕಾಳೆಯವರ ಸಮಕಾಲೀನ ಕಲಾವಿದರಾದ ಆರ್.ಎಂ. ಹಡಪದ ದೃಶ್ಯದ ವಿವರಗಳನ್ನು ಅವರು ಬಿಡಿಸಲು ಹೋಗುವುದಿಲ್ಲ. ಸರಳೀಕರಣ, ಕನಿಷ್ಟ ರೇಖೆಗಳಿಗೆ ಇಳಿಸುವುದು. ಅಮೂರ್ತತೆಯತ್ತವಾಲುವುದು ಬಿರುಸುಗಾರಿಕೆ, ಅವರ ರೀತಿ. ಇದಕ್ಕೆ ತದ್ವಿರುದ್ಧವಾದ ಪದ್ಧತಿ ಕಾಳೆಯವರ ನಿಸರ್ಗ ಮತ್ತು ಭಾವಚಿತ್ರಗಳಲ್ಲಿ ಕಂಡುಬರುತ್ತದೆ.

ಕಾಳೆಯವರು ಸಮಾಜಮುಖಿ ಕಲಾವಿದರು. ಸಮಾಜದ ದಿನನಿತ್ಯದ ಆಗುಹೋಗುಗಳನ್ನು ತಮ್ಮ ಕಲಾಕೃತಿಗಳಲ್ಲಿ ಸೆರೆಹಿಡಿದು ಈ ಮುಖೇನ ಸಮಾಜಕ್ಕೆ ಒಂದು ಸಂದೇಶವನ್ನು ಕೊಟ್ಟು ಸಮಾಜದಲ್ಲಿ ಒಬ್ಬ ಕಲಾವಿದನ ಕರ್ತವ್ಯವನ್ನು ಜವಾಬ್ದಾರಿಯಿಂದ ನಿಭಾಯಿಸುವಂತಹ ಕಲಾವಿದರು ಎಂಬುದನ್ನು ಅವರ ಕಲಾಕೃತಿಗಳನ್ನು ಗಮನಿಸುವುದರಿಂದ ಕಂಡುಕೊಳ್ಳಬಹುದು. ತಾವು ಒಬ್ಬ

೨. ಡಾ. ಶಿವಾನಂದ ಬಂಟನೂರು (೪೨), ಹಂಪಿ ಕನ್ನಡ ವಿಶ್ವವಿದ್ಯಾಲಯ, ಅವರೊಂದಿಗೆ ಸಂದರ್ಶನ, ದಿನಾಂಕ ೨೨.೮.೨೦೦೯

೩. ಕಲಾವಿದ ವಿ.ಟಿ.ಕಾಳೆಯವರೊಂದಿಗೆ ಸಂದರ್ಶನ, ೨೬.೮.೨೦೦೯

ಸಮಾಜಮುಖಿ ಕಲಾವಿದರೆಂಬುದನ್ನು ಕಾಳೆಯವರು ಈ ರೀತಿಯಾಗಿ ಸಮರ್ಥಿಸಿಕೊಳ್ಳುತ್ತಾರೆ. "ಸಮಾಜ ಬಿಟ್ಟು ಮನಷ್ಯ ಬಾಳಲಾರ, ಸಮಾಜ ಬಿಟ್ಟು ಕಲಾವಿದನ್ನು ಇರಲಾರ. ಏಕೆಂದರೆ ಅವನೂ ಸಮಾಜ ಜೀವಿಯೇ ಕಲಾವಿದರಾದವರು, ಸಮಾಜದ ಆಗುಹೋಗುಗಳಿಗೆ ಸ್ಪಂದಿಸ ಬೇಕಾಗುತ್ತದೆ. ಹಿಂದೆ ರಚಿಸಿದಂತಹ ಅಜಂತಾ ಕಲೆ, ರಜಪೂತ, ಹಸ್ತಪ್ರತಿ ಚಿತ್ರಕಲೆಗಳೆಲ್ಲಾ ಸಮಾಜಮುಖಿಯಾದಂತಹವುಗಳು. ಸಮಾಜಕ್ಕಾಗಿ ಜನರು ಬದುಕಲಿಯೆಂದು ಸಾಹಿತ್ಯ ರಚಿಸಲಾಯಿತು. "ಜನರು ಬದುಕಲಿ ಎಂದು ಈ ಕಾವ್ಯ ಬರೆದೆ" ಎಂದು ಕವಿ ರಾಘವಾಂಕ ಹೇಳುತ್ತಾನೆ. ಈ ಕಾವ್ಯಕ್ಕೆ ಅನುಸಾರವಾಗಿ ಚಿತ್ರರಚಿಸಿದಾಗ ಅದು ತನ್ನಿಂದ ತಾನೇ ಸಮಾಜಮುಖಿ ಯಾಗುತ್ತದೆ. ಉದಾಹರಣೆಗೆ "ಹಸ್ತಪ್ರತಿಯಲ್ಲಿ ಚಿತ್ರಗಳು ಜನಸಾಮಾನ್ಯರಿಗೆ ಅದರಲ್ಲಿರುವ ಕಥೆ ಅರ್ಥವಾಗಲಿ, ಚಿತ್ರಗಳ ಮುಖಾಂತರ ತಿಳಿದುಕೊಳ್ಳಲಿ ಎಂಬ ಕಾರಣಕ್ಕೆ ಚಿತ್ರ ರಚಿಸಲಾಗಿತ್ತು. ಈಗ ಅದನ್ನು ಸಾಂದರ್ಭಿಕ ಚಿತ್ರ(illustration) ಎಂದು ಹೇಳಲಾಗುತ್ತದೆ. ಸಾಮಾಜಿಕವಾದ ವಸ್ತುಗಳನ್ನು ಆಯ್ಕೆ ಮಾಡಿಕೊಂಡಾಗ ಸಮಾಜಮುಖಿಯಾದ ಚಿತ್ರಗಳು ಸೃಷ್ಟಿಯಾಗುತ್ತವೆ. ಎಷ್ಟೋ ಸಲ ನಮ್ಮ ಅಭಿವ್ಯಕ್ತಿ ಕ್ರಮ ಜನಸಾಮಾನ್ಯರಿಗೆ ತಲುಪದೇ ಹೋಗಬಹುದು. ಆಧುನಿಕ ಸಂದರ್ಭದ ತಂತ್ರಗಾರಿಕೆ ಜನಸಾಮಾನ್ಯರಿಗೆ ಮುಟ್ಟುವುದಿಲ್ಲ. ಅದರಲ್ಲಿರುವ ವಸ್ತುವಿಷಯ ಕಲಾವಿದ ಬಿಡಿಸಿ ಹೇಳಿದಾಗ ಆ ಕಲಾಕೃತಿ ಅವರ ಹತ್ತಿರ ಹೋಗುತ್ತದೆ" ಎಂಬ ಇತ್ಯಾದಿ ಅಭಿಪ್ರಾಯವನ್ನು ಹೊಂದಿ ಕಲೆಯಿರುವುದು ಸಮಾಜಕ್ಕಾಗಿ ಎಂಬ ಸಿದ್ಧಾಂತಕ್ಕೆ ಹೆಚ್ಚಿನ ಮನ್ನಣೆ ನೀಡುತ್ತಾರೆ.

೧೯ನೇ ಶತಮಾನದ ಅಂತ್ಯದಲ್ಲಿ ಸಣ್ಣದಾದರೂ ಗೌಣವಲ್ಲದ ಬಂಗಾಳಿ ಕಲಾವಿದರ ಗುಂಪೊಂದು ವಿನಾಶದ ಅಂಚಿನಲ್ಲಿದ್ದ ಭಾರತೀಯ ಕಲೆಯ ಅವನತಿಯನ್ನು ಸಹಿಸಲಾರದೆ ಪುನರುಜ್ಜೀವನಗೊಳಿಸುವ ದೃಢ ನಿಶ್ಚಯದಿಂದ ಒಟ್ಟಾಗಿ ಕಲಾಸೃಷ್ಟಿಗೆ ತೊಡಗಿತು. ಆ ಚಳವಳಿಯ ಮುಂಚೂಣಿಯಲ್ಲಿದ್ದವರು ಅವನೀಂದ್ರನಾಥ ಠಾಕೂರರರು. ೧೮೯೬ರಲ್ಲಿ ಕಲ್ಕತ್ತ ಕಲಾಶಾಲೆಗೆ ಪ್ರಿನ್ಸಿಪಾಲರಾಗಿ ಬಂದ ಈ.ಬಿ. ಹ್ಯಾವೆಲ್‌ರಿಂದ ಭಾರತೀಯ ಪರಂಪರೆಯ ಮಾರ್ಗದತ್ತ ಮುನ್ನಡೆಯಲು ಅವರು ಉತ್ತೇಜಿತರಾದರು. ಹಳೆಯ ಸಾಂಪ್ರದಾಯಿಕ ಕಲೆಯ ಆಗರಗಳಾದ ಅಂಜತಾ, ಸಿಗೀರಿಯಾಗಳ ಭಿತ್ತಿಚಿತ್ರಗಳು, ಟಿಬೇಟಿನ್ ಧಾರ್ಮಿಕ ಬ್ಯಾನರುಗಳು ಮತ್ತು ಅತ್ಯುತ್ತಮ ಕಲಾವಿದರು ರಚಿಸಿದ್ದ ಮೊಗಲ್, ರಜಪೂತ್ ಶೈಲಿಯ ಮಿನಿಯೇಚರ್ ಕಲಾಕೃತಿಗಳ ಜೊತೆ ಜೊತೆಗೆ ಪರ್ಷಿಯಾ, ಜಪಾನ್ ಹಾಗೂ ಚೀನಾ ದೇಶಗಳ ಕಲೆಯ ಮೇರು ಕೃತಿಗಳ ಅವಲೋಕನ

೪. ಕಲಾವಿದ ವಿ.ಟಿ.ಕಾಳೆಯವರೊಂದಿಗೆ ಸಂದರ್ಶನ, ೨೭.೮.೨೦೦೯

ಅಧ್ಯಯನಗಳಿಂದ ಹುಟ್ಟಿದ ಹೊಸ ಬಂಗಾಳಿ ಕಲಾ ಚಳವಳಿಯನ್ನು ಒಪ್ಪಿಕೊಂಡರು. ಈ ಪ್ರವಾಹಕ್ಕೆ ಕಾಗದದ ಮೇಲೆ ಜಲವರ್ಣಗಳಲ್ಲಿ ಚಿತ್ರಿಸುವ ಒಂದು ಹೊಸ ಪದ್ಧತಿ ಹುಟ್ಟಿಕೊಂಡಿತು.[೫] ಇದು ಭಾರತೀಯ ಚಿತ್ರ ಶೈಲಿಯ ಪದ್ಧತಿಯಾಗಿದ್ದು, ಕಾಳೆಯವರ ಕಲಾಕೃತಿಗಳಲ್ಲಿಯೂ ಇದರ ಪ್ರಭಾವ ಕಂಡುಬರುತ್ತದೆ.

ಬ್ರಿಟೀಷರ ಆಳ್ವಿಕೆಯಿಂದ ಉಂಟಾಗಿದ್ದ ವ್ಯಾಪಾರಿ ಮನೋಭಾವದ ಆರ್ಥಿಕತೆ ಮತ್ತು ಆಧುನಿಕತೆ ಪಶ್ಚಿಮ ಹಾಗೂ ಯೂರೋಪಿನ ಜಗತ್ತಿನ ಸಂಸ್ಕೃತಿಯ ಪ್ರಭಾವಗಳು ದೇಶದ ಇತರ ಭಾಗಗಳಿಗಿಂತಲೂ ಬಂಗಾಳದ ಮೇಲೆ ಹೆಚ್ಚಾಗಿ ಕಾಣಿಸಿಕೊಂಡಾಗ ಅಲ್ಲಿನ ಬುದ್ಧಿಜೀವಿಗಳಲ್ಲಿ ಉಂಟಾದ ಎಚ್ಚರವೇ ಬಂಗಾಳದ ಪುನರುಜ್ಜೀವನವೆಂದು ಇತಿಹಾಸಕಾರರಿಂದ ಕರೆಯಲ್ಪಟ್ಟಿದೆ. ಬಂಗಾಳದ ಈ ಪಾತ್ರವನ್ನು ಯೂರೋಪಿಯನ್ ರಿನೈಸಾನ್ಸ್ ಸಂದರ್ಭದಲ್ಲಿ ಇಟಲಿಯು ಆಕ್ರಮಿಸಿರುವ ಸ್ಥಾನಕ್ಕೂ ಹೋಲಿಸಲಾಗಿದೆ. ಈ ಗುಂಪಿನ ಎಲ್ಲಾ ಸೃಷ್ಟಿಗಳಲ್ಲಿ ಸಮಕಾಲೀನ ಸಂದರ್ಭದ ಅಧ್ಯಯನ ತೀವ್ರತೆಯ ಅಭಿವ್ಯಕ್ತಿ ಆಗಲೇ ಇಲ್ಲ.[೬]

ಚಿತ್ರ ರಚನೆಯ ಕಾಲದಲ್ಲಿ ಕಲಾವಿದನಿಗಿರುವ ಮಾನಸಿಕ ಭಾವನೆಗಳಂತೆ ಅವನ ಕಲಾಕೌಶಲ ಕೂಡ ಬದಲಾಗುತ್ತದೆ. ಒಂದೊಂದು ಬಗೆಯ ವಿಚಾರಗಳನ್ನು ತಿಳಿಸಲು ಒಂದೊಂದು ಬಗೆಯ ಕೌಶಲ ಹಾಗೂ ಶೈಲಿ ಬೇಕಾಗಬಹುದು. ಅದನ್ನು ಕಲಾವಿದ ತಾನಾಗಿಯೇ ತನ್ನ ಮನಸ್ಸಿನಿಂದ ಭಾವನೆಗಳಿಗೆ ರೂಪಕೊಡಲು ಯೋಗ್ಯವೆನಿಸುವ ಶೈಲಿಯನ್ನು ಪ್ರಯೋಗಿಸುತ್ತಾನೆ. ಮಾನಸಿಕ ಭಾವಗಳನ್ನು ಹೊರಗೆಡಹಲು ಪ್ರತಿಯೊಬ್ಬ ಕಲಾವಿದ ತನ್ನದೇ ಆದ ಶೈಲಿಯನ್ನು ಗುರುತಿಸಿ ರೂಪಿಸಿ ಬೆಳಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ಎಷ್ಟೋ ವಿಷಯಗಳ ಎಷ್ಟೋ ಬಗೆಯ ಕಲಾಕೃತಿಗಳನ್ನು ನೋಡುವಂತೆ ಅನೇಕ ಬಗೆಯ ಚಿತ್ರರಚನಾ ಕೌಶಲಗಳನ್ನು, ತಂತ್ರಗಳನ್ನು, ಶೈಲಿಗಳನ್ನು ಕಾಣುತ್ತೇವೆ.[೭] ಕಾಳೆಯವರ ಕಲಾಕೃತಿಗಳ ವಿಷಯವಸ್ತು ಸಾಂಪ್ರದಾಯಿಕ, ಸಮಕಾಲೀನ, ವಿಷಯಗಳಾಗಿದ್ದರೂ ಕೂಡ ಅವರು ಒಬ್ಬ ಸಾಂಪ್ರದಾಯಿಕ ಕಲಾವಿದರೆಂದೇ ಗುರುತಿಸಿಕೊಂಡಿದ್ದಾರೆ. ಅವರ ಬಹುತೇಕ ಸಾಂಪ್ರದಾಯಿಕ ಕಲಾಕೃತಿಗಳು ವಾಷ್ ತಂತ್ರದಿಂದ ಕೂಡಿದ್ದು, ರೇಖಾ ಪ್ರಧಾನವುಳ್ಳವುಗಳಾಗಿವೆ. ಅಲ್ಲದೇ ಇವು ಕಲಾವಿದನ ಅಂತಃಪ್ರೇರಣೆಯಿಂದ ಮೂಡಿಬಂದ ಕಲಾಕೃತಿಗಳು ಎಂದು ನೋಡುಗರ ಗಮನಕ್ಕೆ ಬಾರದೇ ಇರದು. ಕಾಳೆಯವರು ಸಾವಿರಾರು ಭಾವಚಿತ್ರಗಳನ್ನು, ನಿಸರ್ಗಚಿತ್ರಗಳನ್ನು, ಸಂಯೋಜನಾ ಚಿತ್ರಗಳನ್ನು, ರೇಖಾಚಿತ್ರಳನ್ನು ತಮ್ಮ

---

೫. ಕೆ.ವಿ. ಸುಬ್ರಹ್ಮಣ್ಯಂ, ವೆಂಕಟಪ್ಪ ಸಮಕಾಲೀನ ಪುನರವಲೋಕನ, ಪು.೧

೬. ಅದೇ ಪು.೧೧೧

೭. ಶಂಕರಪಾಟೀಲ, ಚಿತ್ರಕಲಾ ಚಿಂತನೆ, ಪು.೫೦

ಬದುಕಿನುದ್ದಕ್ಕೂ ರಚಿಸುತ್ತಾ ಬಂದಿದ್ದಾರೆ. ಅಲ್ಲದೇ ಅವು ಪೆನ್ನು, ಪೆನ್ಸಿಲ್, ತೈಲವರ್ಣ, ಜಲವರ್ಣಗಳಿಂದ ಕೂಡಿದ್ದು ವಿಭಿನ್ನ ಶೈಲಿ, ತಂತ್ರಗಳಿಂದ ಕೂಡಿವೆ. ಕಾಳೆಯವರು ವಿವಿಧ ಮಾಧ್ಯಮಗಳಲ್ಲಿ ಕಲಾಕೃತಿಗಳನ್ನು ರಚಿಸುತ್ತಾ ಬಂದಿದ್ದರೂ ಅವರಿಗೆ ಹೆಚ್ಚು ಆಪ್ತವೆನಿಸಿದ ಮಾಧ್ಯಮವೆಂದರೆ, ಜಲವರ್ಣ. ಜಲವರ್ಣ ಮಾಧ್ಯಮದಿಂದ ರಚಿಸಬಹುದಾದ ವಾಷ್‌ತಂತ್ರದಲ್ಲಿ ಅವರಿಗೆ ಹೆಚ್ಚಿನ ಆಸಕ್ತಿ ಕಂಡುಬರುತ್ತದೆ. ಅಲ್ಲದೇ ಅವರು ವಾಷ್‌ತಂತ್ರದ ಮೇಲೆ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದ್ದಾರೆ ಎಂದೇ ಹೇಳಬಹುದು.

ಚಿತ್ರಕಲೆಯ ಸಂದರ್ಭದಲ್ಲಿ ಸಾಮಾನ್ಯವಾಗಿ ಕಲಾವಿದರಲ್ಲಿ ಒಂದು ನಿರ್ದಿಷ್ಟ ಅವಧಿಯಲ್ಲಿ ಒಂದು ನಿರ್ದಿಷ್ಟ ಮಾಧ್ಯಮದಲ್ಲಿ ಹಾಗೂ ತಂತ್ರಗಳಿಗೆ ಮಾರು ಹೋಗಿರುವುದು ಸ್ವಾಭಾವಿಕ ಅಂಶವಾಗಿದೆ.[೮] ಕಾಳೆಯವರು ಇದಕ್ಕೆ ಹೊರತಲ್ಲ. ಸಾಮಾನ್ಯವಾಗಿ ಹೆಚ್ಚಿನ ಕಲಾವಿದರು ತಮ್ಮ ಕಲಾಶಾಲೆಗಳಲ್ಲಿ ಅಭ್ಯಾಸ ಮಾಡುವಾಗ ಚಲಾವಣೆಯಲ್ಲಿರುವ ಮಾಧ್ಯಮಗಳನ್ನು ಅನುಸರಿಸುವುದು ಸ್ವಾಭಾವಿಕ. ಕಾಳೆಯವರು ಗದಗಿನ ವಿಜಯಕಲಾಮಂದಿರದಲ್ಲಿ ತಮ್ಮ ಕಲಾಶಿಕ್ಷಣ ಪೂರೈಸಿದರು ಕೂಡಾ ಮುಂಬಯಿ ಜೆ.ಜೆ. ಕಲಾಶಾಲೆಯ ಶಿಕ್ಷಣಕ್ರಮದಲ್ಲಿಯೇ ಇವರ ಕಲಾಶಿಕ್ಷಣ ಸಾಗಿತ್ತು. ಜೆ.ಜೆ. ಕಲಾಶಾಲೆಯಲ್ಲಿ ಹೆಚ್ಚು ಮುಂಚೂಣಿಯಲ್ಲಿರುವ ಮಾಧ್ಯಮವೆಂದರೆ, ತೈಲವರ್ಣ. ಇದು ಪಾಶ್ಚಾತ್ಯ ಕಲಾಶೈಲಿಯ ಪ್ರಭಾವವೂ ಹೌದು. ಆದರೆ ಕಾಳೆಯವರು ಭಾರತೀಯ ಪದ್ಧತಿಯಾದ ಜಲವರ್ಣದ ಮೇಲೆ ಹೆಚ್ಚಿನ ಲಕ್ಷ್ಯ, ಪ್ರೀತಿ, ಆಸಕ್ತಿವಹಿಸಿದಂತೆ ಕಂಡುಬರುತ್ತದೆ. ಬಂಗಾಲಿ ಕಲಾಶೈಲಿಯ ಪ್ರಭಾವವು ಅವರ ಮೇಲೆ ಸಾಕಷ್ಟು ಆಗಿರುವುದು ಅವರ ಕಲಾಕೃತಿಗಳಿಂದ ತಿಳಿದು ಬರುತ್ತದೆ. ಕಾಳೆಯವರ ಸಾಂಪ್ರದಾಯಿಕ ಜಲವರ್ಣ ಕಲಾಕೃತಿಗಳಲ್ಲಿ ಈ ಅಂಶ ಕಂಡುಬಂದರೆ ಅವರ ಭಾವಚಿತ್ರ ಮತ್ತು ನಿಸರ್ಗಚಿತ್ರಗಳಲ್ಲಿ ಇನ್ನೂ ಹೆಚ್ಚಾಗಿ ತೈಲವರ್ಣದ ಮಾಧ್ಯಮ ದಿಂದಲ್ಲಿಯೂ ಈ ತಂತ್ರವನ್ನು ದುಡಿಸಿಕೊಂಡಿದ್ದಾರೆ. ಹೀಗಾಗಿ ಪಾಶ್ಚಾತ್ಯ ಮತ್ತು ಪೌರ್ವಾತ್ಯ ಕಲಾಶೈಲಿಗಳೆರಡೂ ಇವರ ಮೇಲೆ ಪ್ರಭಾವಬೀರಿದ್ದು ಎರಡು ಮಾಧ್ಯಮಗಳನ್ನು ಅಷ್ಟೇ ಯಶಸ್ವಿ ಯಾಗಿ ಕಾಳೆಯವರು ದುಡಿಸಿಕೊಂಡಿದ್ದು, ಭಾರತೀಯ ಮತ್ತು ಪಾಶ್ಚಾತ್ಯ ಈ ಎರಡು ಕಲಾಶೈಲಿಯ ನಡುವಿನ ಸೇತುವೆಯಂತೆ ಇವರ ಕಲಾಕೃತಿಗಳು ಕಂಡುಬರುತ್ತವೆ. ಅಲ್ಲದೇ ಕಾಳೆಯವರ ಕಲಾಕೃತಿಗಳನ್ನು ಜೆ.ಜೆ. ಕಲಾಶಾಲೆಯ ಕಲಾಪದ್ಧತಿ, ಬೆಂಗಾಲಿ ಕಲಾಶೈಲಿಯ ಪದ್ಧತಿ ಹಾಗೂ ಪಾಶ್ಚಾತ್ಯ ಕಲಾಶೈಲಿ ಪದ್ಧತಿ ಹೀಗೆ ಈ ಮೂರು ಪದ್ಧತಿಗಳನ್ನು ಒಟ್ಟಾಗಿಸಿ ಬೆರಕೆಗೊಂಡ ಕಲಾಕೃತಿಗಳು ಎನ್ನಬಹುದು.

೮. ಚಿ.ಸು.ಕೃಷ್ಣಶೆಟ್ಟಿ, ಯೂಸುಫ್ ಅರಕ್ಕಲ್, ಪು.೨

ಪಾಶ್ಚಾತ್ಯ ಕಲಾಶೈಲಿಯ ಪ್ರಸಿದ್ಧ ಮಾಧ್ಯಮವಾದ ತೈಲವರ್ಣವನ್ನು ಮೊದಲಿಗೆ ಭಾರತಕ್ಕೆ ಪರಿಚಯಿಸಿದ್ದು ರಾಜಾರವಿವರ್ಮ. ಪಾಶ್ಚಾತ್ಯ ಪದ್ಧತಿಯಾದ ಮೂರು ಆಯಾಮದ ಕಲಾ ರಚನೆಯನ್ನು ಅನುಸರಿಸಿದ ರವಿವರ್ಮ ಮತ್ತು ಎಸ್.ಎಂ. ಪಂಡಿತರ ಕಲಾಕೃತಿಗಳೂ ಸಹ ಕಾಳೆಯವರ ಮೇಲೆ ಸಾಕಷ್ಟು ಪ್ರಭಾವವನ್ನುಂಟುಮಾಡಿವೆ. ತತ್ಪರಿಣಾಮವಾಗಿ ಅವರ ಅನೇಕ ಕಲಾಕೃತಿಗಳು ಈ ದಿಸೆಯಲ್ಲಿ ಮೂಡಿಬಂದಿರುವುದಲ್ಲದೇ ತೈಲಮಾಧ್ಯಮವನ್ನು ಮೂರು ಆಯಾಮದ ಕಲಾರಚನೆಯ ಶೈಲಿಯನ್ನು ಗಂಭೀರವಾಗಿ ಪ್ರತಿರೋಧಿಸುತ್ತಾ ಬಂದಿರುವ ಭಾರತೀಯ ಅಂತಃಸತ್ವವನ್ನು ಬೆಂಬಲಿಸುವ ಬಂಗಾಲಿ ಕಲಾಶೈಲಿಯು ಕೂಡ ಕಾಳೆಯವರನ್ನು ಅಷ್ಟೇ ಪ್ರಮಾಣದಲ್ಲಿ ಪ್ರಭಾವಿಸಿದೆ. ಈ ಎರಡು ಅಂಶಗಳನ್ನು ಸಮನಾಗಿ ತಮ್ಮ ಕಲಾಕೃತಿಗಳ ಮುಖೇನ ಸ್ವೀಕರಿಸಿದ ಕಾಳೆಯವರದು ವಿಶಾಲ ಮನೋಭಾವ. ಅವರು ಒಂದೇ ಶೈಲಿಗೆ ಒಂದೇ ತರಹದ ಕಲಾ ಪ್ರಕಾರಕ್ಕೆ ಬದ್ಧರಾಗದೇ ನಿತ್ಯ ಹರಿಯುವ ಹೊಸ ನೀರಿನಂತೆ ಅವರ ಕಲಾಕೃತಿಗಳು ಕಂಡುಬರುತ್ತವೆ. ಕರ್ನಾಟಕದಲ್ಲಿ ತಮ್ಮ ಕಲಾಕೃತಿಗಳಲ್ಲಿ ವಾಷ್‌ತಂತ್ರವನ್ನು ಅಳವಡಿಸಿಕೊಂಡ ಕೆಲವೇ ಕೆಲವು ಕಲಾವಿದರಲ್ಲಿ ವಿ.ಟಿ.ಕಾಳೆಯವರು ಪ್ರಮುಖರಾಗಿ ಕಂಡುಬರುತ್ತಾರೆ. ಈ ಸಾಲಿನಲ್ಲಿ ಮುಂಚೂಣಿಯಲ್ಲಿರುವ ಮತ್ತೊಬ್ಬ ಕಲಾವಿದರು ಶಂಕರಗೌಡ ಬೆಟ್ಟದೂರ. ಇವರ ಚಿತ್ರಗಳಲ್ಲಿ ಶೃಂಗಾರಗೊಳಿಸುವ, ವಿವರಿಸುವ ಗುಣ ಕಡಿಮೆ. ಚಿತ್ರವೊಂದರ ಸತ್ವವನ್ನು ಅವರ ಕಲಾಕೃತಿಗಳು ಎತ್ತಿಹಿಡಿಯುತ್ತವೆ.

ಕಾಳೆಯವರು ಸಾಂಪ್ರದಾಯಿಕ ಚಿತ್ರಕಲೆಯಾದರೂ ಅದರಲ್ಲಿ ರಜಪೂತ ಮತತು ಅಜಂತಾ ಶೈಲಿಗಳ ಸುಂದರ ಸಮ್ಮಿಶ್ರಣವಿದೆ. ಈ ರೀತಿಯ ಚಿತರಕಲೆಯಲ್ಲಿ ಅಲಂಕಾರಕ್ಕೆ ಹೆಚ್ಚಿನ ಒತ್ತು ಇರುವುದರಿಂದ ಚಿತ್ರಗಳು ಹೆಚ್ಚು ಆಕರ್ಷಕವಾಗಿರುತ್ತವೆ.[೯] ಕಾಳೆಯವರ ವಾಷ್‌ತಂತ್ರದ ಕಲಾಕೃತಿಗಳನ್ನು ಡೆಕೋರೇಟಿವ್ ಶೈಲಿ ಎಂದು ಕರೆಯಬಹುದು. ಇವರ ಕಲಾಕೃತಿಗಳಲ್ಲಿ ಮುಖ್ಯವಾಗಿ ಎದ್ದು ಕಾಣುವುದು ಬಾಗು, ಬಳಕು, ಅಲಂಕರಣ ಪ್ರಿಯತೆ, ಇವುಗಳು ಅವರ ಕಲಾಕೃತಿಗಳಲ್ಲಿನ ಅಂತಃಸತ್ವಕ್ಕೆ ಧಕ್ಕೆ ಬಾರದಂತೆ ಪೂರಕವಾಗಿಯೇ ಚಿತ್ರಿತಗೊಂಡಿವೆ.

ಕಾಳೆಯವರ ಮೆಚ್ಚಿನ ಶಿಷ್ಯರಾದ ಡಾ. ಬಿ.ಕೆ. ಹಿರೇಮಠರು ತಮ್ಮ ಗುರುಗಳ ವಾಷ್ ತಂತ್ರದ ಕುರಿತು ಈ ರೀತಿಯಾಗಿ ಹೇಳಿದ್ದಾರೆ ಕಾಳೆಯವರು ಸಾಮಾನ್ಯವಾಗಿ ವಾಟಮನ್ ಪೇಪರಿನ ಮೇಲೆ ಕ್ರಿಮ್‌ಜನ್ ಬಣ್ಣ ಹಚ್ಚುವುದು. ನಂತರ ತೊಳೆಯುವುದು ಇದೇ ರೀತಿ ಪುನಃ ಪುನಃ ಮಾಡುವುದು. ನಿರ್ದಿಷ್ಟ ಪರಿಣಾಮ ಬರುವವರೆಗೆ ಅದು ಸ್ಕ್ರೀನ್ ಎಫೆಕ್ಟ್ ಆಗಿ

೯. ಗುರುನಾಥ ಇನಾಮದಾರ, ತರಂಗ (ಮಾಸಪತ್ರಿಕೆ) ೧೯೯೭, ಪು. ೬೨

ಪರಿವರ್ತನೆಗೊಳ್ಳುತಿತ್ತು. ನಂತರ ಬ್ಲೂ ಬಣ್ಣವನ್ನು ಮಿಶ್ರಣ ಮಾಡಿ ಫಿನ್ಸಿಂಗ್ ಮಾಡುವುದು. ಇದರಿಂದ ಕ್ರಿಮ್‌ಜನ್ ಬಣ್ಣ ಕೆಲವು ಕಡೆ ಮಾತ್ರ ಕಾಣಿಸುವುದರಿಂದ ಅದು ತುಂಬಾ ಪರಿಣಾಮ ಕಾರಿಯಾಗಿ ಕಂಡುಬರುತಿತ್ತು[೧೦] ಎಂದು ಕಾಳೆಯವರ ವಾಷ್ ತಂತ್ರದ ಕುರಿತು ಹೇಳುತ್ತಾರೆ.

ನಾಡಿನ ಹೆಸರಾಂತ ಕಲಾವಿದರಾದ ವಿ.ಬಿ. ಹಿರೇಗೌಡರ ಅವರು ಕಾಳೆಯವರ ವಾಷ್ ಮೆಥೆಡ್ ಕುರಿತು ಈ ರೀತಿ ಹೇಳಿದ್ದಾರೆ. ಭಾರತೀಯ ಕಲಾವಿದರು ೧೯೬೦-೭೦ರ ದಶಕದ ಈ ಅವಧಿಯ ಕಲಾವಿದರುಗಳ ಮೇಲೆ ಶಾಂತಿನಿಕೇತನದ ಜಲವರ್ಣದ ವಾಷ್ ಮೆಥೆಡ್‌ನ ಪ್ರಭಾವ ಸಾಮಾನ್ಯವಾಗಿ ಕಂಡುಬರುತ್ತದೆ. ಅವರಲ್ಲಿ ಈ ವಿಧಾನವನ್ನು ಗಂಭೀರವಾಗಿ ಮುಂದುವರಿಸಿಕೊಂಡ ಹೋದವರಲ್ಲಿ ಕಾಳೆಯವರು ಪ್ರಮುಖವಾಗಿ ಕಂಡುಬರುತ್ತಾರೆ. ಕಾಳೆಯವರ ಸಮಕಾಲೀನ ಕಲಾವಿದರಾದ ಸಿ.ಎನ್. ಪಾಟೀಲರ ಕಲಾಕೃತಿಗಳಲ್ಲಿ ಈ ಲಕ್ಷಣಗಳು ಕಂಡುಬಂದರೂ ಕೂಡ ಅವರ ತನಗಳು ಬೇರೆಯಿದೆ. ಇವರಿಬ್ಬರ ಆಯ್ಕೆ ವಿಷಯಗಳು ಒಂದೇ ತೆರನಾದ ಹೋಲಿಕೆ ಯಿದ್ದರೂ ಶೈಲಿ ಬೇರೆ ಬೇರೆಯಾಗಿ ಕಂಡುಬರುತ್ತದೆ[೧೧] ಎಂದು ಕಾಳೆಯವರ ವಾಷ್‌ತಂತ್ರ ಕುರಿತು ಹೇಳುತ್ತಾರೆ.

"ಬೆನ್ನೆಲುಬಿಲ್ಲದ ಗೂರಲು ರೋಗಿಗಳಂತೆ ಕಾಣುವ ವ್ಯಕ್ತಿಗಳ ಚಿತ್ರಣವನ್ನು ಬೆಂಗಾಲ್ ಚಿತ್ರಗಳು ಎನ್ನುತ್ತೇವೆ" ಎಂದು ಶಿವರಾಮ ಕಾರಂತರ ವ್ಯಂಗೊತ್ತಿಗೆ ಈಡಾದ ಬೆಂಗಾಲದ ವಾಷ್ ತಂತ್ರದಲ್ಲಿ "ಕಳೆಯುವುದರ ಮೂಲಕವೂ ಕೂಡುವ ಸಾಧ್ಯತೆಗಳಿವೆ". ಪುನರಪಿ ಚಿತ್ರಣ, ಪುನರಪಿ ಶುದ್ಧೀಕರಣ ಎಂಬಂತಹ ಚಿತ್ರಣ ಕ್ರಮವಿದು. ಆಗ ವಾಷ್‌ತಂತ್ರಗಾರಿಕೆಯುಳ್ಳ ಚಿತ್ರಗಳಲ್ಲಿ ಬೆಳಕು ಒಳಗಿನಿಂದ ಹೊಮ್ಮಿದಂತೆ ಭಾಸವಾಗುತ್ತದೆ. ಆದ್ದರಿಂದಲೇ ಏನೋ ಅಂತಹ ಚಿತ್ರ ಗಳೊಳಗಿನ ಆಕಾರಗಳಲ್ಲಿ ಸೂರ್ಯನ ಬೆಳಕಿನ ಕೃತಕ ನೆರಳು ಬೆಳಕು ಕಂಡುಬರದು[೧೨] ಎಂಬ ವಿವರಗಳನ್ನು ಎಚ್. ಅನಿಲಕುಮಾರ ಅವರು ನೀಡುತ್ತಾರೆ.

ಶಾಂತಿನಿಕೇತನದಲ್ಲಿ ಇಂದಿಗೂ ಪ್ರಸಿದ್ಧವಾಗಿರುವುದು ಅವನೀಂದ್ರನಾಥರು ಹುಟ್ಟು ಹಾಕಿದ ವಾಷ್ ತಂತ್ರದಿಂದ ಚಿತ್ರ ಬಿಡಿಸುವ ಸಂಪ್ರದಾಯ. ಜಲವರ್ಣವನ್ನು ಕಾಗದದ ಮೇಲೆ ಹತ್ತು ಹಲವು ಸಲ ಲೇಪಿಸಿ, ನೀರಿನಿಂದ ಮೇಲ್ಪದರ ಬಣ್ಣವನ್ನು ತೆಗೆದು ಹಾಕಿ, ಮತ್ತೆ ಮತ್ತೆ ಬಣ್ಣವನ್ನು ಹಚ್ಚುವ ಈ ತಂತ್ರಗಾರಿಕೆಗೆ ಅವನೀಂದ್ರರು ಜೀವಕಳೆಯನ್ನು ಕೊಟ್ಟಿದ್ದರು.

---

೧೦. ಡಾ. ಬಿ.ಕೆ. ಹಿರೇಮಠ (೬೮), ಬಾಗಲಕೋಟೆ, ಅವರೊಂದಿಗೆ ಸಂದರ್ಶನ ದಿನಾಂಕ ೨೯.೮.೨೦೧೦
೧೧. ವಿ.ಬಿ. ಹಿರೇಗೌಡರ (೭೦), ದಾವಣಗೆರೆ, ಅವರೊಂದಿಗೆ ಸಂದರ್ಶನ, ದಿನಾಂಕ
೧೨. ಎಚ್. ಅನಿಲಕುಮಾರ, ಶಂಕರಗೌಡ ಬೆಟ್ಟದೂರ, ಪು.೩೨

ರಾಜಾರವಿರ್ಮನಿಂದ ಭಾರತದಲ್ಲಿ ಖ್ಯಾತಿಗೆ ಬಂದಿದ್ದ ತೈಲವರ್ಣವನ್ನು ಪಾಶ್ಚಾತ್ಯ ಸಂಸ್ಕತಿಯೊಂದಿಗೆ ತಾಳೆ ಹಾಕಿ ನೋಡಿದವರಲ್ಲಿ ಬೆಂಗಾಲ್ ಶಾಲೆಯ ಅಭನೀಂದ್ರನಾಥ ಮೊದಲಿಗರು. ತೈಲವರ್ಣ ಪಶ್ಚಿಮವಾದರೆ ವಾಷ್‌ತಂತ್ರ ಭಾರತೀಯ ಎಂಬುದು ಹೆಚ್ಚು ಕಡಿಮೆ ಚಿತ್ರಕಲೆಯ ಮುಖ್ಯ ಮಾಧ್ಯಮವಾದ ಈ ಶಾಲೆಯ ಮೂಲಭೂತ ನಿಲುವು[೧೩].

ಕಾಳೆಯವರ ಕಲಾಕೃತಿಗಳಲ್ಲಿ ಭಾರತೀಯ ಕಲಾಶೈಲಿ ಎನಿಸಿಕೊಂಡ ಎರಡು ಆಯಾಮಗಳುಳ್ಳ ವಾಷ್‌ತಂತ್ರದ ಅಂಶ ಕಂಡುಬರುವಂತೆ, ರಾಜಾರವಿವರ್ಮನಿಂದ ಭಾರತಕ್ಕೆ ಬಂದ ಪಾಶ್ಚಾತ್ಯ ಕಲಾಶೈಲಿಯು ಕಾಳೆಯವರ ಕಲಾಕೃತಿಗಳಲ್ಲಿ ಕಂಡುಬಂದಿದ್ದು ಈ ಎರಡು ಅಂಶಗಳು ಸಮಾನವಾಗಿ ಕಾಳೆಯವರ ಕಲಾಕೃತಿಗಳಲ್ಲಿ ಕಂಡುಬರುತ್ತದೆ. ಹೀಗಾಗಿ ಕಾಳೆಯವರ ಕಲಾಕೃತಿಗಳನ್ನು ಪಾಶ್ಚಾತ್ಯ ಮತ್ತು ಪೌರ್ವಾತ್ಯ ಕಲಾ ಪದ್ಧತಿಗಳ ಸಂಗಮ ಎಂದು ಕರೆಯಬಹುದು. ಕಾಳೆಯವರ ಕಲಾಕೃತಿಗಳೆಲ್ಲವೂ ಪ್ರಜ್ಞಾಪೂರ್ವಕವಾಗಿ ಒಬ್ಬ ಶಿಸ್ತಿನ ಸಿಪಾಯಿಯಂತೆ ಒಬ್ಬ ಗುರುವಿನ ಶಿಸ್ತಿನಂತೆ ಕ್ರಮಬದ್ಧವಾಗಿ ಎಲ್ಲಿಯೂ ಎಚ್ಚರ ತಪ್ಪದಂತೆ ಮೂಡಿಬಂದತಹಗಳು.

ಐವತ್ತು ವರ್ಷದ ಹಿಂದೆ ಕಲೆಯನ್ನು ಕಲಿತವರು ಅಷ್ಟರಲ್ಲಿ ಜಗತ್ತಿನಾದ್ಯಂತ ಮಾಡರ್ನಿಸಂ (ಆಧುನಿಕತೆ)ನ ಅರ್ಥವನ್ನು ಕ್ಲೆಮೆಂಟ್ ಗ್ರೀನ್‌ಬರ್ಗ್ ಸ್ಪಷ್ಟಪಡಿಸಿದ್ದಾಗಿತ್ತು. ಈಗ ನಾವು ಅದನ್ನು ಗ್ರೀನ್ ಬರ್ಗ್‌ನ ಮಾಡರ್ನಿಸಂ ಮಾತ್ರ ಎನ್ನುತ್ತೇವೆ. ಕಾಗದದ ಮೇಲೆ ಎರಡು ಆಯಾಮದ ಚಿತ್ರ ಮಾತ್ರ ಅಸಲಿ ಮತ್ತು ಶಿಲ್ಪದಲ್ಲಿ ಮೂರು ಆಯಾಮದ ಆಕಾರ ಮಾತ್ರ ಅಸಲಿ ಎಂದು ಗ್ರೀನ್‌ಬರ್ಗ್ ಹೇಳಿದ್ದ.[೧೪] ಕಾಳೆಯವರ ಕಲಾಶಿಕ್ಷಣ ಈ ಅರ್ಥದಲ್ಲಿ ಗ್ರೀನ್‌ಬರ್ಗ್‌ನ ಆಧುನಿಕತೆಯ ತದ್ವಿರುದ್ಧವಾದ ಸಂದರ್ಭದಲ್ಲಿ ಜನಿಸಿದ್ದು. ಕಾಳೆಯವರು ಕಲಾಶಿಕ್ಷಣ ಪಡೆದಿದ್ದು ಜೆ.ಜೆ. ಕಲಾಶಾಲೆಯ ಕಲಿಕೆಯ ಪದ್ಧತಿಯಲ್ಲಿ. ಅಲ್ಲಿ ಎಲ್ಲ ಪಾಶ್ಚಾತ್ಯ ಕಲಾಶೈಲಿಯ ಮಾದರಿಯಲ್ಲಿ ಶಿಕ್ಷಣ ನೀಡಲಾಗುತ್ತಿತ್ತು. ಕಾಳೆಯವರು ಕಲಿಯುವ ಸಂದರ್ಭದಲ್ಲಿ ಈ ಪದ್ಧತಿಯಲ್ಲಿಯೇ ಕಲಾಕೃತಿಗಳನ್ನು ರಚಿಸುತ್ತಿದ್ದರಾದರೂ ಮುಂದೆ ಅವರ ವೃತ್ತಿಜೀವನದ ಸಂದರ್ಭದಲ್ಲಿ ಅವರನ್ನು ಹೆಚ್ಚಾಗಿ ಆಕರ್ಷಿಸಿದ್ದು ಬಂಗಾಳಿ ಕಲಾಶೈಲಿಯ ಮಾದರಿಯದು. ಹೀಗಾಗಿ ಕಾಳೆಯವರ ಕಲಾಕೃತಿಗಳಲ್ಲಿ ಈ ಎರಡರ ಪ್ರಭಾವ ಢಾಳಾಗಿ ಕಂಡುಬರುತ್ತದೆ.

ರಾಯಚೂರಿನ ಶಂಕರಗೌಡ ಬೆಟ್ಟದೂರ ಅವರು ವಾಷ್‌ತಂತ್ರವನ್ನು ಬೆಂಗಾಲ್ ಶಾಂತಿನಿಕೇತನ ಕಲಾಭವನದಲ್ಲೇ ಕಲಿತು, ಅದನ್ನು ಕರ್ನಾಟಕಕ್ಕೆ ತಂದು ಐದು ದಶಕದ ನಂತರವೂ ಅದನ್ನು

---

೧೩. ಎಚ್. ಅನಿಲಕುಮಾರ, ಶಂಕರಗೌಡ ಬೆಟ್ಟದೂರ, ಪು.೩೨

೧೪. ಅದೇ ಪು.೨೬

ಮುಂದುವರಿಸಿದರು. ಇವರೊಂದು ಕಡೆಯಾದರೆ, ಕರ್ನಾಟಕದಲ್ಲಿದ್ದುಕೊಂಡೇ ದೂರದ ಕಲ್ಕತ್ತದಲ್ಲಿರುವ ಶಾಂತಿನಿಕೇತನದ ಈ ತಂತ್ರಕ್ಕೆ ಮಾರುಹೋಗಿ ಅದನ್ನು ತಮ್ಮ ಕಲಾಕೃತಿಗಳಲ್ಲಿ ಜೀವನಾಡಿಯಾಗಿಯನ್ನಾಗಿ ಮಾರ್ಪಡಿಸಿರುವುದು ಕಾಳೆಯವರ ವಿಶೇಷತೆ ಎಂದೇ ಹೇಳಬೇಕು.

ನಿಧಾನಗತಿಯ ಚಿತ್ರಕ್ರಮ ಕಾಳೆಯವರದು; ಆದರೂ ಅಂತಿಮವಾಗಿ ಅದು ಮಾಸ್ಟರ್‌ಪೀಸ್ ಆಗಿ ಹೊರಬೀಳುತ್ತದೆ. ಇದು ನೋಡುಗರ ಗಮನಕ್ಕೆ ಬರುತ್ತದೆ ಕೂಡ. ಕಾಳೆಯವರ ಚಿತ್ರಗಳನ್ನು ಗಮನಿಸಿದಾಗ ಅದರಲ್ಲಿ ಅವರು ಒಂದು ಕೃತಿ ರಚಿಸಲು ತೆಗೆದುಕೊಂಡ ದೀರ್ಘಾವಧಿಯ ಅನುಭವ ಮೂಡಿಸುತ್ತದೆ. ಏನೇ ಮಾಡಿದರೂ ಅದು ಪರಿಪೂರ್ಣವಾಗಬೇಕು. ಅಲ್ಲದೇ ಆ ನಿಟ್ಟಿನಲ್ಲಿ ಪ್ರಯತ್ನವಿರಬೇಕು ಎಂಬ ಮನೋಭಾವ ಅವರ ನಿಧಾನಗತಿಯ ಚಿತ್ರಕ್ರಮಕ್ಕೆ ಕಾರಣ. ಅವರ ಕಲಾಕೃತಿಗಳಲ್ಲಿ ಒಂದು ಶಿಸ್ತುಯಿದೆ, ಸ್ವಚ್ಛತೆಯಿದೆ, ಪರಿಪೂರ್ಣ ಎಂಬ ಭಾವ ತಟ್ಟನೆ ಗಮನಕ್ಕೆ ಬರುತ್ತದೆ.

ಕಾಳೆಯವರು ಭಾರತೀಯ ಮತ್ತು ಪಾಶ್ಚಾತ್ಯ ಕಲಾ ಪದ್ಧತಿಯನ್ನು ಸಮಾನವಾಗಿ ತಮ್ಮ ಕಲಾಕೃತಿಗಳಲ್ಲಿ ತಂದವರು. ಇವೆರಡರ ನಡುವಿನ ವ್ಯತ್ಯಾಸವನ್ನು ಕಾಳೆಯವರು ಈ ರೀತಿಯಾಗಿ ವಿವರಿಸುತ್ತಾರೆ.

"ಭಾರತೀಯ ಕಲೆಯನ್ನು ಉಳಿಸಿ ಬೆಳೆಸಬೇಕೆಂಬುದು ಶಾಂತಿನಿಕೇತನದವರ ಉದ್ದೇಶವಾಗಿತ್ತು. ಮೂಲತಃ ಈ ಉದ್ದೇಶವಿಟ್ಟುಕೊಂಡೇ ಈ ಶಾಲೆಯನ್ನು ಪ್ರಾರಂಭಿಸಲಾಯಿತು. ಆಗಿನ ಶಾಂತಿನಿಕೇತನ ಕಲಾಶಾಲೆಯ ಮುಖ್ಯಸ್ಥರಾದ ಈ.ಬಿ. ಹ್ಯಾವಲ್ ಅಜಂತಾ ಭಿತ್ತಚಿತ್ರಗಳಿಂದ ಪ್ರಭಾವಿತರಾಗಿ "ಈ ನೆಲದಲ್ಲಿ ಎಷ್ಟು ಒಳ್ಳೆಯ ಸಂಪ್ರದಾಯದ ಕಲಾಕೃತಿಗಳು ಇವೆ. ಇವುಗಳ ಬಗ್ಗೆ ಅಧ್ಯಯನ ನಡೆಯಬೇಕು; ಎಂದು ಆಲೋಚಿಸಿದರು. ಭಾರತೀಯ ಕಲಾವಿದರು ಇದರ ಆಳ ಅಗಲದ ಪರಿಣಾಮವನ್ನು ಕರಗತ ಮಾಡಿಕೊಳ್ಳಬೇಕು ಎಂಬ ಉದ್ದೇಶದಿಂದ ಅಲ್ಲಿ ಭಾರತೀಯ ಮೂಲಸತ್ವವನ್ನು ಕಲಾಕೃತಿಗಳಲ್ಲಿ ಮೂಡಿಸಲು ಮತ್ತು ಕಲಾವಿದರು ತಮ್ಮತನವನ್ನು ಉಳಿಸಿಕೊಳ್ಳಲು ಶ್ರಮಿಸಿದರು. ಆದರೆ ಜೆ.ಜೆ. ಸ್ಕೂಲಿನಲ್ಲಿ ಪಾಶ್ಚಾತ್ಯ ಶೈಲಿಯು ಭಾರತೀಯ ವಿದ್ಯಾರ್ಥಿಗಳಿಗೆ ಗೊತ್ತಿರಲಿಲ್ಲ. ಅದನ್ನು ಕಲಿಸುವ ಉದ್ದೇಶ ಜೆ.ಜೆ. ಸ್ಕೂಲಿನದ್ದು ಇಷ್ಟೇ ವ್ಯತ್ಯಾಸ" ಎಂದು ಹೇಳುವ ವಿ.ಟಿ.ಕಾಳೆಯವರು ಯಾವುದನ್ನು ತೆಗಳುವ ಹೊಗಳುವ ಗೋಜಿಗೆ ಹೋಗುವುದಿಲ್ಲ. ಜ್ಞಾನ ಅದು ಎಲ್ಲ ಕಡೆಯಿಂದಲೂ ಬರಲಿ ಎಂದು ಆಶಿಸಿದರು. ಅಂತಹ ಒಂದು ಮುಕ್ತ ಮನಸ್ಸು ಅವರದು. ಈಗಲೂ ಕೂಡಾ ಅವರು ಪಾಶ್ಚಾತ್ಯ ಮತ್ತು ಭಾರತೀಯ ಕಲೆಗೆ ನಡುವಿನ ಸೇತುವೆಯಂತಿದ್ದಾರೆ. ಈ ಎರಡರ ವಿಷಯದಲ್ಲಿ ಸಮತೋಲನವಿದೆ. ತಮ್ಮ

ಅನೇಕ ಕಲಾಕೃತಿಗಳಲ್ಲಿ ಭಾರತೀಯ ಅಂತಃಸತ್ವವನ್ನು ಪ್ರತಿ ಮೂಡಿಸುವ ಕಲಾಕೃತಿಗಳು ಇವೆ. ಹಾಗೆನೇ ಪಾಶ್ಚಾತ್ಯ ಶೈಲಿ ಪದ್ಧತಿಯಲ್ಲಿ ಮಾಡಿದ ಕಲಾಕೃತಿಗಳು ಇವರಲ್ಲಿವೆ. ಈ ಎರಡು ಪದ್ಧತಿ ಅವರಿಗೆ ಎರಡು ಕಣ್ಣುಗಳಿದ್ದಂತೆ. ಅವರು ವಿದ್ಯಾರ್ಥಿದೆಸೆಯಿಂದಲೂ ಈ ಎರಡು ಪದ್ಧತಿಯಲ್ಲಿ ಕಲಿಯುತ್ತಾ ಬಂದಿದ್ದಾರೆ. ಈಗಲೂ ಕೂಡ ಇದರಿಂದ ಹೊರತಾಗಿಲ್ಲ.

ಕಾಳೆಯವರು ಮುಂದುವರೆದು ಯಾವ ಕಲೆಯನ್ನೇ ಆಗಲಿ ಯಾವುದೇ ಒಂದು ದೇಶಕ್ಕೆ ಅಥವಾ ರಾಜ್ಯಕ್ಕೆ ಸೀಮಿತವಲ್ಲ. ಕೃತಿಗೆ ಯಾವುದೇ ಸರಹದ್ದು ಇಲ್ಲ. ಎಲ್ಲ ಸರಹದ್ದುಗಳನ್ನು ಮೀರಿದ್ದು ಕಲೆ. ಜಗತ್ತಿನಲ್ಲಿರುವ ಯಾವುದೇ ಒಂದು ಕಲೆಯನ್ನು ಕಲಿಯಲು ಎಲ್ಲರಿಗೂ ಹಕ್ಕು ಇದೆ. ವಾಯ್.ಕೆ. ಶುಕ್ಲಾ ಎಂಬ ಕಲಾವಿದ ಚೈನಾಗೆ ಹೋಗಿ ಚೈನಾ ಆರ್ಟ್ ಕಲಿತು ಬಂದರು. ಅದ್ಭುತವಾಗಿ ಕಲಾಕೃತಿ ರಚಿಸುತ್ತಿದ್ದರು ಬೇರೆ ದೇಶದ ಕಲೆ ಕಲಿಯಬಾರದು ಎಂಬುದು ನಿರ್ಬಂಧವೇನಿಲ್ಲ. ಒಬ್ಬ ಕಲಾವಿದನಿಗೆ ಜೀವನಾನುಭವ ಮುಖ್ಯ. ಆಗ ಎಷ್ಟೋ ಕಲಾವಿದರಿಗೆ ನೌಕರಿ ಇರುತ್ತಿರಲಿಲ್ಲ. ತನ್ನ ಉಪಜೀವನಕ್ಕೆ ಎಷ್ಟೋ ಕಲಾವಿದರು ಭಾವಚಿತ್ರಗಳನ್ನು ಪಾಶ್ಚಾತ್ಯ ಶೈಲಿಯಲ್ಲಿ ರಚಿಸಿ ಅವರವರ ಭಾವಚಿತ್ರಗಳನ್ನು ರಚಿಸಿಕೊಟ್ಟು ದುಡ್ಡು ಸಂಪಾದನೆ ಮಾಡುತ್ತಿದ್ದರು. ಜನಸಾಮಾನ್ಯರು ತ್ರಿ ಆಯಾಮದ ಕಲಾಕೃತಿಗಳನ್ನು ಇಷ್ಟಪಡುತ್ತಾರೆ. ಹೀಗಾಗಿ ನಾನು ಎಲ್ಲಾ ಕಲೆಯನ್ನು ಸ್ವಾಗತಿಸುತ್ತೇನೆ"[೧೫] ಎನ್ನುತ್ತಾರೆ ಕಾಳೆಯವರು.

ಕಾಳೆಯವರ ಒಟ್ಟು ಕಲಾಕೃತಿಗಳನ್ನು ಎರಡು ಗುಂಪುಗಳನ್ನಾಗಿ ವಿಂಗಡಿಸಬಹುದು. ಒಂದು ಅವರ ಅಂತಃಪ್ರೇರಣೆಯಿಂದ ಮೂಡಿಬಂದ ಕಲಾಕೃತಿಗಳು. ಎರಡನೆಯದಾಗಿ ಮತ್ತೊಬ್ಬರ ಬೇಡಿಕೆಗೆ ಅನುಸಾರವಾಗಿ ರಚಿಸಿರುವಂತಹ ಕಲಾಕೃತಿಗಳು. ಈ ಎರಡು ತರಹದ ಕಲಾಕೃತಿಗಳನ್ನು ಸಮನಾಗಿ, ಅಷ್ಟೇ ಶ್ರದ್ಧೆಯಿಂದ ಮಾಡಿ ಎರಡು ತರಹದ ಕಲಾಕೃತಿಗಳಿಗೆ ಪ್ರಾಮಾಣಿಕವಾದ ಪ್ರಾಶ್ಯಸ್ತ ನೀಡುತ್ತಾ ಬಂದಿರುವರು. ಆದರೂ ಅವರಿಗೆ ಹೆಚ್ಚು ಆತ್ಮತೃಪ್ತಿಯನ್ನು ತಂದಿರುವುದು ಅವರ ಅಂತಃಪ್ರೇರಣೆಯಿಂದ ಮೂಡಿಬಂದ ಕಲಾಕೃತಿಗಳಿಂದ. ಇದನ್ನು ಕುರಿತು ಕಾಳೆಯವರು ಹೇಳುವುದೇನೆಂದರೆ, "ಜನರಿಗೆ ನಾವು ಏನು ಕೊಡುತ್ತವೆಯೋ ಅದು ಅವರಿಗೆ ಅದು ಇಷ್ಟವಾದಾಗ ನನಗೂ ಖುಷಿ ಸಿಗುತ್ತದೆ. ಆ ಸಂತೋಷನೇ ಬೇರೆ. ಆದರೆ ಆತ್ಮತೃಪ್ತಿ ಬ್ರಹ್ಮಾನಂದ ಅಂತ ಏನು ನಾವು ಕರೆಯುತ್ತೆವೆಯೋ ಅದು ಇದರಲ್ಲಿ ಬರಲಿಕ್ಕೆ ಸಾಧ್ಯವಿಲ್ಲ. ಕೇವಲ ಜನ ನೋಡಿ ಸಂತೋಷ ಪಟ್ಟರು ಎಂಬ ಕಾರಣಕ್ಕೆ ಸಂತೋಷಪಡುತ್ತೇವೆ ಅಷ್ಟೇ. ಆದರೆ ನನ್ನ ಮನಸ್ಸಿನಿಂದ ಬಂದ ಕಲಾಕೃತಿಗಳಿಂದ ಏನು ಅನುಭೂತಿ ಸಿಗುತ್ತೋ ಆ ಆನಂದ ವರ್ಣಿಸಲು ಸಾಧ್ಯವಿಲ್ಲ.

೧೫. ಕಲಾವಿದ ವಿ.ಟಿ.ಕಾಳೆಯವರೊಂದಿಗಿನ ಸಂದರ್ಶನ, ೨೬.೮.೨೦೦೯

ಸ್ವತಂತ್ರ ಕೃತಿಯನ್ನು ಮಾಡಿದಾಗ ಆ ಆನಂದ ಸಿಗುತ್ತದೆ. ಆದರೆ ಏನೇ ಮಾಡಿದರೂ ಅಲ್ಲಿ ಪ್ರಾಮಾಣಿಕವಾಗಿ ಮಾಡುವುದು ಮುಖ್ಯ. ಆ ಪ್ರಾಮಾಣಿಕತೆ ಯಾವಾಗಲೂ ನನ್ನಲ್ಲಿರುತ್ತದೆ. "ಬಹಳ ಛಲೋ ಆಗ್ಯೆತಿ ಥೇಟ ನಮ್ಮಪ್ಪನ ತರನೇ ಬಂದ್ಯೆತಿ ಈಗ ಎದ್ದ ಬಂದ್ಹಾಂಗ ಕಾಣಿಸ್ತೈತಿ" ಅಂದಾಗ ಆಗುವ ಸಂತೋಷನೇ ಬೇರೆ. ಜನರಿಗೆ ತೃಪ್ತಿಸಿಗುವ ಹಾಗೇ ಕಲಾಕೃತಿಗಳನ್ನು ಮಾಡದೇ ಹೋದರೆ ನನಗೆ ಸಮಾಧಾನ ಸಿಗುವುದಿಲ್ಲ".

ಮುಂದುವರಿದು ಕಾಳೆಯವರು ಹೇಳುವುದೆನೆಂದರೆ "ಯಾವುದೇ ಒಂದು ಕಲಾಕೃತಿ ಮಾಡುವ ಪೂರ್ವದಲ್ಲಿ ಅದರ ಕುರಿತು ಆಳವಾಗಿ ಚಿಂತನೆ ಮಾಡಬೇಕಾಗುತ್ತದೆ. ಚಿಂತನೆಯಿಲ್ಲದೆ ಒಂದು ಒಳ್ಳೆಯ ಕಲಾಕೃತಿ ಸಾಧ್ಯವಿಲ್ಲ. ಇತ್ತೀಚಿನ ಯುವ ಕಲಾವಿದರು ಹೆಚ್ಚಾಗಿ ಕಲಾಕೃತಿಗಳಿಗೆ 'ಶೀರ್ಷಿಕೆ ರಹಿತ' ಎಂದು ಹೆಸರು ಕೊಡುತ್ತಾರೆ. ಕಾರಣ ಹೊಸ ಹೊಸ ಪ್ರಯೋಗ ಮಾಡುವ ಗೊಂದಲದಲ್ಲಿ ಆ ಕಲಾಕೃತಿ ಕುರಿತು ಚಿಂತನೆ ಮಾಡುವುದನ್ನು ಕೈಬಿಟ್ಟಿರುತ್ತಾರೆ. ಈ ಅವಸರದ ಯುಗದಲ್ಲಿ ಅವರು ಕಲಾಕೃತಿಗಳನ್ನು ಸಹ ಅವಸರವಾಗಿ ಮುಗಿಸಿ 'ಶೀರ್ಷಿಕೆರಹಿತ' ಎಂದು ನಾಮಕರಣ ಮಾಡಿಬಿಡುತ್ತಾರೆ. ಆ ಕಲಾಕೃತಿಯ ಬಗ್ಗೆ ಕೇಳಿದರೆ ಅವರಿಗೆ ಗೊತ್ತಿರುವುದಿಲ್ಲ. ಈಗ ಕಲಾ ವಲಯದಲ್ಲಿ ಪರಿಸ್ಥಿತಿ ಎಲ್ಲಿಗೆ ಬಂದಿದೆ ಎಂದರೆ ಒಂದು ಕಲಾಕೃತಿಗೆ ಶೀರ್ಷಿಕೆಯಿದ್ದರೆ, ಅದೊಂದು ಇಲಸ್ಟ್ರೇಷನ್ ಕಲಾಕೃತಿ ಅದು ಆಗಬಾರದು ಎಂಬುವುದು ಇತ್ತೀಚಿನ ವಾದ. ಆದರೆ ನಾವು ಏನೇ ಮಾಡರ್ನ್ ಕಲಾಕೃತಿಯನ್ನು ರಚಿಸಿದ್ದರೂ ಪೂರ್ವದಲ್ಲಿ ಅದರ ಕುರಿತು ಆಳವಾದ ಚಿಂತನೆಯೊಂದು ಅಲ್ಲಿರಬೇಕು ಆಗ ಮಾತ್ರ ಅದು ಒಂದು ಯಶಸ್ವಿ ಕಲಾಕೃತಿ ಎನಿಸಿ ಕೊಳ್ಳುತ್ತದೆ".[೧೬] ಹೀಗೆ ಕಾಳೆಯವರು ಎರಡು ತಲೆಮಾರುಗಳ ನಡುವೆಯಿರುವ ಅಂತರವನ್ನು ಮಾರ್ಮಿಕವಾಗಿ ವಿವರಿಸುತ್ತಾರೆ.

ಕಾಳೆಯವರ ಕಲಾಕೃತಿಗಳಿಗೆ ವಿವಿಧ ಮುಖವಿದೆ. ಅವರು ಒಂದೇ ವಿಷಯವನ್ನು ಹಲವಾರು ಸಮಯದ ಅವಧಿಯವರೆಗೆ ಮುಂದುವರೆಸಿಕೊಂಡು ಹೋಗುವುದಿಲ್ಲ. ಚಿತ್ರ ರಚಿಸುವ ಶೈಲಿ, ಕ್ರಮ, ಒಂದೇ ಆದರೂ ವಿಷಯಗಳು ವಿಭಿನ್ನತೆಯಿಂದ ಕೂಡಿವೆ. ಹೀಗೆ ಕಾಳೆಯವರ ಚಿತ್ರಗಳು ಬಿಡಿ ಬಿಡಿಯಾದ ಅನುಭವಗಳನ್ನು ಕೊಡುತ್ತವೆ. ಅಲ್ಲದೇ ಅವರ ಚಿತ್ರಗಳ ವಿಷಯ ವಸ್ತುಗಳು ಹೀಗಿವೆ.

೧. ಸಾಂಪ್ರದಾಯಿಕ ವಿಷಯ ವಸ್ತುಗಳನ್ನೊಳಗೊಂಡ ಸಂಯೋಜನಾ ಚಿತ್ರಗಳು.

೨. ವಾಣಿಜ್ಯಕ್ಕೆ ಸಂಬಂಧಿಸಿದ ಸಂಯೋಜನಾ ಚಿತ್ರಗಳು

೩. ನವ್ಯ ಶೈಲಿಯ ಸೃಜನಾತ್ಮಕ ಸಂಯೋಜನಾ ಚಿತ್ರಗಳು

---

೧೬. ಕಲಾವಿದ ವಿ.ಟಿ.ಕಾಳೆಯವರೊಂದಿಗಿನ ಸಂದರ್ಶನ, ೨೬.೮.೨೦೦೯

ಶೈಲಿಯ ದೃಷ್ಟಿಯಿಂದ ಸಮಾಜದ ಎಲ್ಲಾ ವರ್ಗದ ಜನರಿಗೆ ಇವರ ಕಲಾಕೃತಿಗಳು ಸುಲಭವಾಗಿ ಸಂವಹನಗೊಳ್ಳುವುದರಿಂದ ಹೆಚ್ಚು ಆತ್ಮೀಯ ಎನಿಸುತ್ತವೆ. ಇವರ ಕಲಾಕೃತಿಗಳಲ್ಲಿ ಸಂಕೇತ ಪ್ರಾಮುಖ್ಯತೆಯಿದ್ದರೂ ಕೂಡ ಅವುಗಳು ಯಾವುದೇ ಗೊಂದಲಗಳಿಲ್ಲದೆ ನೋಡಿಸಿಕೊಂಡು ಹೋಗುವಂಥವುಗಳಾಗಿರುವುದರಿಂದ ಪ್ರತಿಯೊಬ್ಬರೂ ಇವರ ಕಲಾಕೃತಿಗಳನ್ನು ಸುಲಭವಾಗಿ ಅರ್ಥೈಸಿ ಕೊಳ್ಳಬಹುದಾಗಿದೆ. ಅರ್ಥವಾಗದ ವಿಕೃತ ಆಕಾರಗಳಿಗಿಂತಲೂ ಇವರ ಆಕೃತಿಗಳು ಪರಿಚಿತ ವಿರುವುದರಿಂದ ಮತ್ತು ಸಂಯೋಜನೆಯಲ್ಲಿ ಒಂದಕ್ಕೊಂದು ಪೂರಕವಾಗಿರುವುದರಿಂದ ನೋಡುಗರಿಗೆ ಸುಲಭವಾಗಿ ಇವರ ಕಲಾಕೃತಿಗಳು ಅರ್ಥವಾಗುವುದರಿಂದ ಇವರದು ರಿಯಾಲಿಸಂ ಶೈಲಿ ಎಂದು ಹೇಳಬಹುದು.

ಕಾಳೆಯವರ ನವ್ಯಶೈಲಿಯ ಸಂಯೋಜನಾ ಕಲಾಕೃತಿಗಳ ವಸ್ತುಗಳು ಎಂದರೆ, ಅಲ್ಲಿ ಬದುಕಿನ ಅನ್ವೇಷಣೆಯಿರುತ್ತದೆ. ರಾಜಕೀಯ ವೈಪರೀತ್ಯಗಳಿವೆ, ಸಾಮಾಜಿಕ ಅಸಮಾನತೆಗಳಿವೆ. ಅಲ್ಲಿ ಸಮಾಜದ ಗಂಭೀರ ಸಮಸ್ಯೆಗಳಿವೆ. ಮಾನವ ಸಂಬಂಧಗಳ ಸೂಕ್ಷ್ಮಗ್ರಹಿಕೆಗಳಿವೆ, ಅಳಿಸಿ ಹೋಗು ತ್ತಿರುವ ನಮ್ಮ ಭಾರತೀಯ ಸಂಸ್ಕೃತಿಯ ಮೂಲಸತ್ವಗಳ ಬಗ್ಗೆ ಕಳಕಳಿ ಅವರ ನವ್ಯ ಶೈಲಿಯ ಸಂಯೋಜನಾ ಕಲಾಕೃತಿಗಳಲ್ಲಿ ಪ್ರಮುಖವಾಗಿ ಕಂಡುಬರುವ ಅಂಶಗಳಾಗಿವೆ.

ಕಾಳೆಯವರ ಸಾಂಪ್ರದಾಯಿಕ ಸಂಯೋಜನಾ ಕಲಾಕೃತಿಗಳು ಮತ್ತು ನವ್ಯ ಶೈಲಿಯ ಕಲಾಕೃತಿಗಳು ಈ ಎರಡು ಶೈಲಿಯ ಕಲಾಕೃತಿಗಳನ್ನು ಅವರು ಚಿತ್ರಿತ ಕ್ರಮ, ವಿಷಯ ವಸ್ತುವಿನ ಶೈಲಿಯಲ್ಲಿ ಭಿನ್ನತೆ ತಂದಿದ್ದಾರೆ. ಅಲ್ಲದೇ ಈ ಎರಡು ಪ್ರಕಾರಗಳಲ್ಲಿಯೂ ಅವರು ಅಷ್ಟೇ ತೃಪ್ತಿಯನ್ನು ಯಶಸ್ಸನ್ನು ತಂದುಕೊಂಡಿದ್ದಾರೆ. ಕಾಳೆಯವರ ಕಲಾಕೃತಿಗಳು ನೋಡುಗರನ್ನು ಆಲೋಚನೆಯ ಆಳಕ್ಕೆ ಕೊಂಡುಯ್ಯುತ್ತವೆ. ಅಲ್ಲದೇ ಅವರ ಮನಸ್ಸನ್ನು ಕೆಣಕುತ್ತವೆ. ಅರ್ಥ ಹುಡುಕಲು ತೊಡಗಿಸುತ್ತವೆ. ಅಲ್ಲದೇ ಕಲಾಕೃತಿಗಳ ಮೂಲ ಅರ್ಥಗಳು ಅಲೆ ಅಲೆಯಾಗಿ ಕಣ್ಣೆದುರಿಗೆ ಬರುವಂತೆ ಅನುಭವವನ್ನುಂಟು ಮಾಡುತ್ತವೆ. ಅವರ ಕಲಾಕೃತಿಗಳು ಭಾವನಾತ್ಮಕತೆ ಯಿಂದ ಕೂಡಿದ್ದು ಸೌಂದರ್ಯ ಪ್ರಜ್ಞೆಯ ಅಡಿಪಾಯದಲ್ಲಿಯೇ ಸೃಷ್ಟಿಸಲ್ಪಟ್ಟಿವೆ ಎಂದು ಹೇಳಬಹುದು.

ಯಾವುದೇ ಕಲಾವಿದ ತನ್ನ ಆಸಕ್ತಿಯ ಯಾವುದೋ ಒಂದು ವಿಷಯದಲ್ಲಿ ತನಗೆ ಇಷ್ಟವಾದ ಒಂದು ಮಾಧ್ಯಮದಲ್ಲಿ ಪ್ರೌಢಿಮೆ, ನೈಪುಣ್ಯಗಳನ್ನು ಪಡೆಯುವುದು ಸಾಮಾನ್ಯ ಮತ್ತು ಸಾಧ್ಯ.[೧೭] ಕಾಳೆಯವರು ವಿವಿಧ ಮಾಧ್ಯಮಗಳಲ್ಲಿ ಕಲಾಕೃತಿಗಳನ್ನು ರಚಿಸಿದ್ದರೂ ಅವರ ಅತ್ಯಂತ ಆಸಕ್ತಿಯ

೧೭. ಬಿ.ಕೆ. ಹಿರೇಮಠ, ಅಮೀನಸಾಹೇಬ ಕಮಡೋಳಿ, ಪು.೨

ಅವರ ಹೃದಯಕ್ಕೆ ಹತ್ತಿರವಾದ ಮಾಧ್ಯಮ 'ಜಲವರ್ಣ'. ಈ ಮಾಧ್ಯಮದಲ್ಲಿ ಅವರು ಅನೇಕ ಕಲಾಕೃತಿಗಳನ್ನು ರಚಿಸಿದ್ದು ಈ ಕಲಾಕೃತಿಗಳು ಅಂತಃಕರಣದಿಂದ ಮೂಡಿಬಂದಿವೆ. ಅವರ ವಾಷ್‌ತಂತ್ರದಿಂದ ಮೂಡಿಬಂದ ಕಲಾಕೃತಿಗಳು ಚಿತ್ತಾಕರ್ಷಣೆಯಿಂದ ಕೂಡಿದ್ದು ಸಮ್ಮೋಹಕ ಶಕ್ತಿ ಸಹಜವಾಗಿ ಕಂಡುಬರುತ್ತದೆ.

ಕಾಳೆಯವರ ಮೆಚ್ಚಿನ ಮಾನಸ ಗುರುಗಳಲ್ಲಿ ಒಬ್ಬರಾದ ಅಮೀನಸಾಹೇಬ ಕಮಡೋಳಿಯವರ ಬಗೆಗೆ ಡಾ. ಬಿ.ಕೆ. ಹಿರೇಮಠರು ಒಂದು ಕಡೆ ಹೀಗೆ ಬರೆಯುತ್ತಾರೆ. "ಸಂಯೋಜನಾ ಚಿತ್ರರಚನೆಯಲ್ಲಿ ಆಯಾ ಕಲಾವಿದನ ದೃಷ್ಟಿ, ಧೋರಣೆ, ಒಲವುಗಳು, ಸ್ಪಂತಿಕೆ, ಅನುಭವ, ಅಧ್ಯಯನ ಏನೆಲ್ಲವೂ ಕಂಡುಬರುತ್ತದೆ. ಹಾಗೇ, ಕಮಡೋಳಿಯವರು ಸಂಯೋಜನಾ ಚಿತ್ರಗಳಲ್ಲಿ ಕಲಾವಿದನ ಉನ್ನತವಾದ ಸಂಸ್ಕಾರಗಳನ್ನು ಕವಿ ಹೃದಯವನ್ನು ಸಾಮಾಜಿಕತೆಯ ಅರಿವನ್ನು ಒಟ್ಟು ಜೀವನದ ಬಗೆಗೆ ಇರುವ ಕಳಕಳಿಯನ್ನು ಕಾಣಬಹುದು. ಎಲ್ಲಕ್ಕಿಂತ ಹೆಚ್ಚಾಗಿ ಪಾಶ್ಚಾತ್ಯ ಕಲೆಯ ಗಾಢ ಪ್ರಭಾವದ ಮಧ್ಯದಲ್ಲಿಯೂ ಭಾರತೀಯ ಸಾಂಸ್ಕೃತಿಕ ಅಂಶಗಳನ್ನು, ಭಾರತೀಯತೆಯನ್ನು ಉಳಿಸಿಕೊಂಡು ಚಿತ್ರರಚನೆ ಮಾಡಿದುದು ಅವರ ಹಿರಿಮೆ".[೧೮] ಬಿ.ಕೆ. ಹಿರೇಮಠ ಅವರ ಈ ಅಭಿಪ್ರಾಯವನ್ನು ಕಾಳೆಯವರ ಕಲಾಕೃತಿಗಳಿಗೂ ಸಹ ಅನ್ವಯಿಸಿ ಹೇಳಬಹುದು. ಮಾನಸ ಗುರು ಕಮಡೋಳಿಯವರ ಪ್ರಭಾವ ಪ್ರೇರಣೆಯಲ್ಲಿ ಬೆಳೆದ ಕಾಳೆಯವರು ಈ ಗುರುವನ್ನು ಅನುಸರಿಸಿದ್ದು ಸಹಜವೇ. ಕಾಳೆಯವರ ಕಲಾಕೃತಿಗಳಲ್ಲಿಯೂ ಕೂಡ ಈ ಎಲ್ಲಾ ಅಂಶಗಳು ಸ್ಪಷ್ಟವಾಗಿ ಗೋಚರಿಸುತ್ತವೆ.

ಪೌರಾಣಿಕ ವಸ್ತುಗಳನ್ನು ಆಯ್ದುಕೊಂಡು ತಮ್ಮ ಚಿತ್ರಗಳ ಮೂಲಕ ನಾಡಿನ ಸಾಂಸ್ಕೃತಿಕ ರಾಯಭಾರಿಯಂತೆ ಮೆರೆದ ಕಮಡೋಳಿಯವರು ನಿತ್ಯ ಜೀವನದ ನೈಜ ದೃಶ್ಯಗಳನ್ನು ನಯವಾಗಿ ಚಿತ್ರಿಸಿ, ಬದುಕಿನ ಹಲವು ಹತ್ತು ಮುಖಗಳನ್ನು ತೋರಿಸಿ ಜನತೆಯ ಕಲಾವಿದ ಆಗಿ ಬಾಳಿದ್ದಾರೆ.[೧೯] ಅಂತೆಯೇ ಕಾಳೆಯವರು ಕೂಡ ಅನೇಕ ಪೌರಾಣಿಕ ಹಿನ್ನೆಲೆಯುಳ್ಳ ವಿಷಯ ವಸ್ತುವನ್ನು ತಮ್ಮ ಅಭಿವ್ಯಕ್ತಿ ವಿಷಯಕ್ಕೆ ಆಯ್ದುಕೊಂಡು ಸಮರ್ಪಕವಾಗಿ ಅಭಿವ್ಯಕ್ತಿಸಿದ್ದು ಕಾಳೆಯವರನ್ನು ಕೂಡ ನಾಡಿನ ಸಾಂಸ್ಕೃತಿಕ ರಾಯಭಾರಿಯೆಂದು ಕರೆಯಬಹುದು. ಕಾಳೆಯವರು ಕಲ್ಪನಾಧಾರಿತ ಪೌರಾಣಿಕ ವಿಷಯಗಳುಳ್ಳ ಚಿತ್ರಗಳನ್ನಲ್ಲದೆ, ಸಮಾಜದಲ್ಲಿ ನಿತ್ಯಜೀವನದಲ್ಲಿ ವೈಪರಿತ್ಯಗಳು, ನಡೆಯುವ ಅನಾಚಾರಗಳನ್ನೂ, ಶೋಷಣೆಗಳನ್ನೂ ಅಭಿವ್ಯಕ್ತಿಸಿದ್ದಾರೆ. ಈ ಮುಖೇನ ಕಾಳೆಯವರು ಒಬ್ಬ

---

೧೮. ಬಿ.ಕೆ. ಹಿರೇಮಠ, ಅಮೀನಸಾಹೇಬ ಕಮಡೋಳಿ, ಪು.೨

೧೯. ಅದೇ ಪು.೨

ಸಾಂಪ್ರದಾಯಿಕ ಕಲಾವಿದರು, ಸಮಕಾಲೀನ ಕಲಾವಿದರು ಮತ್ತು ಸಾಮಾನ್ಯ ಜನಕ್ಕೆ ಹತ್ತಿರದ ಕಲಾವಿದರೆಂದು ಗುರುತಿಸಬಹುದು.

ಅ.ನ.ಕೃ. ಅವರು ಒಂದೆಡೆ ಹೇಳುವಂತೆ "ಕಲಾವಿದರು ಎಷ್ಟು ಸುಸಂಸ್ಕೃತನಾಗಿ, ವಿಚಾರ ಪರನಾಗಿ, ಧ್ಯಾನಮಗ್ನನಾಗಿದ್ದರೆ ಕಲೆಯು ಅಷ್ಟು ಸುಂದರವೂ, ಶಕ್ತಿಯುತವೂ ಪ್ರಚೋದಕವೂ ಆಗಿರುತ್ತದೆ" ಈ ಮಾತು ಕಾಳೆಯವರ ಕಲಾಕೃತಿಗಳಿಗೆ ಹೆಚ್ಚು ಸೂಕ್ತವಾಗಿ ಹೊಂದುತ್ತದೆ.

ಅಜಂತೆಯ ಸಂಪ್ರದಾಯದಿಂದ ಚೇತನಗೊಂಡು ರಜಪೂತ, ಮೊಘಲ ಸಂಪ್ರದಾಯಗಳ ತನಕ ಬೆಳೆದು ಬಂದ ಭಾರತೀಯ ಚಿತ್ರಕಲೆಯು ೧೬೫೮ರಲ್ಲಿ ಔರಂಗಜೇಬನ ಆಘಾತವನ್ನು ತಡೆಯಲಾರದೆ ತನ್ನ ಬೆಳವಣಿಗೆಯನ್ನು ನಿಲ್ಲಿಸಿ ಬಿಟ್ಟಿತು. ಆತನ ನಂತರ ಕಂಪನಿ ಸರ್ಕಾರದ ಅಧಿಕಾರಿಗಳು ಪ್ರಯತ್ನ ಪೂರ್ವಕವಾಗಿ ಚಿತ್ರಕಲೆಯನ್ನು ಕೊಲ್ಲುತ್ತಲೇ ಬಂದರು. ಆದರೆ ಆಂಗ್ಲ ಸರ್ಕಾರವು ತಮ್ಮ ಸಮರ ನೀತಿಯನ್ನು ಬದಲಾಯಿಸಿ ತಮ್ಮ ಅಭಿರುಚಿಯ ಎರಕದಲ್ಲಿ ಭಾರತೀಯ ಚಿತ್ರಕಾರರನ್ನು ಹೊತ್ತಯ್ಯುತ್ತಾ, ತಮಗೆ ಬೇಕಾದಂತೆ ಅವರು ಚಿತ್ರಗಳನ್ನು ರಚಿಸಲು ಪ್ರೋತ್ಸೋಹಿಸುತ್ತಾ ಬಂದರು. ಈ ನೀತಿಯ ಪರಿಣಾಮವಾಗಿ ಆಂಗ್ಲ ಭಾರತೀಯ ಸಂಪ್ರದಾಯವೊಂದು ಚಿತ್ರಕಲೆಯಲ್ಲಿ ಆರಂಭವಾಯಿತು.[೨೦] ಬ್ರಿಟಿಷರ ಆಡಳಿತದ ಕಾಲದಲ್ಲಿಯೇ ತಲೆಯೆತ್ತಿ ನಿಂತ ಜೆ.ಜೆ. ಕಲಾಶಾಲೆಯ ಕಲಿಕಾ ಪದ್ಧತಿ ಕೂಡ ಸಂಪೂರ್ಣ ಆಂಗ್ಲೀಕರಣವಾಗಿತ್ತು. ಈ ಪದ್ಧತಿಯ ಅಡಿಯಲ್ಲಿಯೇ ಬೆಳೆದು ಬಂದ ಕಾಳೆಯವರ ಕಲಾಶಿಕ್ಷಣವೂ ಸಹಜವಾಗಿಯೇ ಆಂಗ್ಲೀಕರಣವಾಗಿದ್ದು, ಅವರ ಕಲಾಕೃತಿಗಳಲ್ಲಿ ಸಹಜವಾಗಿಯೇ ಪಾಶ್ಚಾತ್ಯ ಪ್ರಭಾವದ ಛಾಪು ಕಂಡುಬರುತ್ತದೆ.

೧೮೯೬ರಲ್ಲಿ ಕಲ್ಕತೆಯ ಕಲಾಶಾಲೆಯ ಅಧ್ಯಾಪಕರಾಗಿ ಬಂದ ಶ್ರೀ ಇ.ಬಿ. ಹ್ಯಾವಲ್ ಎಂಬ ಪ್ರತಿಭಾಸಂಪನ್ನರಾದ ವಿದ್ವಾಂಸರು ಭಾರತೀಯ ಕಲಾಪ್ರಪಂಚದ ಪರಿಸ್ಥಿತಿಯನ್ನು ಕಂಡು ಮನನೊಂದು ಭಾರತವರ್ಷಕ್ಕೆ ಅದರ ಆತ್ಮಜ್ಯೋತಿಯ ಅರಿವನ್ನುಂಟು ಮಾಡುವ ಕಾರ್ಯದಲ್ಲಿ ತೊಡಗಿದರು. ತಮ್ಮ ಕಲಾಭವನದಲ್ಲಿ ತುಂಬಿದ ಗ್ರೀಸ್, ಇಟಲಿ, ಇಂಗ್ಲೆಂಡ್, ಫ್ರಾನ್ಸ್ ದೇಶಗಳ ಚಿತ್ರಗಳನ್ನು ಶಿಲಾಶಿಲ್ಪಗಳನ್ನು ಬಿಸಾಡಿ ಕಲಾಭಿಮಾನಿಗಳಿಗೂ, ವಿದ್ಯಾರ್ಥಿಗಳಿಗೂ ಅಜಂತಾ, ಎಲ್ಲೋರಾ ಮುಂತಾದ ಕಲಾಭವನಗಳ ಕಡೆಗೆ ಕೈತೋರಿದರು. ಅವರ ನಂತರ ಅದೇ ಉದ್ಯೋಗಕ್ಕೆ ಬಂದ ಡಾ. ಅವನೀಂದ್ರನಾಥ್ ಠಾಕೂರರು ಹ್ಯಾವಲ್ ಅವರ ಆದರ್ಶವನ್ನು ಮುಂದುವರಿಸಿ ಪುನರುಜ್ಜೀವಿತ ಭಾರತೀಯ ಕಲೆಯನ್ನು ಎತ್ತಿಹಿಡಿಯುವಲ್ಲಿ ಕಾರಣಕರ್ತರಾದರು. ನಂದಲಾಲ್

---

೨೦. ಅ.ನ.ಕೃ., ಭಾರತೀಯ ಚಿತ್ರಕಲೆಯಲ್ಲಿ ರಾಜಾರವಿವರ್ಮನ ಸ್ಥಾನ, ಪು.೨೫

ಬಸು, ಕೆ. ವೆಂಕಟಪ್ಪ, ಪ್ರಮೋದಕುಮಾರ ಚಟರ್ಜಿ, ದೇವಿಪ್ರಸಾದ್‌ರಾಯ್ ಚೌಧುರಿ, ಅಸಿತ ಕುಮಾರ ಹಲ್ದಾರ್ ಮೊದಲಾದ ಕಲಾವಿದರಿಗೆ ಶಿಕ್ಷಣವಿತ್ತು. ಅವರ ಮೂಲಕ ಭಾರತೀಯ ಚಿತ್ರಕಲೆಯ ಸಂಪನ್ನತೆಯನ್ನು ದಶದಿಕ್ಕುಗಳಿಗೂ ಹರಡಲಾರಂಭಿಸಿದರು.[೨೧] ಭಾರತೀಯ ಚಿತ್ರಕಲೆಯ ಅಂತಃಸತ್ವವನ್ನು ಮನಗೊಂಡು ರೂಪತಾಳಿದ ಬಂಗಾಲಿ ಶೈಲಿಯ ಕಲಾವಿದರು ಅವರ ಕಲಾ ರಚನೆಯ ತಂತ್ರ, ವಿಷಯವಸ್ತು ಮುಂತಾದವುಗಳು ಪರೋಕ್ಷವಾಗಿ ಕಾಳೆಯವರ ಕಲಾಕೃತಿಗಳ ಮೇಲಾಗಿರುವುದು ಸ್ಪಷ್ಟ. ಅಬ್ದುಲ್ ರಹಮಾನ ಚುಗ್ತಾಯಿ, ಕ್ಷಿತೀಂದ್ರನಾಥ ಮುಜುಂಮದಾರ ಮುಂತಾದ ಬಂಗಾಲಿ ಶೈಲಿಯ ಕಲಾವಿದರು ಕಾಳೆಯವರ ಮೇಲೆ ಗಾಢವಾದ ಪರಿಣಾಮವನ್ನುಂಟು ಮಾಡಿದುದರ ಪರಿಣಾಮವನ್ನು ಕಾಳೆಯವರ ಅನೇಕ ಕಲಾಕೃತಿಗಳಲ್ಲಿ ಕಾಣಬಹುದು. ಹೀಗೆ ಕಾಳೆಯವರು ಒಂದೆಡೆ ಪಾಶ್ಚಾತ್ಯ ಪದ್ಧತಿಯ ಕಲಿಕೆಯ ಹಿನ್ನೆಲೆ ಮತ್ತು ಒಂದಡೆ ಬುದ್ಧಿ ಬಲಿತ ನಂತರ ಭಾರತೀಯ ಕಲೆಯ ಅಂತಃಸತ್ವಕ್ಕೆ ಮಾರುಹೋದ ಭಾರತೀಯ ಕಲೆಯ ಅನುಯಾಯಿಗಳ ಪ್ರಭಾವ, ಪ್ರೇರಣೆಯಿಂದ ಭಾರತೀಯ ಕಲಾಶೈಲಿಯನ್ನು ತಮ್ಮ ಕಲಾಕೃತಿಗಳಲ್ಲಿ ತಂದು ಕಲಾಕೃತಿಗಳನ್ನು ರಚನೆಮಾಡಿ ಯಶಸ್ವಿಗೊಂಡಿದ್ದು. ಈ ಎರಡು ಅಂಶಗಳ ಪ್ರಭಾವ ಪ್ರೇರಣೆಗಳಿಂದ ಕಾಳೆಯವರನ್ನು ಈ ಎರಡು ಕಲಾ ಪದ್ಧತಿಗಳ ನಡುವಿನ ಸಮರ್ಪಕ ಸೇತುವೆ ಎಂದು ಕರೆಯಬಹುದು.

ಅಬ್ದುಲ್ ರಹಮಾನ್ ಚುಗ್ತಾಯಿ ಅವರದು ವಿಶಿಷ್ಟ ಸಂಪ್ರದಾಯ. ಇತ್ತಪ್ರಾಚ್ಯವೂ ಅಲ್ಲ, ಪಾಶ್ಚಾತ್ಯವೂ ಅಲ್ಲದ, ಮೊಘಲ್ ಪದ್ಧತಿಯೂ ಅಲ್ಲದ, ನವ್ಯವೂ ಅಲ್ಲದ, ಪಕ್ಷೀಯ ಪ್ರಭಾವಿತ ಚಿತ್ರಗಳು ಚುಗ್ತಾಯಿ ಅವರದೇ ಆಗಿವೆ. ಮನುಷ್ಯನನ್ನು ಅವರು ಅವನ ಹೊರಗಿನ ಆಕಾರ ಅಳತೆ ಮುಂತಾದವುಗಳನ್ನು ನೋಡದೆ ಒಳಗಿನ ತುಮುಲಗಳನ್ನು ಅನುಭವಗಳನ್ನು ಸ್ಪಂದನಗಳನ್ನು ನೋಡುತ್ತಾರೆ ಚುಗ್ತಾಯ್. ಇದರಿಂದಾಗಿ ಅವರ ಮೂರ್ತಿಗಳು ಜೀವ ತಳೆದು ನಿಲ್ಲುತ್ತವೆ. ಹಾಗೂ ನಮ್ಮೊಂದಿಗೆ ಮಾತನಾಡುತ್ತವೆ. ಅವರ ಉಮರ್‌ಖಯ್ಯಂ ರುಬಾಯಿಗಳು ಬದುಕಿನಲ್ಲಿ ಪ್ರೇಮವನ್ನು, ತತ್ವವನ್ನು, ಆದರ್ಶವನ್ನು ವಾಸ್ತವತೆಯನ್ನು, ಕ್ಷಣಿಕತೆಯನ್ನು ಹೇಳುವ ಅತ್ಯಂತ ಅದ್ಭುತ ಚಿತ್ರಗಳಾಗಿವೆ.[೨೨] ಚುಗ್ತಾಯಿ ಅವರಲ್ಲಿನ ಉನ್ನತ ವಿಶೇಷವೆಂದರೆ ರೇಖೆಗಳ ಲಾವಣ್ಯಕ್ಕೆ ಜೊತೆಯಾಗಿ ರಂಗುಗಳ ಮಾಧುರ್ಯವನ್ನು ಸೃಷ್ಟಿಸುತ್ತಾರೆ. ತಮ್ಮ ಚಿತ್ರರಚನೆಯಲ್ಲಿ. ಪಾರಸಿಕ ಕಲಾಸಂಪ್ರದಾಯ ಸುಲಲಿತ ರೇಖೆಗಳಿಗೆ, ಸುರಮ್ಯವರ್ಣಗಳಿಗೆ ಪ್ರಖ್ಯಾತವಾದುದು.

---

೨೧. ಅ.ನ.ಕೃ., ಭಾರತೀಯ ಚಿತ್ರಕಲೆಯಲ್ಲಿ ರಾಜಾರವಿವರ್ಮನ ಸ್ಥಾನ, ಪು.೨೫

೨೨. ಹರಿಹರಪ್ರಿಯ (ಅನು) ರಸರೇಖೆ, ಪು.೧೧

ಅದು ಚುಗ್ತಾಯಿ ಕಲೆಯಲ್ಲಿ ಸುವ್ಯಕ್ತ ರೇಖೆಗಳ ಲೀಲಾಜಾಲವಾದ ಇಂದ್ರಜಾಲ, ಮೃದುವಾದ ರಂಗುಗಳ ಸಮ್ಮೇಳನದಿಂದ ವಿಶಿಷ್ಟ ರಸಸೃಷ್ಟಿ ಮೂಡುತ್ತದೆ. ಅವರು ಅರ್ಧನಿಮೀಲಿತ ನೇತ್ರಗಳೊಂದಿಗೆ ಚಿತ್ರಿಸುತ್ತಾರೆ. ಅವರ ಸ್ತ್ರೀ ಮೂರ್ತಿಗಳು ಭಾವಜಗತ್ತಿಗೆ ರಾಣಿಯರು, ಪ್ರಶಾಂತತೆ, ಸಂತೃಪ್ತಿ, ಆನಂದ ಇವು ಅವರು ಚಿತ್ರಿಸುವ ಸ್ತ್ರೀಮೂರ್ತಿಗಳ ಪ್ರತ್ಯೇಕತೆ. ಭಾರತೀಯ ವಿಷಯಗಳ ಮೇಲೆ ಅವರಿಗೆ ಆಸಕ್ತಿ ಅಧಿಕ. ವಸ್ತುವನ್ನು ನೋಡುವಿಕೆ ಬೇರೆ, ವಸ್ತು ಆಕೃತಿಯನ್ನು ನೋಡುವಿಕೆ ಬೇರೆ. ಗುಲಾಬಿ ಹೂವನ್ನು ನೋಡುವಿಕೆ ಬೇರೆ, ಅದರ ರಂಗನ್ನು ನೋಡುವಿಕೆ ಬೇರೆ. ಚುಗ್ತಾಯಿ ವಸ್ತುವಲ್ಲದೆ ವಸ್ತುವಿನ ಆಕೃತಿಯನ್ನು ನೋಡುತ್ತಾರೆ. ಗುಲಾಬಿ ಹೂವನ್ನಲ್ಲದೆ ಅದರ ರಂಗನ್ನು ನೋಡುತ್ತಾರೆ. ಮಾನವನಲ್ಲದೆ ಮಾನವನಲ್ಲಿನ ಪ್ರಾಣವನ್ನು ನೋಡುತ್ತಾರೆ. ಅದನ್ನು ಚಿತ್ರಿಸುತ್ತಾರೆ ಚುಗ್ತಾಯಿ.[೨೩] ಹಾಗೆಯೇ ಚಿತ್ರಕಲಾಕ್ಷೇತ್ರದಲ್ಲಿ ಬಂಗಾಲಿ ಶೈಲಿಯ ಕಲಾವಿದ ಅಬ್ದುಲ್‌ರಹಮಾನ್ ಚುಗ್ತಾಯಿ ಅವರನ್ನು ಅವರ ಕಲಾತಂತ್ರ, ಶೈಲಿಯನ್ನು ಬಹುವಾಗಿ ಮೆಚ್ಚುವ ಕಾಳೆಯವರ ಕಲಾಕೃತಿಗಳು ಸಹ ಈ ಮೇಲಿನ ಹೇಳಿಕೆಗೆ ಭಿನ್ನವಾಗಿಲ್ಲ. ಕಾಳೆಯವರ ರಾಗಮಾಲಾ ಚಿತ್ರಗಳು, ದೇವತಾ ಚಿತ್ರಗಳು, ದಿನದ ನಾಲ್ಕು ಪ್ರಹರ ವಿಷಯವಸ್ತುಗಳ ಚಿತ್ರಣಗಳಲ್ಲಿ ಈ ಮೇಲಿನ ಅಂಶ ಹೆಚ್ಚು ಸ್ಪಷ್ಟವಾಗಿ ಕಂಡುಬರುತ್ತದೆ. ಈ ಎಲ್ಲಾ ಚಿತ್ರಗಳ ಮೇಲೆ ಅಬ್ದುಲ್‌ರಹಮಾನ್ ಚುಗ್ತಾಯಿ ಅವರ ಚಿತ್ರತಂತ್ರ ಪರೋಕ್ಷವಾಗಿ ಪ್ರಭಾವವನ್ನುಂಟು ಮಾಡಿದೆ.

ಭಾರತೀಯ ಚಿತ್ರಕಲೆಯಲ್ಲಿ ಕಾಣುವ ಸಹಜವಾದ ನವಿರತೆ, ಕೋಮಲತೆಯು ಕಾಳೆಯವರ ಕಲಾಕೃತಿಗಳಲ್ಲಿ ಕಂಡುಬರುತ್ತಿದ್ದು, ಇವರ ಕುಂಚಕ್ಕೆ ಯಾವುದೇ ಮಿತಿಯಿಲ್ಲ ಎಂದು ಹೇಳಬಹುದು. ಚಿತ್ರಗಳಲ್ಲಿ ನವಿರತೆ ತರುವ ಇವರ ಕುಂಚಕ್ಕೆ, ವೀರತ್ವವನ್ನು ಬಲತ್ವವನ್ನು ತರುವ ಸಾಮರ್ಥ್ಯ ಕೂಡ ಕಂಡುಬರುತ್ತದೆ. ಯಾವುದೇ ಪ್ರಕಾರದ ವಿಷಯ ವಸ್ತುವಿರಲಿ, ಯಾವುದೇ ಮಾಧ್ಯಮದಲ್ಲಿ ಆಗಲಿ ಕಾಳೆಯವರಲ್ಲಿ ಚಿತ್ರರಚನೆಯಲ್ಲಿ ಒಂದು ಬಗೆಯ ವಿಶಿಷ್ಟ ನಿಷ್ಠೆ ಕಂಡುಬರುತ್ತದೆ. ಅವರ ಚಿತ್ರಗಳು ರೇಖಾ ಪ್ರಾಧಾನ್ಯವುಳ್ಳವು ಆಗಿದ್ದು ಪ್ರಾಣಮಯ ಲಯಮಯದಿಂದ ಕೂಡಿವೆ ಎನ್ನಬಹುದು.

ಕಾಳೆಯವರು ತಮ್ಮ ಕಲಾಶಿಕ್ಷಣವನ್ನು ಪೂರೈಸಿದ್ದು ಗದಗಿನ ವಿಜಯ ಕಲಾಮಂದಿರಲ್ಲಿ ಆದರೂ ಜೆ.ಜೆ. ಕಲಾಶಾಲೆಗೆ ತಿಂಗಳುಗಟ್ಟಲೇ ಪರೀಕ್ಷೆಗೆಂದು ಹೋಗಿಬರುವ ಸಂದರ್ಭ ಆಗ ಒದಗಿಬಂದಿತ್ತು. ಇವರ ಕಲಾಶಿಕ್ಷಣವೆಲ್ಲಾ ಜೆ.ಜೆ. ಕಲಾಶಾಲೆಯ ಸಾಂಪ್ರದಾಯಿಕ ವಾಸ್ತವಿಕತೆಯ ತಂತ್ರದಲ್ಲಿ ತೈಲ ಮಾಧ್ಯಮದಲ್ಲಿ. ಆದರೆ ಕಾಳೆಯವರ ಮೇಲೆ ಎರಡು ಅಂಶಗಳ ಪ್ರಭಾವ

---

೨೩. ಹರಿಹರಪ್ರಿಯ (ಅನು) ರಸರೇಖೆ, ಪು.೯೩

ಬೀರಿರುವುದನ್ನು ಕಾಣಬಹುದು. ಒಂದು ಬಂಗಾಲಿ ಕಲಾಶಾಲೆಯಾದ ಶಾಂತಿನಿಕೇತನ, ಇನ್ನೊಂದು ಮುಂಬಯಿ ಜೆ.ಜೆ. ಕಲಾಶಾಲೆ. ಶಾಂತಿನಿಕೇತನದ ಭಾರತೀಯ ಕಲೆಯ ರಚನೆ, ಲಯ, ಅಲಂಕರಣ ಪದ್ಧತಿ, ವಾಷ್ ಪದ್ಧತಿ, ಮುಂಬಯಿಯ ಸಂಪ್ರದಾಯಿಕ ವಾಸ್ತವಿಕತೆಯ ತೈಲಮಾಧ್ಯಮದ ತಂತ್ರದಲ್ಲಿ ಹೀಗೆ ಕಾಳೆಯವರು ವರ್ಣಚಿತ್ರಗಳಲ್ಲಿ ಈ ಎರಡು ಅಂಶಗಳ ಪ್ರಭಾವವನ್ನು ಕಾಣಬಹುದು. ಅಲ್ಲದೇ ಸಮಕಾಲೀನಕ್ಕೆ ಸಂಬಂಧಿಸಿದಂತೆ ಅನೇಕ ಆಧುನಿಕ ಪ್ರಯೋಗಗಳನ್ನು ತಮ್ಮ ಅಭಿವ್ಯಕ್ತಿಯಲ್ಲಿ ತಂದಿರುವರು.

ಕಾಳೆಯವರನ್ನು ಅತ್ಯಂತ ತೀವ್ರವಾಗಿ ಪ್ರಭಾವಿಸಿದ ಇನ್ನೊರ್ವ ಕಲಾವಿದ ಬಂಗಾಲಿ ಕಲಾಶಾಲೆಯ ಕ್ಷಿತೀಂದ್ರನಾಥ ಮಜುಂದಾರವರು. ಕಾಳೆಯವರ ಸಾಂಪ್ರದಾಯಿಕ ವಿಷಯ ವಸ್ತುವುಳ್ಳ ವರ್ಣಚಿತ್ರಗಳನ್ನು ಗಮನಿಸಿದಾಗ ತಟ್ಟನೆ ನೆನಪಿಗೆ ಬರುವುದು ಕ್ಷಿತೀಂದ್ರನಾಥ ಮಜುಂದಾರ ಅವರ ಕಲಾಕೃತಿಗಳು. ಅವಕಾಶವನ್ನು ದುಡಿಸಿಕೊಳ್ಳುವ ರೀತಿಯಲ್ಲಾಗಲಿ, ರಚನಾತಂತ್ರ, ಬಣ್ಣ ಗಾರಿಕೆ, ಅಲಂಕರಣ, ರೇಖೆಗಳನ್ನು ಎಳೆದಿರುವ ರೀತಿ ಕಲಾಕೃತಿಗಳಲ್ಲಿ ಲಯಗಾರಿಕೆ, ಇಂಪುತನ, ಸ್ವಚ್ಛವಾದ ಮಿತಿಯಾದ ಬಣ್ಣಗಳ ಬಳಕೆ ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಈ ಇಬ್ಬರ ಕಲಾಕೃತಿಗಳಲ್ಲಿ ಹೆಚ್ಚಿನ ಮಟ್ಟಿಗೆ ಸಾಮ್ಯತೆ ಕಂಡುಬರುತ್ತದೆ. ಕ್ಷಿತೀಂದ್ರನಾಥರವರ ಕಲಾಕೃತಿ ಗಳೊಂದಿಗೆ ಕಾಳೆಯವರ ಕಲಾಕೃತಿಗಳನ್ನು ತೌಲನ ಮಾಡಿ ನೋಡಲು ಇಲ್ಲಿ ಕ್ಷಿತೀಂದ್ರನಾಥರವರ ಕಲಾಕೃತಿಗಳಲ್ಲಿ ರಚನಾತಂತ್ರ ಶೈಲಿಯನ್ನು ಮೊದಲು ಗಮನಿಸಬೇಕಾಗುತ್ತದೆ.

ಕ್ಷಿತೀಂದ್ರನಾಥರವರು ಆವೇಶದ ಭಕ್ತಿಯೊಂದಿಗೆ ಪರಿಚಿತ ಹಿಂದೂ ಧ್ಯೇಯಗಳನ್ನು ಮಾತ್ರ ಚಿತ್ರಿಸಿದ್ದಾರೆ. ಅವರು ಪ್ರಕೃತಿ ಮತ್ತು ಮಾನವನಿಂದ ವಿಮುಖವಾದಂತೆ ಕಾಣುತ್ತಾರೆ.[೨೪] ಕಾಳೆ ಯವರು ಹಿಂದೂ ಧ್ಯೇಯವನ್ನು ಪೌರಾಣಿಕ ದೇವತೆಗಳನ್ನು ಚಿತ್ರಿಸುವುದರೊಂದಿಗೆ ಪ್ರಕೃತಿ ಮತ್ತು ದಿನನಿತ್ಯದ ಘಟನೆಗಳನ್ನು ಚಿತ್ರಿಸಿ ತಾವೊಬ್ಬ ಸಾಮಾಜಿಕ ಕಲಾವಿದ ಎಂಬುದನ್ನು ತೋರಿಸಿ ಕೊಟ್ಟಿದ್ದಾರೆ.

ಕ್ಷಿತೀಂದ್ರನಾಥರ ಬಹುತೇಕ ವರ್ಣಚಿತ್ರಗಳಲ್ಲಿ ಸಾಮಾನ್ಯವಾಗಿ ಒಂದೇ ಒಂದು ಆಕೃತಿ ಇರುತ್ತದೆ. ಅವರ ವರ್ಣಗಳು ಬಹಳ ಸೂಕ್ಷ್ಮ ಹಾಗೂ ಪರಿಶುದ್ಧವಾಗಿದ್ದು ಹೆಚ್ಚು ಎದ್ದು ಕಾಣಲು ಅದನ್ನು ಬಹಳ ನಿರ್ಬಂಧದೊಂದಿಗೆ ಬಳಸಿದ್ದಾರೆ. ಕಾಳೆಯವರ ವರ್ಣಚಿತ್ರಗಳಲ್ಲಿಯೂ ಸಹ ಸಾಮಾನ್ಯವಾಗಿ ಒಂದೇ ಒಂದು ಪ್ರಧಾನ ಆಕೃತಿ ಇರುತ್ತದೆ. ಕಾಳೆಯವರು ತಾವು ಬಳಸುವ ವರ್ಣಗಳಲ್ಲಿ ಬಹಳ ಸೂಕ್ಷ್ಮ ಹಾಗೂ ಪರಿಶುದ್ಧವನ್ನು ತರುತ್ತಾರೆ. ಕ್ಷಿತೀಂದ್ರನಾಥರ ವರ್ಣ

---

೨೪. ಎನ್.ಮರಿಶಾಮಚಾರ್, ಕಲಾದಿಗ್ಗಜರು, ಪು.೧೭೦

ಚಿತ್ರಗಳಲ್ಲಿ ಪ್ರಧಾನವಾಗಿ ಕಂಡುಬರುವುದು ವರ್ಣಸಂಯೋಜನೆಯ ವೈಶಿಷ್ಟ್ಯ ಮತ್ತು ಶಕ್ತಿಯುತವಾದ ಸ್ಫುಟವಾದ ರೇಖೆಗಳು. ಅಂತೆಯೇ ಕಾಳೆಯವರ ವರ್ಣಚಿತ್ರಗಳಲ್ಲಿ ಪ್ರಧಾನವಾಗಿ ಕಂಡುಬರುವುದು ಪರಿಶುದ್ಧವಾದ ವರ್ಣಸಂಯೋಜನೆಯ ವೈಶಿಷ್ಟ್ಯ ಮತ್ತು ಸ್ಫುಟವಾದ ಲಯಾತ್ಮಕತೆಯಿಂದ ಕೂಡಿದ ಹೊರ ರೇಖೆಗಳು.

ಕಾಳೆಯವರು ತಮ್ಮ ಕಲಾಕೃತಿಗಳಲ್ಲಿ ವಾಷ್‌ತಂತ್ರದ ಕುರಿತು ಪ್ರಭಾವಿಸಿದ ಕಲಾವಿದರ ನಿರೂಪಣೆ ಶೈಲಿ ಕುರಿತು ಈ ರೀತಿ ಹೇಳಿದ್ದಾರೆ. “ಬಂಗಾಲಿ ಕಲಾವಿದ ಅಬ್ದುಲ್ ರಹಮಾನ್ ಚುಗ್ತಾಯಿಯವರ ವಾಷ್ ಮೆಥಡ್ ತಂತ್ರ ನನ್ನ ಮೇಲೆ ಸಾಕಷ್ಟು ಪ್ರಭಾವ ಬೀರಿದೆ. ಅವರು ಪರ್ಶಿಯನ್ ಸ್ಟೈಲಿನಲ್ಲಿ ಚಿತ್ರ ಮಾಡುತ್ತಿದ್ದರು. ಮೆಥಡ್ ಮಾತ್ರ ವಾಷ್ ಪದ್ಧತಿಯಲ್ಲಿತ್ತು. ಪೇಪರ್ ಮೇಲೆ ಬಣ್ಣವನ್ನು ಹಚ್ಚುವುದು ಪುನಃ ತೊಳೆಯುವುದು ಇದೇ ರೀತಿ ನಾಲ್ಕೈದು ಬಾರಿ ನಿರೀಕ್ಷಿತ ಹಂತದವರೆಗೂ ಅಂದುಕೊಂಡ ಪರಿಣಾಮ ಅಲ್ಲಿ ಮೂಡುವವರೆಗೂ ಈ ಕ್ರಮವನ್ನು ಅನುಸರಿಸುವುದು ನಂತರ ಫಿನಿಸಿಂಗ್ ಮಾಡುವುದು ಕೊನೆಯ ಹಂತ. ಪೇಪರಿನ ಮೇಲೆ ಕಲರ್ ಫಿಕ್ಸ್ ಆಗಿರುತ್ತದೆ. ಇದನ್ನು ಅಬ್ದುಲ್ ರಹಮಾನ್ ಚುಗ್ತಾಯಿ ಕ್ಷಿತೀಂದ್ರನಾಥ ಮಂಜುದಾರ ಅವರೆಲ್ಲಾ ಈ ಪದ್ಧತಿಯಲ್ಲಿಯೇ ಕಲಾಕೃತಿ ರಚಿಸುತ್ತಿದ್ದರು. ಸಾಮಾನ್ಯವಾಗಿ ಎಲ್ಲಾ ಬಂಗಾಲಿ ಕಲಾವಿದರು ಈ ವಾಷ್ ಮೆಥಡ್‌ನಲ್ಲಿ ಕೆಲಸ ಮಾಡಿದ್ದಾರೆ. ಆದರೆ ಗಗನೇಂದ್ರನಾಥ ಟಾಗೋರ, ಕೆ. ವೆಂಕಟಪ್ಪನವರು ಪೇಪರ್‌ನ್ನು ತೊಳೆಯುತ್ತಿರಲಿಲ್ಲ. ಅತ್ಯಂತ ನೀರು ಬಣ್ಣ ಹಚ್ಚುತ್ತಾ ಹಚ್ಚುತ್ತಾ ಚಿತ್ರವನ್ನು ಪೂರ್ತಿಗೊಳಿಸುತ್ತಿದ್ದರು. ನನ್ನದು ಮೊದಲಿನ ಪದ್ಧತಿ”[೨೫] ಎಂದು ಹೇಳುವ ಕಾಳೆಯವರು ಈ ರೀತಿಯಾದ ಬಂಗಾಲಿ ಕಲಾವಿದರಿಂದ ಪ್ರಭಾವಿತರಾಗಿರುವುದನ್ನು ಕಾಣಬಹುದು.

ಕಾಳೆಯವರು ಕಲಾಕೃತಿಗಳನ್ನು ರಚಿಸುವಲ್ಲಿ ಉಪಯೋಗಿಸುವ ಮಾಧ್ಯಮಗಳು

ಬಹುತೇಕ ಕಲಾವಿದರು ಕಲಾಕೃತಿಗಳನ್ನು ರಚಿಸುವಲ್ಲಿ ವಿವಿಧ ಮಾದ್ಯಮಗಳನ್ನು ಉಪಯೋಗಿಸುವುದು ಕಂಡುಬರುತ್ತದೆ. ಕೆಲವು ಕಲಾವಿದರು ಪ್ರಾರಂಭದಲ್ಲಿ ಎಲ್ಲಾ ಮಾಧ್ಯಮಗಳಲ್ಲಿ ಪ್ರಯೋಗ ಮಾಡುತ್ತಾರಾದರೂ ಕೊನೆಗೆ ಒಂದೇ ಮಾಧ್ಯಮವನ್ನು ತಮ್ಮ ಅಭಿವ್ಯಕ್ತಿಗಾಗಿ ಬಳಸಿಕೊಂಡು ಅದರಲ್ಲಿಯೇ ಯಶಸ್ಸನ್ನು ಕಾಣುತ್ತಾರೆ. ಇನ್ನೂ ಕೆಲವು ಕಲಾವಿದರು ಲಭ್ಯವಿರುವ ಎಲ್ಲಾ ಮಾಧ್ಯಮಗಳನ್ನು ತಮ್ಮ ಕಲಾಕೃತಿಗಳಲ್ಲಿ ಸೂಕ್ತವಾಗಿ ಬಳಸುವಲ್ಲಿ ಪಳಗಿದವರಾಗಿರುತ್ತಾರೆ. ಇಂತಹವರ ಸಾಲಿಗೆ ಪ್ರಮುಖವಾಗಿ ನಿಲ್ಲುವವರು ವಿ.ಟಿ.ಕಾಳೆಯವರು. ಕಾಳೆಯವರು ತಮ್ಮ ಅಭಿವ್ಯಕ್ತಿಗೆ ವಸ್ತುವಿಷಯಕ್ಕೆ ಸೂಕ್ತ ಕಂಡ ಆಯಾ ಮಾಧ್ಯಮಗಳಲ್ಲಿ ಲೀಲಾಜಾಲವಾಗಿ ಆ

೨೫. ವಿ.ಟಿ. ಕಾಳೆಯವರೊಂದಿಗೆ ಸಂದರ್ಶನ ದಿನಾಂಕ ೩೦.೧೧.೨೦೦೮

ಮಾಧ್ಯಮವನ್ನು ದುಡಿಸಿಕೊಳ್ಳುವಲ್ಲಿ ನಿಸ್ಸೀಮರು. ಕಾಳೆಯವರ ಅಭಿವ್ಯಕ್ತಿ ಮಾಧ್ಯಮಗಳೆಂದರೆ ಜಲವರ್ಣ, ತೈಲವರ್ಣ, ಪೆನ್ನು, ಪೆನ್ಸಿಲ್, ಚಾರಕೋಲ, ಪೇಸ್ಟಲ್ ಮತ್ತು ಕ್ಯಾನ್ವಸ್ ಬೋರ್ಡ್, ಪೇಪರ್ ಮುಂತಾದವುಗಳು.

ಕಾಳೆಯವರ ಕಲಾಕೃತಿಗಳ ರಚನಾ ಶೈಲಿ ಮತ್ತು ತಂತ್ರಗಾರಿಕೆ

ಕಾಳೆಯವರು ಯಾವುದೇ ಒಂದು ಶೈಲಿ ಅಥವಾ ಪಂಥಗಳಿಗೆ ಮತ್ತು ಯಾವುದೇ ಒಂದು ತಂತ್ರಕ್ಕೆ ಮಾರುಹೋದಂತೆ ಕಂಡುಬರುವುದಿಲ್ಲ. ಅಲ್ಲದೇ ಯಾವುದೇ ಒಂದೇ ಮಾಧ್ಯಮವನ್ನು ಅವರು ಅವಲಂಬಿಸಿಲ್ಲ. ಕೆಲ ಕಲಾವಿದರು ದಶಕಗಳವರೆಗೂ ಒಂದೇ ಮಾಧ್ಯಮ ಒಂದೇ ವಿಷಯವಸ್ತುಗಳನಿಟ್ಟುಕೊಂಡು ಕಲಾಕೃತಿಗಳನ್ನು ರಚಿಸುತ್ತಾ ಬರುವುದನ್ನು ಕಾಣುತ್ತೇವೆ. ಕಾಳೆಯವರು ಈ ನಿಲುವಿಗೆ ಭಿನ್ನವಾಗಿ ಕಂಡುಬರುತ್ತಾರೆ. ಕಾಳೆಯವರ ಕಲಾಕೃತಿಗಳಲ್ಲಿನ ಶೈಲಿ ಕುರಿತು ಹೇಳುವುದಾದರೆ ಅವರದು ಡೆಕೋರೇಟಿವ್, ಫೋಟೋ ರಿಯಲಿಸ್ಟಿಕ್ ಶೈಲಿ ಕಂಡುಬರುತ್ತದೆ. ಕಾಳೆಯವರ ಸಾಮಾಜಿಕ, ಧಾರ್ಮಿಕ ಚಿತ್ರಗಳಲ್ಲಿ ಮತ್ತು ಭಾವಚಿತ್ರ, ನಿಸರ್ಗಚಿತ್ರಗಳಲ್ಲಿ ಫೋಟೋ ರಿಯಲಿಸ್ಟಿಕ್ ಶೈಲಿ ಕಂಡುಬಂದರೆ, ಅವರ ಸಾಂಪ್ರದಾಯಿಕ ಚಿತ್ರಗಳಲ್ಲಿ ಡೆಕೋರೇಟಿವ್ ಶೈಲಿ ಕಂಡುಬರುತ್ತದೆ. ಅಲ್ಲದೇ ಕಾಳೆಯವರು ಆಧುನಿಕ ಕಲಾಕೃತಿಗಳಲ್ಲಿ ಅಮೂರ್ತ ಶೈಲಿಯ ಪ್ರಯೋಗವನ್ನೂ ಮಾಡಿದ್ದಾರೆ.

ಕಾಳೆಯವರು ತಮ್ಮ ಕಲಾಕೃತಿಗಳಲ್ಲಿ ಬಹುಬಗೆಯ ತಂತ್ರಗಳನ್ನು ದುಡಿಸಿಕೊಂಡಿದ್ದಾರೆ. ಕಲಾಕೃತಿಯೊಂದರಲ್ಲಿ ತಂತ್ರಗಾರಿಕೆ ಎಂಬುವುದು ಆಯಾ ಕಲಾವಿದರ ಕಲಾಕೃತಿ ರಚನಾ ಸಾಮರ್ಥ್ಯವನ್ನು, ಅವರ ಕಲಾವಂತಿಕೆಯನ್ನು, ಅವರ ಸೌಂದರ್ಯ ಪ್ರಜ್ಞೆಯನ್ನು ಸಾರುತ್ತದೆ. ಕಾಳೆಯವರು ತಮ್ಮ ಕಲಾಕೃತಿಗಳಲ್ಲಿ ವಿವಿಧ ಮಾಧ್ಯಮಗಳಲ್ಲಿ ವಿವಿಧ ಅವಕಾಶಗಳ ಮೇಲೆ ವಿಭಿನ್ನವಾದ ತಂತ್ರಗಳನ್ನು ಉಪಯೋಗಿಸಿ ಯಶಸ್ಸನ್ನು ಕಂಡಿದ್ದಾರೆ.

ಕೆಲವು ಕಲಾವಿದರು ಸಾಮಾನ್ಯವಾಗಿ ತಮ್ಮ ಕಲಾಕೃತಿ ರಚನೆಯಲ್ಲಿ ದಶಕಗಳವರೆಗೂ ಒಂದೇ ವಿಷಯವಸ್ತು, ಒಂದೇ ಶೈಲಿ, ತಂತ್ರಗಳನ್ನು ಉಪಯೋಗಿಸಿಕೊಂಡು ರಚಿಸುತ್ತಾ ಬಂದಿರುವುದು ಕಂಡುಬರುತ್ತದೆ. ಆದರೆ ಕಾಳೆಯವರು ಯಾವುದೇ ಒಂದೇ ಶೈಲಿ, ತಂತ್ರಕ್ಕೆ ಬದ್ಧರಾಗದೆ, ಈ ವರ್ತುಲದಿಂದ ಹೊರಬಂದು ಮುಕ್ತವಾಗಿ ನಿಲುತ್ತಾರೆ. ಅವರದು ಆಯಾ ವಿಷಯಕ್ಕೆ, ಮಾಧ್ಯಮಕ್ಕೆ ಸಂಬಂಧಪಟ್ಟ ಮುಕ್ತ ಕಲಾಕೃತಿ ರಚನಾ ಶೈಲಿ ಎಂದೇ ಹೇಳಬೇಕಾಗುತ್ತದೆ. ಏಕೆಂದರೆ, ಸಾಂಪ್ರದಾಯಿಕ ವಿಷಯವಿಟ್ಟುಕೊಂಡು ಭಾರತೀಯ ಕಲಾ ಪದ್ಧತಿಯಲ್ಲಿ ಕಲಾಕೃತಿಗಳನ್ನು ರಚಿಸುವ ಸಂದರ್ಭದಲ್ಲಿಯೇ ಅವರು ನವ್ಯ ಕಲಾಕೃತಿಗಳನ್ನು ಭಿನ್ನ ಮಾಧ್ಯಮದಲ್ಲಿ ಭಿನ್ನ ವಿಷಯಗಳನ್ನು

ಇಟ್ಟುಕೊಂಡು ಕಲಾಕೃತಿಗಳನ್ನು ರಚಿಸುತ್ತಾ ಬಂದಿದ್ದಾರೆ. ಹೀಗಾಗಿ ಕಾಳೆಯವರು ಒಬ್ಬ ಸಾಂಪ್ರದಾಯಿಕ ಕಲಾವಿದರೂ ಹೌದು. ನವ್ಯಶೈಲಿಯ ಕಲಾವಿದರೂ ಹೌದು. ಅಲ್ಲದೇ ಕಾಳೆ ಯವರು ತಮ್ಮ ಕಲಾಕೃತಿಗಳನ್ನು ಅನೇಕ ತಂತ್ರಗಳನ್ನು ಉಪಯೋಗಿಸಿದ ಪ್ರಯೋಗಶೀಲರು. ಅವರು ಸಾಂಪ್ರದಾಯಿಕ ಕಲಾಕೃತಿಗಳಲ್ಲಿ ಜಲವರ್ಣದ ವಾಷ್‌ತಂತ್ರ, ಎರಡು ಆಯಾಮದ ಕಲಾರಚನೆ, ಲಲಿತವಾದ, ದೃಢವಾದ ಹೊರ ರೇಖೆಗಳು, ಸ್ವಚ್ಛವಾದ ಬಣ್ಣಗಳು ಕಂಡುಬಂದರೆ, ಅವರ ಆಧುನಿಕ ಕಲಾಪಂಥದ ಕಲಾಕೃತಿಗಳಲ್ಲಿ, ತೈಲವರ್ಣ, ನೈಫ್ ಮತ್ತು ಬ್ಲೇಡ್ ಮುಂತಾದವು ಗಳ ಪ್ರಯೋಗ ಕಂಡುಬರುತ್ತದೆ.

ಅವರು ರಚಿಸಿದ ಕಲಾಕೃತಿಗಳಲ್ಲಿ ದುಡಿಸಿಕೊಂಡ ತಂತ್ರಗಾರಿಕೆಗಳನ್ನು ಈ ಕೆಳಗಿನಂತೆ ವರ್ಗೀಕರಿಸಲಾಗಿದೆ.

೧. **ಜಲವರ್ಣ** - ಕಾಳೆಯವರು ಜಲವರ್ಣವನ್ನು ತಮ್ಮ ಕಲಾಕೃತಿಗಳಲ್ಲಿ ಪಾರದರ್ಶಕವಾಗಿ, ಅಪಾರದರ್ಶಕವಾಗಿ ಮತ್ತು ವಾಷ್ ಮೆಥಡ್‌ನಲ್ಲಿ ಕಾಗದದ ಅವಕಾಶದ ಮೇಲೆ ಉಪಯೋಗಿಸಿ ರುವುದು ಕಂಡುಬರುತ್ತದೆ. ಈ ಮಾಧ್ಯಮವನ್ನು ಅವರು ಸಾಂಪ್ರದಾಯಿಕ ವಿಷಯವುಳ್ಳ ಕಲಾಕೃತಿ ಗಳಲ್ಲಿ ಭಾವಚಿತ್ರಗಳಲ್ಲಿ ಮತ್ತು ನಿಸರ್ಗಚಿತ್ರಗಳಲ್ಲಿ ಉಪಯೋಗಿಸಿರುವುದನ್ನು ಕಾಣಬಹುದು.

೨. **ತೈಲವರ್ಣ** - ಕಾಳೆಯವರು ತೈಲವರ್ಣವನ್ನು ಹೆಚ್ಚಾಗಿ ಕ್ಯಾನ್ವಾಸಿನ ಅವಕಾಶದ ಮೇಲೆ ವಾಣಿಜ್ಯ ಕಲಾಕೃತಿಗಳನ್ನು ರಚಿಸುವುದಕ್ಕಾಗಿ ಫೋಟೋರಿಯಲಿಸ್ಟಿಕ್ ಶೈಲಿಯಲ್ಲಿ ರಚಿಸಿರುವುದು ಕಂಡುಬರುತ್ತದೆ. ಅಲ್ಲದೆ ಕಾಳೆಯವರು ಹೆಚ್ಚಾಗಿ ಈ ಮಾಧ್ಯಮದಲ್ಲಿ ಭಾವಚಿತ್ರ ಮತ್ತು ನಿಸರ್ಗಚಿತ್ರಗಳನ್ನು ಅಸಂಖ್ಯಾತವಾಗಿ ರಚಿಸಿರುತ್ತಾರೆ.


೩. **ಮಿಶ್ರಮಾಧ್ಯಮ** - ಈ ಮಾಧ್ಯಮವನ್ನು ಕಾಳೆಯವರು ಹೆಚ್ಚಾಗಿ ಆಧುನಿಕ ಕಲಾಕೃತಿಗಳ ರಚನೆಯಲ್ಲಿ ಬಳಸಿರುವುದು ಕಂಡುಬರುತ್ತದೆ.

೪. **ಪೆನ್ನು, ಪೆನ್ಸಿಲ್ ಮತ್ತು ಚಾರಕೋಲ್** - ಈ ಮಾಧ್ಯಮವನ್ನು ಕಾಳೆಯವರು ಹೆಚ್ಚಾಗಿ ತಮ್ಮ ರೇಖಾಚಿತ್ರ ಕಲಾಕೃತಿಗಳಲ್ಲಿ ಬಳಸಿರುವುದು ಕಂಡುಬರುತ್ತದೆ.

ಈ ಅಧ್ಯಾಯನದ ಮುಖ್ಯ ಅಂಶಗಳು

೧. ಕಾಳೆಯವರ ಸಾವಿರಾರು ಕಲಾಕೃತಿಗಳು ವಿಭಿನ್ನ ವಿಷಯಗಳನ್ನೊಳಗೊಂಡ ವಿವಿಧ ಮಾಧ್ಯಮಗಳಿಂದ ರಚಿತಗೊಂಡಿದ್ದು, ಅವು ಜಲವರ್ಣ, ತೈಲವರ್ಣ, ಪೆನ್ನು, ಪೆನ್ಸಿಲ್, ಚಾರಕೋಲ್, ಪೇಸ್ಟಲ್ ಮುಂತಾದವುಗಳಿಂದ ಕೂಡಿವೆ.





ವಿ.ಟಿ.ಕಾಳೆಯವರ ಕಲಾ ಸ್ಟುಡಿಯೋ



ವಿ.ಟಿ.ಕಾಳೆಯವರ ಕಲಾ ಪರಿಕರಗಳು





ಕ.ವಿ.ವಿ.ಹಂಪಿ ದೃಶ್ಯಕಲಾ ವಿಭಾಗದಲ್ಲಿ ಪ್ರಾತ್ಯಕ್ಷಿಕೆ ನೀಡುತ್ತಿರುವ ವಿ.ಟಿ. ಕಾಳೆಯವರು

೨. ಕಾಳೆಯವರ ಸಾಂಪ್ರದಾಯಿಕ ಚಿತ್ರಗಳು ವಾಷ್‌ತಂತ್ರದಿಂದ ಕೂಡಿದ್ದು ಇದು ಅವರ ವಿಭಿನ್ನತೆ, ವಿಶಿಷ್ಟತೆಯನ್ನು ತೋರಿಸುತ್ತದೆ. ಈ ತಂತ್ರದಲ್ಲಿ ಕಲಾಕೃತಿ ರಚಿಸಿದ ಕರ್ನಾಟಕದ ಕೆಲವೇ ಕಲಾವಿದರಲ್ಲಿ ಇವರು ಪ್ರಮುಖರಾಗಿ ಕಂಡುಬರುತ್ತಾರೆ.

೩. ಕಾಳೆಯವರು ಒಬ್ಬ ಸಾಂಪ್ರದಾಯಿಕ ಕಲಾವಿದರೂ ಹೌದು. ಆಧುನಿಕ ಸಂವೇದನೆಯುಳ್ಳ ಕಲಾವಿದರೂ ಹೌದು. ಹಾಗೇನೆ ವಾಣಿಜ್ಯಕ್ಕೆ ಸಂಬಂಧಿಸಿದ ಕಲಾವಿದರು ಹೌದು.

೪. ಕಾಳೆಯವರು ಯಾವುದೇ ಕಲಾ ಶೈಲಿಗೆ ಬದ್ಧರಾಗದ, ಮುಕ್ತಶೈಲಿ ಇವರದು.

೫. ಕಾಳೆಯವರ ಮೇಲೆ ಪಾಶ್ಚಾತ್ಯ ಕಲಾಪದ್ಧತಿಯನ್ನು ಬೋಧಿಸುವ ಜೆ.ಜೆ. ಕಲಾಶಾಲೆ ಮತ್ತು ಭಾರತೀಯ ಕಲಾಪದ್ಧತಿಯ ಅಂತಃಸತ್ವವನ್ನು ಪುನರುಜ್ಜೀವನಗೊಳಿಸಿದ ಬಂಗಾಲಿ ಶಾಲೆಯಾದ ಶಾಂತಿನಿಕೇತನ ಈ ಎರಡು ಶಾಲೆಗಳ ಪ್ರಭಾವವು ಸಮನಾಗಿ ಕಂಡುಬರುತ್ತದೆ.

೬. ಕಾಳೆಯವರು ಎರಡು ಆಯಾಮಗಳುಳ್ಳ ಕಲಾಕೃತಿಗಳನ್ನು ರಚಿಸಿದ್ದಾರೆ ಅಲ್ಲದೇ ಮೂರು ಆಯಾಮಗಳ್ಳುಳ ಕಲಾಕೃತಿಗಳನ್ನೂ ರಚಿಸಿದ್ದಾರೆ.

೭. ಕಾಳೆಯವರದು ಮುಖ್ಯವಾಗಿ ರೇಖಾಪ್ರಧಾನವಾದ ಚಿತ್ರಕಲೆ. ಅವರ ಕಲಾಕೃತಿಗಳಲ್ಲಿ ರೇಖೆ ಗಳನ್ನು ಗಮನಿಸಿದರೆ ಅವು ಭಾವಗೀತಾತ್ಮಕತೆಯಿಂದ ಕೂಡಿದ್ದು ಬಂಗಾಲಿ ಕಲಾವಿದರ ಪ್ರಭಾವ ಢಾಳಾಗಿ ಕಂಡುಬರುತ್ತದೆ.

೮. ಕಾಳೆಯವರ ವರ್ಣಚಿತ್ರಗಳಲ್ಲಿ ಮುಖ್ಯವಾಗಿ ಸಾಂಪ್ರದಾಯಿಕ ವರ್ಣಚಿತ್ರಗಳಲ್ಲಿ ಬಣ್ಣಗಳು ಅತ್ಯಂತ ಸ್ವಚ್ಛವಾಗಿ ಬಣ್ಣಗಳ ಶ್ರೀಮಂತಿಕೆಯನ್ನು ಗೋಚರಿಸುತ್ತವೆ.

೯. ಕಾಳೆಯವರ ಕಲಾಕೃತಿಗಳಲ್ಲಿ, ಅಜಂತಾ, ದಖ್ಖನಿ, ರಜಪೂತ ಪರ್ಶಿಯನ್ ಮುಂತಾದ ಸಾಂಪ್ರದಾಯಿಕ ಕಲಾಕೃತಿಗಳ ಛಾಪು ಕಂಡುಬರುತ್ತದೆ.

೧೦. ಕಾಳೆಯವರ ಕಲಾಕೃತಿಗಳಲ್ಲಿ ಭಾರತೀಯ ಮತ್ತು ಪಾಶ್ಚಾತ್ಯ ಕಲಾಶೈಲಿಯ ಪ್ರಭಾವ ಕಂಡುಬರುತ್ತಿದ್ದು ಕಾಳೆಯವರು ಈ ಎರಡೂ ಕಲಾ ಪದ್ಧತಿಗಳ ನಡುವಿನ ಸೇತುವೆ ಯಂತಿದ್ದಾರೆ.

೧೧. ಕಾಳೆಯವರ ಮೇಲೆ ಅತ್ಯಂತ ತೀವ್ರವಾಗಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪ್ರಭಾವ ಬೀರಿದ ಕಲಾವಿದರುಗಳು, ಟಿ.ಪಿ. ಅಕ್ಕಿ, ಸಿ.ಎನ್. ಪಾಟೀಲ, ಎಸ್.ಎಂ. ಪಂಡಿತ, ಅಮೀನಸಾಹೇಬ ಕಮಡೋಳಿ, ಬಂಗಾಲಿ ಕಲಾವಿದರುಗಳಾದ ಅಬ್ದುಲ್ ರಹಮಾನ ಚುಗ್ತಾಯಿ, ಕ್ಷಿತೀಂದ್ರನಾಥ ಮಜುಂದಾರ ಮುಂತಾದವರು.

೧೨. ಕಾಳೆಯವರು ತೈಲವರ್ಣದಲ್ಲಿ ಅನೇಕ ಕಲಾಕೃತಿಗಳನ್ನು ರಚಿಸಿದ್ದರೂ ಅವರ ಅತ್ಯಂತ ಮೆಚ್ಚಿನ ಮಾಧ್ಯಮ ಜಲವರ್ಣ ಮತ್ತು ವಾಷ್‌ತಂತ್ರದಲ್ಲಿ ಕಲಾಕೃತಿಗಳನ್ನು ರಚಿಸುವುದು.

೧೩. ಕಾಳೆಯವರ ಸಾಂಪ್ರದಾಯಿಕ ವಸ್ತುಗಳನ್ನೊಳಗೊಂಡ ವಾಷ್‌ತಂತ್ರದಿಂದ ರಚಿಸಲಾದ ಈ ಕಲಾಕೃತಿಗಳು ಅವರ ಅಂತಃಸತ್ವದಿಂದ ಹೊರಬಂದ ಕಲಾಕೃತಿಗಳಾಗಿದ್ದು, ಕಲಾಕ್ಷೇತ್ರಕ್ಕೆ ಅಮೋಘ ಕಾಣಿಕೆಯನ್ನು ನೀಡಿವೆ.

೧೪. ಕಾಳೆಯವರ ಒಟ್ಟು ಕಲಾಕೃತಿಗಳನ್ನು ಎರಡು ಗುಂಪುಗಳನ್ನಾಗಿ ವಿಂಗಡಿಸಬಹುದು.

ಅ. ಕಾಳೆಯವರ ಅಂತಃಪ್ರೇರಣೆಯಿಂದ ಮೂಡಿಬಂದ ಕಲಾಕೃತಿಗಳು

ಬ. ಬೇಡಿಕೆಗೆ ಅನುಸಾರವಾಗಿ ರಚಿಸಿರುವಂತಹ ಕಲಾಕೃತಿಗಳು. ಈ ಎರಡು ತರಹದ ಕಲಾಪ್ರಕಾರಕ್ಕೆ ಅವರು ಸಮಾನವಾದ ಪ್ರಾಶ್ಯಸ್ತ ನೀಡಿರುವುದು ಕಂಡುಬರುತ್ತದೆ.

೧೫. ಕಾಳೆಯವರ ಕಲಾಕೃತಿಗಳಲ್ಲಿ ಮುಖ್ಯವಾಗಿ ಕಂಡುಬರುವುದು ಶಿಸ್ತು ಮತ್ತು ಕ್ರಮಬದ್ಧತೆ

೧೬. ಕಾಳೆಯವರು ಸಾಂಪ್ರದಾಯಿಕ ಕಲಾಕೃತಿಗಳಲ್ಲಿ ಸ್ತ್ರೀ ಪ್ರಧಾನವಾಗಿ ಕಂಡುಬರುತ್ತಿದ್ದು, ಅವಳು ಒಂದು ಶಕ್ತಿಯಾಗಿ ಸೌಂದರ್ಯ ಪ್ರತೀಕವಾಗಿ ಇಲ್ಲಿ ಕಂಡುಬರುತ್ತಾಳೆ.

೧೭. ಕಾಳೆಯವರದು ಸಮಾಜಮುಖಿ ಕಲಾ ಮನೋಭಾವ

೧೮. ಕಾಳೆಯವರು ಬುದ್ಧಿಜೀವಿ ಕಲಾವಿದರು ಅಂತೆಯೇ ಜನತೆಗೆ ಹತ್ತಿರವಾದ ಕಲಾವಿದರು ಕೂಡಾ ಹೌದು.

ಅಧ್ಯಾಯ ೬

ವಿ.ಟಿ. ಕಾಳೆಯವರ ಸಾಹಿತ್ಯ ಕೃತಿಗಳು ಮತ್ತು ಇತರ ಕಲಾ ಪ್ರಕಾರಗಳು

ಅಧ್ಯಾಯ ಆರು

ವಿ.ಟಿ. ಕಾಳೆಯವರ ಸಾಹಿತ್ಯ ಕೃತಿಗಳು ಮತ್ತು ಇತರ ಕಲಾ ಪ್ರಕಾರಗಳು

ಕಾಳೆಯವರದು ಬಹುಮುಖ ವ್ಯಕ್ತಿತ್ವ. ನಾಡಿಗೆ ಅವರೊಬ್ಬ ಚಿತ್ರಕಲಾವಿದರೆಂದು ಮಾತ್ರ ಗುರುತಿಸಿಕೊಂಡಿರದೆ, ಕಲಾಬರಹಗಾರರು, ಶಿಲ್ಪಕಲಾವಿದರು, ನಾಟಕಕಾರರು, ಪ್ರಸಾಧನ ಕಲಾವಿದರು ಮತ್ತು ಕಲಾಕ್ಷೇತ್ರದಲ್ಲಿಯೇ ಉನ್ನತ ಅಧಿಕಾರ ಎನ್ನುವಂತಹ ಅಕಾಡೆಮಿ ಅಧ್ಯಕ್ಷರಾಗಿ, ಸದಸ್ಯರಾಗಿ ಈ ಮುಖೇನ ಕಲಾಕ್ಷೇತ್ರಕ್ಕೆ ಅಮೋಘ ಸೇವಾ ಕಾಣಿಕೆಯನ್ನು ಸಲ್ಲಿಸಿರುತ್ತಾರೆ.

ಕಾಳೆಯವರ ಇಲ್ಲಿಯವರೆಗಿನ ಅವರ ಒಟ್ಟು ಬದುಕನ್ನು ಅವಲೋಕಿಸಿದಾಗ ಅವರೊಬ್ಬ ಶ್ರೇಷ್ಠ ಮಟ್ಟದ ಚಿತ್ರಕಲಾವಿದರು. ಸಾವಿರಾರು ಕಲಾಕೃತಿಗಳನ್ನು ರಚಿಸಿ ಕಲಾಕ್ಷೇತ್ರಕ್ಕೆ ನೀಡಿರುತ್ತಾರೆ. ಅವರೊಬ್ಬ ಚಿತ್ರಕಲಾವಿದರೆಂದೇ ಸಾಮಾನ್ಯವಾಗಿ ಗುರುತಿಸಲ್ಪಡುತ್ತಾರೆ. ಇದಷ್ಟೇ ಹೇಳಿದರೆ, ಇದು ಅವರ ಬದುಕನ್ನು ಸಂಪೂರ್ಣವಾಗಿ ಕಟ್ಟಿಕೊಟ್ಟಂತೆ ಆಗುವುದಿಲ್ಲ. ಏಕೆಂದರೆ ಅವರು ಇತರ ಲಲಿತಕಲೆಗಳಲ್ಲಿಯೂ ಸಾಕಷ್ಟು ಸಾಧನೆಯನ್ನು ಹೊಂದಿದ್ದು, ಅಲ್ಲಿಯೂ ಕೂಡ ಪ್ರಮಾಣಿಕವಾದ ಅವರು ಸೇವೆಯನ್ನು ನಿರ್ವಹಿಸಿರುವುದು ಕಂಡುಬರುತ್ತದೆ. ಅವರ ಇಡೀ ಚಿತ್ರಕಲಾ ಬದುಕು ಒಂದು ಭಾಗವಾದರೆ ಉಳಿದಂತೆ ಅವರ ಇತರ ಸಾಂಸ್ಕೃತಿಕ ಚಟುವಟಿಕೆಗಳದ್ದು ಇನ್ನೊಂದು ಭಾಗ. ಈ ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದ್ದು, ಅವರ ಈ ಬಹುಮುಖ ಸಾಧನೆಯ ಮುಖಗಳನ್ನು ಒಂದೊಂದಾಗಿ ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಕಾಳೆಯವರ ಕಲಾ ಸಾಹಿತ್ಯ ಮತ್ತು ನಾಟಕ ಸಾಹಿತ್ಯ ಕೃತಿಗಳು

ಕಾಳೆಯವರ ಕಲಾ ಸಾಹಿತ್ಯ ಕುರಿತು ನಾಡಿನ ಹೆಸರಾಂತ ಶಿಲ್ಪಕಲಾವಿದರು, ಕಲಾ ಬರಹಗಾರರು ಆದ ಡಾ. ಶಿವಾನಂದ ಬಂಟನೂರ ಅವರು ಈ ರೀತಿ ಹೇಳಿದ್ದಾರೆ. "ಕಲೆಯ ಬಗ್ಗೆ ಬರೆಯುವವರೇ ಇಲ್ಲದ ಸಂದರ್ಭದಲ್ಲಿ ವಿ.ಟಿ. ಕಾಳೆಯವರು ಪುಸ್ತಕಗಳನ್ನು ಬರೆದು ಪ್ರಕಟಿಸಿರುವರು. ಬರವಣಿಗೆಯಿಂದ ಬದುಕು ಕಷ್ಟವೆಂಬುದು ಅವರಿಗೆ ತಿಳಿದಿತ್ತಾದರೂ ಅವರು ಬರೆದರು. ಕಾರಣ ಕಲೆಯ ಬಗೆಗಿನ ಬರವಣಿಗೆಯ ಬಡತನದ ಅರಿವು ಅವರಿಗಿತ್ತು. ಹಾಗಾಗಿ ಒಳಗಿನ ಒತ್ತಡದಿಂದ ಮತ್ತು ಕ್ಷೇತ್ರದ ಅವಶ್ಯಕತೆಯನ್ನು ಮನಗಂಡು ಅವರು ಬರೆದರು. ಅವರ ಚಿತ್ರಕಲಾ ದರ್ಪಣ, ಎಂ.ಎಂ. ಪಂಡಿತ ಮೊದಲಾದ ಪುಸ್ತಕಗಳು ದಾಖಲಿಸುವಂತಹವು"[೧] ಎಂಬುದು ಕಾಳೆಯವರ ಕಲಾ ಬರಹ ಕುರಿತು ಅವರ ವಿಚಾರಗಳನ್ನು ಇಲ್ಲಿ ಪ್ರಸ್ತುತವಾಗಿವೆ.

ಕಾಳೆಯವರು ಒಬ್ಬ ಉತ್ತಮ ಬರಹಗಾರರು ಎಂಬುವುದು ಅವರ ಬರೆದಂತಹ ಕೃತಿಗಳನ್ನು ಅವಲೋಕಿಸಿದಾಗ ತಿಳಿದು ಬರುವಂತಹ ಅಂಶ. ಸಾಮಾನ್ಯವಾಗಿ ಚಿತ್ರಕಲಾಕ್ಷೇತ್ರದಲ್ಲಿ ಅನೇಕ ಕಲಾವಿದರು ಚಿತ್ರಕಲೆಯಲ್ಲಿಯೇ ಉನ್ನತ ಸಾಧನೆ ಮಾಡಿರುವುದು ಕಂಡುಬರುತ್ತದೆ. ಆದರೆ ಚಿತ್ರಕಲೆ ಮತ್ತು ಅದಕ್ಕೆ ಸಂಬಂಧಿಸಿದಂತಹ ಸಾಹಿತ್ಯ ರಚನೆ ಈ ಎರಡನ್ನೂ ಸಮಾನವಾಗಿ ಸರಿದೂಗಿಸಿಕೊಂಡು ಹೋಗುವಂತಹ ವ್ಯಕ್ತಿತ್ವದ ಕಲಾವಿದರು ಬೆರಳೆಣಿಕೆಯಷ್ಟು ಮಾತ್ರ. ಅವರಲ್ಲಿ ಪಿ.ಆರ್. ತಿಪ್ಪೇಸ್ವಾಮಿ, ಡಾ. ಬಿ.ಕೆ. ಹಿರೇಮಠ, ಡಾ. ವಿ.ಜಿ. ಅಂದಾನಿ, ಎನ್. ಮರಿಶಾಮಾಚಾರ್, ಕೆ.ವಿ. ಸುಬ್ರಹ್ಮಣ್ಯಂ, ಚಿ.ಸು. ಕೃಷ್ಣಶೆಟ್ಟಿ, ಡಾ. ಎಸ್.ಸಿ. ಪಾಟೀಲ ಮೊದಲಾದವರು. ಇವರಲ್ಲಿ ಪ್ರಮುಖವಾಗಿ ಕಂಡುಬರುವ ಹೆಸರು ವಿ.ಟಿ. ಕಾಳೆಯವರದು. ಕಾಳೆಯವರು ಕೇವಲ ಕಲಾಬರಹಗಾರ ಮಾತ್ರವಲ್ಲದೆ, ಸಾಕಷ್ಟು ಸಾಮಾಜಿಕ ಕಳಕಳಿಯನ್ನು ವ್ಯಕ್ತಪಡಿಸುವ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ವಿಷಯಕ್ಕೆ ಸಂಬಂಧಿಸಿದಂತೆ ಚಿಂತನೆಗಳನ್ನು ಬರಹರೂಪಕ್ಕೆ ಇಳಿಸಿದ್ದಾರೆ. ಅಲ್ಲದೇ, ದೂರವಾಣಿ ರೇಡಿಯೋದಲ್ಲಿಯೂ ಕೂಡ ಈ ಚಿಂತನೆಗಳು ಪ್ರಸಾರಗೊಂಡಿವೆ. ಇದಲ್ಲದೇ ಕಾಳೆಯವರು ಇನ್ನೂ ಭಿನ್ನವಾಗಿ ನಿಲ್ಲಲು ಕಾರಣವೇನೆಂದರೆ, ನಾಟಕ ಕ್ಷೇತ್ರದಲ್ಲಿ ಅವರು ಮಾಡಿರುವಂತಹ ಸಾಧನೆಯಿಂದ ಅನೇಕ ನಾಟಕಗಳನ್ನು ಬರೆದು ಅವರೊಬ್ಬ ಉತ್ತಮ ನಾಟಕಕಾರ ಎಂಬುದನ್ನು ತೋರಿಸಿದ್ದಾರೆ. ಅವರ ಈ ಸಾಧನೆ ಶ್ಲಾಘನೀಯವಾದದ್ದು. ಹೀಗೆ ಅವರ ಒಟ್ಟು ಸಾಹಿತ್ಯ ಪ್ರಕಾರವನ್ನು ಇಲ್ಲಿ ಮೂರು ರೀತಿಯಾಗಿ ವಿಂಗಡಿಸಿ ಅಧ್ಯಯನ ಮಾಡಲಾಗಿದೆ. ಅವು,

೧. ಡಾ. ಶಿವಾನಂದ ಬಂಟನೂರ (೪೨), ಕನ್ನಡ ವಿಶ್ವವಿದ್ಯಾಲಯ, ಹಂಪಿ, ಅವರೊಂದಿಗೆ ಸಂದರ್ಶನ ದಿನಾಂಕ ೨೨.೮.೨೦೦೯

೧. ಕಲಾ ಸಾಹಿತ್ಯ

೨. ನಾಟಕ ಸಾಹಿತ್ಯ

೩. ಚಿಂತನೆಗಳು

ಒಬ್ಬ ಚಿತ್ರಕಲಾವಿದರಾಗಿ ಸಾಹಿತ್ಯ ರಚಿಸುವಲ್ಲಿ ಆಸಕ್ತಿ ಹೇಗೆ ಮೂಡಿತು? ಸಾಹಿತ್ಯ ರಚನೆಯ ಹಿಂದಿರುವ ಪ್ರೇರಣೆಯೇನು? ಎಂಬ ಮಾತಿಗೆ ಕಾಳೆಯವರು ಕೊಟ್ಟ ಉತ್ತರ ಹೀಗಿದೆ. "೧೯೫೦ರಲ್ಲಿ ಅ.ನ. ಕೃಷ್ಣರಾಯರು ತಾನಸುಬ್ಬರಾಯರು, ಕುಳಕುಂದ ಶಿವರಾಯರು, (ನಿರಂಜನ) ಎಂಬ ಸಾಹಿತಿಗಳು, ಸೇರಿ ಸಾಹಿತ್ಯ ಕ್ಷೇತ್ರದಲ್ಲಿ ಆಗಿನ ಸಂದರ್ಭದಲ್ಲಿ ಒಂದು ದೊಡ್ಡ ಕ್ರಾಂತಿಯನ್ನೇ ಮಾಡಿದರು. ಅದು ಏನೆಂದರೆ, ಇವರೆಲ್ಲಾ ಸೇರಿ ಮೂರುನೂರು ಪುಟದ ಅನೇಕ ಪುಸ್ತಕಗಳನ್ನು ಪ್ರಕಟಿಸಿದರು. ಅದರ ಬೆಲೆ ಕೇವಲ ಒಂದು ರೂಪಾಯಿ ಆಗಿತ್ತು. ಇದರ ಉದ್ದೇಶ ಜನಸಾಮಾನ್ಯರಿಗೂ ಈ ಪುಸ್ತಕ ಸುಲಭವಾಗಿ ದಕ್ಕುವಂತಾಗಲಿ ಎಂಬುವುದು. ಆ ಪುಸ್ತಕವನ್ನು ಕೊಂಡು ಓದಿದೆ. ನಂತರ ಇದರಿಂದ ನಾನೂ ತುಂಬಾ ಪ್ರಭಾವಿತನಾಗಿ ನಾನು ಏನಾದರೂ ಸಾಹಿತ್ಯ ಕ್ಷೇತ್ರದಲ್ಲಿ ಕೆಲಸ ಮಾಡಬೇಕು ಎಂಬ ಆಸೆ ಚಿಗುರೊಡೆಯಿತು. ಇದಲ್ಲದೆ ಕಥೆ, ಕಾವ್ಯ, ಕಾದಂಬರಿಗಳನ್ನು ಓದುವ ಹವ್ಯಾಸವಿತ್ತು. "ಹೋಗಿ ಪೇಟಿಂಗ್ ಮಾಡು ಯಾವಾಗಲೂ ನಾವೇಲ್ ಓದುತ್ತಿರುತ್ತಿಯಾ ಎಂದು ಎಷ್ಟೋಸಲ ಅಕ್ಕಿ ಗುರುಗಳು ಬಯ್ದದ್ದುಂಟು ಅಷ್ಟು ಓದುವ ಹವ್ಯಾಸ ಬೆಳೆಸಿಕೊಂಡಿದ್ದೇ ಅಲ್ಲದೆ, ಪಂಪಭಾರತ, ಕುಮಾರವ್ಯಾಸ ಭಾರತ, ಜೈಮಿನಿ ಭಾರತ, ರಾಮಾಯಣ ದರ್ಶನ ಮುಂತಾದ ಗ್ರಂಥಗಳನ್ನು ತುಂಬಾ ಆಸಕ್ತಿಯಿಂದ ಓದಿದ್ದೇನೆ. ಬೇಂದ್ರೆ ನನ್ನ ಮೆಚ್ಚಿನ ಕವಿ. ಅವರು ಮಾತನಾಡಿದರೆ ಅದೇ ಒಂದು ಕಾವ್ಯದಂತೆ ಯಿರುತ್ತಿತ್ತು. ಹೀಗೆ ಸಾಹಿತ್ಯ ಮತ್ತು ಸಾಹಿತ್ಯ ರಚಿಸುವವರು ಕುರಿತು ಆಸಕ್ತಿ, ಗೌರವವಿದ್ದುದರಿಂದ ಸಾಹಿತ್ಯ ರಚನೆಯಲ್ಲಿ ನನಗೂ ಕೂಡ ಆಸಕ್ತಿ ಬೆಳೆಯುತ್ತಾ ಬಂತು".

ಕಾಳೆಯವರು ಮುಂದುವರಿದು ಹೇಳುವುದೇನೆಂದರೆ "ನಾನು ವಿದ್ಯಾರ್ಥಿಯಾಗಿದ್ದಾಗ, ಕಲೆಯ ಬಗ್ಗೆ ಅ.ನ.ಕೃ. ಅವರು ಇಲ್ಲವೇ ಕಾರಂತರು ಬರೀಬೇಕು. ಅದು ಬಿಟ್ಟರೆ ನಮ್ಮ ಕಲಾವಿದರು ಯಾರೂ ಬರೀತಿರಲಿಲ್ಲ. ಎಲ್ಲಾ ಪುಸ್ತಕಗಳು ಇಂಗ್ಲಿಷ್‌ನಲ್ಲಿರುತ್ತಿತ್ತು. ಆದರೆ ಅದು ನಮ್ಮ ಕೈಗೆಟುಕುವಂತಿರಲಿಲ್ಲಾ. ಪ್ರಸ್ತುತ ಈ ಕ್ಷೇತ್ರದಲ್ಲಿ ಕಲೆ ಕುರಿತು ಪುಸ್ತಕಗಳು ಸಾಕಷ್ಟು ಬರುತ್ತಿರು ವುದು ಒಳ್ಳೆಯ ಲಕ್ಷಣ". ಹೀಗೆ ಕಲಾವಿದರಾಗಿದ್ದು ಸಾಹಿತ್ಯ ರಚಿಸುವವರ ಸಂಖ್ಯೆ ವಿರಳವಾಗಿದ್ದು ಇವರಲ್ಲಿ ಕಾಳೆಯವರು ಪ್ರಮುಖವಾಗಿ ನಿಲ್ಲುತ್ತಾರೆ.

೧. ಕಾಳೆಯವರ ಕಲಾ ಸಾಹಿತ್ಯ

ಕಾಳೆಯವರ ಕಲಾ ಸಾಹಿತ್ಯ ಕುರಿತು ಇಲ್ಲಿ ಅಧ್ಯಯನ ಮಾಡುವ ಪೂರ್ವದಲ್ಲಿ ಒಟ್ಟು ಕಲಾ ಸಾಹಿತ್ಯದ ಆರಂಭ ಮತ್ತು ಬೆಳವಣಿಗೆಯನ್ನು ಕುರಿತು ಸ್ಥೂಲವಾಗಿ ಇಲ್ಲಿ ಪ್ರಸ್ತಾಪಿಸಲಾಗಿದೆ.

ಲಲಿತಕಲೆಗಳ ಕಲಾಪ್ರಕಾರಗಳಾದ ಸಾಹಿತ್ಯ, ಸಂಗೀತ, ನೃತ್ಯ, ವಾಸ್ತು, ನಾಟಕ, ಶಿಲ್ಪ, ಚಿತ್ರ ಮುಂತಾದ ಕಲೆಗಳಿಗೆ ಅವುಗಳದೇ ಆದ ಪ್ರತ್ಯೇಕ ವ್ಯಾಕರಣಗಳಿವೆ. ಅಭಿವ್ಯಕ್ತಿ ಮಾಧ್ಯಮವು ವಿಭಿನ್ನವಾಗಿದೆ. ಇಂದು ಇವು ಬೇರೆ ಬೇರೆಯಾದ ಸಾಹಿತ್ಯ ಪ್ರಕಾರವನ್ನು ಕಾಣುತ್ತೇವೆ. ಪಾಶ್ಚಿಮಾತ್ಯರು ಈ ಬಗೆಯ ಕಲಾಸಾಹಿತ್ಯವನ್ನು ಬೇರೆಯಾಗಿ ವಿಂಗಡಿಸಿ ಅಧ್ಯಯನ ಮಾಡುವ ಕ್ರಮವನ್ನು ನಮಗಿಂತ ಮೊದಲೇ ಪ್ರಾರಂಭಿಸಿಕೊಂಡು ಬಂದಿದ್ದಾರೆ. ಆದರೆ ಪ್ರಾಚೀನ ಭಾರತೀಯರು ಕಲಾ ಸಾಹಿತ್ಯವನ್ನು ಒಂದು ಪ್ರತ್ಯೇಕ ವಿಭಾಗವಾಗಿ ಪರಿಗಣಿಸದೇ ಸಾಂದರ್ಭಿಕವಾಗಿ ರಚನೆ ಮಾಡುತ್ತಾ ಬಂದರು. ತೀರಾ ಇತ್ತೀಚೆಗೆ ಭಾರತೀಯರೂ ಈ ಲಲಿತಕಲಾ ಸಾಹಿತ್ಯ ಪ್ರಕಾರವನ್ನು ಒಂದು ಪ್ರತ್ಯೇಕ ಜ್ಞಾನಶಾಖೆಯಾಗಿ ಪ್ರತ್ಯೇಕಿಸಿದ್ದಾರೆ.[೨]

ಕರ್ನಾಟಕದ ಚಿತ್ರಕಲಾ ಸಾಹಿತ್ಯವು ತೀರಾ ಇತ್ತೀಚೆಗೆ ಬೆಳೆದು ಬಂದರೂ ಪ್ರಾಚೀನ ಕಾಲದ ಬೌದ್ಧ, ಜೈನ ಸಾಹಿತ್ಯ ಕೃತಿಗಳಲ್ಲಿ ಮತ್ತು ಪರೋಕ್ಷವಾಗಿ ಕವಿರಾಜ ಮಾರ್ಗದಿಂದಲೇ ಅದರ ಆರಂಭದ ಹಂತಗಳನ್ನು ಗುರುತಿಸಬಹುದಾಗಿದೆ. ಅಲ್ಲದೇ ಹೊಯ್ಸಳರ ಕಾಲದಲ್ಲಿ ಹನ್ನೆರಡನೆ ಶತಮಾನದ ಶರಣರ ವಚನಗಳಲ್ಲಿ, ವಿಜಯನಗರ ಕಾಲದ ಸಾಹಿತ್ಯ ಕೃತಿಗಳಲ್ಲಿ ಚಿತ್ರಕಲೆ ಬಗೆಗಿನ ಉಲ್ಲೇಖಗಳಿವೆ.[೩] ಎಂಬುವುದು ಇತಿಹಾಸದ ಅಧ್ಯಯನದಿಂದ ಕಾಣಬಹುದಾಗಿದೆ.

ನಮ್ಮ ಹಲವು ಕಾವ್ಯಗಳಲ್ಲಿ ಚಿತ್ರಕಲೆ ಹಾಸುಹೊಕ್ಕಾಗಿ ಬೆಳೆದುಬಂದ ಸಂದರ್ಭಗಳಿವೆ. ಪೊನ್ನ ಕವಿಯ ಶಾಂತಿಪುರಾಣದಲ್ಲಿ ವಿಶ್ವಕರ್ಮನ ಕಲೆಯ ಬಗೆಗೆ ಪ್ರಸ್ತಾಪವಿರುವಂತೆ ಮೊದಲ ಬಾರಿಗೆ ಚೀರಭಟ್ಟ ಎಂಬ ಚಿತ್ರಕಲಾವಿದನ ಬಗ್ಗೆಯೂ ಪ್ರಸ್ತಾಪ ಮಾಡಲಾಗಿದೆ. ನಂತರ ಶಾಂತಿನಾಥ, ನಾಗಚಂದ್ರ, ರುದ್ರಭಟ್ಟ, ಅಗ್ಗಳ, ಗುಣವರ್ಮ ಇವರುಗಳು ಚೀರಭಟ್ಟನ ಬಗ್ಗೆ ಉಲ್ಲೇಖಿಸಿದ್ದಾರೆ.[೪] ಕನ್ನಡದಲ್ಲಿ ಕಲಾಸಾಹಿತ್ಯ ಇಲ್ಲವೇನೋ ಎನ್ನುವಂಥ ಸಂದರ್ಭದಿಂದ ಇಂದು ನಾವು ಹೊರ ಬಂದಿದ್ದೇವೆ. ಸಾಕಷ್ಟು ಸಂಖ್ಯೆಯಲ್ಲಿ ಕಲಾಸಾಹಿತ್ಯ ಕುರಿತು ಪುಸ್ತಕಗಳು ಹೊರಬರುತ್ತಿರುವುದರಿಂದ ಕಲೆಯ ಕುರಿತು, ಕಲಾವಿದರ ಕುರಿತು ವಿಪುಲ ಮಾಹಿತಿ ನಮಗಿಂದು ಸಿಗುತ್ತಲಿದೆ.

---

೨. ಡಾ. ಲಕ್ಕಣ್ಣವರ, ಕರ್ನಾಟಕ ಚಿತ್ರಕಲಾ ಸಾಹಿತ್ಯ (ಅಪ್ರಕಟಿತ ಸಂಶೋಧನಾ ಗ್ರಂಥ ೨೦೦೯). ಪು.೨
೩. ಅದೇ ಪು.೨
೪. ಕೆ.ವಿ. ಸುಬ್ರಹ್ಮಣ್ಯಂ, ಕಲಾ ಸಂವೇದನೆಯ ಒಳನೋಟಗಳು. ಪು.೮

ಸಾಹಿತ್ಯ ಪ್ರಕಾರಗಳಲ್ಲಿ ಒಂದಾದ ನವೋದಯ ಕಾಲದಲ್ಲಿ ಕಲಾಸಾಹಿತ್ಯ ಸ್ವಲ್ಪಮಟ್ಟಿಗೆ ಕಾಣಿಸಿಕೊಂಡಿದೆ. ಅವೆಲ್ಲಾ ಬಹುತೇಕ ಪರಿಚಯಾತ್ಮಕ ಪ್ರಕಟಣೆಗಳು, ೨೦ನೇ ಶತಮಾನದ ಮೂರನೆಯ ದಶಕದಲ್ಲೇ ಶಿವರಾಮ ಕಾರಂತರು ಕಲೆಯ ಕುರಿತು ಬರೆಯಲಾರಂಭಿಸಿದರು. ಅವರ "ಭಾರತೀಯ ಚಿತ್ರಕಲೆ" ೧೯೩೦ರಲ್ಲಿ ಪ್ರಕಟವಾಯಿತು. ನಂತರ 'ಕಲಾಪ್ರಪಂಚ', 'ಕರ್ನಾಟಕದಲ್ಲಿ ಚಿತ್ರಕಲೆ', 'ಬಾಲಪ್ರಪಂಚ', 'ಸೌಂದರ್ಯ ಪ್ರಜ್ಞೆಯನ್ನು ಬೆಳೆಯಿಸಲು ಭಾರತೀಯ ಶಿಲ್ಪ' ಇತ್ಯಾದಿಗಳಲ್ಲಿ ನಮ್ಮ ಜನರ ಸೌಂದರ್ಯ ದೃಷ್ಟಿಯನ್ನು ತೆರೆಯಲು ಪ್ರಯತ್ನಿಸಿದರು. ಇಂಗ್ಲಿಷ್ ಕಲಾಗ್ರಂಥಗಳಿಂದ ಬಿಡುಗಡೆಗೊಳ್ಳಲು ಅವರ ಕೃತಿಗಳು ಆಗ ನೆರವಾದವು.[೫] ಅ.ನ.ಕೃ. ಅವರ ವಿವಾದಸ್ಥ 'ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನ ಅಂದಿನ (೧೯೩೨) ಬಂಗಾಳದ ಪುನರುಜ್ಜೀವನದ ಕಲೆಯ ಪ್ರಭಾವದ ಹಿನ್ನೆಲೆಯಲ್ಲಿ ಹೊರಬಂದ ಕೃತಿ. ಅವರ ೧೯೭೦ರ ಚಿತ್ರಕಲೆ ಭಾರತೀಯ ಚಿತ್ರಕಲೆಯ ವಿಕಾಸ, ಅಜಂತಾ ಕಲೆ, ಸಂಸ್ಕೃತಿ ಮತ್ತು ಕಲೆಗಳು ಇತ್ಯಾದಿ ಬರಹಗಳಿಂದ ಕೂಡಿದೆ.[೬]

ಈ ಪ್ರಕಟಣೆಗಳ ನಂತರ ವಿ.ಕೃ.ಗೋಕಾಕರ ಕಲೆಯ ನೆಲೆ, ಜೆ. ರಾಮಕೃಷ್ಣರಾವ್ ಅವರ ಸೌಂದರ್ಯ ಮತ್ತು ಕಲೆ, ಸಿ.ಪಿ.ಕೆ. ಅನುವಾದಿತ ಲಿಯೋಟಾಲ್‌ಸ್ಟಾಯ್ ಅವರ ಕಲೆ ಎಂದರೇನು? ಕಲಾಮೀಮಾಂಸೆ, ಎಸ್.ಎಲ್. ಭೈರಪ್ಪನವರ ಸತ್ಯ ಮತ್ತು ಸೌಂದರ್ಯ, ಜಿ.ಎಸ್. ಶಿವರುದ್ರಪ್ಪನವರ ಸೌಂದರ್ಯ ಸಮೀಕ್ಷೆ, ಶ್ರೀನಿವಾಸಮೂರ್ತಿ ಅವರು ಅನುವಾದಿಸಿರುವ ಪಾಲ್‌ಕ್ಲೀನ ಆಧುನಿಕ ಕಲೆ, ಇವೆಲ್ಲವೂ ಕಲೆಯನ್ನು ಅನುಭವಿಸುವ ಕ್ರಿಯೆಗೆ ಸಾಕಷ್ಟು ಸಹಕರಿಸುತ್ತವೆ. ಇನ್ನು ಕಲಾವಿದರ ಕುರಿತಂತೆ ಅವರ ಕಲೆಯನ್ನು ಒಳಗೊಂಡ ಪರಿಚಯದಂಥ ಹೆಚ್ಚಿನ ಸಂಖ್ಯೆಯ ಕೃತಿಗಳು ಬಂದಿವೆ. ಪಿ.ಆರ್. ತಿಪ್ಪೇಸ್ವಾಮಿಯವರ ಕಲೋಪಾಸಕರು, ೪೭ ಕಲಾವಿದರ ಆತ್ಮೀಯ ಪರಿಚಯ ನೀಡುತ್ತದೆ. ಹಲವಾರು ಕಲಾವಿದರ ಆಕರ್ಷಕ ಜೀವನ ಪರಿಚಯಗಳಿವೆ. ಈ ಸಾಲಿನ ಬಹುತೇಕ ಕೃತಿಗಳು ಅಕಾಡೆಮಿಯ ಆಶ್ರಯದಲ್ಲಿ ಪ್ರಕಟವಾಗಿವೆ.[೭]

ಕರ್ನಾಟಕದಲ್ಲಿ ಚಿತ್ರಕಲೆಯನ್ನು ಕುರಿತು ಬರೆಯುವಾಗ ಕಾರಂತರು ಭಾರತೀಯ ಇತರ ಕಲಾಪ್ರಕಾರಗಳ ಹಿನ್ನೆಲೆಯಲ್ಲಿ ವಿಶಿಷ್ಟವಾಗಿ ನೋಡಿದ್ದಾರೆ. ಕರ್ನಾಟಕದ ಇತಿಹಾಸ ಪೂರ್ವ ಚಿತ್ರಕಲೆ ಹಾಗೂ ಇತಿಹಾಸ ಕಾಲದ ಭಿತ್ತಿ ಚಿತ್ರಕಲೆಯ ಕುರಿತಾದ 'ಕರ್ನಾಟಕದಲ್ಲಿ ಚಿತ್ರಕಲೆ'. ತಿಪ್ಪೇಸ್ವಾಮಿ ಅವರ 'ಭಾರತೀಯ ಚಿತ್ರಕಲೆ', ಬಾಯಿರಿಯವರ 'ಭಾರತೀಯ ಚಿತ್ರಕಲೆ', ಅಶೋಕ ಅಕ್ಕಿಯವರ 'ಕಲಾ ಚರಿತ್ರೆ', ಅ.ಲ. ನರಸಿಹಂನ್ ಅವರ 'ವಿಕಾಸ ಕಂಡ ಕರ್ನಾಟಕದ ಚಿತ್ರಕಲೆ'[೮]

---

೫. ಕೆ.ವಿ. ಸುಬ್ರಹ್ಮಣ್ಯಂ, ಕಲಾ ಸಂವೇದನೆಯ ಒಳನೋಟಗಳು, ಪು.೯

೬. ಅದೇ ಪು.೧೦

೭. ಅದೇ ಪು.೧೧

೮. ಅದೇ ಪು.೧೧

ಇವುಗಳ ಸಾಲಿಗೆ ವಿ.ಟಿ. ಕಾಳೆಯವರು ಬರೆದ 'ಚಿತ್ರಕಲಾ ದರ್ಪಣ' ಕೂಡ ಉತ್ತಮ ವಾದ ಕೃತಿಯಾಗಿದ್ದು, ಕಲೆಯ ಕುರಿತು ಒಂದು ಪಾರಿಭಾಷಿಕ ಪದಕೋಶದಂತೆ ರಚನೆಗೊಂಡಿದೆ.

ನಿಜವಾದ ಕಲಾವಿದನೊಬ್ಬ ತನ್ನ ಒಳಗಿನ ಒತ್ತಡದ ಕಾರಣಕ್ಕೆ ಹೇಗೆ ಅಭಿವ್ಯಕ್ತಿಸದೇ ಇರಲಾರನೋ, ಹಾಗೆಯೇ ನಿಜವಾದ ಕಲಾಬರಹಗಾರ, ವಿಮರ್ಶಕ ತನ್ನ ಸಂದರ್ಭದ, ತನ್ನ ಬದುಕಿನ ಅಂಗವಾದ ಕಲಾವಿದರ ಸೃಷ್ಟಿಯ ಒಳನೋಟಗಳನ್ನು ಅನುಭವಿಸದೆ, ಬರೆಯದೆ ಇರಲಾರ.[೯] ಈ ನಿಟ್ಟಿನಲ್ಲಿ ಪ್ರಸ್ತುತ ಕರ್ನಾಟಕದಲ್ಲಿ ಉತ್ತಮ ಬರಹಗಾರರು ತಮ್ಮ ಬರವಣಿಗೆಯ ಪಾಂಡಿತ್ಯದಿಂದ ಕೂಡಿದ ಅನೇಕ ಪುಸ್ತಕಗಳನ್ನು ಬರೆದಿದ್ದು, ಅವು ಕಲಾಕ್ಷೇತ್ರದ ಜ್ಞಾನದ ಹಸಿವನ್ನು ನೀಗಿಸಬಲ್ಲವು. ಕರ್ನಾಟಕದಲ್ಲಿ ಪ್ರಸ್ತುತ ಕಲಾಬರಹಗಾರರಾದ ಕೆ.ವಿ. ಸುಬ್ರಹ್ಮಣ್ಯ, ಚಿ.ಸು. ಕೃಷ್ಣಶೆಟ್ಟಿ, ಎನ್.ಮರಿಶಾಮಾಚಾರ್, ಕೆ.ಶ್ರೀನಿವಾಸಮೂರ್ತಿ, ಎಚ್.ಎ.ಅನಿಲಕುಮಾರ, ಡಾ. ಎಸ್.ಸಿ. ಪಾಟೀಲ, ಬಿ.ಕೆ. ಹಿರೇಮಠ ಮುಂತಾದ ಹೆಸರಾಂತ ಕಲಾಬರಹಗಾರರಿದ್ದು ಕಾಳೆಯವರು ಸಹ ಕಲೆಯನ್ನು ಕುರಿತು ಕಲಾವಿದರನ್ನು ಕುರಿತು ಪುಸ್ತಕಗಳನ್ನು ಬರೆದಿದ್ದು ಕಲಾಕ್ಷೇತ್ರಕ್ಕೆ ತಮ್ಮ ಅಮೋಘ ಕಾಣಿಕೆಯನ್ನು ಸಲ್ಲಿಸಿ ತಾವೊಬ್ಬ ಕೇವಲ ಚಿತ್ರಕಲಾವಿದ ಮಾತ್ರವಲ್ಲ ಉತ್ತಮ ಬರಹಗಾರ ಎಂಬುದನ್ನು ಸಾಬೀತುಪಡಿಸಿದ್ದಾರೆ.

ಕರ್ನಾಟಕ ಚಿತ್ರಕಲಾ ಸಾಹಿತ್ಯದಲ್ಲಿ ಬಹುಪಾಲು ಸಾಹಿತ್ಯವನ್ನು ಕರ್ನಾಟಕ ಲಲಿತಕಲಾ ಅಕಾಡೆಮಿಯು ಪ್ರಕಟಿಸಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಕಾಳೆಯವರ ಹೆಚ್ಚಿನ ಚಿತ್ರಕಲಾ ಸಾಹಿತ್ಯ ಕೃತಿಗಳು ಲಲಿತಕಲಾ ಅಕಾಡೆಮಿಯಿಂದ ಪ್ರಕಟಗೊಂಡಿವೆ. ಅಲ್ಲದೇ ಕಾಳೆಯವರು ಈ ಅಕಾಡೆಮಿ ಯಿಂದ ಪ್ರಕಟವಾದ 'ಕಲಾಕೋಶ' ಎಂಬ ಬೃಹತ್ ಗ್ರಂಥಕ್ಕೂ ಸಹ ಸಂಪಾದಕರಾಗಿಯೂ ಕೂಡ ಕೆಲಸ ಮಾಡಿದ್ದಾರೆ. ಕಾಳೆಯವರ ಇನ್ನುಳಿದ ಕಲಾ ಸಾಹಿತ್ಯ ಪುಸ್ತಕಗಳು ಬೇರೆ ಬೇರೆ ಪ್ರಕಾಶನದಿಂದ ಪ್ರಕಟಿತಗೊಂಡಿವೆ. ಕಾಳೆಯವರು ಬರೆದಂತಹ ಕಲಾ ಪುಸ್ತಕಗಳಲ್ಲಿ ಅವು ಚಿತ್ರಕಲಾ ಪರಿಚಯ, ಚಿತ್ರಕಲಾ ದರ್ಪಣ, ಕಲಾವಿದ ಟಿ.ಪಿ. ಅಕ್ಕಿ, ಕಲಾವಿದ ಶಿವಾನಂದ ಪಿ. ಅಕ್ಕಿ, ಎಸ್.ಎಂ. ಪಂಡಿತ ಕಲಾಕೋಶದಲ್ಲಿ ಸುಮಾರು ೨೫ ವಿವಿಧ ವಿಷಯಗಳ ಕುರಿತು ಲೇಖನಗಳು ಬರೆದಿದ್ದಾರೆ. ಈ ಪುಸ್ತಕಗಳಲ್ಲಿರುವ ಪ್ರಮುಖ ಅಂಶವನ್ನು ಇಲ್ಲಿ ಟಿಪ್ಪಣಿ ರೂಪದಲ್ಲಿ ಕೊಡಲಾಗಿದ್ದು, ಈ ಮುಖೇನ ಕಾಳೆಯವರ ಕಲಾ ಬರವಣಿಗೆಯ ಶೈಲಿ, ಅವರ ಭಾಷಾ ಸಮೃದ್ಧಿ ಇದರ ಹಿಂದೆ ದುಡಿದ ಅವರ ಮನಸ್ಸನ್ನು ತಿಳಿದುಕೊಳ್ಳುವುದು ಅಧ್ಯಯನದ ಉದ್ದೇಶವಾಗಿದೆ.

---

೯. ಕೆ.ವಿ. ಸುಬ್ರಹ್ಮಣ್ಯಂ, ಕಲಾ ಸಂವೇದನೆಯ ಒಳನೋಟಗಳು, ಪು.೧೩

ಚಿತ್ರಕಲಾ ಪರಿಚಯ

ಲೇ: ವಿ.ಟಿ. ಕಾಳೆ

ಚಿತ್ರಕಲಾ ಪರಿಚಯ ವಿ.ಟಿ. ಕಾಳೆಯವರಿಂದ ಬರೆಯಲ್ಪಟ್ಟಿದ್ದು, ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯಿಂದ ಮಾನ್ಯ ಮಾಡಲ್ಪಟ್ಟ ಹಾಗೂ ಪಠ್ಯಕ್ರಮಕ್ಕೆ ಅನುಸಾರವಾಗಿ ರಚಿಸಲ್ಪಟ್ಟಿರುವ ಏಕಮೇವ ಚಿತ್ರಕಲಾ ಬೋಧಕ ಪುಸ್ತಕವೆಂದು ಗುರುತಿಸಿಲ್ಪಟ್ಟಿದ್ದು, ಆಗಿನ ತರಬೇತಿಗಳಾದ ಲೋಯರ್ ಗ್ರೇಡ್, ಹೈಯರ್ ಗ್ರೇಡ್, ಡ್ರಾಯಿಂಗ್ ಟೀಚರ್ಸ್ ಕೋರ್ಸ್, ಟ್ರೇನಿಂಗ್ ಕಾಲೇಜು ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದ ಮಾರ್ಗದರ್ಶಿ ಪುಸ್ತಕ ಇದಾಗಿರುವುದು ಇದರ ಹೆಗ್ಗಳಿಕೆ. ಸುಮಾರು ೫೦೦ ರೇಖಾಚಿತ್ರಗಳು ಈ ಪುಸ್ತಕದಲ್ಲಿ ಪ್ರಕಟಗೊಂಡಿದ್ದು ಈ ಎಲ್ಲಾ ರೇಖಾಚಿತ್ರಗಳು ಕಾಳೆಯವರು ರಚಿಸಿದ್ದು ಇದರ ವಿಶೇಷತೆಯಾಗಿದೆ. ಈ ಪುಸ್ತಕವು ಒಟ್ಟು ಎಂಟು ಅಧ್ಯಾಯಗಳನ್ನು ಹೊಂದಿದ್ದು ಅವು ಚಿತ್ರಕಲಾ ಶಿಕ್ಷಣದ ಗುರಿ ಹಾಗೂ ವಸ್ತುಸ್ಥಿತಿ, ಶಾಲೆಗಳಲ್ಲಿ ಚಿತ್ರಕಲೆಯನ್ನು ಕಲಿಸುವ ಕ್ರಮ, ಚಿತ್ರಕಲೆಯ ಉಪಕರಣಗಳು, ಪ್ರಾರಂಭದ ಪಾಠಗಳು, ನಿಸರ್ಗ ಚಿತ್ರ ಲೇಖನ, ವಸ್ತು ಚಿತ್ರಲೇಖನ, ಛಾಯಾವರಣ, ಪ್ರಾಯೋಗಿಕ ಸರಳ ರೇಖಾ ಗಣಿತ ಎಂಬ ಶೀರ್ಷಿಕೆಯ ಅಡಿಯಲ್ಲಿ ಈ ಪುಸ್ತಕವನ್ನು ರಚಿಸಲಾಗಿದ್ದು, ಈ ಪುಸ್ತಕವು ಒಟ್ಟು ಕಲಾ ಶಿಕ್ಷಣದ ಪ್ರಾರಂಭದ ಹಂತವನ್ನು ಉಪಯುಕ್ತ ರೀತಿಯಲ್ಲಿ ಕಟ್ಟಿಕೊಡುತ್ತದೆ. ಅಲ್ಲದೇ, ಇಲ್ಲಿ ಲೇಖಕರು ಸರಳ ವಿಧಾನದಲ್ಲಿ ಕ್ರಮಬದ್ಧವಾಗಿ ಸುಲಭ ಭಾಷೆಯಲ್ಲಿ ಈ ಪುಸ್ತಕವನ್ನು ಕಟ್ಟಿಕೊಟ್ಟಿದ್ದಾರೆ. ಈ ಪುಸ್ತಕವು ೧೪೪ ಪುಟಗಳನ್ನು ಹೊಂದಿದೆ.

ಕಾಳೆಯವರ ಸರಳ ಭಾಷಾ ಶೈಲಿಯನ್ನು ನಿರೂಪಿಸುವ ಕೆಲವು ಉದಾಹರಣೆಗಳನ್ನು ಇಲ್ಲಿ ಟಿಪ್ಪಣಿ ಮುಖಾಂತರ ಕೊಡಲಾಗಿದೆ. ಈ ಪುಸ್ತಕದ ಮೊದಲನೆಯ ಅಧ್ಯಾಯದಲ್ಲಿ ಕಾಳೆಯವರು ಚಿತ್ರಕಲೆಯ ಪ್ರಾಚೀನತೆಯ ಮತ್ತು ಅದರ ಬೆಳವಣಿಗೆಯ ಹಂತದ ಕುರಿತು ಎಲ್ಲರಿಗೂ ಸುಲಭವಾಗಿ ಮನವರಿಕೆಯಾಗುವಂತಹ ಭಾಷೆಯ ಮುಖಾಂತರ ಕಟ್ಟಿಕೊಟ್ಟಿದ್ದಾರೆ. ಕಾಳೆಯವರ ಭಾಷೆ ಮತ್ತು ಬರವಣಿಗೆಯ ಶೈಲಿಯನ್ನು ನಿರೂಪಿಸುವಂತಹ ಕೆಲವು ಟಿಪ್ಪಣಿಗಳನ್ನು ಇಲ್ಲಿ ಉದಾಹರಿಸಲಾಗಿದೆ.

ಮಾನವನ ಬುದ್ಧಿಮತ್ತೆಯ ವಿಕಾಸಕ್ಕೆ ಚಿತ್ರಕಲೆಯೇ ಪ್ರಮುಖ ಸಾಧನೆಯಾಗಿದೆ. ಭಾಷೆ ಲಿಪಿಗಳ ಪರಿಚಯವಿಲ್ಲದ, ಇರಲು ಮನೆ, ತೊಡಲು ಬಟ್ಟೆಗಳು ಗೊತ್ತಿಲ್ಲದ ನಾಗರಿಕತೆಯನ್ನು ಕಾಣದ ಕಾಡು ಪ್ರಾಣಿಯಾದ ಆದಿಮಾನವನು ಮೊಟ್ಟಮೊದಲು ಕಲಿತದ್ದು ಚಿತ್ರ ಬಿಡಿಸುವುದನ್ನು ಮಾತ್ರ. ತಾನು ನೋಡಿದ ಕಾಡುಕೋಣ, ಕಾಡಾನೆ, ಕಾಡುಮೇಕೆ ಮೊದಲಾದ ಪ್ರಾಣಿಗಳ ಪ್ರತಿ

ಆಕೃತಿಗಳನ್ನು ಬರೆಯಲು ಕಲಿತ ಮಾನವನು ಚಿತ್ರಕಲೆಯನ್ನೇ ತನ್ನ ಭಾಷೆಯನ್ನಾಗಿಯೂ, ಬರಬರುತ್ತಾ ಲಿಪಿಯನ್ನಾಗಿಯೂ ಬಳಸಿಕೊಂಡನು.

ನೈಸರ್ಗಿಕವಾದ ಗವಿಗಳಲ್ಲಿ ವಾಸಿಸುತ್ತಿದ್ದ ಮಾನವನು ಬರಬರುತ್ತಾ ಮನೆಗಳನ್ನು ಕಟ್ಟಿಕೊಳ್ಳಲು ಕಲಿತನು. ಕಾಡಿನಿಂದ ನಾಡಿಗೆ ಬಂದನು. ಅನಾಗರಿಕ ಸ್ಥಿತಿಯಿಂದ ನಾಗರಿಕನಾದನು. ನಾಗರಿಕತೆಯ ದೀರ್ಘಾವಧಿಯ ಸಮಗ್ರ ಹೋರಾಟದಲ್ಲಿ ಮಾನವನು ಚಿತ್ರ ಬಿಡಿಸುವುದನ್ನು ಕಡೆಗಣಿಸಲಿಲ್ಲ. ಆದಿಮಾನವನಿಂದ ಹಿಡಿದು ಇಂದಿನವರೆಗೆ ಮಾನವ ಸಂಸ್ಕೃತಿಯ ವಿಕಾಸದೊಂದಿಗೆ ಚಿತ್ರಕಲೆಯ ವಿಕಾಸವೂ ವೃದ್ಧಿಗೊಳ್ಳುತ್ತ ನಡೆದಿದೆ.

ಕಾಳೆಯವರು ಮುಂದುವರೆದು ಚಿತ್ರಕಲೆಯ ಮುಖಾಂತರ ಮಕ್ಕಳ ಮಾನಸಿಕ ಸ್ಥಿತಿ ಉತ್ತಮ ಗೊಳ್ಳುವುದು ಕುರಿತು ಪಠ್ಯಕ್ರದಲ್ಲಿ ಚಿತ್ರಕಲೆಯ ಅಗತ್ಯತೆ ಕುರಿತು ಸಹಜವಾಗಿ ಸರಳವಾಗಿ ಹೇಳಿದ್ದಾರೆ. ಅದು,

"ಮಗುವಿನ ಅಪ್ರಬುದ್ಧ ಮನಸ್ಸಿನಲ್ಲಿ ಸುಪ್ತವಾಗಿ ಹುದುಗಿಕೊಂಡಿರುವ ಸುಪ್ತಚೇತನಗಳು ಚೇತರಿಸಿಕೊಂಡು ಕ್ರಿಯಾಶಾಲಿಗಳಾಗಲು ಚಿತ್ರಕಲೆಯು ಪ್ರಚೋದನೆಯನ್ನು ಮಾತ್ರ ನೀಡುತ್ತದೆ. ಸುಪ್ತಭಾವನೆಗಳನ್ನು ಸುಲಭವಾಗಿ ಪ್ರಕಟಿಸಲು ಚಿತ್ರಕಲೆಯು ಒಂದು ಲಘು ಲಿಪಿಯಾಗಿದೆ" ಎಂದು ಹೇಳುತ್ತಾರೆ. ಅಲ್ಲದೆ, ಶಾಲೆಗಳಲ್ಲಿ ಕಲಿಸಲ್ಪಡುವ ಇತರ ವಿಷಯಗಳೊಂದಿಗೆ ಪ್ರಾಥಮಿಕ ಶಾಲೆಯ ಪ್ರಾರಂಭದ ವರ್ಗಗಳಲ್ಲಿ ಹೆಚ್ಚಾಗಿ ಚಿತ್ರಗಳ ಮೂಲಕವೇ ಓದು ಬರಹಗಳು ಪ್ರಾರಂಭ ವಾಗುವುದು. ಯಾವುದೊಂದು ವಸ್ತುವನ್ನು ಕುರಿತು ಕೊಡುವ ಉದ್ದುದ್ದವಾದ ವಿವರಣೆಗಳು ಮಕ್ಕಳ ಎಳೆಯ ಮನಸ್ಸಿನಲ್ಲಿ ನಾಟಲಾರವು. ಆದ್ದರಿಂದಲೇ ಪ್ರಾರಂಭದ ವರ್ಗಗಳಲ್ಲಿ ಜಾಣ ಶಿಕ್ಷಕನು ಯಾವುದೇ ವಸ್ತುವಿನ ಪರಿಚಯವನ್ನು ಚಿತ್ರ ಮುಖಾಂತರವೇ ಮಾಡಿಸುತ್ತಾನೆ. ಎಂದು ಹೇಳುವ ಮೂಲಕ ಕಾಳೆಯವರು ಮಕ್ಕಳ ಪಠ್ಯಕ್ರಮದಲ್ಲಿ ಚಿತ್ರಕಲೆಯ ಮಹತ್ವ ಎಂಥಹದು ಎಂಬುದನ್ನು ಇದು ಗೊತ್ತುಪಡಿಸುತ್ತದೆ. ಅಲ್ಲದೇ ಈ ಪುಸ್ತಕವು ಕಲಾ ಶಿಕ್ಷಕರಿಗೂ ಒಂದು ಉತ್ತಮ ಮಾರ್ಗದರ್ಶಿಯಾಗಿ ಕೆಲಸ ಮಾಡುತ್ತದೆ.

ಚಿತ್ರಕಲಾ ದರ್ಪಣ

ಲೇ: ವಿ.ಟಿ. ಕಾಳೆ

ಎರಡು ಮುದ್ರಣ ಕಂಡ ಈ ಪುಸ್ತಕವು ವಿದ್ಯಾರ್ಥಿಗಳ ಉಪಯೋಗಕ್ಕೆಂದೇ ಉದ್ದೇಶವಿಟ್ಟು ಕೊಂಡು ರೂಪತಾಳಿದ ಕಲಾಪುಸ್ತಕ ಇದಾಗಿದೆ. ಒಟ್ಟು ಹತ್ತು ಅಧ್ಯಾಯಗಳನ್ನು ಹೊಂದಿರುವ ಈ ಪುಸ್ತಕವು ಕಲೆಯ ಕುರಿತು ಸಮಗ್ರವಾದ ಮಾಹಿತಿಯನ್ನು ನೀಡುವಂತಿದ್ದು ಈ ಪುಸ್ತಕವನ್ನು ಚಿತ್ರಕಲೆಯ 'ಪಾರಿಭಾಷಿಕ ಪದಕೋಶ' ಪುಸ್ತಕ ಎಂದು ಕರೆಯಬಹುದು.

ಈ ಪುಸ್ತದಲ್ಲಿ ಕಾಳೆಯವರು ಪ್ರಾಚೀನ ಚಿತ್ರಕಲೆಯ ಜೊತೆಗೆ ಆಧುನಿಕ ಚಿತ್ರಕಲೆಯನ್ನು ತುಲನಾತ್ಮಕ ದೃಷ್ಟಿಕೋನದಿಂದ ರಚಿಸಿದ್ದಾರೆ. ಇಲ್ಲಿ ಕಲೆ ಎಂದರೇನು, ಇತಿಹಾಸ ಪೂರ್ವದ ಕಲೆ, ಆದಿಮಾನವನ ಚಿತ್ರಕಲೆಯ ತಂತ್ರ, ಭಾರತದ ವಿವಿಧ ಭಾಗಗಳಲ್ಲಿ ಭಿತ್ತಿಚಿತ್ರಗಳ ಮೇಲೆ ಬೆಳಕು ಚೆಲ್ಲುವ ವಿಷಯಗಳ ಸಂಗ್ರಹ ಇಲ್ಲಿ ಇದೆ. ಈ ಪುಸ್ತಕವು ಒಟ್ಟು ಸಮಗ್ರವಾದ ಕಲಾ ಇತಿಹಾಸ, ಸಮಕಾಲೀನ ಚಿತ್ರಕಲೆಯ ವೈವಿಧ್ಯತೆಗಳು, ತಂತ್ರಗಳು, ಪಾಶ್ಚಾತ್ಯ ಮತ್ತು ಭಾರತೀಯ ಕಲಾ ಪದ್ಧತಿಗಳ ಕುರಿತು ಸೂಕ್ತವಾದ ವಿವರಣೆ ಕಂಡುಬರುತ್ತದೆ. ಒಟ್ಟಿನಲ್ಲಿ ಇದೊಂದು 'ವಿಶ್ವಕಲೆಯ ಹ್ರಸ್ವರೂಪ'ದ ಪುಸ್ತಕವೆಂದು ಹೇಳಬಹುದಾಗಿದೆ.

ಟಿ.ಪಿ. ಅಕ್ಕಿ

ಲೇ: ವಿ.ಟಿ. ಕಾಳೆ

ಕಾಳೆಯವರ ಕಲಾಗುರುಗಳಾದ ದಿ. ಟಿ.ಪಿ. ಅಕ್ಕಿಯವರ ಕುರಿತು ವ್ಯಕ್ತಿ ಅಧ್ಯಯನದ ಕೃತಿ ಇದಾಗಿದ್ದು, ಇಲ್ಲಿ ಕಾಳೆಯವರ ಬರವಣಿಗೆಯು ಪುಟಕ್ಕಿಟ್ಟ ಚಿನ್ನದಂತೆ ಮೂಡಿಬಂದಿದೆ ಎಂದರೆ ಅತಿಶೋಕ್ತಿಯಾಗಲಾರದು. ತಮ್ಮ ಕಲಾಗುರುಗಳಾದ ಟಿ.ಪಿ. ಅಕ್ಕಿಯವರ ಬಗ್ಗೆ ಅಪಾರ ಅಭಿಮಾನ, ಪ್ರೀತಿ, ಗೌರವ ಹೊಂದಿರುವ ಕಾಳೆಯವರು ಅವರ ಗುರುಗಳ ಬಗ್ಗೆ ತಾವೇ ಬರೆಯುವಾಗ ಇಲ್ಲಿ ತುಂಬಾ ಭಾವುಕರಂತೆ ಕಂಡುಬರುತ್ತಾರೆ. ಅವರ ಬರವಣಿಗೆಯು ಓದುಗರ ಮನಕ್ಕೆ ನೇರವಾಗಿ ತಟ್ಟುವಂತದ್ದು, ಸರಳ ಭಾಷೆಯಲ್ಲಿ ಮೂಡಿಬಂದಿದೆ.

ಈ ಪುಸ್ತಕದಲ್ಲಿ ಕಾಳೆಯವರು ತಮ್ಮ ಗುರುಗಳ ಬಗ್ಗೆ ಬರೆಯುತ್ತಾ ಅವರ ಬಾವುಕ ಬರವಣಿಗೆಗೆ ಇಲ್ಲಿ ಒಂದು ಉದಾಹರಣೆಯನ್ನು ಹೀಗೆ ನೀಡುತ್ತಾರೆ. "ಸಾವಿರಾರು ಅರ್ಜುನ, ಭೀಮ, ಸುಯೋಧನರನ್ನು ಸೃಷ್ಟಿಸಲು ಸಾಧ್ಯವಿದೆ. ಆದರೆ ಒಬ್ಬ ದ್ರೋಣಾಚಾರ್ಯರನ್ನು ಸೃಷ್ಟಿಸುವುದು ಕಷ್ಟಸಾಧ್ಯ" ಎಂದು ಕಾಳೆಯವರು ಅಭಿಪ್ರಾಯ ಪಡುತ್ತಾರೆ. ಅಲ್ಲದೇ ಮುಂದು ವರಿದು ತಮ್ಮ ಗುರುಗಳ ಕುರಿತು ಹೇಳುವುದೆನೆಂದರೆ "ಟಿ.ಪಿ. ಅಕ್ಕಿ ಚಿತ್ರಕಲಾ ಶಿಕ್ಷಣ ಕ್ಷೇತ್ರದಲ್ಲಿ ಬಹುದೊಡ್ಡ ಹೆಸರು. ಸಾಧನೆಯ ಇತಿಮಿತಿಗಳನ್ನು ಮೀರಿ ಬೆಳೆದ ಮಹಾಮೇರು". ಅಲ್ಲದೇ ಇಲ್ಲಿ ಟಿ.ಪಿ. ಅಕ್ಕಿಯವರ ಕಲಾ ವ್ಯಾಸಂಗ, ಗದುಗಿನಲ್ಲಿ ಕಲಾ ಸಂಸ್ಥೆ ಸ್ಥಾಪಿಸಲು ಅವರು ಪಟ್ಟ ಪರಿಶ್ರಮ ಅವರ ಶಿಷ್ಯ ಬಳಗ, ಶಿಷ್ಯರ ಮೇಲೆ ಅವರು ಬೀರಿದ ಪ್ರಭಾವ ಮತ್ತು ಅಕಾಡೆಮಿಯ ಅಧ್ಯಕ್ಷರಾಗಿ ಅಕ್ಕಿಯವರು ಸಲ್ಲಿಸಿದ ಸೇವೆ ಅದ್ವಿತೀಯವಾದುದು ಎಂಬ ವಿವರಣೆ ಇಲ್ಲಿ ಕಂಡುಬರುತ್ತದೆ.

ಶಿವಾನಂದ ಪಿ. ಅಕ್ಕಿ

ಲೇ: ವಿ.ಟಿ. ಕಾಳೆ

ಈ ಕೃತಿಯಲ್ಲಿ ಕಾಳೆಯವರು ಟಿ.ಪಿ. ಅಕ್ಕಿಯವರ ಹಿರಿಯ ಸಹೋದರನಾದ ಕಲಾವಿದ ಶಿವಾನಂದ ಪಿ. ಅಕ್ಕಿಯವರನ್ನು ಕುರಿತು ವ್ಯಕ್ತಿ ಅಧ್ಯಯನ ಮಾಡಿದ್ದಾರೆ. ಶಿವಾನಂದ ಅಕ್ಕಿಯವರ ಬದುಕಿನ ಬವಣೆ, ಕಲಾವ್ಯಾಸಂಗ ಮಾಡುವಲ್ಲಿ ಅವರು ಪಟ್ಟ ಪಾಡು. ಸಂಸಾರದ ಹೊಣೆ, ಕಲೆಯೊಂದಿಗೆಯಿದ್ದ ಅವರ ಬಾಂಧವ್ಯ ಮುಂದೆ ಮರೆಯಲಾಗದಂತಹ ಬುದ್ಧಿಭ್ರಮಣೆಯಂಥ ದುರಂತಕ್ಕಿಡಾದ ಅವರ ಬದುಕು ಅವರು ಕಲಾಕ್ಷೇತ್ರಕ್ಕೆ ಕೊಟ್ಟಂತಹ ಅಮೂಲ್ಯ ಕೊಡುಗೆ ಕುರಿತು ಮನಮಿಡಿಯುವಂತೆ ಹೇಳಿದ್ದಾರೆ.

ಎಸ್.ಎಂ. ಪಂಡಿತ್

ಲೇ: ವಿ.ಟಿ. ಕಾಳೆ

ವಿ.ಟಿ. ಕಾಳೆಯವರು ಬರೆದ ಈ ಪುಸ್ತಕ ನಾಡಿನ ಹೆಸರಾಂತ ಕಲಾವಿದ ದಿ. ಎಸ್.ಎಂ. ಪಂಡಿತ್ ಅವರ ಜೀವನ ಮತ್ತು ಅವರ ಅಮೂಲ್ಯ ಕಲಾಕೃತಿಗಳ ಸಂಕ್ಷಿಪ್ತ ಪರಿಚಯ ನೀಡುತ್ತದೆ. ಅಲ್ಲದೆ ಇದು ಕಿರುರೂಪದ ಪುಸ್ತಕವಾದರೂ ಕಾಳೆಯವರ ಪ್ರಬುದ್ಧ ಲೇಖನದಲ್ಲಿ ಮೂಡಿಬಂದಿದೆ. ಇಲ್ಲಿರುವ ಮಹತ್ವವಾದ ಕೆಲವು ಟಿಪ್ಪಣಿಗಳು ಇಲ್ಲಿವೆ.

ಶಾಲೆ ಬಿಟ್ಟಾಗ ಎಲ್ಲಾ ಮಕ್ಕಳು ಬೇಗನೆ ಮನೆ ಸೇರುವಂತೆ ಪಂಡಿತಜಿ ಮನೆ ಸೇರುತ್ತಿರಲಿಲ್ಲ. ಬದಲಾಗಿ ಸುಂದರವಾಗಿ ಬೆಳೆದು ನಿಂತ ಗಿಡಗಂಟೆಗಳನ್ನು ನೋಡಿ ಆನಂದಿಸುವುದಕ್ಕೆ ತಲ್ಲೀನನಾಗಿ ರುತ್ತಿದ್ದರು. ಹೀಗೆ ಬಾಲ್ಯದಿಂದಲೇ ಪಂಡಿತಜೀಗೆ ನಿಸರ್ಗ ಸೌಂದರ್ಯಾನಾಭೂತಿಯ ಅರಿವಾಗ ತೊಡಗಿತು. ಈ ಮನಸ್ಥಿತಿ ಮುಂದೆ ಪಂಡಿತಜೀ ಕಲಾಕ್ಷೇತ್ರಕ್ಕೆ ಕಾಲಿರಿಸಲು ಪ್ರೇರಕ ಶಕ್ತಿಯಾಯಿತು.

ಪಂಡಿತ್ ಅವರು ಹೇಳುವಂತೆ "ನಿಸರ್ಗವೇ ಮೊದಲ ಗುರು, ಅದಕ್ಕಾಗಿ ಕಲಾವಿದನಾಗಲೀ, ಸೌಂದರ್ಯಾನ್ವೇಷಕನಾಗಲಿ, ಪ್ರಾಣಿಕೋಟಿಯ ಆಗು-ಹೋಗುಗಳಿಗೆ ಸ್ಪಂದಿಸುವ ಹಾಗೂ ಪ್ರಕೃತಿ ಯೊಂದಿಗೆ ಬೆರೆತು ಕ್ಷಣಕ್ಷಣಕ್ಕೂ ಚಿನ್ನಾಟವಾಡುವ ಸೌಂದರ್ಯ ಚೇತನವನ್ನು ಕಂಡುಕೊಳ್ಳಲು ಕಣ್ಣುಗಳನ್ನು ಪಳಗಿಸಬೇಕಾಗುತ್ತದೆ. ಅದನ್ನೇ ನಾನು ಈ ಅರವತ್ತು ವರ್ಷಗಳಿಂದಲೂ ಸಾಧಿಸಲು ಯತ್ನಿಸುತ್ತಿದ್ದೇನೆ.

ಪಂಡಿತಜೀಯವರ ಈ ಸಾಧನೆಯನ್ನು ಅವರ ದಿವ್ಯ ಕಲಾಕೃತಿಗಳು ಪ್ರತಿಪಾದಿಸುತ್ತವೆ. ಇದನ್ನೇ ಸತ್ಯ ನಿರೂಪಣೆ ಎಂದು ಹೇಳುವುದು. ಕಂಡದ್ದನ್ನು ಕಂಡಂತೆ ಹುಸಿಯ ಮನಸ್ಸುಗಳಿಗೆ ವೇದ್ಯವಾಗುವಂತೆ ಜನತೆಯ ಮುಂದಿಡುವುದೇ ವಾಸ್ತವವಾದದ ಮಹತ್ಸಾಧನೆ ಎಂದು ಹೇಳುವಲ್ಲಿ

ಕಾಳೆಯವರು ವಾಸ್ತವವಾದಕ್ಕೆ ಕೂಡ ಹತ್ತಿರವಾಗುತ್ತಾರೆ. ಇಂತಹ ಪಂಡಿತಜೀಯನ್ನು ಕಲಾ ಪ್ರಪಂಚದ ಸಿದ್ಧಿಪುರುಷ, ಹೊಸ ಸೃಷ್ಟಿಯನ್ನು ನಿರ್ಮಾಣ ಮಾಡಬಲ್ಲ ಆಧುನಿಕ ವಿಶ್ವಾಮಿತ್ರ ಎಂದೆಲ್ಲಾ ಗೌರವಿಸುತ್ತಾರೆ. ಪಂಡಿತ್‌ರವರದು ಪಾಶ್ಚಿಮಾತ್ಯ ಶೈಲಿಯ ವಾಸ್ತವ ಚಿತ್ರಣ ಶೈಲಿ, ಅಲ್ಲದೇ ಪಂಡಿತಜೀಯವರು ಚಿತ್ರಿಸಿದ ಭಾವ ಅಥವಾ ವ್ಯಕ್ತಿ ಚಿತ್ರಗಳನ್ನು ಕಂಡ ವಿದೇಶೀಯವರು "ಎಸ್.ಎಂ. ಪಂಡಿತ್ ಭಾರತದ ರೆಂಬ್ರಾಂಡ್ಟ್" ಎಂದೇ ಗುರುತಿಸುತ್ತಾರೆ.

ಒಂದು ಕಲಾಕೃತಿಯನ್ನು ಪೂರ್ಣಗೊಳಿಸಲು ಅವರು ತೆಗೆದುಕೊಳ್ಳುವ ಸಮಯ ೪ಲ ಗಂಟೆಗಳನ್ನು ಮೀರುವುದಿಲ್ಲವಾದರೂ ಅವರು ಹೇಳುವ "ಅರವತ್ತು ವರ್ಷಗಳ ಸಮಯ ಎಂಬ ಮಾತಿನಲ್ಲಿ ಇರುವ ಅರವತ್ತು ವರ್ಷಗಳ ಸಾಧನೆ ಮತ್ತು ಅನುಭವಗಳು ಗಟ್ಟಿಗೊಂಡಾಗ ಮಾತ್ರ ಒಂದು ಪರಿಪೂರ್ಣ ಕಲಾಕೃತಿಯ ನಿರ್ಮಾಣ ಸಾಧ್ಯ" ಎಂಬ ಮಾರ್ಮಿಕ ಅರ್ಥವನ್ನು ಗ್ರಹಿಸಬಹುದಾಗಿದೆ.

"ಭಾರತದಲ್ಲಿ ಪೋಸ್ಟರ್ ಕಲಾಕೃತಿಗಳನ್ನು ಪ್ರಾರಂಭಿಸಿದ ಪ್ರಪ್ರಥಮ ಕಲಾವಿದ" ಎಂಬ ಶ್ರೇಯಸ್ಸು, ಪೋಸ್ಟರ್ ವರ್ಣಗಳ ಬಳಕೆಯನ್ನು ಮೊಟ್ಟಮೊದಲಿಗೆ ಬೆಳಕಿಗೆ ತಂದ ಯಶಸ್ವಿ ಕಲಾವಿದನೆಂಬ ಪ್ರಶಂಸೆಗೂ ಪಾತ್ರರಾದರು.

ವಾಣಿಜ್ಯೋದ್ದೇಶಗಳಿಗಾಗಿ ಚಿತ್ರಿಸುವ ಕಲಾವಿದನೂ ಪರಿಪೂರ್ಣ ಸೃಜನಾತ್ಮಕ ಕಲಾಕೃತಿಗಳನ್ನು ನಿರ್ಮಿಸಬಲ್ಲ" ಎಂಬುದನ್ನು ಕಂಡುಕೊಳ್ಳಲು ಪಂಡಿತರ ಕಲಾಕೃತಿಗಳನ್ನು ದುರಾಗ್ರಹ ಪೀಡಿತರಾಗಿ ನೋಡುವವರು ಖಂಡಿತವಾಗಿಯೂ ಪಂಡಿತರನ್ನು ಅರ್ಥಮಾಡಿಕೊಳ್ಳಲಾರರು.

ಆಧುನಿಕ ಕಲೆಯ ವಿಚಾರವಾಗಿ ಅವರು "ಭಾಷೆ ಸಾಹಿತ್ಯಗಳಂತೆ ಕಲೆಯೂ ಒಂದು ಅಭಿವ್ಯಕ್ತಿ ಮಾಧ್ಯಮ. ಈ ಮಾಧ್ಯಮಕ್ಕೆ ಪ್ರಾಚೀನ, ಅರ್ವಾಚೀನ, ಆಧುನಿಕ ಎಂದು ಏಕೆ ಕರೆಯುತ್ತಾರೆಂದು ನನಗೆ ಅರ್ಥವಾಗಿಲ್ಲ. ಈ ಅಭಿವ್ಯಕ್ತಿ ಮಾಧ್ಯಮ ಕಾಲಕಾಲಕ್ಕೆ ಬದಲಾವಣೆಯಾಗುತ್ತಲೇ ಬಂದಿದೆ. ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಈ ದಿಶೆಯಲ್ಲಿ ಕಲಾವಿದನು ಸರ್ವತಂತ್ರ ಸ್ವತಂತ್ರ ನಾಗಿರಬೇಕು. ಬಂಧನಗಳ ಚೌಕಟ್ಟಿನಿಂದ ಮುಕ್ತನಾಗಿರಬೇಕು" ಎಂಬ ಅಭಿಪ್ರಾಯ ಹೊಂದಿದವ ರಾಗಿದ್ದಾರೆ ಪಂಡಿತಜೀ ಎಂದು ಹೇಳುವ ಮೂಲಕ ಕಾಳೆಯವರ ವ್ಯಕ್ತಿ ಅಧ್ಯಯನ ಕುರಿತು ಸಮಗ್ರವಾದ ಅವರ ಕಾರ್ಯತತ್ಪರತೆಯನ್ನು ಪರಿಪೂರ್ಣ ಅಧ್ಯಯನವನ್ನು ತೋರಿಸುತ್ತದೆ.

ಹೀಗೆ ಕಲೆಯ ಕುರಿತು ಕಲಾ ಶಿಕ್ಷಣ, ಕಲಾವಿದರ ಕುರಿತು ಓದುಗರಿಗೆ ಸುಲಭವಾಗಿ ಸಂವಹನಗೊಳ್ಳುವಂಥ ಸರಳ ಭಾಷೆಯಲ್ಲಿ ಬರೆದಂತಹ ಕೃತಿಗಳು ಕಾಳೆಯವರಿಂದ ಬರೆಯಲ್ಪಟ್ಟಿದ್ದು ಇವರು ಸಂಪೂರ್ಣ ಪುಸ್ತಕಗಳನ್ನು ಬರೆದಿದ್ದು ಮಾತ್ರವಲ್ಲದೇ ಬೇರೆ ಬೇರೆಯಾದ ಸಂಪಾದನಾ

ಕೃತಿಗಳಲ್ಲಿ ಇವರ ಬರೆದ ಲೇಖನಗಳು ಪ್ರಕಟಿಸಲ್ಪಟ್ಟಿವೆ. ಅವುಗಳನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಕಲಾಕೋಶ

ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಪ್ರಕಟಿತಗೊಂಡ ಈ ಕೃತಿಯು ಕಲಾವಿದ ಪಿ.ಆರ್. ತಿಪ್ಪೇಸ್ವಾಮಿ ಪ್ರಧಾನ ಸಂಪಾದಕರಾಗಿ ಕೆಲಸ ಮಾಡಿದ್ದಾರೆ. ಮತ್ತು ವಿ.ಟಿ.ಕಾಳೆಯವರು, ಡಾ. ಅ.ಲ. ನರಸಿಂಹನ್, ಡಾ. ಬಿ.ಕೆ. ಹಿರೇಮಠ, ಎನ್. ಮರಿಶಾಮಾಚಾರ್ ಅವರ ಜೊತೆಗೂಡಿ ಈ ಕೃತಿಯು ಯಶಸ್ವಿಗೊಳ್ಳಲು ಪ್ರಮುಖ ಪಾತ್ರವಹಿಸಿದ್ದಾರೆ. ಕಾಳೆಯವರು ಅಕಾಡೆಮಿಯ ಸದಸ್ಯರಾಗಿ ಸೇವೆಸಲ್ಲಿಸುತ್ತಿರುವ ಸಂದರ್ಭದಲ್ಲಿ ಮೂಡಿಬಂದ ಈ ಕೃತಿಯ ಮುಂದೆ ಕಾಳೆಯವರು ಅಕಾಡೆಮಿಯ ಅಧ್ಯಕ್ಷರಾದ ಸಂದರ್ಭದಲ್ಲಿ ಎರಡನೆಯ ಬಾರಿ ಪುನಃ ಮುದ್ರಣಗೊಂಡಿರುವುದು ಈ ಕೃತಿಯು ತಂದ ಯಶಸ್ಸನ್ನು ತೋರಿಸುತ್ತದೆ.

ಪಿ.ಆರ್. ತಿಪ್ಪೇಸ್ವಾಮಿ ಅವರು ಹೇಳಿರುವಂತೆ "ಈ ಕೃತಿಯು ಭಾರತೀಯ ಭಾಷೆಗಳಲ್ಲೇ ಇಷ್ಟೊಂದು ದೊಡ್ಡಗಾತ್ರದ ಕಲಾಕೋಶ ಹೊರಬರುತ್ತಿರುವುದು ಇದೇ ಪ್ರಥಮವಾಗಿದೆ". ಅನೇಕ ಕಡೆಗಳಲ್ಲಿ ಚದುರಿ ಹೋಗಿರುವ ವಿಷಯಗಳನ್ನು ಒಂದೆಡೆ ಸಂಗ್ರಹಿಸಿ ನಾಡಿನ ೩೬ ಪ್ರಮುಖ ಕಲಾಬರಹಗಾರರಿಂದ ಲೇಖನಗಳನ್ನು ಸಂಗ್ರಹಿಸಿ ಈ ಕೃತಿಯನ್ನು ರಚಿಸಲಾಗಿದೆ. ಇದರಲ್ಲಿ ೨೫ ಕಿರುರೂಪದ ಲೇಖನಗಳು ಕಾಳೆಯವರಿಂದ ಬರೆಯಲ್ಪಟ್ಟಿವೆ. ಅವುಗಳ ವಿಷಯಗಳು ಹೀಗಿವೆ.

೧. ಅಮೇರಿಕೆಯ ಕಲೆ, ೨. ಈಜಿಪ್ತ್ ಕಲೆ, ೩. ಕಲ್ಪನಾ ಚಿತ್ರಲೇಖನ ೪. ಗ್ರ್ಯಾಷ್ ೫. ಗ್ರೀಸ್ ಪುರಾತನ ೬. ಜಲವರ್ಣ ೭. ನಕ್ಷಾಚಿತ್ರಲೇಖನ ಮತ್ತು ಮಾದರಿ ಚಿತ್ರ ಲೇಖನ, ೮. ಭಿತ್ತಿಚಿತ್ರ ವಿಧಾನ ೯. ಮಧ್ಯಯುಗೀನ ಯುರೋಪ ಪ್ರಾಚೀನ ೧೦. ಮುಕ್ತಹಸ್ತ ಚಿತ್ರಲೇಖನ ೧೧. ರೋಮನ್ ಕಲೆ, ೧೨. ವರ್ಣಗಳು ೧೩. ವಸ್ತುಚಿತ್ರಲೇಖನ, ೧೪ ಶಿಲಾಯುಗ ೧೫. ಸಂಯೋಜನೆ ೧೬. ಸ್ಮರಣ ಚಿತ್ರಲೇಖನ ೧೭. ಸುಮೇರಿಯನ್ ಕಲೆ ಮುಂತಾಗಿ ಕಾಳೆಯವರ ಇಪ್ಪತ್ತೈದು ಲೇಖನಗಳು ಈ ಪುಸ್ತಕದಲ್ಲಿರುತ್ತವೆ.

ಈ ಇಪ್ಪತ್ತೈದು ಪ್ರಮುಖ ಲೇಖನಗಳನ್ನು ಬರೆದುಕೊಟ್ಟು ಕಾಳೆಯವರು ಈ ಕೃತಿ ಸಿದ್ಧವಾಗಲು ಮಹತ್ವದ ಪಾತ್ರ ವಹಿಸಿದ್ದಾರೆಂದು ಹೇಳಬಹುದು.

ಕಲಾವಾರ್ತೆ

ಕಾಳೆಯವರ ಅಧ್ಯಕ್ಷತೆಯ ಅವಧಿಯಲ್ಲಿ ಅನೇಕ ಪುಸ್ತಕಗಳ ಪ್ರಕಟಣೆಗಳ ಜೊತೆಗೆ ಅನೇಕ ದಿನಗಳಿಂದ ನಿಂತು ಹೋಗಿದ್ದ ಕಲಾವಾರ್ತೆ ಎಂಬ ಹೆಸರಿನ ಪತ್ರಿಕೆಯು ಮುಂದುವರಿದಿದ್ದು ಅದರಲ್ಲಿ ಬಂದಂತಹ ಕಾಳೆಯವರ ಕಲೆಯ ಕುರಿತು ಒಂದು ಲೇಖನವನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಕಾಳೆಯವರ "ಅಂತರಿಕ ನೋಟವೇ ಭಾರತೀಯ ಚಿತ್ರಕಲೆಯ ಸತ್ವ" ಎಂಬ ಶೀರ್ಷಿಕೆಯನ್ನೊಳಗೊಂಡ ಮಹತ್ವಪೂರ್ಣ ಲೇಖನ ಇದಾಗಿದೆ. ಅವರ ಅಭಿಪ್ರಾಯದಲ್ಲಿ ವಿಶ್ವದಲ್ಲಿ ಪಾರಂಪರಿಕ ಚಿತ್ರಕಲೆ ತನ್ನ ಸೀಮಿತ ಚೌಕಟ್ಟುಗಳನ್ನು ಕಳಚಿಕೊಂಡು ವ್ಯಾಪಕವಾಗಿ ಬೆಳೆಯುತ್ತಿದ್ದು ಕಲಾವಿದರು ಹೊಸ ಪ್ರಯೋಗ, ತಂತ್ರಜ್ಞಾನ, ಮಾಧ್ಯಮಗಳ ಮೂಲಕ ಗರಿಷ್ಠ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪ್ರಕಟಿಸಿದ್ದಾರೆ. ಆದಾಗ್ಯೂ ಆಧುನಿಕ ಚಿತ್ರಕಲೆ ಮೂಲ ಭಾರತೀಯ ಅಂತಃ ಸತ್ವವಿಲ್ಲದೆ ಸೊರಗುತ್ತಿದೆ. ಎಂಬ ಮಹತ್ವಪೂರ್ಣ ವಿಚಾರದೊಂದಿಗೆ ಮುಂದುವರಿದು, ಸೌಂದರ್ಯ ಮೂಲದ ಭಾರತೀಯ ಚಿತ್ರಕಲೆ ಅಂತರಿಕ ಸೌಂದರ್ಯ, ಆನಂದಾನುಭೂತಿಗಳನ್ನು ಬಿಂಬಿಸಲು ಆದ್ಯತೆ ನೀಡಿದರೆ, ಬಾಹ್ಯ ರೂಪವನ್ನಷ್ಟೇ ಬಿಂಬಿಸುವ ಪಾಶ್ಚಿಮಾತ್ಯ ಶೈಲಿಗೆ ನೈಜಕಲೆ ಆಧ್ಯತೆ ನೀಡುತ್ತದೆ. ಚಿತ್ರಕಲಾವಿದರಿಂದ ಪಾಶ್ಚಿಮಾತ್ಯ ಶೈಲಿಗೆ ಮಾರು ಹೋಗುತ್ತಿದ್ದು, ಭಾರತೀಯ ದೇಶಿ ಸತ್ವಗಳನ್ನು ಉಳಿಸಿಕೊಂಡಲ್ಲಿ ಸಾಮಾಜಿಕ ಉಪಯುಕ್ತ ಮೌಲ್ಯಯುತ ಕಲೆಯಾಗುತ್ತದೆ ಎಂಬ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ.

ನಿಜದ ನೆಲೆ

(ಡಾ. ಬಿ.ಕೆ. ಹಿರೇಮಠರ ಅಭಿನಂದನಾ ಗ್ರಂಥ)

ಸಂ: ಡಾ. ಎಸ್.ಸಿ. ಪಾಟೀಲ

ಇದು ಒಂದು ಅಭಿನಂದನಾ ಗ್ರಂಥವಾಗಿದ್ದು, ಕಾಳೆಯವರು ಡಾ. ಬಿ.ಕೆ. ಹಿರೇಮಠರ ಕಲಾಗುರು. ಈ ಗ್ರಂಥದಲ್ಲಿ ಕಾಳೆಯವರು ಎರಡು ಲೇಖನಗಳನ್ನು ಬರೆದಿದ್ದು ಒಂದು, ಶಿಷ್ಯನ ಮೇಲಿನ ಪ್ರೀತಿ, ಮಮಕಾರದಿಂದ ಬಿ.ಕೆ. ಹಿರೇಮಠರ ಕುರಿತು ಒಂದಾದರೆ, ರೇಖಾಚಿತ್ರದ ಕುರಿತು ಒಂದು ಮಹತ್ವಪೂರ್ಣವಾದ ಲೇಖನವಿದೆ.

ಈ ಗ್ರಂಥದಲ್ಲಿ ಕಾಳೆಯವರು ರೇಖಾಚಿತ್ರದ ಕುರಿತು ಕೆಲವು ಮಹತ್ವಪೂರ್ಣವಾದ ವಿಚಾರಗಳನ್ನು ಓದುಗರಿಗೆ ತಿಳಿಯಪಡಿಸಿದ್ದು, ಈ ಬರವಣಿಗೆಯ ಸರಳವಾಗಿದ್ದು, ಓದಿಸಿಕೊಂಡು ಹೋಗುವಂತಹ ಗುಣವನ್ನು ಹೊಂದಿದೆ. ಈ ಮಾತನ್ನು ಪುಷ್ಟೀಕರಿಸುವಂತಹ ಪ್ರಮುಖ ಅಂಶಗಳನ್ನು ಟಿಪ್ಪಣಿಯ ಮುಖಾಂತರ ವಿಶ್ಲೇಷಿಸಲಾಗಿದೆ. ಕಾಳೆಯವರು ರೇಖಾಚಿತ್ರಗಳ ಕುರಿತು ಗಮನಿಸುವಂತಹ ಅಬಿಪ್ರಾಯವನ್ನು ಹೊಂದಿದ್ದಾರೆ, ಅದು, ನಾವು ರೇಖಾಚಿತ್ರವನ್ನು ಎಷ್ಟು ತ್ವರಿತಗತಿಯಲ್ಲಿ ಮಾಡುತ್ತೇವೊ ಅಷ್ಟು ಪರಿಪೂರ್ಣತೆ ನಮ್ಮ ಕೈಗೆ ಬರುತ್ತದೆ. ನಾವು ಹೇಳಿದ ಹಾಗೆ ನಮ್ಮ ಕೈಗಳು ಕೇಳುತ್ತವೆ. ಯಾವುದೇ ಪ್ರಕಾರದ ಕಲೆಗೂ ರೇಖಾಚಿತ್ರವೇ ಮೂಲಾಧಾರ. ನಾನಾ ವಿಧದ ವಸ್ತುಗಳು ಹಲವು ಭಂಗಿಗಳಲ್ಲಿರುವ ಜನರನ್ನು ನೋಡಿ ರೇಖಾಚಿತ್ರಗಳನ್ನು

ಬಿಡಿಸುವುದರಲ್ಲಿಯೂ ಕೂಡ ಆಳವಾದ ಅಧ್ಯಯನವಿರುತ್ತದೆ. ರೇಖೆಗಳು ಚಿತ್ರಕಲೆಯ ಮೂಲಭೂತ ಬುನಾದಿ. ಈ ರೇಖೆಗಳ ಬುನಾದಿಯ ಮೇಲೆಯೇ ಕಲಾವಿದನು ತನ್ನ ಕಲಾಕೃತಿಯ ಕಟ್ಟಡವನ್ನು ನಿರ್ಮಿಸುತ್ತಾನೆ. ತೀವ್ರಗತಿಯಲ್ಲಿ ರಚಿಸಿರುವ ರೇಖಾ ಕರಡು ಚಿತ್ರಗಳು ಕಲಾವಿದ ನೊಬ್ಬನ ಸಾಮರ್ಥ್ಯದ ದ್ಯೋತಕವೂ ಆಗಿರುತ್ತದೆ. ಒಂದು ರೇಖಾಚಿತ್ರದಿಂದ ಒಬ್ಬ ಕಲಾವಿದನ ನಿಜವಾದ ಯೋಗ್ಯತೆ ಗೊತ್ತಾಗುತ್ತದೆ. ಅವರ ಕಂಪೋಜಿಶನ್ ನೋಡುವ ಅಗತ್ಯವಿಲ್ಲ. ಅವರ ಒಂದು ರೇಖಾಚಿತ್ರ ನೋಡಿದರೆ ಸಾಕು. ಇವರು ಇದೇ ಸ್ಟಾಂಡರ್ಡ್ ಕಲಾವಿದರು ಅಂತ ಹೇಳಬಹುದು. ಭಾರತೀಯ ಚಿತ್ರಕಲಾ ಸಂದರ್ಭದಲ್ಲಿ ವರ್ಣಚಿತ್ರ ಬೇರೆ, ರೇಖಾಚಿತ್ರ ಬೇರೆ ಎಂದು ವಿಂಗಡಿಸಲು ಸಾಧ್ಯವಿಲ್ಲದಂತಹ ಅವಿನಾಭಾವ ಸಂಬಂಧವಿರುತ್ತದೆ. ಕೆಲವು ಕಲಾವಿದರು ತಮ್ಮ ಪ್ರತಿಭಾ ಪೂರ್ಣ ಕಲಾಕೃತಿಗಳನ್ನು ರೇಖಾಚಿತ್ರಗಳಿಂದಲೇ ರಚಿಸಿ ಚಿತ್ರಕಲಾ ಕ್ಷೇತ್ರದಲ್ಲಿ ಗಣ್ಯರೆನಿಸಿರುವುದನ್ನು ಕಾಣುತ್ತೇವೆ. ಎಂಬಿತ್ಯಾದಿ ರೇಖಾಚಿತ್ರದ ಕುರಿತು ಪ್ರಮುಖ ಅಂಶವನ್ನು ಕಾಳೆಯವರ ಬರವಣಿಗೆಯ ರೂಪದಲ್ಲಿ ಕಾಣಬಹುದು.

ಸಂಡೂರು ಪ್ರತಿಧ್ವನಿ

(ಅನುವಾದ ಕೃತಿ)

ಇಂಗ್ಲಿಷ್ ಮೂಲ: ಎಂ.ವೈ. ಘೋರ್ಪಡೆ

ಅನು: ವಿ.ಟಿ. ಕಾಳೆ

ಇದು ಇಂಗ್ಲಿಷ್ ಮೂಲದ ಅನುವಾದ ಕೃತಿ. ಮೂಲ ಲೇಖಕರು ಎಂ.ವೈ. ಘೋರ್ಪಡೆ ಯವರು ಇದನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ತರ್ಜುಮೆ ಮಾಡಿದವರು ವಿ.ಟಿ. ಕಾಳೆಯವರು. ಈ ಗ್ರಂಥವು ಹದಿಮೂರು ಲೇಖನಗಳನ್ನು ಹೊಂದಿದ್ದು, ದೇಶದ ಹದಿಮೂರು ಮಹನೀಯರ ವ್ಯಕ್ತಿ ಪರಿಚಯವಾಗಿದೆ. ಎಂ.ವೈ. ಘೋರ್ಪಡೆಯವರು ಹೇಳುವಂತೆ ಇದು ನಮ್ಮ ದೇಶದ ಸಂಕೀರ್ಣ ಸಂಸ್ಕೃತಿಯ ಬೆಳವಣಿಗೆಗೆ ಅಪಾರವಾದ ಕೊಡುಗೆಯನ್ನು ನೀಡಿದ ಭಾರತದ ಪ್ರಾಚೀನ, ಮಧ್ಯ ಕಾಲೀನ ಹಾಗೂ ಆಧುನಿಕ ಕಾಲದ ಮಹಿಮಾನ್ವಿತ ವ್ಯಕ್ತಿಗಳನ್ನು ಸಾಧ್ಯವಾದ ಮಟ್ಟಿಗೆ ಸರಳವಾಗಿ ಪರಿಚಯಿಸುವ ಒಂದು ಆಶಯವಾಗಿದೆ. ಈ ಲೇಖನಗಳು ಸಂಡೂರು ಪ್ರತಿಧ್ವನಿ ಎಂಬ ನಮ್ಮ ಶಾಲಾ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿವೆ. ಒಬ್ಬ ಸೃಜನಶೀಲ ಕಲಾವಿದರೂ ಕನ್ನಡವನ್ನು ಬಲ್ಲವರೂ ಆಗಿ ನಮ್ಮ ಶಾಲೆಯೊಂದಿಗೆ ಕಳೆದ ಅನೇಕ ವರ್ಷಗಳಿಂದ ತೀರ ಹತ್ತಿರದ ಸಂಬಂಧವನ್ನು ಹೊಂದಿದ ಶ್ರೀ ವಿ.ಟಿ. ಕಾಳೆ ಅವರಿಂದ ಈಗ ಈ ಲೇಖನಗಳು ಕನ್ನಡಕ್ಕೆ ಅನುವಾದ ಗೊಂಡಿರುತ್ತವೆ. ಇವರು ಹೇಳಿದಂತೆ ಇಲ್ಲಿ ಬರವಣಿಗೆಯ ಭಾಷೆಯು ಸರಳವಾಗಿದ್ದು ಮಹನೀಯರ ಜೀವನವನ್ನು ಸರಳವಾಗಿ ತಿಳಿದುಕೊಳ್ಳಲು ಅನುಕೂಲವಾಗುವಂತೆ ಬರವಣಿಗೆಯಿದೆ.

೨. ನಾಟಕಕಾರರಾಗಿ ವಿ.ಟಿ. ಕಾಳೆಯವರು

ಪಂಡಿತ ಪಾಮರರನ್ನೂ ಒಂದೇ ಸಮಯದಲ್ಲಿ ನಾಟಕ ತಟ್ಟುತ್ತದೆ. ಇದಕ್ಕಿರುವ ರಂಜನಾ ಸಾಮರ್ಥ್ಯವು ಇದನ್ನು ವಿಶಿಷ್ಟ ಕಲೆಯಾಗಿಸಿದೆ. ಇದು ದೃಶ್ಯದಲ್ಲಿ ಶ್ರಾವ್ಯವೂ ಆದ ಕಲೆಯಾಗಿದೆ.[೧೦] ನಾಟಕ ಕಲೆಯೆಂಬುವುದು ಲಲಿತಕಲೆಗಳಲ್ಲಿ ಬರುವ ಒಂದು ಪ್ರಮುಖ ಕಲೆಯಾಗಿದೆ. ನೋಡುಗರಲ್ಲಿ ಅದ್ಭುತ ಪರಿಣಾಮವನ್ನುಂಟು ಮಾಡುವ ಶಕ್ತಿ ಈ ನಾಟಕ ಕಲೆಗಿದೆ.

ಕನ್ನಡ ರಂಗಭೂಮಿಗೆ ಕನ್ನಡ ನಾಟಕ ಕೃತಿಗಳಿಗೆ ಸಾವಿರಾರು ವರ್ಷಗಳ ವರ್ಣಮಯ ಇತಿಹಾಸವಿದೆ. ವಿಮರ್ಶಕರು ಹಾಗೂ ಸಂಶೋಧಕರು ಗುರುತಿಸಿದಂತೆ ೧೭ನೇ ಶತಮಾನದ ಮೈಸೂರು ಅರಮನೆಯ ಆಸ್ಥಾನ ಕವಿಯಾದ ಸಿಂಗರಾರ್ಯನು ಬರೆದ 'ಮಿತ್ರವಿಂದ ಗೋವಿಂದ' ನಾಟಕವೇ ಕನ್ನಡದ ಮೊದಲ ನಾಟಕವಾಗಿದೆ.[೧೧]

ನಾಟಕವೊಂದನ್ನೇ ತನ್ನ ಎಲ್ಲ ಸೃಜನಶೀಲ ಮತ್ತು ಕ್ರಿಯಾಶೀಲ ಅಭಿವ್ಯಕ್ತಿಯ ಪ್ರಮುಖ ಮಾಧ್ಯಮವನ್ನಾಗಿಸಿಕೊಂಡ ಲೇಖಕ ಕನ್ನಡ ಸಾಹಿತ್ಯದಲ್ಲಿ ಜನ್ಮ ತಳೆದದ್ದು ಇಪ್ಪತ್ತನೆಯ ಶತಮಾನದಲ್ಲಿ ಮಾತ್ರ. ನವೋದಯದ ಬಹುತೇಕ ಕವಿಗಳು ನಾಟಕವನ್ನು ಬರೆದಿದ್ದಾರೆ. ನವ್ಯದ ಸಮಯದಲ್ಲಿ ನಾಟಕ ಮತ್ತು ರಂಗಭೂಮಿಗಳಿಗೆ ಹೊಸ ಕವಲುಗಳು ಹುಟ್ಟಿದವು. ಒಟ್ಟಾರೆ ಆಧುನಿಕ ಕನ್ನಡ ನಾಟಕಕ್ಕೆ ಒಂದು ಶತಮಾನದ ಪ್ರಾಚೀನತೆಯಿದೆ ಎಂದು ಹೇಳಬಹುದು.[೧೨]

ನಾಡಿನ ಅನೇಕ ಪ್ರಸಿದ್ಧ ಲೇಖಕರು ನಾಟಕಗಳನ್ನು ರಚಿಸಿದ್ದಾರೆ. ಇದು ಸಹಜ. ಆದರೆ ಒಬ್ಬ ಚಿತ್ರಕಲಾವಿದ ನಾಟಕಗಳನ್ನು ರಚನೆ ಮಾಡಿರುವುದು ಈ ಕ್ಷೇತ್ರದಲ್ಲಿ ತುಂಬಾನೇ ವಿರಳ. ಈ ವಿರಳರ ಸಾಲಿನಲ್ಲಿ ಪ್ರಮುಖವಾಗಿ ಕಂಡುಬರುವ ಹೆಸರು ವಿ.ಟಿ. ಕಾಳೆಯವರದು.

ಕಾಳೆಯವರು ಚಿತ್ರಕಲಾ ಕ್ಷೇತ್ರದಲ್ಲಿ ಸಾಧನೆ ಮಾಡಿದಂತೆ ನಾಟಕ ಕ್ಷೇತ್ರದಲ್ಲೂ ಅಪಾರ ಸಾಧನೆಯನ್ನು ಮಾಡಿ ತಮ್ಮದೇ ಆದ ಕಾಣಿಕೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಇಪ್ಪತ್ತಕ್ಕೂ ಹೆಚ್ಚು ಐತಿಹಾಸಿಕ, ಪೌರಾಣಿಕ, ಸಾಮಾಜಿಕ ಹಾಗೂ ನೃತ್ಯ ನಾಟಕಗಳನ್ನು, ಬಯಲಾಟಗಳನ್ನು ರಚಿಸಿದ್ದಾರೆ. ಇವರು ರಚಿಸಿ, ನಿರ್ದೇಶಿಸಿದ ವಿಜಯನಗರದ ರಾಜ ಪ್ರೌಢದೇವರಾಯನ ಬಗೆಗಿನ ಬಯಲಾಟವೊಂದು ೧೯೮೯ರಲ್ಲಿ ದೆಹಲಿಯಲ್ಲಿ ನಡೆಸಿ ಅಖಿಲ ಭಾರತ ಪಬ್ಲಿಕ್ ಶಾಲೆಗಳ ಸುವರ್ಣ ಮಹೋತ್ಸವ ಸಮ್ಮೇಳನದಲ್ಲಿ ಪ್ರದರ್ಶಿಸಲ್ಪಟ್ಟಿತು. ಹೀಗೆ ನಾಟಕ ಸಾಹಿತ್ಯಕ್ಕೆ ಅಪಾರ

---

೧೦. ಡಾ. ಪಿ. ಡೋಣೂರ, ಕನ್ನಡ ನಾಟಕ ಮತ್ತು ವಾಸ್ತವತೆ, (ಅಪ್ರಕಟಿತ ಸಂಶೋಧನಾ ಮಹಾಪ್ರಬಂಧ) ಪು.೪೫

೧೧. ಅದೇ ಪು. ೮೪

೧೨. ಅದೇ ಪು. ೪೯



ನಾಟಕದ ದೃಶ್ಯವೊಂದರಲ್ಲಿ ಶ್ರೀಕಂಠಶಾಸ್ತ್ರಿಗಳ ಪಾತ್ರದಾರಿಗಳಾದ ಕಾಳೆಯವರು
(ಕುಳಿತವರಲ್ಲಿ ಬಲಗಡೆಯಿಂದ ಮೊದಲಿನವರು)



ಪ್ರಸಾಧನ ಕಲಾವಿದರಾಗಿ ಕಾಳೆಯವರು

ಸೇವೆ ಸಲ್ಲಿಸಿದ್ದಾರೆ, ಅಲ್ಲದೇ ನಟರಾಗಿ, ನಾಟಕ ನಿರ್ದೇಶಕರಾಗಿ, ರಂಗಭೂಮಿಯ ಪ್ರಸಾಧನ ಕಲೆಯ ಕಲಾವಿದರಾಗಿ ಸಲ್ಲಿಸಿದ ಸೇವೆ ಅಪಾರವಾಗಿದೆ.

ಕಾಳೆಯವರು ನಾಟಕ ಕ್ಷೇತ್ರದಲ್ಲಿ ಪ್ರಸಿದ್ಧವಾದ ಗುಬ್ಬಿ ಕಂಪನಿ, ಪಂಚಾಕ್ಷರಿ ಗವಾಯಿಗಳ ಕಂಪನಿ, ಮೃಡದೇವ ಗವಾಯಿಗಳ ಕಂಪನಿ ಹಾಗೂ ನ್ಯಾಮತಿ ಶಾಂತಪ್ಪನವರ ಕಂಪನಿಗಳಲ್ಲಿ ಎರಡು ವರ್ಷಗಳ ಅನುಭವವನ್ನು ಸಹ ಪಡೆದು ಬಂದಿದ್ದಾರೆ. ಕಾಳೆಯವರ ಈ ಎಲ್ಲ ರಂಗ ಚಟುವಟಿಕೆಗಳು ಗದಗಿನ ವಿಜಯ ನಾಟ್ಯ ಸಂಘ ಮತ್ತು ಸಂಡೂರಿನ ವಸತಿ ಶಾಲೆಯ ರಂಗಭೂಮಿಗೆ ಸೀಮಿತವಾಗಿವೆ. ರಂಗಭೂಮಿಯೊಂದಿಗಿನ ಇವರ ಒಡನಾಟದ ಕುರಿತು ವಿಶೇಷವಾಗಿ ಅಧ್ಯಯನ ಮಾಡುವಷ್ಟು ವಿಷಯದ ಬಾಹುಳ್ಯವಿದೆ.[೧೩] ಎಂದು ಡಾ. ಎಸ್.ಸಿ.ಪಾಟೀಲ ಅವರು ಅಭಿಪ್ರಾಯ ಪಡುತ್ತಾರೆ.

ಈ ಅಧ್ಯಯನವು ಕಾಳೆಯವರ ಚಿತ್ರಕಲೆಯನ್ನು ಕುರಿತು ಮುಖ್ಯವಾಗಿ ಕೇಂದ್ರಿಕೃತವಾಗಿದ್ದು, ಅವರ ನಾಟಕ ಕ್ಷೇತ್ರದಲ್ಲಿನ ಸಾಧನೆಯನ್ನು ಸ್ಥೂಲವಾದ ನೋಟದಲ್ಲಿ ಅಧ್ಯಯನ ಮಾಡಲಾಗಿದೆ.

ನಾಟಕದಲ್ಲಿ ಅಭಿನಯಿಸುವುದು, ರಂಗಭೂಮಿಯನ್ನು ಸಜ್ಜುಗೊಳಿಸುವುದು, ನಿರ್ದೇಶನ ಮಾಡುವುದು ಮತ್ತು ನಾಟಕಗಳನ್ನು ಬರೆಯುವುದು ಈ ಕ್ಷೇತ್ರದ ವ್ಯಾಪ್ತಿಗೆ ಸೇರುತ್ತವೆ. ಈ ಎಲ್ಲಾ ಪ್ರಕಾರಗಳನ್ನು ಕಾಳೆಯವರು ಬಲ್ಲರು. ಅವರು ಉತ್ತಮ ನಟರು, ನಿರ್ದೇಶಕರು, ನಾಟಕ ಸಾಹಿತ್ಯ ರಚನಾಕಾರರು ಮತ್ತು ಪ್ರಸಾಧನ ಕಲಾವಿದರು ಕೂಡಾ ಹೌದು. ಹೀಗೆ ಎಲ್ಲಾ ಪ್ರಕಾರ ಗಳನ್ನೂ ಅವರು ಸಾಧನೆಯನ್ನು ಮಾಡಿ ಯಶಸ್ವಿಗೊಂಡಿದ್ದು ಅವರೊಬ್ಬ ಶ್ರೇಷ್ಠ ನಾಟಕಕಾರರು ಎಂದು ಗುರುತಿಸಬಹುದು. ಕಾಳೆಯವರ ಒಟ್ಟು ಈ ನಾಟಕ ಕ್ಷೇತ್ರದ ಸಾಧನೆಯನ್ನು ಕುರಿತಾಗಿಯೇ ವಿಶೇಷವಾದ, ಆಳವಾದ ಅಧ್ಯಯನದ ಅವಶ್ಯಕತೆಯನ್ನು ಮನಗಾಣಬಹುದಾಗಿದೆ.

ಕಾಳೆಯವರಿಗೆ ಬಾಲ್ಯದಿಂದಲೂ ನಾಟಕದ ಕುರಿತು ಅಭಿರುಚಿಯಿರುವುದು ಕಂಡು ಬರುತ್ತದೆ. ಅವರು ಬಾಲ್ಯದಿಂದಲೇ ನಾಟಕದ ಕುರಿತು ಆಸಕ್ತಿ ಬೆಳೆಸಿಕೊಳ್ಳಲು ಕಾರಣವಾದ ಘಟನೆಗಳನ್ನು ಈ ರೀತಿಯಾಗಿ ಹೇಳಿದ್ದಾರೆ. "ನಾನು ಬಾಲಕನಾಗಿದ್ದಾಗ ಚಿತ್ರಬಿಡಿಸುವುದಕ್ಕಿಂತಲೂ ನಾಟಕ ಆಡುವುದರಲ್ಲಿ ಹೆಚ್ಚಿನ ಆಸಕ್ತಿ ತೋರಿಸುತ್ತಿದ್ದೆ. ಬಾಲ್ಯದಲ್ಲಿ ಓಣಿ ಹುಡುಗರೊಂದಿಗೆ ಕೂಡಿ ಯಾವುದಾದರೂ ಪಾಳುಬಿದ್ದ ಮನೆಯಲ್ಲಿ ನಮ್ಮ 'ನಾಟಕ ಎಂಬ ಆಟ' ಸಾಗುತ್ತಿತ್ತು. ನಾಟಕವನ್ನು ಆಟದ ತರಹ ಆಡುತ್ತಿದ್ದೀವಿ. ಮತ್ತು ಹುನಗುಂದದಲ್ಲಿ ನಾನು ಬಾಲಕನಾಗಿದ್ದಾಗ ಹಂದಿಗನೂರು ಸಿದ್ಧರಾಮಪ್ಪನವರು ಎಂಬುವವರ ನಾಟಕ ಕಂಪನಿಯು ಬೀಡು ಬಿಟ್ಟಿತು. ಅದರಲ್ಲಿ ನಮ್ಮಣ್ಣನ

---

೧೩. ಡಾ. ಎಸ್.ಸಿ. ಪಾಟೀಲ, ವಿ.ಟಿ. ಕಾಳೆ, ಪು. ೨೦

ಸ್ನೇಹಿತರೊಬ್ಬರು ಆ ಕಂಪನಿಯಲ್ಲಿ ನಟನೆ ಮಾಡುತ್ತಿದ್ದರು. ಇದನ್ನೆಲ್ಲಾ ಹತ್ತಿರದಿಂದ ನೋಡುತ್ತಿದ್ದ ನನ್ನ ಕುತೂಹಲದ ಕಣ್ಣು ಮುಂದೆ ನಾನು ನಾಟಕದ ಆಸಕ್ತಿ ಬೆಳೆಸಿಕೊಳ್ಳಲು ಪ್ರಮುಖ ಕಾರಣ ವಾಯಿತು. ಅಲ್ಲದೇ ಶಾಲೆಯಲ್ಲಿ ಯಾವುದೇ ಕಾರ್ಯಕ್ರಮವಿದ್ದರೂ ಅದರಲ್ಲಿ ನಾನು ಭಾಗಿಯಾಗು ತ್ತಿದ್ದೆ. ಯಾವುದೇ ಡ್ರಾಮಗಳಲ್ಲಿ ನನ್ನದು ಒಂದು ಪಾತ್ರ ಇದ್ದೇ ಇರುತ್ತಿತ್ತು. ನಾನು ಬಿಟ್ಟರೂ ನಮ್ಮ ಗುರುಗಳು ನನ್ನನ್ನು ಆ ಡ್ರಾಮಗಳಲ್ಲಿ ಒಂದು ಪಾತ್ರ ಕೊಟ್ಟೇ ಕೊಡುತ್ತಿದ್ದರು, ಬಿಡುತ್ತಿರ ಲಿಲ್ಲ. ಇದೇ ನಾನು ನಾಟಕ ಕ್ಷೇತ್ರದಲ್ಲಿ ಆಸಕ್ತಿ ತೋರಿಸಲು ಮೊದಲ ಹೆಜ್ಜೆ ಎನ್ನಬಹುದು"[೧೪] ಎಂದು ಹೇಳುವ ಕಾಳೆಯವರು ಬಾಲ್ಯದಲ್ಲಿಯೇ ತಮ್ಮಲ್ಲಿ ಅಡಗಿರುವ ಅಭಿನಯ ಚಾತುರ್ಯವನ್ನು ಪ್ರದರ್ಶಿಸಿರುವುದು ಕಂಡುಬರುತ್ತದೆ.

ನಂತರ ಕಾಳೆಯವರು ಗದಗಿನ ವಿಜಯ ಕಲಾ ಮಂದಿರದಲ್ಲಿ ಚಿತ್ರಕಲೆಯನ್ನು ಕಲಿಯುವುದರ ಜೊತೆಗೆ ನಾಟಕದ ಬಗ್ಗೆಯೂ ಅಭಿರುಚಿಯನ್ನು ತೋರಿಸುತ್ತಾರೆ.

ಗದಗಿನ ವಿಜಯ ಕಲಾಮಂದಿರವು ಸಂಗೀತ, ನೃತ್ಯ, ಶಿಲ್ಪ, ಚಿತ್ರಕಲೆ ಹಾಗೂ ನಾಟಕ ಕಲೆಗಳಂತಹ ಎಲ್ಲ ಲಲಿತಕಲೆಗಳನ್ನು ಒಂದೇ ಕಡೆಗೆ ಕಲಿಸುವಂತಹ ವ್ಯವಸ್ಥೆಯುಳ್ಳ ಸಂಸ್ಥೆ. ಹೀಗೆ ವಿಜಯಕಲಾ ಮಂದಿರವೆಂದರೆ ಅದೊಂದು ಲಲಿತಕಲೆಗಳ ಮಿನಿ ವಿಶ್ವವಿದ್ಯಾಲಯ ಎಂಬ ಮಾತು ಪ್ರಚಲಿತ. ಇಂತಹ ಒಂದು ಸಂಸ್ಥೆಯಲ್ಲಿ ಕಾಳೆಯವರ ಕಲಾ ಶಿಕ್ಷಣ ಜರುಗಿದ್ದು ಅವರು ಮುಂದೆ ನಾಟಕಕಾರರಾಗಲು ಒಳ್ಳೆಯ ವೇದಿಕೆ ಸಿಕ್ಕಂತೆ ಆಯಿತು. ದಿವಂಗತ ಟಿ.ಪಿ. ಅಕ್ಕಿಯವರಿಂದ ನಿರ್ಮಿಸಲ್ಪಟ್ಟ ಈ ಸಂಸ್ಥೆ ಅವರು ಚಿತ್ರಕಲೆಯನ್ನು ಬೆಳೆಸುವುದರೊಂದಿಗೆ ನಾಡಿನ ಭವ್ಯ ಸಂಸ್ಕೃತಿಯ ಪ್ರತೀಕವಾದ ನೃತ್ಯ, ನಾಟಕ, ಸಂಗೀತದಂತಹ ಅಮೂಲ್ಯ ಕಲೆಗಳ ಬಗೆಗೂ ಪಾಠ ಗಳನ್ನು ಪ್ರಾರಂಭಿಸಿ ಅದನ್ನು ಬೆಳೆಸಿಕೊಂಡು ಬಂದರು. ಇಂತಹ ಒಂದು ಶಾಲೆಯಲ್ಲಿ ಕಾಳೆಯವರ ಶಿಕ್ಷಣ ಜರುಗಿದ್ದು ಒಂದು ಯೋಗಾಯೋಗ. ಅವರ ಬಹುಮುಖ ಪ್ರತಿಭೆ ಬೆಳೆಯಲು ಇದು ಒಂದು ಪ್ರಮುಖವಾದ ವೇದಿಕೆಯಾಗಿತ್ತು.

ಕಾಳೆಯವರ ಬಾಲ್ಯ ಸ್ನೇಹಿತ ಎಲ್.ಜಿ. ಹಂದಿಗೋಳ ಅವರು ಹೇಳುವಂತೆ "ಕಾಳೆಯವರು ವಿದ್ಯಾರ್ಥಿ ದೆಸೆಯಲ್ಲಿ ನಾಟಕಗಳನ್ನು ಬರೆಯುತ್ತಿದ್ದರು. ನಾಟಕದಲ್ಲಿ ಪಾತ್ರವಹಿಸುತ್ತಿದ್ದರು. ಅವರು ಬರೆದು ನಿರ್ದೇಶನ ಮಾಡುವ ನಾಟಕದಲ್ಲಿ ನಾನು ಪಾತ್ರಧಾರಿಯಾಗಿ ಕೆಲಸ ಮಾಡಿದ್ದೇನೆ. ಶಾಲೆಯಲ್ಲಿದ್ದಾಗ ಓದು ಬರಹದ ವಿಷಯದಲ್ಲಿ ಅವರು ಸಾಮಾನ್ಯರು. ಆದರೆ ಚಿತ್ರಕಲೆ ಮತ್ತು ನಾಟಕದ ಕಡೆ ಅವರು ಒಲವು ಹೆಚ್ಚು" ಎಂದು ಹೇಳುತ್ತಾ ಮುಂದುವರಿದು ಅವರು

---

೧೪. ಕಲಾವಿದ ವಿ.ಟಿ. ಕಾಳೆಯವರೊಂದಿಗಿನ ಸಂದರ್ಶನ, ದಿನಾಂಕ ೨೬.೭.೨೦೦೯

ಹೇಳುವುದೇನೆಂದರೆ, "ನಮ್ಮ ವಿಜಯ ಕಲಾ ಮಂದಿರದ ಪಕ್ಕದಲ್ಲಿಯೇ ಗದುಗಿನ ತೋಂಟದಾರ್ಯ ಮಠದ ಒಂದು ಊಟದ ಪ್ರಸಾದ ನಿಲಯವಿತ್ತು. ಮೊದಲು ಅಲ್ಲಿ ಬಡ ವಿದ್ಯಾರ್ಥಿಗಳಿಗೆ ಊಟ ಕೊಡುತ್ತಿದ್ದರು. ನಂತರ ಅದು ನಿಂತಿತ್ತು. ಹೀಗಾಗಿ ಅದು ಖಾಲಿ ಉಳಿಯಿತ್ತು. ಟಿ.ಪಿ. ಅಕ್ಕಿ ಗುರುಗಳು ಆ ಹಾಲ್‌ನ್ನು ವಿದ್ಯಾರ್ಥಿಗಳ ಕಲಾ ಚಟುವಟಿಕೆಗಳಿಗಾಗಿ ಬಳಿಸಿಕೊಳ್ಳುವ ಉದ್ದೇಶದಿಂದ ಅದನ್ನು ತಮ್ಮ ಕಲಾ ಮಂದಿರಕ್ಕೆ ಸೇರಿಸಿಕೊಂಡರು. ನಂತರ ಆ ಹಾಲ್‌ನಲ್ಲಿ ನಾಟಕ ಕಲೆಯನ್ನು ಬೆಳೆಸುವ ಉದ್ದೇಶದಿಂದ ಅಲ್ಲಿ ಒಂದು ಸ್ಟೇಜ್‌ನ್ನು ರೆಡಿ ಮಾಡಲಾಯಿತು. ಅದಕ್ಕೆ ಬೇಕಾದ ಎಲ್ಲಾ ವ್ಯವಸ್ಥೆ ಎಂದರೆ ನಾಟಕ ಪರದೆ ಬರೆಯುವುದು, ವೇದಿಕೆಯನ್ನು ಸಜ್ಜುಗೊಳಿಸುವುದು. ಎಲ್ಲಾ ವ್ಯವಸ್ಥೆಯನ್ನು ಕಾಳೆಯವರೇ ಮುಂದೆ ನಿಂತು ಮಾಡಿದರು. ಇವತ್ತಿಗೂ ಕೂಡಾ ಆ ಸ್ಟೇಜ್ ಅಲ್ಲಿ ಕಾಣಬಹುದು. ಮುಂದೆ ಕಾಳೆಯವರು ತಮ್ಮ ಕಲಾ ಶಿಕ್ಷಣ ಪೂರೈಸಿದ ನಂತರ ಗುಬ್ಬಿ ವೀರಣ್ಣ ಕಂಪನಿಯಲ್ಲಿ ಸೇರಿಕೊಂಡು ಅಲ್ಲಿ ಕೂಡ ಕೆಲಸ ಮಾಡಿದ್ದರು. ಅಲ್ಲಿ ನಾಟಕ ಪರದೇ ರಚಿಸುವುದರಿಂದ ಹಿಡಿದು, ಸ್ಟೇಜ ಡೆಕೋರೇಶನ್ ಆಗಿಯೂ ಕೆಲಸ ಮಾಡಿದ್ದಾರೆ. ಗುಬ್ಬಿ ವೀರಣ್ಣನವರು ಏನೇ ಕೆಲಸ ಹೇಳಿದರೂ ಕಾಳೆಯವರು ಶ್ರದ್ಧೆಯಿಂದ ಮಾಡಿದ್ದು, ಆ ಜೀವನವನ್ನು ಕೂಡಾ ಕಾಳೆಯವರು ಕಳದಿದ್ದಾರೆ ಎಂದು ಹೇಳುವಲ್ಲಿ ತಮ್ಮ ಸ್ನೇಹಿತನ ಕುರಿತು ಹೆಮ್ಮೆಯ ಭಾವವನ್ನು ಎಲ್.ಜಿ. ಹಂದಿಗೋಳ್[೧೫] ಅವರು ವ್ಯಕ್ತಪಡಿಸುತ್ತಾರೆ.

ಶ್ರೀ ಅನ್ನದಾನಿ ಹಿರೇಮಠರು ಹೇಳುವಂತೆ "ವಿಜಯ ಕಲಾ ಮಂದಿರ ೧೯೪೭ರಲ್ಲಿ ಪ್ರಾರಂಭ ವಾದ ಕೆಲ ದಿನಗಳ ನಂತರ "ವಿಜಯ ನಾಟಕ ಸಂಘ" ಎಂಬ ಹೆಸರಿನ ನಾಟಕ ಸಂಘವನ್ನು ಸ್ಥಾಪಿಸಲಾಗಿದ್ದು, ಪ್ರತಿ ವರ್ಷ ನಡೆಯುವ ಮೈಸೂರು ದಸರಾ ಕಾರ್ಯಕ್ರಮಗಳಲ್ಲಿ, ನಗರದಲ್ಲಿ ವಿವಿಧ ಕಡೆಗಳಲ್ಲಿ ನಡೆಯುವ ಸ್ಪರ್ಧೆಗಳಲ್ಲಿ ನಾಟಕಗಳನ್ನೇರ್ಪಡಿಸಿ ಬಹುಮಾನಗಳನ್ನು ಪಡೆದಿದೆ. ರಾಷ್ಟ್ರವೀರ, ಚಿಕ್ಕಮ್ಮ, ವರಪ್ರಧಾನ, ಮುಂತಾದ ನಾಟಕಗಳನ್ನು ಈ ಸಂಸ್ಥೆ ಪ್ರಯೋಗಿಸುತ್ತಿತ್ತು. ಕಾಳೆಯವರು ರಚಿಸಿದ 'ಚಿಕ್ಕಮ್ಮ' ಎಂಬ ನಾಟಕಕ್ಕೆ ಕೇಂದ್ರ ಸರಕಾರದಿಂದ ಆಗಿನ ಕಾಲಕ್ಕೆ ಏಳು ಸಹಸ್ರ ರೂ.ಗಳ ಆರ್ಥಿಕ ನೆರವು ದೊರೆತಿದ್ದು. ಆ ನಾಟಕವು ಗದುಗಿನ ಸುತ್ತಮುತ್ತ ಐವತ್ತು ಪ್ರಯೋಗಗಳನ್ನು ಕಂಡಿತು. ನಾಟಕದ ರಚನಾಕಾರರಾಗಿ, ನಿರ್ದೇಶಕರಾಗಿ, ನಟರಾಗಿ ಹೆಸರು ಮಾಡಿದವರು ಶ್ರೀ ವಿ.ಟಿ. ಕಾಳೆಯವರು.[೧೬] ಈ ಮಾಹಿತಿಯಿಂದ ಕಾಳೆಯವರ ನಾಟಕವು ಸಮಾಜದ ಮೇಲೆ ಮೂಡಿಸಿದ ಪ್ರಭಾವ ಎಂತಹದ್ದು ಎಂಬುದನ್ನು ತೋರಿಸುತ್ತದೆ.

---

೧೫. ಎಲ್.ಜಿ. ಹಂದಿಗೋಳ (೭೫), ಧಾರವಾಡ, ಅವರೊಂದಿಗೆ ಸಂದರ್ಶನ ದಿನಾಂಕ ೨೨.೪.೨೦೦೯

೧೬. ಅನ್ನದಾನಿ ಹಿರೇಮಠ (ಸಂ), ಸುವರ್ಣ ವಿಜಯ (ನೆನಪಿನ ಸಂಚಿಕೆ) ಪು.೪

೧೯೫೨ರಲ್ಲಿ ಕಾಳೆಯವರು ತಮ್ಮ ವೃತ್ತಿಜೀವನವನ್ನು ತಮ್ಮ ಮಾತೃಸಂಸ್ಥೆಯಾದ ಗದಗಿನ ವಿಜಯ ಕಲಾಮಂದಿರದಲ್ಲಿಯೇ ಪ್ರಾರಂಭಿಸಿದರು. ೧೯೫೬ರವರೆಗೂ ಅದೇ ಶಾಲೆಯಲ್ಲಿಯೇ ಸೇವೆ ಸಲ್ಲಿಸಿದ ನಂತರ ನಾಟಕವನ್ನು ಅಭ್ಯಸಿಸಲು ರಂಗಭೂಮಿಗೆ ಸೇರಿದರು. ಒಂದು ವರ್ಷ ಗುಬ್ಬಿ ನಾಟಕ ಕಂಪನಿಯಲ್ಲಿದ್ದು ಸಾಕಷ್ಟು ಅನುಭವ ಪಡೆದ ನಂತರ ಆರು ತಿಂಗಳು ಪಂಚಾಕ್ಷರಿ ಗವಾಯಿಗಳ ನಾಟಕ ಕಂಪನಿಯಲ್ಲಿದ್ದರು ಮತ್ತು ಆರು ತಿಂಗಳು ನ್ಯಾಮತಿ ಶಾಂತಪ್ಪನವರು ಕಂಪನಿಯಲ್ಲಿದ್ದರು. ಆ ಕಂಪನಿಗಳಲ್ಲಿ ಕಾಳೆಯವರು ಪೇಂಟಿಂಗ್ ಮಾಡಿ ಕೊಡುವುದು ರಂಗಪರದೆಗೆ ಚಿತ್ರ ಬಿಡಿಸಿಕೊಡುವುದು, ವೇದಿಕೆಯ ತಂತ್ರವನ್ನು ತಿಳಿದುಕೊಳ್ಳುವುದು ನಾಟಕ ವೀಕ್ಷಣೆ ಮಾಡುವುದು. ಹೀಗೆ ಎಲ್ಲಾ ತರಹದ ಅನುಭವವನ್ನು ಪಡೆಯುತ್ತಾ ಒಂದು ರೀತಿ ನಾಟಕದ ತರಬೇತಿಯನ್ನೇ ಪಡೆದರು ಎನ್ನಬಹುದು. ಮುಂದೆ ಈ ಅನುಭವ ಅವರು ನಾಟಕಗಳನ್ನು ರಚಿಸುವಲ್ಲಿ ನೆರವಾಯಿತ್ತೆನ್ನಬಹುದು.

ಕಾಳೆಯವರು ಸುಮಾರು ೨೦ ನಾಟಕಗಳನ್ನು ಬರೆದಿದ್ದಾರೆ. ಸುಮಾರು ೧೦ ನಾಟಕಗಳನ್ನು ಸ್ಟೇಜ್ ಮೇಲೆ ಅಭಿನಯಿಸಿದ್ದಾರೆ. ಸುಮಾರು ೨೦, ೨೫ ನಾಟಕಗಳನ್ನು ನಿರ್ದೇಶನ ಮಾಡಿದ್ದಾರೆ. ಕಾಳೆಯವರು ಹೇಳುವಂತೆ "ನಾನು ಬರೆದ ನಾಟಕಗಳನ್ನಲ್ಲದೆ, ಬೇಂದ್ರೆಯವರು, ಬೀಚಿಯವರು, ಕೆ. ಗುಂಡಣ್ಣರವರ ನಾಟಕಗಳನ್ನು ನಿರ್ದೇಶನ ಮಾಡಿದ್ದೇನೆ. "ಚಿಕ್ಕಮ್ಮ" ನನ್ನ ಮೊದಲ ನಾಟಕ ಮತ್ತು ನನ್ನ ಮೊದಲ ನಿರ್ದೇಶನ ಕೂಡ "ಚಿಕ್ಕಮ್ಮ"ವಾಗಿತ್ತು. ಆಗ ಸರಕಾರದವರು ಹವ್ಯಾಸಿ ನಾಟಕಕಾರರಿಗೆ ಮತ್ತು ವೃತ್ತಿ ನಾಟಕಕಾರರಿಗೆ ಸಹಾಯಧನ ನೀಡುತ್ತಿದ್ದರು. ಆ ಸಹಾಯಧನ ಚಿಕ್ಕಮ್ಮ ನಾಟಕಕ್ಕೆ ಕೊಡಲಾಗಿತ್ತು. ಆ ಸಂದರ್ಭದಲ್ಲಿ ಅದು ಐವತ್ತು ಪ್ರಯೋಗಗಳನ್ನು ಕಂಡಿತ್ತು. ಅದರಲ್ಲಿ ಪ್ರಮುಖ ಪಾತ್ರಧಾರಿಯು ನಾನೇ ಆಗಿ ನಟನೆ ಮಾಡಿದ್ದು"[೧೭] ಎಂದು ಕಾಳೆಯವರು ತಮ್ಮ ಹಿಂದಿನ ನೆನಪನ್ನು ಹಂಚಿಕೊಳ್ಳುತ್ತಾರೆ.

ಕಾಳೆಯವರು ಬದುಕಿನ ಅನಿವಾರ್ಯತೆಯಿಂದಾಗಿ ಕೆಲಸವನ್ನರಿಸಿಕೊಂಡು ಗದಗನ್ನು ಬಿಟ್ಟು ಸಂಡೂರಿಗೆ ಬಂದರು. ಸಂಡೂರಿನ ಪ್ರಸಿದ್ಧವಾದ ಮಾಜಿ ಸಚಿವ ಎಂ.ವೈ. ಘೋರ್ಪಡೆಯವರ ಸಂಸ್ಥೆಯಾದ ಸಂಡೂರಿನ ರೆಸಿಡೆನ್ಸಿ ಶಾಲೆಯಲ್ಲಿ ಕಾಳೆಯವರು ತಮ್ಮ ಬದುಕಿನ ಹೊಸ ಅಧ್ಯಾಯ ವನ್ನು ಪ್ರಾರಂಭಿಸುತ್ತಾರೆ. ಈ ಸಂಸ್ಥೆಯಲ್ಲಿಯೇ ಅವರು ಸುಮಾರು ೩೫-೪೦ ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದರು. ಈ ಶಾಲೆಯಲ್ಲಿ ಸಲ್ಲಿಸಿದ ಸೇವೆ ಅವರಿಗೆ ತೃಪ್ತಿ ತಂದು ಕೊಟ್ಟಿದೆ ಎಂಬುವುದು ಅವರ ಮಾತಿನಿಂದ ಕಂಡುಕೊಳ್ಳಬಹುದಾಗಿದೆ. ಈ ಸಂಸ್ಥೆಯ

೧೭. ಕಲಾವಿದ ವಿ.ಟಿ. ಕಾಳೆಯವರೊಂದಿಗೆ ಸಂದರ್ಶನ, ದಿನಾಂಕ ೨೯.೯.೨೦೦೯

ಸಂಸ್ಥಾಪಕರಾದ ಶ್ರೀ ಘೋರ್ಪಡೆಯವರು, ಒಬ್ಬ ಕಲಾಭಿಮಾನಿ, ಕಲಾ ಪ್ರೋತ್ಸಾಹಕರು, ಕಲಾಪ್ರೇಮಿ. ಇಲ್ಲಿ ಕಾಳೆಯವರಲ್ಲಿರುವ ಚಿತ್ರಕಲೆ ಪ್ರತಿಭೆಯೊಂದಿಗೆ ನಾಟಕ ಕಲಾ ಪ್ರತಿಭೆಯು ಉಜ್ವಲವಾಗಿ ಬೆಳೆಯತೊಡಗಿತ್ತು ಎನ್ನಬಹುದು. ಕಾಳೆಯವರಲ್ಲಿರುವ ನಾಟಕಕಲೆಗೆ ಘೋರ್ಪಡೆ ಯವರು ನೀರೆರೆದು ಪ್ರೋತ್ಸಾಹಿಸಿದರು ಎಂಬುದು ಕಂಡು ಬರುತ್ತದೆ. ತಮ್ಮ ನಾಟಕಕಲೆಯು ಈ ಸಂಸ್ಥೆಯಲ್ಲಿ ಹೇಗೆ ಅನಾವರಣಗೊಂಡಿತ್ತೆಂಬುದನ್ನು ಕಾಳೆಯವರು ಇಲ್ಲಿ ವಿವರಿಸಿದ್ದಾರೆ.

ಕಾಳೆಯವರು ಹೇಳುವಂತೆ, "ಕಳೆದ ಐವತ್ತು ವರ್ಷಗಳಲ್ಲಿ ಸಂಡೂರು ರೆಸಿಡೆನ್ಷಿಯಲ್ ಶಾಲೆಯ "ರಂಗಭೂಮಿ'ಯು ಬೆಳೆದುಬಂದ ರೀತಿಯು ಒಂದು ರೋಮಾಂಚಕ ಕಥೆಯಾಗಿದೆ. ೧೯೬೪ರಲ್ಲಿ ಸಂಡೂರಿನ ರೆಸಿಡೆನ್ಷಿಯಲ್ ಶಾಲೆಯಲ್ಲಿ ಸೇವೆಗೆ ತೊಡಗಿದ ನಾನು ಚಿತ್ರಕಲಾ ಶಿಕ್ಷಕನಾಗಿದ್ದರೂ ನನ್ನ ಸೇವಾವಧಿಯ ಬಹು ಭಾಗವೆಲ್ಲ ನಾಟಕ ರಚನೆ, ನಿರ್ದೇಶನ, ಅಭಿನಯ, ರಂಗಸಜ್ಜಿಕೆಯ ತಯಾರಿಕೆಗಳಲ್ಲಿಯೇ ಕಳೆದು ಹೋಯಿತು. ಪ್ರಾರಂಭದಲ್ಲಿ ಶ್ರೀ ಶಿವಾಜಿ ವಿದ್ಯಾ ಮಂದಿರದ ವಿದ್ಯಾರ್ಥಿಗಳಿಂದ ಶ್ರೀ ಶಿವರಾಮ ಕಾರಂತರ "ಕಿಸಾ ಗೋತಮಿ" ಎಂಬ ಗೀತ ರೂಪಕ ವನ್ನು ನಾನೇ ನಿರ್ದೇಶಿಸಿ ಅದೇ ಶಾಲೆಯ ರಂಗಭೂಮಿಯಲ್ಲಿ ಪ್ರದರ್ಶಿಸಿದ್ದೆ. ಪ್ರಯೋಗ ಯಶಸ್ವಿಯಾಯಿತೆಂದು ತೋರುತ್ತದೆ. ಈ ಕಾರಣವಾಗಿಯೇ ನಾನು ಸಂಡೂರು ರೆಸಿಡೆನ್ಷಿಯಲ್ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕನಾಗಿಯೂ ನಾಟಕ ಕಲಾ ಶಿಕ್ಷಣಕನಾಗಿಯೂ ಕೆಲಸ ಮಾಡಬೇಕಾಯಿ ತೆಂದು ಕಾಣುತ್ತದೆ ಎನ್ನುವ ಕಾಳೆಯವರು ರೆಸಿಡೆನ್ಷಿಯಲ್ ಸ್ಕೂಲಿನಲ್ಲಿ ನಾಟಕ ಶಿಕ್ಷಕನಾಗಿ ಅದು ಮುಂದೆ ಬೃಹತ್ತಾಗಿ ಬೆಳೆಯುವಲ್ಲಿ ಪ್ರಾರಂಭಿಸಿದ ಹೆಜ್ಜೆಯನ್ನು ಈ ರೀತಿಯಾಗಿ ನೆನೆಪಿಸಿಕೊಳ್ಳುತ್ತಾರೆ.

ಈ ಶಾಲೆಯ ಮುಖ್ಯೋಪಾಧ್ಯಾಪಕಿಯಾದ ಮಹಾಲಕ್ಷ್ಮಿಯವರ ಪೂರ್ಣ ಬೆಂಬಲ, ಸಹಕಾರ ಪ್ರೋತ್ಸಾಹ ಕಾಳೆಯವರ ಮೇಲೆ ಇತ್ತು. ಪ್ರತಿ ವರ್ಷ ನಡೆಯುವ ಶಾಲಾ ವಾರ್ಷಿಕೋತ್ಸವದ ಸಂದರ್ಭದಲ್ಲಿ ಕಾಳೆಯವರಿಂದ ಒಂದು ನಾಟಕವಿದ್ದೇ ಇರುತ್ತಿತ್ತು. ಶಾಲೆಯ ಮಕ್ಕಳಿಂದಲೇ ಕಾಳೆಯವರು ನಾಟಕವನ್ನು ಆಡಿಸುತ್ತಿದ್ದರು. ಕಾಳೆಯವರೇ ಬರೆದ ಸುಪ್ರಿಯ, ಪಲ್ಲವಿ, ಮುಂತಾದ ಗೀತ ರೂಪಕ ನಾಟಕಗಳನ್ನು ಕಾಳೆಯವರು ನಿರ್ದೇಶನ ಮಾಡಿ ಶಾಲಾ ಮಕ್ಕಳಿಂದಲೇ ಆಡಿಸಿ, ಘೋರ್ಪಡೆಯವರಿಂದ ಮೆಚ್ಚುಗೆಯನ್ನು ಗಳಿಸಿಕೊಂಡಿದ್ದಾರೆ.

ಕಾಳೆಯವರು ಹೇಳುವಂತೆ, "ಶಾಲಾ ವಾರ್ಷಿಕೋತ್ಸವದ ನಾಟಕಾಭಿನಯವೊಂದಕ್ಕೇ ಆಗಿನ ಕಾಲದಲ್ಲಿ ಇಪ್ಪತ್ತು ಮೂವತ್ತು ಸಾವಿರ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡುವ ಯಾವುದೇ ಶಿಕ್ಷಣ ಸಂಸ್ಥೆಯು ಹಿಂದೆ ಎಲ್ಲಿಯೂ ಇರಲಿಲ್ಲ. ಬಹುವಾಗಿ ಈಗಲೂ ಇಲ್ಲ. ಮಾನ್ಯಶ್ರೀ ಘೋರ್ಪಡೆಯವರು ನಮ್ಮ ರಂಗೋತ್ಸಾಹಕ್ಕೆ ಎಂದೂ ಯಾವ ಕಾರಣಕ್ಕೂ ಅಡ್ಡಿ

ಯಾಗಲಿಲ್ಲ. "ರಂಗಭೂಮಿಯಲ್ಲಿ ಪ್ರಸ್ತುಪಡಿಸುವ ಯಾವುದೇ ಪ್ರದರ್ಶನವು ವಾಸ್ತವಿಕತೆಗೆ ವ್ಯತಿರಿಕ್ತವಾಗಿರಬಾರದು. ಅಭಿನಯವು ಮಕ್ಕಳದೇ ಆಗಿರಲಿ, ಪ್ರೌಢರದೇ ಆಗಿರಲಿ ಅದರಲ್ಲಿ ಪರಿಪೂರ್ಣತೆಯಿರಬೇಕು" ಎಂಬ ಶ್ರೀಯುತರ ಆಸಕ್ತಿ, ದೃಢವಾದ ನಿಲುವುಗಳು ನಮಗೆ ಆನೆಯ ಬಲವನ್ನು ತಂದು ಕೊಡುತ್ತಿದ್ದವು. ಇದರಿಂದಾಗಿಯೇ ಈ ಐವತ್ತು ವರ್ಷಗಳಲ್ಲಿ ಪ್ರದರ್ಶಿಸುವ ಎಲ್ಲ ರಂಗಪ್ರಯೋಗಗಳು ಯಶಸ್ವಿಯಾಗಿಯೇ ಮುಕ್ತಾಯಗೊಳ್ಳುತ್ತ ಬಂದಿವೆ" ಎಂದು ಕಾಳೆಯವರು ಈ ಕ್ಷೇತ್ರದಲ್ಲಿ ಯಶಸ್ವಿಗೊಳ್ಳಲು ಘೋರ್ಪಡೆಯವರು ನೀಡಿದ ಸಹಾಯ ಸಹಕಾರ ನೆನೆಯುತ್ತಾರೆ.

"ಕಳೆದ ಈ ಐವತ್ತು ವರ್ಷಗಳಲ್ಲಿ ಈ ಶಾಲಾ ರಂಗಭೂಮಿಯು ಯಾವುದೇ ವೃತ್ತಿ-ಹವ್ಯಾಸಿ ರಂಗಭೂಮಿಗಳಿಗೆ ಕಡಿಮೆಯಲ್ಲದಷ್ಟೇ ಬೆಳೆದು ನಿಂತಿದೆ. ಈ ಎಲ್ಲ ಬೆಳವಣಿಗೆಗಳಿಗೆ ಸನ್ಮಾನ್ಯ ಎಂ.ವೈ. ಘೋರ್ಪಡೆಯವರೇ ಬೆನ್ನೆಲುಬು, ಪ್ರೇರಕಶಕ್ತಿ" ಎಂಬುವುದು ಕಾಳೆಯವರ ಅಭಿಪ್ರಾಯ ವಾಗಿದೆ.

ಕಾಳೆಯವರದು ಜನಸಾಮಾನ್ಯರಿಗೆ ಹತ್ತಿರವಾದ ನಾಟಕಗಳು. ಅವರು ತಮ್ಮ ನಾಟಕಗಳಿಗೆ ಕೊಡುವ ಶೀರ್ಷಿಕೆಗಳು ವಿಶಿಷ್ಟವಾಗಿರುತ್ತವೆ.

ಕಾಳೆಯವರು ಪೂರ್ಣ ಪ್ರಮಾಣದ ನಾಟಕ ಮತ್ತು ಏಕಾಂಕ ಹಾಗೂ ಗೀತ ನಾಟಕಗಳನ್ನು ರಚಿಸಿದ್ದು ಅವುಗಳನ್ನು ಇಲ್ಲಿ ಹೆಸರಿಸಲಾಗಿದೆ. ಈ ನಾಟಕಗಳಲ್ಲಿ ಮೂರು ನಾಟಕಗಳು ಮಾತ್ರ ಪ್ರಕಟಣೆಗೊಂಡಿವೆ. ಉಳಿದವು ಇನ್ನೂ ಹಸ್ತಪ್ರತಿಯ ರೂಪದಲ್ಲಿದ್ದು ಪ್ರಕಟಗೊಳ್ಳಬೇಕಾಗಿದೆ. ಈ ನಿಲ್ಲ ನಾಟಕಗಳ ಶೀರ್ಷಿಕೆಗಳು ವಿಶಿಷ್ಟವಾಗಿವೆ.

ನಾಟಕಗಳು : ೧. ಚಿಕ್ಕಮ್ಮ (ಈ ನಾಟಕವು ಕೇಂದ್ರ ಸರ್ಕಾರದ ಧನಸಹಾಯದೊಂದಿಗೆ ಐವತ್ತು ಪ್ರಯೋಗಗಳನ್ನು ಕಂಡಿತ್ತು.), ೨. ಸಂಗೀತ ಸಾಮ್ರಾಟ್, ೩. ರಕ್ತಾಭಿಷೇಕ, ೪. ಲವಕುಶ, ೫. ಹೆಣ್ಣಿಗೊಂದು ನೆಲೆ ತಾಳಿಗೊಂದು ಬೆಲೆ, ೬. ಭಕ್ತೆ ಮೀರಾ, ೭. ಭಕ್ತ ಪುರಂದರದಾಸ, ೮. ಬುದ್ಧಂ, ಶರಣಂ ಗಚ್ಛಾಮಿ, ೯. ವಿಜಯನಗರ, ೧೦. ಶ್ರೀದೇವಿ ಮಹಾತ್ಮೆ, ೧೧. ನಾರಿ ಮುನಿದರೆ ಮಾರಿ, ೧೨. ಸಂತ ಕಬೀರ ಮುಂತಾದವು.

ಏಕಾಂಕ ನಾಟಕಗಳು : ೧. ವೇಷಧಾರಿ ಅಳಿಯ, ಮಾವನ ಆಸ್ತಿ, ಒಂದು ಹೊಟ್ಟೆಯ ಕೊಲೆ, ಆಫ್ಟರ್ ಆಲ್ ಕತ್ತೆ-ಕತ್ತೇನೆ, ಗಾಳಿ ಗೋಪುರ, ಇಮ್ಮಡಿ ಪ್ರೌಢದೇವರಾಯ ವೈಭವಂ (ಇದು ದಿಲ್ಲಿಯಲ್ಲಿ ನಡೆದ ರಾಷ್ಟ್ರಮಟ್ಟದ ಪಬ್ಲಿಕ್ ಸ್ಕೂಲ್ ಕಾನ್ಫರನ್ಸ್ ವಜ್ರ ಮಹೋತ್ಸವದಲ್ಲಿ ಅಭಿನಯಿಸಲ್ಪಟ್ಟಿದೆ) ಎಂಬ ಬಯಲಾಟವನ್ನು ಸಹ ಬರೆದಿದ್ದಾರೆ.

ಗೀತ ನಾಟಕಗಳು : ಸುಪ್ರಿಯೆ, ಅಮರಫಲ, ದಶಾವತಾರ, ಪಲ್ಲವಿ, ಕರ್ನಾಟಕ ನಂದಾದೀಪ. ಕರ್ನಾಟಕ ನಂದಾದೀಪ ಎರಡು ಬಾರಿ ಪ್ರಯೋಗ ಗೊಂಡಿದ್ದು ೨೦೦೦ ಸಾವಿರ ವರ್ಷದ ಇತಿಹಾಸವನ್ನು ಕುರಿತು ಈ ನಾಟಕದಲ್ಲಿ ವಿವರಿಸಲಾಗಿದೆ. ಪಂಪನಿಂದ ಹಿಡಿದು ಇಲ್ಲಿಯವರೆಗೆ ಕರ್ನಾಟಕ ಒಟ್ಟು ಸಂಸ್ಕೃತಿಯನ್ನು ಅದರ ವೈಭವವನ್ನು ಈ ನಾಟಕದ ಮುಖಾಂತರ ತೋರಿಸಲಾಗಿದೆ.

ಈ ಎಲ್ಲಾ ನಾಟಕಗಳು ರಂಗಪ್ರಯೋಗಗಳನ್ನು ಕಂಡ ಕೃತಿಗಳಾಗಿವೆ.[೧೮] ಮತ್ತು ನಾಟಕಗಳಲ್ಲಿ ಪ್ರಸಾದನಾ ಕಲಾವಿದರಾಗಿಯೂ ಹೆಸರು ಮಾಡಿದ್ದಾರೆ.

ಕಾಳೆಯವರ ಪ್ರಕಟಗೊಂಡ ನಾಟಕ ಕೃತಿಗಳು

೧. ಸುಪ್ರಿಯೆ

೨. ಅಮರ ಫಲ

೩. ಪಲ್ಲವಿ

೪. ಕರ್ನಾಟಕ ನಂದಾದೀಪ

೫. ಅಳಿಯ

೬. ಮಾವನ ಆಸ್ತಿ

೭. ವೇಷಧಾರಿ

ಕಾಳೆಯವರಿಗೆ ಕರ್ನಾಟಕ ಚಲನಚಿತ್ರದ ನಂಟು ಇದೆ. ಕಾಳೆಯವರು ಮೂರು ಚಲನಚಿತ್ರಗಳಲ್ಲಿ ನಟಿಸಿದ್ದು, ಅವು ಮಾನಸವೀಣೆ, ಸಂಗೊಳ್ಳಿರಾಯಣ್ಣ ಮತ್ತು ಅಲೆಮಾರಿ ಚಲನಚಿತ್ರಗಳಾಗಿವೆ. ಮಾನಸವೀಣೆ ಮತ್ತು ಸಂಗೊಳ್ಳಿರಾಯಣ ಬಿಡುಗಡೆಯಾದರೆ, ಅಲೆಮಾರಿ ಚಿತ್ರವೂ ಅಪೂರ್ಣ ಗೊಂಡಿದ್ದೆ. ಕಾಳೆಯವರು ಸಿನಿಮಾ ಕ್ಷೇತ್ರದಲ್ಲಿ ಪ್ರವೇಶ ಪಡೆಯಲು ಮುಖ್ಯವಾದ ಕಾರಣವನ್ನು ಈ ರೀತಿಯಾಗಿ ವರ್ಣಿಸುತ್ತಾರೆ. "ಸಿನಿಮಾ ಕ್ಷೇತ್ರದಲ್ಲಿ ಎಂ. ಜೀವನ್ ಎಂಬ ಸಾಹಿತಿಗಳು ನನ್ನ ಸ್ನೇಹಿತರಾಗಿದ್ದರು. ಇವರ ಜೊತೆಗೂಡಿ ಹಿರೇಗೌಡರು ಎಂಬುವರು ಸಂಗೊಳ್ಳಿರಾಯಣ್ಣ ಎಂಬ ಹೆಸರಿನ ಸಿನಿಮಾ ಮಾಡುತ್ತಿದ್ದರು. ನಾನು ನಾಟಕ ಮಾಡುವುದು ಎಂ. ಜೀವನ್ ಅವರಿಗೆ ತಿಳಿದಿತ್ತು. ಈ ಸಿನಿಮಾದ ನಿರ್ದೇಶಕರು ನನ್ನ ಅಭಿನಯವನ್ನು ಟೆಸ್ಟ್ ಮಾಡಿ ಈ ಮುಂಚೆನೇ ನೀವು ಬಂದಿದ್ದರೆ 'ಕುಲಕರ್ಣಿ' ಎಂಬ ಮುಖ್ಯ ಪಾತ್ರವೇ ನಿಮಗೆ ಕೊಡಬಹುದಾಗಿತ್ತು ಎಂದು ಪೇಚಾಡಿದರು. ಅದನ್ನು ಅಷ್ಟೇ ಉತ್ಸಾಹದಿಂದ ಮಾಡಿದ್ದೆ. ನಂತರ ಮಾನಸವೀಣೆಯಲ್ಲಿ ಪೋಷಕ ಪಾತ್ರ, ನಂತರ ಅಲೆಮಾರಿ ಈ ಮೂರು ಸಿನಿಮಾಗಳಲ್ಲಿ ನಾನು ಪಾತ್ರವಹಿಸಿದ್ದೇನೆ. ಸಿನಿಮಾ ಕ್ಷೇತ್ರಕ್ಕೆ ನಾನಾಗಿಯೇ ಅವಕಾಶ ಕೇಳಿ ಹೋದವನ್ನು ಅಲ್ಲ. ಇದರ ನಂತರ ಎಂದಿಗೂ ಯಾವತ್ತೂ ಅವಕಾಶಕ್ಕಾಗಿ ಹೋಗಲಿಲ್ಲ" ಎಂದು ತಮ್ಮ ಸಿನಿಮಾ ಕ್ಷೇತ್ರದ ಅನುಭವವನ್ನು ಹಂಚಿಕೊಳ್ಳುತ್ತಾರೆ.

---

೧೮. ಡಾ. ಎಸ್.ಸಿ. ಪಾಟೀಲ, ವಿ.ಟಿ. ಕಾಳೆ, ಪು.೧೯

ಕಾಳೆಯವರ ಚಿಂತನೆಗಳು

ಕಲಾವಿದರಾದವರು ಸಮಾಜಕ್ಕೆ ಹೊರತಾದವರಲ್ಲ. ಕಲಾವಿದನೊಬ್ಬನಿಗೆ ಸಮಾಜಿಕ ಹೊಣೆಯಿರುತ್ತದೆ. ಅದನ್ನು ಅವರು ಜವಾಬ್ದಾರಿಯಿಂದ ನಿಭಾಯಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಕಾಳೆಯವರು ಸಾಮಾಜಿಕ ಕಳಕಳಿಯನ್ನು ಹೊಂದಿದ ಕಲಾವಿದರು. ಸಮಾಜದ ಪ್ರಮುಖ ಮಾಧ್ಯಮವಾದ ರೇಡಿಯೋ ಮುಖಾಂತರ ಕಾಳೆಯವರು ಬೌದ್ಧಿಕ ಮತ್ತು ಮಾನಸಿಕ ಬೆಳವಣಿಗೆಗೆ ಸಹಾಯಕವಾಗುವಂತ ವಿಚಾರಗಳನ್ನು ಈ ಮಾಧ್ಯಮದ ಮೂಲಕ ಜನರಿಗೆ ತಲುಪಿಸಿ ತಮ್ಮ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ. ಅವರ ಕೆಲವು ಚಿಂತನೆಗಳನ್ನು ಇಲ್ಲಿ ಟಿಪ್ಪಣಿ ರೂಪದಲ್ಲಿ ಕೊಡಲಾಗಿದ್ದು ಈ ಮುಖಾಂತರ ಅವರ ಭಾಷಾಜ್ಞಾನ, ಸಾಹಿತ್ಯ ಕಟ್ಟುವಿಕೆಯಲ್ಲಿನ ಅವರ ಪ್ರಾವೀಣ್ಯತೆ ಮುಖ್ಯವಾಗಿ ಅವರ ವಿಚಾರಧಾರೆಯನ್ನು ಅದನ್ನು ವ್ಯಕ್ತಪಡಿಸಿರುವ ರೀತಿಯನ್ನು ಸ್ಥೂಲವಾಗಿ ಪರಿಗಣಿಸಿ ಇಲ್ಲಿ ಕೊಡಲಾಗಿದೆ. ಇದು ಅವರ ಸಾಹಿತ್ಯ ಜ್ಞಾನದ ಇನ್ನೊಂದು ಪ್ರಕಾರವಾಗಿದೆ. ಕಾಳೆಯವರ ಚಿಂತನೆಗಳ ಶೀರ್ಷಿಕೆಗಳು ಈ ರೀತಿಯಾಗಿವೆ. ಮಾತನಾಡುವ ಚಿತ್ರಗಳು, ಚಿತ್ರಕಲಾ ಶಿಕ್ಷಣ, ಸಂಗೀತ-ಚಿತ್ರಕಲೆ, ಮುಂತಾದವುಗಳು ಅವುಗಳ ಕೆಲವು ಟಿಪ್ಪಣಿಗಳನ್ನು ಕೊಡಲಾಗಿದೆ.

ಮಾತನಾಡುವ ಚಿತ್ರಗಳು

ಚಿತ್ರಗಳು ಸಹ ಮಾನವನಂತೆ ಮಾತನಾಡಬಲ್ಲವು ಎಂದು ಹೇಳಿದರೆ ಅಚ್ಚರಿ ಎನಿಸುತ್ತದೆ ಯಾದರೂ ಕಲೆಯ ಭಾಷೆ ತಿಳಿದ ವ್ಯಕ್ತಿಗೆ ಅಚ್ಚರಿ ಎನಿಸಲಾರದು. ಕಲೆಯ ಭಾಷೆ ಕ್ಲಿಷ್ಟಕರ. ಚಿತ್ರಗಳ ಭಾಷೆ ಅರ್ಥವಾಗಬೇಕಾದರೆ ಸಾವಿರಾರು ಚಿತ್ರಗಳನ್ನು ಕೂಲಂಕಷವಾದ ವೀಕ್ಷಣೆಯಿಂದ ಮಾತ್ರ ಸಾಧ್ಯ, ಕಲಾಕೃತಿಯನ್ನು ರಚಿಸಿದ ಕಲಾವಿದನ ಒಳ ಮನಸ್ಸು ಹೃದಯದ ಮಿಡಿತ ತುಡಿತಗಳು ಅವನು ಆಯ್ದುಕೊಂಡ ವಸ್ತುವಿನ ಚಿತ್ರಣದಲ್ಲಿ ಬೆರೆತುಕೊಂಡಿರುತ್ತದೆ. ತಾನು ಮಾತುಗಳಲ್ಲಿ ಹೇಳಬೇಕಾದ ವಿಷಯ ವಿಚಾರಗಳನ್ನು ಅವನು ಚಿತ್ರಗಳ ಮೂಲಕ ಹೇಳುತ್ತಾನೆ. ಕಲಾವಿದನ ಅಭಿವ್ಯಕ್ತಿಯ ರೀತಿ-ನೀತಿಗಳು ನೋಡಗನಿಗೆ ಬಣ್ಣಗಳ ಗುಣಧರ್ಮಗಳು, ರೇಖೆಗಳ ಸ್ವಭಾವಗಳು, ಕಲಾವಿದನು ಅವುಗಳನ್ನು ದುಡಿಸಿಕೊಂಡ ರೀತಿಗಳ ಪರಿಜ್ಞಾನವಿರಬೇಕಾಗುತ್ತದೆ. ಅಷ್ಟೇ, ಕಲೆಯ ಭಾಷಾಭಿವ್ಯಕ್ತಿಗೆ, ಕಲೆಯ ಭಾಷೆ ಜನ ಸಾಮಾನ್ಯರನ್ನು ತಲುಪಲಿ, ನನ್ನ ಚಿತ್ರಗಳು ಅವರೊಂದಿಗೆ ಮಾತನಾಡಲಿ ಎಂಬ ಹಂಬಲದಿಂದ ಆಧುನಿಕ ಕಲಾವಿದನು ಅನೇಕ ಪಂಥಗಳನ್ನು ಬಳಸಿಕೊಂಡಿದ್ದಾನೆ. ಒರಟು ಪಂಥ, ಘನಾಕೃತಿ ಪಂಥ, ಅಭಿವ್ಯಕ್ತಿ ಪಂಥ, ವಾಸ್ತವ ಪಂಥ, ಅತಿವಾಸ್ತವ ಪಂಥ, ಬಿಂದು ಪಂಥ, ಅಮೂರ್ತ ಪಂಥ ಮುಂತಾದ ಅನೇಕ ಪಂಥಗಳು

ಆಧುನಿಕ ಕಲಾಶೈಲಿಯಲ್ಲಿ ಸಮ್ಮಿಳಿತವಾಗಿದ್ದು ಎಲ್ಲವೂ ಸಾಂಕೇತಿಕ ಶೈಲಿಗಳಾಗಿವೆ. ಕಲಾವಿದನು ಬಳಸಿಕೊಂಡ ಸಂಕೇತಗಳ ಅರ್ಥವಾದಾಗ ಅವನ ಚಿತ್ರ ಖಂಡಿತವಾಗಿಯೂ ನಮ್ಮೊಂದಿಗೆ ಮಾತಾಡುತ್ತದೆ.

ಸಾವಿರಾರು ವರ್ಷಗಳ ಹಿಂದೆಯೇ ಭಾರತೀಯ ಕಲಾವಿದನು ಚಿತ್ರಿಸಿದ ಮಾತನಾಡುವ ಚಿತ್ರಗಳ ವೀಕ್ಷಣೆಗೆ ಅಜಂತಾ ಗುಹಾಂತರ ದೇವಾಲಯಗಳ ಭಿತ್ತಿಚಿತ್ರಗಳನ್ನು ನೋಡಬೇಕು. ರಾಜಗೃಹವನ್ನು ತೊರೆತದು ಬುದ್ಧನಾಗಿ ರಾಜಗೃಹಕ್ಕೆ ಬಂದ ಸಿದ್ಧಾರ್ಥನ ಚಿತ್ರ ನಮ್ಮನ್ನು ಸೆಳೆಯುತ್ತದೆ. ಬುದ್ಧನ ಪ್ರಶಾಂತ ಮುಖಭಾವ, ಭವ ಬಂಧನದಿಂದ ದೂರಾಗಿ ಎತ್ತರಕ್ಕೆ ಬೆಳೆದ ಅವನ ನಿಲುವು, ಯಶೋಧರೆಯ ದೈನ್ಯತೆ, ಮುಗ್ಧಮಗು ರಾಹುಲ ನಮ್ಮನ್ನು ಮೂಕವಿಸ್ಮಿತರನ್ನಾಗಿ ಮಾಡುತ್ತವೆ. ಈ ಚಿತ್ರವಸ್ತು ಹಿಂದಿ ಭಾಷೆಯ ವಿಖ್ಯಾತ ಕವಿ ಮೈಥಿಲಿ ಶರಣ ಗುಪ್ತ ಅವರ ಹೃದಯವನ್ನು ಕಲಕಿತು ದುಃಖಿತಪ್ತ ಯಶೋಧರೆಯ ಒಳ ಮನಸ್ಸು "ಹೆಣ್ಣೆ ಎದೆಯಲ್ಲಿ ಹಾಲು, ಕಣ್ಣಲ್ಲಿ ನೀರು ಇಷ್ಟೇ ನಿನ್ನ ಜೀವನ" ಎಂದು ಹೇಳುತ್ತದೆ ಎಂದೆನಿಸಿತು ಅದನ್ನು ಅವರು ಬರೆದರು ಕೂಡ.

ರಾಜಾರವಿವರ್ಮ, ನಂದಲಾಲ ಬೋಸ್, ಕೆ. ವೆಂಕಟಪ್ಪ, ಎಸ್.ಎಂ.ಪಂಡಿತ್, ಜಗನ್ನಾಥ ಅಹಿವಾಸಿ ಮೊದಲಾದ ವಿಖ್ಯಾತ ಕಲಾವಿದರ ಕಲಾಕೃತಿಗಳೊಂದಿಗೆ ನಾವು ಮಾತನಾಡಬಹುದಾದಷ್ಟು ಅವು ಮೋಹಕ ಕಲಾಕೃತಿಗಳಾಗಿವೆ. ದಿ. ಎಸ್.ಎಂ. ಪಂಡಿತ ಅವರು ಚಿತ್ರಿಸಿದ "ವಿಶ್ವಾಮಿತ್ರ ಮೇನಕೆ" ಕಲಾಕೃತಿ ಅದ್ಭುತ ಕಲಾಕೃತಿಯಾಗಿದ್ದು ಅದರಲ್ಲಿ ಚಿತ್ರಿತವಾದ ವಿಶ್ವಾಮಿತ್ರ, ಮೇನಕೆ ಯರಿಬ್ಬರೂ ನಮ್ಮೊಂದಿಗೆ ಮಾತನಾಡುತ್ತಿದ್ದಾರೆ ಎನ್ನುವಷ್ಟು ನೈಜತೆಯನ್ನು ರೂಪಿಸಿದ್ದಾರೆ ಎಸ್.ಎಂ. ಪಂಡಿತರು. ನೋಡುಗನ ಅಭಿಮುಖವಾಗಿ ಹಸನ್ಮುಖಿಯಾಗಿ ತನ್ನೆರಡು ಕೈಗಳಲ್ಲಿ ತೊಯ್ದು ಬಟ್ಟೆಯನ್ನು ಎತ್ತಿ ಹಿಡಿದ ಸುಂದರಿ ಮೇನಕೆ ವಿಶ್ವಾಮಿತ್ರನ ಸಾವಿರಾರು ವರ್ಷಗಳ ತಪಸ್ಸನ್ನು ಕ್ಷಣಮಾತ್ರದಲ್ಲಿ ಧ್ವಂಸಗೊಳಿಸಿದ ಸಂತೃಪ್ತಿಯ ನುಡಿಗಳನ್ನು ನುಡಿಯುತ್ತಿದ್ದರೆ. ನೋಡು ಗನಿಗೆ ಬೆನ್ನು ತೋರಿಸುತ್ತ ಕೈಗಳಿಂದ ಮುಖವನ್ನು ಮರೆಮಾಡಿ ಕುಳಿತು ತನ್ನ ಸೋಲನ್ನೊಪ್ಪಿ ಕೊಳ್ಳುತ್ತಿರುವ ಭಂಗಿಯಲ್ಲಿರುವ ವಿಶ್ವಮಿತ್ರ "ನನ್ನ ತಪಸ್ಸೆಲ್ಲ ವ್ಯರ್ಥವಾಯಿತು" ಎಂದು ಪಿಸು ಗುಟ್ಟುವ ಮಾತುಗಳು ನಮಗೆ ಸ್ಪಷ್ಟವಾಗಿ ಕೇಳಬರುತ್ತವೆ.

ಹೀಗೆ ಕಾಳೆಯವರು ಕಲಾಕೃತಿಗಳನ್ನು ಗ್ರಹಿಸುವ ರೀತಿಯೇ ಭಿನ್ನವಾಗಿ ಕಂಡುಬರುತ್ತದೆ. ತಮ್ಮ ಗ್ರಹಿಸುವಿಕೆಯನ್ನು ಕಾಳೆಯವರು ಸಾಹಿತ್ಯ ಮುಖಾಂತರ ತಮ್ಮ ಚಿಂತನೆಯನ್ನು ಹರಿಯ ಬಿಟ್ಟಿದ್ದಾರೆ.

ಚಿತ್ರಕಲಾ ಶಿಕ್ಷಣ

ಶಾಲಾ ಮಕ್ಕಳ ಚಿತ್ರಕಲಾ ಶಿಕ್ಷಣ ಕುರಿತು ಮೌಲಿಕ ವಿಚಾರಗಳನ್ನು ಹೊಂದಿರುವ ಕಾಳೆ ಅವರು ಅದನ್ನು ಇಲ್ಲಿ ತಮ್ಮ ವಿಚಾರಗಳ ಮುಖಾಂತರ ಕಟ್ಟಿಕೊಟ್ಟಿದ್ದಾರೆ. ಅದರ ಕೆಲವು ಪ್ರಮುಖ ವಿಚಾರಗಳನ್ನು ಇಲ್ಲಿ ಕೊಡಲಾಗಿದೆ.

"ಶಿಕ್ಷಣವು ಕೇವಲ ಗಣಿತ, ವಿಜ್ಞಾನ, ಭಾಷೆ, ಚರಿತ್ರೆಯ ಪಾಠಗಳಿಗೆ ಮಾತ್ರ ಸೀಮಿತವಾಗ ಬಾರದು. ಚಿತ್ರಕಲೆಯ ಪರಿಚಯವಿಲ್ಲದೆ ವಿದ್ಯೆ ಪರಿಪೂರ್ಣ ವಿದ್ಯೆ ಎನಿಸಲಾರದು. ಈ ಕಾರಣ ವಾಗಿಯೇ ಪ್ರಾಥಮಿಕ ಶಿಕ್ಷಣದ ಹಂತಗಳಲ್ಲಿಯೇ ಮಕ್ಕಳಿಗೆ ಚಿತ್ರಕಲಾ ಶಿಕ್ಷಣವನ್ನು ನೀಡಬೇಕು ಎಂಬುದು ಶಿಕ್ಷಣ ತಜ್ಞರ ಅಭಿಪ್ರಾಯವಾಗಿದೆ.

ಶಾಲೆಗಳಲ್ಲಿ ನೀಡುವ ಚಿತ್ರಕಲೆಯ ಶಿಕ್ಷಣದ ಉದ್ದೇಶ ಕಲಾವಿದರ ಉತ್ಪಾದನೆಯಲ್ಲ! ಬದಲಾಗಿ ಮಕ್ಕಳ ಸುಪ್ತಶಕ್ತಿಗಳನ್ನು ಪ್ರಚೋದಿಸಿ, ಅವರ ಎಳೆಯ ಬುದ್ಧಿಶಕ್ತಿಗೆ ಕ್ರಿಯಾಶೀಲತೆಯನ್ನು ತುಂಬುವುದು ಚಿತ್ರಕಲಾ ಶಿಕ್ಷಣದ ಗುರಿಯಾಗಿದೆ. ಚಿತ್ರಕಲೆಯು ಸಂಸ್ಕೃತಿಯ ವ್ಯಾಕರಣವಾಗಿದೆ ಎಂದು ಭಾವಿಸಿದಲ್ಲಿ ತಪ್ಪೇನೂ ಆಗಲಾರದು. ಮೂಲಾಕ್ಷರ, ವ್ಯಾಕರಣಗಳನ್ನು ಕಲಿಯದೇ ನಾವು ವಾಕ್ಯ ರಚನೆಯನ್ನು ಹೇಗೆ ಕಲಿಯಲಾರೆವೋ ನಮ್ಮ ಭಾಷೆಯನ್ನು ಸುಧಾರಿಸಿಕೊಳ್ಳಲಾರೆವೋ ಹಾಗೆಯೇ ಸಂಸ್ಕೃತಿಯ ಅರ್ಥವನ್ನು ಅದರ ವ್ಯಾಪ್ತಿಯನ್ನು ತಿಳಿಯಬೇಕಾದರೆ ಕಲಾ ಶಿಕ್ಷಣವು ನಮ್ಮ ಮನೋಭಿಲಾಷೆಗೆ ಪೂರಕ ಶಕ್ತಿಯಾಗುತ್ತದೆ. ಸೃಜನಶೀಲ ಗುಣವಿಶೇಷತೆಯನ್ನು ಹೊಂದಿದ ಚಿತ್ರಕಲೆ ಶಿಕ್ಷಣದ ಒಂದು ಪ್ರಮುಖ ಅಂಗವಾಗಬೇಕು. ಚಿತ್ರಕಲಾ ಶಿಕ್ಷಣದ ಮೂಲಕ ವಿದ್ಯಾರ್ಜನೆ ತೊಡಗಬೇಕು ಎಂಬ ಅಂಶಗಳು ನಮಗೆ ಗೋಚರಿಸುತ್ತವೆ.

ಶಾಲೆಯಲ್ಲಿ ಚಿತ್ರಕಲಾ ಶಿಕ್ಷಣದ ಮಹತ್ವದ ಕುರಿತಾದ ಕಾಳೆಯವರ ಈ ವಿಚಾರಧಾರೆಗಳು ಮಹತ್ವದ್ದಾಗಿ ಕಂಡುಬರುತ್ತದೆ.

ಸಂಗೀತ - ಚಿತ್ರಕಲೆ

ಸಂಗೀತ ಮತ್ತು ಚಿತ್ರಕಲೆಯ ಅವಿನಾಭಾವ ಸಂಬಂಧವನ್ನು ಪ್ರಾಚೀನ ಕಾಲದಿಂದಲೂ ಇರುವ ಇವುಗಳ ಸಾಂಗತ್ಯವನ್ನು ಕುರಿತು ಕಾಳೆಯವರು ತಮ್ಮ ವಿಚಾರಗಳನ್ನು ಇಲ್ಲಿ ಹೇಳಿದ್ದು ಮಹತ್ವ ಪೂರ್ಣವಾಗಿದೆ.

ಭೂಮಿಯ ಮೇಲೆ ಮಾನವನು ಕಾಣಿಸಿಕೊಳ್ಳುವದಕ್ಕಿಂತ ಪೂರ್ವದಲ್ಲಿಯೇ ಓಕಾಂರನಾದ ವಿಶ್ವವನ್ನೆಲ್ಲ ತುಂಬಿಕೊಂಡಿತ್ತು. ಬ್ರಹ್ಮಾಂಡವೆಲ್ಲ ನಾದಮಯವಾಗಿತ್ತು ಎಂಬುದು ನಮ್ಮ ತಿಳುವಳಿಕೆ. ಓಂಕಾರ ನಾದವೇ ನಮ್ಮ ಸಂಗೀತದ ಮೂಲವೆಂದು ನಾವು ಪರಿಭಾವಿಸಿದ್ದೇವೆ.

ಹಕ್ಕಿಗಳ ಕಲರವ, ಗಾಳಿಗೆ ತೂಗಾಡುವ ಮರಗಿಡಗಳ ಮರ್ಮರ, ಹರಿಯುವ ನೀರಿನ ಜಳುಜುಳು ನಿನಾದ, ದುಂಬಿಗಳ ಝೇಂಕಾರ ಮೊದಲಾದ ನೈಸರ್ಗಿಕ ನಾದಗಳೆಲ್ಲ ಮನುಷ್ಯ ನಿರ್ಮಿತ ಸಂಗೀತಕ್ಕೆ ಆಧಾರಗಳಾಗಿವೆ. ಮನುಷ್ಯ ತನ್ನಲ್ಲಿ ಉದ್ಭವವಾಗುವ ಕೋಪ, ತಾಪ, ಸಂತಸ, ದುಃಖ ಮೊದಲಾದ ಭಾವನೆಗಳ ಅಭಿವ್ಯಕ್ತಿಗೆ ತನ್ನ ಸ್ವರ ಇಲ್ಲವೇ ನಾದಕ್ಕೆ ಏರಿಳಿತಗಳನ್ನು ಕಲ್ಪಿಸಿಕೊಂಡನು. ಹೀಗೆ ಸಂಗೀತದ ವಿಶ್ವರೂಪ ಗೋಚರವಾಯಿತು.

ಅದೇನೇ ಇರಲಿ, ಸಂಗೀತಕ್ಕೂ ಚಿತ್ರಕಲೆಗೂ ಇರುವ ಸಂಬಂಧವೇನು? ಮಾನವನ ಬದುಕಿನಲ್ಲಿ ಸಂಗೀತ ಮೊದಲು ಹುಟ್ಟಿತೋ, ಚಿತ್ರಕಲೆ ಮೊದಲು ಹುಟ್ಟಿತೋ ಎಂಬುದನ್ನು ನಿಖರವಾಗಿ ಹೇಳುವುದು ಕಷ್ಟಸಾಧ್ಯ.

ನಮ್ಮ ಪ್ರಾಚೀನ ಸಂಗೀತವು ಆಧ್ಯಾತ್ಮ ಮೂಲವಾಗಿದೆ. ಸಂಗೀತವನ್ನು "ಸರ್ವಶಕ್ತಿ ಸಂಭೂತ ಳಾದ ದೇವಿ" ಎಂದೇ ಭಾರತೀಯರಾದ ನಾವು ಭಾವಿಸಿದ್ದೇವೆ. ಶಿವಶಕ್ತಿ ಸಂಯೋಗದಿಂದ ರಾಗ-ರಾಗಿಣಿಯರು ಸಂಭವಿಸಿದರೆಂಬುದು ಸಂಗೀತಶಾಸ್ತ್ರ ಗ್ರಂಥಗಳ ನುಡಿಯಾಗಿದೆ.

ಸಪ್ತಸ್ವರಗಳಿಗೆ ಪ್ರತ್ಯೇಕವಾದ ರೂಪ, ಲಾವಣ್ಯಗಳಿದ್ದು ಪ್ರತ್ಯೇಕವಾದ ಬಣ್ಣ ಅಲಂಕಾರಗಳೂ ಇರುತ್ತವೆ. ಪ್ರತಿ ಸ್ವರಕ್ಕೂ ಪ್ರತ್ಯೇಕವಾದ ಗುಣಸ್ವಭಾವಗಳಿರುತ್ತವೆ. ಶಾಸ್ತ್ರ ಗ್ರಂಥಗಳಲ್ಲಿ ವರ್ಣಿತ ವಾಗಿರುವಂತೆ ರಾಗ ರಾಗಿಣಿಯರ ಚಿತ್ರಗಳನ್ನು ಅನ್ಯಾದೃಶವಾಗಿ ಚಿತ್ರಿಸಿದ್ದಾರೆ. ಈ ಚಿತ್ರಗಳು ರಜಪೂತ ಶೈಲಿಯಲ್ಲಿ ಚಿತ್ರಿತವಾಗಿದ್ದು ರೇಖಾವಿನ್ಯಾಸ, ವರ್ಣವಿನ್ಯಾಸಗಳು ನಮ್ಮನ್ನು ಅವ್ಯಕ್ತ ಲೋಕಕ್ಕೆ ಸೆಳೆದೊಯ್ಯುತ್ತವೆ ಎಂಬ ಇತ್ಯಾದಿ ಮಹತ್ವದ ಸಂಗತಿಗಳು ಕಾಳೆಯವರ ವಿಚಾರಗಳಿಂದ ವ್ಯಕ್ತಗೊಂಡಿವೆ.

ಸುಂದರ ಬದುಕು

ಬದುಕು ಸುಂದರವಾಗಿರಬೇಕಾದರೆ ಲಲಿತಕಲೆಗಳ ಜ್ಞಾನ, ಜೀವನದಲ್ಲಿ ಅದರ ಪಾತ್ರ ವೇನೆಂಬುದನ್ನು ಕಾಳೆಯವರು ಇಲ್ಲಿ ಮಾರ್ಮಿಕವಾಗಿ ಹೇಳಿದ್ದಾರೆ.

"ಲಲಿತಕಲೆಗಳ ಜ್ಞಾನವಿಲ್ಲದೇ ನಾವು ಸುಂದರವಾದ ಬದುಕನ್ನು ಬದುಕಲಾರೆವು. ಕಲಾ ಜ್ಞಾನದಿಂದ ಕಲಾವಿದರೇ ಆಗಬೇಕೆಂದೇನೂ ಇಲ್ಲ. ಮೂಲಾಕ್ಷರ, ವ್ಯಾಕರಣಗಳನ್ನು ಕಲಿಯದೇ ನಾವು ವಾಕ್ಯ ರಚನೆಯನ್ನು ಹೇಗೆ ಕಲಿಯಲಾರೆವೋ ನಮ್ಮ ಭಾಷೆ, ನಡೆ-ನುಡಿಗಳನ್ನು ಸುಧಾರಿಸಿಕೊಳ್ಳಲಾರೆವೋ ಹಾಗೆಯೇ ಕಲಾ ಜ್ಞಾನವಿಲ್ಲದೇ ಸಂಸ್ಕೃತಿಯ ಅರ್ಥವನ್ನು, ವ್ಯಾಪ್ತಿಯನ್ನು ಗ್ರಹಿಸಲಾರೆವು. ಲಲಿತಕಲಾ ಜ್ಞಾನದಿಂದ ಮಾನವ ಸಹಜ ಸ್ವಭಾವಜನ್ಯವಾದ ಸೌಂದರ್ಯಾನ್ವೇಷಣೆ, ರಚನಾತ್ಮಕ ಬುದ್ಧಿ ಹಾಗೂ ಕ್ರಿಯಾಶಕ್ತಿ, ನಿರೀಕ್ಷಣಾಶಕ್ತಿ, ಸ್ಮರಣಶಕ್ತಿ, ಕಲ್ಪನಾಶಕ್ತಿಗಳು ವೃದ್ಧಿ

ಗೊಳ್ಳುತ್ತವೆ ಎಂಬ ಇತ್ಯಾದಿ ಮಹತ್ವದ ಅಂಶಗಳನ್ನು ಇಲ್ಲಿ ಉದಾಹರಣೆಯೊಂದಿಗೆ ತಿಳಿಯ ಪಡಿಸಲಾಗಿದೆ.

ಪ್ರಶಾಂತ ಜೀವನ

ಜೀವನದಲ್ಲಿ ಪ್ರಶಾಂತತೆಯ ಪ್ರಾಮುಖ್ಯತೆಯೇನು? ಅದನ್ನು ಹೇಗೆ ಅಳವಡಿಸಬೇಕು? ಎಂಬುದನ್ನು ಕಾಳೆಯವರು ಅನೇಕ ಪುರಾಣಗಳ ಐತಿಹಾಸಿಕ ಪ್ರಮುಖ ಘಟನೆಗಳಿಂದ ಐತಿಹಾಸಿಕ ಪ್ರಸಿದ್ಧ ವ್ಯಕ್ತಿಗಳು ಹೇಳಿರುವ ವಾಕ್ಯಗಳೊಂದಿಗೆ ಉದಾಹರಿಸಿ ಇಲ್ಲಿ ತಮ್ಮ ವಿಚಾರಗಳನ್ನು ಹರಿಬಿಟ್ಟಿರುವುದು ಮಹತ್ವದ್ದಾಗಿದೆ.

"ಪ್ರಶಾಂತ ಜೀವನ ಏನು? ಹಾಗೆಂದರೇ? ಬರಗಾಲದ ಭೂತ, ದೇಶ-ವಿದೇಶಗಳ ಸಾಮರ್ಥ್ಯದ ಪ್ರತಿಷ್ಠೆಯ ಪೈಪೋಟಿ, ಜನಸಂಖ್ಯೆ ಸ್ಫೋಟ, ಅಂತಃಕಲಹಗಳು, ರಾಜಕೀಯ ಭ್ರಷ್ಟಾಚಾರಗಳು, ರೋಗರುಜಿನಗಳು, ಆಡಳಿತಾಧಿಕಾರಿಗಳ ಸ್ವಾರ್ಥಲಾಲಸೆ, ಶಬ್ದ ಮಾಲಿನ್ಯ, ಈ ಸಂಘರ್ಷ ಪರಿಸ್ಥಿತಿಯಲ್ಲಿಯೂ ಪ್ರಶಾಂತ ಜೀವನದ ಆಶೆ ಅದೆಷ್ಟು ಅಭಾಸಕರ ಭ್ರಮೆ ಎಂದೆನಿಸುತ್ತದಲ್ಲವೇ? ಹೌದು ಈ ಎಲ್ಲ ಬಂಧನಗಳಲ್ಲಿ ಸಿಲುಕಿಕೊಂಡ ವ್ಯಕ್ತಿಗೆ ಪ್ರಶಾಂತ ಜೀವನ ಭ್ರಮೆಯಾಗಿ ಕಾಡುತ್ತದೆ. ವೈರಾಗ್ಯನಿಧಿ ಅಕ್ಕ ಹೇಳುತ್ತಾಳೆ "ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗೆ ಅಂಜಿದೊಡೆಂತಯ್ಯಾ", "ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದೊಡೆಂತಯ್ಯಾ" ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿ-ನಿಂದೆಗಳು ಬಂದೊಡೆ ಸಮಾಧಾನಿಯಾಗಿರಬೇಕು" ಎಂದು ಅಕ್ಕ ಹೇಳಿದ ಈ 'ಸಮಾಧಾನಿ' ಶಬ್ದ ಎಷ್ಟೊಂದು ಅರ್ಥಗರ್ಭಿತವಾಗಿದೆ. ಸಮಾಧಾನಿಯಾಗಿರು ಎಂದರೆ ಸ್ಥಿತಪ್ರಜ್ಞನಾಗಿರು ಎಂದರ್ಥ. ಯಾವುದೇ ಪರಿಸ್ಥಿತಿಯಲ್ಲಿಯೂ ಮನಸ್ಸನ್ನು ಶಾಂತಗೊಳಿಸಿದಾಗ ಮಾತ್ರ ಜೀವನದಲ್ಲಿ ನಾವು ಪ್ರಶಾಂತತೆಯನ್ನು ಕಾಣಬಲ್ಲೆವು ಎಂಬುದೇ ಅಕ್ಕನ ಮಾತಿನ ತಾತ್ಪರ್ಯ. ಪುರಂದರ ದಾಸರು ಹೇಳುತ್ತಾರೆ. "ಈಸಬೇಕು ಇದ್ದು ಜಯಿಸಬೇಕು" ಎಂದು ಪ್ರಾಪಂಚಿಕ ವೈಪರೀತ್ಯಗಳಿಗೆ ಅಂಜುವುದು ಹೃದಯ ದೌರ್ಬಲ್ಯ. ಎಂಥ ಪರಿಸ್ಥಿತಿಗಳಯಲ್ಲಿಯೂ ನಾವು ಪ್ರಸಾಂತವಾಗಿರಬೇಕು ಎಂಬ ಛಲ ನಮ್ಮಲ್ಲಿ ಹುಟ್ಟಿಕೊಳ್ಳಬೇಕು. ಅಂದಾಗಲೇ ನಾವು ಪ್ರಶಾಂತ ಜೀವನದ ಮಾರ್ಗದಲ್ಲಿ ಕ್ರಮಿಸಲು ಶಕ್ತರಾಗುತ್ತೇವೆ ಎಂಬ ಇತ್ಯಾದಿ ಮೌಲಿಕ ವಿಚಾರಗಳು ಕಾಳೆಯವರಿಂದ ವ್ಯಕ್ತವಾಗಿದೆ.

ಸಾಹಿತ್ಯ - ಚಿತ್ರಕಲೆ

ಅನಾದಿಕಾಲದಿಂದಲೂ ಚಿತ್ರಕಲೆ ಮತ್ತು ಸಾಹಿತ್ಯದ ನಡುವೆಯಿರುವ ಸಂಬಂಧ, ಅದು ಹಂತ ಹಂತವಾಗಿ ಬೆಳೆದು ಬಂದ ಬಗೆಯನ್ನು ಕಾಳೆಯವರು ವಿವರಿಸಿದ್ದಾರೆ. "ಅನಾದಿಕಾಲ ದಿಂದಲೂ ಸಾಹಿತ್ಯ ಮತ್ತು ಚಿತ್ರಕಲೆಗಳು ಒಂದಕ್ಕೊಂದು ಪೂರಕವಾಗಿಯೇ ಬೆಳೆಯುತ್ತ ಬಂದಿವೆ.

ಮುಂದೂ ಬೆಳೆಯುತ್ತವೆ. ಒಂದಕ್ಕೊಂದು ಅಲಂಕರಿಸುವ ಆಭರಣ ಸಾಮಗ್ರಿಗಳಾಗಿವೆ. ಸಾಹಿತಿಯಾದವನು ತನ್ನ ಮನದಾಳದಲ್ಲಿ ಮೂಡಿದ ಚಿತ್ರವನ್ನು ಶಬ್ದಗಳ ಮೂಲಕ ಚಿತ್ರಿಸುತ್ತಾನೆ. ಚಿತ್ರಕಲಾವಿದನಾದವನು ಅದೇ ಚಿತ್ರವನ್ನು ಬಣ್ಣ ಮತ್ತು ರೇಖೆಗಳಿಂದ ಚಿತ್ರಿಸುತ್ತಾನೆ. ಸಾವಿರಾರು ವರುಷಗಳಿಂದ ಬೆಳೆದು ಬಂದ ಸಾಹಿತ್ಯದೊಂದಿಗೆ ಚಿತ್ರಕಲೆಯೂ ಬೆಳೆದು ಬಂದಿತೆಂಬುದನ್ನು ಭಾಸ, ಕಾಳಿದಾಸ, ಹರ್ಷ, ಕನಕದಾಸರೇ ಮೊದಲಾದ ದಾರ್ಶನಿಕ ಕವಿಗಳು ರಚಿಸಿದ ಸಾಹಿತ್ಯ ಕೃತಿಗಳು ಉತ್ತಮ ನಿದರ್ಶನಗಳಾಗಿವೆ. ಹೀಗೆ ಪ್ರತಿ ಸಾಹಿತಿಯೂ ಚಿತ್ರಿಸಿದ ಕಲಾಕೃತಿಗಳು ಸಾರ್ವಕಾಲಿಕ ಕೃತಿಗಳಾಗಿಯೇ ಉಳಿಯುತ್ತವೆ. ಸಾಹಿತ್ಯ ಮತ್ತು ಚಿತ್ರಕಲೆಗಳ ಅವಿನಾಭಾವ ಸಂಬಂಧಗಳ ಪ್ರಾಚೀನತೆಯನ್ನು ತೋರಿಸುತ್ತವೆ. ಅಲ್ಲದೆ ಈ ಸಂಬಂಧ ಅನೂಚಾನವಾಗಿ ಮುಂದುವರಿಯುತ್ತದೆ ಎಂಬ ಸತ್ಯವನ್ನು ಬಯಲಿಗಿಡುತ್ತವೆ ಎಂಬ ಇತ್ಯಾದಿ ಸಾಹಿತ್ಯ ಮತ್ತು ಚಿತ್ರಕಲೆಗಳ ನಡುವಿನ ಸಂಬಂಧವನ್ನು ಕಾಳೆಯವರು ತಮ್ಮ ವಿಚಾರಗಳಲ್ಲಿ ಹಿಡಿದಿಟ್ಟಿದ್ದಾರೆ.

ಬಣ್ಣಗಳು

ಬಣ್ಣಗಳು ಎಂದರೆ ಅದು ಕೇವಲ ಚಿತ್ರಕಲೆಗೆ ಮಾತ್ರ ಸಂಬಂಧಿಸಿದ್ದು ಎಂಬ ಮನೋಭಾವ ದಿಂದ ಭಿನ್ನವಾಗಿ, ಬಣ್ಣ ಎನ್ನುವ ಪದ ಎಲ್ಲಲ್ಲಿ ಯಾವ ಯಾವ ಸಂದರ್ಭದಲ್ಲಿ ಉಪಯೋಗಿಸಲ ಪಡುತ್ತದೆ ಎಂಬ ಪೂರ್ಣ ಮಾಹಿತಿಯನ್ನು ಕಾಳೆಯವರು ಇಲ್ಲಿ ಪರಿಣಾಮಕಾರಿಯಾಗಿ ಹೇಳಿದ್ದಾರೆ.

"ಬಣ್ಣಗಳು ಚಿತ್ರಕಲೆಯಲ್ಲಿ ಬಹುಮುಖ್ಯವಾದ ಸ್ಥಾನವನ್ನು ಪಡೆದಿರುವುದು ಸಾಮಾನ್ಯವಾಗಿ ಬಹು ಜನರಿಗೆ ತಿಳಿದ ವಿಷಯ. ಬಣ್ಣಗಳ ಗುಣ ವಿಶೇಷಗಳನ್ನು ತಿಳಿದಾಗ ಬಣ್ಣ ಕೇವಲ ಚಿತ್ರಕಲೆಗೆ ಮಾತ್ರ ಸೀಮಿತವಲ್ಲ ಎಂಬುದು ನಮ್ಮ ಗಮನಕ್ಕೆ ಬರುತ್ತದೆ. ಅಲ್ಲದೆ ಬಣ್ಣವು ಜೀವನ ಶೈಲಿಯಾಗಿ ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ವ್ಯವಹಾರಿಕ ಅಗತ್ಯವೂ ಆಗಿ ಇಂದಿಗೂ ಮಹತ್ವದ ಸ್ಥಾನವನ್ನು ಪಡೆದಿದೆ ಎಂಬುದು ನಮ್ಮ ಅರಿವಿಗೆ ಬರುತ್ತದೆ. ಒಬ್ಬ ವ್ಯಕ್ತಿಯ ಸುಳ್ಳುಗಾರಿಕೆ, ಮೋಸ, ಕಪಟತನ, ವಂಚನೆಗಳ ಗುಟ್ಟು ಬಯಲಾದಾಗ "ಅವನ ಬಣ್ಣ ಬಯಲಾಯಿತು" ಎಂದು ಆಡಿಕೊಳ್ಳುತ್ತೇವೆ. ಹಾಗೆಯೇ ಒಬ್ಬ ವ್ಯಕ್ತಿ ಕೋಪಿಸಿ ಕೊಂಡಾಗ "ಅವನು ಕಣ್ಣು ಕೆಂಪಗೆ ಮಾಡಿಕೊಂಡ" ಎಂದೂ ಇನ್ನೊಬ್ಬನ ತಪ್ಪುಗಳು ಬಯಲಾದಾಗ "ಅವನು ಬಿಳಿಚಿಕೊಂಡ" ಎಂದು ಹೇಳುವುದುಂಟು. ಹೀಗೆ ಮಾನವ ಸಹಜವಾದ ಭಾವಾಭಿವ್ಯಕ್ತಿ ಗಳಲ್ಲಿ ಬಣ್ಣವು ತನ್ನ ಗುಣ-ಸ್ವಭಾವಗಳನ್ನು ಬಹಿರಂಗಗೊಳಿಸುತ್ತವೆ.

ಬದುಕು ಬಣ್ಣಮಯವಾಗಬೇಕು. ಹಾಗೆಂದರೆ, ಅದ್ದೂರಿಯಾದ ಕಾರ್ಯಕ್ರಮವನ್ನೋ, ಪ್ರದರ್ಶನವನ್ನೋ ನೋಡಿದಾಗ ವರ್ಣಮಯವಾಗಿತ್ತು, ಪ್ರದರ್ಶನ ವರ್ಣರಂಜಿತವಾಗಿತ್ತು ಎಂದು

ಬಣ್ಣಿಸುತ್ತೇವೆ. 'ಬಣ್ಣಿಸು' ಎಂಬ ಶಬ್ದವೇ 'ರಂಗನ್ನು ಲೇಪಿಸು' ಎಂಬ ಅರ್ಥವನ್ನು ಕೊಡುತ್ತದೆ. ಪ್ರತಿಯೊಂದು ಬಣ್ಣವೂ ತನ್ನದೇ ಆದ ಗುಣ ಸ್ವಭಾವಗಳನ್ನು ಹೊಂದಿರುತ್ತದೆ. ಹಸಿರು- ಸಮೃದ್ಧಿ, ನೀಲಿ- ಶಾಂತತೆ, ಕೇಸರಿ- ತ್ಯಾಗ ಸಮರ್ಪಣೆ ಮುಂತಾದವು ಎಂಬ ಇತ್ಯಾದಿ ವಿಚಾರಗಳು ಕಾಳೆಯವರಿಂದ ಹರಿದುಬಂದಿದೆ.

ಕಾಳೆಯವರ ಈ ಎಲ್ಲ ವಿಚಾರಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಕಾಳೆಯವರೊಬ್ಬ ಅತ್ಯಂತ ಸೂಕ್ಷ್ಮ ಮನೋಭಾವದವರು, ಭಾವನಾಜೀವಿ ಎಂಬುದು ಮನದಟ್ಟಾಗುತ್ತದೆ. ಅಲ್ಲದೇ ಈ ವಿಚಾರಗಳನ್ನು ಅವರು ವ್ಯಕ್ತಪಡಿಸಿರುವುದು ಸಾಮಾಜದಲ್ಲಿ ಕಲಾವಿದನ ಸಾಮಾಜಿಕ ಕಳಕಳಿ ಯೇನು? ಆತನ ಸ್ಥಾನ, ಜವಾಬ್ದಾರಿಯೇನು? ಎಂಬುದನ್ನು ಈ ವಿಚಾರಗಳು ಪ್ರಸ್ತುತಪಡಿಸುತ್ತವೆ.

ಶಿಲ್ಪಕಲಾವಿದರಾಗಿ ವಿ.ಟಿ. ಕಾಳೆಯವರು

ಬಹುಮುಖ ಪ್ರತಿಭೆಯನ್ನು ಹೊಂದಿರುವ ಕಾಳೆಯವರು ಶಿಲ್ಪಕಲಾವಿದರು ಕೂಡಾ ಹೌದು. ಅವರ ಅನೇಕ ಶಿಲ್ಪಕಲಾಕೃತಿಗಳು ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ರಚಿಸಲ್ಪಟ್ಟಿವೆ ಎನ್ನಬಹುದು. ಈ ತೆರನಾದ ವಿವಿಧ ಮಾಧ್ಯಮಗಳಲ್ಲಿ ವಿವಿಧ ವಿಷಯಗಳನ್ನೊಳಗೊಂಡ ಶಿಲ್ಪಕಲಾಕೃತಿಗಳು ನೂರಾರಿವೆ. ಇವುಗಳ ಪ್ರತ್ಯೇಕ ಅಧ್ಯಯನದ ಅವಶ್ಯಕತೆಯಿದೆ. ಇವುಗಳ ಅಧ್ಯಯನವನ್ನು ಇಲ್ಲಿ ಅಧ್ಯಯನಕ್ಕೆ ಪೂರಕವಾಗಿ ಸ್ಥೂಲವಾಗಿ ಪರಿಗಣಿಸಲಾಗಿದೆ.

ಕಾಳೆಯವರು ಕಲಿತ ಗದುಗಿನ ವಿಜಯಕಲಾಮಂದಿರದಲ್ಲಿ ಶಿಲ್ಪಕಲೆಯು ಒಂದು ವಿಷಯ ವಾಗಿತ್ತು. ಕಾಳೆಯವರು ವಿದ್ಯಾರ್ಥಿಯಾಗಿದ್ದ ಸಂದರ್ಭದಲ್ಲಿಯೇ ಈ ವಿಷಯ ಕುರಿತು ಆಸಕ್ತಿ ಹೊಂದಿದ್ದರು. ಅಲ್ಲಿ ಸಾಂಪ್ರದಾಯಿಕ ಕಲಿಕಾ ಪದ್ಧತಿಯಿತ್ತು. ಇದನ್ನು ಅವರು ಈಗಲೂ ಮುಂದುವರಿಸಿಕೊಂಡು ಬಂದಿದ್ದಾರೆ.


ದೃಶ್ಯಕಲೆಗಳಲ್ಲಿ ಒಂದಾದ ಶಿಲ್ಪಕಲೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ ಎಂಬುದು ಇತಿಹಾಸ ಸಾಂಸ್ಕೃತಿಕ ಅಧ್ಯಯನದಿಂದ ನಾವು ಕಾಣುತ್ತೇವೆ. ವಾತ್ಸಾಯನನ ಅರವತ್ನಾಲ್ಕು ಕಲೆ ಗಳಲ್ಲಿ ಶಿಲ್ಪಕಲೆಯು ಒಂದು.

ಚಿತ್ರಕಲೆ ಎಂದರೇನು? ಶಿಲ್ಪಕಲೆ ಎಂದರೇನು? ಎಂಬುದರ ಕುರಿತು ಪ್ರಾಚೀನದಿಂದಲೂ ಜಿಜ್ಞಾಸೆ ಬೆಳೆದು ಬಂದಿದೆ.

೧. ಚಿತ್ರಕಲೆಯೆಂದರೇ ಸಾಮಾನ್ಯವಾಗಿ ಕಲಾವಿದನೋರ್ವನ ಭಾವನೆಗಳು ರೇಖೆ, ಬಣ್ಣಗಳ ಮೂಲಕ ಪ್ರವಹಿಸಿ ರೂಪ, ಆಕಾರಗಳಾಗಿ, ಒಂದು ಅವಕಾಶದ ಮೇಲೆ ಮೈತಳೆಯುವುದು ಅಥವಾ ಮೂರ್ತಗೊಳ್ಳುವುದು ಎಂದು ವ್ಯಾಖ್ಯಾನಿಸಬಹುದು. ೨. ಶಿಲ್ಪಕಲೆಯೆಂದರೇ ಕಲಾವಿದ ನೋರ್ವನ ಭಾವನೆಗಳು ಕಲ್ಲು, ಮಣ್ಣಿನಂತಹ ವಿವಿಧ ವಸ್ತುಗಳ ಮೂಲಕ ಪ್ರವಹಿಸಿ ತ್ರಿಮಾನದ (Three Dimensional) ಆಕೃತಿಗಳಾಗಿ ರೂಪುಗೊಳ್ಳುವುದು. ಈ ಬಗೆಯ ಭಾವನೆಗಳು ಯಾವುದೇ ವಿಷಯವನ್ನು ಕುರಿತಾಗಿರಬಹುದು.[೧೯] ಶಿಲ್ಪ ಎನ್ನುವ ಮಾತು ಮೊದಲು ಬಹಳ ವ್ಯಾಪಕವಾದ ಅರ್ಥವನ್ನು ಪಡೆದಿತ್ತು. ವೇದದಲ್ಲಿ ಸಮಸ್ತ ಸೃಷ್ಟಿ ಎಲ್ಲವೂ ಶಿಲ್ಪವೆಂದು ಹೇಳಲಾಗಿದೆ.

ಪ್ರಾಚೀನರು ಅಧಿಕ ಮನ್ನಣೆ ನೀಡುತ್ತ ಬಂದಿರುವ ವಿವಿಧ ಕಲೆಗಳಲ್ಲಿ ಶಿಲ್ಪಕಲೆಯು ಒಂದು. ಮಾನವನು ಕಲ್ಲು, ಕೊರಡು, ಮಣ್ಣಿನಂತಹ ವಸ್ತುಗಳಿಗೆ ತನ್ನದೇ ಆದ ರೂಪ ನೀಡಿ

೧೯. ಡಾ. ಶಿವಾನಂದ ಎಚ್. ಬಂಟನೂರ, ಕರ್ನಾಟಕ ಜನಪದ ಶಿಲ್ಪಕಲೆ ಒಂದು ಅಧ್ಯಯನ (ಅಪ್ರಕಟಿತ ಸಂಶೋಧನಾ ಗ್ರಂಥ), (ಸಂ.) ಪು.೨೬





ಕಾಳೆಯವರ ಶಿಲ್ಪಕಲಾಕೃತಿ



ಆಕಾರ ಕೊಟ್ಟು ನೋಡಿ ಸಂತೋಷಪಡಲು ಎಂದು ಆರಂಭಿಸಿದನೋ ಅಂದೇ ಶಿಲ್ಪಕಲೆ ಹುಟ್ಟಿಕೊಂಡಿತು ಎಂದು ಹೇಳಬಹುದು.[೨೦] ಶಿಲ್ಪ ಎಂಬ ಮಾತಿಗೆ ಬೆರಗನ್ನುಂಟು ಮಾಡುವ ಕೈಕೆಲಸ ಎಂದು ಹೇಳಲಾಗಿದೆ. (ಆಶ್ಚರ್ಯಕರಂ ಕರ್ಮಕರ್ಯೇತಿ ಹಸ್ತಯೋ) ಸಂಸ್ಕೃತದ ಶಿಲ್ಪ ಎಂಬ ಶಬ್ದ ಸಮಧೌ ಎನ್ನುವ ಧಾತುವಿನಿಂದ ಒದಗಿ ಬಂದುದೆಂದೂ ಮನಸ್ಸಿನ ಏಕಾಗ್ರತೆ, ಏಕಾತಾನತೆಗಳಿಂದ ಹೊರ ಬಂದುದೆಲ್ಲ ಶಿಲ್ಪವೆಂದೂ ಒಂದು ನಿರ್ವಚನವಿದೆ.[೨೧]

ತಾಂತ್ರಿಕ ದೃಷ್ಟಿಯಿಂದ ಶಿಲ್ಪವನ್ನು ದುಂಡುಶಿಲ್ಪ (Round Sculpture) ಹಾಗೂ ಉಬ್ಬುಶಿಲ್ಪ (Relif Sculpture) ಎಂದು ವಿಭಾಗಿಸಿ ನಾವು ನೋಡಬಹುದಾಗಿದೆ. ಶಿಲ್ಪ ಅಥವಾ ದುಂಡು ಶಿಲ್ಪವು ಒಂದು ಸ್ವತಂತ್ರವಾದ ಕೃತಿಯಾಗಿದ್ದು, ಅದಕ್ಕೆ ತನ್ನದೇ ಆದ ಹೊರಮೈ ಇರುತ್ತದೆ. ಹೀಗಾಗಿ ಶಿಲ್ಪ ಎಂಬುದು ನಾಲ್ಕು ದಿಕ್ಕುಗಳಿಂದ ನೋಡಬಹುದಾದ ನಿರ್ಮಾಣಕ್ಕೆ ಹೇಳುವ ಮಾತು.[೨೨] ಇನ್ನೊಂದು ಬಗೆಯ ಶಿಲ್ಪವನ್ನು ಉಬ್ಬುಶಿಲ್ಪ ಅಥವಾ ಅರ್ಧಶಿಲ್ಪ ಎನ್ನುವರು. ಇದು ದುಂಡು ಶಿಲ್ಪದಂತಿರದೆ ಹಿನ್ನೆಲೆಗೆ ಅಂಟಿಕೊಂಡಿರುತ್ತದೆ. ಒಂದು ಶಿಲ್ಪ ಚಪ್ಪಟೆಯಾದ ಹಿನ್ನೆಲೆಯ ಮೇಲೆ ಮುಂದಕ್ಕೆ ಉಬ್ಬಿ ಕಾಣುವಂತಿದ್ದರೆ ಅದನ್ನು ಉಬ್ಬುಶಿಲ್ಪ ಎಂದು ಕರೆಯಬಹುದು.[೨೩]

ಇನ್ನು ಶಿಲ್ಪ ರಚನೆಗೆ ಸಂಬಂಧಿಸಿದಂತೆ ವಿಚಾರಿಸುವುದಾದರೆ ಶಿಲ್ಪ ರಚನೆಯು ಮುಖ್ಯವಾಗಿ ನಾಲ್ಕೈದು ಬಗೆಯಲ್ಲಿ ನಡೆಯುತ್ತದೆ. ಕೆತ್ತಿ ತೆಗೆಯುವುದು, ಮತ್ತು ಇಲ್ಲವೇ ಒತ್ತಿ ತೆಗೆಯುವುದು, ಎರಕ ಹೊಯ್ಯುವುದು, ಹಾಗೂ ಹಲವು ವಸ್ತುಗಳನ್ನು ಜೋಡಿಸಿ ಅಂಟಿಸುವುದು ಇವುಗಳಿಗೆ ಮಣ್ಣು, ಮರ, ಲೋಹ ಅಲ್ಲದೇ ಗಾರೆ, ಸಕ್ರಿ ಹಿಟ್ಟು ಮುಂತಾದವುಗಳು ಮಾಧ್ಯಮಗಳಾಗುತ್ತವೆ.[೨೪]

ಕಾಳೆಯವರು ವಿವಿಧ ಮಾಧ್ಯಮಗಳಲ್ಲಿ ಶಿಲ್ಪಕಲಾಕೃತಿಗಳನ್ನು ರಚಿಸಿದ್ದು ಅವುಗಳು ಸಿಮೆಂಟ್, ಮಣ್ಣು, ಪ್ಲಾಸ್ಟರ್ ಆಫ್ ಪ್ಯಾರಿಸ್ ಮುಂತಾದವುಗಳಾಗಿವೆ. ಒಟ್ಟು ಇವರ ಶಿಲ್ಪಗಳು ಎರಡು ರೀತಿಯಲ್ಲಿವೆ. ಫಲಕದ ಮೇಲೆ ರಚಿಸಿದ ಉಬ್ಬುಶಿಲ್ಪಗಳು ಮತ್ತು ತ್ರಿ ಆಯಮಾದ ಶಿಲ್ಪಗಳು ಪ್ರಮುಖವಾಗಿವೆ. ಇವರ ಶಿಲ್ಪಗಳಲ್ಲಿ ಅಂಬೇಡ್ಕರ್, ಮಠಾಧೀಶರು, ಸಾಧು ಸಂತರ ಮಹಾಪುರುಷರ ಭಾವ ಶಿಲ್ಪಗಳು ಪ್ರಮುಖವಾಗಿವೆ.

---

೨೦. ಡಾ.ಶಿವಾನಂದ ಎಚ್. ಬಂಟನೂರ, ಕರ್ನಾಟಕ ಜನಪದ ಶಿಲ್ಪಕಲೆ ಒಂದು ಅಧ್ಯಯನ (ಅಪ್ರಕಟಿತ ಸಂಶೋಧನಾ ಗ್ರಂಥ), (ಸಂ.) ಪು.೨೬

೨೧. ಅದೇ ಪು.೨೭

೨೨. ಅದೇ ಪು.೨೮

೨೩. ಅದೇ ಪು.೨೮

೨೪. ಅದೇ ಪು.೨೯

'ಅಂಬೇಡ್ಕರ್' ಅವರ ಅರ್ಧಾಕೃತಿ ಶಿಲ್ಪವು ಸಿಮೆಂಟ್ ಕಲಾಕೃತಿಯಾಗಿದ್ದು, ೪' ಎತ್ತರವಿದ್ದು ದೋಣಿಮಲೈನ ಅಂಬೇಡ್ಕರ್ ಉದ್ಯಾನದಲ್ಲಿ ಪ್ರತಿಷ್ಠಾಪಿತಗೊಂಡಿದೆ.

'ಭದ್ರಶೆಟ್ಟಿ' ಎಂಬ ಪ್ರಖ್ಯಾತ ಶಿಕ್ಷಕರ ಪ್ರತಿಮೆ ೪' ಎತ್ತರವಿದ್ದು ಸಿಮೆಂಟನಲ್ಲಿ ಸಿದ್ಧಪಡಿಸಿದೆ ಕೊಟ್ಟೂರಿನಲ್ಲಿ ಪ್ರತಿಷ್ಠಾಪಿತಗೊಂಡಿದೆ.

'ವಿ.ಎಸ್. ಲಾಡ' ಅವರ ೪' ಎತ್ತರದ ಕಂಚಿನಲ್ಲಿ ಸಿದ್ಧಪಡಿಸಿದ ಪ್ರತಿಮೆಯೊಂದು ಕೃಷ್ಣಾನಗರದ ಎ.ಎಸ್.ಎಲ್. ಕಛೇರಿಯ ಮುಂಭಾಗದಲ್ಲಿರುತ್ತದೆ.

೭' ಅಡಿ ಎತ್ತರದ ಸಂಡೂರಿನ ಸಂಕೇತವಾದ ನವಿಲನ್ನು ಪ್ಲಾಸ್ಟರ್ ಆಫ್ ಪ್ಯಾರಿಷ್ ಮಾಧ್ಯಮದಲ್ಲಿ ನಿರ್ಮಿಸಲಾಗಿದ್ದು. ಅದು ಸಂಡೂರಿನ ತಾಲೂಕು ಪಂಚಾಯತಿ ಕಛೇರಿಯ ಆವರಣದಲ್ಲಿ ಪ್ರತಿಷ್ಠಾಪಿಸಲಾಗಿದೆ.

ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿ ಕಾಳೆಯವರು

ಕರ್ನಾಟಕ ಸರ್ಕಾರವು ೨೦೦೭ರಲ್ಲಿ ಅಖಿಲ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಸ್ಥಾನವನ್ನು ಕಾಳೆಯವರಿಗೆ ನೀಡಿ ಗೌರವಿಸಿದೆ. ಕರ್ನಾಟಕ ಸರ್ಕಾರದ ನೆರವಿನಿಂದ ಕರ್ನಾಟಕ ಲಲಿತಕಲಾ ಅಕಾಡೆಮಿಯು ೧೯೬೪ರಲ್ಲಿ ಪ್ರಾರಂಭವಾಯಿತು. ಆಗಿನ ಶಿಕ್ಷಣ ಸಚಿವರು ಇದರ ಅಧ್ಯಕ್ಷ ರಾಗಿದ್ದರು. ೧೯೭೮ರಿಂದ ಲಲಿತಕಲಾ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡುತ್ತಾ ಸಾಗಿದೆ. ಅಧ್ಯಕ್ಷರು, ರಿಜಿಸ್ಟ್ರಾರ್, ಅರ್ಥ ಸದಸ್ಯರು ಹಾಗೂ ೨೪ ಮಂದಿ ಸದಸ್ಯರನ್ನು ಅಕಾಡೆಮಿಯು ಒಳಗೊಂಡಿರುತ್ತದೆ. ಪ್ರತಿ ಮೂರು ವರ್ಷಗಳಿಗೊಮ್ಮೆ ಅಕಾಡೆಮಿಯು ಪುನರ್ ರಚಿಸಲಾಗುತ್ತದೆ. ಅಕಾಡೆಮಿಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಂಗ ಸಂಸ್ಥೆಯಾಗಿ ಸ್ವಾಯತ್ತತೆಯನ್ನು ಪಡೆದುಕೊಂಡಿದೆ. ಅಕಾಡೆಮಿಯ ಚಿತ್ರಕಲೆಗೆ ಪೂರಕವಾದ ಹಾಗೂ ಪ್ರೇರಕವಾದ ಅನೇಕ ಯೋಜನೆಗಳನ್ನು ಹಮ್ಮಿಕೊಂಡು ಅವುಗಳನ್ನು ಕಾರ್ಯಗತಗೊಳಿಸುತ್ತಿದೆ.

ರಾಜ್ಯದಲ್ಲಿ ಲಲಿತಕಲಾ ಅಕಾಡೆಮಿಯು ಸ್ಥಾಪನೆಗೊಂಡಾಗ ಮೊದಲು ಅಧ್ಯಕ್ಷ ಸ್ಥಾನವನ್ನು ಪಡೆದವರು ಶಿಕ್ಷಣ ಸಚಿವರುಗಳಾದ ಶ್ರೀ ಎಸ್.ಆರ್. ಕಂಠಿ ಅವರು ಮತ್ತು ಶ್ರೀ ಕೆ.ವಿ. ಶಂಕರೇಗೌಡ, ೧೯೬೪-೧೯೭೦ರವರೆಗೆ. ನಂತರ ಶ್ರೀಮತಿ ಸುಧಾ ವಿ. ರೆಡ್ಡಿ ಅವರು ೧೯೭೦-೭೪ರವರೆಗೆ ಸೇವೆ ಸಲ್ಲಿಸಿದರು. ನಂತರದ ದಿನಗಳಲ್ಲಿ ಈ ಸ್ಥಾನವನ್ನು ಅಲಂಕರಿಸಿ ರಾಜ್ಯದ ಚಿತ್ರಕಲೆಯ ಬೆಳವಣಿಗೆಯನ್ನು ಕಾಣಲು ಕಾರಣಕರ್ತರಾದವರು ನಾಡಿನ ಶ್ರೇಷ್ಠ ಚಿತ್ರಕಲಾವಿದರಾದ ಕೆ.ಕೆ. ಹೆಬ್ಬಾರ ಅವರು(೧೯೭೮-೮೧). ೧೯೮೨ರಲ್ಲಿ ನಂತರದ ದಿನಗಳಲ್ಲಿ ಈ ಸ್ಥಾನವನ್ನು

ಅಲಂಕರಿಸಿ ರಾಜ್ಯದ ಚಿತ್ರಕಲೆಯ ಬೆಳವಣಿಗೆಯನ್ನು ಕಾಣಲು ಕಾರಣಕರ್ತರಾದವರು ನಾಡಿನ ಶ್ರೇಷ್ಠ ಚಿತ್ರಕಲಾವಿದರಾದ ಟಿ.ಪಿ.ಅಕ್ಕಿ, ಆರ್.ಎಂ. ಹಡಪದ, ಪಿ.ಆರ್. ತಿಪ್ಪೇಸ್ವಾಮಿ, ಪೀಟರ್ ಲೂಯಿಸ್, ಸಿ. ಚಂದ್ರಶೇಖರ್, ವಿ.ಜಿ. ಅಂದಾನಿ, ಎಂ.ಬಿ. ಬಸವರಾಜ ಮುಂತಾದವರು. ಈ ಮಹನೀಯರ ಸಾಲಿನಲ್ಲಿ ಕಾಳೆಯವರು ನಿಲ್ಲುತ್ತಾರೆ. ೨೦೦೭ರಲ್ಲಿ ಈ ಸ್ಥಾನವನ್ನು ಅಲಂಕರಿಸಿದ ಕಾಳೆಯವರಿಗೆ ಸಿಕ್ಕಿದ್ದು ಅತ್ಯಲ್ಪ ಅವಧಿ ಒಂದು ವರ್ಷ ಮೂರು ತಿಂಗಳು ಮಾತ್ರ. ಈ ಮುಂಚೆ ಎಂ.ಬಿ. ಬಸವರಾಜ ಅವರು ಅಧ್ಯಕ್ಷಸ್ಥಾನದ ಸೇವೆಯಲ್ಲಿದ್ದಾಗಲೇ ಒಂದು ವರ್ಷದಲ್ಲಿಯೇ ಅವರು ಮೃತರಾದರು. ನಂತರ ಸುಮಾರು ಎಂಟು ತಿಂಗಳುಗಳ ಕಾಲ ಅಕಾಡೆಮಿ ಅಧ್ಯಕ್ಷರಿಲ್ಲದೆ ತಟಸ್ಥವಾಗಿತ್ತು. ಉಳಿದ ಈ ಅವಧಿಯ ಸ್ಥಾನವನ್ನು ತುಂಬಲು ಕಾಳೆಯವರಿಗೆ ನೇಮಿಸಲಾಗಿತ್ತು. ಈ ಅಲ್ಪ ಅವಧಿಯಲ್ಲಿಯೇ ಕಾಳೆಯವರು ರಾಜ್ಯದ ಚಿತ್ರಕಲಾ ಕ್ಷೇತ್ರಕ್ಕೆ ಸಲ್ಲಿಸದ ಸೇವೆ ಅಮೋಘವಾದದ್ದು.

ಕಾಳೆಯವರು ಹೇಳುವಂತೆ "ನಾನು ಅದ್ಯಕ್ಷನಾದ ನಂತರ ನನ್ನ ಮುಂದಿದ್ದದ್ದು ಶ್ರೀ ಬಸವರಾಜ ಅವರು ಹಾಕಿದ ಯೋಜನೆಗಳನ್ನು ಪೂರ್ಣಗೊಳಿಸುವುದು. ಜೊತೆಗೆ ನನ್ನದೆ ಆದ ಕೆಲವು ಯೋಜನೆಗಳನ್ನು ಸೇರಿಸುವುದು" ಇದರಲ್ಲಿ ಕಾಳೆಯವರು ಒಂದು ಹಂತದವರೆಗಿನ ಯಶಸ್ಸನ್ನು ತಮ್ಮ ಅವಧಿಯಲ್ಲಿ ಪಡೆದಿರುತ್ತಾರೆ.

ಬಸವರಾಜ ಅವರು ರೂಪಿಸಿದ 'ತಿಂಗಳ ಚಿತ್ರ' ಎಂಬ ಕಾರ್ಯಕ್ರಮವು ತಿಂಗಳಿಗೊಮ್ಮೆ ರಾಜ್ಯದ ನಾಲ್ಕು ಜನ ಯುವಕಲಾವಿದರನ್ನು ಆರಿಸಿ ಅವರ ಕಲಾಕೃತಿಗಳನ್ನು ಪ್ರದರ್ಶಿಸಿ, ಮತ್ತು ಕಲಾಶಿಬಿರವನ್ನು ಏರ್ಪಡಿಸಲಾಗುತ್ತಿತ್ತು. ಅವರ ಅವಧಿಯಲ್ಲಿ ಈ ಕಾರ್ಯಕ್ರಮ ಬೆಂಗಳೂರಿನಲ್ಲಿ ಮಾತ್ರ ಸೀಮಿತವಾಗಿತ್ತು. ಈ ಯೋಜನೆಯನ್ನು ಕಾಳೆಯವರು ವಿಭಿನ್ನವಾಗಿ ಆಲೋಚಿಸಿ, ನಾಡಿನ ಜಿಲ್ಲೆ ಜಿಲ್ಲೆಗೂ ಈ ತಿಂಗಳ ಚಿತ್ರ ಕಾರ್ಯಕ್ರಮ ಪಸರಿಸುವಂತೆ ಮಾಡುವಲ್ಲಿ ಯಶಸ್ವಿಯಾದರು. ಅಲ್ಲದೇ ನಾಡಿನ ಜನತೆಗೂ ಆಯಾ ಜಿಲ್ಲೆಯಲ್ಲಿಯೇ ಇಂತಹ ಚಿತ್ರಕಲಾ ಪ್ರದರ್ಶನ ವೀಕ್ಷಿಸಲು ಅನುಕೂಲ ಮಾಡಿಕೊಟ್ಟಿದ್ದರಿಂದ ಬೆಂಗಳೂರಿಗೆ ಮಾತ್ರ ಸೀಮಿತವಾಗಿದ್ದ ಈ ಕಾರ್ಯಕ್ರಮ ರಾಜ್ಯದ ಸಾಮಾನ್ಯ ಜನರಿಗೂ ಹತ್ತಿರವಾಯಿತು.

ಕಾಳೆಯವರ ಅಧ್ಯಕ್ಷತೆಯ ಸೇವಾ ಅವಧಿಯಲ್ಲಿಯೇ ಸುವರ್ಣ ಕರ್ನಾಟಕ ವರ್ಷಾಚರಣೆಯ ಅಂಗವಾಗಿ ಸರ್ಕಾರ ಅಕಾಡೆಮಿಗೆ ಹತ್ತು ಲಕ್ಷ ರೂಪಾಯಿಗಳ ಅನುದಾನ ನೀಡಿತು. ಈ ಅನುದಾನದಡಿಯಲ್ಲಿ ಹತ್ತು ಮೌಲಿಕ ಗ್ರಂಥಗಳ ಮರುಮುದ್ರಣ ಮತ್ತು ಸುವರ್ಣ ಕರ್ನಾಟಕದ ಕಲಾಶಿಬಿರಗಳನ್ನು ಏರ್ಪಡಿಸುವ ಯೋಜನೆ ಸಿದ್ಧವಾಯಿತು. ಅನೇಕ ಕಡೆ ಕಲಾಶಿಬಿರಗಳು

ಕಲಾಪ್ರದರ್ಶನಗಳು ರಾಜ್ಯ, ರಾಷ್ಟ್ರಮಟ್ಟದಲ್ಲಿ ನಡೆದವು, ವೆಬ್‌ಸೈಟ್, ಕಲಾವಿದರ ಸಾಕ್ಷ್ಯಚಿತ್ರ, ನಿಮ್ಮೊಂದಿಗೆ ನಾವು, ಅಶಕ್ತ ಕಲಾವಿದರಿಗೆ ಧನಸಹಾಯ, ಕಲಾವಿದ್ಯಾರ್ಥಿಗಳಿಗೆ ಸ್ಕಾಲರ್ ಶಿಪ್, ಏಕವ್ಯಕ್ತಿ ಪ್ರದರ್ಶನಕ್ಕೆ ಧನಸಹಾಯ, ಕಲಾ ವಿದ್ಯಾರ್ಥಿಗಳಿಗೆ ಸಮೂಹ ಕಲಾಪ್ರದರ್ಶನಗಳಿಗೆ ಧನಸಹಾಯ ಹೀಗೆ ಅನೇಕ ಯೋಜನೆಗಳು ಕಾಳೆಯವರ ಅವಧಿಯಲ್ಲಿ ಕಾರ್ಯರೂಪಕ್ಕೆ ಬಂದಿವೆ.

ಕಲಾಕ್ಷೇತ್ರ ಕೊಟ್ಟ ಉನ್ನತದರ್ಜೆಯ ಜವಾಬ್ದಾರಿಯನ್ನು ಕಾಳೆಯವರು ಅಷ್ಟೇ ಸಮರ್ಥವಾಗಿ ನಿರ್ವಹಿಸಿದ್ದು, ಅವರ ಅವಧಿಯಲ್ಲಿ ನಡೆದ ಕಲಾ ಚಟುವಟಿಕೆಗಳಿಂದ ಮನಗಾಣಬಹುದು. ಇಂತಹ ಒಬ್ಬ ಸಮರ್ಥ ವ್ಯಕ್ತಿಯನ್ನು ಆಯ್ಕೆಮಾಡಿದ್ದು, ಮಹತ್ವಪೂರ್ಣವಾದ ನಿರ್ಣಯವಾಗಿದೆ. ಅಲ್ಲದೇ ರಾಜ್ಯದ ಕಲಾಕ್ಷೇತ್ರವೇ ಈ ಒಂದು ಆಯ್ಕೆಯಿಂದ ಹೆಚ್ಚಿನ ಮಟ್ಟದಲ್ಲಿ ಲಾಭವನ್ನು ಪಡೆದುಕೊಂಡಿದೆ ಎನ್ನಬಹುದು.

ಸಂಡೂರು ತಾಲೂಕು ಎರಡನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಕಾಳೆಯವರು

ಕಾಳೆಯವರದು ಸಮಾಜಮುಖಿ ವ್ಯಕ್ತಿತ್ವ, ತಮ್ಮ ಪಾಡಿಗೆ ತಾವು ಇದ್ದು ಬಿಡುವಂತಹವರಲ್ಲ. ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮವಿರಲಿ ಅದರಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಗುಣಧರ್ಮ ಅವರದ್ದು. ಇದು ಜೀವಂತಿಕೆ ಲಕ್ಷಣವೂ ಹೌದು ತಾವು ನೆಲೆಸಿರುವ ಸಂಡೂರಿನ ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮವಿರಲಿ, ಅಲ್ಲಿ ಇವರ ಪಾಲ್ಗೊಳ್ಳುವಿಕೆ ಇದ್ದೇ ಇರುತ್ತದೆ. ಚಿತ್ರಕಲಾ ಕ್ಷೇತ್ರದಿಂದ ಸಾಹಿತ್ಯ ಸಮ್ಮೇಳನದಂತಹ ಭಿನ್ನ ಕ್ಷೇತ್ರದಲ್ಲಿ ಇವರ ಪ್ರಮುಖ ಪಾಲ್ಗೊಳ್ಳುವಿಕೆ ಇವರದು ಎಂತಹ ಪ್ರಭಾವಿ ವ್ಯಕ್ತಿತ್ವ ಎಂಬುದನ್ನು ತೋರಿಸುತ್ತದೆ. ಅಲ್ಲದೇ ಕಾಳೆಯವರು ಸಾಹಿತ್ಯ ಕ್ಷೇತ್ರದಲ್ಲೂ ಸಾಧನೆ ಮಾಡಿರುವರು. ಕಲಾ ಬರವಣಿಗೆಗಳು ಅನುವಾದ ಕೃತಿ, ನಾಟಕ ರಚನೆ ಮುಂತಾದ ಸಾಹಿತ್ಯ ಪ್ರಕಾರದಲ್ಲಿ ಸೇವೆಸಲ್ಲಿಸಿದ್ದಾರೆ.

೨೦೦೮ರಲ್ಲಿ ನಡೆದ ಸಂಡೂರು ತಾಲೂಕ ಸಾಹಿತ್ಯ ಪರಿಷತ್ತಿನ ೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಕಾಳೆಯವರನ್ನು ಆಯ್ಕೆ ಮಾಡಿದ ಸಂದರ್ಭದಲ್ಲಿ ಕೆರೆನಳ್ಳಿ ಜಗದೀಶ ಎಂಬ ಯುವ ಸಂಶೋಧಕರು, ಸಾಹಿತಿಯೂ ಆದ ಇವರು ಕಾಳೆಯವರ ಕುರಿತು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಅವರ ಅನುಭವನ್ನು ಸಂದರ್ಶನದ ಮುಖಾಂತರ ಟಿಪ್ಪಣಿ ಮಾಡಿಕೊಂಡಿರುತ್ತಾರೆ. ಅದರ ಕೆಲವು ಅಂಶಗಳನ್ನು ಇಲ್ಲಿ ಹೇಳಲಾಗಿದೆ.

ಪ್ರಮುಖವಾಗಿ ಈ ಸಾಹಿತ್ಯ ಸಮ್ಮೇಳನಗಳ ಉದ್ದೇಶ ಏನಾಗಿರಬೇಕು ಅಂತ ನೀವು ಬಯಸುತ್ತೀರಿ? ಅಂದರೆ ಸಾಮಾಜಿಕವಾಗಿ ಇವುಗಳು ಬೀರುವ ಪರಿಣಾಮ ಏನು? ಮತ್ತು ಇವುಗಳಿಂದ ಕಂಡುಕೊಳ್ಳುವ ಪರಿಹಾರೋಪಾಯಗಳೇನು?

ಈ ಪ್ರಶ್ನೆಗಳಿಗೆ ಕಾಳೆಯವರು ಸಮರ್ಥವಾಗಿ ಇಲ್ಲಿ ಪ್ರತಿಕ್ರಿಯಿಸಿದ್ದಾರೆ. "ಸಾಹಿತ್ಯ ಮನೆಮನೆಯ ಮಾತಾಗಬೇಕು; ಸಾಹಿತ್ಯ ಕೇವಲ ಅಕ್ಷರಸ್ಥರಿಗೆ, ಸಾಹಿತಿಗಳಿಗೆ ಮಾತ್ರವಲ್ಲ ಅದರ ಸವಿಯನ್ನು ಗ್ರಾಮೀಣ ನಿರಕ್ಷರಿಗಳು ಸವಿಯಬೇಕು. ಸಮ್ಮೇಳನಗಳಲ್ಲಿ ನಡೆಯುವ ಗೋಷ್ಠಿಗಳು ಸಮಾಜ ಮುಖಿಯಾಗಿರಬೇಕು. ಗೋಷ್ಠಿಗಳಲ್ಲಿ ಭಾಗವಹಿಸುವ ಕವಿ, ಸಾಹಿತಿಗಳಿಗೆ ಸಾಮಾಜಿಕ ಬದ್ಧತೆಯಿರಬೇಕು. ರಾಜಕೀಯ, ಧಾರ್ಮಿಕ, ಆರ್ಥಿಕ ಒತ್ತಡಗಳಿಗೂ, ಸವಾಲುಗಳಿಗೂ ಸೂಕ್ತವಾದ ಪರಿಹಾರಗಳನ್ನು ಕಂಡುಕೊಳ್ಳುವ ವೇದಿಕೆಯಾಗಬೇಕು ಈ ಸಮ್ಮೇಳನಗಳು. ಇವು ಸಮ್ಮೇಳನಗಳ ಮೂಲೋದ್ದೇಶಗಳಾಗಿರಬೇಕು. ಆ ದಿಶೆಯಲ್ಲಿ ಸಂಡೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಭುಜಂಗ ನಗರದಂಥ ಗ್ರಾಮೀಣ ಪ್ರದೇಶದಲ್ಲಿ ಈ ಬಾರಿಯ ಸಮ್ಮೇಳನವನ್ನು ಬಹು ದಿಟ್ಟತನದಿಂದಲೇ ಆಯೋಜಿಸಿದೆ ಎಂದೇ ಹೇಳಬೇಕು. ತಾಲೂಕು ಸಾಹಿತ್ಯ ಪರಿಷತ್ತು, ಬುಜಂಗ ನಗರದ ಯುವಸಾಹಿತ್ಯ ಪ್ರೇಮಿಗಳು, ಸಹಾಯ ಹಸ್ತ ಚಾಚಿದ ಗಣಿಮಾಲೀಕರುಗಳೆಲ್ಲ ಸ್ತುತ್ಯಾರ್ಹರು. ಸಾಹಿತ್ಯ ಕೇವಲ ಕಾದಂಬರಿ, ಕಾವ್ಯಗಳಿಗೆ ಮಾತ್ರ ಸೀಮಿತವಲ್ಲ. ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ ಮೊದಲಾದ ಕ್ಷೇತ್ರಗಳೂ ಸಾಹಿತ್ಯ ಕ್ಷೇತ್ರದಲ್ಲಿ ಸಮಾವೇಶ ಗೊಳ್ಳುತ್ತವೆ. ಸಮ್ಮೇಳನಗಳು ನಡೆಯುವ ಚಿಂತನ ಮಂಥನ ಸಮಾಜದ ಓರೆಕೋರೆಗಳನ್ನು ತಿದ್ದುವ ಕೆಲಸಗಳನ್ನು ಮಾಡುತ್ತವೆ, ಕಾಡುವ ಸಮಸ್ಯೆಗಳಿಗೆ ಇಲ್ಲಿ ಭಾಗವಹಿಸುವ ಬುದ್ಧಿಜೀವಿ ಗಳಿಂದ ಪರಿಹಾರೋಪಾಯಗಳು ದೊರೆಯುತ್ತವೆ ಎಂಬ ವಿಚಾರಗಳು ಗ್ರಾಮೀಣ ಸಾಮಾನ್ಯ ಜನತೆಗೂ ತಲುಪಬೇಕು ಎಂಬ ಸಂಡೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಉದ್ದೇಶ ಸಾರ್ಥಕವಾಗಿದೆ. ಕೇವಲ ನಗರ, ಪಟ್ಟಣಗಳಿಗೆ ಮಾತ್ರ ಸೀಮಿತವಾಗಿದ್ದ ಸಾಹಿತ್ಯ ಸಮ್ಮೇಳನಗಳು ಇನ್ನು ಮುಂದೆ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚಾಗಿ ನಡೆಯುವಂತಾಗಬೇಕು. ಕನ್ನಡ ಭಾಷೆಯ ಸೊಗಡನ್ನು ಸವಿಯುವಂತಾಗಬೇಕು. ಕನ್ನಡ ಭಾಷೆಯ ಸೊಗಡನ್ನು ಸವಿಯುವ ರಸಾಭಿಜ್ಞತೆ ಜನಸಾಮಾನ್ಯರಲ್ಲಿಯೂ ಬೆಳೆಯಬೇಕು ಎಂಬಿತ್ಯಾದಿ ಮಹತ್ವಪೂರ್ಣ ಅಂಶಗಳ ಕುರಿತು ಕಾಳೆಯವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಈ ಅಧ್ಯಾಯದಲ್ಲಿ ಕಾಳೆಯವರ ಬಹುಮುಖ ಪ್ರತಿಭೆಯನ್ನು ಕುರಿತು ಅಧ್ಯಯನ ಮಾಡಲಾಗಿದ್ದು, ಕಾಳೆಯವರು ಚಿತ್ರಕಲಾವಿದರು ಮಾತ್ರವಲ್ಲದೇ, ಅವರೊಬ್ಬ ಕಲಾ ಸಾಹಿತಿ, ನಾಟಕಕಾರರು, ಶಿಲ್ಪಕಲಾವಿದರು, ನಾಡಿನ ಅನೇಕ ಜವಾಬ್ದಾರಿ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಹೀಗೆ ಕಾಳೆಯವರ ಬಹುಮುಖ ಪ್ರತಿಭೆಯನ್ನು ಈ ಅಧ್ಯಯನದಲ್ಲಿ ಕಟ್ಟಿಕೊಡುವ ಪ್ರಯತ್ನ ವಾಗಿದ್ದು, ಒಟ್ಟು ಅಧ್ಯಯನದ ಉದ್ದೇಶಕ್ಕೆ ಪೂರಕವಾಗಿದೆ.

ಅಧ್ಯಾಯ ೭

ಸಮಾರೋಪ

ಅಧ್ಯಾಯ ಏಳು

ಸಮಾರೋಪ

ನಾಡಿನ ಸಾಂಸ್ಕೃತಿಕ ಶ್ರೀಮಂತಿಕೆ ಹೆಚ್ಚಿಸುವಲ್ಲಿ ಕಲಾವಿದರ ಪಾತ್ರ ಬಹುಮುಖ್ಯವಾದದ್ದು, ಕಲಾವಿದರ ಕಲಾಕೃತಿಗಳು ನಾಡಿನ ಅಮೂಲ್ಯ ಆಸ್ತಿಗಳಾಗಿವೆ. ನಾಡನ್ನು ಕಟ್ಟುವಲ್ಲಿ ಅನೇಕ ಜನರ ಪರಿಶ್ರಮವಿರುತ್ತದೆ. ಅದರಲ್ಲಿ ಕಲಾವಿದನ ಪಾತ್ರವನ್ನು ನಿರ್ಲಕ್ಷಿಸುವಂತಿಲ್ಲ. ಹೀಗೆ ನಾಡಿನ ಸಾಂಸ್ಕೃತಿಕ ಶ್ರೀಮಂತಿಕೆಗೆ ತಮ್ಮದೇ ಆದ ಅಮೂಲ್ಯ ಕೊಡುಗೆಗಳನ್ನು ತಮ್ಮ ಕಲಾಕೃತಿಗಳ ಮುಖಾಂತರ ಕೊಡುತ್ತಾ ಬಂದಿರುವ ವಿ.ಟಿ. ಕಾಳೆಯವರು ಕಲೆಗಾಗಿ ತಮ್ಮನ್ನೇ ಅರ್ಪಿಸಿಕೊಂಡವರು. ಕಾಳೆಯವರ ಸಾವಿರಾರು ಕಲಾಕೃತಿಗಳು ಬಹು ಅಮೂಲ್ಯವಾದ ಆಸ್ತಿಗಳಾಗಿವೆ.

ಇಂಥ ಕಲಾವಿದರ ಕುರಿತು ಅವರ ಸಾಧನೆಗಳ ಕುರಿತು ಒಂದೆಡೆ ವ್ಯವಸ್ಥಿತವಾಗಿ ದಾಖಲಿಸುವುದರಿಂದ ಇತಿಹಾಸ ಕಟ್ಟುವುದಕ್ಕೆ ಸಹಾಯಕವಾಗುತ್ತದೆ. ಅಲ್ಲವೆ ಕಲಾವಿದರಿಗೂ ತಕ್ಕಮಟ್ಟಿಗೆ ನ್ಯಾಯ ಒದಗಿಸಿದಂತಾಗುತ್ತದೆ. ನಾಡಿನ ಚಿತ್ರಕಲೆಯ ಅಧ್ಯಯನದಲ್ಲಿ ಇಂತಹ ಕಲಾವಿದರ ಜೀವನ ಹಾಗೂ ಅವರ ಸಾಧನೆ ಕಲಾಕೃತಿಗಳ ಕೊಡುಗೆಯು ಅಷ್ಟೇ ಮಹತ್ವಪೂರ್ಣವಾದದ್ದು. ನಾಡಿನ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಹಿನ್ನೆಲೆಯಲ್ಲಿ ಕಲಾವಿದ ವಿ.ಟಿ. ಕಾಳೆಯವರ ಬದುಕು ಮತ್ತು ಕಲಾಕೃತಿಗಳ ಅಧ್ಯಯನದ ಈ ಮಹಾಪ್ರಬಂಧ ರೂಪಗೊಂಡಿದೆ. ಒಟ್ಟು ಏಳು ಅಧ್ಯಾಯಗಳಲ್ಲಿ ವಿಷಯವಸ್ತುವಿನ ನಿರೂಪಣೆಯಾಗಿದೆ.

ಯಾವುದೇ ಒಂದು ಅಧ್ಯಯನಕ್ಕೆ ಅಧ್ಯಯನ ಕ್ರಮ ಮುಖ್ಯವಾಗಿದ್ದು, ಅಧ್ಯಯನವೊಂದಕ್ಕೆ ಸೀಮಿತವಾದ ವಿಷಯವು ಅಗತ್ಯವಾಗಿರುತ್ತದೆ. ಹೀಗಾಗಿ ಏಳು ಅಧ್ಯಾಯಗಳನ್ನು ಒಳಗೊಂಡಿರುವ

ಈ ಪ್ರಬಂಧವು ಒಂದೊಂದು ಅಧ್ಯಯನದಲ್ಲಿ ಅದರ ವ್ಯಾಪ್ತಿಗೆ ಸಂಬಂಧಿಸಿದ ವಿಷಯದ ಪದರಗಳನ್ನು ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಏಳು ಅಧ್ಯಯನಗಳು ವಿಶ್ಲೇಷಣೆಗೊಂಡಿದ್ದು ಅವು ಹೀಗಿವೆ.

ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನಗಳನ್ನು ಕಟ್ಟಿಕೊಡಲಾಗಿದೆ.

ಅಧ್ಯಾಯ ಎರಡರಲ್ಲಿ ಕಾಳೆಯವರ ಬಾಲ್ಯದ ಬದುಕು. ಬೆಳದ ಪರಿಸರ, ಕಲೆಯ ಕಡೆಗೆ ವಾಲಿದ ಮನಸ್ಸು, ಆ ಸಂದರ್ಭ, ಇದಕ್ಕೆ ಕಾರಣೀಕರ್ತರಾದ ವ್ಯಕ್ತಿಗಳ ಕುರಿತು, ಪ್ರೇರಣೆ ನೀಡಿದ ವ್ಯಕ್ತಿಗಳು, ಗುರುಗಳು, ಮುಂದೆ ಗದುಗಿನ ವಿಜಯ ಕಲಾ ಮಂದಿರ, ಕಲಾಶಿಕ್ಷಣ, ಅಲ್ಲಿಯ ಕಲಾ ವಾತಾವರಣ, ಕಲಾ ಗುರುಗಳೊಂದಿಗೆ ಅವರ ಬಾಂಧವ್ಯ, ಮುಂದೆ ಪರೀಕ್ಷೆಗೆಂದು ಮುಂಬಯಿಯ ಜೆ.ಜೆ. ಸ್ಕೂಲ್ ಆಫ್ ಆರ್ಟಗೆ ಹೋಗಿದ್ದು ಅಲ್ಲಿಯ ಕಲಾ ಪರಿಸರ, ಕಲಾ ಶಿಕ್ಷಣ, ಸಹಪಾಠಿಗಳು, ಕಲಾವಿದನಾಗಿ ಬೆಳೆಯಲು ಇಲ್ಲಿಯ ಪ್ರೇರಣೆ ನೀಡಿದ ಪ್ರಸಂಗಗಳು, ಮುಂದೆ, ಕಾಳೆಯವರ ಕುಟುಂಬ ವೃತ್ತಿಜೀವನದ ಎರಡು ಹಂತಗಳನ್ನು ಹೇಳಾಗಿದ್ದು, ಅಲ್ಲದೇ ಅವರ ನಿವೃತ್ತಿ, ನಿವೃತ್ತಿ ನಂತರ ಅವರು ಕಂಡ ನಿಜವಾದ ಬದಕನ್ನು ಕುರಿತು ಎಪ್ಪತ್ತಾರು ವಸಂತಗಳನ್ನು ಪೂರೈಸಿದ ಕಾಳೆಯವರು ಪ್ರಸ್ತುತ ಈಗಲೂ ಕೂಡಾ ಸತತವಾಗಿ ಕಲಾಕೃತಿಗಳನ್ನು ಕೃಷಿ ಮಾಡುವಲ್ಲಿ ತಮ್ಮ ಸಂಪೂರ್ಣ ತೊಡಗಿಸಿಕೊಂಡಿದ್ದಾರೆ. ಅಲ್ಲದೇ ಕಲೆಗೆ ಮುಡಿಪಾಗಿಟ್ಟ ಬದುಕು ಅವರದ್ದು ಈ ಕುರಿತಾಗಿ ಇಲ್ಲಿ ಅವರ ಇಡೀ ಬದುಕನ್ನು ಸ್ಥೂಲವಾಗಿ ಕಟ್ಟಿ ಕೊಡಲಾಗಿದೆ.

ಅಧ್ಯಾಯ ಮೂರರಲ್ಲಿ ಕಾಳೆಯವರು ತಮ್ಮ ಬದುಕಿನುದ್ದಕ್ಕೂ ಸಾವಿರಾರು ರೇಖಾಚಿತ್ರಗಳನ್ನು ರಚಿಸಿದ್ದು, ಚಿತ್ರಗಳ ವಿಷಯವಸ್ತು, ರಚಿಸುವ ಕ್ರಮ, ಅವರ ರೇಖೆಗಳಲ್ಲಿನ ಲಯ, ನಯಗಾರಿಕೆ, ಭಾವಸಂಚಾರ, ಭಾವ ಗೀತಾತ್ಮಕತೆ ಹೀಗೆ ಒಟ್ಟು ಅವರ ಪಳಗಿದ ಕೈಯಿಂದ ಮೂಡಿಬಂದ ರೇಖಾಚಿತ್ರಗಳ ಕುರಿತು ಈ ಅಧ್ಯಯನದಲ್ಲಿ ಮಾಹಿತಿಯಿದೆ.

ಅಧ್ಯಾಯ ನಾಲ್ಕರಲ್ಲಿ ಕಾಳೆಯವರ ಬದುಕಿನುದ್ದಕ್ಕೂ ರಚಿಸಿದ ವರ್ಣಚಿತ್ರಗಳ ವಿಶ್ಲೇಷಣೆಯನ್ನು ಮಾಡಲಾಗಿದ್ದು, ಇದು ಒಟ್ಟು ಅಧ್ಯಯನದ ಹೃದಯ ವಿಭಾಗದಂತಿದೆ. ಕಾಳೆಯವರ ಸಾವಿರಾರು ವರ್ಣ ಕಲಾಕೃತಿಗಳು ವೈವಿಧ್ಯಮಯವಾಗಿದ್ದು, ವಿವಿಧ ವಿಷಯ ವಸ್ತುವನ್ನೂ, ವಿವಿಧ ಮಾಧ್ಯಮಗಳಲ್ಲಿ ರಚಿಸಲಾಗಿದ್ದು ಅವುಗಳನ್ನು ಇಲ್ಲಿ ವ್ಯವಸ್ಥಿತವಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದ್ದು ಮಹತ್ವಪೂರ್ಣವಾಗಿದೆ. ಇಲ್ಲಿ ಒಟ್ಟು ಕಾಳೆಯವರ ವರ್ಣಕಲಾಕೃತಿಗಳ ರಚನಾ ಹಿನ್ನೆಲೆ, ಉದ್ದೇಶ, ಸಮಯ, ಸಂದರ್ಭ ಬಳಸಿದಂತಹ ಮಾಧ್ಯಮ, ನಿರೂಪಣೆ ಮುಂತಾದವುಗಳನ್ನು ಕುರಿತು ಇಲ್ಲಿ ವಿಶೇಷವಾಗಿ ವಿಶ್ಲೇಷಣೆ ಮಾಡಲಾಗಿದೆ.

ಅಧ್ಯಾಯ ಐದರಲ್ಲಿ ಕಾಳೆಯವರ ಒಟ್ಟು ಕಲಾಕೃತಿಗಳ ಶೈಲಿ, ಪ್ರಭಾವ ಪ್ರೇರಣೆ ತಂತ್ರ ಕುರಿತಾದ ಆಳವಾದ ಅಧ್ಯಯನ ಇದಾಗಿರುತ್ತದೆ. ಇಲ್ಲಿ ಮುಖ್ಯವಾಗಿ ಕಾಳೆಯವರ ಮೇಲೆ ಬಂಗಾಲಿ ಕಲಾವಿದರ ಶೈಲಿಯ ಪ್ರಭಾವ, ಕಾಳೆಯವರ ಕಲಾಕೃತಿಗಳಲ್ಲಿನ ವಾಷ್‌ತಂತ್ರ ಜೆ.ಜೆ. ಕಲಾಶಾಲೆಯ ಪ್ರಭಾವ, ಪ್ರೇರಣೆ, ಪಾಶ್ಚಾತ್ಯ ಮತ್ತು ಪೌರ್ವಾತ್ಯ ಕಲಾ ಪದ್ಧತಿಗಳು ಇವರ ಕಲಾಕೃತಿಗಳ ಮೇಲೆ ಮೂಡಿದ ಪ್ರಭಾವ, ಇವುಗಳ ನಡುವಿನ ಸೇತುವೆಯಂತಿರುವ ಕಾಳೆಯವರ ಕಲಾಕೃತಿಗಳನ್ನು ಇಲ್ಲಿ ಕಟ್ಟಿಕೊಡಲಾಗಿದೆ.

ಅಧ್ಯಾಯ ಆರರಲ್ಲಿ ಈ ಅಧ್ಯಾಯವು ಮಹತ್ವದಾಗಿದ್ದು, ಕಾಳೆಯವರ ಬಹುಮುಖ ಪ್ರತಿಭೆಯನ್ನು ಪರಿಚಯಿಸುತ್ತದೆ. ಕಾಳೆಯವರ ಒಟ್ಟು ಸಾಹಿತ್ಯ ಕೃತಿಗಳನ್ನು, ಅದರ ಪ್ರಕಾರಗಳನ್ನು, ಮುಖ್ಯವಾಗಿ ಅವರ ನಾಟಕ ಕ್ಷೇತ್ರದಲ್ಲಿನ ಚಟುವಟಿಕೆಯನ್ನು, ಅವರ ಶಿಲ್ಪ ಕಲಾಕೃತಿಗಳ ಕುರಿತು, ಅಲ್ಲದೇ ಇವರ ಇತರ ಸಾಂಸ್ಕೃತಿಕ ಚಟುವಟಿಕೆಗಳನ್ನು ಸಮಾಜದಲ್ಲಿ ಅವರು ನಿರ್ವಹಿಸಿದ ಜವಾಬ್ದಾರಿಗಳನ್ನು ಮುಖ್ಯ ಅಧ್ಯಯನಕ್ಕೆ ಪೂರಕವಾಗಿ, ಸ್ಥೂಲವಾಗಿ ಈ ಅಧ್ಯಯನವನ್ನು ಕಟ್ಟಿ ಕೊಡಲಾಗಿದೆ.

ಅಧ್ಯಾಯ ಏಳರಲ್ಲಿ ಈ ಅಧ್ಯಾಯವು ಸಮಾರೋಪವಾಗಿದ್ದು, ಪ್ರಸ್ತುತ ಆಯಾ ಅಧ್ಯಾಯ ಗಳಿಂದ ಹೊರಬಂದ ಫಲಿತಗಳ ಕುರಿತಾದ ಸಮೀಕ್ಷೆಯನ್ನು ಈ ಅಧ್ಯಾಯ ಒಳಗೊಂಡಿದೆ.

ಒಟ್ಟು ಅಧ್ಯಯನದ ಫಲಿತಗಳು

೧. ನಾಡಿನ ಹಿರಿಯ ತಲೆಮಾರಿನ ಕಲಾವಿದರಲ್ಲಿ ಪ್ರಮುಖರಾದ ಎಪ್ಪತ್ತಾರು ವರ್ಷದ ಕಾಳೆಯವರು ತಮ್ಮ ಬದುಕಿನುದ್ದಕ್ಕೂ ಸಾವಿರಾರು ಕಲಾಕೃತಿಗಳನ್ನು ರಚಿಸಿದ್ದು, ಅವುಗಳು ವೈವಿಧ್ಯಮಯವಾಗಿವೆ. ಅಲ್ಲದೇ ಕಾಳೆಯವರು ಪ್ರಸ್ತುತ ನಿವೃತ್ತಿ ಜೀವನ ಅನುಭವಿಸುತ್ತಿದ್ದರು, ಕಲಾಕೃತಿಗಳ ರಚನೆಯಲ್ಲಿ ಅವರಿಗೆ ನಿವೃತ್ತಿಯೆಂಬುವುದೇ ಇಲ್ಲ. ಈ ನಿಟ್ಟಿನಲ್ಲಿ ಅವರು ಕಲಾಕೃತಿಗಳನ್ನು ರಚಿಸುವಲ್ಲಿಯೇ ವಿಶ್ರಾಂತಿಯನ್ನು ಕಾಣುವ ಪರಿಶ್ರಮ ಜೀವಿ.

೨. ಕಾಳೆಯವರು ನಾಡಿಗೆ ಕೇವಲ ಚಿತ್ರಕಲಾವಿದರೆಂದು ಮಾತ್ರ ಗುರುತಿಸಿಕೊಳ್ಳದೇ ಅವರೊಬ್ಬ ಬಹುಮುಖ ಪ್ರತಿಭೆಯನ್ನು ಹೊಂದಿರುವ ಕಲಾವಿದರು, ಕಾಳೆ ಅವರು ಒಬ್ಬ ಉತ್ತಮ ನಾಟಕಕಾರರು, ಕಲಾ ಬರಹಗಾರರು, ಶಿಲ್ಪ ಕಲಾವಿದರು, ಪ್ರಸಾಧನ ಕಲಾವಿದರು, ಕಲಾ ಶಿಕ್ಷಕರು, ಅಲ್ಲದೇ ನಾಡಿನ ಕಲಾಕ್ಷೇತ್ರದಲ್ಲಿ ಪ್ರಮುಖ ಹುದ್ದೆಗಳನ್ನು ಅಲಂಕರಿಸಿ ಸಮಾಜ ದಲ್ಲಿನ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿ, ಸಮಾಜದಲ್ಲಿ ತಮ್ಮ ಅಸ್ತಿತ್ವನ್ನು ಸ್ಥಾಪಿಸಿದ್ದಾರೆ.

೩. ಕಲಾವಿದರಾಗಿ ಕಾಳೆ ಅವರು ಭಾರತೀಯ ಪಾರಂಪರಿಕ ಶೈಲಿಯ ಚಿತ್ರಕಲೆಯನ್ನು ಮುಂದು ವರಿಸಿಕೊಂಡು ಬರುವುದರೊಂದಿಗೆ ಹೊಸತನವನ್ನು ಕಲಾಕೃತಿಗಳಲ್ಲಿ ಬಿಂಬಿಸಿದ್ದಾರೆ.

೪. ಕಾಳೆಯವರು ಒಬ್ಬ ಉತ್ತಮ ವರ್ಣಚಿತ್ರ ಕಲಾವಿದರಂತೆ ಒಬ್ಬ ಉತ್ತಮ ರೇಖಾಚಿತ್ರ ಕಲಾವಿದರು ಕೂಡಾ ಹೌದು. ನಾಡಿನ ಪ್ರಮುಖ ರೇಖಾಚಿತ್ರ ಕಲಾವಿದರಲ್ಲಿ ಇವರು ಕೂಡ ಒಬ್ಬರು. ಅಂತರ್ಯ ರೇಖೆಯು ಅವರ ಕಲೆಯ ಜೀವಾಳವಾಗಿದೆ.

೫. ಭಾರತೀಯ ಕಲೆಯ ಅಂತಃಸತ್ವವನ್ನು ಅಭ್ಯಸಿಸಿ ತಿಳಿದುಕೊಂಡು ಕಲಾಕೃತಿ ರಚಿಸುವ ಕಾಳೆಯವರು ಭಾರತೀಯ ಕಲೆಯ ಗುಣಲಕ್ಷಣಗಳನ್ನು ಸಹಜವಾಗಿಯೇ ತಮ್ಮ ಕಲಾಕೃತಿ ಯಲ್ಲಿ ತರುತ್ತಾರೆ.

೬. ಕಾಳೆಯವರ ರೇಖಾಚಿತ್ರಗಳ ಒಂದು ವಿಶೇಷವಾದ ಅಧ್ಯಯನವಾಗುವಂತಹ ಕಲಾ ಪ್ರಕಾರ ವಾಗಿದೆ. ಅವುಗಳು ಪೆನ್ನು, ಪೆನ್ಸಿಲ್, ಚಾರಕೋಲ್ ಮಾಧ್ಯಮದಲ್ಲಿ ಕಂಡು ಬರುತ್ತವೆ.

೭. ಕಾಳೆಯವರು ಒಬ್ಬ ಉತ್ತಮ ನಾಟಕಕಾರರು. ಅನೇಕ ನಾಟಕಗಳನ್ನು ಬರೆದಿದ್ದಾರೆ, ನಾಟಕ ನಿರ್ದೇಶನ ಮಾಡಿದ್ದಾರೆ, ಉತ್ತಮ ನಟ, ಪ್ರಸಾದನ ಕಲಾವಿದರು. ಅನೇಕ ಪ್ರಸಿದ್ಧ ನಾಟಕ ಸಂಘಗಳಲ್ಲಿ ಕೆಲಸ ಮಾಡಿರುವ ಅನುಭವವಿದೆ. ಹೀಗೆ ಅವರ ನಾಟಕ ಕ್ಷೇತ್ರದಲ್ಲಿನ ಸಾಧನೆಯನ್ನೇ ಪ್ರತ್ಯೇಕವಾಗಿ ಪರಿಗಣಿಸಿ ಅಧ್ಯಯನ ಒಂದನ್ನು ಮಾಡುವ ಅಗತ್ಯತೆಯಿರು ವುದನ್ನು ಮನಗಾಣಬಹುದು.

೮ ಕಾಳೆಯವರ ಸಾವಿರಾರು ವರ್ಣಚಿತ್ರಗಳು ವಿವಿಧ ಮಾಧ್ಯಮಗಳನ್ನು ಹೊಂದಿದ್ದು ಅವುಗಳು ತೈಲವರ್ಣ, ಜಲವರ್ಣ, ಅಕ್ರಿಲಿಕ್ ಪೇಸ್ಟಲ್‌ಗಳಾಗಿದ್ದು, ವಿವಿಧ ವಿಷಯಗಳನ್ನೊಳಗೊಂಡು ರಚಿತವಾಗಿವೆ.

೯. ಕಾಳೆಯವರ ಕಲಾಕೃತಿಗಳಲ್ಲಿ ಜೆ.ಜೆ. ಕಲಾಶಾಲೆ ಮತ್ತು ಬಂಗಾಲಿ ಕಲಾಶಾಲೆಯ ಪ್ರಭಾವ ವಿರುವುದು ಕಂಡು ಬರುತ್ತಿದ್ದು, ಕಾಳೆಯವರು ಪಾಶ್ಚಾತ್ಯ ಮತ್ತು ಪೌರ್‍ಯಾತ್ಯ ಕಲಾ ಪದ್ಧತಿಗಳ ನಡುವಿನ ಸೇತುವೆಯಂತಿದ್ದಾರೆ ಎಂಬುದು ಅವರ ವಿಶೇಷತೆಯಾಗಿದೆ.

೧೦. ಕಾಳೆಯವರ ಸಾಂಪ್ರದಾಯಿಕ ಚಿತ್ರಗಳ ಮೇಲೆ ಬಂಗಾಲಿ ಕಲಾ ಶಾಲೆಯ ಕಲಾ ತಂತ್ರವಾದ ವಾಷ್ ಪದ್ಧತಿಯ ಪ್ರಭಾವವು ದಟ್ಟವಾಗಿ ಕಂಡುಬರುತ್ತದೆ. ಇದು ಅವರ ವಿಶೇಷತೆಯಾಗಿದ್ದು, ಈ ತಂತ್ರವನ್ನು ಉಪಯೋಗಿಸಿ ಕಲಾಕೃತಿ ರಚಿಸಿದ ಕರ್ನಾಟಕದ ಕೆಲವೇ ಕಲಾವಿದರಲ್ಲಿ ಕಾಳೆಯವರು ಪ್ರಮುಖರಾಗಿ ಕಂಡು ಬರುತ್ತಾರೆ.

ಈ ಎರಡು ತರಹದ ಕಲಾ ಪ್ರಕಾರಕ್ಕೆ ಅವು ಸಮಾನವಾದ ಪ್ರಾಶ್ಯಸ್ತ ನೀಡಿರುವುದು ಕಂಡು ಬರುತ್ತದೆ.

೧೯. ಒಟ್ಟಿನಲ್ಲಿ ಕಾಳೆಯವರ ಕಲಾಕೃತಿಗಳನ್ನು ಗಮನಿಸಿದಾಗ ಕಂಡು ಬರುವುದೇನೆಂದರೆ, ಅವರು ಸಾಂಪ್ರದಾಯಿಕ ಶೈಲಿಯ ಕಲಾವಿದರು ಹೌದು. ಹಾಗೇ ಆಧುನಿಕ ಸಂವೇದನೆಯುಳ್ಳ ಕಲಾವಿದರು ಕೂಡಾ ಹೌದು. ಹೀಗೆ ಕಾಳೆಯವರ ಸಮಕಾಲೀನ ಕಲಾವಿದರಿಗಿಂತ ಭಿನ್ನವಾಗಿ ಕಂಡು ಬರುತ್ತಾರೆ.

೨೦. ವಿವಿಧದೆಡೆಯಿರುವ ಕಾಳೆಯವರ ಬಹುಸಂಖ್ಯೆಯ ಕಲಾಕೃತಿಗಳನ್ನು ಒಂದೆಡೆ ಸಂಗ್ರಹಿಸಿ ವ್ಯವಸ್ಥಿತವಾಗಿ ದಾಖಲಿಸಿ ಪ್ರಸ್ತುತ ಪ್ರಬಂಧವನ್ನು ಕಟ್ಟಿ ಕೊಡಲಾಗಿದೆ.

೨೧. ಪ್ರಸ್ತುತ ಅಧ್ಯಯನ ವ್ಯಕ್ತಿ ಕೇಂದ್ರಿತ ಅಧ್ಯಯನವಾಗಿರುವುದರಿಂದ ಕಾಳೆಯವರ ಬದುಕು ಮತ್ತು ಕಲಾಕೃತಿಗಳನ್ನು ಒಂದೆಡೆ ಹಿಡಿದಿಡುವುದು ಪ್ರಮುಖ ಧೋರಣೆ ಈ ಅಧ್ಯಯನದ್ದಾಗಿದೆ.

ಕಾಳೆಯವರ ಸಮಗ್ರ ಬದುಕಿನ ಚಿತ್ರಗಳು ಮತ್ತು ಅದರೊಟ್ಟಿಗೆಯಿರುವ ಕಲಾಕೃತಿಗಳನ್ನು ಒಂದೆಡೆ ಸಂಗ್ರಹಿಸಿ ಅವುಗಳ ರಚನಾ ಹಿನ್ನೆಲೆ, ಉದ್ದೇಶ, ಪ್ರಸ್ತುತತೆ ಮುಂತಾದವುಗಳನ್ನು ಮಹಾಪ್ರಬಂಧದ ರೂಪದಲ್ಲಿ ಹಿಡಿದಿಡುವುದರ ಪ್ರಾಮಾಣಿಕ ಪ್ರಯತ್ನ ಈ ಅಧ್ಯಯನದ ಮುಖ್ಯ ಧ್ಯೇಯವಾಗಿದೆ. ಉಳಿದಂತೆ ಕಾಳೆಯವರ ಚಿತ್ರಕಲಾ ಬದುಕು ಒಂದೆಡೆಯಾದರೆ, ಅವರ ಇತರ ಸಾಂಸ್ಕೃತಿಕ ಚಟುವಟಿಕೆಗಳದ್ದೇ ಇನ್ನೊಂದು ಭಾಗ. ಅವರು ಉತ್ತಮ ನಾಟಕಕಾರರು, ಕಲಾ ಬರಹಗಾರರು, ಶಿಲ್ಪಕಲಾವಿದರು, ಹೀಗೆ ಅವರ ಬಹುಮುಖಿ ಪ್ರತಿಭೆಯನ್ನು ಇಲ್ಲಿ ಸ್ಥೂಲವಾಗಿ ಹೇಳುವ ಅವಕಾಶವಿದ್ದು, ಮುಂದಿನ ಅಧ್ಯಯನಕಾರರು ಈ ನಿಟ್ಟಿನಲ್ಲಿ ತಮ್ಮ ಅಧ್ಯಯನವನ್ನು ಕೈಗೊಳ್ಳುವ ಅವಕಾಶವಿರುವುದನ್ನು ಮನಗಾಣಬಹುದು.

ಅನುಬಂಧಗಳು

೧. ಕಾಳೆಯವರಿಗೆ ಬಂದ ಪ್ರಶಸ್ತಿ ಗೌರವಗಳು

೨. ಕಲಾವಿದ ವಿ.ಟಿ. ಕಾಳೆಯವರ ಕಲಾಕೃತಿಗಳ ಸಂಗ್ರಹದ ನೆಲೆಗಳು

೩. ವಿ.ಟಿ. ಕಾಳೆಯವರ ಕವಿತೆಗಳು

೪. ಗ್ರಂಥಋಣ

ಅನುಬಂಧಗಳು

೧. ಕಾಳೆಯವರಿಗೆ ಬಂದ ಪ್ರಶಸ್ತಿ ಗೌರವಗಳು

೧. ಕನ್ನಡ ವಿಶ್ವವಿದ್ಯಾಲಯ ಕೊಡಲ್ಪಡುವ ಗೌರವ ಡಿ.ಲಿಟ್ ಪ್ರಶಸ್ತಿಯಾದ 'ನಾಡೋಜ' ಪ್ರಶಸ್ತಿ - ೨೦೦೯

೨. ಕನ್ನಡ ರಾಜ್ಯೋತ್ಸವ ಪ್ರಶಸ್ತಿ - ೨೦೦೯

೩. ಕರ್ನಾಟಕ ಲಲಿತಕಲಾ ಅಕಾಡೆಮಿ - ೧೯೬೨-೧೯೬೮

೪. ಮೈಸೂರು ದಸರಾ ವಸ್ತು ಪ್ರದರ್ಶನ - ೧೯೫೫-೧೯೬೦

೫. ಕರ್ನಾಟಕ ಲಲಿತಕಲಾ ಅಕಾಡೆಮಿಯ ಗೌರವ ಪ್ರಶಸ್ತಿ - ೧೯೮೫-೮೬

೬. ಗದಗಿನ ವಿಜಯ ಕಲಾಮಂದಿರದ ಸುವರ್ಣ ಮಹೋತ್ಸವ ಪ್ರಶಸ್ತಿ - ೧೯೯೭

೭. ಛತ್ರಪತಿ ಶಿವಾಜಿ ರಾಜ್ಯ ಪ್ರಶಸ್ತಿ - ೨೦೦೫

೨. ಕಲಾವಿದ ವಿ.ಟಿ. ಕಾಳೆಯವರ ಕಲಾಕೃತಿಗಳ ಸಂಗ್ರಹದ ನೆಲೆಗಳು

೧. ಬಳ್ಳಾರಿ
೨. ಸಂಡೂರು
೩. ಗಂಗಾವತಿ
೪. ಹೊಸಪೇಟೆ
೫. ಗದಗ
೬. ಚಿತ್ರದುರ್ಗ
೭. ಬಾಗಲಕೋಟೆ
೮. ಬೆಂಗಳೂರು
೯. ಕೊಡೈಕೆನಲ್
೧೦. ದಾವಣಗೆರೆ
೧೧. ಬೆಳಗಾವಿ
೧೨. ಬಿಜಾಪುರ
೧೩. ಬೀದರ್
೧೪. ಗುಲಬರ್ಗಾ
೧೫. ಹುಬ್ಬಳ್ಳಿ
೧೬. ಧಾರವಾಡ
೧೭. ಮುಂಬಯಿ
೧೮. ಕಲ್ಕತಾ
೧೯. ದೆಹಲಿ
೨೦. ಗೋವಾ
೨೧. ಜರ್ಮನಿ
೨೨. ಲಂಡನ್ - ಸಸೆಕ್ಸ್
೨೩. ಅಮೇರಿಕಾ
೨೪. ಪಾಕಿಸ್ತಾನ




ವಿ.ಟಿ. ಕಾಳೆಯವರಿಗೆ ಸಂದ ಪ್ರಶಸ್ತಿ ಗೌರವಗಳು




ವಿ.ಟಿ.ಕಾಳೆಯವರನ್ನು ಸಂದರ್ಶನ ಮಾಡುತ್ತಿರುವ ಸಂಶೋಧಕರು





ವಿ.ಟಿ.ಕಾಳೆಯವರಿಗೆ ಸಂದ ಪ್ರಶಸ್ತಿಗಳು





ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿಯೊಂದಿಗೆ ವಿ.ಟಿ. ಕಾಳೆಯವರು



ನಾಡೋಜ ಪ್ರಶಸ್ತಿಯನ್ನು ಸ್ವೀಕರಿಸುತ್ತಿರುವ ವಿ.ಟಿ. ಕಾಳೆಯವರು



ಖ್ಯಾತ ಬಾಲಿವುಡ್ ನಟ ಜಾಕಿ ಶರಾಫ ಮತ್ತು ಇತರ ಗಣ್ಯರೊಂದಿಗೆ
ಸಮಾರಂಭವೊಂದರಲ್ಲಿ ಎ.ಟಿ.ಕಾಳೆಯವರು



ಖ್ಯಾತ ಕಲಾವಿದರಾದ ಪ್ರೊ. ವಿ.ಬಿ. ಹಿರೇಗೌಡರ್ ಮತ್ತು ಡಾ. ಎಸ್. ಸಿ. ಪಾಟೀಲ
ಅವರೊಂದಿಗೆ ಸಮಾರಂಭವೊಂದರಲ್ಲಿ ಸನ್ಮಾನಿಸಲ್ಪಟ್ಟ ಎ.ಟಿ.ಕಾಳೆಯವರು

೩. ಕಾಳೆಯವರ ಕವಿತೆಗಳು

ನಟೀಮಣಿಗೆ —

ಸುತ್ತ ಮುತ್ತ ಕವಿದ ಕತ್ತಲೆಂತು
ತೋಡಿಂತು ರಣ ರಣಿಪ ರಂಗು
ರಂಗಿನ ರಂಗಭೂಮಿಯಂತು ಮೇಲೆ
ಹೊಳೆ ಹೊಳೆವ ರಜತ ಪರದೆಂತು ಮೇಲೆ
ಚಂದಳ್ಳ ಚೆಲುವೆಂತಿಯುದೆಯವೆಷ್ಟು
ನೀನು ಮಿರಮಿರನೆ ಮಿಂಚಿದೆ;
ರಸಿಕ ಹೃದಯಗಳ ಸೂರೆಗೊಂಡಿದೆ.
    ಕನಸುಗಳ ಗೋರಿಂತು
    ಹೂತು ಹೋಗಿದೆ!

ನೋಡುಗರ ಹೊಗಳಿಕೆಗೆ ಮನಸೋತು
ಎದೆಸೋತು, ಮನಬಿಚ್ಚಿ, ಎದೆಬಿಚ್ಚಿ
ಬಿಚ್ಚಿ 'ಏಕೆ? ಬಚ್ಚಿಟ್ಟುದನೂ ಬಿಚ್ಚಿ
ಅಂಗಾಂಗಳ ತೆರೆತೆರೆದು ತೋರಿ
ಕುಪ್ಪಳಿಸಿ ಕುಣಿ ಕುಣಿದು ದಣಿದಿದೆ
ಪಡ್ಡೆ ಹುಡುಗರ ಮನ ಮನವ ತಣಿಸಿದೆ
ಮೈ ಮರೆತು, ರಾಗ ಸರಾಗದಿ ಹಾಡಿದೆ.
    ಓ! ಚೆಲುವೆ, ನಿನ್ನನೇ ನೀನು
    ಕಳೆದುಕೊಂಡಿದೆ.

ಬಣ್ಣದ ಲೋಕದ ಸಾಮ್ರಾಜ್ಞಿ,
ಒಂದೊಮ್ಮೆ ಪ್ರೇಯಸಿಯಾಗಿ
ಒಂದೊಮ್ಮೆ ಸತಿಯಾಗಿ, ಸಾಧ್ವಿಯಾಗಿ,
ಒಂದೊಮ್ಮೆ ಶಾಂತಿಯಾಗಿ, ಮಗಳಾಗಿ,
ಅತ್ತೆಯಾಗಿ, ಅಕ್ಕನಾಗಿ, ತಂಗಿಯಾಗಿ,
ಕುಮಾರಿಯಾಗಿ, ಮೋಹಗಾತಿಯಾಗಿ
ಹೆಣ್ಣುಗಳ ಬಹು ರೂಪಗಳ ಚಿತ್ರಿಸಿ
ಅಭಿನಯ ಶಾರದೆಯಾಗಿದೆ;
ಅದ್ಭುತ ಕಲಾಕೃತಿ ಎನಿಸಿದೆ.

ನಿನ್ನೆಲ್ಲ ನೋವ — ನಗುಗಳ ಮರೆಮಾಚಿ
ಸಂತೃಪ್ತೆಯಂತಾಗಿ ಎನಿಸಿದೆ, ಸುಂದರಿ,
ಅಂದು ನಿನ್ನ ಕಣ್ಣುಂಡವರ ಮುಂದಿನ ತಲೆ
ಸಂಚನ ಹೊಂದವರ ಜನಮನವ
ಮರುಳುಗೊಳಿಸಿದೆ; ಕನ್ನ ಕೊರೆದಿದೆ.
ದಿಟವೋ? ಸುಳ್ಳೋ? ಮೆಚ್ಚುಗೆಯ ಮಹಾಪೂರದಲಿ
'' ಸಗ್ಗ ಬರು ಅಗ್ಗ'' ಎಂದು ಭ್ರಮಿಸಿದೆ,
ಹೊಗಳಿಕೆಯ ಹೊಳೆಯಲ್ಲಿ
ಕೊಚ್ಚಿ ಹೋಗಿದೆ!

—2—

ಸುಂದರವಾಗಿದ್ದ ಆ ನಿಮ್ಮ ಮುಖಾರವಿಂದವಿಂದು
ಬಾಡಿ, ಮುದುಡಿ, ಕಣ್ಣು ಒಳಹೊಕ್ಕು ಮರೆಯಾಗಿ,
ಕುಸಿದ ಗೆಜ್ಜೆಯು ಕಾಲುಗಳ ಹೆಜ್ಜೆಯು ಶಬ್ದ,
ನಿಶಬ್ದ! ಎಲ್ಲಾ ಕಮಾನಿನ ಕಂಠ ನಮನಗಳು.
ಮುತ್ತು ಗುಚ್ಛದ ನಿಮ್ಮ ಇಂದಿನ ಈ ವದನದ
ಬಲವಂತದ ಮುಗುಳುನಗೆ, ಹಲ್ಲುದುರಿದ
ಬಿಳುಪು ಕಾಂತಿಯುತ ತುಟಿ ತಂಬುಲ;
ಓ ಶಾಂತಲೆ, 'ಏಕೆ ಹೀಗೆ?
ಹೌದು; ಅದು ಹಾಗೇ!

ಹೌದು; ಅದು ಹಾಗೇ! ಹೇಳಿದಳು ಮುದುಕಿ
ಭೂಲೋಕದ ಅಪ್ಸರೆ ಎಂದರು ಕೆಲರು,
ಮೇನಕೆ, ತಿಲೋತ್ತಮೆ ಎಂದರು ಹಲರು.
ನೀನು ನವಿಲು, ದೇವತೆ; ನಾಟ್ಯ ಸರಸ್ವತಿ
ಎಂದವರೆಷ್ಟೋ! ಮುಂದೂ ಮಾಡಿದವರೆಷ್ಟೋ!!
ದುಂಡುಮುಖಿ ನಿಮ್ಮ ಮಧುರಾಧರ ಮಧುವ ಹೀರಿ
ಸವಿದೆಲೆಯಂತೆ — ಆಹ ಹಸುವಾದವರೆಷ್ಟೋ!!!
ಕಣ್ಣೀರಿನ ಉರುಳಿತಲ್ಲ,
ಕಂಬನಿಯು ಮುತ್ತು.

ಹತಾಶನಾಗಿ ನನಗೆ ನಾನೇ ಹೇಳಿಕೊಂಡೆ
ಶಾಂತಲೆ, ನಿಮ್ಮೆಲ್ಲ ಕಥೆಗಳ ಬಗೆಯಾಕೆ
ನೀನು ಕೇವಲ ಕಲಾವಿದೆಯಾಗಿದ್ದರೂ ಸಾಕಿತ್ತು;
ಅಥವಾ ಸರಸ್ವತಿಯಾಗಿ ಪೂಜೆಗೊಳ್ಳಬೇಕಿತ್ತು
ನಿಮ್ಮ ಪೂಜಾರಿಯಾಗಿಲ್ಲವೆಂದಲ್ಲ! ಇದು, ಮುಂದು
ಆದರದಷ್ಟು ದಿನ ಉಳಿದೀತು ನಿಮ್ಮ ನೆನಪು!?
ಹಚ್ಚಹಸುರಿನ ಪೈರು ಒಣಗಿದಂತಿರುವ ದಿನವು
ಇಂದಲ್ಲ ನಾಳೆ ಮಣ್ಣಿನ,
ಮಣ್ಣಾಗಿ ಹೋದೀತು!!

— ವಿ.ಟಿ.ಕಾಳೆ

23.3.2002
ಶನಿವಾರ.

ಹುಡುಕುತ್ತಲೇ ಇದ್ದೇನೆ,

ಹುಡುಕುತ್ತಿದ್ದೇನೆ;
ಹುಡುಕುತ್ತಲೇ ಇದ್ದೇನೆ,
ಕಳೆದು ಹೋದ ನನ್ನ
ಅರಸನಿಗಾಗಿ ಹಗಲಿರುಳು
ತಪಿಸುತ್ತಿದ್ದೇನೆ;
ಕಾಣದಾಗಿ ಶಪಿಸುತ್ತಿದ್ದೇನೆ.
ಗುಡಿ-ಗುಂಪಾರ,
ಗಿರಿ-ಗಹ್ವರಗಳಲ್ಲಿ
ಅವಿತಿಟ್ಟುಕೊಂಡಿರಬಹುದೆಂದು
ಭ್ರಮಿಸುತ್ತೇನೆ; ನನಗೆ ನಾನೇ
ಸಾಂತ್ವನ ಹೇಳಿಕೊಳ್ಳುತ್ತೇನೆ.
"ಇಂದಲ್ಲ ನಾಳೆ
ನನ್ನ ಮನದರಸ
ಕಂಡೇಕಾಣಿಸುತ್ತಾನೆ" ಎಂಬ
ಭರವಸೆಯ ಕನಸುಗಳಲ್ಲಿ
ದಿನದಿನವೂ ದಿನಗಳನ್ನು
ನೂಕುತ್ತಿದ್ದೇನೆ.
"ಕಂಗಾಲಾಗಿಯ
ಕನ್ನೆಯ ರಂಗು
ಮಂಗಮಾಯವಾಗುವ
ಮುನ್ನ
ಚೆಂದುಟಿಯ ಕೆಂಪು
ಕಮರುವ ಮುನ್ನ
ನನ್ನರಸ ಮುತ್ತನಿತ್ತು
ಸಂತೈಸುತ್ತಾನೆ" – ಎಂಬ
ಆಸೆಯ ಕಂಗಳಿಂದ
ದೃಷ್ಟಿ ಹರಿದತ್ತ.
ದೃಷ್ಟಿ ಹಾಯಿಸುತ್ತೇನೆ;
ಆತನಿಗಾಗಿ ಹುಡುಕುತ್ತಿದ್ದೇನೆ;
ಹುಡುಕುತ್ತಲೇ ಇದ್ದೇನೆ.
ತಡಕಾಡುತ್ತಲೇ-
ಇದ್ದೇನೆ!

ಗುರುದೇವನ ಆ ಹದ್ದಿನ
ಕಣ್ಣಿಗೂ ಕಾಣಿಸದ
ನನ್ನರಸ ನನಗೆ ಮಾತ್ರ
ಕಂಡೇ ಕಾಣಿಸುತ್ತಾನೆ
ಎಂದೆಂಬ ನನ್ನೆದೆಯು
ಮಿಡಿತ ನನ್ನಲ್ಲಿ
ಮರುಜೀವ ತುಂಬುತ್ತಲೇ ಇದೆ
ಎಂಬ ಒಂದೇ ಆಸೆಯಲ್ಲಿಯೇ
ಆತನಿಗಾಗಿ
ಕಾಯುತ್ತಿದ್ದೇನೆ.
ಹಳೇಬೀಡು, ಬೇಲೂರು
ಬನ್ನೂರು, ಮೈಸೂರು
ಬಾದಾಮಿ, ಪಟ್ಟದ ಕಲ್ಲು
ಎಲ್ಲೆಂದರಲ್ಲಿ
ಹಾಳು ದೇಗುಲಗಳಲ್ಲಿ
ಹಾಳು ಹಂಪೆಯ
ಬೀದಿ ಬೀದಿಗಳಲ್ಲಿ
ಅಲ್ಲಲ್ಲಿ ಹರಡಿರುವ
ದೇವ ಮಂದಿರಗಳಲ್ಲಿ
ಮಸೀದೆ - ಮಸೀದೆಗಳಲ್ಲಿ
ಸುಂದರ ಬನಗಳ ಚೆಲುವಿನಲ್ಲಿ
ಕೋಗಿಲೆಯ ಕಂಠದಲ್ಲಿ
ಧಾಮ-ಧಾಮಗಳಲ್ಲಿ
ಕಣ್ಣೆದುರೇ ಕುಸಿದು ಬಿದ್ದ
ಪೆಂಟಗಾನ್ ಅವಶೇಷಗಳ
ಅಡಿಯಲ್ಲಿ ಗಡಬಡಿಸಿ
ಹುಡುಕುತ್ತಿದ್ದೇನೆ.
ಗೋಲಗುಮ್ಮಟ, ಚೀನದ ಗೋಡೆ,
ಕುತುಬ ಮೀನಾರಗಳನೇರಿ
ಹುಡುಕುತ್ತಿದ್ದೇನೆ. ಆತನಿಗಾಗಿ
ಪರಿತಪಿಸುತ್ತಿದ್ದೇನೆ.

"ಇಂದಲ್ಲ ನಾಳೆ
ನನ್ನ ಮನದರಸ
ಕಂಡೇಕಾಣಿಸುತ್ತಾನೆ" - ಎಂಬ
ಭರವಸೆಯ ಕನಸುಗಳನ್ನು
ಕಾಣುತ್ತಲೇ ಇದ್ದೇನೆ.

ವಿ.ಟಿ.ಕಾಳೆ

ನಾನು ನಿಮ್ಮವ

ಸ್ವಾಮಿ, ಇದು ನಮ್ಮ ರಾಜಕೀಯ
ನಾನಲ್ಲ ಪರಕೀಯ, ನಿಮಗೆ
ಅನ್ಯನಂತೂ ಅಲ್ಲವೇ ಅಲ್ಲ!
ನಿಮ್ಮೊಳಗಿಂದಲೇ ಉದ್ಭೂತನಾದ
ಉದ್ಬುದ್ಧ, ಶುದ್ಧ ಮುಗ್ಧನ್ನಿ
ನಾನು ನಿಮ್ಮವ, ನಿಮ್ಮವ, ನಿಮ್ಮವ

ಗಲ್ಲಿ ಗಲ್ಲಿಗಳಲ್ಲಿ ಸಂದುಗೊಂದುಗಳಲ್ಲಿ
ಬೀದಿ ಬೀದಿಗಳಲ್ಲಿ ಎಲ್ಲೆಂದರಲ್ಲಿ
ತಲೆಬಾಗಿ, ಕೈ ಮುಗಿದು, ಪಾದವಿಡಿದು
ಮತ ಭಿಕ್ಷೆಬೇಡಿ, ನಿಮ್ಮೆಲ್ಲರ ಕಾಡಿ
ಓಟು ಪಡೆದ ಮೋಡಿ ನಿಮಗೇ ಗೊತ್ತಲ್ಲ!
ನೀವು ಮತ ನೀಡದೆ ಕೆಂಗಣ್ಣಿನಿಂದ ನೋಡಿದಾಗ
ನನ್ನದೇ ಆದ ರೌಡಿ ಸ್ನೇಹಿತರ ಗುಂಪು
ಮತ ಪತ್ರವ ಕಿತ್ತುಕೊಂಡು ಮುದ್ರೆಗುದ್ದಿ
ನನಗೆ ಓಟುಕೊಡಿಸಿ ಊರೆಲ್ಲ ಮೆರೆಸಿದ
ಆ ಮಹಾನುಭಾವರ ನಿಸ್ವಾರ್ಥ ಸೇವೆಗೆ
ಸ್ವಾರ್ಥಿಯಾದ ನಾನು ಋಣಿಯಾಗಿರದೇ
ಮತ್ತಾರು ಋಣಿಯಾಗಿರ ಬೇಕು
ಹೇಳಿ; ಸ್ವಾಮಿ, ನೀವೇ ಹೇಳಿ
ಇಲ್ಲ; ನಿಮ್ಮಲ್ಲಿ ಉತ್ತರವಿಲ್ಲ,
ಏಕೆಂದರೆ ನೀವು ಉತ್ತರಭೂಪರಲ್ಲ,
ನಾನು ನಿಮ್ಮವ, ನಿಮ್ಮವ, ನಿಮ್ಮವ!

ಸ್ವಾಮಿ, ಕೈಗೆ ನಿಲುಕದ ದ್ರಾಕ್ಷಿ ನಾಲಗೆಗೆ ಹುಳಿ
ಎಂಬ ಜಾಯಮಾನದವ ನಾನಲ್ಲ
ನೀವೇ ಇರಲಿ, ನಿಮ್ಮವರೇ ಇರಲಿ, ಯಾರೇ ಇರಲಿ
ನಿಮ್ಮ ತಲೆಯನೇರಿ ನಿಮ್ಮನ್ನು ತುಳಿದಾದರೂ
ಹಣ್ಣನ್ನು ಕಿತ್ತು ಕೊಳ್ಳುವ ಹಠಮಾರಿ; ಮಹಾಮಾರಿ
ಎಂದು ಕರೆದರೂ ಚಿಂತೆಯಿಲ್ಲ ನನಗೆ
ಮನಗೆದ್ದು, ಮನಗೆದ್ದು ಮಾರು ಗೆಲ್ಲಬೇಕೆಂಬ
ಲಯೋಕ್ತಿಯಂತೆಯೇ ಚಾಚು ತಪ್ಪದೆ
ನಡೆದು ಕೊಳ್ಳುವ ಛಲವಾದಿ ನಾನು
ಸ್ವಂತದ ಏಳಿಗೆಗಾಗಿ ಹಗಲಿರುಳು ನಿಮಗಾಗಿ
ನಿಮ್ಮ ಶ್ರೇಯಸ್ಸಿಗಾಗಿ ಶ್ರಮಿಸುವ ಹಠವಾದಿ
ಅದಕೆಂದೇ ನಾನಿಂದು ನೀವೆಲ್ಲ ತಿಳಿದಂತೆ-
ಲಕ್ಷಾಧಿಪತಿ ! ಕೋಟ್ಯಾಧಿಪತಿ

ಬರಹ - ಪ್ರಥಮ ಉಚಿತ ಕನ್ನಡ ಗಣಕ ಮುದ್ರಣ ಲಘುವರ

ಸ್ವಾಮಿ, ಕೈಗೆ ನಿಲುಕದ ದ್ರಾಕ್ಷಿ ನಾಲಗೆಗೆ ಹುಳಿ
ಎಂಬ ಜಾಯಮಾನದವ ನಾನಲ್ಲ....
ನೀವೇ ಇರಲಿ, ನಿಮ್ಮವರೇ ಇರಲಿ, ಯಾರೇ ಇರಲಿ
ನಿಮ್ಮ ತಲೆಯನೇರಿ ನಿಮ್ಮನ್ನು ತುಳಿದಾದರೂ
ಹಣ್ಣನ್ನು ಕಿತ್ತು ಕೊಳ್ಳುವ ಹಠಮಾರಿ; ಮಹಾಮಾರಿ
ಎಂದು ಕರೆದರೂ ಚಿಂತೆಯಿಲ್ಲ ನನಗೆ
ಮನಗೆದ್ದು, ಮನೆಗೆದ್ದು ಮಾರು ಗೆಲ್ಲಬೇಕೆಂಬ
ಆರ್ಯೋಕ್ತಿಯಂತೆಯೇ ಚಾಚು ತಪ್ಪದ್ದೇ
ನಡೆದು ಕೊಳ್ಳುವ ಛಲವಾದಿ ನಾನು
ಸ್ವಂತದ ಏಳಿಗೆಗಾಗಿ ಹಗಲಿರುಳು ನಿಮಗಾಗಿ
ನಿಮ್ಮ ಶ್ರೇಯಸ್ಸಿಗಾಗಿ ಶ್ರಮಿಸುವ ಹಠವಾದಿ
ಅದಕಂದೇ ನಾನಿಂದು ನೀವಲ್ಲ ತಿಳಿದಂತೆ-
ಲಕ್ಷಾಧಿಪತಿ ! ಕೋಟ್ಯಾಧಿಪತಿ
ಎರಡು ಹೊತ್ತು ಊಟವಿಲ್ಲದೇ
ತಲೆಗೆ ಎಣ್ಣೆ ಬೆಣ್ಣೆಗಳಿಲ್ಲದೇ
ಭಿಕಾರಿಯಾಗಿ ತಿರುಗುತ್ತಿದ್ದ ಆ ದಿನಗಳನ್ನು
ನಾನಿನ್ನೂ ಮರೆತಿಲ್ಲ ಸ್ವಾಮಿ; ಏಕೆಂದು ಕೇಳಿದರೆ
ನಿಮ್ಮಲ್ಲಿ ಉತ್ತರವೇ ಇಲ್ಲ
ನಾನಂತೂ ನಿಮಗೆ ಅನ್ಯನಲ್ಲವೇ ಅಲ್ಲ
ಸದಾ ನಿಮ್ಮ ಸೇವೆಯಲ್ಲಿಯೇ ಕಾಲ ಕಳೆವ
ನಾನು ನಿಮ್ಮವ, ನಿಮ್ಮವ, ನಿಮ್ಮವ....

ನಮಗೆ ಅಧಿಕಾರ, ಕುರ್ಚಿಗಳೆರಡೂ ಬೇಕು; ಅದಕಾಗಿ
ಜಾತಿ-ಜಾತಿಗಳಲ್ಲಿ, ಕೋಮು ಕೋಮು ಕೋಮುಗಳಲ್ಲಿ
ತಾಯಿ-ತಂದೆ, ಅಣ್ಣ-ತಮ್ಮ, ಅಕ್ಕ-ತಂಗಿಯರಲ್ಲಿ
ಊರು-ಕೇರಿ, ಕಾಡು ಮೇಡುಗಳಲ್ಲಿ
ಅಷ್ಟೇ ಏಕೆ ಸ್ವಾಮಿ ? ದೇಶ ವಿದೇಶಗಳಲ್ಲಿ
ನಾವು ಹಚ್ಚಿಟ್ಟ ಕಿಚ್ಚು ದಳ್ಳುರಿಯಾಗಿ

ಎರಡು ಹೊತ್ತು ಊಟವಿಲ್ಲದೇ
ತಲೆಗೆ ಎಣ್ಣೆ ಬೆಣ್ಣೆಗಳಿಲ್ಲದೇ
ಭಿಕಾರಿಯಾಗಿ ತಿರುಗುತ್ತಿದ್ದ ಆ ದಿನಗಳನ್ನು
ನಾನಿನ್ನೂ ಮರೆತಿಲ್ಲ ಸ್ವಾಮಿ; ಏಕೆಂದು ಕೇಳಿದರೆ
ನಿಮ್ಮಲ್ಲಿ ಉತ್ತರವೇ ಇಲ್ಲ
ನಾನಂತೂ ನಿಮಗೆ ಅನ್ಯನಲ್ಲವೇ ಅಲ್ಲ
ಸದಾ ನಿಮ್ಮ ಸೇವೆಯಲ್ಲಿಯೇ ಕಾಲ ಕಳೆವ
ನಾನು ನಿಮ್ಮವ, ನಿಮ್ಮವ, ನಿಮ್ಮವ.

ನಮಗೆ ಅಧಿಕಾರ, ಕುರ್ಚಿಗಳೆರಡೂ ಬೇಕು; ಅದಕಾಗಿ
ಜಾತಿ-ಜಾತಿಗಳಲ್ಲಿ, ಕೋಮು ಕೋಮು ಕೋಮುಗಳಲ್ಲಿ,
ತಾಯಿ-ತಂದೆ, ಅಣ್ಣ-ತಮ್ಮ, ಅಕ್ಕ-ತಂಗಿಯರಲ್ಲಿ,
ಊರು-ಕೇರಿ, ಕಾಡು ಮೇಡುಗಳಲ್ಲಿ
ಅಷ್ಟೇ ಏಕೆ ಸ್ವಾಮಿ ? ದೇಶ ವಿದೇಶಗಳಲ್ಲಿ
ನಾವು ಹಚ್ಚಿಟ್ಟ ಕಿಚ್ಚು ದಳ್ಳುರಿಯಾಗಿ
ಕಾಡು ಕಿಚ್ಚಾಗಿ, ಭೂ-ಗೋಳವನ್ನೇ ದಹಿಸುತಿದೆ
ಇದೇ ಕಿಚ್ಚಿನಿಂದಲೇ ಬೇಹಿಡಿದ ನಮ್ಮ
ಅಂಗಾಂಗಗಳನ್ನು ಬೆಚ್ಚಗೆ ಮಾಡಿಕೊಳ್ಳುತ್ತೇವೆ
ಇದು ತಪ್ಪೇ ? ತಪ್ಪೇ ? ತಪ್ಪೇ ಸ್ವಾಮಿ
ಇದು ನಮ್ಮ ಸಾಧನೆಗೆ ಹಿಡಿದ ಭೂತ ಕನ್ನಡಿ
ಬುದ್ಧ, ಬಸವ, ಏಸು, ಗಾಂಧಿ ಹುಟ್ಟಿದ ಈ
ಭೂಲೋಕದಲಿ ಇದೇನು ಅನ್ಯಾಯ ಭೂತ ನೃತ್ಯ!!
ಎಂದು ತಲೆಮೇಲೆ ಕೈಹಿಡಿದು ಗೋಳಿಡಬೇಡಿ, ಅವೆಲ್ಲ
ಭೂತಕಾಲದ ಗೊಡ್ಡು ಆದರ್ಶಗಳು ಮಾತ್ರ
ಕಾಲಾಯ ತಸ್ಮೈ ನಮಃ ಎಂದು ಸುಮ್ಮನಿದ್ದು ಬಿಡಿ
ನನ್ನ, ನನ್ನವರ ಏಳಿಗೆಗಾಗಿ ಬೆಗ್, ಬಾರೋ ಆರ್ ಸ್ಟೀಲ್
ಎಂಬ ಪರ ತತ್ವ ನಮ್ಮ ಮೂಲ ಮಂತ್ರ; ತಂತ್ರ
ಅದಕೆಂದೇ ನಾನಿಂದು ನೀವೆಲ್ಲ ತಿಳಿದಂತೆ
ಶ್ರೀ ಸಾಮಾನ್ಯನ ಮೆಟ್ಟಿನಂತ ಮುಕ್ತಿದ್ದ
ಏಕೆಂದು ಕೇಳಿದರೆ ನಿಮ್ಮಲ್ಲಿ ಉತ್ತರವಿಲ್ಲ,
ನಾನಂತೂ ನಿಮಗೆ ಅನ್ಯನಲ್ಲವೇ ಅಲ್ಲ;
ನಾನು ನಿಮ್ಮವ, ನಿಮ್ಮವ, ನಿಮ್ಮವ

೩೧.೩.೨೦೦೨ - ವಿ.ಟಿ. ಕಾಳೆ

ಬರಹ - ಪ್ರಥಮ ಉಚಿತ ಕನ್ನಡ ಗಣಕ ಮುದ್ರಣ ತಂತ್ರಾಂಶ





ಶಂಕರಗೌಡ ಬೆಟ್ಟದೂರವರ ಭಾವಚಿತ್ರವನ್ನು ಪ್ರಾತ್ಯಕ್ಷಿಕೆ ನೀಡುತ್ತಿರುವ ವಿ.ಟಿ. ಕಾಳೆಯವರು





... ಕಾಳೆಯವರ ಏಕವ್ಯಕ್ತಿ ಕಲಾಪ್ರದರ್ಶನ



ಕಲಾಗುರು ದಂಡಾವತಿಮಠ, ಟಿ.ಪಿ.ಅಕ್ಕಿ ಮತ್ತು ಇತರ ಗಣ್ಯರೊಂದಿಗೆ ವಿ.ಟಿ. ಕಾಳೆಯವರು



ಸಮಕಾಲಿನ ಕಲಾವಿದರಾದ ಆರ್.ಎಂ.ಹಡಪದ, ಎಂ.ಇ.ಗುರು ಮತ್ತು
ವಿ.ಜಿ.ಅಂದಾನಿ ಅವರೊಂದಿಗೆ ವಿ.ಟಿ.ಕಾಳೆಯವರು



ಕಲಾಶಿಬಿರದಲ್ಲಿ ಖ್ಯಾತ ಕಲಾವಿದರೊಂದಿಗೆ ವಿ.ಟಿ.ಕಾಳೆಯವರು



ಕಾಳೆಯವರ ಕಲಾಕೃತಿಯನ್ನು ವೀಕ್ಷಿಸುತ್ತಿರುವ ಪಾರ್ವತಮ್ಮ ರಾಜಕುಮಾರ

ಗ್ರಂಥಋಣ

೧. ಆಧುನಿಕ ಕಲೆ, ಪಾಲ್ ಕ್ಲೇ — (ಅನು) ಕೆ.ಎಸ್. ಶ್ರೀನಿವಾಸಮೂರ್ತಿ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೧.

೨. ಆಟ-ಮಾಟ — ಪ್ರೊ. ಕೆ.ಜಿ. ಸುಬ್ರಹ್ಮಣ್ಯನ್, ಅಭಿನವ ಬೆಂಗಳೂರು, ೨೦೦೨.

೩. ಆನಂದ ಕುಮಾರಸ್ವಾಮಿ — ಕೆ.ಎಸ್. ಶ್ರೀನಿವಾಸಮೂರ್ತಿ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೫.

೪. ಆರ್.ಎಂ. ಹಡಪದ್ — ಎಂ.ಎಚ್. ಕೃಷ್ಣಯ್ಯ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೭.

೫. ಅನಸು (ಕಲಾ ಚಿಂತನೆ) — ಅ.ನ.ಸು. ಕಲಾಮಂದಿರ, ಬೆಂಗಳೂರು, ೧೯೯೪.

೬. ಆರ್.ಎಸ್.ಎನ್. ವ್ಯಕ್ತಿ ಮತ್ತು ಕಲೆ — ಕೃಷ್ಣಯ್ಯ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು, ೨೦೦೮.

೭. ಅಮೀನ ಸಾಹೇಬ ಕಮಡೊಳ್ಳಿ — ಬಿ.ಕೆ. ಹಿರೇಮಠ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೮೪.

೮. ಕಲೆ ಅನುಭವ ಮತ್ತು ಅನುಭಾವ, — ಚಂದ್ರಕಾಂತ ಕುಸನೂರು, ಮಾಲಗಿತ್ತಿ ಪ್ರಿಟಿಂಗ್ ಪಬ್ಲಿಸಿಂಗ್ ಹೌಸ್, ಬೆಳಗಾವಿ, ೧೯೯೦.

೯. ಕಲಾ ಸಂವದೇದನೆಯ ಒಳನೋಟಗಳು — ಕೆ.ವಿ. ಸುಬ್ರಹ್ಮಣ್ಯಂ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೭.

೧೦.	ಕಲೆಗಳಲ್ಲಿ ಸಂಸ್ಕೃತಿ ಹಾಗೂ ಪರಂಪರೆ	ಕೆ.ವಿ. ಸುಬ್ರಹ್ಮಣ್ಯಂ ಸ್ಪಂದನ ಚಿತ್ರಕಲಾವಿದರ ಬಳಗ, ಬೆಂಗಳೂರು, ೧೯೯೫.
೧೧.	ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ	ಕೆ.ವಿ. ಸುಬ್ರಹ್ಮಣ್ಯಂ ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು, ೨೦೦೭.
೧೨.	ಕರ್ನಾಟಕದ ಚಿತ್ರಕಲೆಯಲ್ಲಿ ಬಣ್ಣದ ಬಳಕೆ	ಕೆ.ವಿ. ಕಾಳೆ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೦.
೧೩.	ಕರ್ನಾಟಕದ ಸಂಗಾತಿ	ಪ್ರೊ. ಬರಗೂರು ರಾಮಚಂದ್ರಪ್ಪ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು, ೨೦೦೨
೧೪.	ಕರ್ನಾಟಕದ ಕಲೆಗಳು, ಕನ್ನಡ ನಾಡಿನ ಕಲಾವಿದರು	ಪಿ.ಆರ್. ತಿಪ್ಪೇಸ್ವಾಮಿ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೧೯೮೬
೧೫.	ಕಲೆ ಮತ್ತು ರಸಸ್ವಾದನೆ	(ಸಂ.) ಪ್ರೊ. ಎಂ.ಎಚ್. ಕೃಷ್ಣಯ್ಯ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೮೯.
೧೬.	ಕಲೆ ಎಂದರೇನು?	(ಅನು) ಪಿ.ಪಿ.ಕೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು, ೧೯೭೮
೧೭.	ಕಲೆಯ ನೆಲೆ	ಡಾ. ವಿ.ಕೃ. ಗೋಕಾಕ್ ನಿರ್ದೇಶಕರು, ಪ್ರಸಾರಾಂಗ ಮೈಸೂರು, ೧೯೭೮
೧೮.	ಕಲೆ ಒಂದು ಚಿಂತನೆ	ಚಂದ್ರಕಾಂತ ಕುಸನೂರ ಅಂತಃಕರಣ ಆರ್ಟ್ ಅಕಾಡೆಮಿ ಬೆಳಗಾವಿ, ೨೦೧೧
೧೯.	ಕಲ್ಲರಳಿ ಹೂವಂತೆ	(ಸಂ.) ಕೆ. ಪುಟ್ಟಸ್ವಾಮಿ ಅಭಿನವ ವಿಜಯನಗರ, ಬೆಂಗಳೂರು, ೨೦೦೪.

೨೦.	ಕಲಾ ಸಿದ್ಧಾಂತ	ವಿ.ಕೃ. ಗೋಕಾಕ ಸಾಹಿತ್ಯ ಪ್ರಕಾನ, ಹುಬ್ಬಳ್ಳಿ, ೨೦೦೪.
೨೧.	ಕಲಾವಿದ ಹೆಬ್ಬಾರರ ರೇಖಾಲಾವಣ್ಯ	ವ್ಯಾಸರಾಯ ಬಲ್ಲಾಳ ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೯.
೨೨.	ಕಲೆ ಮತ್ತು ಕಲಾನುಭವ	ಚಂದ್ರಕಾಂತ ಕುಸನೂರು ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೨೦೦೮.
೨೩.	ಕಲಾವಿದ ಎಂ.ವಿ. ಚೆಟ್ಟಿಯವರ ಜೀವನ ಕಲಾಕೃತಿಗಳು	(ಸಂ.) ಲಕ್ಷ್ಮೀದೇವಿ ಗವಾಯಿ ವೀರಶೈವ ಅಧ್ಯಯನ ಅಕಾಡೆಮಿ, ಬೆಳಗಾವಿ, ೨೦೦೩.
೨೪.	ಕಲಾ ಚರಿತ್ರೆ	ಅಶೋಕ ಟಿ. ಅಕ್ಕಿ ಎಂ.ಎಸ್. ಶಾಬಾದಿ ಮಠ, ಬುಕ್‌ಡಿಪೋ, ಗದಗ, ೧೯೮೫
೨೫.	ಕಣ್ಣು ಕಾಣಿಕೆ	ಕೆ.ಎಸ್. ಶ್ರೀನಿವಾಸಮೂರ್ತಿ ಸೆಲೆಕ್ಟ್ ಬುಕ್ಸ್, ಬೆಂಗಳೂರು, ೨೦೦೧.
೨೬.	ಕಾವ್ಯಾರ್ಥ ಚಿಂತನ	ಡಾ. ಜಿ.ಎಸ್. ಶಿವರುದ್ರಪ್ಪ ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೧೯೮೩.
೨೭.	ಕಲಾ ಪ್ರಪಂಚ	ಡಾ. ಶಿವರಾಮ ಕಾರಂತ ಸಪ್ನಾಬುಕ್ ಹೌಸ್, ಬೆಂಗಳೂರು, ೧೯೭೮.
೨೮.	ಕನ್ನಡ ಜನಪದ ಶಿಲ್ಪಕಲೆ	(ಸಂ.) ಡಾ. ಶಿವಾನಂದ ಎಚ್. ಬಂಟನೂರ, ಅಪ್ರಕಟಿತ ಪಿಎಚ್.ಡಿ. ಸಂಶೋಧನಾ ಮಹಾಪ್ರಬಂಧ.
೨೯.	ಕರ್ನಾಟಕ ಜನಪದ ಚಿತ್ರಕಲೆ	ಡಾ. ಎಸ್.ಸಿ. ಪಾಟೀಲ ವೀರಶೈವ ಪ್ರಕಾಶನ, ಗದಗ.
೩೦.	ಕನ್ನಡ ನಾಟಕ ಮತ್ತು ವಾಸ್ತವತೆ	(ಸಂ.) ಪ್ರೊ. ಅಪ್ರಕಟಿತ ಸಂಶೋಧನಾ ಮಹಾಪ್ರಬಂಧ

೩೧.	ಕಲೋಪಾಸಕ ಎಂ.ಜಿ. ವಾಚೇದಮಠ	ಸುರೇಶ ಕುಲಕರ್ಣಿ, ಶ್ರೀಮತಿ ಶಾರದಾ ವಾಚೇದಮಠ, ಮಂಗಳವಾರ ಪೇಟೆ, ಧಾರವಾಡ, ೧೯೮೫.
೩೨.	ಕಟ್ಟಂಗೇರಿ ಕೃಷ್ಣ ಹೆಬ್ಬಾರ (ಕಲೆ ಮತ್ತು ಬದುಕು)	ಕು.ಶಿ. ಹರಿದಾಸ ಭಟ್ಟ ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ,೧೯೯೮.
೩೩.	ಗಾಂಧಿ ಮತ್ತು ಕಲೆ	ಸಿ.ಪಿ.ಕೆ. ಅಖಿಲಾ ಏಜೇನ್ಸಿಸ್, ಮೈಸೂರು ೨೦೦೬.
೩೪.	ನೋಟ ಪಲ್ಲಟ	ಎಚ್.ಎ. ಅನಿಲ್‌ಕುಮಾರ ಅಭಿನವ ಪ್ರಕಾಶನ, ಬೆಂಗಳೂರು, ೧೯೯೮.
೩೫.	ಎನ್.ಎಸ್. ಸುಬ್ಬಕೃಷ್ಣ	ಎಚ್.ವಿ. ಗಾಯಿತ್ರಿ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.
೩೬.	ಎನ್. ಹನುಮಯ್ಯ	ಕೆ.ವಿ. ಸುಬ್ರಹ್ಮಣ್ಯಂ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೮೯.
೩೭.	ಎನ್.ಜಿ. ಪಾವಂಜೆ	ಎಂ.ಟಿ.ವಿ. ಆಚಾರ್ಯ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.
೩೮.	ಚಿತ್ರಚಿತ್ತ	ಚಿ.ಸು. ಕೃಷ್ಣಸೆಟ್ಟಿ ಇಳಾ ಪ್ರಕಾಶನ, ಬೆಂಗಳೂರು, ೨೦೦೦.
೩೯.	ಚಾರ್ಲ್ಸ್ ಡಾರ್ವಿನ್	ಡಾ. ಎನ್.ಎಸ್.ವೀರಪ್ಪ ಗೀತಾ ಬುಕ್‌ಹೌಸ್,
೪೦.	ಚಿತ್ರಕಲಾ ಪ್ರಪಂಚ	ಪ್ರ.ಸಂ. ಪಿ.ಆರ್. ತಿಪ್ಪೇಸ್ವಾಮಿ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೩.

೪೧.	ಚಿತ್ರಕಲೆ	ಅ.ನ.ಕೃ. ವೆಂಕಟಯ್ಯ ಆ್ಯಂಡ್ ಸನ್ಸ್, ಮೈಸೂರು ೧೯೭೦.
೪೨.	ಚಿತ್ರಕಲಾ ಚಿಂತನೆ	ಶಂಕರಪಾಟೀಲ ಪ್ರಗತಿ ಪ್ರಕಾಶನ, ದಾವಣಗೆರೆ, ೧೯೯೫.
೪೩.	ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು	ಡಾ. ಎಸ್.ಸಿ. ಪಾಟೀಲ ಶ್ರೀ ಡಿ.ವಿ. ಹಾಲಭಾವಿ ಸ್ಕೂಲ್ ಆಫ್ ಆರ್ಟ್, ಧಾರವಾಡ. ೧೯೯೫
೪೪.	ಚಿತ್ರಕಲಾ ದರ್ಪಣ	ವಿ.ಟಿ. ಕಾಳೆ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೪.
೪೫.	ಚಿತ್ರಾಂತರಂಗ	ಶಂಕರ ಪಾಟೀಲ ಪ್ರಗತಿ ಪ್ರಕಾಶನ, ದಾವಣಗೆರೆ, ೧೯೯೮.
೪೬.	ಚಿತ್ರಕಲಾ ಪರಿಚಯ	ವಿ.ಟಿ. ಕಾಳೆ, ವಿಜಯ್ ಬುಕ್‌ಡಿಪೋ, ಗದಗ,೧೯೯೬
೪೭.	ಚಿತ್ರಲೇಖಾ	ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ ಸರಚಂದ್ರ ಪ್ರಕಾಶನ, ಚಿತ್ತಾಪುರ ೨೦೦೯
೪೮.	ಜಿ.ಎಸ್. ಶೆಣೈ	ಡಾ. ಕಾಸರವಳ್ಳಿ ಜಿ. ರವೀಶ್ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೫.
೪೯.	ಜಿ.ವೈ. ಹುಬ್ಳೀಕರ್	ಕೋಟಿ ಕುಮಾರ್ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.
೫೦.	ದೃಶ್ಯಕಲೆಯ ಸೃಜನಶೀಲರು	ಬಿ.ವಿ.ಕೆ. ಶಾಸ್ತ್ರೀ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೦.
೫೧.	ದೃಶ್ಯನುಭವ	ಡಾ. ಮೋಹನರಾವ್ ಬಿ. ಪಂಚಾಳ ಅನ್ನಪೂರ್ಣ ಪ್ರಕಾಶನ, ಬೀದರ, ೨೦೧೦.

೫೨.	ದೃಶ್ಯಕಲಾ ಪ್ರಪಂಚ	ಎನ್. ಮರಿಶಾಮಾಚಾರ್ ಸಿ.ವಿ.ಎನ್. ಪ್ರಕಾಶನ, ಬೆಂಗಳೂರು ೨೦೦೭.
೫೩.	ದೃಶ್ಯಕಲಾವಿದರು	ಎಚ್. ಮರಿಶಾಮಾಚಾರ್ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೩.
೫೪.	ದಖನಿ ಚಿತ್ರಕಲೆ	ಎಸ್.ಕೆ. ಅರುಣಿ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೨೦೦೧.
೫೫.	ದೃಶ್ಯ	ಎಸ್. ಮಂಜುನಾಥ ನಮ್ಮ ಸಂಸ್ಕೃತಿ, ಬೆಂಗಳೂರು, ೨೦೦೯.
೫೬.	ದೃಷ್ಟಿ ಸೃಷ್ಟಿ	ಡಾ. ಶಿವಾನಂದ ಎಚ್. ಬಂಟನೂರ ಅಲಕಾ ಪ್ರಕಾಶನ, ಬಿಜಾಪುರ, ೨೦೦೯.
೫೭.	ಡಾ. ಎಸ್.ಎಂ. ಪಂಡಿತ	ಪ್ರೊ. ಅಂದಾನಿ ವ್ಹಿ.ಜಿ. ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ,ಗುಲಬರ್ಗಾ, ೨೦೦೫.
೫೮.	ಡಾ. ಸ್ವೆಟಾಸ್ಲೊವ್ ರೋರಿಚ್	ರೋರಿಕ್ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩.
೫೯.	ಪ್ಲೆಹಾನೊವ್ ಕಲೆ ಮತ್ತು ಸಾಮಾಜಿಕ ಜೀವನ	(ಮೂಲ) ಜಿ.ವಿ. ಪ್ಲೆಹಾನೊವ್ (ಅನು) ಕೆ.ಎಲ್. ಗೋಪಾಲಕೃಷ್ಣರಾವ್ ಪ್ರಗತಿ ಪ್ರಕಾಶನ, ೧೯೮೩.
೬೦.	ಪಾಪಕಲೆ	ರವಿಕುಮಾರ ಕಾಶಿ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.
೬೧.	ನವ್ಯಕಲೆಯ ನವ ಮುಖಗಳು	(ಸಂ) ಬಿ.ವಿ.ಕೆ. ಶಾಸ್ತ್ರಿ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೨.

೬೨.	ಭಾರತೀಯ ಕಲಾದರ್ಶನ	(ಸಂ) ಅ.ನ.ಕೃ. ಸಂಗೀತ ನಾಟಕ ಅಕಾಡೆಮಿ, ಬೆಂಗಳೂರು, ೧೯೬೪
೬೩.	ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನ	ಅ.ನ.ಕೃ. ಸಾಗರ ಪ್ರಕಾಶನ, ಬೆಂಗಳೂರು, ೧೯೩೨.
೬೪.	ಭಾರತೀಯ ಶಿಲ್ಪಕಲೆ	ಎನ್. ಮರಿಶಾಮಾಚಾರ್ ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು, ೨೦೦೦.
೬೫.	ಭಾರತೀಯ ಕಲೆ	ಎನ್. ಮರಿಶಾಮಾಚಾರ್ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೧.
೬೬.	ಭಾರತದಲ್ಲಿ ಸಮಕಾಲೀನ ಕಲೆ	ಎನ್. ಮರಿಶಾಮಾಚಾರ್ ಸಿ.ವಿ.ಎನ್. ಪ್ರಕಾಶನ, ಬೆಂಗಳೂರು, ೧೯೮೭.
೬೭.	ಟಿ.ಪಿ. ಅಕ್ಕಿ	ವಿ.ಟಿ. ಕಾಳೆ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.
೬೮.	ರಸರೇಖೆ	ಮೂ.ಲೇ. ಎಸ್. ಸಂಜೀವದೇವ್ ಅನು ಹರಿಹರಪ್ರಿಯ ಮಯೂರ ಪ್ರಕಾಶನ, ಬೆಂಗಳೂರು, ೧೯೭೬.
೬೯.	ರೇಖಾಚಿತ್ರ	ಬಿ.ವಿ.ಕೆ. ಶಾಸ್ತ್ರಿ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೧.
೭೦.	ರೇಖೆಗಳಲ್ಲಿ ಚಿತ್ರಕಲಾವಿದರು	ಐ.ಬಿ. ರಾಠೋಡ ಪಿ.ಬಿ. ರಾಠೋಡ, ಬಂಜಾರ ಕ್ರಾಸ್, ಸೋಲಾಪುರ ರಸ್ತೆ, ವಿಜಾಪುರ ೨೦೦೯.

೨೧.	ರುಮಾಲೆ ಚೆನ್ನಬಸವಯ್ಯ	ಕೆ.ಎಸ್. ಶ್ರೀನಿವಾಸಮೂರ್ತಿ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೦.
೨೨.	ವಿ.ಟಿ. ಕಾಳೆ	ಡಾ. ಎಸ್.ಸಿ. ಪಾಟೀಲ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೨೦೦೪.
೨೩.	ವಿಮರ್ಶೆಯ ಪೂರ್ವ ಪಶ್ಚಿಮ	ಜಿ.ಎಸ್. ಶಿವರುದ್ರಪ್ಪ ಸಾಹಿತ್ಯ ಭಂಡಾರದ ಪ್ರಕಾಶನ, ಬೆಂಗಳೂರು, ೧೯೬೧.
೨೪.	ವಿಜಯ ಸಿಂಧೂರ	ಕೆ.ವಿ. ಸುಬ್ರಹ್ಮಣ್ಯಂ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೨೦೦೦.
೨೫.	ವಿ.ಜಿ. ಅಂದಾನಿ	ಡಾ. ಶಿವಾನಂದ ಎಚ್. ಬಂಟನೂರ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೨೦೦೪.
೨೬.	ವಿಜಾಪುರ ಜಿಲ್ಲೆ (ಭಾರತದ ಗ್ಯಾಝೆಟಿಯರ್ ಕರ್ನಾಟಕ ರಾಜ್ಯ)	(ಸಂ) ಡಾ. ಆರ್. ಮುನಿಸ್ವಾಮಿ ಮೆ. ಅಭಿಮಾನಿ ಪ್ರಕಾಶನ, ಬೆಂಗಳೂರು, ೧೯೯೯
೨೭.	ವರ್ಣಸಂಚಯ	ಡಾ. ಎಸ್.ಸಿ. ಪಾಟೀಲ ವಿಜಯ ಚಿತ್ರಕಲಾ ಮಹಾವಿದ್ಯಾಲಯ, ಇಲಕಲ್ಲ, ೨೦೦೧.
೨೮.	ವೆಂಕಟಪ್ಪ ಸಮಕಾಲೀನ ಪುನರಾವಲೋಕನ	ಕೆ.ವಿ. ಸುಬ್ರಹ್ಮಣ್ಯಂ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೦.
೨೯.	ಸತ್ಯ ಮತ್ತು ಸೌಂದರ್ಯ	ಎಸ್.ಎಲ್.ಭೈರಪ್ಪ ಸಾಹಿತ್ಯ ಭಂಡಾರದ ಪ್ರಕಾಶನ, ಬೆಂಗಳೂರು, ೧೯೬೬.
೩೦.	ಸಮಕಾಲೀನ ಕಲೆ	(ಸಂ) ಬಿ.ವಿ.ಕೆ. ಶಾಸ್ತ್ರಿ ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು, ೧೯೮೭.

೮೧.	ಸಂಯೋಜನೆ	ಎಸ್. ಮರಿಶಾಮಾಚಾರ್ ಸಿ.ಎಂ.ಎನ್. ಪ್ರಕಾಶನ ಬೆಂಗಳೂರು, ೧೯೯೯.
೮೨.	ಸೌಂದರ್ಯ ಶಾಸ್ತ್ರ	ಮೂ.ಹಿಂದಿ ಡಾ. ಮಮತಾ ಚತುರ್ವೇದಿ, ಅನು ಡಾ. ಕಾಶೀನಾಥ ಅಂಬಲಗೆ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.
೮೩.	ಶಂಕರಗೌಡ ಬೆಟ್ಟದೂರ	ಎಚ್. ಅನಿಲಕುಮಾರ್ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೨೦೦೭.
೮೪.	ಶಿವಯೋಗಿ ಹಾನಗಲ್ಲ ಶ್ರೀ ಕುಮಾರ ಮಹಾಸ್ವಾಮಿಗಳು	ವಿ.ಬಿ. ಹಿರೇಮಠ
೮೫.	ಶಿವಾನಂದ ಪಿ. ಅಕ್ಕಿ	ವಿ.ಟಿ. ಕಾಳೆ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.
೮೬.	ಎಸ್.ಎಂ. ಪಂಡಿತ	ವಿ.ಟಿ. ಕಾಳೆ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.
೮೭.	ಎಸ್.ಜಿ. ವಾಸುದೇವ್	ಕೆ.ವಿ. ಸುಬ್ರಹ್ಮಣ್ಯಂ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೨೦೦೧
೮೮.	ಹಿಂದೂಸ್ಥಾನಿ ಸಂಗೀತ ಮತ್ತು ರಾಗಮಾಲ ಚಿತ್ರಗಳು	ಸಂಪದಾ ಭಟ್ಟ ಅಪ್ರಕಟಿತ ಪಿಎಚ್.ಡಿ. ಸಂಶೋಧನಾ ಮಹಾಪ್ರಬಂಧ, ೧೯೯೯.

